# ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ

(ಪರಿಷ್ಕೃತ ದ್ವಿತೀಯ ಮುದ್ರಣ)

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್

ಮೇಘನಾ ಪ್ರಕಾಶನ, ಕೊಪ್ಪಳ.

ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ ● ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್



ISBN 978-93-5426-425-2

ಜಿ. ಎಸ್. ಗೋನಾಳ
ಪತ್ರಕರ್ತರು ಹಾಗೂ ಅಧ್ಯಕ್ಷರು,
ಸಿರಿಗನ್ನಡ ವೇದಿಕೆ, ಜಿಲ್ಲಾ ಘಟಕ, ಕೊಪ್ಪಳ.

# ಕೊಪ್ಪಳ ಜಿಲ್ಲೆಯ ಶಾಸನಗಳು
# ಮತ್ತು
# ಸಾಂಸ್ಕೃತಿಕ ಇತಿಹಾಸ

(ಪರಿಷ್ಕೃತ ದ್ವಿತೀಯ ಮುದ್ರಣ)

# ಕೊಪ್ಪಳ ಜಿಲ್ಲೆಯ ಶಾಸನಗಳು
# ಮತ್ತು
# ಸಾಂಸ್ಕೃತಿಕ ಇತಿಹಾಸ

(ಪರಿಷ್ಕೃತ ದ್ವಿತೀಯ ಮುದ್ರಣ)

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್
ಎಂ.ಎ., ಎಂ.ಫಿಲ್., ಪಿಎಚ್.ಡಿ.

**ಮೇಘನಾ ಪ್ರಕಾಶನ,**
'ಕನಸು' ನಿಲಯ, ಮಹಾಂತಯ್ಯನಮಠ ಶಾಲೆ ಎದುರಿಗೆ,
ಬಿ.ಟಿ. ಪಾಟೀಲ್ ನಗರ, ಕೊಪ್ಪಳ–583 231.

**ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ**
(ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ)
(ಪರಿಷ್ಕೃತ ದ್ವಿತೀಯ ಮುದ್ರಣ)

ಲೇಖಕರು : **ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್,**
ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು
ಶ್ರೀ ಗವಿಸಿದ್ಧೇಶ್ವರ ಪದವಿ ಪೂರ್ವ ಮಹಾವಿದ್ಯಾಲಯ,
ಕೊಪ್ಪಳ–583 231. ಮೊ.: 9448570340,
E-mail : skotnekal@gmail.com

ಪ್ರಕಾಶಕರು : **ಶ್ರೀಮತಿ ಮಂಜುಳಾ ಎಸ್. ಕೊಟ್ನೆಕಲ್,**
**'ಕನಸು'** ನಿಲಯ ಮಹಾಂತಯ್ಯನಮಠ ಶಾಲೆ ಎದುರಿಗೆ,
ಬಿ. ಟಿ. ಪಾಟೀಲ ನಗರ, ಕೊಪ್ಪಳ–583 231.

ಪ್ರಥಮ ಮುದ್ರಣ : 2010
ಪರಿಷ್ಕೃತ ದ್ವಿತೀಯ ಮುದ್ರಣ : 2020
ಹಕ್ಕುಗಳು : ಲೇಖಕರು
ಪ್ರತಿಗಳು : 1000
ಪುಟಗಳು : XXIX+323+29=381
ದರ : 300/–
ಬಳಸಿದ ಕಾಗದ : 70 ಜಿ.ಎಸ್.ಎಂ. ಎನ್.ಎಸ್. ಮ್ಯಾಪಲಿಥೋ
ಅಳತೆ : ಡೆಮ್ಮಿ 1/8
ISBN No. : 978-93-5426-425-2
ಮುದ್ರಣ : ಐಶ್ವರ್ಯ ಪ್ರಿಂಟಿಂಗ್ ಪ್ರೆಸ್,
ಡಾ. ಬಿ. ಆರ್. ಅಂಬೇಡ್ಕರ್ ಸರ್ಕಲ್, ಕೊಪ್ಪಳ
ಮೊ. 8147348440, 9448300070

# ಅರ್ಪಣೆ



ಬದುಕು ಕಟ್ಟಿಕೊಟ್ಟ

**ದಿ. ಡಾ॥ ರಾಮಚಂದ್ರಪ್ಪ ಎ. ಜಿ.**

ಸಾ॥ ಹಿರೇಕೊಟ್ನೆಕಲ್

ತಾ॥ ಮಾನ್ವಿ ಜಿ॥ ರಾಯಚೂರ

# ಗ್ರಂಥದಾನಿಗಳು



**ಶ್ರೀ ಸಿ. ವಿ. ಚಂದ್ರಶೇಖರ**

**ರಾಜಕೀಯ ಧುರೀಣರು, ಕೊಪ್ಪಳ.**

# ಮುನ್ನುಡಿ

## (ಪರಿಷ್ಕೃತ ದ್ವಿತೀಯ ಮುದ್ರಣ)

ಹಳೇ ಮೈಸೂರಿಗೆ ಹೋಲಿಸಿದರೆ ಉತ್ತರ ಕರ್ನಾಟಕದಲ್ಲಿ ಶಾಸನಗಳ ಅಧ್ಯಯನ ಅಷ್ಟಾಗಿ ಆಗಿಯೆ ಇಲ್ಲವೆಂದು ಹೇಳಬೇಕು. ಹೈದರಾಬಾದ ಕರ್ನಾಟಕವಂತೂ ಈ ವಿಷಯದಲ್ಲಿ ಪೂರ್ತಿಯಾಗಿ ನಿರ್ಲಕ್ಷಿತ ಪ್ರದೇಶ. ಆ ಕೊರತೆಯನ್ನು ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಸ್ವಲ್ಪ ಮಟ್ಟಿಗೆ ತುಂಬಿಕೊಡಲಿಕ್ಕೆ ಪ್ರಯತ್ನಿಸಿದ್ದಾರೆ. ಆದರೆ ಅವರು ಸಿದ್ಧ ಸಾಹಿತ್ಯ (ಪ್ರಕಟಿತ) ವನ್ನು ಮುಂದಿಟ್ಟುಕೊಂಡು ಈ ಕೃತಿ ರಚನೆ ಮಾಡಿದ್ದಾರೆಯೇ ಹೊರತು ಕ್ಷೇತ್ರ ಕಾರ್ಯ ಮಾಡಿ ಅಪ್ರಕಟಿತ ಶಾಸನಗಳ ಬಗ್ಗೆ ಕಾರ್ಯ ಮಾಡಿಲ್ಲ. ಈ ಭಾಗದಲ್ಲಿ ಎಷ್ಟೋ ಶಾಸನಗಳು ಯಾರ ಕಣ್ಣಿಗೂ ಬೀಳದೆ ನಾಶವಾಗಿ ಹೋಗುತ್ತಿರುವುದು ವಿಷಾದದ ಸಂಗತಿ.

ಈ ಅಧ್ಯಯನದಲ್ಲಿ ಕೆರೆಗಳ ಬಗ್ಗೆಯೂ ಡಾ. ಕೊಟ್ನೆಕಲ್ ಬರೆದಿದ್ದಾರೆ. ಆದರೆ ಕೊಪ್ಪಳ ತಾಲೂಕಿನಲ್ಲಿಯೇ ಒಂದು ಹಳ್ಳಿಯಲ್ಲಿ ಕೆರೆ ಕಟ್ಟಿಸಿದ ಬಗ್ಗೆ ಶಾಸನ ಉಲ್ಲೇಖಿಸುತ್ತದೆ. ಕೊಪ್ಪಳ ತಾಲೂಕಿನ ಪೂರ್ವಕ್ಕೆ ಸುಮಾರು ೨೫ ಕಿಲೋ ಮೀಟರ್ ದೂರದಲ್ಲಿರುವ ಸೂಳಿಕೆರೆಯಲ್ಲಿರುವ ಕೆರೆಯನ್ನು ಓರ್ವ ಸೂಳೆ ಕಟ್ಟಿಸಿದಳೆಂದೂ ಅದಕ್ಕೆ ಆ ಊರಿಗೆ ಸೂಳಿಕೆರೆ ಎಂಬ ಹೆಸರು ಬಂದಿರಬಹುದೆಂದೂ ಊಹಿಸಬಹುದಾಗಿದೆ. ಇಂತಹ ಶಾಸನಗಳ ಕ್ಷೇತ್ರಕಾರ್ಯದರ್ಶಿ ಒಂಚೂರು ಮನಸ್ಸು ಮಾಡಿದರೆ ನಾಶವಾಗಿ ಹೋಗಬಹುದಾದ ಶಾಸನಗಳನ್ನು ಉಳಿಸಿಕೊಂಡಂತಾಗುತ್ತದೆ. ಆದರೂ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಉಲ್ಲೇಖಿಸಿರುವ ಶಾಸನಗಳ ಸಂಖ್ಯೆಯನ್ನು ನೋಡಿದಾಗ ನಿಜವಾಗಿಯೂ ಕೊಪ್ಪಳ ನಾಡಿನಲ್ಲಿ ಇಷ್ಟೊಂದು ಶಾಸನಗಳು ಇದ್ದ ಬಗ್ಗೆ ಆಶ್ಚರ್ಯವಾಗುತ್ತದೆ. ಅದೇನೆ ಇರಲಿ ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿಯ ಶಾಸನಗಳನ್ನು ಬೇರೆ ಬೇರೆ ದೃಷ್ಟಿಕೋನದಿಂದ ಅಭ್ಯಾಸ ಮಾಡಿ; ಸ್ಥೂಲ ಪರಿಚಯ ಮಾಡಲಿಕ್ಕೆ ಪ್ರಯತ್ನಿಸಿರುವುದು ಶ್ಲಾಘನೀಯ. ಶಾಸನಗಳ ಅಧ್ಯಯನದಲ್ಲಿ ಉತ್ತೇಜಿತರಾಗಿ ಅದಕ್ಕೆ ಮತ್ತೊಂದಿಷ್ಟು ಹೊಸ ವಿಷಯಗಳನ್ನು ಸೇರಿಸಿ, ಅಥವಾ ಅಲ್ಲಿ ಉಳಿದುಕೊಂಡ ಕೆಲವು ನ್ಯೂನತೆಗಳಿಗೆ

ತಿದ್ದುಪಡಿ ಮಾಡಿ ಈ ಪರೀಷ್ಕೃತ ಆವೃತಿಯನ್ನು ಹೊರ ತರುತ್ತಿದ್ದಾರೆ. ಅಂದರೆ ಪಿಎಚ್.ಡಿ. ಪದವಿಗಾಗಿ ಪ್ರಕಟಿಸಿದ ಗ್ರಂಥದ ವಿಷಯವನ್ನು ಮೂಲವಾಗಿಟ್ಟುಕೊಂಡು ಅದನ್ನು ವಿಸ್ತರಿಸಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಪ್ರಕಟಗೊಂಡ ಬೇರೆ ಬೇರೆ ಶಾಸನ ಸಂಪುಟಗಳನ್ನಾಧರಿಸಿ ಅಭಿಪ್ರಾಯ ಮಂಡನೆ ಮಾಡಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಕಾಣಸಿಗುವ ರಾಜ ಮಹಾರಾಜರಿಂದ ಹಿಡಿದು ಕಂಬಾರ, ಜೇಡ, ನಾಯಿಂದ, ಬಡಗಿ, ಅಂಬಿಗ, ಸಮಗಾರ ಮುಂತಾಗಿ ಸಾಮಾನ್ಯರಲ್ಲಿ ಸಾಮಾನ್ಯರಾದ ಜನರ ಬಗ್ಗೆ ಶಾಸನಾಧಾರಿತ ವಿವರ ಕಲೆ ಹಾಕಿ ವಿಶ್ಲೇಷಿಸಿದ್ದಾರೆ. ಪ್ರಾಚೀನ ಭಾರತದಲ್ಲಿದ್ದ ಧಾರ್ಮಿಕ ವ್ಯವಸ್ಥೆ ಮತ್ತು ಅಂದಿನ ಆಚಾರ, ವಿಚಾರಗಳ ಬಗ್ಗೆ ಶಾಸನಾಧಾರಿತ ವಿವರಣೆ ಕೊಟ್ಟಿದ್ದಾರೆ. ಬೇರೆ ಬೇರೆ ಕಸಬು ಆಧರಿತ ಜನರನ್ನು ಉಲ್ಲೇಖಿಸುವಾಗ ಲೇಖಕರು ಒಂದು ಆಚ್ಚರಿಯ ಉಲ್ಲೇಖವನ್ನು ಮಾಡಿದ್ದಾರೆ. ಯಲಬುರಗಿಯ ಶಾಸನವೊಂದರಲ್ಲಿ ಬಸವೋಜನ ಮಗ, ಗಣೋಜನೆಂಬುವನು ದೇವ ದೇವತೆಗಳ ಮೂರ್ತಿಗಳನ್ನು ಮತ್ತು ದೇವಾಲಯಗಳನ್ನು ಕಟ್ಟಿಗೆಯಲ್ಲಿ ಮತ್ತು ಕಲ್ಲಿನಲ್ಲಿ ನಿರ್ಮಿಸುತ್ತಿದ್ದನೆಂಬುದನ್ನು ದಾಖಲಿಸಿದ್ದಾರೆ. ಅಂಥ ದೇವಾಲಯಗಳಲ್ಲಿ ಗಣೋಜ ನಿರ್ಮಿಸಿದ ಶ್ರೀ ಜೇಷ್ಠಾಲಕ್ಷ್ಮೀದೇವರ ದೇವಾಲಯವೂ ಒಂದು. ಇದೊಂದು ಅಪರೂಪದ ದಾಖಲೆ. ಜೇಷ್ಠಾದೇವಿಯ ಉಲ್ಲೇಖ ಬೇರೆ ಕಡೆ ಇದ್ದರೂ ಇರಬಹುದು, ಆದರೂ ಶಾಸನನೋಕ್ತ ಜೇಷ್ಠಾದೇವಿ ಕಂಡು ಬಂದಿರುವುದು ಇಲ್ಲಿ ಮಾತ್ರ. ಅದಕ್ಕೆ ಇದು ಅಪರೂಪದ ಶಾಸನ. ಏಕೆಂದರೆ ಹಿಂದೂ ಸಂಪ್ರದಾಯದಂತೆ ಭೂವಲಯದಲ್ಲಿ ಬ್ರಹ್ಮನು ಹೇಗೆ ಪೂಜಾರ್ಹನಲ್ಲವೋ ಹಾಗೆಯೇ ಜೇಷ್ಠಾದೇವಿಯೂ ಸಹ ಪೂಜಾರ್ಹಳಲ್ಲ. ಬ್ರಹ್ಮದೇವನು ಪೂಜಾರ್ಹನಲ್ಲವೆಂದರೂ ಕೆಲವು ಕಡೆಗೆ ಬ್ರಹ್ಮನ ಪೂಜಾ ದೇವಸ್ಥಾನಗಳಿರುವುದು ಕಂಡು ಬರುತ್ತದೆ. ರಾಜಾಸ್ಥಾನದ ಪುಷ್ಕರದಲ್ಲಿ ಪ್ರಸಿದ್ಧ ಬ್ರಹ್ಮ ದೇವಸ್ಥಾನವಿದೆ. ಹಾಗೆಯೆ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಸಂಪ್ರದಾಯ ಆಕೆ ದೇವತೆಯೆಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಸಮುದ್ರ ಮಥನದಲ್ಲಿ ಮೊದಲು ಹುಟ್ಟಿದವಳು ಜೇಷ್ಠಾದೇವಿಯೆಂದೂ ಅವಳು ಅನಿಷ್ಟ ಲಕ್ಷ್ಮೀಯೆಂದೂ ಭಾವಿಸಿ, ಅಂದಿನ ಸಮುದ್ರ ಮಥನದ ಫಲಾನುಭವಿಗಳು ಅವಳನ್ನು ಮತ್ತೆ ಸಮುದ್ರಕ್ಕೆ ಎಸೆದರೆಂದೋ, ಇಲ್ಲವೆ ತಿರಸ್ಕರಿಸಿ ಬಿಟ್ಟರೆಂದೋ ಹೇಳುತ್ತಾರೆ. ಕೊಪ್ಪಳ ಜಿಲ್ಲೆಯ ಯಲಬುರಗಿಯಲ್ಲಿ ದರಿದ್ರ ಲಕ್ಷ್ಮಿಯನ್ನೂ ಜನರು ಪೂಜಿಸುತ್ತಿದ್ದರು ಎಂದು ತಿಳಿದು ಬರುತ್ತದೆ. ಇಂತಹ ವಿಶಿಷ್ಟ ಶಾಸನಗಳ ಮೇಲೆ ಇನ್ನಷ್ಟು ಬೆಳಕು ಚೆಲ್ಲುವ ಕಾರ್ಯ ಲೇಖಕರಿಂದ ಆಗಲಿ ಎಂದು ನಾನು ಆಶಿಸುತ್ತೇನೆ.

ವೀರಗಲ್ಲು, ಮಾಸ್ತಿಕಲ್ಲು ನಿಷಧಿ ಕಲ್ಲುಗಳ ಬಗ್ಗೆ ವಿಸ್ತೃತ ವಿವರವಿದೆ. ಆದರೆ ಇಲ್ಲಿ ಕೆಲವು ಪ್ರಮಾದಗಳೂ ಇವೆ. ನಿಷಧಿಕಲ್ಲು ಎಂದರೆ ಸಲ್ಲೇಖನ ವೃತ್ತದಿಂದ ಗತಿಸಿಹೋದ ಸನ್ಯಾಸಿಗಳ ಸ್ಮೃತಿಗಾಗಿ ನೆಟ್ಟ ಕಲ್ಲು ಎಂದು ಹೇಳುವುದೇನೋ ನಿಜ. ಆದರೆ ಸಲ್ಲೇಖನವಿಲ್ಲದೆ ಕಾಲವಾಗಿ ಹೊದ ಜೈನಮಠದ ಸ್ವಾಮಿಗಳ ಮತ್ತು ಮುನಿಗಳ ಸ್ಮರಣಾರ್ಥವಾಗಿಯೂ ಸಹ ನಿಷಧಿಕಲ್ಲುಗಳನ್ನು ಸ್ಥಾಪಿಸಿ ಉಳಿಸಿರುವುದನ್ನು ಕೆಲವು ಕಡೆಗೆ ನಾವು ನೊಡುತ್ತೇವೆ. ಉದಾಹರಣೆಗೆ ಶಿರ್ಸಿ ತಾಲ್ಲೂಕಿನ ಸೊಮದಾದ ಭಟ್ಟಾಕಳಂಕ ಜೈನಮಠದ ಪರಂಪರೆಯಲ್ಲಿ ಬರುವ ಗತಿಸಿಹೋದ ಎಲ್ಲಾ ಇಪ್ಪತ್ತು ಜನ ಶ್ರೀಮಠದ ಸ್ವಾಮಿಗಳ ಹೆಸರಿನಲ್ಲಿ ನಿಷಧಿ ಸ್ಮಾರಕಗಳನ್ನು ನಿರ್ಮಿಸಿ, ಆ ಸ್ಮಾರಕಗಳ ಮೇಲೆ ಚಿಕ್ಕದೊಂದು ದೇವಸ್ಥಾನವನ್ನು ಕಟ್ಟಲಾಗಿದೆ. ಅಲ್ಲಿಯ ಪ್ರತಿಯೊಂದು ಸ್ಮಾರಕದ ಮುಂದೆ ಆ ಸ್ವಾಮಿಯ ಹೆಸರನ್ನು ದಾಖಲಿಸಲಾಗಿದೆ.

ಶಾಸನಗಳ ಭಾಷಿಕ ಅಧ್ಯಯನದ ವಿಷಯಕ್ಕೆ ಬಂದಾಗ ಅವರು ದಾಖಲಿಸಿರುವಂತೆ ಶಾಸನಗಳಲ್ಲಿ ಗದ್ಯಕ್ಕಿಂತ ಪದ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟುಕೊಂಡು ಬಂದಿದ್ದಾರೆಂಬುದು ನಿಜ. ಆದರೆ ಒಂದು ಶಾಸನದ ವಿಷಯಕ್ಕೆ ಬಂದಾಗ ಆ ಶಾಸನದ ರಚನೆ ಮಾಡುವ ಶಾಸನ ರಚನೆಕಾರನಿಗೆ ತನ್ನ ಪಾಂಡಿತ್ಯವನ್ನು ಅಲ್ಲಿ ತೋರಿಸಬೇಕೆಂಬುದು ಮಹತ್ವದ್ದಾಗಿರುತ್ತಿತ್ತು. ಶಾಸನ ಸ್ಥಾಪಿಸುತ್ತಿದ್ದ ಅಳ್ವರಸರು ತಮ್ಮ ಆಸ್ಥಾನ ಪಂಡಿತರಿಂದಲೇ ಶಾಸನಗಳನ್ನು ಬರೆಯಿಸುತ್ತಿದ್ದುದರಿಂದ, ಅವರು ಪದ್ಯ ಪ್ರಕಾರವನ್ನೇ ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈ ಕಾರಣಕ್ಕೆ ಹೆಚ್ಚಾನು ಹೆಚ್ಚು ಶಾಸನಗಳು ಪದ್ಯರೂಪದಲ್ಲಿಯೇ ಇವೆ.

ರಾಜ್ಯಾದಿತ್ಯನ ವ್ಯವಹಾರ ಗಣಿತದಲ್ಲಿ ಬರುವ ಅಳತೆಗಳು ಮತ್ತು ನಾಣ್ಯಗಳು ಒಂದೇ ಬಗೆಯಾಗಿಲ್ಲ. ರಾಜಾದಿತ್ಯ ಒಂದು ಕಡೆಗೆ ೪ ವೀಸ = ೧ ಹಾಗ ಎಂದು ಹೇಳಿದ್ದರೆ, ಮತ್ತೊಂದು ಕಡೆಗೆ ೫ ವೀಸ= ೧ ಹಾಗ ಎಂದು ಹೇಳಿದ್ದಾನೆ. ಇವೆರಡೂ ಸರಿಯೆ. ಕಲ್ಯಾಣಿ ಚಾಲುಕ್ಯರ ರಾಜ್ಯದಲ್ಲಿ ೪ವೀಸ ಒಂದು ಹಾಗಕ್ಕೆ ಸಮ ಎಂದು ಚಲಾವಣೆ ನಡೆಯಿಸುತ್ತಿದ್ದರೆ, ಅವರ ಮಾಂಡಳೀಕರಾದ ಗೋವಾ ಮತ್ತು ಹಾನುಗಲ್ಲ ಕದಂಬರು ೫ ವೀಸ=೧ಹಾಗ ಎಂದು ಹೇಳುತ್ತಿದ್ದರು. ಧಾನ್ಯದ ಅಳತೆಯ ಕೋಷ್ಟಕ ಮತ್ತು ತೂಕದ ಕೋಷ್ಟಕಗಳನ್ನು ಒಂದೇ ಯಾದಿಯಲ್ಲಿ ನೀಡಿರುವುದು ಸರಿಯಲ್ಲ.

| ಧಾನ್ಯದ ಅಳತೆಗಳು | ತೂಕದ ಅಳತೆ (ಬಟ್ಟು)ಗಳು |
| --- | --- |
| ೪ಗಿದ್ದನ=೧ಸೊಲ್ಲಿಗೆ | ೪ಸುವರ್ಣ=೧ಕರ್ಷ |
| ೪ಸೊಲ್ಲಿಗೆ=೧ಮಾನ | ೪ಕರ್ಷ=೧ಫಲ |
| ೪ಮಾನ=೧ಬಳ್ಳ | ೨೦ಫಲ=೧ಬಿಸಗೆ |
| ೪ಬಳ್ಳ=೧ಕೊಳಗ | ೫ಬಿಸಗೆ=೧ತೊಲ |
| ೪ಕೊಳಗ=೧ಪಂಚಕ | ೨೦ತೊಲ=೧ಭಾರ |
| ೪ಪಂಚಕ=೧ಖಂಡುಗ | |

ಎರಡು ಸೀರೆಯ ದಿಂಡಿನ ಬಂಡಿಯೊಂದಕ್ಕೆ ಒಂದು 'ಒಣ' (ಇದು ಪಣವಿರಬೇಕು) ಎರಡು ಸೀರೆ ಎಂದರೆ ಒಂದು ಜವುಳಿ. ಇಲ್ಲಿ ಉಲ್ಲೇಖಿಸಿರುವುದು ಜವುಳಿ ಹೇರಿದ ಬಂಡಿಯೊಂದಕ್ಕೆ ಒಂದು ಪಣ ಕರವೆಂದಿರಬೇಕು. ಏಕೆಂದರೆ ಎರಡು ಸೀರೆಗೆ ೧ ಪಣ ಕರ ತುಂಬಾ ಹೆಚ್ಚಾಯಿತು. ಎರಡು ಸೀರೆಗಳು ಒಂದು ಪಣಕ್ಕಿಂತಲೂ ಕಡಿಮೆ ಬೆಲೆಗೆ ಸಿಕ್ಕುತ್ತಿದ್ದುದರಿಂದ ಅವುಗಳ ಮೇಲಿನ ಕರ ಒಂದು ಪಣವಿರಲಿಕ್ಕೆ ಸಾಧ್ಯವಿಲ್ಲ. ತೊಲೆಭಾರದ ಜವುಳಿಯೊಂದಕ್ಕೆ ಒಂದು ವೀಸ ಕರವೆಂದಿರುವುದು ನಮ್ಮ ಊಹೆಯನ್ನು ಪುಷ್ಟೀಕರಿಸುತ್ತದೆ. ಹಿರಿಯ ಕೋಲಿನ ಮತ್ತರು ಎಂದು ಒಂದು ಕಡೆಗೆ ಉಲ್ಲೇಖಿಸಲಾಗಿದೆಯೆಂದು ಹೇಳಿರುವುದು ಸರಿ. ಹಿರಿಯ ಕೋಲಿನ ಅಳತೆಯೆಂದರೆ ಎಷ್ಟು ಎಂಬುದನ್ನು ಗೊತ್ತು ಹಚ್ಚಿದ್ದರೆ ನಮಗೆ ಹೊಸ ಮಾನವೊಂದು ಸಿಕ್ಕಂತಾಗುತ್ತಿತ್ತು. ಹೊಲ ಅಳೆಯುವ ಕೋಲಿಗೆ ಆಗ ನಿರ್ದಿಷ್ಟತೆ ಇರಲಿಲ್ಲ. ಅಂದರೆ ಹೊಲ ಅಳತೆಗೆ ಬೇರೆ ಬೇರೆ ಕೋಲುಗಳಿದ್ದವು. ಬ್ರಾಹ್ಮಣರಿಗೆ ಭೂದಾನ ಮಾಡುವಾಗ ಹಿರಿಯ (ಉದ್ದದ ಕೋಲು) ಕೋಲಿನಿಂದಲೇ ಅಳತೆ ಮಾಡಿಕೊಡುತ್ತಿದ್ದರು.

ಸ್ಥಳನಾಮಗಳ ಮೇಲೆ ಚರ್ಚಿಸುವಾಗ ಒಂದು ಗ್ರಾಮದ, ಪ್ರದೇಶದ ಹೆಸರು ಹೇಗೆ ಹುಟ್ಟಿಕೊಳ್ಳುತ್ತದೆ ಎಂಬುದನ್ನು ವಿವರಿಸುತ್ತಾ' ಬೆಟ್ಟ, ಹಳ್ಳ, ಕೆರೆ ಮುಂತಾದವು ಕಾರಣವಾಗುತ್ತವೆಯೆಂಬುದು ಸರಿ. ಕೊಪ್ಪಳದ ಹೆಸರಿನ ಬಗ್ಗೆ ಸುದೀರ್ಘವಾಗಿ ಚರ್ಚಿಸಿರುವ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಅದು 'ಕೊಪ್ಪಲು' ಶಬ್ದದಿಂದ ನಿಷ್ಪತ್ತಿ ಹೊಂದಿರಬಹುದೆಂದು ಅಭಿಪ್ರಾಯ ಪಟ್ಟಿರುವುದು ಸರಿಯಿರಬಹುದು. (ಕೊಪಣ+ಅಚಲ=ಕೋಪಣಾಚಲ) ಬೆಟ್ಟ ಗುಡ್ಡಗಳಿಂದ ತುಂಬಿದ ಕೊಪಣವನ್ನು ಕೊಪಣಾಚಲವೆಂದೂ ಕರೆದಿರಬಹುದೆಂಬುದು ಸರಿಯಲ್ಲ.

ಕೊಪಣಾಚಲವೆಂದರೆ ಕೊಪ್ಪಳದ ಬೆಟ್ಟ, ಕೊಪ್ಪಳ ಗ್ರಾಮದ ಹೆಸರಲ್ಲ. ಕೊಪಣಾಚಲ ಎಂಬುದು ಸಾಮಾನ್ಯ ಬೆಟ್ಟವಲ್ಲ, ಪವಿತ್ರಾತ್ಮರು ನೆಲಸಿದ್ದ ಪವಿತ್ರ ಬೆಟ್ಟ "ನೆಗಳ್ದ ಕೊಪಣಾಚಲದಂತೆ ಪವಿತ್ರಮತ್ತಿಮಬ್ಬೆಯ ಚರಿತ್ರಂ" ಎಂದು ರಸಕವಿ ರನ್ನ ವರ್ಣಿಸಿರುವುದರಿಂದ ಕೊಪ್ಪಳದ ಬೆಟ್ಟವು ಎಷ್ಟು ಪವಿತ್ರವಾಗಿತ್ತೋ ಅಷ್ಟು ಪವಿತ್ರಾತ್ಮಳು ಆ ಅತ್ತಿಮಬ್ಬೆ. ಪುಣ್ಯ ಕ್ಷೇತ್ರದಲ್ಲಿ ಮರಣ ಹೊಂದಿದರೆ ಮೋಕ್ಷ ದೊರೆಯುತ್ತದೆಯೆಂಬುದು ಸಾಮಾನ್ಯರು ನಂಬಿಕೊಂಡು ಬಂದ ಸಂಗತಿ. ಈ ಗ್ರಂಥಾಂತರಂಗದಲ್ಲಿ ಉಲ್ಲೇಖಿಸಿರುವಂತೆ ಅನೇಕ ಜೈನ ಧರ್ಮಿಯರು ತಮ್ಮ ಅಂತ್ಯ ಕಾಲದಲ್ಲಿ ಕೊಪ್ಪಳಕ್ಕೆ ಬಂದು ನೆಲಸಿ ಮರಣವಪ್ಪುತ್ತಿದ್ದರೆಂದು ತಿಳಿದು ಬರುವುದರಿಂದ ಕೊಪಣ ಮತ್ತು ಕೊಪಣಾಚಲ ಪವಿತ್ರ ಕ್ಷೇತ್ರಗಳಾಗಿದ್ದವು ಎಂಬುದರಲ್ಲಿ ಎರಡು ಮಾತಿಲ್ಲ. ಕೊಪ್ಪಳ ಜಿಲ್ಲೆಗೆ ನಾನು ಕೊಪ್ಪಳ ನಾಡು ಎಂದು ಕರೆದುಕೊಂಡಿದ್ದೇನೆ. ಇದಕ್ಕೆ ತನ್ನದೆ ಆದ ಭಾಷೆ, ಸಂಸ್ಕೃತಿ ಇದೆ. ಗಂಗಾವತಿಯಿಂದ ಆಚೆಗಿನ (ರಾಯಚೂರು, ಮಾನ್ವಿ, ದೇವದುರ್ಗ, ಲಿಂಗಸೂರ) ಪ್ರದೇಶದ ಭಾಷೆ ಬೇರೆಯೆ ಆಗುತ್ತದೆ. ಶಾಸನೋಕ್ತ ಭಾಷೆಯಲ್ಲಿ ಅಂತಹ ಬದಲಾವಣೆಯಿಲ್ಲದಿದ್ದರೂ ಆಡು ಭಾಷೆಯ ವಿಷಯದಲ್ಲಿ ಕೊಪ್ಪಳದ ಭಾಷೆ ಬೇರೆಯಾಗಿಯೇ ನಿಲ್ಲುತ್ತದೆ. ಒಟ್ಟಾರೆಯಾಗಿ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಪ್ರಾಚೀನ ಕಾಲದಿಂದ ಇತ್ತೀಚಿನ ಹೈದರಾಬಾದ ನವಾಬರ ಇಸ್ಲಾಮಿಕ್ ಆಡಳಿತದವರೆಗಿನ ಕೊಪ್ಪಳ ನಾಡಿನ ಶಾಸನೋಕ್ತ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಒಟ್ಟಾರೆಯಾಗಿ ಅವರು ಬಹಳಷ್ಟು ಸಾಮಗ್ರಿಯನ್ನು ಕಲೆ ಹಾಕಿ ಈ ಕೃತಿಯನ್ನು ರಚಿಸಿದ್ದಾರೆಂಬುದರಲ್ಲಿ ಎರಡು ಮಾತಿಲ್ಲ. ಮುಂದೆಯೂ ಹೀಗೆಯೆ ಶಾಸನ ಲೋಕದಲ್ಲಿಯೇ ವಿಹರಿಸುತ್ತಿದ್ದರೆ ಅವರಿಗೆ ಹೆಚ್ಚು ಸಂತೋಷ ಸಿಕ್ಕುತ್ತದೆ.

**–ವಿರುಪಾಕ್ಷಪ್ಪ ಕೊರಗಲ್,**

**ಹಿರಿಯ ಸಾಹಿತಿಗಳು, ಹಾವೇರಿ.**

**

## ಎರಡು ಮಾತು (ಪರಿಷ್ಕೃತ ದ್ವಿತೀಯ ಮುದ್ರಣಕ್ಕೆ)

ಕೆಲ ಮಹತ್ವದ ಕೃತಿಗಳು ಎಷ್ಟು ಮುದ್ರಣ ಕಂಡರೂ, ಎಷ್ಟೇ ಪ್ರತಿಗಳನ್ನು ಮುದ್ರಿಸಿದರೂ ಓದುಗರಿಗೆ ದೊರೆಯುವುದಿಲ್ಲ. ಅಂತಹ ಪುಸ್ತಕಗಳಿಗಾಗಿ ಅಲೆದಾಡಿದ್ದನ್ನು ನಾನು ನೋಡಿದ್ದೇನೆ. ಅಲೆದಾಡಿ, ಹುಡುಕಾಡಿ, ಸುಸ್ತಾಗಿ ಕೊನೆಗೆ ಪ್ರತಿಗಳು ಸಿಗದಿದ್ದಾಗ ಯಾರೋ ಪುಣ್ಯಾತ್ಮರ ಹತ್ತಿರ ಇರುವ ಪುಸ್ತಕವನ್ನು ಅನಿವಾರ್ಯವಾಗಿ ಝರಾಕ್ಸ ಮಾಡಿಸಿಕೊಂಡದ್ದನ್ನು ಕಂಡಿದ್ದೇನೆ. ಸ್ವತಃ ನಾನೇ ಕೆಲ ಅವಶ್ಯಕ ಅಧ್ಯಯನದ ಕೃತಿಗಳು ದೊರೆಯದಿದ್ದಾಗ ನೂರಾರು ರೂಪಾಯಿ ಖರ್ಚು ಮಾಡಿ ಝರಾಕ್ಸ್ ಪ್ರತಿ ಮಾಡಿಸಿಕೊಂಡಿದ್ದೇನೆ. ಪುಸ್ತಕ ಬೆಲೆಯ ಹತ್ತಾರು ಪಟ್ಟು ಹಣ ಕೊಟ್ಟು ಝರಾಕ್ಸ ಮಾಡಿಸಿಕೊಂಡು ಅಧ್ಯಯನ ಮಾಡಿದ್ದೇನೆ. ಅವು ವಿದ್ವತ್‌ಪೂರ್ಣ ಮತ್ತು ಅವಶ್ಯಕ ಕೃತಿಗಳಾಗಿರುತ್ತಿದ್ದವು. ಹೀಗಾಗಿ ಕೆಲ ಮಹತ್ವದ ಕೃತಿಗಳು ಮರುಮುದ್ರಣ ಕಂಡಿವೆ. ಲೇಖಕರು, ಪ್ರಕಾಶಕರು, ಸಂಘ-ಸಂಸ್ಥೆಗಳು ಅಧ್ಯಯನ ಪೂರ್ಣವಾದ ಕೃತಿಗಳನ್ನು ಹೆಚ್ಚು ಹೆಚ್ಚು ಮುದ್ರಿಸಬೇಕಿದೆ. ಅವು ಓದುಗರ ಕೈಗೆ ಸುಲಭ ಮತ್ತು ಕಡಿಮೆ ದರದಲ್ಲಿ ದೊರೆಯುವಂತಾಗಬೇಕು.

ಕೊಪ್ಪಳ ಜಿಲ್ಲೆಯ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ನಾಡಿನ ವಿದ್ವಾಂಸರು ಬರೆದ ಅನೇಕ ಮೌಲ್ವಿಕ ಕೃತಿಗಳು ಪ್ರಕಟವಾಗಿವೆ. ಆದರೆ ಇಂದು ಅವುಗಳಲ್ಲಿ ಬಹುತೇಕ ಗ್ರಂಥಗಳು ಓದುಗರಿಗೆ ಲಭ್ಯವಿಲ್ಲ. ಹೀಗಾಗಿ ಅವನ್ನು ಮರುಮುದ್ರಿಸುವ ಕಾರ್ಯವಾಗಬೇಕಾಗಿದೆ. ಜಿಲ್ಲೆಯ ಇತಿಹಾಸವನ್ನು ಅಧ್ಯಯನ ಮಾಡಬೇಕಿದೆ; ಪುನರ್ ಅವಲೋಕಿಸಬೇಕಾಗಿದೆ. ಆ ನಿಟ್ಟಿನ ಪ್ರಯತ್ನವೇ ನನ್ನ 'ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ' ಎಂಬ ಈ ಸಂಶೋಧನಾ ಕೃತಿಯ ಮರುಮುದ್ರಣ ಕಾಣುತ್ತಿದೆ.

ಕೊಪ್ಪಳ ಜಿಲ್ಲೆಯ ಇತಿಹಾಸ ಬಹುಪುರಾತನದ್ದಾಗಿದೆ. ಕ್ರಿ.ಪೂ. ಕಾಲದಿಂದಲೂ ತನ್ನದೇ ಆದ ಸಾಂಸ್ಕೃತಿಕತೆಯನ್ನು ಬೆಳೆಸಿಕೊಂಡು ಬಂದಿರುವುದಕ್ಕೆ ಇಲ್ಲಿ ಅನೇಕ ಸಾಕ್ಷಾಧಾರಗಳು ದೊರೆಯುತ್ತಿವೆ. ಕ್ರಿ.ಪೂ. 3-2 ನೇ ಶತಮಾನದ ಮೌರ್ಯ ಸಾಮ್ರಾಜ್ಯದ ಕಾಲಗಳಿಂದ ಪ್ರಾರಂಭವಾದ ಇಲ್ಲಿನ ಇತಿಹಾಸವು ಸುಮಾರು 18ನೇ ಶತಮಾನದವರೆಗೂ ಬಹಳ ವೈಭವಪೂರ್ಣವಾಗಿ ಬೆಳಗಿದ ಬಗ್ಗೆ ಉಲ್ಲೇಖಗಳಿವೆ. ಇಲ್ಲಿನ ಸ್ಮಾರಕಗಳು ಇತಿಹಾಸವನ್ನು ಸಾರಿ ಸಾರಿ ಹೇಳುತ್ತವೆ. ದೇವಸ್ಥಾನಗಳು, ಶಾಸನಗಳು, ಮೂರ್ತಿಶಿಲ್ಪಗಳು ಇಲ್ಲಿನ ಭವ್ಯ ಇತಿಹಾಸವನ್ನು ಕಟ್ಟಿಕೊಡುತ್ತವೆ. ಅವುಗಳಲ್ಲಿ ಶಾಸನಗಳ ಆಕರಗಳದ್ದೇ ಸಿಂಹಪಾಲು. ಶಾಸನಗಳನ್ನು ಇಟ್ಟುಕೊಂಡು ಅನೇಕ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ನನ್ನ ಅಧ್ಯಯನವು

ಒಂದಾಗಿದೆ. ಜಿಲ್ಲೆಯ ಎಲ್ಲಾ ಶಾಸನಗಳ ಅಧ್ಯಯನಗಳ ಮೂಲಕ ಜಿಲ್ಲೆಯ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಈ ಕೃತಿಯದ್ದಾಗಿದೆ. ಶಾಸನ ಆಕರಗಳು ಬಹಳ ಮಹತ್ವ ಪಡೆದವುಗಳಾಗಿವೆ; ನಂಬಿಕಸ್ಥ ಆಕರಗಳಾಗಿವೆ. ಹೀಗಾಗಿ ಈ ಶಾಸನಗಳನ್ನೇ ಮುಖ್ಯವಾಗಿಟ್ಟುಕೊಂಡು ಅನೇಕ ಅಧ್ಯಯನಗಳು ನಡೆದಿವೆ.

ನನ್ನ ಈ ಕೃತಿಯನ್ನು 2010ರಲ್ಲಿ ಮೊದಲ ಮುದ್ರಣ ಮಾಡಿಸಿದ್ದೆ. ಅದರಲ್ಲಿ 300 ಪ್ರತಿಗಳು ಗ್ರಂಥಾಲಯಕ್ಕೆ ಆಯ್ಕೆಯಾಗಿದ್ದವು. ಉಳಿದ ಎಲ್ಲಾ ಪ್ರತಿಗಳು 2–3 ವರ್ಷಗಳಲ್ಲಿ ಖಾಲಿಯಾದವು. ಅದು ಸ್ಥಳೀಯ ಇತಿಹಾಸ ಕುರಿತ ರಚನೆಯಾಗಿದ್ದರಿಂದ ಈ ಪುಸ್ತಕದ ಬೇಡಿಕೆ ಹೆಚ್ಚಾಗಿ ಕಂಡುಬಂದಿತು. ಅನೇಕ ಸಂಶೋಧಕರು, ವಿದ್ಯಾರ್ಥಿಗಳು ಪುಸ್ತಕಕ್ಕಾಗಿ ಬಂದು ನನ್ನ ಹತ್ತಿರ ಕೇಳುತ್ತಿದ್ದರು. "ಅವು ಖಾಲಿಯಾಗಿವೆ" ಎಂದು ಹೇಳಿದಾಗ ಬೇಸರ ಮಾಡಿಕೊಳ್ಳುತ್ತಿದ್ದರು. ಹೀಗಾಗಿ ಈ ಕೃತಿಯನ್ನು ಮರುಮುದ್ರಣ ಮಾಡಬೇಕೆಂಬ ಆಸೆ ಉಂಟಾಯಿತು. ಜಿಲ್ಲೆಯ ಅಧ್ಯಯನಕಾರರಿಗೆ ಪುನರ್ ಮುದ್ರಿಸಿಕೊಡಬೇಕೆಂದು ನಿರ್ಧಾರ ಮಾಡಿದೆ. ಅದರಲ್ಲಿರುವ ಕೆಲವು ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಿ ಇನ್ನೂ ಕೆಲವು ಅಂಶಗಳನ್ನು ಸೇರಿಸಿ ಪುನರ್ ಮುದ್ರಿಸಲಾಗಿದೆ. ಅದರ ಫಲವೇ ತಮ್ಮ ಕೈಯಲ್ಲಿರುವ ಈ ಕೃತಿ.

ನಮ್ಮ ಮಹಾವಿದ್ಯಾಲಯದ ಪದವಿ ಪ್ರಾಚಾರ್ಯರಾದ ಪ್ರೊ. ಎಂ.ಎಸ್.ದಾದ್ಮಿ, ಪ್ರಾಧ್ಯಾಪಕರುಗಳಾದ ಡಾ. ಜೆ. ಎಸ್. ಪಾಟೀಲ, ಡಾ. ಪ್ರಾ. ರಾಜು ಹೊಸಮನಿ, ಪ್ರಾ. ಅರುಣಕುಮಾರ ಎ.ಜಿ., ಡಾ. ಚೆನ್ನಬಸವ ಎ., ಡಾ. ಕರಿಬಸವೇಶ್ವರ ಬಿ., ಡಾ. ಶಶಿಕಾಂತ ಉಮ್ಮಾಪುರೆ, ಡಾ. ನಾಗರಾಜ ದಂಡೋತಿ, ಪ್ರಾ. ವೆಂಕಟೇಶ ನಾಯ್ಕ, ಪ್ರಾ. ಪ್ರಶಾಂತ ಕೊಂಕಲ್, ಪ್ರಾ. ಮಂಜುನಾಥ ಗಾಳಿ, ಪ್ರಾ. ಕು. ಶ್ರೀದೇವಿ. ಹೆಚ್, ಪ್ರಾ. ಶರಣಪ್ಪ ಚವ್ಹಾಣ, ಪ್ರಾ. ಮಂಜುನಾಥ ಎಂ. ಪ್ರಾ. ಪ್ರವೀಣ ಹಾದಿಮನಿ, ಪ್ರಾ. ಸುಂದರ ಮೇಟಿ, ಗ್ರಂಥಪಾಲಕರಾದ ಮಹೇಶ ಬಿರಾದಾರ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ವಿನೋದ ಸಿ. ಮುದಿಬಸನಗೌಡರ, ವೈ.ಬಿ. ಬಂಡಿ, ಬಸವರಾಜ ಕರುಗಲ್ ಹಾಗೂ ಕಛೇರಿ ಸಿಬ್ಬಂದಿಗಳಾದ ಶಶಿಧರ ಕೊತಬಾಳ, ಅರುಣ ಪಾಟೀಲ್, ಮಾನಪ್ಪ ಕಮ್ಮಾರ, ಅಶೋಕ ಗೋಗಿ, ಮಹಮ್ಮದ ಷಫಿ ಸರದಾರ, ಅಜ್ಜಪ್ಪ ಪಿ., ಪ್ರಭಾಕರ ವಾಲ್ಮೀಕಿ, ಪಿ. ಕುಮಾರಸ್ವಾಮಿ, ನಾಗರಾಜ ಹೊಸಳ್ಳಿ, ಪ್ರದೀಪ ಬಳ್ಳೊಳ್ಳಿ, ಕು.ಸೌಮ್ಯಶ್ರೀ ನಿಂಗಲಬಂಡಿ, ಶ್ರೀಮತಿ ಪಾರಮ್ಮ ಹುಲ್ಲೂರು, ಜಗದೀಶ ಸಜ್ಜನ, ವಿರೇಶ ಕವಳಕೇರಿ ಇವರಿಗೆ ಧನ್ಯವಾದಗಳು.

ನಮ್ಮ ಪದವಿ ಪೂರ್ವ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ವಿರೇಶಕುಮಾರ ಎನ್.ಎಸ್, ಬಾಳಪ್ಪ ತಳವಾರ, ಸಂತೋಷ ಗೌಡ, ಕೆ.ಎಸ್.ದಂಡಿನ್,

ಪಿ. ಗೋಪಾಲಪ್ಪ, ಶ್ರೀಮತಿ ಕಮಲಾ ಅಳವಂಡಿ, ಶ್ರೀಮತಿ ದೀಪಾ ಬೆಟಗೇರಿ, ಅಶೋಕ ಓಜಿನಹಳ್ಳಿ, ಗುರುರಾಜ ವೈ. ಗುರಮ್ಮನವರ, ಶಿವಯ್ಯ ಎನ್. ಬಿ., ಮಂಜುನಾಥ ಬಡಿಗೇರ, ಪ್ರತಾಪ ಬಿ.ವಿ, ಪ್ರದೀಪ ಪಲ್ಲೇದ, ವಿನಯಕುಮಾರ ಎಚ್.ಎಮ್. ರಮೇಶ ಎನ್. ದೊಡ್ಡವಾಡ, ಶ್ರೀಧರ ಎಸ್. ವಾಣಿ, ಅಗಸ್ಟಿನ್, ಪುಂಡಲೀಕರಡ್ಡಿ ಆರ್.ಬಿ, ಜ್ಞಾನೇಶ್ವರ ಪತ್ತಾರ, ಗೋಣಿಬಸಪ್ಪ ಹಡಪದ, ಹನುಮಂತಪ್ಪ ಶಲೂಡಿ, ರವಿಕುಮಾರ ಬಡಿಗೇರ, ಶಿವನಗೌಡ ಪಿ.ಪಾಟೀಲ್, ಕಲ್ಲಯ್ಯ ಪೂಜಾರ, ಸಂಗಮೇಶ ಬೇವಿನಗಿಡದ, ಮಾರುತಿ ಎಸ್. ಗುರಿಕಾರ, ವರ್ಧಮಾನ ಎಮ್. ಶ್ರೀ ಆದೇಶ ಎ.ಜಿ. ಮತ್ತು ಕಛೇರಿ ಸಿಬ್ಬಂದಿಗಳಾದ ಪ್ರಭುಗೌಡ ಪಾಟೀಲ, ಗೋಣಿಬಸಪ್ಪ ಗುಡ್ಲಾನೂರ, ಪರ್ವತಗೌಡ ಬಿ.ಎನ್., ಮಲ್ಲಿಕಾರ್ಜುನ ಕಾತರಕಿ, ಶಿವರಾಜ ಹೊಸಮನಿ, ಶಿವರಾಜ ಉಂಕಿ ಮತ್ತು ಶಿವಕುಮಾರ ಕುಕನೂರು, ಸಂತೋಷ ದೇಶಪಾಂಡೆ ಹಾಗೂ ಸೋಮರಡ್ಡಿ ಅಳವಂಡಿ ಇವರಿಗೆ ಕೃತಜ್ಞತೆಗಳು.

ವಿದ್ಯಾರ್ಥಿ ಮಿತ್ರರಾದ ಪ್ರವೀಣ ಪೊಲೀಸ್ ಪಾಟೀಲ್, ರಡ್ಡೆಪ್ಪ ಸೋಮಲಾಪುರ, ರೋಹಿತ್ ಜಿ. ಎನ್. ಬಸವರಾಜ ಗೌಡರ, ವಿರುಪಾಕ್ಷ ಕಾಮನೂರ, ಸುಧಾ ಆರ್. ಕುಲಕರ್ಣಿ, ಕಾವೇರಿ ಮೇಟಿ, ಗೀತಾ ಕಸ್ತೂರಿ, ಪ್ಯಾಟಿ ರೇಖಾ ಪ್ರಮೋದಿನಿ, ಪಾರ್ವತಿ ಮೆಳ್ಳಿಕೇರಿ, ಗೀತಾ ಹಿರೇಮಠ, ವೀಣಾ ಹಡಪದ, ನಿವೇದಿತಾ ಅಂಡಗಿ, ವೀಣಾ ವಿ. ಚೆಲ್ಲಾ, ಶರಣಪ್ಪ ಉಚ್ಚಲಕುಂಟೆ, ಮಂಜುನಾಥ ಮೇಟಿ, ಕೆ. ಗಂಗಾ, ದೇವಮ್ಮ, ರಹಿಮಸಾಬ್ ಆರ್. ಗಂಗನಾಳ, ಲಕ್ಷ್ಮಿ ಪಿ. ಬನ್ನಿಮಠ, ಪವಿತ್ರ ಎ.ಕೆ, ಪೂಜಾ ವಿ. ಯಡ್ರಮ್ಮನಹಳ್ಳಿ, ನಿರ್ಮಲಾ ಪಿ.ಕೆ, ರಕ್ಷಿತಾ ಕೆ.ಸಿ, ಜಗದೀಶ ಕನಕಾಪೂರ, ವಿರುಪಾಕ್ಷಿ ಜಿ, ರಮೇಶ ಎಸ್. ಹಿರೆಖೇಡ, ಪ್ರೇಮಾ ಚವ್ಹಾಣ, ಸುಪ್ರಿತಾ ಮೇಟಿ, ಪವಿತ್ರ ಎಸ್.ಕುದರಿರವರ ಸಹಕಾರಕ್ಕೆ ಧನ್ಯವಾದಗಳು.

ಮುನ್ನುಡಿ ಬರೆದ ಶ್ರೀ ವಿರುಪಾಕ್ಷಪ್ಪ ಕೋರಗಲ್, ಬೆನ್ನುಡಿ ಬರೆದ ಶ್ರೀ ಜಿ. ಎಸ್. ಗೋನಾಳ ಹಾಗೂ ಗ್ರಂಥ ದಾನಿಗಳಾದ ಶ್ರೀ ಸಿ. ವಿ. ಚಂದ್ರಶೇಖರ ರಾಜಕೀಯ ಧುರೀಣರು, ಕೊಪ್ಪಳ ಹಿರಿಯರಾದ ವಿಠ್ಠಪ್ಪ ಗೋರಂಟ್ಲಿ, ಮಹಾಂತೇಶ ಮಲ್ಲನಗೌಡರ ಇವರಿಗೆ ಅನಂತ ಕೃತಜ್ಞತೆಗಳು.

**–ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್**

**ಕನ್ನಡ ಉಪನ್ಯಾಸಕರು, ಕೊಪ್ಪಳ**

**

# ಮುನ್ನುಡಿ (ಪ್ರಥಮ ಮುದ್ರಣ)

ಇಂದು ಸಂಶೋಧನೆಯ ಪರಿಕಲ್ಪನೆ ವ್ಯಾಪಕವಾಗಿದೆ. ಸಾಂಸ್ಕೃತಿಕ ಸಂಶೋಧನೆಯು ಆಧುನಿಕ ಕಾಲಘಟ್ಟದ ಕೊಡುಗೆಯಾಗಿದೆ. ಸಾಂಸ್ಕೃತಿಕ ಸಂಶೋಧನೆಯ ಮುಖ್ಯ ಉದ್ದೇಶ ಗತಕಾಲವನ್ನು ವರ್ತಮಾನ ಕಾಲದ ಅಗತ್ಯಕ್ಕೆ ತಕ್ಕಂತೆ ಮರುಚಿಂತನೆ ಮಾಡಿಕೊಳ್ಳುವುದು. ಸಂಸ್ಕೃತಿ ಎನ್ನುವುದು ಅರ್ಥಪೂರ್ಣ ಕ್ರಿಯೆಗಳ ವ್ಯವಸ್ಥೆ. ರಾಜಕೀಯ ಹಾಗೂ ಆರ್ಥಿಕ ಶಕ್ತಿಗಳ ಕಾರಣದಿಂದ ಮೂಡುತ್ತದೆ. ಸಂಸ್ಕೃತಿಯನ್ನು ಕುರಿತು ಕನ್ನಡ ನಾಡಿನಲ್ಲಿ ನಡೆದಿರುವ ಅಧ್ಯಯನವು ಎರಡು ನೆಲೆಗಟ್ಟುಗಳಲ್ಲಿ ನಡೆದಿದೆ.

1. ಸಂಸ್ಕೃತಿ ಶೋಧ, 2.ಸಂಸ್ಕೃತಿ ಚಿಂತನೆ. ಸಂಸ್ಕೃತಿ ಶೋಧವು ಸಾಂಸ್ಕೃತಿಕ ಚಿಂತನೆಯ ನೆಲೆಗಳನ್ನು ಆಶ್ರಯಿಸುತ್ತದೆ ಮತ್ತು ರೂಪಿಸುತ್ತದೆ. ಸಂಸ್ಕೃತಿ ಚಿಂತನೆಯ ನೆಲೆಯು ಸಾಂಸ್ಕೃತಿಕ ಶೋಧಗಳ ಫಲಿತಾಂಶಗಳನ್ನು ಒಳಗೊಂಡಿರುತ್ತದೆ. ಚರಿತ್ರೆ, ಧರ್ಮ, ಜನಾಂಗಿಕ, ಕಲಾತ್ಮಕ ವಿಷಯಗಳು ಸಾಹಿತ್ಯ ಮುಂತಾದವು ಕನ್ನಡ ಸಂಸ್ಕೃತಿಯ ಚಿಂತನೆಯ ಹಲವು ಮುಖ್ಯ ಕೇಂದ್ರಗಳಾಗಿವೆ. ಸಂಸ್ಕೃತಿ ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳು ಕೆಲವು ನಿರ್ದಿಷ್ಟ ಆಸಕ್ತಿಗಳನ್ನು ಕೇಂದ್ರವಾಗಿಟ್ಟುಕೊಂಡು ಬೆಳೆದಿವೆ. ಸಂಸ್ಕೃತಿಯ ಶೋಧವು ಪ್ರಮುಖವಾಗಿ ಶಾಸನಗಳನ್ನು ಮುಖ್ಯ ಆಕರಗಳೆಂದು, ಸಾಹಿತ್ಯ ಕೃತಿಗಳು, ಐತಿಹ್ಯಗಳು, ಇತರೆ ಕಲೆಗಳನ್ನು ಅನುಷಂಗಿಕ ಆಕರಗಳೆಂದು ಪರಿಗಣಿಸಿವೆ. ಸಂಶೋಧನೆಯಲ್ಲಿ ಅಂತರಶಿಸ್ತೀಯ ಅಧ್ಯಯನ ಪ್ರಾಮುಖ್ಯತೆ ಪಡೆದಿದೆ. ಶಾಸನಗಳು ಪ್ರಮುಖವಾಗಿ ಒಂದು ಕಾಲದಲ್ಲಿ ನಡೆದ ವ್ಯವಹಾರಗಳ ಲಿಖಿತ ದಾಖಲೆಗಳಾಗಿವೆ. ನಾಡಿನ ರಾಜಕೀಯ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಮೂಲ ಸಾಮಗ್ರಿಗಳಾಗಿವೆ. ಶಾಸನಗಳು ಹಾಗೂ ಪೂರಕ ಆಕರಗಳ ಮೂಲಕ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ರಚಿಸುವಂತಹ ಅಂಶಗಳು ವಿಶೇಷವಾಗಿ ಸಾಹಿತ್ಯದ ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಮೂಲಕ ನಡೆದಿದೆ. ಸಂಸ್ಕೃತಿ ಶೋಧ ಸಹಜವಾಗಿಯೇ ಮೌಲ್ಯ ಶೋಧವಾಗಿದೆ. ಶಾಸನಗಳ ಸಾಂಸ್ಕೃತಿಕ ಅಧ್ಯಯನವು ರಾಜಕೀಯೇತರ ವಿಷಯಗಳನ್ನು ಶೋಧಿಸುವ, ವಿಶ್ಲೇಷಿಸುವ ಅಂಶಗಳನ್ನು ಒಳಗೊಂಡಿದೆ. ಈ ಸಂಶೋಧನೆಯು

ಇಲ್ಲಿಯವರೆಗೂ ಇದ್ದ ಇತಿಹಾಸದ ಸಂಶೋಧನೆಗಿಂತ ಭಿನ್ನವಾದ ಆಯಾಮವನ್ನು ಶಾಸನ ಕ್ಷೇತ್ರಕ್ಕೆ ದೊರೆಕಿಸಿ ಕೊಟ್ಟಿತು. ಅನೇಕ ಹೊಸ ಅಂಶಗಳು ಇದರಿಂದಾಗಿ ಬೆಳಕಿಗೆ ಬಂದವು.

ಶಾಸನಗಳನ್ನಾಧರಿಸಿದ ಸಾಂಸ್ಕೃತಿಕ ಅಧ್ಯಯನದಲ್ಲಿ ಶಾಸನಗಳು ಹೇಳುವ ಬಿಡಿ ಘಟನೆಗಳೇ ಇತಿಹಾಸವೆನ್ನುವ ಹಳೆಯ ವಿಧಾನಕ್ಕಿಂತ ಮೂಲ ಆಕರಗಳು ತಮ್ಮ ಆಂತರಿಕ ಪ್ರಮಾಣಗಳ ಮೂಲಕ ಬಾಹ್ಯವಾತಾವರಣವೊಂದರ ಗ್ರಹಿಕೆಗೆ ಅವಕಾಶ ಕಲ್ಪಿಸಿ ಕೊಡುವ ಸಂಸ್ಕೃತಿಯ ವಿನ್ಯಾಸಗಳು ಎಂಬ ಗ್ರಹಿಕೆ ವ್ಯಕ್ತವಾಗುತ್ತದೆ. ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ವ್ಯಕ್ತವಾಗುವ ಸಂಗತಿಗಳನ್ನು ಖಚಿತವಾಗಿ ಮತ್ತು ಸ್ವಲ್ಪ ವಿವರಣಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಈ ಅಧ್ಯಯನವು ವ್ಯಾಖ್ಯಾನ ನಿಷ್ಠ ಶೋಧದ ಮಾದರಿಯಾಗಿದ್ದು, ಶಾಸನಗಳು ಒದಗಿಸುವ ಮಾಹಿತಿಗಳನ್ನು ಬೇರೆ ಬೇರೆ ನಿಟ್ಟುಗಳಿಂದ ನೋಡಿ ಈ ವರೆಗಿನ ಶೋಧ ಹಾಗೂ ಆಶಯಕ್ಕೆ ವಿಭಿನ್ನವಾದ ಫಲಿತಾಂಶಗಳನ್ನು ನೀಡಬಹುದಾಗಿದೆ. ಶಾಸನಗಳ ಸಾಂಸ್ಕೃತಿಕ ಅಧ್ಯಯನವು ಅನ್ವೇಷಣೆ ಮತ್ತು ಪ್ರಕಟನೆಯನ್ನು ಮೀರಿದ್ದಾಗಿದೆ. ಶಾಸನಗಳಲ್ಲಿ ಹುದುಗಿರುವ ಸಂಗತಿಯನ್ನು ಅದುವರೆವಿಗೂ ನಡೆದಿರುವ ಅಧ್ಯಯನದ ಬೆಳಕಿನಲ್ಲಿ ಪೂರಕ ಆಕರಗಳೊಂದಿಗೆ ವಿಶ್ಲೇಷಿಸಿರುವುದು ಈ ಅಧ್ಯಯನದ ಮುಖ್ಯ ಭಿತ್ತಿಯಾಗಿದೆ.

ಇಂದು ಸಂಶೋಧನಾಧ್ಯಯನದಲ್ಲಿ ಸಣ್ಣ ಪ್ರದೇಶಗಳ ಅಧ್ಯಯನವೂ ಪ್ರಮುಖವಾಗಿದ್ದು, ಸ್ಥಳೀಯ ರಾಜಕೀಯ ಹಾಗೂ ಸಾಂಸ್ಕೃತಿಕ ವಿವರಗಳ ಮೂಲಕ ಜನತೆಯ ಇತಿಹಾಸವನ್ನು ರೂಪಿಸುವುದು ತುರ್ತಿನ ಕೆಲಸವಾಗಿದೆ. ಈ ನಿಟ್ಟಿನಲ್ಲಿ ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ತಮ್ಮ ಸಂಶೋಧನಾಧ್ಯಯನಕ್ಕೆ ಆರಿಸಿಕೊಂಡಿರುವ ಕೊಪ್ಪಳ ಜಿಲ್ಲೆಯ ಪರಿಸರವು ಪ್ರಾಚೀನ ಕಾಲದ ಸಾಂಸ್ಕೃತಿಕ ಕೇಂದ್ರವಾಗಿ ಪ್ರಮುಖ ಪಟ್ಟಣವಾಗಿ ಮೆರೆದು ಗತಕಾಲದ ಸತ್ವವನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡು ರಾಜಕೀಯ ಏಳೂ ಬೀಳುಗಳನ್ನು ಕಂಡ ಪ್ರದೇಶವಾಗಿದೆ.

ಕನ್ನಡ ನಾಡಿನ ರಾಜಕೀಯ ಸಾಂಸ್ಕೃತಿಕ, ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವಹಿಸಿದ್ದು ಕೊಪ್ಪಳ ಪ್ರದೇಶದ ಸಮಗ್ರ ಚಿತ್ರಣದ ಅಧ್ಯಯನವನ್ನು ಕುರಿತು ಸಂಶೋಧಕರು ಅಧ್ಯಯನ ನಡೆಸಿದ್ದಾರೆ. ಈ ನಿಟ್ಟಿನಲ್ಲಿ ಶ್ರೀ ಸಿದ್ದಲಿಂಗಪ್ಪ ಕೊಟ್ನೆಕಲ್ ಅವರ **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ** ಪುಸ್ತಕವು

ನನ್ನ ಮಾರ್ಗದರ್ಶನದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಪ್ರಬಂಧವಾಗಿದೆ. ಈ ನಿಬಂಧದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದೊರೆತ 290ಕ್ಕೂ ಅಧಿಕ ಶಾಸನಗಳನ್ನಾಧರಿಸಿ ಜಿಲ್ಲೆಯ ರಾಜಕೀಯ ಹಾಗೂ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಕ ಇತ್ಯಾದಿ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳನ್ನು ಪೂರಕ ಆಕರಗಳೊಂದಿಗೆ ಶೋಧಿಸುವ ವಿಶ್ಲೇಷಿಸುವ ಅಂಶಗಳತ್ತ ಹೆಚ್ಚಿನ ಆಸಕ್ತಿ ವಹಿಸಿದೆ. ಶಾಸನಗಳಲ್ಲಿ ಉಪೇಕ್ಷಿತವಾಗಿದ್ದ ಅನೇಕ ವಿಷಯಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪ್ರಾದೇಶಿಕ ಪರಿಸರದ ಅಧ್ಯಯನವನ್ನು ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಕವಾಗಿ ಶಾಸನಗಳು, ಪೂರಕ ಆಕರಗಳು ಹಾಗೂ ಕ್ಷೇತ್ರಪರಿವೀಕ್ಷಣೆಯ ಮೂಲಕ ಮಾಡಿರುವುದನ್ನು ಗುರುತಿಸಬಹುದಾಗಿದೆ.

ಜಿಲ್ಲೆಯಲ್ಲಿ ಆಗಿಹೋದ ಪ್ರಮುಖ ಅರಸುಮನೆತನ ಹಾಗೂ ಸ್ಥಳೀಯ ಅರಸರ ಇತಿಹಾಸದ ಜೊತೆಗೆ ರಾಜಕೀಯೇತರ ಅಂದರೆ ಸಾಂಸ್ಕೃತಿಕ ಸಂಗತಿಗಳನ್ನು ಶೋಧಿಸುವ, ವಿಶ್ಲೇಷಿಸುವ ಅಂಶಗಳನ್ನು ಕಾಣಬಹುದಾಗಿದೆ. ಶಾಸನಗಳಲ್ಲಿ ಮೂಡಿಬಂದಿರುವ ವೈವಿಧ್ಯಪೂರ್ಣ ಅಂಶಗಳನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿದ್ದಾರೆ. ಶಾಸನಗಳ ಮೂಲಕ ವಸಾಹತು ಪೂರ್ವದ ಅಧ್ಯಯನವನ್ನು ಮಾಡಿದ್ದಾರೆ.

ಶ್ರೀ ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರ ಈ ಸಂಶೋಧನಾ ಪುಸ್ತಕವು ಜಿಲ್ಲೆಯಲ್ಲಿ ದೊರೆತ ಮೌರ್ಯರ ಕಾಲದಿಂದ ಹಿಡಿದು ವಿಜಯನಗರೋತ್ತರ ಕಾಲದವರೆಗಿನ ಶಾಸನಗಳ ಮೂಲಕ ಆಯಾ ಕಾಲದ ಪರಿಸರ, ಸಂಸ್ಕೃತಿ, ಸಮಾಜದ ಸ್ಥಿತಿಗತಿಗಳು, ಸಾಹಿತ್ಯಕ ಹಾಗೂ ಛಂದಸ್ಸಿನ ಅಂಶಗಳ ಸ್ವರೂಪವನ್ನು ಗುರುತಿಸಲು ಸಹಾಯಕವಾಗಿದೆ. ಈ ಪುಸ್ತಕವು ಒಟ್ಟು ಹತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಪ್ರತೀ ಅಧ್ಯಾಯದಲ್ಲಿಯೂ ಶಾಸನಗಳನ್ನು ಆಯಾ ವಿಷಯಗಳಿಗೆ ಅನುಗುಣವಾಗಿ ಸೂಕ್ಷ್ಮವಾಗಿ ಅಧ್ಯಯನ ಮಾಡಿರುವುದು ಕಂಡು ಬರುತ್ತದೆ. ಮೊದಲನೆಯ ಅಧ್ಯಾಯವು ಈ ಸಂಶೋಧನಾ ನಿಬಂಧದ ಉದ್ದೇಶ, ಅಧ್ಯಯನ ಕ್ಷೇತ್ರ ಹಾಗೂ ಅದರ ಇತಿ–ಮಿತಿಗಳ ಕುರಿತ ವಿವರಣೆಗಳನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ಜಿಲ್ಲೆಯ ಶಾಸನಗಳ ಅಧ್ಯಯನದ ಇತಿಹಾಸ ಮತ್ತು ಶಾಸನಗಳ ಪ್ರಕಟಣೆಗೆ ಕಾರಣರಾದ ವಿದ್ವಾಂಸರ ಬಗೆಗೆ ಮಾಹಿತಿಯನ್ನು ಕೊಡಮಾಡಿದ್ದಾರೆ. ಜೊತೆಗೆ ಕೊಪ್ಪಳ ಜಿಲ್ಲೆಯಲ್ಲಿಯ ಸುಮಾರ 290 ಶಾಸನಗಳ ಸ್ವರೂಪ, ವೈಶಿಷ್ಟ್ಯವನ್ನು ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಅಲ್ಲದೆ ಶಾಸನಗಳನ್ನಾಧರಿಸಿ ಕೊಪ್ಪಳ ಪದದ ನಿಷ್ಪತ್ತಿಯ ಬಗೆಗೆ ಚರ್ಚೆಯನ್ನು ಮಾಡಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಮೌರ್ಯರಿಂದ ಹಿಡಿದು ವಿಜಯನಗರೋತ್ತರದವರೆಗಿನ ಅರಸರುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಶಾಸನಗಳನ್ನಾಧರಿಸಿ ಕೊಡಮಾಡಿದ್ದಾರೆ. ಸ್ಥಳೀಯ ಅರಸರುಗಳಾದ ಆನೆಗೊಂದಿ ಮತ್ತು ಕನಕಗಿರಿ ಪಾಳೆಯಗಾರರ ಆಳ್ವಿಕೆಯ ಬಗೆಗೆ ಶಾಸನಗಳ ಹಿನ್ನೆಲೆಯಲ್ಲಿ ವಿವೇಚಿಸಿರುವುದು ಗಮನಾರ್ಹವಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶಾಸನಗಳ ಹಿನ್ನೆಲೆಯಲ್ಲಿ ಆಡಳಿತ ವ್ಯವಸ್ಥೆಯನ್ನು ಕುರಿತು ಚರ್ಚಿಸಿದ್ದಾರೆ. ಜಿಲ್ಲೆಯ ಪ್ರದೇಶದಲ್ಲಿ ನೆಲೆನಿಂತು ಆಡಳಿತ ನಡೆಸಿದ ಚಕ್ರವರ್ತಿಗಳು, ರಾಣಿಯರ ಜೊತೆಗೆ ಮಹಾಮಂಡಲೇಶ್ವರರು, ಮಹಾಸಾಮಂತರು, ಮಹಾಪ್ರಧಾನರು, ಮಾಂಡಳಿಕರು, ದಂಡನಾಯಕರು, ಇತರೆ ಅಧಿಕಾರಿಗಳಾದ ಪೆರ್ಗಡೆ, ಸ್ಥಾನಾಚಾರ್ಯರ ಅಧಿಕಾರದ ಸ್ವರೂಪ, ಕಾರ್ಯಪದ್ಧತಿ ಮುಂತಾದ ಅಂಶಗಳನ್ನು ಶಾಸನಗಳು ಮತ್ತು ಪೂರಕ ಆಕರಗಳೊಂದಿಗೆ ಚರ್ಚಿಸಿದ್ದಾರೆ. ಗ್ರಾಮಗಳ ಆಡಳಿತ ವ್ಯವಸ್ಥೆಯ ಬಗೆಗೆ ಹಾಗೂ ಗ್ರಾಮಾಡಳಿತದ ಚುಕ್ಕಾಣಿ ಹಿಡಿದಿದ್ದ ನಾಡಗಾವುಂಡರು ಮತ್ತು ಸೇನೆಭೋವರ, ತಳವಾರ ಮುಂತಾದ ಕೆಳವರ್ಗದ ಅಧಿಕಾರಿಗಳ ಕಾರ್ಯಸ್ವರೂಪದ ಬಗೆಗೆ ಪ್ರಸ್ತಾಪಿಸಿದ್ದಾರೆ. ಪ್ರಾದೇಶಿಕ ಆಡಳಿತ ವ್ಯವಸ್ಥೆಯ ಲಕ್ಷಣಗಳು ಈ ಅಧ್ಯಾಯದಲ್ಲಿ ಓದುಗನಿಗೆ ಲಭ್ಯವಾಗಿವೆ.

ಐದನೆಯ ಅಧ್ಯಾಯವು ಜಿಲ್ಲೆಯನ್ನಾಳಿದ ಅರಸುಮನೆತನಗಳು ತಮ್ಮ ಆಳ್ವಿಕೆಯ ಕಾಲದಲ್ಲಿ ಜಾರಿ ಮಾಡಿದ ಮತ್ತು ಅನುಸರಿಸುತ್ತಿದ್ದ ಆರ್ಥಿಕ ವ್ಯವಸ್ಥೆಯನ್ನು ಕುರಿತು ಶಾಸನಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿದ್ದಾರೆ. ಪ್ರಾಚೀನ ಆರ್ಥಿಕ ವ್ಯವಸ್ಥೆಯಲ್ಲಿ ಕಂಡು ಬರುತ್ತಿದ್ದ ಭೂಮಿಯ ಪ್ರಕಾರಗಳು, ಭೂಮಿಯನ್ನು ದಾನಬಿಟ್ಟ ಪ್ರಕಾರಗಳು, ವಾಣಿಜ್ಯ ಪದ್ಧತಿ, ಸುಂಕ ಪದ್ಧತಿ, ಅಳತೆಯ ಮಾನದಂಡಗಳು ಇತ್ಯಾದಿಗಳ ಬಗೆಗೆ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ

ವ್ಯಾಪಾರೋದ್ಯಮಗಳನ್ನು ಬೆಳೆಸುವಲ್ಲಿ ಅವರು ಅನುಸರಿಸುತ್ತಿದ್ದ ಮಾರ್ಗಗಳನ್ನು ಪ್ರಸ್ತಾಪಿಸಿದ್ದಾರೆ. ವ್ಯವಸಾಯ ಮತ್ತು ಗುಡಿಕೈಗಾರಿಕೆಗಳ ಬಗೆಗೂ ಪ್ರಸ್ತಾಪವಿದೆ.

ಆರನೆಯ ಅಧ್ಯಾಯದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದ ಧರ್ಮಗಳ ಇತಿಹಾಸ, ಪ್ರಭುತ್ವವು ಆ ಧರ್ಮಗಳನ್ನು ಪೋಷಿಸಿದ ವಿವರ, ಆ ಧರ್ಮಗಳ ಸಾಂಸ್ಕೃತಿಕ ಕೊಡಿಗೆಯನ್ನು ಶಾಸನಗಳ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಅದರಲ್ಲಿಯು ಕೊಪ್ಪಳವು ಪ್ರಾಚೀನ ಕಾಲದಿಂದಲೂ ಜೈನಧರ್ಮದ ನೆಲೆ ವೀಡಾಗಿದ್ದುದರಿಂದ ಜಿಲ್ಲೆಯಲ್ಲಿಯ ಜೈನಧರ್ಮದ ಸ್ಥಿತಿಗತಿಗಳ ಬಗೆಗೆ, ಜಿನಮುನಿಗಳ ಬಗೆಗೆ, ಗಣಗಚ್ಛಗಳ ಬಗೆಗೆ ಶಾಸನಗಳ ಹಿನ್ನೆಲೆಯಲ್ಲಿ ವಿಸ್ತೃತವಾದ ಅಧ್ಯಯನವನ್ನು ಮಾಡಿದ್ದಾರೆ. ಅದೇರೀತಿ ಶೈವ, ವೀರಶೈವ, ವೈಷ್ಣವಧರ್ಮ ಹಾಗೂ ಇಸ್ಲಾಂ ಧರ್ಮಗಳು ಜಿಲ್ಲೆಯಲ್ಲಿ ಪ್ರಭಾವ ಬೀರಿದ ಸಂಗತಿಗಳನ್ನು ಪೂರಕ ಆಕರಗಳೊಂದಿಗೆ ಚರ್ಚಿಸಿದ್ದಾರೆ.

ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದ ಏಳನೆಯ ಅಧ್ಯಾಯದಲ್ಲಿ ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯ ಸ್ವರೂಪದ ಬಗೆಗೆ ಮಾಹಿತಿ ನೀಡಿದ್ದಾರೆ. ಅಂದಿನ ಕಾಲದ ಪ್ರಾಥಮಿಕ ಶಿಕ್ಷಣ ಪದ್ಧತಿಯ ಬಗೆಗೆ, ಅಗ್ರಹಾರಗಳು, ಬ್ರಹ್ಮಪುರಿಗಳು, ಮಠಗಳು ಹಾಗೂ ಉನ್ನತ ಶಿಕ್ಷಣದ ಪ್ರತೀಕವಾಗಿದ್ದ ಘಟಿಕಾಲಯಗಳ ಬಗೆಗೆ ಶಾಸನಗಳ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಜಿಲ್ಲೆಯಲ್ಲಿ ಆಗಿ ಹೋಗಿದ್ದ ಶಾಸನೋಕ್ತ ಅಗ್ರಹಾರ, ಬ್ರಹ್ಮಪುರಿ, ಘಟಿಕಾಲಯಗಳ ಬಗೆಗೆ ಪರಿಚಯಾತ್ಮಕ ವಿವರವನ್ನು ನೀಡಿದ್ದಾರೆ. ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಪೈಸಾಸಿಗಳ ಬಗೆಗೆ ವಿವರಣೆ ಇರುವುದು ಗಮನಾರ್ಹವಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕವಾಗಿ ಬೆಳೆದು ಬಂದಿರುವ ಶಿಲ್ಪಕಲಾ ಪ್ರತೀಕವಾದ ದೇವಾಲಯಗಳ ಕುರಿತ ಅಧ್ಯಯನ ನಡೆಸಿದ್ದಾರೆ. ದೇವಾಲಯಗಳು ಸಮಾಜದಲ್ಲಿ ಅಂದಿನ ಕಾಲಕ್ಕೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಸ್ಥೆಯಾಗಿ ಯಾವ ರೀತಿ ಕಾರ್ಯ ನಿರ್ವಹಿಸುತ್ತಿದ್ದವು ಎಂಬುದರ ಬಗೆಗೆ ಚರ್ಚಿಸಿದ್ದಾರೆ. ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ಅರಸರಿಂದ ಹಿಡಿದು ಜನಸಾಮಾನ್ಯರ ಮೂಲಕ ಯಾವ ರೀತಿ ನಡೆಯುತ್ತಿದ್ದವು ಎಂಬುದನ್ನು ಶಾಸನಗಳನ್ನಾಧರಿಸಿ ವಿವರಿಸಿದ್ದಾರೆ. ದೇವಾಲಯಗಳ ನಿರ್ಮಾಣದ ಹಿಂದೆ ಪ್ರೇರಣೆ ಏನು ಎಂಬುದನ್ನು ವಿಶ್ಲೇಷಿಸಿದ್ದಾರೆ.

ಸಾಮಾಜಿಕ ವ್ಯವಸ್ಥೆಯನ್ನು ಕುರಿತಾದ ಒಂಭತ್ತನೆಯ ಅಧ್ಯಾಯದಲ್ಲಿ ಒಡಮೂಡಿರುವ ಜಾತಿ ಪದ್ಧತಿ, ಸಂಪ್ರದಾಯ ಮತ್ತು ನಂಬಿಕೆಗಳು, ಸ್ತ್ರೀಯರ ಸ್ಥಾನಮಾನ, ವೀರಜೀವನ ಹಾಗೂ ಲೋಕೋಪಯೋಗಿ ಚಟುವಟಿಕೆಗಳ ಕುರಿತ ಚರ್ಚೆಯನ್ನು ಮಾಡಿದ್ದಾರೆ. ಈ ಅಧ್ಯಾಯದಲ್ಲಿ ಸಾಮಾನ್ಯ ಜನತೆಯ ಜನಜೀವನದ ಬಗೆಗಿನ ಮಾಹಿತಿಯು ಗಮನಾರ್ಹವಾಗಿದೆ. ಶಾಸನೋಕ್ತ ಜಾತಿ ಪದ್ಧತಿಗಳ ಪಟ್ಟಿಯನ್ನು ಕೊಡಮಾಡಿದ್ದಾರೆ.

ಹತ್ತನೆಯ ಅಧ್ಯಾಯದಲ್ಲಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಮೂಲ ಆಕರಗಳಾದ ಶಾಸನಗಳನ್ನು ಸಾಹಿತ್ಯಕ ನೆಲೆಗಟ್ಟಿನಿಂದ ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಶಾಸನಗಳ ಪರಸ್ಪರ ಮತ್ತು ಪೂರಕ ಸಂಬಂಧವನ್ನು ಗ್ರಹಿಸುವ ಪ್ರಯತ್ನವನ್ನು ಮಾಡಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಶಾಸನಗಳ ಪರಸ್ಪರ ಮತ್ತು ಪೂರಕ ಸಂಬಂಧವನ್ನು ಗ್ರಹಿಸುವ ಪ್ರಯತ್ನವನ್ನು ಮಾಡಿದ್ದಾರೆ. ಕನ್ನಡ ಕವಿಗಳಲ್ಲಿ ಕೆಲವರ ಬಗೆಗೆ ಇರುವ ಅಸ್ಪಷ್ಟತೆಗಳನ್ನು ಹೋಗಲಾಡಿಸುವಲ್ಲಿ ಶಾಸನಗಳು ಯಾವರೀತಿ ನೆರವನ್ನು ನೀಡಿವೆ ಎಂಬುದನ್ನು, ಕನಡ ಕಾವ್ಯಗಳಲ್ಲಿ ಉಲ್ಲೇಖಿತನಾಗಿರುವ ಬಿಜ್ಜಳನನ್ನು ಕೊಂದ ಮೊಲ್ಲೆ ಬೊಮ್ಮಯ್ಯನನ್ನು ಕುರಿತ ಶಾಸನಗಳ ಮೂಲಕ ಗುರುತಿಸಿದ್ದಾರೆ. ಶಾಸನಗಳಲ್ಲಿ ಕಾವ್ಯಾತ್ಮಕ ಮೌಲ್ಯವಿರುವುದನ್ನು ಗುರುತಿಸಿದ್ದಾರೆ. ಜಿಲ್ಲೆಯ ಶಾಸನಗಳ ಭಾಷಿಕ ಸ್ವರೂಪವನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಶಾಸನಗಳ ಹಿನ್ನೆಲೆಯಲ್ಲಿ ಕನ್ನಡ ಛಂದಸ್ಸಿನ ಸ್ವರೂಪವನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಕನ್ನಡದ ಮೊತ್ತಮೊದಲ ಶಾಸನೋಕ್ತ ಅಂಶಷಟ್ಪದಿಯ ಏಕೈಕ ಕಾವ್ಯ ಅಮೃತ ಮಥನ ಪುರಾಣ ಕಾವ್ಯ ಜಿಲ್ಲೆಯಲ್ಲಿ ಲಭ್ಯವಿರುವುದರ ಬಗೆಗೆ ಬೆಳಕು ಚೆಲ್ಲಿದ್ದಾರೆ. ವಿಭಿನ್ನ ಕಾಲದ ಚಂಪೂಗದ್ಯದ ಸ್ವರೂಪವನ್ನು ಶಾಸನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಜಿಲ್ಲೆಯ ಸ್ಥಳನಾಮಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಜಿಲ್ಲೆಯ ನಕಾಶೆ, ಚಿತ್ರಗಳು ಹಾಗೂ ಆಕರ ಸೂಚಿಗಳನ್ನೊಳಗೊಂಡ ಅನುಬಂಧಗಳು ಮುಂದಿನ ಸಂಶೋಧನೆಗೆ ಸಹಾಯಕವಾಗಿವೆ.

ಶಾಸನಗಳು ಯಾವ ವಿಷಯಗಳನ್ನು ಮುಖ್ಯವಾಗಿ ಹೇಳಲು ಬಯಸುತ್ತವೆಯೋ ಆ ವಿಷಯಗಳನ್ನು ಜಿಲ್ಲೆಯ ಶಾಸನಗಳ ಮೂಲಕ ಕ್ರೂಢೀಕರಿಸಿ ಆಯಾಕಾಲದ ಜನಜೀವನದ ವಿವಿಧ ಮುಖಗಳ ಪರಿಚಯ ಹಾಗೂ

ಅವರ ರೂಢಿ ಪರಂಪರೆಗಳು, ನಂಬಿಕೆಮೌಲ್ಯಗಳು, ಆಚಾರ ವಿಚಾರಗಳ ಸ್ಪಷ್ಟ ಚಿತ್ರಣವನ್ನು ನಿರೂಪಿಸುವ ಪ್ರಯತ್ನವನ್ನು ಅಧ್ಯಯನಕಾರರು ಮಾಡಿದ್ದರೂ ಇನ್ನೂ ಹೆಚ್ಚಿನ ಅಧ್ಯಯನವನ್ನು ನಡೆಸಿದ್ದರೆ ಚೆನ್ನಾಗಿರುತ್ತಿತ್ತು. ಕೆಲವು ಅರೆಕೊರೆಗಳು ಉಳಿದಿವೆ. ಶಾಸನಗಳ ಸಾಂಸ್ಕೃತಿಕ ನೆಲೆಗಟ್ಟಿನ ನೆಲೆಯಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳ ಸಾಲಿಗೆ ಈ ಕೃತಿಯು ಉತ್ತಮ ಸೇರ್ಪಡೆಯಾಗಿದೆ. ವೈಶಿಷ್ಟತೆಗಳಿಂದ ಕೂಡಿರುವ ಜಿಲ್ಲೆಯ ಶಾಸನಗಳನ್ನು ಕಲೆಹಾಕಿ ಅವುಗಳ ಅಧ್ಯಯನದ ಮೂಲಕ ಕನ್ನಡ ನಾಡಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಕೊಪ್ಪಳ ಜಿಲ್ಲೆಯು ಪಡೆದು ಕೊಂಡಿರುವ ಸ್ಥಾನವನ್ನು ಸ್ವಲ್ಪಮಟ್ಟಿಗೆ ತಿಳಿಯಲು ಈ ಪುಸ್ತಕವು ಸಹಾಯಕವಾಗಿದೆ.

**ದಿನಾಂಕ : 28–02–2010** **–ಪ್ರೊ. ಸಿ. ನಾಗಭೂಷಣ**

ನಿರ್ದೇಶಕರು,

ಬೆಂಗಳೂರು ವಿಶ್ವವಿದ್ಯಾಲಯ

ಸ್ನಾತಕೋತ್ತರ ಕೇಂದ್ರ, ಕೋಲಾರ

**

# ನನ್ನ ಮಾತು

## (ಪ್ರಥಮ ಮುದ್ರಣ)

ಈಚೇಗೆ ಚರಿತ್ರೆಯನ್ನು ನೋಡುವ ದೃಷ್ಟಿಯಲ್ಲಿ ಗಮನಾರ್ಹವಾದ ಬದಲಾವಣೆಗಳಾಗುತ್ತಿವೆ. ಶಾಸನಗಳನ್ನೇ ಆಧಾರವಾಗಿಟ್ಟುಕೊಂಡು ವಿಭಿನ್ನ ದೃಷ್ಟಿಕೋನದಿಂದಲೂ ಅಧ್ಯಯನ ಮಾಡಿದ್ದಾರೆ. ಇದರಿಂದಾಗಿ ಇತಿಹಾಸ ಜನಾನುರಾಗವನ್ನು ಪಡೆದು ಸಾಮಾನ್ಯ ಜನರಲ್ಲಿ ಅದರ ಬಗ್ಗೆ ಅರಿವು ಮೂಡತೊಡಗಿತು. ನಮಗೆ ಪರಿಚಯವೇ ಇರದಿದ್ದ ನಮ್ಮ ನಾಡಿನ ಪ್ರಾಚೀನ ಜೀವನ ಶೈಲಿಯ ಅಧ್ಯಯನಕ್ಕೆ ಅವಶ್ಯವೆನಿಸುವ ಶಾಸನ ಸಾಮಗ್ರಿಗಳು ಅಮೂಲ್ಯ ಭಂಡಾರವನ್ನು ತೆರೆದಂತಾಯಿತು. ಈ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳು ಮಹತ್ವದವುಗಳಾಗಿವೆ. ಹಲವು ಧರ್ಮಗಳ ನೆಲೆವೀಡು, ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿದ ಈ ಪ್ರದೇಶದ ಶಾಸನಗಳು ವೈಶಿಷ್ಟ್ಯತೆಯಿಂದ ಕೂಡಿವೆ. ಅಂತಹ ವೈಶಿಷ್ಟ್ಯತೆಯನ್ನು ಗುರುತಿಸುವ ಪ್ರಯತ್ನಕ್ಕಾಗಿ ನಾನು ಈ ವಿಷಯವನ್ನು ಕುರಿತು ಪಿಎಚ್.ಡಿ. ಅಧ್ಯಯನ ಕೈಗೊಂಡೆ.

ಪಿಎಚ್.ಡಿ. ಪದವಿ ಪಡೆದ ಮಾತ್ರಕ್ಕೆ ಸಂಶೋಧಕನಾಗಲು ಸಾಧ್ಯವಿಲ್ಲ. ಅದು ಕೃತಿಯ ರೂಪದಲ್ಲಿ ಹೊರಬಂದಾಗ ಅಥವಾ ಪಿಎಚ್.ಡಿ.ಯ ಪದವಿಯ ನಂತರ ಮಾಡುವ ಸಂಶೋಧನೆಯೇ ನಿಜವಾದ ಸಂಶೋಧನೆ ಎಂಬ ಮಾತು ಎಲ್ಲಾ ಕಡೆಯಿಂದಲೂ ಕೇಳಿ ಬರುತ್ತಿದೆ. ಈ ನಿಟ್ಟಿನಲ್ಲಿ ಆ ಪ್ರಯತ್ನವೇ ನನ್ನ ಈ **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ** ಕೃತಿಯಾಗಿದೆ. ಕರ್ನಾಟಕದ ಇತಿಹಾಸದ ಭವ್ಯ ಪರಂಪರೆಯಲ್ಲಿ ಕೊಪ್ಪಳ ಜಿಲ್ಲೆ ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ಭಿನ್ನ ಮತದ, ಭಾಷೆಯ ಅರಸು ಮನೆತನಗಳನ್ನು ಕಂಡ ಈ ಜಿಲ್ಲೆಗೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಇದೆ. ಅನೇಕ ರಾಜರ ಆಳ್ವಿಕೆಗೆ ಒಳಪಟ್ಟು, ಹಲವು ಧರ್ಮಗಳಿಗೆ ಪೋಷಕ ತಾಣವಾಗಿ ಚರಿತ್ರೆಯುದ್ದಕ್ಕೂ ಹಲವು ಏರು-ಪೇರುಗಳನ್ನು ಕಂಡ ಈ ಪ್ರದೇಶವು ಅಧ್ಯಯನಕ್ಕೆ ಆಗರವಾಗಿದೆ. ಆದುದರಿಂದ ಈ ಪ್ರದೇಶದ ಶಾಸನಗಳಲ್ಲಿ ಅಡಗಿದ ಅಂಶಗಳನ್ನು ಹೆಕ್ಕಿ ತೆಗೆಯಬೇಕೆಂಬ ಹಂಬಲದಿಂದ ಈ ವಿಷಯವನ್ನು ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ.

ಗುಲಬರ್ಗಾ ವಿಶ್ವವಿದ್ಯಾಲಯದಿಂದ 2007ರಲ್ಲಿ ಪಿಎಚ್.ಡಿ. ಪದವಿ ಪಡೆದ ಈ ಮಹಾಪ್ರಬಂಧಕ್ಕೆ ಮಸ್ಕಿಯ ಬಂಡಾರ ಪ್ರಕಾಶನದವರು 2008ನೇ ಸಾಲಿನ ಅತ್ಯುತ್ತಮ ಮಹಾಪ್ರಬಂಧ ಪ್ರಶಸ್ತಿಯನ್ನು ನೀಡಿದ್ದಾರೆ. ಹಾಗೆಯೇ ಮಹಾಪ್ರಬಂಧ ಕೃತಿ ರೂಪದಲ್ಲಿ ಪ್ರಕಟವಾಗಲಿಕ್ಕೆ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸಹಾಯಧನ ನೀಡಿದ್ದಾರೆ. ಈ ಕೃತಿಯ ಪ್ರಕಟಣೆಗೆ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಮಾಡಿದ ಎಲ್ಲರಿಗೂ ಕೃತಜ್ಞತೆಗಳು.

**–ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್**

**

## ನೆನೆಯುವುದೆನ್ನ ಮನಂ....(ಪ್ರಥಮ ಮುದ್ರಣ)

* ಸಂಶೋಧನೆಯ ಬಗ್ಗೆ ಆಸಕ್ತಿಮೂಡಿಸಿ, ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ನೀಡಿ ಮುನ್ನುಡಿ ಬರೆದು ಪ್ರೊತ್ಸಾಹಿಸಿ ಹಾಗೂ ಈ ಪುಸ್ತಕಕ್ಕೆ ಮುನ್ನುಡಿ ಬರೆದ ವಿದ್ಯಾಗುರುಗಳಾದ ಪ್ರೊ. ಸಿ. ನಾಗಭೂಷಣ ಅವರ ವಿಶಾಲ ಹೃದಯವನ್ನು.
* ಅಧ್ಯಯನದ ಬಗ್ಗೆ ಸದಾ ವಿಚಾರಿಸುತ್ತಾ ಪ್ರೋತ್ಸಾಹಿಸಿದ ದಿ॥ಪ್ರೊ.ಮೃತ್ಯುಂಜಯ ಹೊರಕೇರಿ, ಅಧ್ಯಯನಕ್ಕೆ ಸಲಹೆ ನೀಡಿದ ಪ್ರೊ.ಕೆ.ಶಾರದಾ, ಅಧ್ಯಯನದ ಸಂದರ್ಭದಲ್ಲಿ ಪ್ರೋತ್ಸಾಹ ನೀಡಿದ ಡಾ.ಎಚ್.ಟಿ.ಪೋತೆ, ಪ್ರೊ.ಡಿ.ಬಿ.ನಾಯಕ್, ಡಾ.ಬಸವರಾಜ ಪೋಲಿಸ ಪಾಟೀಲ, ಡಾ.ಎಸ್.ಎಂ.ಹಿರೇಮಠ, ಪ್ರೊ.ವೀರಣ್ಣ ದಂಡೆ, ಶ್ರೀ ಜಿ.ಎಸ್.ಬಿರಾದಾರ ಇವರೆಲ್ಲರ ಪ್ರೋತ್ಸಾಹವನ್ನು.
* ಶ್ರೀ ಗವಿಸಿದ್ಧೇಶ್ವರ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸೋಲ್ ಟ್ರಸ್ಟಿಗಳಾದ ಪರಮಪೂಜ್ಯ ಶ್ರೀಗಳಾದ ಶ್ರೀಗವಿಸಿದ್ಧೇಶ್ವರ ಮಹಾಸ್ವಾಮಿಗಳು, ಅಧ್ಯಕ್ಷರಾದ ಶ್ರೀ ಟಿ.ಜಿ.ಹಿರೇಮಠ, ಕಾರ್ಯದರ್ಶಿಗಳಾದ ಶ್ರೀ ಎಸ್.ಮಲ್ಲಿಕಾರ್ಜುನ, ಸದಸ್ಯರಾದ ಶ್ರೀ ಎಸ್.ಆರ್.ನವಲಿ ಹಿರೇಮಠ, ಶ್ರೀ ಗವಿಸಿದ್ಧಪ್ಪ ಆರೇರ, ಶ್ರೀ ಸಂಜಯ ವ್ಹಿ.ಕೊತಬಾಳ ಇವರ ಸಹಕಾರವನ್ನು.
* ನನ್ನ ಏಳ್ಗೆಯನ್ನೇ ತಮ್ಮ ಜೀವದುಸಿರನ್ನಾಗಿಸಿಕೊಂಡಿರುವ ಅಪ್ಪ ಇಸಾಕಪ್ಪ, ಅಮ್ಮ ಯಲ್ಲಮ್ಮ, ಚಿಕ್ಕಪ್ಪ ಕೊಟ್ನೆಕಲ್ ವೆಂಕೋಬ, ಚಿಕ್ಕಮ್ಮ ಜ್ಯೋತೆಮ್ಮ, ಅಕ್ಕ ರೇಣುಕಮ್ಮ, ಭಾವ ಜ್ಞಾನಮಿತ್ರ ಸಿರವಾರ ಇವರ ವಾತ್ಸಲ್ಯವನ್ನು.
* ನನ್ನ ಬದುಕಿನ ತಿರುವಿಗೆ ಕಾರಣರಾದ ಶ್ರೀದೇವೇಂದ್ರಪ್ಪ ಹಿರೇಮನಿ, ದಿ॥ ಶ್ರೀಮತಿ ಗಂಗಮ್ಮ ಹಿರೇಮನಿ, ಶ್ರೀ ಜಯರಾಜ ವಕೀಲರು, ಶ್ರೀಮತಿ ವೀಣಾ ಜಯರಾಜ, ಶ್ರೀ ಮಧುಕುಮಾರ ಕೊಟ್ನೆಕಲ್, ಶ್ರೀಮತಿ ಗಂಗಮ್ಮ ಮಧುಕುಮಾರ ಇವರ ಮಮಕಾರವನ್ನು.

* ಬದುಕನ್ನು ಹಂಚಿಕೊಂಡು ಬಾಳುತ್ತಿರುವ ಮಂಜುಳಾ ಎಸ್. ಕೊಟ್ನೆಕಲ್, ಬದುಕಿನ ಕುಡಿಗಳಾದ ಮೇಘನಾ ಎಸ್. ಕೊಟ್ನೆಕಲ್ ಮತ್ತು ಶಶಾಂಕ ಎಸ್. ಕೊಟ್ನೆಕಲ್ ಇವರ ತಾಳ್ಮೆಯನ್ನು.
* ಬೆನ್ನುಡಿ ಬರೆದ ಪ್ರೊ.ಅಲ್ಲಮಪ್ರಭು ಬೆಟ್ಟದೂರು, ಹಿರಿಯ ವಿದ್ವಾಂಸರಾದ ಶ್ರೀ ಎಚ್.ಎಸ್.ಪಾಟೀಲ, ಡಾ.ಚನ್ನಬಸವಯ್ಯ ಹಿರೇಮಠ, ಶ್ರೀ ಬಿ.ಸಿ.ಪಾಟೀಲ, ಶ್ರೀ ವಿಠ್ಠಪ್ಪ ಗೋರಂಟ್ಲಿ, ಶ್ರೀ ಸಿ. ಬಿ.ಜಡಿಯವರ್, ಡಾ.ವಿ.ಬಿ.ರಡ್ಡೇರ್ ಇವರ ಸೂಕ್ತ ಸಲಹೆಯನ್ನು.
* ಶ್ರೀ ಬಸವರಾಜ ಪೂಜಾರ, ಡಾ.ಪಾರ್ವತಿ ಪೂಜಾರ, ಶ್ರೀ ಎಂ. ಎಸ್. ಬಾಚಲಾಪೂರ, ಶ್ರೀ ಬಿ. ಎಸ್. ಹಡಗಲಿ, ಶ್ರೀ ಎಸ್. ಬಿ. ಹಿರೇಮಠ, ಶ್ರೀ ಬಿ. ನಾಗರಾಜ ಶೆಟ್ಟಿ, ಶ್ರೀ ಎಸ್. ಎಲ್. ಮಾಲಿಪಾಟೀಲ, ಎ.ಆರ್. ಲೋಕಾಪೂರ, ಶ್ರೀ ಎಂ. ಎಂ. ಕಂಬಾಳಿಮಠ, ಶ್ರೀ ಸುರೇಶ ಸಜ್ಜನ, ಡಾ. ದಯಾನಂದ ಸಾಳುಂಕೆ ಹಾಗೂ ಹಿರಿಯರಾದ ಡಾ॥ ಸಂಗಮೇಶ ಕಲಹಾಳ, ಡಾ॥ ಎ.ಎಂ. ಪಠಾಣ, ಡಾ. ರಾಮಚಂದ್ರಪ್ಪ ಕೊಟ್ನೆಕಲ್, ಶ್ರೀ ಗವಿಸಿದ್ಧಪ್ಪ ಕೊಪ್ಪಳ, ಶ್ರೀ ಸಿದ್ರಾಮಗೌಡ ಇವರ ಪ್ರೋತ್ಸಾಹ, ಸಹಕಾರವನ್ನು.
* ಡಾ. ಗವಿಸಿದ್ಧಪ್ಪ ಪಾಟೀಲ, ಡಾ. ದಸ್ತಗೀರಸಾಬ ದಿನ್ನಿ, ವಾಗೀಶ ವಿ.ಕೆ., ಶ್ರೀ ಮುನಿಯಪ್ಪ ನಾಗೋಲಿ, ಶ್ರೀ ಜಿ.ಪವನಕುಮಾರ, ಡಾ.ಭಾರತಿ, ಧರ್ಮಪ್ಪ ಸಿದ್ರಾಂಪೂರ, ಡಾ.ಎನ್.ಧರ್ಮಣ್ಣ, ಈರಣ್ಣ ನಾಯಕ, ಹನುಮಂತರಾಯ ಕಲ್ಲೂರು, ಪಂಪಾಪತಿ ನಾಯಕ, ಮಹಾದೇವಪ್ಪ ನಾಗರಹಾಳ, ಡಾ.ಮಲ್ಲಪ್ಪ ಸಿದ್ರಾಂಪೂರ, ಡಾ.ಮಲ್ಲೇಶಪ್ಪ ಸಿದ್ರಾಂಪೂರ, ಹುಲಗಪ್ಪ ಬುದ್ದಿನ್ನಿ, ಮಾಧವಿ, ಚನ್ನಪ್ಪ ಗುಡದಿನ್ನಿಕರ್, ವಿರುಪನಗೌಡ, ರಂಗಪ್ಪ, ಈರಣ್ಣ ಮರ್ಲಟ್ಟಿ, ಶ್ರೀಕಾಂತ, ಮುನ್ನ, ಪ್ರಸನ್ನ ಕುಮಾರ, ಆರ್.ನಾಗರಾಜ್, ವೀರಭದ್ರಮ್ಮ, ವಿದ್ಯಾರ್ಥಿಗಳಾದ ಪಿ.ರವಿಕಿರಣ್, ಗವಿಸಿದ್ಧಪ್ಪ ಪಲ್ಲೇದ್, ಹನುಮಂತ ಗಾಳಿ, ದಾದಪೀರ್, ಶ್ರೀನಿವಾಸ, ಅಲ್ಲಾಭಕ್ಷಿ ಮುಲ್ಲಾರ್, ಪೃಥ್ವಿ, ಪ್ರಭುಸ್ವಾಮಿ, ನಾಗರಾಜ ಬಿ.ಕೆ. ಮರ್ದಾನಲಿ, ಮಹಾಲಕ್ಷ್ಮಿ ಕಂದಾರಿ, ಶಾರದಾ ಕೋರ್ಗಲ್, ಪಲ್ಲವಿ ಚಿತ್ರಗಾರ, ತಸ್ಲಿಮಾಬಾನು, ಜಯಶ್ರೀ ಬಿ.ಕೆ, ಪಾರ್ವತಿ ಹೊಸಮನಿ, ಆಶಾ ಕವಲೂರು, ದೀಪಾ

ಕವಲೂರು, ಪವಿತ್ರ ಹೊಸಮನಿ, ದಿವ್ಯಭಾರತಿ ಬೆಲ್ಲದ ಅಳಿಯ ಶಿವಕುಮಾರ ನೀರಮಾನ್ವಿ ಮಗಳ ಸ್ವರೂಪಳಾದ ಅಮರಮ್ಮ ಕೊಟ್ನೆಕಲ್ ಇವರ ಸಹಕಾರವನ್ನು.

* ರಾಮಚಂದ್ರಪ್ಪ ಮಾನ್ವಿ, ಬಸಪ್ಪ ನಾಗೋಲಿ, ರಮೇಶ ಗಬ್ಬೂರು, ಎಚ್.ಶರಮುದ್ದೀನ್ ಪೊತ್ನಾಳ್, ಪ್ರಕಾಶ ಕಂದಕೂರ, ಎಸ್.ಸಿ.ಪಾಟೀಲ, ಐ.ಎನ್.ಪಾಟೀಲ, ಶಿವಕುಮಾರ ಕುದುರಿಮೋತಿ, ಶ್ರೀಮತಿ ಪ್ರತಿಭಾ ಸೋಮಲಾಪುರ, ಪ್ರಕಾಶ ಬಳ್ಳಾರಿ, ಡಾ.ಹಂದ್ರಾಳ ಮಾರ್ಕಂಡೇಯ, ಶರಣಬಸಪ್ಪ ಬಿಳಿಎಲೆ, ಶರಣಪ್ಪ ಉಮಚಗಿ, ಉಮೇಶ ಕಾತರಕಿ, ಶಿವಬಸಪ್ಪ ಮಸ್ಕಿ, ಮಂಜುನಾಥ ಗೊಂಡಬಾಳ, ಹನುಮಂತಪ್ಪ ಅಂಡಿಗಿ, ಅರುಣ ಪಾಟೀಲ, ಗೋಣಿಬಸಪ್ಪ, ಗವಿಸಿದ್ಧನಗೌಡ ಪಾಟೀಲ, ಮಹೇಶ ಬಳ್ಳಾರಿ ಇವರ ಪ್ರೀತಿಯನ್ನು.

**–ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್**

**

# ಪರಿವಿಡಿ



**

**ಅಧ್ಯಾಯ-1**

# ಪ್ರವೇಶಿಕೆ

ಶಾಸನಗಳು ಒಂದು ನಾಡಿನ ಚರಿತ್ರೆಯನ್ನು ಕಟ್ಟಿಕೊಡಬಲ್ಲ ಅಧಿಕೃತವಾದ ದಾಖಲೆಗಳಾಗಿವೆ. ನಾಡಿನ ಜನಜೀವನವನ್ನು ಅರಿತುಕೊಳ್ಳಬೇಕಾದರೆ ಶಾಸನ ಗಳಿಗಿಂತ ಉತ್ತಮವಾದ ಆಕರಗಳು ಬೇರೆ ಯಾವು ಸಿಗಲಾರವು. ಪ್ರಾಚೀನ ಕಾಲದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಅಂಶಗಳನ್ನು ಅರ್ಥಮಾಡಿಕೊಳ್ಳ ಬೇಕಾದರೆ ನಾವು ಶಾಸನಗಳಿಗೆ ಮೊರೆ ಹೋಗಲೇಬೇಕು. ಭಾರತ ದೇಶದ ಇತಿಹಾಸ ರಚನೆಯಲ್ಲಂತೂ ಶಾಸನಗಳೇ ಪ್ರಮುಖವಾದ ಆಧಾರ. ಅದಕ್ಕಾಗಿಯೇ 'ಶಾಸನಗಳು ಭಾರತ ಇತಿಹಾಸ ಜೀವನಾಡಿ' ಎಂದು ವಿದ್ವಾಂಸರು ಕರೆದಿರುವುದು ಅರ್ಥಪೂರ್ಣವಾಗಿದೆ.

ಕಳೆದ ಅನೇಕ ವರ್ಷಗಳಿಂದ ಚರಿತ್ರೆಯನ್ನು ನೋಡುವ ದೃಷ್ಟಿ ಗಮನಾರ್ಹವಾದ ಬದಲಾವಣೆಗಳನ್ನು ಪಡೆಯುತ್ತಾ ಬಂದಿದೆ. ಕನ್ನಡ ನಾಡಿನ ಕೆಲವು ಪ್ರಮುಖ ರಾಜಮನೆತನಗಳ ಕುರಿತ ಇತಿಹಾಸ ಕ್ಷೇತ್ರದಲ್ಲೂ ವಿವಿಧ ವಿದ್ವಾಂಸರು ಒಲವನ್ನು ತೋರಿ ವೈವಿಧ್ಯಮಯ ಅಧ್ಯಯನದಲ್ಲಿ ತೊಡಗಿದ್ದಾರೆ. ಶಾಸನಗಳನ್ನೇ ಆಧಾರವಾಗಿಟ್ಟುಕೊಂಡು ವಿಭಿನ್ನ ದೃಷ್ಟಿಕೋನದಿಂದಲೂ ಅಧ್ಯಯನ ಮಾಡಿದ್ದಾರೆ. ಇದರಿಂದಾಗಿ ಇತಿಹಾಸ ಜನಾನುರಾಗವನ್ನು ಪಡೆದು ಸಾಮಾನ್ಯ ಜನರಲ್ಲಿ ಅದರ ಬಗ್ಗೆ ಅರಿವು ಮೂಡತೊಡಗಿತು. ನಮಗೆ ಪರಿಚಯವೇ ಇಲ್ಲದಿದ್ದ ನಮ್ಮ ನಾಡಿನ ಪ್ರಾಚೀನ ಜೀವನ ಶೈಲಿಯ ಅಧ್ಯಯನಕ್ಕೆ ಅವಶ್ಯವೆನಿಸುವ ಶಾಸನ ಸಾಮಗ್ರಿಗಳು ಅಮೂಲ್ಯ ಭಂಡಾರವನ್ನು ತೆರೆದಂತಾಯಿತು.

ಕನ್ನಡ ನಾಡಿನ ವಿವಿಧ ಅರಸು ಮನೆತನಗಳ ಸಾಮಂತರ ಆಳ್ವಿಕೆಯಲ್ಲಿ ಹುಟ್ಟಿದ ಶಾಸನಗಳು ನಾಡಿನ ಜನಾಂಗದ ಬದುಕಿನ ವಿಶ್ವಕೋಶಗಳಾಗಿವೆ. ಅರಸರ ಆಳ್ವಿಕೆಯಲ್ಲಿ ಹುಟ್ಟಿದ ಶಾಸನಗಳಲ್ಲಿ ರಾಜಕೀಯ ಸಂಗತಿಗಳನ್ನು ಹೊರತು ಪಡಿಸಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ಗುರುತಿಸುವ ಪ್ರಯತ್ನವು ಅನ್ಯ ಶಿಸ್ತುಗಳಡಿಯಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದೆ. ಆಗಿನ ಕಾಲದಲ್ಲಿ ಜನರು ಬದುಕಿನ ರೀತಿ, ಅವರ ವಿದ್ಯಾಭ್ಯಾಸ, ಕಲೆ, ಧಾರ್ಮಿಕ ಕಲಾಪ, ಆಡಳಿತ, ಯುದ್ಧಗಳಲ್ಲಿ ಭಾಗವಹಿಸಿದ್ದರ ಚಿತ್ರಣ, ಲೋಕೋಪಯೋಗಿ ಕಾರ್ಯಗಳ ವಿವರಗಳು, ಅವರ ಜೀವನ ಮೌಲ್ಯಗಳನ್ನು ಕುರಿತು ಅಧ್ಯಯನ ಶಾಸನಗಳ ನ್ನಾಧರಿಸಿ ಗ್ರಹಿಸುವ ಪ್ರಯತ್ನ ಮಹತ್ತರತೆಯನ್ನು ಪಡೆದಿದೆ. ಶಾಸನಗಳಿಂದ ವ್ಯಕ್ತವಾಗುವ ಸಂಗತಿಗಳನ್ನು ಅನ್ಯ ಶಿಸ್ತುಗಳಲ್ಲಿಯ ಆಕರಗಳ ಮೂಲಕ ಸಮರ್ಥಿಸುವ ಪ್ರಯತ್ನವೂ ನಡೆದಿದೆ.

ಕನ್ನಡ ನಾಡಿನ ಶಾಸನಗಳ ಕುರಿತು ಮಹತ್ವದ ಅಧ್ಯಯನವನ್ನು ಪ್ರಾರಂಭಿಸಿದವರು ಪಾಶ್ಚಾತ್ಯ ವಿದ್ವಾಂಸರು. ಭಾರತೀಯ ಪುರಾತತ್ವ ಶೋಧನೆಯ ಇಲಾಖೆ ಸ್ಥಾಪಿತವಾದುದ್ದು 1862ರಲ್ಲಿ. ಆದರೆ ಅದಕ್ಕಿಂತ ಪೂರ್ವದಲ್ಲಿ ಕ್ರಮಬದ್ಧ ಅಧ್ಯಯನವು ಪ್ರಾರಂಭವಾಗಿದ್ದಿತು. ಕ್ರಿ.ಶ.1784ರಲ್ಲಿ ಸರ್. ವಿಲಿಯಂ ಜೋನ್ಸ್ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಆಲೋಚಿಸಿ ರಾಯಲ್ ಏಷ್ಯಾಟಿಕ್ ಸೊಸೈಟಿಯನ್ನು ಆರಂಭಿಸಿದರು. ಈ ಸಂಸ್ಥೆಯ ಉದ್ದೇಶ ಏಷ್ಯಾದ ಚರಿತ್ರೆ, ಪ್ರಾಚೀನ ವಸ್ತುಗಳು, ಕಲೆ, ಶಾಸ್ತ್ರ, ಕಾವ್ಯ, ಪುರಾಣಗಳ ಸುಸಂಬದ್ಧ ಅಧ್ಯಯನ ಮಾಡುವುದು ಅದರ ಧ್ಯೇಯವಾಗಿತ್ತು. ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಪುರಾತತ್ವ ಸರ್ವೇಕ್ಷಣ ಇಲಾಖೆ ಅಸ್ತಿತ್ವಕ್ಕೆ ಬಂದಿತು. ಅದರಡಿಯಲ್ಲಿ ಸಂಶೋಧನೆಗಳ ಮೂಲಕ ಇತಿಹಾಸದ ಪುನರ್‌ರಚನೆಯ ಅಧಿಕೃತ ಆಕರಗಳಾದ ಶಾಸನಗಳನ್ನು ಅಧ್ಯಯನಕ್ಕೊಳಪಡಿಸಿದರು.

ಭಾರತದಲ್ಲಿ ಪ್ರಪ್ರಥಮವಾಗಿ ಶಾಸನಗಳನ್ನು ಪತ್ತೆಹಚ್ಚಿ ಪ್ರಕಟಿಸಿದವರು ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಂ, ಸರ್ ವಿಲಿಯಂ ಜೋನ್ಸ್, ಜೇಮ್ಸ ಬರ್ಗೆಸ್, ಜೆ.ಎಫ್.ಫ್ಲೀಟ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು. ಭಗವಾನ್ ಲಾಲ್ ಇಂದ್ರಜಿ, ಆರ್.ಜಿ.ಭಂಡಾರ್ಕರ್, ಎನ್.ಪಿ.ಚಕ್ರವರ್ತಿ, ಎಚ್.ಕೃಷ್ಣಶಾಸ್ತ್ರಿ, ವಿ.ವೆಂಕಯ್ಯ, ಎಚ್.ಪಿ.ಶಾಸ್ತ್ರಿ ಮುಂತಾದ ಭಾರತೀಯ ವಿದ್ವಾಂಸರೂ ಶಾಸನ ಶಾಸ್ತ್ರದ ರಂಗದಲ್ಲಿ ವಿಶೇಷವಾಗಿ ಅಧ್ಯಯನ ಮಾಡಿ ಕೀರ್ತಿಗೆ ಪಾತ್ರರಾಗಿದ್ದಾರೆ.

ಹೈದರಾಬಾದ್ ಕರ್ನಾಟಕ ಭಾಗದ ಶಾಸನಗಳ ಸಂಗ್ರಹ ಕಾರ್ಯದಲ್ಲಿ ಪ್ರಥಮವಾಗಿ ತೊಡಗಿಸಿಕೊಂಡವರು ಕರ್ನಲ್ ಮೆಕೆಂಜಿಯವರು. ನಂತರ ಮದ್ರಾಸ್ ಸಿವಿಲ್ ಸರ್ವಿಸ್‌ನಲ್ಲಿ ಅಧಿಕಾರಿಯಾಗಿದ್ದ ಸರ್ ವಾಲ್ಟರ್ ಇಲಿಯಟ್‌ನಿಂದ ಶಾಸನಗಳ ಸಮಗ್ರ ಅಧ್ಯಯನವು ಪ್ರಾರಂಭವಾಯಿತು. ಈತನು 1837 ರಿಂದ 1870ರ ಅವಧಿಯಲ್ಲಿ ಮುಂಬೈ ಕರ್ನಾಟಕ, ನಿಜಾಂ ಕರ್ನಾಟಕ ಮತ್ತು ಹಳೆಯ ಮೈಸೂರು ಪ್ರಾಂತದ ಉತ್ತರ ಭಾಗಗಳಿಂದ ಸುಮಾರು 1,300 ಶಾಸನಗಳನ್ನು ಸಂಗ್ರಹಿಸಿದನು. ಅಲ್ಲಿಂದ ಮುಂದೆ ಅವುಗಳಲ್ಲಿ 595 ಶಾಸನಗಳನ್ನು ಆಯ್ದುಕೊಂಡು 'Karnataka Desh Inscription' ಎಂಬ ಹೆಸರಿನಲ್ಲಿ ಹೊರ ತಂದ ಈ ಸಂಪುಟ ಗಮನಾರ್ಹವಾಗಿದೆ. ಈ ಸಂಪುಟದಲ್ಲಿ ಹೈದರಾಬಾದ್ ಕರ್ನಾಟಕದ ಹಲವು ಶಾಸನಗಳು ಸಂಗ್ರಹವಾಗಿವೆ. ವಾಲ್ಟರ್ ಇಲಿಯಟ್‌ನಿಂದ ಶಾಸನಗಳ ಸಂಗ್ರಹ ಮತ್ತು ಸಮಗ್ರ ಅಧ್ಯಯನ ಪ್ರಾರಂಭವಾಯಿತೆನ್ನ ಬಹುದು. ಆಂಧ್ರಪ್ರದೇಶ ಆರ್ಕಿಯಾಲಾಜಿಕಲ್ ವಿಭಾಗವು ಆಂಧ್ರಪ್ರದೇಶದ ಆರ್ಕಿಯಲಾಜಿಕಲ್ ಸಿರೀಸ್‌ನಲ್ಲಿ ಈಗಿನ ಕೊಪ್ಪಳಜಿಲ್ಲೆಗೆ ಸಂಬಂಧಿಸಿದ ಕೆಲವು ಶಾಸನಗಳನ್ನು ಪ್ರಕಟಿಸಿದೆ. ಆಗ ಈಗಿನ ಕೊಪ್ಪಳ ಜಿಲ್ಲೆಯು ಅವಿಭಜಿತ ರಾಯಚೂರು ಜಿಲ್ಲೆಯ ಭಾಗವಾಗಿತ್ತು. ಆಂದ್ರಪ್ರದೇಶ

ಗೌರ್ನ್‌ಮೆಂಟ್ ಆರ್ಕಿಯಾಲಾಜಿಕಲ್ ಸೀರೀಸ್ ಸಂಪುಟಗಳಲ್ಲಿಯೂ ಕೊಪ್ಪಳ ಪರಿಸರದ ಶಾಸನಗಳು ಪ್ರಕಟಗೊಂಡಿವೆ.

ಹೈದರಾಬಾದ್ ಕರ್ನಾಟಕದ ಭಾಗದ ಕೊಪ್ಪಳ ಜಿಲ್ಲೆಯ ಶಾಸನಾಧ್ಯಯನದ ಸಾಲಿನಲ್ಲಿ ಪ್ರಮುಖರಾದವರೆಂದರೆ ಪಿ.ಬಿ.ದೇಸಾಯಿಯವರು. ಅವರ 'ಶಾಸನ ಪರಿಚಯ' ಮತ್ತು 'Jainism in south India and some jaina epigraphs' ಎಂಬ ಪುಸ್ತಕದಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಅದರಲ್ಲಿಯೂ ಜೈನ ಶಾಸನಗಳನ್ನು ಪ್ರಕಟಿಸಿದ್ದಾರೆ. ಸಿ.ಎಸ್.ಪಾಟೀಲ್, ವಿನೋದ ಸಿ.ಪಾಟೀಲ, ಚೆನ್ನಬಸವ ಹಿರೇಮಠ, ಹಂ.ಪ.ನಾಗರಾಜಯ್ಯ, ಬಿ.ಸಿ.ಪಾಟೀಲ್ ಮುಂತಾದವರು ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲಾ ಶಾಸನಗಳನ್ನು ಒಳಗೊಂಡು ಹೆಚ್ಚಿನ ಹೊಸ ಶಾಸನಗಳೊಂದಿಗೆ ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗವು ಕೊಪ್ಪಳ ಜಿಲ್ಲೆಯ ಸಮಗ್ರ ಶಾಸನಗಳು ಎಂಬ ಸಂಪುಟವನ್ನು ಹೊರ ತಂದಿದೆ.

ಈ ರೀತಿಯಾಗಿ ಪ್ರಕಟಗೊಂಡಿರುವ ಕೊಪ್ಪಳ ಜಿಲ್ಲೆಯ ಶಾಸನಗಳ ಒಂದು ಅಧ್ಯಯನದಿಂದ ಜಿಲ್ಲೆಯ ಇತಿಹಾಸ ಸಂಸ್ಕೃತಿಯನ್ನು ಚಿತ್ರಿಸುವ ಅವಕಾಶ ಉಂಟಾಗುತ್ತದೆ. ಈ ಮೂಲಕ ಈ ನಾಡು ಕಾಲದಿಂದ ಕಾಲಕ್ಕೆ ಆಳಿದ ಅರಸರ ಆಡಳಿತ, ಅಂದಿನ ರಾಜಕೀಯ, ಸಂಸ್ಕೃತಿ, ಅನುಸರಿಸಿದ ಧರ್ಮ, ಕಲೆ, ಸಾಹಿತ್ಯ, ಜನ ಜೀವನದ ರೀತಿ, ವಾಸ್ತುಶಿಲ್ಪ, ಆಚಾರ-ವಿಚಾರಗಳನ್ನು ತಿಳಿಯಬಹುದಾಗಿದೆ.

ಇಂದಿನ ಕೊಪ್ಪಳ ಜಿಲ್ಲೆಯ ಇತಿಹಾಸವನ್ನು ಅವಲೋಕಿಸಿದರೆ ಈ ಜಿಲ್ಲೆಯಲ್ಲಿ ಪ್ರಮುಖ ರಾಜಮನೆತನಗಳು ಸ್ಥಾಪನೆಗೊಂಡಿರುವುದು ವಿಶೇಷ. ಈ ಜಿಲ್ಲೆಯನ್ನಾಳಿದ ರಾಜಮನೆತನಗಳು ತಮ್ಮ ಆಡಳಿತದ ಅವಧಿಯಲ್ಲಿ ಅನೇಕ ಶಾಸನಗಳನ್ನು ಹಾಕಿಸಿ ತಮ್ಮದೇ ಆದ ಕೊಡುಗೆಗಳನ್ನು ನೀಡಿರುವುದನ್ನು ನಾವು ಕಾಣುತ್ತೇವೆ. ಈ ಶಾಸನಗಳು ಪ್ರಸ್ತುತ ಕೊಪ್ಪಳ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ದೊರೆಯುತ್ತವೆ. ಕೊಪ್ಪಳ ತಾಲೂಕಿನಲ್ಲಿ 174, ಯಲಬುರ್ಗಾ 72, ಕುಷ್ಟಗಿ 31, ಗಂಗಾವತಿ 113 ಹಾಗೂ ಕೆಲವು ನಿಯತಕಾಲಿಕೆಗಳಲ್ಲಿ ಬಿಡಿ ಬಿಡಿಯಾಗಿ ಪ್ರಕಟಗೊಂಡ ಲೇಖನಗಳು ಹೀಗೆ ಒಟ್ಟು 390ಕ್ಕೂ ಅಧಿಕವಾಗಿ ಶಾಸನಗಳು ದೊರೆತಿವೆ. ಈ ಶಾಸನಗಳನ್ನೆಲ್ಲ ಒಂದು ಕಡೆ ಸೇರಿಸಿ ಅದರ ಮೂಲಕ ಆ ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಇತರೆ ವಿಚಾರಗಳನ್ನು ಅರಿತುಕೊಳ್ಳಬಹುದಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಕ್ರಿ.ಪೂ.200 ರಿಂದ ಕ್ರಿ.ಶ.1854ರವರೆಗೆ ವಿವಿಧ ರೀತಿಯ ಶಾಸನಗಳು ದೊರೆತಿವೆ. ಈ ಜಿಲ್ಲೆಯಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಶಾಸನ ಮೌರ್ಯರ ಕಾಲಕ್ಕೆ ಸೇರಿದುದಾಗಿದೆ. ನಂತರ ದೊರೆತ ಶಾಸನಗಳಲ್ಲಿ ಬಾದಾಮಿ ಚಾಳುಕ್ಯರ, ರಾಷ್ಟ್ರಕೂಟ ಅರಸರ, ಗಂಗರು, ಕಲ್ಯಾಣ ಚಾಲುಕ್ಯರು, ನೊಳಂಬರು, ಕಲಚೂರಿಗಳು, ಹೊಯ್ಸಳರು, ಯಾದವರು, ಕರಡಿಕಲ್ಲು ಕದಂಬರು, ಆನೆಗೊಂದಿ,

ಕನಕಗಿರಿ ಪಾಳೆಗಾರರ ಶಾಸನಗಳು ದೊರೆತಿವೆ. ಈ ಶಾಸನಗಳ ಮೂಲಕ ಆಯಾ ಕಾಲದ ಪರಿಸರ, ಸಂಸ್ಕೃತಿ, ರಾಜಕೀಯ ಹಾಗೂ ಸಮಾಜದ ಸ್ಥಿತಿಗತಿಗಳನ್ನು ಶಾಸನದ ಮೂಲಕ ತಿಳಿಯಬಹುದಾಗಿದೆ. ಮೌರ್ಯರ ಕಾಲದಿಂದ ಹಿಡಿದು ವಿಜಯನಗರೋತ್ತರ ವರೆಗಿನ ಎಲ್ಲಾ ಶಾಸನಗಳ ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ.

ಆಂಧ್ರಪ್ರದೇಶ ಆರ್ಕಿಯಾಲಾಜಿಕಲ್ ವಿಭಾಗದ ಆಂಧ್ರಪ್ರದೇಶದ ಆರ್ಕಿಯ ಲಾಜಿಕಲ್ ಸಿರೀಸ್ ಹಾಗೂ ಆಂಧ್ರಪ್ರದೇಶ ಗೌರ್ನ್‌ಮೆಂಟ್ ಆರ್ಕಿಯಾಲಾಜಿಕಲ್ ಸೀರೀಸ್‌ನ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಶಾಸನಗಳು, ಪಿ.ಬಿ.ದೇಸಾಯಿಯವರು ಅವರ 'ಶಾಸನ ಪರಿಚಯ' ಮತ್ತು 'Jainism in south India and some jaina epigraphs' ಎಂಬ ಪುಸ್ತಕದಲ್ಲಿ ಪ್ರಕಟವಾಗಿರುವ ಶಾಸನಗಳು, ಹಂಪನಾಗರಾಜಯ್ಯನವರ ಕೊಪ್ಪಳದ ಶಾಸನಗಳು, ಬಿ.ಸಿ.ಪಾಟೀಲರ ಕೊಪ್ಪಳದ ಹೆಚ್ಚಿನ ಶಾಸನಗಳು ಪುಸ್ತಕ, ಅಶೋಕನ ಶಾಸನಗಳು, "ಗವಿಮಠ್ ಅಂಡ್ ಪಾಲ್ಕಿಗುಂಡ್ ಇನ್‌ಸ್ಕ್ರಿಪ್ಷನ್" ಪುಸ್ತಕದಲ್ಲಿಯ ಶಾಸನಗಳು, "ವಿಜಯನಗರ ಪ್ರೊಗ್ರಿಸ್ಸಿವ್ ರಿಪೋರ್ಟ್" ಗಳಲ್ಲಿ ಪ್ರಕಟವಾಗಿರುವ ಆನೆಗೊಂದಿ ಮತ್ತು ಸುತ್ತಮುತ್ತಲ ಶಾಸನಗಳು, ಚನ್ನಬಸವ ಹಿರೇಮಠರ ಕೊಪ್ಪಳ–ರಾಯಚೂರು ಜಿಲ್ಲೆಯ ಶಾಸನಗಳು, ಈ ಎಲ್ಲಾ ಶಾಸನಗಳನ್ನು ಒಳಗೊಂಡು ಹೆಚ್ಚಿನ ಹೊಸ ಶಾಸನಗಳೊಂದಿಗೆ ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗವು ಹೊರ ತಂದಿರುವ ಕೊಪ್ಪಳ ಜಿಲ್ಲೆಯ ಶಾಸನಗಳು ಸಂಪುಟ ಹಾಗೂ ಕರ್ನಾಟಕ ಭಾರತಿ, ಮಾನವಿಕ ಕರ್ನಾಟಕ, ಸತ್ಯ ಶುದ್ಧಕಾಯಕ ಮತ್ತು ಇತಿಹಾಸ ದರ್ಶನ ಸಂಪುಟಗಳಲ್ಲಿ ಪ್ರಕಟವಾಗಿರುವ ಶಾಸನಗಳು ಹೀಗೆ ಅನೇಕ ಸಾಂದರ್ಭಿಕ ಅಧ್ಯಯನಗಳು ನಡೆದಿವೆ. ಆದರೆ ಸಮಗ್ರವಾದ ಅಧ್ಯಯನ ಇನ್ನೂ ನಡೆದಿಲ್ಲವೆಂದೇ ಹೇಳಬಹುದು. ಆ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಹಾಗೆಯೇ ಗವಿದೀಪ್ತಿಯಲ್ಲಿಯ ಕೊಪ್ಪಳ ನಾಡಿನ ಇತಿಹಾಸ ಲೇಖನ, ಬಿ..ಸಿ.ಪಾಟೀಲರ ಕೊಪ್ಪಳ:ಸಾಂಸ್ಕೃತಿಕ ಪರಂಪರೆ, ಚಿದಾನಂದ ಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬಿ.ಆರ್.ಹಿರೇಮಠರ ಶಾಸನಗಳಲ್ಲಿ ಕರ್ನಾಟಕದ ವರ್ತಕರು,ಕನ್ನಡ ವಿಶ್ವವಿದ್ಯಾಲಯವು ಪ್ರಕಟ ಪಡಿಸಿರುವ ಕೊಪ್ಪಳ ಜಿಲ್ಲೆಯ ದೇವಾಲಯಗಳ ಕೋಶ, ಸಿ.ಎಸ್. ಪಾಟೀಲರ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಯ ದೇವಾಲಯಗಳ ಅಧ್ಯಯನ, ಜೆ.ಎಂ.ನಾಗಯ್ಯನವರ ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ ಹಾಗೂ ಶಿಲ್ಪಗಳಲ್ಲಿ ಶರಣರು, ಕೆ.ಜಿ.ವೆಂಕಟೇಶ್ ಜೋಯಿಸ್‌ರ ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಹು.ಕಾ.ಜಯದೇವ್ ಅವರ ಶಾಸನ ಮತ್ತು ಗದ್ಯ, ಕರ್ನಾಟಕ ಇತಿಹಾಸ

ಅಕಾಡೆಮಿಯ ಇತಿಹಾಸ ದರ್ಶನ ಸಂಪುಟಗಳಲ್ಲಿಯ ಕೊಪ್ಪಳ ಜಿಲ್ಲೆಯ ಶಾಸನಗಳಿಗೆ ಸಂಬಂಧಿಸಿದ ಲೇಖನಗಳು ಪ್ರಕಟವಾಗಿವೆ.

ಶಾಸನಗಳು ಆಯಾ ಕಾಲದ ಇತಿಹಾಸವನ್ನು, ಮತ್ತು ದೇಶದ ಇತಿಹಾಸವನ್ನು ಪುನರ್ ರಚಿಸುವಲ್ಲಿ ಶಾಸನಗಳ ಪಾತ್ರ ಬಹು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳು ತಮ್ಮದೇ ಆದ ವೈಶಿಷ್ಟ್ಯತೆಯಿಂದ ಇತಿಹಾಸದಲ್ಲಿ ಪ್ರಮುಖ ಪಾತ್ರ ಪಡೆದುಕೊಂಡಿವೆ.

ಕನ್ನಡ ನಾಡಿನ ಪ್ರಮುಖ ಅರಸು ಮನೆತನಗಳು ನೆಲೆವೂರಿ ಆಳಿದ್ದು ಇಲ್ಲಿ ಮಹತ್ವದ ಅಂಶವಾಗಿದೆ. ಇದಕ್ಕೆ ಸಾಕ್ಷಿಯಾಗಿ ಇಂದು ನಮಗೆ ದೊರಕಿರುವ ಶಾಸನಗಳು ಹಾಗೂ ಶಾಸನಗಳಲ್ಲಿ ಕಂಡು ಬರುವ ಸಮಗ್ರ ಮಾಹಿತಿ ಕೊಪ್ಪಳ ಜಿಲ್ಲೆಯ ಚರಿತ್ರೆಯ ಬಗೆಗಿರುವ ಪರಿಜ್ಞಾನದ ನಿಷ್ಪನ್ನವಾಗಿರುವುದು ಸಂಪೂರ್ಣ ಶಾಸನಗಳ ಈ ಒಂದು ಸಹನಾ ಪೂರ್ಣ ಅಧ್ಯಯನದಿಂದ ಎಂದು ಹೇಳಬಹುದಾಗಿದೆ. ಇಲ್ಲಿಯ ಒಟ್ಟು ಐತಿಹಾಸಿಕ ಪರಂಪರೆಯನ್ನು ಗುರುತಿಸುವ ಶಾಸನಗಳ ಅಧ್ಯಯನ ಮಾಡಿ ಇಲ್ಲಿನ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವುದು ಇಲ್ಲಿಯ ಪ್ರಸ್ತುತತೆಯಾಗಿದೆ.

ಕೊಪ್ಪಳ ಜಿಲ್ಲೆಯ ಶಾಸನಗಳ ಅಧ್ಯಯನದಿಂದ ನಮ್ಮ ಸಂಸ್ಕೃತಿ ಮತ್ತು ಚರಿತ್ರೆಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅಂಶಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಅಧ್ಯಯನದ ಅವಧಿಯಲ್ಲಿ ಸಂಗ್ರಹಿಸಿದ ಮೂಲ ಹಾಗೂ ಆನುಷಂಗಿಕ ಆಕರಗಳು ಕೊಪ್ಪಳ ಜಿಲ್ಲೆಯ ಅಂದಿನ ಕಾಲದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ವಿಚಾರಗಳ ಬಗೆಗೆ ನಿಖರವಾದ ಸ್ಪಷ್ಟತೆಯನ್ನು ಪಡೆಯಲು ವಿಪುಲವಾದ ಸಾಮಗ್ರಿಗಳನ್ನು ಒದಗಿಸಿವೆ. ಸಂಗ್ರಹಿಸಿದ ಮಾಹಿತಿಗಳನ್ನು ಇದುವರೆಗೂ ನಡೆಸಿರುವ ಚರ್ಚೆಯ ಬೆಳಕಿನಲ್ಲಿ ಪುನರ್ ಅವಲೋಕನಕ್ಕೆ ಗುರಿಪಡಿಸಲಾಗಿದೆ. ಇದರೊಂದಿಗೆ ನಮ್ಮ ಅಧ್ಯಯನದ ಚಿಂತನಾಶೀಲತೆಯಿಂದ ತತ್ವಗಳ ಹಿನ್ನೆಲೆಯಲ್ಲಿ ಅಭ್ಯಸಿಸಿ ಕೊಪ್ಪಳ ಜಿಲ್ಲೆಯ ಮಹತ್ವವನ್ನು ಗುರುತಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಪ್ರದೇಶವು ಪ್ರಾಚೀನ ಕಾಲದಲ್ಲಿ ಇತಿಹಾಸ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿದೆ. ಶತಮಾನಗಳ ಇತಿಹಾಸದಲ್ಲಿ ಕೊಪ್ಪಳ ಪ್ರದೇಶ ಅನೇಕ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟು ವಿಭಿನ್ನ ಸಂಸ್ಕೃತಿಯನ್ನು ಪರಿಚಯ ಮಾಡಿ ಕೊಟ್ಟಿದೆ. ಕೊಪ್ಪಳ ಜಿಲ್ಲೆಯನ್ನಾಳಿದ ಅರಸು ಮನೆತನಗಳಲ್ಲಿ ಪ್ರಥಮವಾಗಿ ಮೌರ್ಯವಂಶ ಹಾಗೂ ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ನೊಳಂಬರು, ಕಲಚೂರಿಗಳು, ಹೊಯ್ಸಳರು, ಯಾದವರು, ಹೊಸಮಲೆ ದುರ್ಗದ ಅರಸರು, ಕನಕಗಿರಿ ಪಾಳೆಗಾರರು, ಕೋಗಳಿ ಕದಂಬರು, ಕರಡಿಕಲ್ಲು ಕದಂಬರು, ಆನೆಗುಂದಿ ಅರಸರು ಆಳಿದ್ದರೆಂದು ಇಲ್ಲಿಯ ಶಾಸನಗಳಿಂದ ತಿಳಿಯಬಹುದಾಗಿದೆ. ಈ ಜಿಲ್ಲೆಯನ್ನಾಳಿದ ಅರಸರಲ್ಲಿ ಮೌರ್ಯ

ಚಕ್ರವರ್ತಿ ಅಶೋಕನಿಂದ ಹಿಡಿದು ಹೊಯ್ಸಳರು, ಗಂಗರವರೆಗೆ ಹಾಗೂ ಮುಂದೆ ಆನೆಗುಂದಿ ಅರಸರವರೆಗೆ ನಿರಂತರವಾಗಿ ಬಂದ ರಾಜಕೀಯ ಇತಿಹಾಸವನ್ನು ಈ ಜಿಲ್ಲೆ ಹೊಂದಿದೆ.

ಧರ್ಮವು ಅಂದಿನ ಕಾಲದ ರಾಜ್ಯಾಡಳಿತದಲ್ಲಿ ಮುಖ್ಯ ಪಾತ್ರವಾಗಿತ್ತು. ಕರ್ನಾಟಕದಲ್ಲಿಯೂ ಪ್ರಾಚೀನ ಕಾಲದಿಂದಲೂ ಅನೇಕ ಧರ್ಮಗಳು ಹುಟ್ಟಿ ಪ್ರಭಾವ ಬೀರಿದ ನಿದರ್ಶನಗಳಿವೆ. ಅವುಗಳಲ್ಲಿ ಬೌದ್ಧ, ಜೈನಧರ್ಮಗಳು ಪ್ರಮುಖವೆನಿಸಿವೆ. ಇವುಗಳ ಪ್ರಭಾವದ ಕುರಿತು ಈ ಜಿಲ್ಲೆಯ ಹಲವಾರು ಶಾಸನಗಳು ನಿದರ್ಶನವಾಗಿವೆ. ನಂತರದಲ್ಲಿ ತತ್ವ ಮತ್ತು ನಿಯಮಗಳನ್ನು ರೂಢಿಸಿಕೊಂಡು ಅಸ್ತಿತ್ವಕ್ಕೆ ಬಂದ ವೈಷ್ಣವಧರ್ಮ, ವೀರಶೈವಧರ್ಮ ಹಾಗೂ ಇಸ್ಲಾಂಧರ್ಮಗಳು ಇಲ್ಲಿ ಅಚ್ಚಳಿಯದ ಪ್ರಭಾವ ಬೀರಿದ್ದನ್ನು ಶಾಸನಗಳಲ್ಲಿಯ ಮಾಹಿತಿಯಿಂದ ತಿಳಿಯಬಹುದು.

ಕೊಪ್ಪಳ ಜಿಲ್ಲೆಯ ಶಾಸನಗಳ ಆಧಾರಗಳಿಂದ ಜಿಲ್ಲೆಯ ಕೆಲವು ಅಗ್ರಹಾರಗಳ ಪರಿಚಯವಾಗುತ್ತದೆ. ಈ ಜಿಲ್ಲೆಯ ಮಾದಿನೂರು, ಅಳವಂಡಿ, ಕೌರೂರು, ಕುಕನೂರು, ತಳಕಲ್, ಇಟಗಿ, ಬಳಗೇರಿ ಮುಂತಾದವು ಪ್ರಮುಖ ಅಗ್ರಹಾರಗಳಾಗಿವೆ. ಈ ಅಗ್ರಹಾರಗಳನ್ನು ಶಾಸನಗಳು ಮುಕ್ತ ಕಂಠದಿಂದ ಹೊಗಳಿವೆ. ಅಗ್ರಹಾರಗಳಂತೆ ಬ್ರಹ್ಮಪುರಿ, ಭತ್ತ ಗ್ರಾಮಗಳೂ ಶಿಕ್ಷಣದ ನೆಲೆಗಳಾಗಿರುವುದು ಕಂಡು ಬರುತ್ತದೆ.

ಕನ್ನಡ ನಾಡಿನ ಶಿಲ್ಪಕಲಾ ಪ್ರಪಂಚದ ಬಹುದೊಡ್ಡ ಆಸ್ತಿಯಾಗಿರುವ ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕವಾಗಿ ಬೆಳೆದು ಬಂದಿರುವುದು ತಿಳಿದ ಸಂಗತಿಯಾಗಿದೆ. ಹೊಯ್ಸಳರ ಕಾಲದಲ್ಲಿ ರೂಪಗೊಂಡ ಕಲಾವಾಸ್ತುಶಿಲ್ಪ ವಿಶ್ವ ಪ್ರಸಿದ್ಧಿ ಪಡೆದಿದೆ. ಅಂದಿನ ಅರಸರು, ರಾಣಿಯರು, ಮಾಂಡಲಿಕರು, ದಂಡನಾಯಕರು ಅಷ್ಟೇ ಅಲ್ಲ ಸಾಮಾನ್ಯ ಜನರೂ ಕೂಡ ದೇವಾಲಯಗಳನ್ನು ಸ್ಥಾಪಿಸುತ್ತಿದ್ದುದ್ದನ್ನು ಆಯಾ ಕಾಲದ ಶಾಸನಗಳ ಮೂಲಕ ತಿಳಿಯಬಹುದಾಗಿದೆ. ದೇವಾಲಯಗಳು ಸಮಾಜದಲ್ಲಿ ಶಿಕ್ಷಣ ಸಂಸ್ಥೆಗಳಾಗಿ, ಸಾಂಸ್ಕೃತಿಕವಾಗಿ ಸಲ್ಲಿಸಿದ ಸೇವೆಯನ್ನು ಹಾಗೂ ಧಾರ್ಮಿಕವಾಗಿ ಯಾವ ರೀತಿ ಪ್ರಭಾವ ಬೀರಿದ್ದವು ಎನ್ನುವ ಅಂಶ ಶಾಸನಗಳಲ್ಲಿ ಉಕ್ತಗೊಂಡಿದೆ.

ಕನ್ನಡ ನಾಡಿನಲ್ಲಿ ಸಾಮಾಜಿಕ ಸ್ಥಿತಿಗತಿಗಳು ತಲೆಮಾರಿನಿಂದ ತಲೆಮಾರಿಗೆ ಮುಂದುವರೆದುಕೊಂಡು ಬಂದಿವೆ. ಶಾಸನಗಳಲ್ಲಿ ಒಡಮೂಡಿರುವ ಜಾತಿ ಪದ್ಧತಿ, ಸಂಪ್ರದಾಯ ಮತ್ತು ನಂಬಿಕೆಗಳು, ಸ್ತ್ರೀಯರ ಸ್ಥಾನಮಾನ, ವೀರಜೀವನ ಹಾಗೂ ಲೋಕೋಪಯೋಗಿ ಕಾರ್ಯಗಳ ವಿವರಗಳು ದೊರೆಯುತ್ತವೆ.

ಶಾಸನಗಳು ಸಾಹಿತ್ಯಿಕವಾಗಿ ತುಂಬಾ ಮಹತ್ವವನ್ನು ಪಡೆದಿವೆ. ಕನ್ನಡ ಸಾಹಿತ್ಯ ಮತ್ತು ಶಾಸನಗಳ ಪರಸ್ಪರ ಮತ್ತು ಪೂರಕ ಸಂಬಂಧವನ್ನು ಗ್ರಹಿಸುವ

ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಶಾಸನಗಳು ಯಾವ ಯಾವ ವಿಷಯಗಳನ್ನು ಮುಖ್ಯವಾಗಿ ಹೇಳಲು ಬಯಸುತ್ತವೆಯೋ ಅವು ಕೊಡುವ ವಿವರಗಳು ನಮಗೆ ಬಹು ಅಮೂಲ್ಯವಾಗಿರುತ್ತವೆ. ಇತಿಹಾಸವನ್ನು ಕುರಿತು ಗಟ್ಟಿಯಾದ, ಖಚಿತವಾದ, ಸ್ಪಷ್ಟವಾದ ಮಾಹಿತಿಯನ್ನು ನೀಡುವ ಪ್ರಮುಖ ಆಧಾರಗಳಾಗಿವೆ. ಇವು ಅತ್ಯಂತ ಮಹತ್ವದ ಹಾಗೂ ನಂಬಲರ್ಹವಾದ ಮೂಲಾಧಾರವಾದುದರಿಂದ ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿ ಕೊಟ್ಟಿದೆ. ಆಯಾ ಕಾಲದ ಜನಜೀವನದ ವಿವಿಧ ಮುಖಗಳ ಪರಿಚಯ ಮಾಡಿಕೊಡುವುದರೊಂದಿಗೆ ಅವರ ರೂಢಿ ಪರಂಪರೆಗಳು, ನಂಬಿಕೆ ಮೌಲ್ಯಗಳು, ಪ್ರಗತಿ ಸಾಧನೆಗಳ, ಆಚಾರ–ವಿಚಾರಗಳ ಸ್ಪಷ್ಟ ಚಿತ್ರಣವನ್ನು ನೀಡುವಲ್ಲಿ ಶಾಸನಗಳು ಸಫಲವಾಗಿವೆ.

ಜಿಲ್ಲೆಯ ಶಾಸನಗಳು ತಮ್ಮದೇ ಆದ ವೈಶಿಷ್ಟತೆಯಿಂದ ಇತಿಹಾಸದಲ್ಲಿ ಪ್ರಮುಖ ಪಾತ್ರ ಪಡೆದುಕೊಂಡಿವೆ. ಅವುಗಳ ಒಟ್ಟು ಮೊತ್ತವನ್ನು ಕಲೆಹಾಕಿ ಅದರಿಂದ ಹೊರಬರುವ ಸಂಪೂರ್ಣ ಮಾಹಿತಿಯ ಮೂಲಕ ಕೊಪ್ಪಳ ಜಿಲ್ಲೆಯ ಇತಿಹಾಸದ ಸ್ಥೂಲವಾದ ಚಿತ್ರಣವನ್ನು ಒದಗಿಸಲಾಗಿದೆ ಹಾಗೂ ಕನ್ನಡ ನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಜಿಲ್ಲೆಯು ಪಡೆದುಕೊಂಡಿರುವ ಮಹತ್ವವನ್ನು ಅರಿಯುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಾಯ–2

# ಕೊಪ್ಪಳ ಜಿಲ್ಲೆಯ ಶಾಸನಗಳ ಪರಿಚಯ ಮತ್ತು ಸಮಗ್ರ ಅಧ್ಯಯನ

ಒಂದು ನಾಡಿನ ಚರಿತ್ರೆಯನ್ನು ದಾಖಲಿಸುವಲ್ಲಿ ಶಾಸನಗಳು ಅತ್ಯಂತ ಪ್ರಮುಖವಾದ ಪಾತ್ರ ವಹಿಸುತ್ತವೆ. ಇತರೆ ಆಧಾರಗಳಿಂದ ದೊರೆಯದ ಎಷ್ಟೋ ಅಂಶಗಳು ಶಾಸನಗಳಿಂದ ದೊರೆಯುತ್ತವೆ. ಶಾಸನಗಳಲ್ಲಿ ಬರೆಯಲ್ಪಟ್ಟ ವಿಷಯವು ಅತಿಶಯೋಕ್ತಿಯಿಂದ ಕೂಡಿರದೆ ಹೆಚ್ಚಾನು ಹೆಚ್ಚು ವಾಸ್ತವದ ಸತ್ಯಾಸತ್ಯತೆಯನ್ನು ಒಳಗೊಂಡಿರುತ್ತದೆ. ಗಟ್ಟಿಯಾದ ಪದಾರ್ಥಗಳ ಮೇಲೆ ಕೊರೆದ ವಿಷಯವು ಗಟ್ಟಿಯಾಗಿಯೇ ಇರುತ್ತದೆಯೆಂದರೆ ತಪ್ಪಾಗಲಾರದು. ಆದುದರಿಂದ ಒಂದು ನಾಡಿನ ಪ್ರಾಚೀನ ಕಾಲದ ಚರಿತ್ರೆಯನ್ನು ಕಟ್ಟಿಕೊಡುವಾಗ ಶಾಸನಗಳಿಗೆ ಮೊದಲ ಆದ್ಯತೆ ಕೊಡಬೇಕಾಗುತ್ತದೆ. ನಂತರದ ಸ್ಥಾನ ಇತರೆ ಆಧಾರಗಳದ್ದು. ನಮ್ಮ ದೇಶದ ಇತಿಹಾಸ ರಚನೆಯಲ್ಲಂತೂ ಶಾಸನಗಳಿಗೆ ಮಹತ್ವದ ಸ್ಥಾನ ನೀಡಿರುವುದನ್ನು ಕಾಣುತ್ತೇವೆ. ವಿದ್ವಾಂಸರು ಶಾಸನಗಳನ್ನು 'ಭಾರತ ದೇಶದ ಜೀವನಾಡಿ' ಎಂದು ಕರೆದಿದ್ದಾರೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಹೇಳುವ ಶಾಸನಗಳು ಹೆಚ್ಚು ಖಚಿತತೆಯಿಂದ ಕೂಡಿರುವುದೇ ಇದಕ್ಕೆ ಕಾರಣ.

ಬಹುಕಾಲ ಬಾಳುವಂತಹ ಸಾಮಗ್ರಿಗಳ ಮೇಲೆ ಕೊರೆದ ಬರಹಗಳನ್ನು ಶಾಸನಗಳೆಂದು ಕರೆಯಬಹುದಾಗಿದೆ. 'ಶಾಸನ' ಎಂಬ ಪದ 'ಶಾಸ್' ಎನ್ನುವ ಧಾತುವಿನಿಂದ ಬಂದಿದೆ. 'ಶಾಸ್' ಎಂದರೆ ಆಜ್ಞೆಮಾಡು, ಶಿಕ್ಷಿಸು ಎಂದರ್ಥ. ಪ್ರಾಚೀನ ಕಾಲದಲ್ಲಿ ಶಾಸನಗಳು ಮೊದಲು ರಾಜಾಜ್ಞೆಗಳಾಗಿದ್ದವು. ರಾಜರು ತಮ್ಮ ಆಜ್ಞೆಗಳನ್ನು ಶಾಸನ ರೂಪದಲ್ಲಿ ಬರೆಸುತ್ತಿದ್ದರು. "ಕಾನೂನುಗಳನ್ನು ಜನರಿಗೆ ಪ್ರಕಟಪಡಿಸುವ ಬರಹಗಳೇ ಶಾಸನಗಳು, ರಾಜನೇ ಆಗಲಿ ಅಥವಾ ಬೇರೆಯವರು ಯಾರೇ ಆಗಲಿ ಅವರು ದಾನವನ್ನು ಕೊಟ್ಟಾಗ, ಎಲ್ಲರೂ ಆ ದಾನವನ್ನು ಕಾಪಾಡಿಕೊಂಡು ಬರಬೇಕೆಂದೂ ಹೇಳುತ್ತಿದ್ದರು ಅಥವಾ ಆಜ್ಞೆಮಾಡುತ್ತಿದ್ದರು. ಅಲ್ಲದೆ ದಾನವಾಗಿ ಕೊಟ್ಟ ಭೂಮಿಗೆ ತೆರಿಗೆಗಳನ್ನು ತೆಗೆದು ಹಾಕಿದ ಆಜ್ಞೆಯನ್ನು ರಾಜನೋ ಅಥವಾ ಅಧಿಕಾರಿಗಳೋ ಹೊರಡಿಸುತ್ತಿದ್ದರು. ಹೀಗೆ ಪರ್ಯಾಯವಾಗಿ ಇಂತಹ ಬರಹಗಳಿಗೂ ಶಾಸನಗಳೆಂಬ ಹೆಸರು ರೂಢಿಗೆ ಬಂದಿತು. ಈ ಅರ್ಥವು ಇನ್ನೂ ವಿಸ್ತಾರವಾಗಿ ರಾಜರ ಪ್ರಶಸ್ತಿಯನ್ನು ಹೇಳುವ, ವೀರರ ಸಾವನ್ನು, ಸನ್ಯಾಸಿಗಳ ಮರಣವನ್ನು, ಕೊನೆಗೆ ಶಿಲ್ಪದ ಅಥವಾ ಶಿಲ್ಪದ ಹೆಸರನ್ನು ಹೇಳುವ ಬರಹಗಳಿಗೂ 'ಶಾಸನ' ಎಂಬ ಹೆಸರು ಅನ್ವಯವಾಯಿತು."[1] ಹೀಗೆ ಶಾಸನ ಪದವು ಸಂಕುಚಿತತೆಯಿಂದ ಕಳಚಿಕೊಂಡು ವಿಶಾಲ ಅರ್ಥವನ್ನು ಪಡೆದುಕೊಂಡದ್ದನ್ನು ನೋಡಬಹುದಾಗಿದೆ.

ಸಾಮಾನ್ಯವಾಗಿ ಶಾಸನಗಳನ್ನು ಕಲ್ಲು ಹಾಗೂ ಲೋಹದ ಮೇಲೆ ಬರೆಯುತ್ತಿದ್ದರು. ಚೀನಾದಲ್ಲಿ ಮೂಳೆಗಳ ಮೇಲೆ, ಈಜಿಪ್ಟಿನಲ್ಲಿ ಮರದ ಮೇಲೆ, ಸುಟ್ಟ ಇಟ್ಟಿಗೆಗಳ ಮೇಲೆ ಶಾಸನಗಳನ್ನು ಬರೆಯಲಾಗಿದೆ. ನಮ್ಮ ದೇಶದಲ್ಲಿ ಇಟ್ಟಿಗೆ, ಸುಟ್ಟ ಮಡಿಕೆ, ಶಂಖ, ದಂತ, ಮರಗಳಮೇಲೂ ಶಾಸನ ಬರೆದಿರುವುದನ್ನು ಕಾಣುತ್ತೇವೆ. ಕರ್ನಾಟಕದಲ್ಲಿ ಸ್ಥಂಭಗಳ ಮೇಲೆ, ಕಲ್ಲಿನ ಮೇಲೆ, ತಾಮ್ರಪಟಗಳ ಮೇಲೆ, ಪಾತ್ರೆಗಳ ಮೇಲೆ, ದೇವಸ್ಥಾನದ ಗೋಡೆಗಳ ಮೇಲೆ, ವಿಗ್ರಹ-ಪೀಠಗಳ ಮೇಲೆ, ಇನ್ನೂ ಕೆಲವು ಲೋಹಗಳ ಮೇಲೆ ಬರೆದ ಶಾಸನಗಳು ನಮಗೆ ದೊರಕಿವೆ. ಕೊಪ್ಪಳ ಜಿಲ್ಲೆಯಲ್ಲಿ ಬಂಡೆಗಳ ಮೇಲೆ ಬರೆದ ಶಾಸನಗಳ ಜೊತೆಗೆ ವಿಗ್ರಹದ ಮೇಲೆ ಬರೆದ ಶಾಸನಗಳು ಇವೆ. ತಾಮ್ರದ[2] ಜೊತೆಗೆ ಹಿತ್ತಾಳೆ[3] ಮತ್ತು ಬೆಳ್ಳಿಯ[4]ಮೇಲೆ ಬರೆದ ಶಾಸನಗಳು ದೊರಕಿರುವುದು ವಿಶೇಷವಾಗಿದೆ.

ಶಾಸನಗಳು ಸೂರ್ಯ-ಚಂದ್ರ ಇರುವವರೆಗೆ ಉಳಿಯಬೇಕೆಂಬ ಉದ್ದೇಶದಿಂದ ರಾಜರುಗಳು ಶಾಸನಗಳನ್ನು ಶಿಲೆ ಹಾಗೂ ಲೋಹಗಳ ಮೇಲೆ ಬರೆಸುತ್ತಿದ್ದರು. ಲೋಹ ಶಾಸನಗಳು ಹೆಚ್ಚಿನ ಪ್ರಮಾಣದಲ್ಲಿ ಕೂಟ ಶಾಸನಗಳಾಗತೊಡಗಿದಾಗ ಶಿಲೆಯ ಮೇಲೆ ಶಾಸನಗಳನ್ನು ಬರೆಯಲು ಪ್ರಾರಂಭಿಸಿದರು. ಆದ್ದರಿಂದ ಕೊಪ್ಪಳ ಜಿಲ್ಲೆಯಲ್ಲಿ ಶಿಲೆಯ ಮೇಲೆ ಬರೆದ ಶಾಸನಗಳು ಅಧಿಕ ಪ್ರಮಾಣದಲ್ಲಿ ಕಾಣಸಿಗುತ್ತವೆ.

ಭಾರತೀಯ ಶಾಸನಗಳ ಅಧ್ಯಯನ ಆರಂಭವಾದದ್ದು 18ನೇ ಶತಮಾನದಲ್ಲಿ. ಅದು ಪಾಶ್ಚಾತ್ಯ ವಿದ್ವಾಂಸರ ಮೂಲಕ ಆರಂಭವಾಯಿತು. ಪ್ರಿನ್ಸೆಪ್, ಲ್ಯಾಸೆನ್, ಕನ್ನಿಂಗ್ ಹ್ಯಾಂ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಶಾಸನಾಧ್ಯಯನದಲ್ಲಿ ತೊಡಗಿ, ಭಾರತೀಯ ಶಾಸನಗಳ ಅಧ್ಯಯನಕ್ಕೆ ನಾಂದಿ ಹಾಡಿದರು. ಅಲೆಗ್ಸಾಂಡರ್ ಕನ್ನಿಂಗ್ ಹ್ಯಾಂ, ಚಾರ್ಲ್ಸ್, ಸರ್ ವಿಲಿಯಂಜೋನ್ಸ್, ಹೆನ್ರಿಚ್, ಜೇಮ್ಸ ಬರ್ಗೆಸ್, ಜಾರ್ಜ್ ಬೂಲರ್, ಹೆನ್ರಿಕೋಲ್ ಬ್ರೂಕ್, ಕೀಲ್ ಹಾರ್ನ್, ಜೆ.ಎಫ್.ಫ್ಲೀಟ್ ಮುಂತಾದ ವಿದ್ವಾಂಸರು ಶಾಸನಗಳ ಅಧ್ಯಯನಕ್ಕೆ ಅಣಿಯಾದರು. ಭಗವಾನ್ ಲಾಲ್ ಇಂದ್ರಜಿ, ಎಲ್.ಎಲ್.ಮಿತ್ರ ಆರ್.ಜಿ.ಭಂಡಾರ್ಕರ್, ಆರ್.ಡಿ.ಬ್ಯಾನರ್ಜಿ, ಪಿ.ಎನ್.ಭಟ್ಟಾಚಾರ್ಯ, ಡಿ.ಆರ್.ಭಂಡಾರ್ಕರ್, ಹೆಚ್.ಪಿ.ಶಾಸ್ತ್ರಿ, ವಿ.ವೆಂಕಯ್ಯ, ಹೆಚ್.ಕೃಷ್ಣಶಾಸ್ತ್ರಿ, ಬಾವುದಾಜಿ, ಎನ್.ಪಿ.ಚಕ್ರವರ್ತಿ, ಛಾಬ್ರಿ, ಸರ್ದಾರ್ ಮೊದಲಾದವರು ಶಾಸನ ಕ್ಷೇತ್ರದಲ್ಲಿ ಅಧ್ಯಯನ ನಡೆಸಿ ಭಾರತದ ಇತಿಹಾಸ ಕಟ್ಟುವಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ.

ಕರ್ನಾಟಕ ಶಾಸನಗಳ ಅಧ್ಯಯನ ಆರಂಭವಾದದ್ದು ಕೂಡ 18ನೇ ಶತಮಾನದಲ್ಲಿ. ಕ್ರಿ.ಶ.1791ರಲ್ಲಿ 'A Royal Grant of land in carnata' ಎಂಬ ಹೆಸರಿನ ತಾಮ್ರ ಶಾಸನವನ್ನು ವಿಲಿಯಂ ಜೋನ್ಸ್ 'ಏಷಿಯಾಟಿಕ್ ರಿಸರ್ಚಸ್' ಪತ್ರಿಕೆಯಲ್ಲಿ ಪ್ರಕಟಿಸಿದ. ನಂತರ ಕನ್ನಡ ಶಾಸನಗಳ ಒಂದು ವ್ಯವಸ್ಥಿತವಾದ ಅಧ್ಯಯನವು ಆರಂಭವಾದದ್ದು ವಾಲ್ಟರ್ ಇಲಿಯಟ್‌ನಿಂದ. 1837ರಲ್ಲಿ ಈತ ಪ್ರಕಟಿಸಿದ 'ಊಟಿಜಣ ಋಟಟಿಬಿಡುರಿಣುಆಟಿ' ಎಂಬ ಲೇಖನದ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸದ ಅಧ್ಯಯನಕ್ಕೆ ಹೊಸದೊಂದು

ಮಾರ್ಗ ಸೃಷ್ಟಿಯಾಯಿತು. ದೇಶದ ಇತಿಹಾಸ ರಚನೆಯಲ್ಲಿ ಶಾಸನಗಳ ಮಹತ್ವವನ್ನು ಗುರುತಿಸಿದವರು ಕರ್ನಲ್ ಮೆಕೆಂಜಿ. ಈತನ ಏಷ್ಯಾಟಿಕ್ ಸೊಸೈಟಿಯ ರಿಸರ್ಚ್ ಪತ್ರಿಕೆಯ ಮೂಲಕ ಕನ್ನಡದ ಅನೇಕ ಶಾಸನಗಳನ್ನು ಪ್ರಕಟಿಸಿದ. 1862ರಲ್ಲಿ ಭಾರತೀಯ ಪುರಾತತ್ವ ಶೋಧನ ಇಲಾಖೆ ಆರಂಭವಾಯಿತು. ಆ ಸಂದರ್ಭದಲ್ಲಿ ಇತಿಹಾಸದ ಪುನರ್‌ರಚನೆಗೆ ಅಧಿಕೃತ ಆಕರಗಳಾದ ಶಾಸನಗಳನ್ನು ಪರಿಷ್ಕರಿಸಲಾಯಿತು. ಪರಿಷ್ಕರಿಸಿದ ಶಾಸನಗಳನ್ನು 'ಇಂಡಿಯನ್ ಆಂಟಿಕ್ವಯಿರಿ' ಎಂಬ ನಿಯತಕಾಲಿಕೆಯಲ್ಲಿ ಪ್ರಕಟಿಸಲಾಯಿತು. ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಾದ ಕೊಪ್ಪಳ, ರಾಯಚೂರು, ಬಳ್ಳಾರಿ, ಗುಲಬರ್ಗಾ ಹಾಗೂ ಬೀದರ್ ಪ್ರದೇಶಗಳಲ್ಲಿಯ ಶಾಸನಗಳನ್ನು ಪ್ರಕಟಿಸಲು ಮೊದಲು ಮುಂದೆ ಬಂದವರು ಆಗಿನ ಮದ್ರಾಸ್ ಸಿವಿಲ್ ಸರ್ವಿಸ್‌ನಲ್ಲಿ ಅಧಿಕಾರಿಯಾಗಿದ್ದ ಸರ್.ವಾಲ್ಟರ್ ಇಲಿಯಟ್. ಈತನ ತರುವಾಯ ಈ ಭಾಗದ ಶಾಸನಗಳನ್ನು ಆಂಧ್ರಪ್ರದೇಶದ ಆರ್ಕಯಾಲಾಜಿಕಲ್ ಸಿರೀಸ್‌ನಲ್ಲಿ ಪ್ರಕಟಿಸಿದೆ. ಪಿ.ಬಿ.ದೇಸಾಯಿಯವರ "Janism in south India and some Jaina epigraphs" ಪುಸ್ತಕದಲ್ಲಿ ಹೈದರಾಬಾದ್ ಕರ್ನಾಟಕದ 53 ಶಾಸನಗಳನ್ನು ಪ್ರಕಟಿಸಿದ್ದಾರೆ. ನಂತರ ಈ ಭಾಗದ ಶಾಸನಗಳನ್ನು ಕುರಿತಂತೆ ಬಿ.ಆರ್.ಗೋಪಾಲ್, ಆರ್.ಎಂ.ಷಡಕ್ಷರಿ, ವೈಜನಾಥ, ಭಂಡೆ, ಮಿರಾಸ, ಸೀತಾರಾಮ್ ಜಾಗೀರದಾರ, ವ್ಹಿ.ಶಿವಾನಂದ, ಹನುಮಾಕ್ಷಿಗೋಗಿ ಮುಂತಾದವರು ಅಧ್ಯಯನ ನಡೆಸಿ ಹಲವು ಶಾಸನಗಳನ್ನು ಪ್ರಕಟಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಆರಂಭವಾದ ಮೇಲೆ ಅಲ್ಲಿನ ಶಾಸನ ವಿಭಾಗವು ಕೊಪ್ಪಳ, ಬಳ್ಳಾರಿ, ರಾಯಚೂರು ಹಾಗೂ ಬೀದರ ಜಿಲ್ಲೆಗಳ ಶಾಸನ ಸಂಪುಟಗಳನ್ನು ಹಾಗೂ ಹಂಪಿ ಶಾಸನ ಸಂಪುಟಗಳನ್ನು ಹೊರ ತರುವುದರ ಮೂಲಕ ಮಹತ್ವದ ಕಾರ್ಯ ಮಾಡಿದೆ.

ಆರ್.ಎಲ್.ಟರ್ನರ್ ಅವರು 'ಗವಿಮಠ ಮತ್ತು ಪಾಲ್ಕಿಗುಂಡಿನ ಶಾಸನಗಳು' ಎಂಬ ಪುಸ್ತಕದಲ್ಲಿ ಕೊಪ್ಪಳದಲ್ಲಿಯ ಅಶೋಕನ ಶಾಸನಗಳನ್ನು ಪ್ರಕಟಿಸಿದ್ದಾರೆ. ಆಂಧ್ರಪ್ರದೇಶ ಆರ್ಕಿಯಾಲಾಜಿಕಲ್ ಸಿರೀಸ್ ಸರಣಿ–10 ಹಾಗೂ 12 ರಲ್ಲಿ ಸಿ.ಆರ್.ಕೃಷ್ಣಮಾಚಾರ್ಯ ಹಾಗೂ ಇತರರೂ 'ಏಚಿಟಿಟಿಚಿಜಚಿ ಖಟಿಥಿಡಿಚಿಣಚಿಟಿ ಔಜಿ ಏಠಠಿಠಿಚಿಟ' ಎನ್ನುವ ಪುಸ್ತಕದಲ್ಲಿ ಜಿಲ್ಲೆಯ ಕೆಲವು ಶಾಸನಗಳನ್ನು ಪ್ರಕಟಿಸಿದ್ದಾರೆ. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಹಲವನ್ನು ಡಾ.ಪಿ.ಬಿ.ದೇಸಾಯಿಯವರು 'ಶಾಸನ ಪರಿಚಯ ಹಾಗೂ ಕನ್ನಡ ನಾಡಿನ ಶಾಸನಗಳು' ಎನ್ನುವ ಕೃತಿಯಲ್ಲಿ ಪ್ರಕಟಿಸಿದ್ದಾರೆ. "Jainism in south India and some Jaina epigraphs" ಪುಸ್ತಕದಲ್ಲಿ ಜಿಲ್ಲೆಯ ಕೆಲವು ಜೈನ ಶಾಸನಗಳನ್ನು ಪ್ರಕಟಿಸಿದ್ದಾರೆ. 'ಕೊಪ್ಪಳದ ಶಾಸನಗಳು' ಎಂಬ ಪುಸ್ತಕದಲ್ಲಿ ಕೊಪ್ಪಳದಲ್ಲಿನ ಅಶೋಕನ ಶಾಸನಗಳ ವಿವರಣಾತ್ಮಕ ಪರಿಚಯವನ್ನು ಕೊಡಲಾಗಿದೆ. ಆನೆಗೊಂದಿ ಮತ್ತು ಸುತ್ತಮುತ್ತಲ ಶಾಸನಗಳನ್ನು 'ವಿಜಯನಗರ ಪ್ರೊಗ್ರೆಸ್ಸೀವ್ ರೀಪೋರ್ಟ್'ನಲ್ಲಿ ಪ್ರಕಟಿಸಲಾಗಿದೆ. ಬಿ.ಸಿ.ಪಾಟೀಲರು 'ಕೊಪ್ಪಳದ ಹೆಚ್ಚಿನ ಶಾಸನಗಳು' ಎಂಬ ಕೃತಿಯನ್ನು ಹೊರ ತಂದಿದ್ದಾರೆ. ಹಾಗೆಯೇ

ಬಿ.ಸಿ.ಪಾಟೀಲ, ಸಿ.ಎಸ್.ಪಾಟೀಲ ಮತ್ತು ವಿನೋದ ಪಾಟೀಲ ದಂಪತಿಗಳು 'ಕೊಪ್ಪಳ ಜಿಲ್ಲೆಯ ಶಾಸನಗಳು' ಎನ್ನುವ ಹೆಸರಿನಲ್ಲಿ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಡಾ.ಚೆನ್ನಬಸವ ಹಿರೇಮಠರು 'ಕೊಪ್ಪಳ-ರಾಯಚೂರು ಜಿಲ್ಲೆಯ ಶಾಸನಗಳು' ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಅಲ್ಲದೆ ಅದೇ ರೀತಿ ಇದೇ ಸೀರಿಸ್‌ನ ಸರಣಿ-12ರಲ್ಲಿ ಹಂಪನಾಗರಾಜಯ್ಯನವರು ಜಿಲ್ಲೆಯ ಮಹತ್ವದ ಶಾಸನಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯದ ಶಾಸನ ಅಧ್ಯಯನ ವಿಭಾಗವು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಸನಗಳನ್ನು ತಾಲೂಕುವಾರು ವಿಂಗಡಿಸಿ ಪ್ರಕಟಿಸಿದ್ದಾರೆ. ಜಿಲ್ಲೆಯ ಶಾಸನಗಳ ಸಮಗ್ರ ಅಧ್ಯಯನಕ್ಕೆ ಈ ಕೃತಿಯು ಉಪಯುಕ್ತವಾಗಿದೆ. ಇವುಗಳಲ್ಲದೆ ಇತಿಹಾಸ ದರ್ಶನ, ಕರ್ನಾಟಕ ಭಾರತಿ, ಮಾನವಿಕ ಕರ್ನಾಟಕ, ಸತ್ಯಶುದ್ಧಕಾಯಕ-ಮುಂತಾದ ಪತ್ರಿಕೆಗಳಲ್ಲಿ ಕೆಲವು ಶಾಸನಗಳು ಪ್ರಕಟವಾಗಿವೆ. ಅಲ್ಲದೆ ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಕುರಿತು ಬಿಡಿ ಲೇಖನಗಳು ಸ್ಮರಣಸಂಚಿಕೆಗಳಲ್ಲಿ ಪ್ರಕಟವಾಗಿವೆ. ಈ ಮೇಲಿನ ಎಲ್ಲಾ ಕೃತಿಗಳಲ್ಲಿ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಶಾಸನಗಳನ್ನು ಅನುಲಕ್ಷಿಸಿ ಜಿಲ್ಲೆಯ ಶಾಸನಗಳ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಕೊಪ್ಪಳ ಜಿಲ್ಲೆಗೆ ಮಹತ್ವದ ಸ್ಥಾನವಿದೆ. ಕೊಪ್ಪಳ ಜಿಲ್ಲೆಯ ಪ್ರಾಚೀನತೆಯ ಬಗ್ಗೆ ಹೇಳುವುದಾದರೆ "ಇಲ್ಲಿ ದೊರೆತ ತಲೆಬುರುಡೆ, ಮಣ್ಣಿನ ಪಾತ್ರೆ, ಆಯುಧ ವಿಶೇಷ ಮೊದಲಾದವು ಈ ಸ್ಥಳ ಪ್ರಾಚೀನ ಕಾಲದಿಂದ ಮಾನವನ ವಾಸಸ್ಥಳವಾಗಿತ್ತೆಂಬುದಕ್ಕೆ ಸಾಕ್ಷಿ ಹೇಳುತ್ತವೆ. ಇಲ್ಲಿಯ ಸುಪ್ರಸಿದ್ಧ ಶ್ರೀಗವಿಸಿದ್ಧೇಶ್ವರ ಮಠದ ಮೇಲಿನ ಗುಹೆಗಳಲ್ಲಿ ಶಿಲಾಯುಗದ ಆದಿ ಮಾನವನ ವರ್ಣರಂಜಿತ ಚಿತ್ರಗಳೂ ದೊರೆತಿವೆ. ಮೋರೇರ ಅಂಗಡಿ, ಮೋರೇರ ಅಗಸಿ, ಮಿಂಚರಬಂಡೆ ಬಯಲು ಮೊದಲಾದವು ಈ ಸ್ಥಳದ ಇತಿಹಾಸವನ್ನು ಕ್ರಿಸ್ತಪೂರ್ವದತ್ತ ಕೊಂಡೊಯ್ಯುತ್ತವೆ"[5] ಪುರಾಣ ಕಾಲದಿಂದಲೂ ಇಲ್ಲಿನ ಕೇಂದ್ರ ಪ್ರದೇಶಗಳು ಹೆಸರು ವಾಸಿಯಾಗಿವೆ. ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯಲು ತಪಸ್ಸುಗೈದ ಇಂದ್ರಕೀಲ ಪರ್ವತ ಇಲ್ಲಿನ ಪರ್ವತ ಸಾಲುಗಳಲ್ಲಿಯೇ ಇದೆ. ಅದು ಇಂದು ಮಳೆಮಲ್ಲೇಶ್ವರ ಬೆಟ್ಟವಾಗಿ ಪರಿವರ್ತನೆಯಾಗಿದೆ. ಪ್ರಾಚೀನ ಕಾಲದಲ್ಲಿ ಬೌದ್ಧ, ಜೈನ ಧರ್ಮಗಳಿಗೆ ಆಶ್ರಯ ತಾಣವಾಗಿದ್ದ ಈ ಪ್ರದೇಶ ನಂತರದಲ್ಲಿ ವೈಷ್ಣವ, ಶೈವ, ವೀರಶೈವ ಧರ್ಮಗಳನ್ನು ಅನುಸರಿಸಿಕೊಂಡು ಬಂದಿದೆ. ಈ ಸ್ಥಳ ಕ್ರಿ.ಪೂ. 3ನೇ ಶತಮಾನದಷ್ಟು ಪ್ರಾಚೀನತೆ ಹೊಂದಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇಂತಹ ಭವ್ಯ ಪರಂಪರೆಯನ್ನು ಹೊಂದಿರುವ ಕೊಪ್ಪಳ ಜಿಲ್ಲೆಯು ರಾಜರ ಆಳ್ವಿಕೆಯ ಅವಧಿಯಲ್ಲಿ ಪ್ರಮುಖ ಪಟ್ಟಣವಾಗಿಯೂ ಇದ್ದಿತು.

ಕನ್ನಡದ ಮೊದಲ ಉಪಲಬ್ದ ಗ್ರಂಥವಾದ ಕವಿರಾಜಮಾರ್ಗದಲ್ಲಿ ಕೊಪ್ಪಳದ ಉಲ್ಲೇಖವಿದೆ. ಈ ಪ್ರದೇಶವನ್ನು 'ತಿರುಳ್ಗನ್ನಡ ನಾಡು' ಎಂದು ಕವಿರಾಜಮಾರ್ಗಕಾರ ಕರೆದಿದ್ದಾನೆ.

ಕಾವೇರಿಯಿಂದ ಮಾ ಗೋ।
ದಾವರಿವರವಿರ್ದ ನಾಡದಾ ಕನ್ನಡದೊಳ್।
ಭಾವಿಸಿದ ಜನಪದಂ ವಸು।
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ।
ಆದರೊಳಗಂ ಕಿಸುವೊಳಲಾ।
ವಿದಿತ ಮಹಾಕೊಪಣನಗರದಾ ಪುಲಿಗೆರೆಯಾ।
ಸದಭಿಸ್ತುತಮ ಪ್ಪೊಂಕುಂ।
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್। (1–37)

ಇಲ್ಲಿ ಕೊಪ್ಪಳವನ್ನು 'ವಿದಿತಮಹಾಕೊಪಣ' ಎಂದಿರುವುದನ್ನು ನೋಡಿದರೆ ಆ ಕಾಲಕ್ಕಾಗಲೇ ಕೊಪ್ಪಳವು ಪ್ರಸಿದ್ಧಿಯನ್ನು ಪಡೆದಿತ್ತೆಂದು ಹೇಳಬಹುದಾಗಿದೆ. ಈ ತಿರುಳ್ಗನ್ನಡ ಪ್ರದೇಶವನ್ನು ಕನ್ನಡದ ಆದಿಕವಿ ಪಂಪ ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ 'ಸಾಜಮಾದ ಪುಲಿಗೆರೆಯು ತಿರುಳ್ಗನ್ನಡದೊಳ್' ಎಂದು, ರನ್ನನು ತನ್ನ 'ಸಾಹಸ ಭೀಮ ವಿಜಯ'ದಲ್ಲಿ 'ಕನ್ನಡಮೆರಡರುನೂರರ ಕನ್ನಡವೂ ತಿರುಳ್ಗನ್ನಡಂ' ಎಂದು ಉಲ್ಲೇಖಿಸಿದ್ದಾನೆ. ಚಾವುಂಡರಾಯ ತನ್ನ 'ಚಾವುಂಡರಾಯ ಪುರಾಣ'ದಲ್ಲಿ ಕೊಪ್ಪಳವನ್ನು 'ಕೊಪಣಾದ್ರಿ' ಎಂದು ಕರೆದಿದ್ದಾನೆ. ರನ್ನ ತನ್ನ 'ಅಜಿತನಾಥ ಪುರಾಣ'ದಲ್ಲಿ 'ನೆಗಟ್ದ ಕೊಪಣಾಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ' ಎಂದು ಕೊಪ್ಪಳವನ್ನು ಉಲ್ಲೇಖಿಸಿದ್ದಾನೆ. ಹಳಗನ್ನಡ ಕವಿಗಳು ಕೊಪ್ಪಳವನ್ನು ಉಲ್ಲೇಖಿಸಿರುವುದನ್ನು ನೋಡಿದರೆ ಕೊಪ್ಪಳವು ಆ ಕಾಲಕ್ಕಾಗಲೇ ಪ್ರಸಿದ್ಧ ನಗರವಾಗಿರುವುದರ ಜೊತೆಗೆ ಜೈನಧರ್ಮದ ನೆಲೆಗೆ ಭದ್ರವಾದ ಸ್ಥಳವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಕೊಪ್ಪಳಕ್ಕೆ ಹಿಂದಿನಿಂದಲೂ ಬೇರೆ ಬೇರೆ ಹೆಸರಿನಿಂದ ಕರೆಯಲಾಗಿದೆ. ಶಾಸನದಲ್ಲಿ ಕೂಪಣ, ಕೊಪಣ, ತೀರ್ಥ ಕೊಪಣಪುರ, ಕೊಪಣಪುರವರ, ಆದಿತೀರ್ಥ, ಕೊಪ್ಪಳ, ಕೊಪಣತೀರ್ಥ, ಮಹಾತೀರ್ಥ, ಕೊಪಬಾಲ, ಮತ್ತು ಕುಪ್ಪಲ್ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. "ಕೊಪ್ಪಳ ಹೆಸರು ಶಾಸನ ಇತಿಹಾಸ, ರಾಜಕೀಯ, ಜನಪದ ಸಾಹಿತ್ಯ ಇವುಗಳಲ್ಲಿ ನಡೆದು ಬರುವಾಗ ತನ್ನ ಹೆಸರಿನಲ್ಲಿ ವಿವಿಧ ರೂಪದಲ್ಲಿ ಪರಿವರ್ತನೆಗೊಂಡಿದೆ. ಆದರೆ ಪ್ರಪ್ರಥಮದಲ್ಲಿ ಚಿತ್ರದುರ್ಗದ ಚಂದ್ರವಳ್ಳಿಯ ಶಾಸನದಲ್ಲಿ 'ಕೂಪಣಚಮೊ' ಎಂದು ಉಲ್ಲೇಖಿಸಲ್ಪಟ್ಟಿದೆ. ಆ 'ಕುಪಣ' ಈ ಕೊಪ್ಪಳವೆಂದು ಕೆಲವಿದ್ವಾಂಸರ ಅಭಿಪ್ರಾಯ."[6]

ಕ್ರಿ.ಶ.8ನೇ ಶತಮಾನದ ಬಾದಾಮಿ ಚಾಲುಕ್ಯರ ಅರಸ ವಿಜಯಾದಿತ್ಯನ ಆಳ್ವಿಕೆಯ ಕಾಲದ ಕೊಪ್ಪಳ ತಾಲೂಕಿನ ಹಲಗೇರೆ ಶಾಸನ[7]ದಲ್ಲಿ 'ಕೊಪಣ' ಎಂದು ಕರೆಯಲಾಗಿದೆ. ಕ್ರಿ.ಶ.964ರ ಉಪ್ಪಿನ ಬೆಟಗೇರಿ ಶಾಸನ[8], ಕ್ರಿ.ಶ.11–12ನೇ ಶತಮಾನದ ಕೊಪ್ಪಳ ಶಾಸನ[9], ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಯ ಬಳಿಯ ಶಾಸನ[10], ಕ್ರಿ.ಶ.975ರ ಕೊಪ್ಪಳದ ಶಾಸನ[11], ಕೊಪ್ಪಳದ 39ನೆಯ ಶಾಸನ[12], ಹಾಗೂ 52ನೆಯ ಶಾಸನ[13]ದಲ್ಲಿ ಕೊಪ್ಪಳವನ್ನು 'ಕುಪಣ' ಎಂದು ಕರೆಯಲಾಗಿದೆ. ಚುಕನಕಲ್ಲು

ಶಾಸನ[14]ದಲ್ಲಿ 'ಕೊಪಣನಾಡು' ಎಂದು ಕರೆಯಲಾಗಿದೆ. ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿದ್ದ ಶಾಸನ[15]ದಲ್ಲಿ, ಅಲ್ಲಿಯೆ ಇರುವ 16ನೆಯ ಶಾಸನ[16]ದಲ್ಲಿ ಹಾಗೂ ಅದೇ ಸ್ಥಳದ 28ನೆಯ ಶಾಸನ[17]ದಲ್ಲಿ ಕೊಪ್ಪಳವನ್ನು ಕುಪಣತೀರ್ಥ ಎಂದು ಕರೆಯಲಾಗಿದೆ.

ಹೀಗೆ ಇನ್ನೂ ಹಲವು ಶಾಸನಗಳಲ್ಲಿ ಕೊಪ್ಪಳ ನಾಡನ್ನು ಬೇರೆ ಬೇರೆ ಹೆಸರುಗಳಿಂದ ಉಲ್ಲೇಖಿಸಿರುವುದನ್ನು ನೋಡಬಹುದಾಗಿದೆ. ಬಿ.ಸಿ.ಪಾಟೀಲ್ ಅವರು ಕೊಪ್ಪಳ ಹೆಸರಿನ ಬಗೆಗೆ ಈ ಕೆಳಗಿನಂತೆ ಚರ್ಚಿಸಿದ್ದಾರೆ. "ನಿಸರ್ಗದ ಆಸರೆಯಲ್ಲಿಯೇ ತನ್ನ ಬದುಕನ್ನು ಸಾಗಿಸುತ್ತಿದ್ದ ಅಂದಿನ ಮಾನವನು ತಾನು ನೆಲೆಸಿರುವ ತಾಣಗಳಿಗೆ, ಆ ತಾಣಗಳ ನೈಸರ್ಗಿಕ ಹೆಸರಿನಿಂದಲೇ ಕರೆದಿರುವುದು ತಾಣ ಇಂದು ಊರು"[18] ಎಂದು ಹೇಳುತ್ತಾ "ಅಂತೆಯೇ ಇಲ್ಲಿನ ಕಿರಿ ಎತ್ತರದ ಗಿಡಗಂಟೆಗಳಿಂದ ಕೂಡಿದ ತಪ್ಪಲು ತಾಣದಲ್ಲಿ ಅಂದು ನೆಲಸಿದ ಮಾನವನು ತಪ್ಪಲದಲ್ಲಿರುವ ದಿವ್ಯ ಶಕ್ತಿಯಿಂದ ತನ್ನ ಬದುಕಿಗೆ ಒಳಿತಾದುದನ್ನು ಅನುಭವದಿಂದ ಅರಿತು ತಾನು ನೆಲಸಿದ ಈ ತಾಣಕ್ಕೆ 'ತಪ್ಪಲ' ಎಂದು ಕರೆದಿರುವ ಸಾಧ್ಯತೆಯಿದೆ."[19] ಇವರು ಹೇಳುವಂತೆ ತಪ್ಪಲ–ತಪ್ಪಲು–ತೊಪ್ಪಲ–ಕೊಪ್ಪಲು–ಕೊಪ್ಪಲ–ಕುಪಣ–ಕೊಪಣ–ಕೊಪ್ಪಳ ಎಂದಾಗಿದೆ ಎಂದು ಹೇಳಿದ್ದಾರೆ. ತೊಪ್ಪಲ ಇದ್ದದ್ದು ಕೊಪ್ಪಳವಾಗಲು ಈ ಕಾರಣವಿದೆ.

"Kappaears some times to have changed in to "T"....Compare also 'Vakil'a door way telugu, with the malayalam, from the some word 'Vakil' .... in other families of the languages. The inter change between 'K' and 'T'is not uncommon" ಎಂದು ರಾಬರ್ಟ್‌ಕಾಲ್ಡವೆಲ್ ಅವರು ತ–ಕ–ಆಗಿ ಪರಿವರ್ತನೆಗೊಳ್ಳುವುದನ್ನು ಹೇಳಿರುವುದನ್ನು ನೋಡಿದರೆ ತೊಪ್ಪಲವು–ಕೊಪ್ಪಲವಾಗಿರಬಹುದೆಂದು ಹೇಳಬಹುದಾಗಿದೆ. ಹೀಗೆ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟ ಈ ನಾಡನ್ನು ಇಂದು 'ಕೊಪ್ಪಳ'ಎಂದು ಕರೆಯಲಾಗುತ್ತದೆ.

ರಾಜ್ಯಾಡಳಿತ ಪ್ರಮುಖ ಪ್ರದೇಶವಾದ ಕೊಪ್ಪಳ ನಾಡಿನಲ್ಲಿ ಕರ್ನಾಟಕವನ್ನಾಳಿದ ಪ್ರಮುಖ ರಾಜಮನೆತನಗಳೆಲ್ಲವು ಇಲ್ಲಿ ಆಳ್ವಿಕೆ ಮಾಡಿರುವುದನ್ನು ಕಾಣುತ್ತೇವೆ. ಅವರ ಕಾಲದಲ್ಲಿ ಇಲ್ಲಿ ಅನೇಕ ಪ್ರದೇಶಗಳಲ್ಲಿ ಶಾಸನಗಳು ರಚನೆಗೊಂಡಿವೆ. ಆ ಶಾಸನಗಳು ಈ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ದೊರತಿವೆ. (ಅಧ್ಯಯನದ ದೃಷ್ಟಿಯಿಂದ ತಾಲೂಕುವಾರು ಶಾಸನಗಳನ್ನು ವಿಂಗಡಿಸಿ ಈ ಮುಂದಿನ ಪಟ್ಟಿಯಲ್ಲಿ ತೋರಿಸಲಾಗಿದೆ) ಕೊಪ್ಪಳ ಜಿಲ್ಲೆಯಲ್ಲಿ ಈ ವರೆಗೆ ದೊರೆತ ಶಾಸನಗಳ ಸಂಖ್ಯೆ 390.

| ಕ್ರ.ಸಂ. | ತಾಲೂಕು | ಶಾಸನಗಳ ಸಂಖ್ಯೆ |
|---|---|---|
| 1 | ಕೊಪ್ಪಳ | 174 |
| 2 | ಯಲಬುರ್ಗಾ | 72 |
| 3 | ಕುಷ್ಟಗಿ | 31 |
| 4 | ಗಂಗಾವತಿ | 113 |
| | **ಒಟ್ಟು** | **390** |

**ಭಾಷಾವಾರು ಶಾಸನಗಳು:**

ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಕನ್ನಡ ಮಾತ್ರವಲ್ಲದೆ ಸಂಸ್ಕೃತ, ಪ್ರಾಕೃತ, ತೆಲುಗು, ಸಸ್ತಲಿಟಾ ಹಾಗೂ ಪರ್ಷಿಯಾ ಭಾಷೆಯ ಶಾಸನಗಳು ದೊರೆತಿವೆ. ಈ ಶಾಸನಗಳು ವಿವಿಧ ಅರಸು ಮನೆತನಗಳಿಗೆ ಸಂಬಂಧಿಸಿವೆ. ಯಲಬುರ್ಗಾ ಹಾಗೂ ಕುಷ್ಟಗಿ ತಾಲೂಕಿನಲ್ಲಿ ಕನ್ನಡವನ್ನು ಹೊರತು ಪಡಿಸಿ ಬೇರೆ ಭಾಷೆಯ ಶಾಸನಗಳು ನಮಗೆ ದೊರೆತಿರುವುದಿಲ್ಲ. ಆದರೆ ಗಂಗಾವತಿ ಮತ್ತು ಕೊಪ್ಪಳ ತಾಲೂಕುಗಳಲ್ಲಿ ಬೇರೆ ಭಾಷೆಯ ಶಾಸನಗಳು ಸಿಗುತ್ತವೆ. ಕೊಪ್ಪಳ ತಾಲೂಕಿನ ಪ್ರಾಚೀನ ಕಾಲದ ಶಾಸನ[20] ಪ್ರಾಕೃತ ಭಾಷೆಯಲ್ಲಿದೆ. ಇದು ಮೌರ್ಯರ ಕಾಲದ್ದು. ಅದೇ ರೀತಿ ಸಂಸ್ಕೃತ ಹಾಗೂ ಪರ್ಷಿಯಾ ಭಾಷೆಯ ಶಾಸನಗಳು ಈ ತಾಲೂಕಿನಲ್ಲಿ ದೊರೆತಿವೆ. ಹಾಗೂ ಸಸ್ತಲಿಟ್ ಲಿಪಿಯ ಒಂದು ಶಾಸನವೂ ದೊರಕಿದೆ. ಗಂಗಾವತಿ ತಾಲೂಕಿನಲ್ಲಿ ಸಂಸ್ಕೃತ ಹಾಗೂ ತೆಲುಗು ಭಾಷೆಯ ಶಾಸನಗಳು ದೊರೆತಿವೆ. ಜಿಲ್ಲೆಯಲ್ಲಿ ದೊರೆತ ಭಾಷಾವಾರು ಶಾಸನಗಳ ಕೋಷ್ಟಕವನ್ನು ಈ ಮುಂದಿನಂತೆ ನೋಡಲಾಗಿದೆ.

| ಕ್ರಸಂ. | ತಾಲೂಕು | ಕನ್ನಡ | ಸಂಸ್ಕೃತ | ಪರ್ಷಿಯಾ | ಪ್ರಾಕೃತ | ತೆಲುಗು | ಸಸ್ತಲಿಟ್ | ಒಟ್ಟು |
|---|---|---|---|---|---|---|---|---|
| **1** | **ಕೊಪ್ಪಳ** | **166** | **02** | **03** | **02** | **–** | **01** | **174** |
| **2** | **ಯಲಬುರ್ಗಾ** | **72** | **–** | **–** | **–** | **–** | **–** | **72** |
| **3** | **ಕುಷ್ಟಗಿ** | **31** | **–** | **–** | **–** | **–** | **–** | **31** |
| **4** | **ಗಂಗಾವತಿ** | **108** | **02** | **–** | **–** | **03** | **–** | **113** |
| | **ಒಟ್ಟು** | **377** | **04** | **03** | **02** | **03** | **01** | **390** |

ಕೊಪ್ಪಳ ಜಿಲ್ಲೆಯಲ್ಲಿ ಮೌರ್ಯರಿಂದ ಹಿಡಿದು ವಿಜಯನಗರ ದೋತ್ತರದವರೆಗೆ ಹಲವು ಬಗೆಯ ಶಾಸನಗಳು ದೊರೆತಿವೆ. ಈ ಶಾಸನಗಳ ಆಧಾರದಿಂದ ಈ ಜಿಲ್ಲೆಯಲ್ಲಿನ ರಾಜಮನೆತನಗಳ ಆಳ್ವಿಕೆಯ ವಿವರವನ್ನು ತಿಳಿಯಬಹುದಾಗಿದೆ. ಈಗ

ದೊರೆತಿರುವ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದ ಶಾಸನ ಅಶೋಕನ ಕಾಲದ್ದಾಗಿದೆ. ನಂತರದಲ್ಲಿ ವಿವಿಧ ಅರಸು ಮನೆತನಗಳಿಗೆ ಸಂಬಂಧಿಸಿದ ಶಾಸನಗಳು ದೊರೆತಿವೆ. ಅವುಗಳ ವಿವರವನ್ನು ಈ ಕೆಳಗಿನಂತೆ ಗುರುತಿಸಿಕೊಳ್ಳಬಹುದಾಗಿದೆ.

ಈ ಮುಂದಿನ ಕೋಷ್ಟಕವನ್ನು ಗಮನಿಸಿದಾಗ ಕೊಪ್ಪಳದ ಪ್ರದೇಶದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಿಗೆ ಅಗ್ರಸ್ಥಾನ. ನಂತರದ ಸ್ಥಾನ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಈ ಶಾಸನಗಳಿಂದ ನಮಗೆ ಅಂದಿನ ರಾಜರ ಆಳ್ವಿಕೆಯ ಕಾಲಾವಧಿಯಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿ–ಗತಿಗಳ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗುತ್ತವೆ. ಒಟ್ಟು ಹದಿನೇಳು ಪ್ರಮುಖ ರಾಜ ಮನೆತನಗಳ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು ಎನ್ನುವುದನ್ನು ಈ ಶಾಸನಗಳ ಆಧಾರದಿಂದ ತಿಳಿಯುತ್ತ. ಜಿಲ್ಲೆಯ ಒಟ್ಟು ಶಾಸನಗಳನ್ನು ಅವಲೋಕಿಸಿದಾಗ ಕೊಪ್ಪಳ ತಾಲೂಕಿನಲ್ಲಿ ಅಧಿಕ ಶಾಸನಗಳು ದೊರೆಯುತ್ತಿದ್ದನ್ನು ಗುರುತಿಸಬಹುದಾಗಿದೆ. ಅಂದರೆ ಕೊಪ್ಪಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಅಂದಿನ ಕಾಲದಲ್ಲಿ ಹೆಚ್ಚು ಪ್ರಚಾರದಲ್ಲಿದ್ದವು ಎಂದು ಊಹಿಸಬಹುದು. ಕೊಪ್ಪಳ ಜಿಲ್ಲೆಯಲ್ಲಿ ಇತಿಹಾಸ ಪೂರ್ವಕಾಲದ ಅವಶೇಷಗಳು ದೊರಕಿದ್ದು ಕೊಪ್ಪಳದ ಬಳಿಯ ಮಳೆ ಮಲ್ಲೇಶ್ವರ ಗುಡ್ಡ ಹಾಗೂ ಹಿರೇಬೆಣಕಲ್ ಬೆಟ್ಟದ ಮೇಲೆ ಬೃಹತ್ ಶಿಲಾಯುಗದ ಕಲ್ಲುಗೋರಿಗಳು ದೊರೆತಿವೆ. ಈ ಇತಿಹಾಸ ಪೂರ್ವಕಾಲದ ಅವಶೇಷಗಳ ಹೊರತಾಗಿ ಮೌರ್ಯರ ಕಾಲದಿಂದ ಹಿಡಿದು ಪಾಳೆಗಾರರ ಕಾಲದವರೆಗೆ ಶಿಲಾ ಶಾಸನಗಳು ದೊರೆತಿರುವುದನ್ನು ಗುರುತಿಸಬಹುದಾಗಿದೆ.

## ರಾಜಮನೆತನಗಳ ತಾಲೂಕವಾರು ಶಾಸನಗಳು

| ಕ್ರ.ಸಂ | ರಾಜಮನೆತನಗಳು | ಕೊಪ್ಪಳ | ಯಲಬುರ್ಗಾ | ಕುಷ್ಟಗಿ | ಗಂಗಾವತಿ | ಒಟ್ಟು |
|---|---|---|---|---|---|---|
| 1 | ಮೌರ್ಯರು | 02 | – | – | – | 02 |
| 2 | ಬಾದಾಮಿಚಾಲುಕ್ಯರು | 01 | – | – | – | 01 |
| 3 | ರಾಷ್ಟ್ರಕೂಟರು | 04 | 01 | – | 01 | 06 |
| 4 | ಗಂಗರು | 12 | 03 | – | – | 15 |
| 5 | ಕಲ್ಯಾಣ ಚಾಲುಕ್ಯರು | 09 | 19 | 06 | 03 | 37 |
| 6 | ನೊಳಂಬರು | 03 | – | – | – | 03 |
| 7 | ಕಳಚೂರಿಗಳು | 02 | 03 | – | – | 05 |
| 8 | ಹೊಯ್ಸಳರು | 01 | – | – | – | 01 |
| 9 | ಯಾದವರು | 01 | 04 | – | – | 05 |
| 10 | ಹೊಸಮಲೆ ಅರಸರು | 01 | 01 | – | – | 02 |
| 11 | ವಿಜಯನಗರ ಅರಸರು | 06 | 03 | 02 | 20 | 31 |
| 12 | ಕನಕಗಿರಿ ಪಾಳೆಗಾರರು | 01 | – | – | 09 | 10 |
| 13 | ಮರಾಠರು | – | – | – | 01 | 01 |
| 14 | ಕೋಗಳಿಯ ಕದಂಬರು | 01 | – | – | – | 01 |
| 15 | ಕರಡಿಕಲ್ಲ ಕದಂಬರು | – | – | 01 | – | 01 |
| 16 | ಸುರಪುರದ ದೊರೆಗಳು | – | – | – | 01 | 01 |
| 17 | ಆನೆಗೊಂದಿ ಅರಸರು | – | – | – | 01 | 01 |
| | ಒಟ್ಟು | 44 | 34 | 09 | 36 | 123 |

## ಜಿಲ್ಲೆಯ ಲೋಹ ಮತ್ತು ಲೋಹೇತರ ಶಾಸನಗಳು

| ಕ್ರ.ಸಂ. | ತಾಲೂಕುಗಳು | ಶಿಲಾಶಾಸನ | ತಾಮ್ರಶಾಸನ | ಬೆಳ್ಳಿಶಾಸನ | ಹಿತ್ತಾಳೆ | ಒಟ್ಟು |
|---|---|---|---|---|---|---|
| 1 | ಕೊಪ್ಪಳ | 172 | 02 | – | – | 174 |
| 2 | ಯಲಬುರ್ಗಾ | 69 | 03 | – | – | 72 |
| 3 | ಕುಷ್ಟಗಿ | 31 | – | – | – | 31 |
| 4 | ಗಂಗಾವತಿ | 109 | 02 | 01 | 01 | 113 |
| | ಒಟ್ಟು | 381 | 07 | 01 | 01 | 390 |

**ಶಾಸನಗಳಿಗೆ ಬಳಸಿದ ವಸ್ತು:**

ಇಲ್ಲಿ ಒಟ್ಟಾರೆ ಶಾಸನಗಳಿಗೆ ಬಳಸಿದ ವಸ್ತುಗಳ ಬಗ್ಗೆ ಚರ್ಚಿಸದೆ ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಬರೆಯಲು ಬಳಸಿದ ವಸ್ತುಗಳ ಬಗ್ಗೆ ಮಾತ್ರ ಚರ್ಚೆ

ಸಲಾಗಿದೆ. ಈ ಜಿಲ್ಲೆಯ ಶಾಸನಗಳ ರಚನೆಗೆ ಬಳಸಿದ ವಸ್ತುಗಳನ್ನು ಲೋಹ ವಸ್ತುಗಳು ಹಾಗೂ ಲೋಹೇತರ ವಸ್ತುಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ.

**ಲೋಹವಸ್ತುಗಳು:**

ಸಾಮಾನ್ಯವಾಗಿ ಶಾಸನಗಳಿಗೆ ಲೋಹಗಳನ್ನು ಬಳಸಿಕೊಳ್ಳುವಾಗ ಅಲ್ಲಿ ಕಬ್ಬಿಣ, ಚಿನ್ನ, ಬೆಳ್ಳಿ, ಕಂಚು, ಹಿತ್ತಾಳೆ, ಮತ್ತು ತಾಮ್ರದ ಲೋಹಗಳನ್ನು ಬಳಸಲಾಗುತ್ತದೆ. ಈ ರೀತಿಯ ಲೋಹಗಳು ಬಳಕೆಯಾದ ಶಾಸನಗಳು ನಮ್ಮ ದೇಶದಲ್ಲಿ ಕಾಣಸಿಗುತ್ತವೆ. ಆದರೆ ಕೊಪ್ಪಳ ಜಿಲ್ಲೆಯಲ್ಲಿ ಇದುವರೆಗೆ ದೊರೆತ ಲೋಹದ ಶಾಸನಗಳಲ್ಲಿ ನಮಗೆ ದೊರೆತಿರುವುದು ತಾಮ್ರ, ಬೆಳ್ಳಿ ಹಾಗೂ ಹಿತ್ತಾಳೆಯ ಲೋಹಗಳ ಮೇಲೆ ಬರೆದ ಶಾಸನಗಳು ಮಾತ್ರ ದೊರೆತಿವೆ.

ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಏಳು ತಾಮ್ರ ಶಾಸನಗಳು, ಒಂದು ಬೆಳ್ಳಿ ಶಾಸನ ಹಾಗೂ ಒಂದು ಹಿತ್ತಾಳೆ ಹೀಗೆ ಒಟ್ಟು ಒಂಬತ್ತು ಲೋಹ ಶಾಸನಗಳು ದೊರೆತಿವೆ. ಕೊಪ್ಪಳ ತಾಲೂಕಿನಲ್ಲಿ ಚಿಕ್ಕಸಿಂಧೋಗಿ[21]ಮತ್ತು ಗಿಣಿಗೇರಿ[22] ಗ್ರಾಮಗಳಲ್ಲಿ ತಾಮ್ರ ಶಾಸನಗಳು ದೊರಕಿವೆ. ಯಲಬುರ್ಗಾ ತಾಲೂಕಿನ ಕುಕನೂರಿ[23]ನಲ್ಲಿ ಎರಡು ಹಾಗೂ ಇಟಗಿ[24]ಯಲ್ಲಿ ಒಂದು ತಾಮ್ರ ಶಾಸನ ದೊರಕಿದೆ. ಗಂಗಾವತಿ ತಾಲೂಕಿನಲ್ಲಿ ಆನೆಗೊಂದಿ[25]ಯ ರಾಜ ವಂಶೀಯ ಅಚ್ಯುತ ದೇವರಾಯನ ಬೆಳ್ಳಿ ಶಾಸನ ದೊರೆತಿರುವುದು ವಿಶೇಷವಾಗಿದೆ. ಇದೇ ಗ್ರಾಮದ ಅಂಬಿಗರ ದೊಡ್ಡತಾಯಣ್ಣನ ಬಗ್ಗೆ ಒಂದು ತಾಮ್ರ ಹಾಗೂ ಒಂದು ಹಿತ್ತಾಳೆ ಶಾಸನಗಳು ಪತ್ತೆಯಾಗಿವೆ. ಆನೆಗೊಂದಿ ಶಾಸನವು[26] ಮರಾಠರ ಅರಸ ಶಿವಾಜಿಯ ಉಲ್ಲೇಖವನ್ನು ಒಳಗೊಂಡಿದೆ. ಇದರಿಂದ ತಿಳಿದು ಬರುವುದೇನೆಂದರೆ ಶಿವಾಜಿಯು ಕ್ರಿ.ಶ.1657ರಲ್ಲಿ ಹಂಪೆಗೆ ಭೇಟಿ ನೀಡಿರಬೇಕು ಎನಿಸುತ್ತದೆ.

**ಲೋಹೇತರ ವಸ್ತುಗಳು:**

ಬಂಡೆಗಳ ಮೇಲೆ, ಸ್ಥಂಭಗಳ ಮೇಲೆ, ವಿಗ್ರಹದ ಮೇಲೆ, ದೇವಾಲಯ-ಮಠಗಳ ಮೇಲೆ, ಇಟ್ಟಿಗೆಗಳ ಮೇಲೆ, ಸ್ಫಟಿಕದ ಮೇಲೆ,[27] ವಿಗ್ರಹದ ಮೇಲೆ, ಲಿಂಗಪೀಠದ ಮೇಲೆ ಬರೆದಿರುವ ಶಾಸನಗಳು ದೊರೆತಿರುವುದನ್ನು ನೋಡಬಹುದಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ದೊರೆತಿರುವುದು ಶಿಲಾ ಶಾಸನಗಳು. ಈ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಮೌರ್ಯರ ಎರಡು ಶಾಸನಗಳು ಅತೀ ಪ್ರಾಚೀನವಾದ ಶಾಸನಗಳಾಗಿವೆ. ಕೊಪ್ಪಳದ ಗವಿಮಠದ ಸಮೀಪದ ಬಂಡೆಯೊಂದರ ಮೇಲೆ[28] ಹಾಗೂ ಪಾಲ್ಕಿಗುಂಡಿನ ಬಂಡೆಯ ಮೇಲೆ[29] ಈ ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ಅಶೋಕನು ತನ್ನ ಸಾಮ್ರಾಜ್ಯದ ಜನರು ಆಚರಿಸಬೇಕಾದ ಧರ್ಮವನ್ನು ಕುರಿತು ಹೇಳಿದ್ದನ್ನು ವಿವರಿಸಲಾಗಿದೆ. ಮೌರ್ಯರ ನಂತರ ಈ ಜಿಲ್ಲೆಯಲ್ಲಿ ದೊರೆಯುವ ಶಾಸನಗಳು ಬಾದಾಮಿ ಚಾಲುಕ್ಯರ ಕಾಲದವುಗಳು. ಈ ಶಾಸನಗಳು ಕೊಪ್ಪಳ ಜಿಲ್ಲೆಯ ಹಲಗೇರಿ, ಇಟಗಿ ಹಾಗೂ

ಕುಕನೂರಿನಲ್ಲಿ ದೊರೆತಿವೆ. ಇವರ ನಂತರ ಈ ಪ್ರದೇಶವನ್ನು ರಾಷ್ಟ್ರಕೂಟ ವಂಶದವರು ಆಳ್ವಿಕೆ ನಡೆಸಿದಂತೆ ಇಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತದೆ. ಕೊಪ್ಪಳ, ಇಟಗಿ, ಅರಕೇರಿ, ಕುಕನೂರು, ಅಳವಂಡಿ, ಬೆಟಗೇರಿಗಳಲ್ಲಿ ದೊರೆತ ಶಿಲಾ ಶಾಸನಗಳಿಂದ ಗಂಗರ ಆಳ್ವಿಕೆಯ ವಿವರಗಳು ದೊರೆಯುತ್ತವೆ. ಇವರ ತರುವಾಯ ಕಲ್ಯಾಣದ ಚಾಲುಕ್ಯರು ಈ ಪ್ರದೇಶವನ್ನು ಆಳಿದ್ದಾರೆ. ಕೊಪ್ಪಳದ ಕ್ರಿ.ಶ.987ರ ಶಾಸನ, ತಳಕಲ್ಲಿನ ಕ್ರಿ.ಶ.991ರ ಶಾಸನ, ಹಿರೇಮನ್ನಾಪುರದ ಕ್ರಿ.ಶ.997ರ ಶಾಸನ, ಬಳಗೇರಿ ಮತ್ತು ಕಲ್ಲೂರು ಮುಂತಾದ ಶಾಸನಗಳು ಇವರು ಆಡಳಿತ ನಡೆಸಿದ್ದಕ್ಕೆ ಪ್ರತೀಕಗಳಾಗಿವೆ. ಗಂಗಾವತಿ ತಾಲೂಕಿನ ವಿಪ್ರಶಾಸನ[30]ದಿಂದ ಈ ಪ್ರದೇಶವು ನೊಳಂಬರ ಆಡಳಿತಕ್ಕೆ ಒಳಪಟ್ಟಿತ್ತು ಎನ್ನುವುದನ್ನು ತಿಳಿದುಕೊಳ್ಳಬಹುದಾಗಿದೆ. ಕಳಚೂರಿಗಳ ಶಾಸನವು ಜಿಲ್ಲೆಯ ಕುಕನೂರು, ಹಲಗೇರಿ, ಕವಲೂರು, ಪುರ, ಅಳವಂಡಿ, ಇಟಗಿ ಗ್ರಾಮಗಳಲ್ಲಿ ದೊರೆತಿವೆ. ಹೊಸಮಲೆದುರ್ಗದ ಅರಸರ ಶಾಸನಗಳು ಯಲಬುರ್ಗಾ ಮತ್ತು ಕೊಪ್ಪಳ ತಾಲೂಕುಗಳಲ್ಲಿಯೂ ದೊರೆತಿವೆ. ವಿಜಯನಗರದ ಅರಸರನ್ನು ಕುರಿತಂತೆ ಗಂಗಾವತಿ, ಕೊಪ್ಪಳ ಹಾಗೂ ಯಲಬುರ್ಗಾ ತಾಲೂಕುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಶಾಸನಗಳು ದೊರೆತಿರುವುದನ್ನು ಗುರುತಿಸಬಹುದಾಗಿದೆ.

ಬಂಡೆಗಳ ಮೇಲಿನ ಶಾಸನಗಳಲ್ಲದೆ ಶಿವಲಿಂಗ ಅಥವಾ ವಿಗ್ರಹದ ಮೇಲೆ ಜಿನ ಮೂರ್ತಿಗಳ ಪೀಠದಲ್ಲಿ ಇರುವ ಶಾಸನಗಳು ದೊರೆತಿವೆ. ಕೊಪ್ಪಳದ ಬಸದಿಯಲ್ಲಿರುವ ಭಗ್ನ ಪ್ರತಿಮೆಯ ಪೀಠದಲ್ಲಿ[31] ಬರೆದ ಶಾಸನ, ಅದೇ ಬಸದಿಯಲ್ಲಿ ಇನ್ನೊಂದು ಜಿನಮೂರ್ತಿಯ ಪೀಠದಲ್ಲಿ ಬರೆದ ಶಾಸನ[32], ಅದೇ ಬಸದಿಯ ಜಿನ ಬಿಂಬದ ಪೀಠದಲ್ಲಿರುವ ಶಾಸನ[33], ಸಾಲಾರ್ ಜಂಗ್ ಮ್ಯೂಜಿಯಂನಲ್ಲಿರುವ ಚಾವೀಸ್ ತೀರ್ಥಂಕರ ಪ್ರತಿಮೆಯ ಅಡಿಯಲ್ಲಿನ ಶಾಸನ[34], ಅದೇ ಮ್ಯೂಜಿಯಂನ ಇನ್ನೊಂದು ಜೈನ ತೀರ್ಥಂಕರ ಬಿಂಬದ ಕೆಳಗಿರುವ ಶಾಸನ[35]. ಹೀಗೆ ಕೆಲವು ಶಾಸನಗಳು ವಿಗ್ರಹದ ಪೀಠದ ಮೇಲೆ ಬರೆದ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಇವುಗಳಲ್ಲದೆ ಆಂಜನೇಯನ ಶಿಲ್ಪದಲ್ಲಿ[36], ಲಿಂಗಮುದ್ರೆ ಕಲ್ಲಿನಲ್ಲಿ[37], ಏಳು ಹೆಡೆ ನಾಗಶಿಲ್ಪ ಬಳಿಯ ಕಲ್ಲಿನಲ್ಲಿ[38] ಬರೆದ ಶಾಸನಗಳು ಕೂಡ ಈ ಜಿಲ್ಲೆಯಲ್ಲಿ ನಮಗೆ ಕಾಣಸಿಗುತ್ತವೆ. ಕನಕಗಿರಿಯ[39] ಶಂಕರಪ್ಪಯ್ಯನ ಮಠದ ಅಧಿಷ್ಠಾನದ ಮೇಲೆ ಬರೆದ ಶಾಸನ ದೊರೆತಿದ್ದು ಇಲ್ಲಿ ಗಮನಾರ್ಹವಾದ ವಿಷಯವಾಗಿದೆ.

ಹೀಗೆ ಕೊಪ್ಪಳ ಜಿಲ್ಲೆಯಲ್ಲಿ ವಿಭಿನ್ನ ಮಾದರಿಯ ಶಾಸನಗಳು ದೊರೆತಿದ್ದು ಈ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿವೆ ಎಂದು ಹೇಳಿದರೆ ತಪ್ಪಾಗಲಾರದು. ಇವುಗಳಲ್ಲದೆ ಕಂಬದ ಮೇಲೆ ಬರೆದ ಶಾಸನಗಳು ಕೂಡ ದೊರೆತಿವೆ. ಕೊಪ್ಪಳ ತಾಲೂಕಿನಲ್ಲಿ ಕಂಬದ ಮೇಲೆ ಬರೆದ ಐದು ಶಾಸನಗಳು, ಯಲಬುರ್ಗಾ ತಾಲೂಕಿನಲ್ಲಿ ಏಳು ಶಾಸನಗಳು ದೊರೆತಿವೆ. ಅಲ್ಲದೆ ದೇವಾಲಯದ ತಲಬಾಗಿಲ ಮೇಲ್ಭಾಗದಲ್ಲಿ ಬರೆದ ಕೆಲವು ಶಾಸನಗಳು ಕೂಡ ಸಿಕ್ಕಿವೆ. ಇವು ಯಲಬುರ್ಗಾ ತಾಲೂಕಿನಲ್ಲಿ ಎರಡು ಹಾಗೂ ಗಂಗಾವತಿ ತಾಲೂಕಿನಲ್ಲಿ ಒಂದು ಶಾಸನ ದೊರೆತಿದೆ. ಆನೆಗೊಂದಿ ಗ್ರಾಮದ ಗರುಡಗಂಬದ ಮೇಲೆ ಬರದ ಶಾಸನ[40]ವೊಂದು ಸಿಕ್ಕಿರುವುದು ವಿಶೇಷವಾಗಿದೆ.

**ದಾನಶಾಸನಗಳು :**

ಶಾಸನಗಳಲ್ಲಿ ದಾನಶಾಸನಗಳ ಸಂಖ್ಯೆಯೇ ಅಧಿಕವಾಗಿದೆ. ದಾನ ಶಾಸನಗಳಲ್ಲಿ ರಾಜರು ನೀಡಿದ ದಾನವನ್ನು ಕುರಿತು ಹೇಳುವ ಶಾಸನಗಳು ಬಹು ಸಂಖ್ಯಾತವಾದವುಗಳಾಗಿವೆ. ತಾವು ನೀಡಿದ ದಾನವು ಚಿರಕಾಲ ಉಳಿಯಬೇಕು, ತಮ್ಮ ಹೆಸರು ಸೂರ್ಯ-ಚಂದ್ರರಿರುವವರೆಗೆ ಇರಬೇಕು ಎಂಬ ಉದ್ದೇಶದಿಂದ ಇಂತಹ ದಾನ ಶಾಸನಗಳನ್ನು ಬರೆಸುತ್ತಿದ್ದರು. ದೇವಾಲಯಗಳಿಗೆ, ದೇವಾಲಯದ ಅರ್ಚಕರಿಗೆ, ಸಂಘ-ಸಂಸ್ಥೆಗಳಿಗೆ, ಖಾಸಗಿ ವ್ಯಕ್ತಿಗಳಿಗೆ ನೀಡಿದ ದಾನದ ಉಲ್ಲೇಖಗಳು ಈ ಶಾಸನಗಳಲ್ಲಿ ಹೇಳಲಾಗಿರುತ್ತದೆ. ದಾನ ನೀಡುವ ಪದ್ಧತಿ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಪುಣ್ಯ ಪ್ರಾಪ್ತಿಯಾಗುತ್ತದೆಂದು ದಾನ ಮಾಡುವುದು, ಸಾರ್ವಜನಿಕರಿಗೆ ಅನುಕೂಲ ವಾಗಲೆಂದು ದಾನ ನೀಡುವುದು ಹೀಗೆ ಇನ್ನೂ ಹಲವಾರು ಲೋಕೋಪಯೋಗಿ ಕಾರ್ಯಗಳಿಗಾಗಿ ದಾನ ನೀಡಿದ್ದರ ಕುರಿತು ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ರಾಜನು ತನಗೆ ಪ್ರಿಯವಾದ ವ್ಯಕ್ತಿಗಳಿಗೆ ಕೆಲವು ಗ್ರಾಮಗಳನ್ನು ದಾನವಾಗಿ ನೀಡುವ ವಾಡಿಕೆ ಕೂಡ ನಮ್ಮಲ್ಲಿ ಇದೆ. ಇಂತಹ ದಾನಗಳನ್ನು ನೀಡಿದಾಗ ದಾನ ನೀಡಿದವರು ತಮ್ಮ ಹೆಸರು, ತಮ್ಮ ವಂಶದ ಹೆಸರನ್ನು ಬರೆಯಿಸಿ ಅದನ್ನು ಶಾಶ್ವತಗೊಳಿಸಬೇಕೆಂಬ ಉದ್ದೇಶದಿಂದ ಶಾಸನಗಳನ್ನು ಬರೆಸುತ್ತಿದ್ದರು.

ಕೊಪ್ಪಳ ಜಿಲ್ಲೆಯಲ್ಲಿ ದಾನ ಶಾಸನಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಿರುವುದನ್ನು ನಾವು ನೋಡಬಹುದಾಗಿದೆ. ಕೊಪ್ಪಳ ತಾಲೂಕಿನಲ್ಲಿ ಒಟ್ಟು 22 ಶಾಸನಗಳು ದಾನದ ವಿಷಯಕ್ಕೆ ಸಂಬಂಧಿಸಿದವುಗಳಾಗಿವೆ. ಈ ದಾನ ಶಾಸನಗಳಲ್ಲಿ ಭೂದಾನ, ಗ್ರಾಮಗಳ ದಾನ, ತೋಟವನ್ನು ದಾನವಾಗಿ ಕೊಟ್ಟದ್ದು, ಕೆರೆ ಜೀರ್ಣೋದ್ಧಾರಕ್ಕೆ ದಾನ ಬಿಟ್ಟ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಯಲಬುರ್ಗಾ ತಾಲೂಕಿನಲ್ಲಿ 38 ದಾನ ಶಾಸನಗಳನ್ನು ಗುರುತಿಸಲಾಗಿದ್ದು, ಈ ಶಾಸನಗಳಲ್ಲಿ ದೇವಸ್ಥಾನದ ಅಂಗಭೋಗಕ್ಕೆ-ರಂಗಭೋಗಕ್ಕೆ, ಧೂಪ-ದೀಪಕ್ಕೆ ದಾನ ನೀಡಿದ ವಿವರಗಳು, ತಮಗೆ ಪುಣ್ಯ ಲಭಿಸಲೆಂದು ದೇವರಿಗೆ ಗ್ರಾಮಗಳ ದಾನಮಾಡಿದ ವಿವರಗಳನ್ನು, ಇತರೆ ಧಾರ್ಮಿಕ ಕಾರ್ಯಗಳಿಗೆ ದಾನ ನೀಡಿದ ವಿವರಗಳನ್ನು ಉಲ್ಲೇಖಿಸಲಾಗಿದೆ. ಕುಷ್ಟಗಿ ತಾಲೂಕಿನಲ್ಲಿ 16 ದಾನ ಶಾಸನಗಳು ದೊರಕಿವೆ. ಇವುಗಳಲ್ಲಿ ಪಂಡಿತರಿಗೆ, ದೇವರ ಅಂಗಭೋಗಕ್ಕೆ ಪುಣ್ಯವಾಗಲೆಂದು ದೇವಸ್ಥಾನಕ್ಕೆ ಎಣ್ಣೆ ದಾನವನ್ನು ನೀಡಿದ್ದನ್ನು ಕಾಣುತ್ತೇವೆ. ಮುಖ್ಯವಾಗಿ ಭೂದಾನ ಮಾಡಿದ ಉಲ್ಲೇಖಗಳು ಕಂಡು ಬರುತ್ತವೆ. ಗಂಗಾವತಿ ತಾಲೂಕಿನಲ್ಲಿ ದಾನದ ವಿಷಯವನ್ನು ಪ್ರಸ್ತಾಪಿಸುವ ಶಾಸನಗಳ ಸಂಖ್ಯೆ 43. ಇಲ್ಲಿರುವ ಒಂದು ವಿಶಿಷ್ಟವಾದ ಶಾಸನವೆಂದರೆ ಮರಾಠಿ ಅರಸ ಶಿವಾಜಿಯ ಕಾಲದ್ದು. ಇದು ಬೆಳ್ಳಿಯ ಲೋಹದ ಶಾಸನವಾಗಿದ್ದು ಕೆಲವು ಗ್ರಾಮಗಳನ್ನು ದಾನವಾಗಿ ನೀಡಿದ್ದನ್ನು ಹೇಳುತ್ತದೆ.

ದಾನಶಾಸನದಲ್ಲಿ ಹೆಚ್ಚಿನ ಪ್ರಮಾಣದ ಶಾಸನಗಳು ಶಿಲಾಶಾಸನ ಗಳಾಗಿರುವುದನ್ನು ಕಾಣಬಹುದಾಗಿದೆ. ಈ ಶಾಸನಗಳಲ್ಲಿ ದಾನವನ್ನು ಕಾಪಾಡಿದವರಿಗೆ

ದೊರಕುವ ಶ್ರೇಯಸ್ಸು, ದಾನವನ್ನು ಅಪಹರಿಸಿದವರಿಗೆ ಒದಗುವ ಪಾಪಗಳನ್ನು ಕುರಿತು ಹೇಳಲಾಗಿರುತ್ತದೆ. ಕೊಪ್ಪಳ ಜಿಲ್ಲೆಯ ದಾನ ಶಾಸನಗಳಲ್ಲಿ ಪುಣ್ಯ ಲಭಿಸುವ ಆಶಯ ಹೊಂದಿರುವ ವಿಶಿಷ್ಟ ಬಗೆಯ ದಾನ ನೀಡಿರುವ ಶಾಸನಗಳನ್ನು ಹೆಚ್ಚಾಗಿ ಕಾಣುತ್ತೇವೆ. ದಾನ ಶಾಸನಗಳಿಂದ ಆ ಪ್ರದೇಶದ ಅಂದಿನ ಆರ್ಥಿಕ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಮಹತ್ವವನ್ನು ನಾವು ಅರಿತುಕೊಳ್ಳಬಹುದಾಗಿದೆ.

### ವೀರಗಲ್ಲುಗಳು:

ರಾಜ್ಯ ರಕ್ಷಣೆಗಾಗಿ ಹೋರಾಡಿ ಮರಣ ಹೊಂದಿದ ವೀರರ ಸ್ಮರಣಾರ್ಥವಾಗಿ ನಿಲ್ಲಿಸಿದ ಕಲ್ಲುಗಳನ್ನು ವೀರಗಲ್ಲುಗಳೆಂದು ಕರೆಯಲಾಗುತ್ತದೆ. ವೀರನು ಮರಣ ಹೊಂದಿದಾಗ ಆತ್ಮಾಹುತಿ ಮಾಡಿಕೊಂಡವರ ಸ್ಮರಣಾರ್ಥ, ಊರಿನ ಹೆಣ್ಣುಮಕ್ಕಳ ಮಾನ ಕಾಪಾಡುವಾಗ ಮಡಿದವರ ಸ್ಮರಣಾರ್ಥ ವೀರಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು. ಇಂತಹ ವೀರಗಲ್ಲುಗಳಲ್ಲಿ ವೀರನು ಹೋರಾಡುತ್ತಿರುವ ಚಿತ್ರ, ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಕೊಂಡೊಯ್ಯುತ್ತಿರುವ ಚಿತ್ರ. ವೀರ ಲಿಂಗಧ್ಯಾನದಲ್ಲಿ ಮಗ್ನನಾಗಿರುವ ಚಿತ್ರಗಳಿರುತ್ತವೆ. ಕೆಲವು ವೀರಗಲ್ಲುಗಳು ಲಿಪಿ ಸಹಿತವಾಗಿದ್ದರೆ ಕೆಲವು ವೀರಗಲ್ಲುಗಳು ಲಿಪಿರಹಿತವಾಗಿರುತ್ತವೆ. ನಮಗೆ ಲಿಪಿರಹಿತ ವೀರಗಲ್ಲುಗಳು ಅಧಿಕ ಪ್ರಮಾಣದಲ್ಲಿ ದೊರಕುತ್ತವೆ. ಈ ವೀರಗಲ್ಲುಗಳು ರಾಜರ ಕಾಲದ ವೀರರ ಪರಾಕ್ರಮದ ಸಂಕೇತವಾಗಿ ಇಂದು ನಮಗೆ ಗೋಚರಿಸುತ್ತವೆ.

ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಮಗೆ ವೀರಗಲ್ಲುಗಳು ದೊರೆಯುತ್ತವೆ. ಈ ವೀರಗಲ್ಲುಗಳು ಮೇಲೆ ಹೇಳಿದ ಲಕ್ಷಣಗಳನ್ನು ಒಳಗೊಂಡಿವೆ. ಲಿಪಿ ರಹಿತ ವೀರಗಲ್ಲುಗಳ ಜೊತೆಗೆ ಲಿಪಿ ಸಹಿತ ವೀರಗಲ್ಲುಗಳು ದೊರೆತಿರುವುದು ವಿಶೇಷ. ಲಿಪಿಯಿರುವ ವೀರಗಲ್ಲುಗಳಲ್ಲಿ ಸತ್ತ ವೀರನ ವಿವರ, ವೀರಗಲ್ಲನ್ನು ನಡೆಸಿದವರ ವಿವರ, ಸತ್ತ ವೀರನಿಗೆ ದಾನ ನೀಡಿರುವ[41] ಈ ಶಾಸನಗಳನ್ನು ಹಾಳುಮಾಡಿದವರಿಗೆ ಒದಗುವ ಪಾಪಗಳ ಬಗ್ಗೆ ವಿವರಿಸಿ ಹೇಳಲಾಗಿದೆ. ಈ ಜಿಲ್ಲೆಯಲ್ಲಿ ಕೆಲ ಲಿಪಿಸಹಿತ ವೀರಗಲ್ಲುಗಳೂ ದೊರೆತಿವೆ.

### ನಿಷದಿಗಲ್ಲು:

ಜೈನ ಸನ್ಯಾಸಿಗಳು ಮತ್ತು ಗೃಹಸ್ಥರು ಸಲ್ಲೇಖನ ವ್ರತ ಅಥವಾ ಸನ್ಯಾಸನ ವಿಧಿಯಿಂದ ಮರಣ ಹೊಂದಿದಾಗ ಅವರ ಸ್ಮರಣಾರ್ಥವಾಗಿ ನಿಲ್ಲಿಸಿರುವ ಕಲ್ಲುಗಳೇ ನಿಷದಿಗಲ್ಲುಗಳು. ಈ ನಿಷಿದಿಗಳಿಗೆ ನಿಶಧಿಗಲ್ಲು, ನಿಶದಿಗಲ್ಲು, ನಿಶಧಿಗೆ ಮುಂತಾಗಿ ಕರೆಯುತ್ತಾರೆ. ಜೈನರಲ್ಲಿ ವೃದ್ಧಾಪ್ಯ ಹೊಂದಿದಾಗ, ಅಪರಿಹಾರ್ಯವಾಗದ ರೋಗಗಳಿಗೆ ತುತ್ತಾದಾಗ, ಜೀವನದಲ್ಲಿ ವಿರಕ್ತಿ ಉಂಟಾದಾಗ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಪ್ರಾಣ ಬಿಡುತ್ತಾರೆ. ಇಂತವರ ಸ್ಮರಣೆಗಾಗಿ ನಿಷದಿಗಲ್ಲುಗಳನ್ನು ನಿಲ್ಲಿಸುತ್ತಾರೆ. ಕಲ್ಲುಗಳಲ್ಲಿ ಸಲ್ಲೇಖನ ವ್ರತವನ್ನು ಆಚರಿಸುವ ವ್ಯಕ್ತಿ ಗುರುವಿನ ಪಾದದ ಬಳಿ ಕುಳಿತು ಧರ್ಮ ಶ್ರವಣ ಮಾಡುತ್ತಿರುವ ಚಿತ್ರಗಳು ಇರುತ್ತವೆ. ಇಂತಹ ನಿಷದಿಗಲ್ಲು ಕೊಪ್ಪಳ ಜಿಲ್ಲೆಯಲ್ಲಿ

ಇದುವರೆಗೂ ಒಂದು ಮಾತ್ರ 'ಹಿರೆಸಿಂದೋಗಿ'[42]ಗ್ರಾಮದಲ್ಲಿ ದೊರೆತಿದೆ. ಈ ನಿಷೇದಾಣೆಯಲ್ಲಿ ಆದಿನಾಥನ ಹೆಸರಿದ್ದು ಇದರ ಕಾಲ ಸು.16ನೇ ಶತಮಾನವಾಗಿದೆ. ಶಾಸನದ ಉಳಿದ ಭಾಗ ತೃಟಿತಗೊಂಡಿದೆ.

**ಮಾಸ್ತಿಗಲ್ಲು:**

ಪತಿ ಸತ್ತಾಗ ಪತ್ನಿಯು ಪತಿಯ ಜೊತೆಗೆ ಚಿತೆಯನ್ನೇರಿ ಮರಣವನ್ನಪ್ಪಿದ ಸತಿಯ ನೆನಪಿಗಾಗಿ ನಿಲ್ಲಿಸಿರುವ ಕಲ್ಲುಗಳೇ ಮಾಸ್ತಿಗಲ್ಲುಗಳು. ಗಂಡನ ಜೊತೆಯಲ್ಲಿ ತನ್ನ ಪ್ರಾಣ ಸಮರ್ಪಣೆ ಮಾಡಿಕೊಂಡ ಸ್ತ್ರೀಯನ್ನು 'ಮಹಾಸತಿ' ಎನ್ನುತ್ತಿದ್ದರು. ಈ ಮಹಾಸತಿ ಜನರ ಬಾಯಲ್ಲಿ 'ಮಾಸ್ತಿ' ಎಂದಾಗಿದೆ. ಇದರಲ್ಲಿ ಎರಡು ವಿಧ. ಗಂಡನ ಕಳೆಬರದ ಜೊತೆಯಲ್ಲಿಯೇ ಚಿತೆಯೇರಿ ಮರಣ ಹೊಂದುವುದು 'ಸಹಗಮನ'ವಾದರೆ, ಗಂಡ ಎಲ್ಲೋ ಸತ್ತ ಸುದ್ದಿ ಕೇಳಿ ತಾನೊಬ್ಬಳೆ ಚಿತೆಯೇರಿ ಮರಣಹೊಂದುವುದು 'ಅನುಗಮನ' ವಾಗುತ್ತದೆ. ಈ ಎರಡು ವಿಧವಾದ ಸಾವುಗಳಿಗಾಗಿ ಮಾಸ್ತಿಗಲ್ಲುಗಳನ್ನು ನಿಲ್ಲಿಸುತ್ತಾರೆ. ಕೊಪ್ಪಳ ಜಿಲ್ಲೆಯಲ್ಲಿ ಮಾಸ್ತಿಗಲ್ಲುಗಳು ದೊರೆತಿರುವುದಿಲ್ಲ. ಶಾಸನಗಳಲ್ಲಿ ಸತಿಯು ಚಿತೆಯೇರಿ ಸತ್ತ ಉಲ್ಲೇಖಗಳನ್ನು ಕಾಣುತ್ತೇವೆ.[43] ಆದರೆ ಅವರ ನೆನಪಿಗಾಗಿ ಕಲ್ಲುಗಳನ್ನು ನಿಲ್ಲಿಸಿರುವುದು ಇದುವರೆಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ.

**ಶಾಸನಗಳ ವಿಷಯಾನುಕ್ರಮಣಿಕೆ:**

ಈ ಭಾಗದಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿನ ವಿಷಯಾನುಕ್ರಮವನ್ನು ಕುರಿತು ವಿವೇಚಿಸಲಾಗಿದೆ. ಶಾಸನಾಧ್ಯಯನವನ್ನು ಮಾಡುವಾಗ ಸಾಮಾನ್ಯವಾಗಿ ಶಾಸನದಲ್ಲಿನ ವಿಷಯವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗುತ್ತದೆ.

1. ಪೀಠಿಕೆ (Preamble)
2. ಪ್ರಕಟಣೆ (Notification)
3. ಮುಕ್ತಾಯ (Counclusion) ಈ ಮೂರು ಭಾಗಗಳಲ್ಲಿ ಶಾಸನದ ಒಟ್ಟು ಸ್ವರೂಪವನ್ನು ನೋಡಬಹುದು.

ಶಾಸನಗಳ ಆರಂಭದಲ್ಲಿ ಕೆಲವು ಚಿಹ್ನೆಗಳನ್ನು ಬಳಸಲಾಗುತ್ತದೆ. ಎಲ್ಲಾ ಶಾಸನಗಳಲ್ಲಿ ಇಲ್ಲದಿದ್ದರೂ ಬಹುಪಾಲು ಶಾಸನಗಳು ಚಿಹ್ನೆಗಳಿಂದ ಆರಂಭ ವಾಗುತ್ತವೆ. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿಯೂ ಕೂಡ ಕೆಲವು ಚಿಹ್ನೆಗಳು ಶಾಸನದ ಆರಂಭದಲ್ಲಿ ಇರುವುದನ್ನು ಕಾಣಬಹುದಾಗಿದೆ. [44] [45] [46] [47] [48] [49] [50] ಈ ರೀತಿಯ ಚಿಹ್ನೆಗಳು ಶಾಸನನದ ಆರಂಭದಲ್ಲಿ ಬಳಸಲಾಗಿದೆ.

ಇಂತಹ ಚಿಹ್ನೆಗಳ ನಂತರ ಕೆಲ ಮಂಗಳವಾಚಕ ಪದಗಳು ಕಾಣಿಸಿಕೊಳ್ಳುತ್ತವೆ. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಸ್ವಸ್ತಿ, ಸ್ವಸ್ತಿಶ್ರೀ, ಶ್ರೀ, ಶುಭಮಸ್ತು ಮುಂತಾದ ಮಂಗಳ

ವಾಚಕ ಪದಗಳು ಬಳಕೆಯಾಗಿವೆ. ಅವುಗಳ ನಂತರ ಪ್ರಾರ್ಥನಾ ಶ್ಲೋಕಗಳು ಬರುತ್ತವೆ. ಶಾಸನಗಳ ಆರಂಭದಲ್ಲಿ ಬರುವ ಪ್ರಾರ್ಥನಾ ಶ್ಲೋಕಗಳು ಒಂದು ನಾಡಿನ ಸಂಸ್ಕೃತಿಯನ್ನು ತನ್ನ ಮಟ್ಟಿಗೆ ಪ್ರತಿಬಿಂಬಿಸಬಲ್ಲವುಗಳಾಗಿವೆ. ಒಂದೊಂದು ಧರ್ಮವು ತನ್ನದೇ ಆದ ಶ್ಲೋಕಗಳನ್ನು ಒಳಗೊಂಡಿದೆ. ಕೆಲ ಶೈವ ಶಾಸನಗಳಲ್ಲಿ ಬಾಣಭಟ್ಟನ ಹರ್ಷಚರಿತೆಯಲ್ಲಿಯ ಶ್ಲೋಕವನ್ನು ಬಳಸಿದ್ದಾರೆ. ವೈಷ್ಣವರು ವಿಷ್ಣುವಿನ ವರಹಾವತಾರವನ್ನು ಪ್ರಾರ್ಥಿಸುವ ಶ್ಲೋಕವನ್ನು ಬಳಸುತ್ತಾರೆ. ಜೈನ ಶಾಸನಗಳಲ್ಲಿ ಅಕಲಂಕಾಚಾರ್ಯನ 'ಪ್ರಮಾಣ ಸಂಗ್ರಹ'ದಲ್ಲಿನ ಒಂದು ಶ್ಲೋಕವನ್ನು ಬಳಸಿಕೊಳ್ಳಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಈ ರೀತಿಯ ಶ್ಲೋಕಗಳು ಬಳಕೆಗೊಂಡಿವೆ.

ಸಾಮಾನ್ಯವಾಗಿ ಶಾಸನದಲ್ಲಿನ ಪ್ರಾರ್ಥನಾ ಶ್ಲೋಕಗಳು ಈ ಕೆಳಗಿನಂತಿರುತ್ತವೆ. ಬಾಣಭಟ್ಟನ ಹರ್ಷಚರಿತೆಯಲ್ಲಿನ ಶ್ಲೋಕವು ಬಹುತೇಕ ಶೈವ ಶಾಸನಗಳಲ್ಲಿ ಬಳಕೆಯಾಗಿರುವುದನ್ನು ನೋಡಬಹುದಾಗಿದೆ.

> "ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ।
> ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭುವೇ॥"[51]

(ಯಾರ ಶಿರಸ್ಸಿನಲ್ಲಿ ಚಂದ್ರನು ಮನೋಹರವಾದ ಚಾಮರದಂತಿದ್ದಾನೋ, ಯಾರು ಮೂರು ಲೋಕಗಳಿಗೂ ಆಧಾರ ಸ್ತಂಭದಂತಿದ್ದಾನೋ ಆ ಶಂಭುವಿಗೆ ನಮಸ್ಕಾರಗಳು.)

ಜೈನ ಶಾಸನಗಳಲ್ಲಿ ಅಕಲಂಕನ 'ಪ್ರಮಾಣ ಸಂಗ್ರಹ'ದಲ್ಲಿನ ಮಂಗಳ ಶ್ಲೋಕ ಬಳಕೆಗೊಂಡಿರುವುದನ್ನು ಕಾಣಬಹುದು.

> "ಶ್ರೀಮತ್ಪರಮ ಗಂಭೀರ ಸ್ವಾದ್ವಾದಾಮೋಘ ಲಾಂಛನಂ
> ಜಿಯಾತ್ ತ್ರೈಳೋಕ್ಯನಾಥಸ್ಯ ಸಾಸನಂ ಜಿನ ಶಾಸನಂ"[52]

(ಮೂರು ಲೋಕಗಳಿಗೆ ಒಡೆಯನು, ಪರಮ ಗಂಭೀರನೂ, ಅಮೋಘವಾದ ಸ್ವಾದ್ವಾದವನ್ನೇ ಲಾಂಛನವಾಗಿ ಉಳ್ಳ ಜಿನನಿಗೆ, ಜಿನ ಶಾಸನಕ್ಕೆ ಜಯವಾಗಲಿ)

ವಿಷ್ಣುವಿನ ವರಹಾವತಾರವನ್ನು ಪ್ರಾರ್ಥಿಸುವ ಶ್ಲೋಕವನ್ನು ಈ ಜಿಲ್ಲೆಯಲ್ಲಿ ವೈಷ್ಣವ ಧರ್ಮಕ್ಕೆ ಸೇರಿದ ಶಾಸನಗಳಲ್ಲಿ ಕಾಣಬಹುದಾಗಿದೆ.

> "ಜಯತ್ಯಾ ವಿಷ್ಕೃತ್ಯಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ
> ದಕ್ಷಿಣೋನ್ನತರ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪು:"

(ಸಮುದ್ರವನ್ನು ಕ್ಷೋಭೆಗೊಳಿಸಿ ಭೂದೇವಿಯನ್ನು ತನ್ನ ಬಲ ಕೋರೆ ದಾಡೆಯ ಮೇಲೆ ಕುಳ್ಳಿರಿಸಿಕೊಂಡಿರುವ ವರಹ ರೂಪಿಯಾದ ವಿಷ್ಣುವಿಗೆ ಜಯವಾಗಲಿ.)

ಯಲಬುರ್ಗಾ ತಾಲೂಕಿನ ಕುಕನೂರು ಗ್ರಾಮದಲ್ಲಿ ದೊರೆತ ಕ್ರಿ.ಶ.1163ರ ಶಾಸನ[53]ದಲ್ಲಿ ಶಿವ ಮತ್ತು ವಿಷ್ಣು ಇಬ್ಬರನ್ನೂ ಒಟ್ಟಿಗೆ ನೆನೆಯಲಾಗಿದೆ.

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ।
ತ್ರೈಲೋಕ್ಯ ನಗರಾರಂಭ ಮೂಲ ಸ್ತಂಬಾಯ ಶಂಭುವೇ॥
ಜಯತ್ಯಾ ವಿಷ್ಕೃತ್ಯಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತರ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ॥ಶಿವಾಯನಮಃ॥

ಇದು ಶೈವ ಶಾಸನ ಆದರೆ ಈ ಶಾಸನದಲ್ಲಿ ವಿಷ್ಣುವನ್ನು ಪ್ರಾರ್ಥಿಸಿರುವುದು ವಿಶೇಷವಾಗಿದೆ. ಅದೇ ರೀತಿಯಾಗಿ ಯಲಬುರ್ಗಾ ತಾಲೂಕಿನ ಮುದೋಳ ಗ್ರಾಮದ ಜೀರೇರ ಓಣಿಯಲ್ಲಿ ದೊರೆತ ಕ್ರಿ.ಶ.11ನೇ ಶತಮಾನಕ್ಕೆ ಸೇರ ಬಹುದಾದ ಶಾಸನ[54]ದಲ್ಲಿ ಮೂರು ಪ್ರಾರ್ಥನಾ ಶ್ಲೋಕಗಳು ಬಳಕೆಯಾಗಿರುವುದು ಮತ್ತೊಂದು ವಿಶಿಷ್ಟ ಶಾಸನವಾಗಿದ್ದು ನಮ್ಮ ಗಮನವನ್ನು ಸೆಳೆಯುತ್ತದೆ. ಆ ಶಾಸನದಲ್ಲಿ ಬಳಕೆಗೊಂಡ ಶ್ಲೋಕಗಳೆಂದರೆ;

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ।
ತ್ರೈಲೋಕ್ಯ ನಗರಾರಂಭ ಮೂಲ ಸ್ತಂಬಾಯ ಶಂಭುವೇ॥
ನಮಸ್ತೆಸ್ಮೈ ವರಾಹಾಯ ಲೀಲಾಯ ಚರತೇ ಮಹೀಂ
ಖುರಾಂತರಗತೋ ಯಶ್ಯ ಮೇರುಃ ಖಣಖಣಾಯತೇ॥
ಜಯತ್ಯಾ ವಿಷ್ಕೃತ್ಯಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತರ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ ॥

ಒಂದೇ ಶಾಸನದಲ್ಲಿ ಮೂರು ಬೇರೆ ಬೇರೆ ಶ್ಲೋಕಗಳು ಬಳಕೆಯಾಗಿರುವುದು ವಿರಳ. ಆದರೆ ಇಂತಹದೊಂದು ಶಾಸನ ಕೊಪ್ಪಳ ಜಿಲ್ಲೆಯಲ್ಲಿ ಚಾಲುಕ್ಯರ ತ್ರೈಲೋಕ್ಯಮಲ್ಲನ ಕಾಲದಲ್ಲಿ ರಚನೆಗೊಂಡಿದ್ದು ವಿಶೇಷವಾಗಿದೆ. ಹಾಗೆಯೇ ಕೊಪ್ಪಳ ತಾಲೂಕಿನ ಹಿರೇ ಸಿಂದೋಗಿಯಲ್ಲಿ ದೊರೆತ 12ನೇ ಶತಮಾನದ ಶಾಸನ[55], ಹುಲುಗಿಯಲ್ಲಿ ದೊರೆತ ಕ್ರಿ.ಶ.1080ರ ಶಾಸನ[56], ಯಲಬುರ್ಗಾ ತಾಲೂಕಿನ ಕಲ್ಲೂರಿನಲ್ಲಿರುವ ಕ್ರಿ.ಶ.1185ರ ಶಾಸನ[57], ಕುಕನೂರಿನಲ್ಲಿರುವ ಕ್ರಿ.ಶ.1163ರ ಶಾಸನ[58], ಅದೇ ಊರಿನಲ್ಲಿರುವ ಕ್ರಿ.ಶ.1170ರ ಶಾಸನ[59], ಅಲ್ಲಿಯೇ ಇರುವ ಕ್ರಿ.ಶ.1129ರ ಶಾಸನ[60], ಇಟಗಿಯಲ್ಲಿ ದೊರೆತ ಕ್ರಿ.ಶ.1108ರ ಶಾಸನ[61], ಗಂಗಾವತಿ ತಾಲೂಕಿನ ಕನಕಗಿರಿಯಲ್ಲಿ ದೊರೆತ ಕ್ರಿ.ಶ.1436ರ ಶಾಸನ[62]ಗಳಲ್ಲಿ ಎರಡೆರಡು ಶ್ಲೋಕಗಳು ಬಳಕೆಗೊಂಡಿರುವುದನ್ನು ನೋಡಬಹುದಾಗಿದೆ. ದೇವತಾಸ್ತುತಿಯ ನಂತರದಲ್ಲಿ ಶಾಸನ ಹೊರಡಿಸಿದ ಸ್ಥಳದ ಹೆಸರು, ದಾನವನ್ನು ಹೊರಡಿಸಿದ ದಿನಾಂಕ, ದಾನಿಯ ವಂಶಜರ ಪರಿಚಯ, ದಾನಕ್ಕೆ ಸಂಬಂಧಿಸಿದಂತೆ ಆದೇಶ ಈ ಎಲ್ಲಾ ವಿಷಯಗಳು ಅನುಕ್ರಮವಾಗಿ ಕೊಪ್ಪಳ ಜಿಲ್ಲೆಯ ಶಾಸನಗಳ ಪೀಠಿಕಾ ಭಾಗದಲ್ಲಿ ನೋಡಬಹುದು.

ಶಾಸನಗಳ ಪ್ರಕಟಣಾ ಭಾಗದಲ್ಲಿ ದಾನದ ಸ್ಪಷ್ಟನೆ, ದಾನವನ್ನು ಪಡೆದುಕೊಂಡವರ ವಿವರ, ದಾನವನ್ನು ನೀಡಿದ ಸಂದರ್ಭ, ದಾನ ಕೊಟ್ಟ ಉದ್ದೇಶ, ಭೂಮಿಯನ್ನು ದಾನವಾಗಿ ಕೊಟ್ಟಿದ್ದಾದರೆ ಅದರ ಚಕ್ಕುಬಂದಿ ವಿವರ, ಗ್ರಾಮಗಳನ್ನು ದಾನವಾಗಿ ನೀಡಿದ್ದರೆ ಅವುಗಳ ಉಲ್ಲೇಖ, ವಿವರಗಳು ಈ ಭಾಗದಲ್ಲಿ

ಕಾಣಿಸಿಕೊಳ್ಳುತ್ತವೆ. ದೇವಾಲಯಗಳಿಗೆ ದಾನ ನೀಡಿದಾಗ ದೇವರ ಹೆಸರು ಉಕ್ತವಾಗಿವೆ. ತೀರ್ಥಯಾತ್ರೆ, ಸಂಕ್ರಾಂತಿ, ಗ್ರಹಣ ಹಬ್ಬದ ಸಂದರ್ಭಗಳಲ್ಲಿ ದಾನ ನೀಡಿದ ಪ್ರಸಂಗಗಳು ಹೆಚ್ಚಾಗಿ ಕಂಡು ಬರುತ್ತವೆ. ದಾನವನ್ನು ಪಡೆದವರು ಕೆಲವೊಂದು ನಿಯಮಗಳನ್ನು ಪಾಲಿಸಬೇಕಾಗಿತ್ತು. ಅಂತಹ ನಿಯಮಗಳನ್ನು ಇಲ್ಲಿಯ ಕೆಲವು ಶಾಸನಗಳಲ್ಲಿ ಹೇಳಲಾಗಿದೆ.

ಪ್ರಕಟಣಾ ಭಾಗವಾದ ಮೇಲೆ 'ದಾನಚ್ಛೇದೋಪವರ್ಣನೆ' ಬರುತ್ತದೆ. ದಾನಚ್ಛೇದೋಪವರ್ಣನೆ ಎಂದರೆ ದಾನವನ್ನು ಕೆಡಿಸಿದರೆ ಬರುವ ಶಾಪಗಳ ವರ್ಣನೆ, ದಾನ ನೀಡಿದ ದಾನಿಯೂ ತಾನು ನೀಡಿದ ದಾನವನ್ನು ಕೆಡಿಸಿದರೆ ತಟ್ಟುವ ಪಾಪಗಳು ಯಾವುವು ಎಂಬುದನ್ನು ಈ ಭಾಗದಲ್ಲಿ ಹೇಳಲಾಗಿರುತ್ತದೆ. ಹಾಗೂ ದಾನವನ್ನು ಕಾಪಾಡಿದವರಿಗೆ ಬರುವ ಪುಣ್ಯಗಳು ಸಹ ಈ ಭಾಗದಲ್ಲಿ ಹೇಳಲಾಗಿರುತ್ತದೆ. ಗಂಗಾವತಿ ತಾಲೂಕಿನ ಕಲ್ಕೇರಿ ಶಾಸನ[63]ದಲ್ಲಿ ದಾನವನ್ನು ನಾಶಮಾಡಿದವರಿಗೆ 18 ಪಟ್ಟಣಗಳನ್ನು, ವಾರಣಾಸಿಯನ್ನು ನಾಶಮಾಡಿದ ಪಾಪ ಬರಲಿ ಎಂಬ ಶಾಪಾಶಯ ಇದೆ. ಕೊಪ್ಪಳಶಾಸನ[64]ವೊಂದರಲ್ಲಿ ದಾನವನ್ನು ಕೆಡಿಸಿದವರಿಗೆ ಪಂಚಮಹಾಪಾತಕನಾಗುತ್ತಾನೆ, ಸಹಸ್ರ ಕವಿಲೆಯನ್ನು, ಸಹಸ್ರ ಬ್ರಾಹ್ಮಣರನ್ನು ಕೊಂದ ಪಾಪಕ್ಕೆ ಗುರಿಯಾಗುತ್ತಾನೆ ಎಂದು ಹೇಳಲಾಗಿದೆ. ತಾವು ನೀಡಿದ ದಾನವು ಬಹುಕಾಲ ಉಳಿಯಬೇಕು, ತಮ್ಮ ಹೆಸರು ಸೂರ್ಯ-ಚಂದ್ರರಿರುವವರೆಗೆ ಇರಬೇಕು ಎಂಬ ಉದ್ದೇಶದಿಂದ ಇಂತಹ ಶಾಪಾಶಯಗಳನ್ನು ಬರೆಸುತ್ತಿದ್ದರು. ಧಾರ್ಮಿಕ ಮನೋಭಾವದ ಜನರು ಈ ಶಾಪಾಶಯಗಳಿಗೆ ಹೆದರಿಕೊಂಡು ಅಂತಹ ಶಾಸನಗಳನ್ನು ಕೆಡಿಸದೆ ಹಾಗೆಯೇ ಕಾಪಾಡಿಕೊಂಡು ಬರುತ್ತಿದ್ದರು. ಇಂತಹ ಶಾಪಾಶಯಗಳು ಬರೆಯಲ್ಪಟ್ಟಿದ್ದರಿಂದಲೇ ಇಂದು ನಮಗೆ ಶಾಸನಗಳು ಖಚಿತವಾದ ಮಾಹಿತಿಯನ್ನು ನೀಡುತ್ತವೆ. ಒಂದು ವೇಳೆ ಇಂತಹ ಶಾಪಾಶಯಗಳು ಇಲ್ಲದೆ ಹೋಗಿದ್ದರೆ ನಮಗಿಂದು ಶಾಸನಗಳೇ ಇರುತ್ತಿರಲಿಲ್ಲ ಅಥವಾ 'ಕೂಟ'ಶಾಸನಗಳೇ ಅಧಿಕ ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತಿದ್ದವು.

ಶಾಸನದ ಅಂತ್ಯಭಾಗದಲ್ಲಿ ಕೃತಿಕಾರ, ಲಿಪಿಕಾರ ಮತ್ತು ಶಿಲ್ಪಿಯ ಹೆಸರುಗಳು ಉಕ್ತವಾಗಿರುತ್ತವೆ. ಸಾಮಾನ್ಯವಾಗಿ ಈ ಮೂವರ ಹೆಸರುಗಳು ಉಲ್ಲೇಖಗೊಳ್ಳುವುದು ಕಡಿಮೆ. ಕೊಪ್ಪಳದ ಕವಲೂರು ಶಾಸನ[65]ದಲ್ಲಿ ಈ ಶಾಸನವನ್ನು ಚತುರ್ಭಾಷಾ ಚಕ್ರವರ್ತಿ ಕವಿ ಕಂದರ್ಪ ಬರೆದ ಎಂದು ಬರೆಯಲಾಗಿದೆ. ಅಳವಂಡಿ ಶಾಸನದಲ್ಲಿ[66] 'ಈ ಶಾಸನವನ್ನು ಕರುವರ ಬರ್ಮ್ಮ ಬರೆಯಿಸಿದ, ಮಲ್ಲನು ಬರೆದ' ಎಂದು ಉಲ್ಲೇಖಿಸಲಾಗಿದೆ. ಕೊಪ್ಪಳ ಜಿಲ್ಲೆಯ ಶಾಸನಗಳೆಲ್ಲಾ ಹೆಸರಿಸಿಕೊಂಡಿರುವ ಶಾಸನ ಕವಿಗಳೆಂದರೆ ಇನ್ದಯ್ಯ[67], ಪಿಟ್ಟೋಜ[68], ಶೇಷಯ್ಯ[69], ಶಿವದೇವ[70], ಚಾವೋಜ[71], ಲಕ್ಷ್ಮೀಧರ[72], ಮಂಗರಸ[73] ಹೀಗೆ ಮುಂತಾದವರು. ಕೊನೆಯಲ್ಲಿ ದಾನ ಶಾಸನಗಳಲ್ಲಿ ಅಧಿಕೃತತ್ವದ ಗುರುತಾಗಿ ರಾಜರ ಸ್ವ-ಹಸ್ತಾಕ್ಷರ, ಮುದ್ರೆಗಳು ಇರುವುದು ಕಂಡು ಬರುತ್ತದೆ. ಆದರೆ ಇಂತಹ ಉಲ್ಲೇಖಗಳು ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಕಂಡು ಬರುವುದಿಲ್ಲ.

ಒಟ್ಟಿನಲ್ಲಿ ಈ ಅಧ್ಯಾಯದಲ್ಲಿ ಕೊಪ್ಪಳ ಜಿಲ್ಲೆಯ ಶಾಸನ ಅಧ್ಯಯನದ ಇತಿಹಾಸ, ಜಿಲ್ಲೆಯಲ್ಲಿ ದೊರೆತ ಶಾಸನಗಳನ್ನು ಯಾವ ಯಾವ ಕಾಲಕ್ಕೆ ಸೇರಿದವು, ಎಷ್ಟು ಧರ್ಮಕ್ಕೆ ಸೇರಿದವುಗಳೆಷ್ಟು, ಯಾವ ವಿಷಯಕ್ಕೆ ಸೇರಿದವುಗಳಾಗಿವೆ ಎಂಬ ಅಂಕಿ ಅಂಶಗಳನ್ನು ನೀಡಲಾಗಿದೆ. ಹಾಗೂ ಕೊನೆಗೆ ಜಿಲ್ಲೆಯ ಶಾಸನಗಳ ಸ್ವರೂಪವನ್ನು ಸಂಕ್ಷಿಪ್ತದಲ್ಲಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

**ಅಡಿಟಿಪ್ಪಣಿಗಳು :**

1. ಎಂ.ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:15.
2. ಕೊಪ್ಪಳ ಜಿಲ್ಲೆಯಲ್ಲಿ 7 ತಾಮ್ರಶಾಸನಗಳು ದೊರೆತಿವೆ. ಕೊಪ್ಪಳ ತಾಲೂಕಿನಲ್ಲಿ 2, (ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–16–139), ಯಲಬುರ್ಗಾ ತಾಲೂಕಿನಲ್ಲಿ 3 (ಕ.ವಿ.ವಿ. ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–48,56,69), ಗಂಗಾವತಿ ತಾಲೂಕಿನಲ್ಲಿ 2 ಈ ರೀತಿ ಜಿಲ್ಲೆಯಲ್ಲಿ ತಾಮ್ರಶಾಸನಗಳು ದೊರೆತಿವೆ.
3. ಕನ್ನಡ ವಿಶ್ವವಿದ್ಯಾಲಯ : ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಗಂ–27, ಪುಟ–341.
4. ಅದೇ, ಗಂ–25, ಪುಟ–338.
5. ತಿರುಳ್ಗನ್ನಡ, ಕೊಪಣನಗರ:ಒಂದುಐತಿಹಾಸಿಕ ಕೇಂದ್ರ : ಬಿ.ವ್ಹಿ.ಶಿರೂರು (ಸಂ.ಹೆಚ್.ಎಸ್.ಪಾಟೀಲ್, ಅಲ್ಲಮಪ್ರಭು ಬೆಟ್ಟದೂರು) ಪುಟ:4.
6. ಬಿ.ಸಿ.ಪಾಟೀಲ್:ಕೊಪ್ಪಳ–ಸಾಂಸ್ಕೃತಿಕ ಪರಂಪರೆ, ಪುಟ:05.
7. ಕನ್ನಡ ವಿಶ್ವವಿದ್ಯಾಲಯ : ಶಾಸನ ಸಂಪುಟ–2, ಕೊಪ್ಪಳಜಿಲ್ಲೆ, ಕೊ–22, ಪುಟ:29.
8. ಅದೇ, ಕೊ–11, ಪುಟ:22.
9. ಅದೇ, ಕೊ–52,ಪುಟ:50.
10. ಅದೇ, ಕೊ–81, ಪುಟ:65.
11. ಅದೇ, ಕೊ–86, ಪುಟ:72.
12. ಅದೇ, ಕೊ–39, ಪುಟ:43.
13. ಅದೇ, ಕೊ–52, ಪುಟ:50.
14. ಅದೇ, ಕೊ–135, ಪುಟ:131.
15. ಅದೇ, ಕೊ–94, ಪುಟ:80.
16. ಅದೇ, ಕೊ–93, ಪುಟ:80.
17. ಅದೇ, ಕೊ–107, ಪುಟ:101.
18. ಬಿ.ಸಿ.ಪಾಟೀಲ್ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ:1.

19. ಬಿ.ಸಿ.ಪಾಟೀಲ್ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ:2.
20. ಕನ್ನಡ ವಿಶ್ವವಿದ್ಯಾಲಯ : ಶಾಸನ ಸಂಪುಟ–2. ಕೊಪ್ಪಳ ಜಿಲ್ಲೆ, ಕೊ–28, ಪುಟ:37.
21. ಅದೇ, ಕೊ–16, ಪುಟ:25.
22. ಅದೇ, ಕೊ–190, ಪುಟ:136.
23. ಅದೇ, ಕೊ–48, ಪುಟ:219.
24. ಅದೇ, ಕೊ–69, ಪುಟ:269.
25. ಅದೇ, ಗಂ–25, ಪುಟ:348.
26. ಅದೇ, ಗಂ–27, ಪುಟ:341
27. ಕಿತ್ಸ್ನ ಜಿಲ್ಲೆಯ ಭಟ್ಟಪ್ರೋಲುವಿನ ಬೌದ್ಧಸ್ತೂಪವೊಂದರ ಅವಶೇಷದಲ್ಲಿ ಸ್ಪಟಿಕದ ಶಾಸನ ದೊರೆತಿದೆ.
28. ಕನ್ನಡ ವಿಶ್ವವಿದ್ಯಾಲಯ : ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–28, ಪುಟ:37.
29. ಅದೇ, ಕೊ–60, ಪುಟ:55.
30. ಅದೇ, ಗಂ–01, ಪುಟ:313.
31. ಅದೇ, ಕೊ–35, ಪುಟ:41.
32. ಅದೇ, ಕೊ–36, ಪುಟ:41.
33. ಅದೇ, ಕೊ–37, ಪುಟ:42.
34. ಅದೇ, ಕೊ–04, ಪುಟ:161.
35. ಅದೇ, ಕೊ–05, ಪುಟ:162.
36. ಅದೇ, ಕೊ–52, ಪುಟ:50.
37. ಅದೇ, ಕೊ–21, ಪುಟ:178.
38. ಅದೇ, ಗಂ–20, ಪುಟ:335.
39. ಅದೇ, ಗಂ–74, ಪುಟ:366.
40. ಅದೇ, ಗಂ–33, ಪುಟ:344.
41. ಅದೇ, ಕೊ–21, ಪುಟ:29.
42. ಅದೇ, ಕೊ–13, ಪುಟ:24.
43. ಇಂತಹ ಮೂರು ಶಾಸನಗಳು ಗಂಗಾವತಿ ತಾಲೂಕಿನ ಆನೆಗೊಂದಿಯಲ್ಲಿ ದೊರಕಿವೆ. ಈ ಶಾಸನಗಳಲ್ಲಿ ಗಂಡನ ಚಿತೆಯಲ್ಲಿ ಹೆಂಡತಿ ಮರಣ ಹೊಂದಿದ ಉಲ್ಲೇಖಗಳು ಬಂದಿವೆ. ಆದರೆ ಅಂತಹವರ ಸ್ಮರಣೆಗಾಗಿ ಕಲ್ಲುಗಳನ್ನು ನಿಲ್ಲಿಸಿರುವುದು ನನ್ನ ಗಮನಕ್ಕೆ ಬಂದಿರುವುದಿಲ್ಲ.
44. ಕನ್ನಡ ವಿಶ್ವವಿದ್ಯಾಲಯ : ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–1, ಪುಟ:1.

45. ಕನ್ನಡ ವಿಶ್ವವಿದ್ಯಾಲಯ : ಶಾಸನ ಸಂಪುಟ-2, ಕೊಪ್ಪಳ ಜಿಲ್ಲೆ, ಕೊ-9, ಪುಟ:20.
46. ಅದೇ, ಕೊ-12, ಪುಟ:23.
47. ಅದೇ, ಕೊ-26, ಪುಟ:33.
48. ಅದೇ, ಕೊ-91, ಪುಟ:78.
49. ಅದೇ, ಕೊ-148, ಪುಟ:146.
50. ಅದೇ, ಯ-59, ಪುಟ:253.
51. ಅದೇ, ಕೊ-1, ಪುಟ:1.
52. ಅದೇ, ಕೊ-53, ಪುಟ:52.
53. ಅದೇ, ಯ-40, ಪುಟ:205.
54. ಅದೇ, ಕೊ-32, ಪುಟ:190.
55. ಅದೇ, ಕೊ-12, ಪುಟ:23.
56. ಅದೇ, ಕೊ-148, ಪುಟ:145.
57. ಅದೇ, ಯ-13, ಪುಟ:167.
58. ಅದೇ, ಯ-40, ಪುಟ:205.
59. ಅದೇ, ಯ-41, ಪುಟ:209.
60. ಅದೇ, ಯ-53, ಪುಟ:236.
61. ಅದೇ, ಯ-67, ಪುಟ:259.
62. ಅದೇ, ಗಂ-80, ಪುಟ:369.
63. ಅದೇ, ಗಂ-110, ಪುಟ:389.
64. ಅದೇ, ಕೊ-47, ಪುಟ:47.
65. ಅದೇ, ಕೊ-3, ಪುಟ:4.
66. ಅದೇ, ಕೊ-6, ಪುಟ:12.
67. ಅದೇ, ಕೊ-90, ಪುಟ:75.
68. ಅದೇ, ಕೊ-96, ಪುಟ:83.
69. ಅದೇ, ಯ-37, ಪುಟ:196.
70. ಅದೇ, ಯ-41, ಪುಟ:209.
71. ಅದೇ, ಯ-44, ಪುಟ:216.
72. ಅದೇ, ಯ-69, ಪುಟ:269.
73. ಅದೇ, ಗಂ-91, ಪುಟ:379.

ಅಧ್ಯಾಯ–3

# ರಾಜಕೀಯ ಇತಿಹಾಸ

ಕರ್ನಾಟಕದ ಪ್ರಾಚೀನ ಇತಿಹಾಸದ ಕಾಲದಿಂದಲೂ ಕೊಪ್ಪಳ ನಾಡು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಕನ್ನಡ ನಾಡಿನ ಸಂಸ್ಕೃತಿಗೆ ತನ್ನದೇ ಆದ ಮಹತ್ತರ ಕಾಣಿಕೆಯನ್ನು ಸಲ್ಲಿಸಿರುವುದು ವಿವಿಧ ರೀತಿಯ ಆಧಾರಗಳಿಂದ ತಿಳಿದು ಬರುತ್ತದೆ. ಇತಿಹಾಸ ಪೂರ್ವದ ಮಾನವನು ಈ ಪ್ರದೇಶದಲ್ಲಿ ತನ್ನ ಅಲೆಮಾರಿ ಜೀವನವನ್ನು ನಡೆಸುತ್ತಿದ್ದನೆಂಬ ಸಂಗತಿ ಇಲ್ಲಿ ದೊರೆತಿರುವ ಶಿಲಾಯುಗ ಸಂಸ್ಕೃತಿಯ ಅವಶೇಷಗಳಿಂದ ತಿಳಿದು ಬರುತ್ತದೆ. ಕೈಗೊಡಲಿ ಹಂತಕ್ಕೆ ಸೇರಿದ ಶಿಲಾಯುಧಗಳು ಕೃಷ್ಣ–ತುಂಗಭದ್ರ ನದಿಗಳ ದಂಡೆಗಳಲ್ಲಿ ದೊರೆತಿದ್ದು ಸುಮಾರು ಐದು ಲಕ್ಷ ವರ್ಷಗಳಷ್ಟು ಹಿಂದಿನಿಂದ ಈ ಪ್ರದೇಶದಲ್ಲಿ ಮಾನವ ವಸತಿಯಿದ್ದುದನ್ನು ಸಾಕ್ಷೀಕರಿಸಿವೆ. ಆನಂತರ ಕಾಲಕ್ಕೆ ಸೇರಿದ ಮಧ್ಯಯುಗೀನ ಮತ್ತು ಅಂತ್ಯ ಕಾಲದ ಶಿಲಾಯುಗ ಸಂಸ್ಕೃತಿಗಳ ಅವಶೇಷಗಳನ್ನು ಸಹ ಕೊಪ್ಪಳದ ನೆರೆಹೊರೆಯ ಪ್ರದೇಶಗಳಲ್ಲಿ ಶೋಧಿಸಿ ಹೊರ ತೆಗೆಯಲಾಗಿದೆ. ಮಾನವನು ತನ್ನ ಅಲೆಮಾರಿ ಜೀವನವನ್ನು ತ್ಯಜಿಸಿ ಗ್ರಾಮೀಣ ಜೀವನದ ಹಂತಕ್ಕೆ ಪ್ರವೇಶಿಸಿದ ಕುರುಹುಗಳನ್ನು ಸುಮಾರು 4,500 ವರ್ಷಗಳ ಪೂರ್ವಕ್ಕೆ ನಿರ್ದೇಶಿಸಬಹುದು. ಕೊಪ್ಪಳ ಜಿಲ್ಲೆಗೆ ಹತ್ತಿರವಾದ ರಾಯಚೂರು ಜಿಲ್ಲೆಯು ನವಶಿಲಾಯುಗ ಸಂಸ್ಕೃತಿಯ ಕೇಂದ್ರ ಸ್ಥಾನವಾಗಿತ್ತೆಂದು ಪ್ರಾಕ್ತನಶಾಸ್ತ್ರಜ್ಞರು ಒಪ್ಪಿದ ಸಂಗತಿ. ಈ ಪ್ರದೇಶದ ಮಸ್ಕಿ, ಪಿಕ್ಲಿಹಾಳ..... ಮುಂತಾದ ನೆಲೆಗಳಲ್ಲಿ ನಡೆದಿರುವ ಪ್ರಾಕ್ತನ ಸಂಶೋಧನೆಗಳಿಂದ ಆಗಿನ ಮಾನವನು ಪ್ರಥಮ ಬಾರಿಗೆ ಆಹಾರೋತ್ಪಾದನೆ, ಪಶು ಸಾಕಾಣಿಕೆಗಳಂತಹ ಕಾರ್ಯಗಳನ್ನು ಆರಂಭಿಸಿದ ವಿಷಯದ ಉಲ್ಲೇಖಗಳಿಂದ ತಿಳಿದುಬರುತ್ತದೆ. ಮಡಕೆ–ಕುಡಿಕೆಗಳನ್ನು ತಯಾರಿಸಿ ನಿತ್ಯ ಜೀವನದಲ್ಲಿ ಬಳಸುತ್ತಿದ್ದು; ವಾಸಕ್ಕೆ ಹುಲ್ಲಿನ ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದು ಇತ್ಯಾದಿ ವಿಷಯಗಳು ತಿಳಿದುಬಂದಿವೆ. ಕ್ರಮೇಣ ಜನಜೀವನ ಸುಧಾರಿಸಿದಂತೆ ಕಲೆಗೆ ಗಮನ ನೀಡಿದ ವಿಷಯ ಹಲವಾರು ಪ್ರದೇಶಗಳಲ್ಲಿ ಬಂಡೆಗಲ್ಲುಗಳ ಮೇಲೆ ಕೊರೆದಿರುವ ಪ್ರಾಣಿಗಳ, ಮಾನವರ ಮತ್ತು ಬೇಟೆಯ ರೇಖಾ ಚಿತ್ರಗಳಿಂದ ದೃಢಪಡಿಸುತ್ತವೆ. ಸುಮಾರು 3000 ವರ್ಷಗಳ ಹಿಂದೆ ಕಬ್ಬಿಣಯುಗ ಪ್ರಾರಂಭವಾದಾಗ ಆಗಿನ ಮಾನವರು ಮೃತರ ದೇಹಗಳನ್ನು ಹೂಳಲು ನಿರ್ಮಿಸಿದ ನೂರಾರು ಬೃಹತ್ ಶಿಲಾ ಸಮಾಧಿಗಳನ್ನು ಸಹ ಕೊಪ್ಪಳದ ಸುತ್ತಮುತ್ತ ಅಧಿಕ ಸಂಖ್ಯೆಯಲ್ಲಿ ನೋಡಬಹುದಾಗಿದೆ. ಹೀಗೆ ಇತಿಹಾಸ ಪೂರ್ವಯುಗದಲ್ಲಿ ಕೊಪ್ಪಳ ಪ್ರದೇಶ ಜನನಿಬಿಡವಾಗಿದ್ದು ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಪಾಲ್ಗೊಂಡಿದ್ದ ವಿಷಯ ಸ್ಪಷ್ಟವಾಗಿ ತಿಳಿದು ಬರುತ್ತದೆ. ಅಲ್ಲದೆ ಕೊಪ್ಪಳ ಬಳಿಯ

ಮಳೆಮಲ್ಲೇಶ್ವರ ಬೆಟ್ಟ, ಹಿರೇಬೆಣಕಲ್ ಬೆಟ್ಟದ ಮೇಲೆ ಬೃಹತ್ ಶಿಲಾಯುಗದ ಕಲ್ಲುಗೋರಿಗಳು ಸಿಕ್ಕಿವೆ. ಇದನ್ನು 'ಮೋರಿಯರ ಮನೆ'ಯೆಂದೂ ಕರೆಯುತ್ತಾರೆ.

ಕ್ರಿ.ಶ. ಪೂರ್ವ ಯುಗವು ಅಂತ್ಯಗೊಂಡು ಕ್ರಿ.ಶ.ದ ಉದಯಕಾಲ ಪ್ರಾರಂಭವಾದಂತೆ ಕೊಪ್ಪಳದಲ್ಲಿ ರಾಜಕೀಯ ಚಟುವಟಿಕೆಗಳು ಚುರುಕುಗೊಂಡ ಕುರುಹುಗಳು ಕಂಡುಬಂದಿವೆ. ನಾವು ಇದುವರೆಗೂ ಗಮನಿಸಿದ ಪ್ರಪಂಚದ ಯಾವುದೇ ಒಂದು ಪ್ರದೇಶದ ಸಾಂಸ್ಕೃತಿಕ ಕೊಡುಗೆಗೆ ಅಲ್ಲಿ ಆಳ್ವಿಕೆ ನಡೆಸಿದ ಅರಸು ಮನೆತನಗಳ ಪಾತ್ರ ಅತ್ಯಂತ ಮಹತ್ವದ್ದು. ಈ ಹಿನ್ನೆಲೆಯಲ್ಲಿ ವಿಚಾರ ಮಾಡುವುದಾದರೆ ಕರ್ನಾಟಕವೂ ಸೇರಿದಂತೆ ಭಾರತವನ್ನಾಳಿದ ವಿವಿಧ ಅರಸು ಮನೆತನಗಳು ಇಲ್ಲಿನ ಸಾಂಸ್ಕೃತಿಕ ಪರಂಪರೆಯಲ್ಲಿ ತಮ್ಮ ಪ್ರಭಾವವನ್ನು ಹೆಚ್ಚಿಸುತ್ತಾ ಬಂದಿವೆ. ಮುಖ್ಯವಾಗಿ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಬಹುಮನಿ ಸುಲ್ತಾನರು. ಮೈಸೂರಿನ ಒಡೆಯರು..... ಮುಂತಾದ ಅರಸು ಮನೆತನಗಳು ಕೊಪ್ಪಳ ಸೇರಿದಂತೆ ಕರ್ನಾಟಕದ ರಾಜಕೀಯ ಇತಿಹಾಸಲ್ಲಿ ತಮ್ಮದೇ ಆದ ಹೆಸರನ್ನು ಗಳಿಸಿಕೊಂಡಿವೆ. ಹೀಗಾಗಿ ಇಂತಹ ಅರಸು ಮನೆತನಗಳ ಸಂಕ್ಷಿಪ್ತ ಇತಿಹಾಸ ಪ್ರಸ್ತುತ ಸಂದರ್ಭದಲ್ಲಿ ಅಗತ್ಯವೆನಿಸುತ್ತದೆ.

ಕೊಪ್ಪಳ ಪ್ರದೇಶವನ್ನೊಳಗೊಂಡ ಕನ್ನಡ ನಾಡನ್ನು ವಿವಿಧ ಕಾಲಾವಧಿಯಲ್ಲಿ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿವೆ. ಈ ವಿಷಯವನ್ನು ಇಲ್ಲಿ ದೊರೆತಿರುವ ಶಾಸನಗಳು ಸಮರ್ಥಿಸುತ್ತವೆ. ಪ್ರಸ್ತುತ ಶಾಸನಗಳನ್ನು ಆಧರಿಸಿ ಹೇಳುವುದಾದರೆ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ನೊಳಂಬರು, ಕಲಚೂರಿಗಳು, ಹೊಸಮಲೆ ದುರ್ಗದ ಅರಸರು, ವಿಜಯನಗರದ ಅರಸರು, ಬಹುಮನಿ ಸುಲ್ತಾನರು, ಮರಾಠರು..... ಈ ಮುಂತಾದ ಪ್ರಮುಖ ಅರಸರು ಕೊಪ್ಪಳ ಜಿಲ್ಲೆಯನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಒಂದು ಆಡಳಿತ ಭಾಗವನ್ನಾಗಿಸಿಕೊಂಡು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಇದಕ್ಕೆ ಸಾಕ್ಷಿ ಎಂಬಂತೆ ಮುಖ್ಯವಾಗಿ ಮೌರ್ಯರ ಕಾಲದಿಂದ ಹಿಡಿದು ಪಾಳೆಗಾರರ ಕಾಲದವರೆಗೆ ಶಿಲಾಶಾಸನಗಳೇ ಸಾಕ್ಷಿ.

**ಮೌರ್ಯರು :**

ಕರ್ನಾಟಕವೂ ಸೇರಿದಂತೆ ಭಾರತದ ಇತರೆ ಪ್ರದೇಶಗಳನ್ನು ಆಳಿದ ಮೌರ್ಯರು ಆಡಳಿತದಲ್ಲಿ ಅತ್ಯಂತ ಪ್ರಭಾವಶಾಲಿ ಅರಸರೆನಿಸಿದ್ದಾರೆ. ನಂದರನ್ನು ಸೋಲಿಸಿದ ಮೌರ್ಯರ ಅರಸು ಚಂದ್ರಗುಪ್ತ ಮೌರ್ಯನು ತನ್ನ ಮಂತ್ರಿಯಾಗಿದ್ದ ಕೌಟಿಲ್ಯನ ಸಹಾಯದಿಂದ ಉತ್ತರ ಭಾರತದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈತನ ನಂತರದಲ್ಲಿ ಬಂದ ಅಶೋಕನು ಮೌರ್ಯ ಸಾಮ್ರಾಜ್ಯವನ್ನು ದಕ್ಷಿಣ ಭಾರತಕ್ಕೂ ವಿಸ್ತರಿಸುತ್ತಾನೆ. ಕರ್ನಾಟಕವನ್ನು 'ಇಸಿಲ ಪ್ರಾಂತ್ಯ'ದ ಒಂದು ಭಾಗವನ್ನಾಗಿ

ಮಾಡಿಕೊಂಡು ತನ್ನ ಆಡಳಿತದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುತ್ತಾನೆ. ಕರ್ನಾಟಕದಲ್ಲಿ ಪ್ರಸ್ತುತ ಪ್ರಸಿದ್ಧ ದೊರೆಯ ಆಡಳಿತವನ್ನು ತಿಳಿಸುವ ನಿದರ್ಶನಗಳೆಂದರೆ ಬ್ರಹ್ಮಗಿರಿ, ಮಸ್ಕಿ ಮತ್ತು ಕೊಪ್ಪಳದಲ್ಲಿನ ಕಿರು ಬಂಡೆಯ ಶಾಸನಗಳು ಪ್ರಮುಖವಾದವುಗಳಾಗಿವೆ. ಈ ಶಾಸನಗಳು ರಚನೆಗೊಂಡಿರುವ ತಾಣಗಳಲ್ಲಿ ಅಶೋಕ ಚಕ್ರವರ್ತಿಯ ಹಿರಿಯ ಅಧೀನ ಧರ್ಮಾಧಿಕಾರಿಗಳಾಗಿದ್ದ 'ಮಹಾಮಾತ್ರರು' ಆಯಾ ಪ್ರದೇಶಗಳ ಆಡಳಿತವನ್ನು ನಿರ್ವಹಿಸುತ್ತಾ ಬಂದಿರುವುದು ತಿಳಿದು ಬರುತ್ತದೆ.

ಮೌರ್ಯ ಅರಸರಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಇದುವರೆಗೂ ಎರಡು ಶಾಸನಗಳು ದೊರೆತಿವೆ. ಅವುಗಳೆಂದರೆ ಕೊಪ್ಪಳ ನಗರದ ಶ್ರೀ ಗವಿಸಿದ್ಧೇಶ್ವರ ಮಠದ ಹತ್ತಿರದಲ್ಲಿರುವ ಬಂಡೆಯ ಮೇಲೆ ಕೆತ್ತಿಸಿದ ಶಿಲಾಶಾಸನ ಮತ್ತು ಕೊಪ್ಪಳದ ಹತ್ತಿರವಿರುವ ಪಾಲ್ಕಿಗುಂಡಿನಲ್ಲಿರುವ ಶಾಸನ[1] ಅತ್ಯಂತ ಪ್ರಮುಖವಾದವುಗಳು. ಈ ಶಾಸನಗಳು ಅಶೋಕನ ಆಳ್ವಿಕೆಯ ಕ್ರಿ.ಪೂ.273 ರಿಂದ 233ರ ನಡುವಿನ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳಲ್ಲಿ ಪಾಲ್ಕಿಗುಂಡಿಯಲ್ಲಿರುವ ಅಶೋಕನ ಶಾಸನವು ಬಹಳಷ್ಟು ತೃಟಿತಗೊಂಡಿದ್ದು ಸ್ಪಷ್ಟವಾದ ಮಾಹಿತಿಯನ್ನು ಒದಗಿಸಲಾರದು. ಆದರೆ ಈ ಎರಡೂ ಶಾಸನಗಳಲ್ಲಿ ಬರುವ ವಿಚಾರಗಳು ಒಂದೇ ಎಂಬುದು ಮಾತ್ರ ಸ್ಪಷ್ಟ. ಕೊಪ್ಪಳ ನಗರದ ಶ್ರೀಗವಿಸಿದ್ಧೇಶ್ವರ ಮಠದ ಸಮೀಪದಲ್ಲಿರುವ ಶಾಸನವು 'ದೇವನಾಂಪ್ರಿಯ'ನಾದ ಅಶೋಕನು ತನ್ನ ಸಾಮ್ರಾಜ್ಯದ ಪ್ರಜೆಗಳಿಗೆ ಅವರು ಆಚರಿಸಬೇಕಾದ ಧರ್ಮದ ಬಗೆಗೆ ತಿಳಿಯ ಹೇಳಿದ್ದನ್ನು ವಿವರಿಸುತ್ತದೆ. ಈ ಅಂಶವನ್ನು ಗಮನಿಸಿದರೆ ಕೊಪ್ಪಳವೂ ಸೇರಿದಂತೆ ಅದರ ಸುತ್ತಮುತ್ತಲಿನ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಪಟ್ಟಿರಬೇಕೆಂಬ ಅಂಶವು ಸ್ಪಷ್ಟವಾಗಿ ತಿಳಿದು ಬರುತ್ತದೆ. ಕೊಪ್ಪಳ ಪ್ರದೇಶಕ್ಕೆ ಹತ್ತಿರವಿರುವ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ದೊರೆತಿರುವ ಶಾಸನವು ಸಹ ಇದೇ ವಿಷಯವನ್ನು ಸಾರುತ್ತದೆ. ಅಶೋಕನ ಸಾಮ್ರಾಜ್ಯದಲ್ಲಿ ದಕ್ಷಿಣ ಪ್ರಾಂತದ ಮುಖ್ಯ ಸ್ಥಳವಾಗಿದ್ದ ಸುವರ್ಣಗಿರಿಯು ಮಸ್ಕಿಯ ಬಳಿಯಲ್ಲಿಯೇ ಇದ್ದಿತ್ತೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಕೊಪ್ಪಳ ಜಿಲ್ಲೆಯ ಇಂದಿನ ಕನಕಗಿರಿಯೇ ಈ ಸುವರ್ಣಗಿರಿಯೆಂಬುದು ಮತ್ತೆ ಕೆಲವರ ಅಭಿಪ್ರಾಯ. ಅದೇನೇ ಇದ್ದರೂ ಕೊಪ್ಪಳ ನಾಡು ಮೌರ್ಯ ಸಾಮ್ರಾಜ್ಯದ ಪ್ರಮುಖ ಭಾಗವಾಗಿದ್ದು ಪ್ರಾಂತೀಯ ರಾಜಧಾನಿ ಸಹ ಈ ಪ್ರದೇಶವಾಗಿತ್ತೆಂಬುದು ಸರ್ವವಿದಿತವಾದ ವಿಷಯವಾಗಿದೆ. ಕೊಪ್ಪಳದ ಶಾಸನದಂತೆ ಮಸ್ಕಿ ಶಾಸನದಲ್ಲಿಯೂ 'ದೇವನಾಂಪ್ರಿಯ', 'ಪ್ರಿಯದರ್ಶಿ' ಎಂದು ಕರೆಯಲ್ಪಡುವ ಅಶೋಕನ ಹೆಸರು ಕಂಡುಬರುವುದರಿಂದ ಈ ಶಾಸನಗಳ ಮಹತ್ವ ಹೆಚ್ಚಿದೆ. ಇದರಿಂದಾಗಿ ಅಶೋಕನ ಕಾಲದಲ್ಲಿ ಈ ಪ್ರದೇಶದಲ್ಲಿ ಬೌದ್ಧಧರ್ಮ ಪ್ರಬಲವಾಗಿತ್ತೆಂದು ತಿಳಿದುಬರುತ್ತದೆ. ಅಶೋಕನ ಕೊಪ್ಪಳದ ಶಾಸನದ[2] ಪ್ರತಿ ಹೀಗೆ ಸಾರುತ್ತದೆ.

1. ದೇವನಾಂಪಿಯೇ ಆಹ ಸಾತಿರೇಕಾಣಿ ಅಢತಿಯಾಣಿ ವಸಾಣಿ ಯಮ್ ಉಪಾ
2. ಸಕೇ ಣೊ ಚು ಕೋ ಬಾಢಮ್ ಪಕಂತೇ ಸಂವಛರೇ ಸಾತಿರೇಕೇ ಯಮ್ ಮೇ ಸಂಘೇ ಉಪೇತಿ ಬಾಢಂ
3. ಚ ಮೇ ಪಕಂತೇ ಸೇ ಇಮಾಯಮ್ ವೇಲಾಯಮ್ ಜಂಬುದೀಪಸಿ ಅಮಿಸಾ ದೇವಾ ಸಮಾಣಾ
4. ಮಾಣುಸೇಹಿ ಸೇ ದಾಣಿ ಮಿಸಾ ಕಟಾ ಪಕಮಸ ಏಸ ಫಾಲೆ ಣೋ ಹಿ ಇಯಮ್ ಮಹತೇಣೇವ ಚ
5. ಕಿಯೇ ಪಾಪೋಟವೆ ಖುಡಕೇನ ಪಿ ಪರಮಮೀಣೇನ ವಿಪುಲೇ ಪಿ ಚಕಿಯೇ ಸ್ವಗೇ ಆರಾಧ್ಯಯಿತವೇ
6. ತಾಯ ಚ ಅಥಯ ಇಯಮ್ ಸಾವಣೇ ಖುಡಕಾ ಚ ಉಡಾರಾ ಚ ಪರಮಂತು ತಿ ಅಂತಾ ಪಿ ಚ ಜಾಣಂತು ಚಿರಠಿ
7. ಠಿಕೇ ಚ ಪರಮೇ ಹೋತು ಇಯಮ್ ಚ ಅಠೇ ವಢಿಸಿತಿ ವಿಪುಲೇ ಚ ವಢಿಸಿತಿ ದಿಯ
8. ಢಿಯಮ್ ಪಿ ಚ ವಢಿಸಿತೀತಿ

ಈ ಮೇಲಿನ ಶಾಸನದ ಅತಿ ಮುಖ್ಯವಾದ ಸಾರಾಂಶ ಹೀಗಿದೆ:

"ದೇವನಾಂಪ್ರಿಯನು ಹೀಗೆ ಹೇಳುತ್ತಾನೆ. ನಾನು ಎರಡೂವರೆ ವರ್ಷಗಳಿಗಿಂತ ಹೆಚ್ಚು ಕಾಲ ಪ್ರಕಾಶದಲ್ಲಿ ಶಾಕ್ಯನಾಗಿದ್ದೆ. ಆದರೆ ಅಷ್ಟು ಚೆನ್ನಾಗಿ ಮನಸ್ಸಿಟ್ಟು ಪ್ರಯತ್ನಿಸಲಿಲ್ಲ. ಆದರೆ ಈಗ ಒಂದು ಸಂವತ್ಸರಕ್ಕಿಂತ ಹೆಚ್ಚು ಕಾಲ ಸಂಘವನ್ನು ಪ್ರವೇಶಿಸಿ ಚೆನ್ನಾಗಿ ಪ್ರಯತ್ನಿಸಿರುವೆನು. ಈ ಕಾಲದಲ್ಲಿ ಜಂಬೂ ದ್ವೀಪದ ಜನರು ದೇವರುಗಳೊಂದಿಗೆ ಮಿಶ್ರರಾಗಿದ್ದವರೆಲ್ಲರೂ ದೇವರುಗಳೊಂದಿಗೆ ಮಿಶ್ರರಾದರು. ಇದು ಪ್ರಯತ್ನದ ಫಲ. ಮಹತ್ತರಿಂದ ಮಾತ್ರ ಇದು ಸಾಧ್ಯವೆಂದು ತಿಳಿಯಬೇಡಿ. ಕ್ಷುದ್ರ ಜನರೂ ಕೂಡ ತಮ್ಮ ಪ್ರಯತ್ನದಿಂದ ಸ್ವರ್ಗವನ್ನು ಪಡೆಯಬಹುದು. ಇದಕ್ಕಾಗಿಯೇ ಈ ಧರ್ಮ ಶ್ರವಣವನ್ನು ಮಾಡಿರುವುದು. ಕ್ಷುದ್ರರೂ, ಮಹಾತ್ಮರೂ ಎಲ್ಲರೂ ಪರಾಕ್ರಮಿಸಲಿ ಎಂದು, ನೆರೆಯವರು ಕೂಡ ಇದನ್ನು ತಿಳಿಯಲಿ ಎಂದು, ಪರಾಕ್ರಮ ಎಂದರೆ ಇದು. ಚಿರಸ್ಥಾಯಿಯಾಗಿ ನಿಲ್ಲಲಿ ಎಂದು ಇದು ವರ್ಧಿಸುತ್ತದೆ. ವಿಪುಲವಾಗಿ ವರ್ಧಿಸುತ್ತದೆ. ಈಗಿನಕ್ಕಿಂತ ಒಂದೂವರೆಯಷ್ಟು ವರ್ಧಿಸುತ್ತದೆ."

ಈ ಮೇಲಿನ ಶಾಸನದಲ್ಲಿ ಗಮನಿಸಬೇಕಾದ ಅಂಶವೆಂದರೆ ಕ್ಷುದ್ರ ಜನರೂ ಕೂಡ ಸ್ವರ್ಗವನ್ನು ಪಡೆಯಬಹುದೆಂದು ಹೇಳಿರುವುದು. ಬಹುಶಃ ಭಾರತದ ಚರಿತ್ರೆಯಲ್ಲಿ ಕ್ಷುದ್ರ ಜನರ ಬಗ್ಗೆ ಮಾತನಾಡಿದ ಮೊದಲನೇ ಧೀಮಂತ ಅರಸ ಅಶೋಕನಾಗಿದ್ದಾನೆ. ಸ್ವರ್ಗ ಅಥವಾ ಇನ್ಯಾವುದೇ ವಿಶಿಷ್ಟತೆಗಳಾಗಲಿ ಕೇವಲ ಮೇಲ್ವರ್ಗದವರಿಗೆ ಮಾತ್ರ

ಸೀಮಿತ ಮತ್ತು ಅವರಿಗೆ ಸಿಗುತ್ತವೆ. ಅವರೇ ಅದನ್ನು ಪಡೆಯಲು ಪ್ರಯತ್ನಿಸಬೇಕು ಎಂದು ಉಪದೇಶಿಸುವ ಕಾಲದಲ್ಲಿ ಕ್ಷುದ್ರ ಜನರೂ ಕೂಡ ಧರ್ಮವನ್ನು ಆಚರಿಸಬಹುದು ಮತ್ತು ಈ ಪ್ರಯತ್ನದಿಂದ ಅವರು ಸ್ವರ್ಗವನ್ನು ಪಡೆಯಬಹುದು ಎಂದು ಅಶೋಕನು ಶಾಸನದಲ್ಲಿ ಜನತೆಗೆ ಕರೆಕೊಟ್ಟಿದ್ದಾನೆ. ಇನ್ನೊಂದು ದೃಷ್ಟಿಯಿಂದ ನೋಡಿದಾಗ ಬಹುಶಃ ಬೌದ್ಧ ಧರ್ಮದ ಪ್ರಚಾರದ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದಾನೆಂದು ಊಹಿಸಲು ಸಾಧ್ಯವಿದೆ. ಆದರೆ ಅಶೋಕನ ಚರಿತ್ರೆ(ಕಳಿಂಗ ಯುದ್ಧದ ನಂತರ ಶಾಂತಿಗಾಗಿ ಯುದ್ಧವನ್ನೇ ತಿರಸ್ಕರಿಸಿದ್ದು)ಯನ್ನು ಅವಲೋಕಿಸಿದಾಗ ಆತನಲ್ಲಿದ್ದ ಮಾನವೀಯ ಗುಣದ ಅರಿವಾಗುತ್ತದೆ. ಇಂತಹ ವಿಶೀಷ್ಟವಾದ ಶಾಸನವೊಂದು ಜಿಲ್ಲೆಯಲ್ಲಿ ದೊರೆತದ್ದು ವಿಶೇಷ.

ಹಾಗೆಯೇ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ; ಬಳ್ಳಾರಿ ಜಿಲ್ಲೆಯ ನಿಟ್ಟೂರು, ಉಡೇಗೋಳ; ರಾಯಚೂರು ಜಿಲ್ಲೆಯ ಮಸ್ಕಿ...... ಮುಂತಾದೆಡೆಯಲ್ಲಿ ಅಶೋಕನಿಗೆ ಸಂಬಂಧಿಸಿದ ಸುಮಾರು ಹದಿನೇಳು ಶಾಸನಗಳು ಲಭ್ಯವಿವೆ. ಪಾಲ್ಕಿಗುಂಡು ಮತ್ತು ಮಸ್ಕಿಗಳಲ್ಲಿ ಶಾಸನಗಳಲ್ಲಿನ ವೃತ್ತಾಂತವೂ ಸ್ವಲ್ಪ ಹೆಚ್ಚು ಕಡಿಮೆ ಇದೇ ಆಗಿದೆ. ಇಂತಹ ಶಾಸನಗಳ ಮುಖಾಂತರ ಮೌರ್ಯರ ಕಾಲದ ಆಡಳಿತದ ಕುರುಹುಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ನಾವು ಗುರುತಿಸಬಹುದು.

**ಶಾತವಾಹನರು :**

ಮೌರ್ಯರ ನಂತರ ಈ ಪ್ರದೇಶ ಶಾತವಾಹನ ದೊರೆಗಳ ಆಳ್ವಿಕೆಗೆ ಸೇರಿದಂತೆ ತಿಳಿದು ಬರುತ್ತದೆ. ಇವರ ಮೂಲ ಸ್ಥಾನವು ಈಗಿನ ಬಳ್ಳಾರಿ ಜಿಲ್ಲೆಯ ಉತ್ತರ ಭಾಗದಲ್ಲಿತ್ತೆಂದು ಹೇಳಲಾಗುತ್ತಿದೆ. ಕೊಪ್ಪಳ ನಾಡು ಬಳ್ಳಾರಿ ಪಕ್ಕದಲ್ಲಿರುವುದರಿಂದ ಆ ಕೀರ್ತಿ ಕೊಪ್ಪಳ ಪ್ರದೇಶಕ್ಕೂ ಅನ್ವಯಿಸಬಹುದಾಗಿದೆ. ಸುಮಾರು 550 ವರ್ಷಗಳ ಕಾಲ ಆಳಿದ ಶಾತವಾಹನ ದೊರೆಗಳ ಆಡಳಿತದ ಕಾಲಾವಧಿ ಯುದ್ದಕ್ಕೂ ಕೊಪ್ಪಳ ಪ್ರದೇಶ ಅವರ ವಶದಲ್ಲಿತ್ತೆಂದು ಹೇಳಲು ಆಧಾರಗಳಿವೆ. ಎರಡು ಅಶ್ವಮೇಧಗಳನ್ನು ಮತ್ತು ರಾಜಸೂಯಗಳನ್ನು ಮಾಡಿದ ಈ ವಂಶದ ಕನ್ನ ಅಥವಾ ಕೃಷ್ಣ (ಕ್ರಿ.ಪೂ.207–189) ಮಹಾರಾಷ್ಟ್ರದಿಂದ ಪೂರ್ವ ತೀರದ ಕಳಿಂಗದವರೆಗಿನ ಭೂಭಾಗವನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದನು. ತದನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಶಾತಕರ್ಣಿ (ಕ್ರಿ.ಪೂ.179) ಪಾಟಲಿಪುತ್ರದ ಅರಸನನ್ನು ಯುದ್ಧದಲ್ಲಿ ಸೋಲಿಸಿ ಕೊಂದುದಾಗಿ ತಿಳಿದು ಬರುತ್ತದೆ. ಕುಂತಳ ಪ್ರದೇಶದಲ್ಲಿ ರಾಯಚೂರು ಜಿಲ್ಲೆ ಸೇರ್ಪಡೆಯಾಗಿತ್ತೆಂದು ತಿಳಿದು ಬರುತ್ತದೆ. ಪುಳುಮಾವಿ, ಹಾಲ (ಕ್ರಿ.ಶ.20–24), ಗೌತಮಿ ಪುತ್ರ ಶಾತಕರ್ಣಿ...... ಮುಂತಾದವರು ಈ ಪ್ರದೇಶದ ಮೇಲೆ ಆಡಳಿತ ನಡೆಸಿದರು. ಗೌತಮಿ ಪುತ್ರನ ಆಳ್ವಿಕೆಗೆ ಸ್ವಲ್ಪ ಮೊದಲು ಕ್ಷತ್ರಪರು ಶಾತವಾಹನ ರಾಜ್ಯವನ್ನು ತೊಂದರೆಗೀಡು

ಮಾಡಿದ್ದರು. ಆದರೆ ಗೌತಮಿಪುತ್ರನು ಅವರನ್ನು ಹೊಡೆದೋಡಿಸಿ ತನ್ನ ರಾಜ್ಯವನ್ನು ಬಲಪಡಿಸಿದನು. ಈ ವಂಶದ ಕೊನೆಯ ಪ್ರಮುಖ ಅರಸು ಯಜ್ಞಶ್ರೀ ಶಾತಕರ್ಣಿ (ಕ್ರಿ.ಶ.170–199). ಈತನು ಶಾತವಾಹನ ವಂಶದ ಕೀರ್ತಿ ಪತಾಕೆಯನ್ನು ಪುನಃ ಸ್ಥಾಪಿಸಿದನು. ಇಂತಹ ಶಾತವಾಹನರಿಗೆ ಸಂಬಂಧಿಸಿದಂತೆ ನೇರವಾಗಿ ಮಾಹಿತಿ ನೀಡುವ ಯಾವುದೇ ಶಾಸನವು ಕೊಪ್ಪಳ ಜಿಲ್ಲೆಯಲ್ಲಿ ಇದುವರೆಗೂ ಲಭ್ಯವಾಗಿಲ್ಲ. ಆದರೆ ಶಾಸನೇತರ ಅಂಶಗಳನ್ನು ಗಮನಿಸಿದರೆ ಶಾತವಾಹನರೂ ಕೂಡ ಕೊಪ್ಪಳ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದಂತೆ ಕಂಡು ಬರುತ್ತದೆ.

ಮೌರ್ಯ ಸಾಮ್ರಾಜ್ಯದ ಪತನದ ನಂತರ ಅಲ್ಲಲ್ಲಿ ನೆಲೆಸಿದ್ದ ಶಾತವಾಹನರು ಈ ಪ್ರದೇಶದ ಒಡೆಯರಾದರೆಂಬುದನ್ನು ಅವರ ಕಾಲದ ಮಡಕೆಯ ತುಂಡುಗಳು ಮತ್ತು ಅವರ ಲಾಂಛನವಾದ ಆನೆಯ ಆಕರ್ಷಣೀಯ ರೇಖಾಚಿತ್ರವು ಕೋಟೆಯಲ್ಲಿನ ಎತ್ತರದ ಗುಂಡಿನಲ್ಲಿ ಕೆತ್ತಿದ 'ಉಸ್ಮಾನ' ತಾಣದಲ್ಲಿವೆ. ಇವರ ಕಾಲದ ಒಂದು ಉತ್ತಮ ನಾಣ್ಯವೊಂದು ಇಲ್ಲೇ ದೊರೆತಿರುವುದಾಗಿ ತಿಳಿದು ಬರುತ್ತದೆ. ಈ ನಾಣ್ಯದ ಒಂದು ಬದಿಯಲ್ಲಿ ಆನೆಯ ಉಬ್ಬು ಚಿತ್ರವಿದ್ದು ಅದು ಹೆಚ್ಚು ಕಲಾತ್ಮಕವಾಗಿ ಪ್ರಮಾಣ ಬದ್ಧವಾಗಿ ಕಂಡುಬರುತ್ತದೆ. ಇದರ ಸುತ್ತಣ ಬ್ರಾಹ್ಮಿ ಲಿಪಿಯಲ್ಲಿ 'ಸಿರಿಸತಕ'(ನಿ) ಎಂದು ಬರೆಯಲ್ಪಟ್ಟಿದೆ. ಇದರ ಲಿಪಿ ಬ್ರಾಹ್ಮಿಯಾಗಿದ್ದರೆ; ಭಾಷೆ ಪ್ರಾಕೃತವಾಗಿದೆ. ಇದು ಬಹುಶಃ ಶಾತಕರ್ಣಿ ಮಹಾರಾಜನಿಗೆ ಸಂಬಂಧಿಸಿದ ಕಾಲದ್ದಾಗಿರಬೇಕೆಂದು ನಂಬಲಾಗಿದೆ. ನಾಣ್ಯದ ಹಿಂಬದಿಯಲ್ಲಿನ ವರ್ತುಲಗೊಳಿಸಿದ ಫಲಸಹಿತ ವೃತ್ತವನ್ನು ಕೆತ್ತಿಸಲಾಗಿದೆ. ಹಾಗೆಯೇ ಕೊಪ್ಪಳದ ಸಮೀಪದಲ್ಲಿನ ಚಿಕ್ಕಸಿಂದೋಗಿಯಲ್ಲಿ ಕೆಲವು ವರ್ಷಗಳ ಹಿಂದೆ ಇಂತಹ ನಾಣ್ಯಗಳು ದೊರಕಿರುವುದಾಗಿ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಪ್ರಕಟಿಸಿದೆ.[3] ಈ ನಾಣ್ಯಗಳಿಂದ ಪಾತ್ರೆಯ ಮೇಲೆ 'ಚಿಂತಸ' ಎಂದು ಬರೆಯಲಾಗಿದೆ. 'ಚಿಂತ' ಎಂಬುದು ವ್ಯಕ್ತಿಯ ಹೆಸರು. 'ಸ'ಷಷ್ಠಿ ವಿಭಕ್ತಿ. ಪ್ರಾಕೃತ ಭಾಷೆಯಲ್ಲಿನ 'ಸ'ವು ಕನ್ನಡದಲ್ಲಿ 'ನ'ಕಾರವಾಗುತ್ತದೆ. ಅಂದರೆ 'ಚಿಂತಸ'ವು ಕನ್ನಡದಲ್ಲಿ 'ಚಿಂತನ' ವಾಗುತ್ತದೆ. ಮುದ್ರಾಂಕಿತ ನಾಣ್ಯಗಳಾದ ಇವುಗಳು ಪಂಚಮಾರ್ಕದವುಗಳಾಗಿವೆ. ಇವುಗಳು ಮೌರ್ಯರ ಕಾಲದಿಂದ ಶಾತವಾಹನರ ಕಾಲದವರೆಗೂ ಬಳಕೆ ಯಲ್ಲಿದ್ದವೆಂದು ತಿಳಿದು ಬರುತ್ತದೆ. ಅ.ಸುಂದರ ಅವರು ಸಹ ಇದನ್ನು ಸಮರ್ಥಿಸುತ್ತಾರೆ.[4] ಆದರೆ ಇದನ್ನು ಸಮರ್ಥಿಸುವ ಯಾವುದೇ ಶಾಸನವು ಲಭ್ಯವಿಲ್ಲ. ಆದುದರಿಂದ ಶಾಸನಗಳ ಆಧಾರಗಳಲ್ಲದೆ ಶಾತವಾಹನರ ಆಡಳಿತವು ಕೊಪ್ಪಳದಲ್ಲಿತ್ತು ಎಂಬುದು ಸುಲಭವಾಗಿ ಒಪ್ಪಲಾಗದು.

ಶಾತವಾಹನರ ನಂತರ ಹಂಚಿಹೋದ ಹಲವಾರು ಸಣ್ಣಪುಟ್ಟ ರಾಜ್ಯಗಳು ತಲೆ ಎತ್ತಿದವು. ಬಹುಶಃ ಇಂತಹ ಸಣ್ಣ ವಂಶಗಳಲ್ಲಿ ಒಂದಾದ ವಾಕಾಟಕರು ಕೊಪ್ಪಳ ಪ್ರದೇಶದಲ್ಲಿ ಅಧಿಕಾರವನ್ನು ಸ್ಥಾಪಿಸಿರಬಹುದು. ಈ ವಂಶದ ರುದ್ರಸೇನ (ಕ್ರಿ.ಶ.340–365)

ಮತ್ತು ಪೃಥ್ವಿಸೇನ(ಕ್ರಿ.ಶ.365–390) ಕುಂತಳವನ್ನು ತಮ್ಮ ವಶಕ್ಕೆ ತೆಗೆದುಕೊಂಡಿರಬೇಕು. ಆರನೆಯ ಶತಮಾನದ ಮಧ್ಯಭಾಗದಲ್ಲಿ ವಾಕಾಟಕರು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡರು. ಕೆಲಕಾಲ ಈ ಪ್ರದೇಶದ ಮೇಲೆ ಚೂಟು ವಂಶದ ಅರಸರು ಅಧಿಕಾರ ಪಡೆದಿರಬಹುದಾಗಿದೆ. ಆದರೆ ಇದಕ್ಕೆ ಶಾಸನಗಳ ಆಧಾರವಿಲ್ಲ.

**ಕದಂಬರು :**

ಶಾತವಾಹನರ ತರುವಾಯ ಕೊಪ್ಪಳ ಜಿಲ್ಲಾ ಪ್ರದೇಶವು ಬಹುಮಟ್ಟಿಗೆ ಬನವಾಸಿಯ ಕದಂಬರ ರಾಜ್ಯಕ್ಕೆ ಸೇರಿರಬೇಕೆಂದು ಸುಲಭವಾಗಿ ಊಹಿಸಬಹುದು. ಸಾಮಾನ್ಯವಾಗಿ ಚರಿತ್ರೆಕಾರರು ಕದಂಬ ರಾಜ್ಯದ ಉತ್ತರದ ಎಲ್ಲೆಯು ಮಲಪ್ರಭ ನದಿಯೆಂದು, ಪೂರ್ವದ ಎಲ್ಲೆಯು ಶ್ರೀಶೈಲವೆಂದು ಗುರ್ತಿಸಿದ್ದಾರೆ. ಕಾರಣ ಈ ಕೊಪ್ಪಳವು ತುಂಗಭದ್ರ ಮತ್ತು ಮಲಪ್ರಭ ಸಮತಲದಲ್ಲಿ ಬಹುಮಟ್ಟಿಗೆ ಬರುತ್ತದೆ. ಇದಕ್ಕೆ ಪೂರಕವಾಗಿ ಮಯೂರವರ್ಮನ ಪುನರ್ ವಿಮರ್ಶಿಸಿದ ಚಂದ್ರವಳ್ಳಿಯ ಶಾಸನ[5] ದಲ್ಲಿ ಕುಪಣದ ಚಾಮನ ವಿವರವಿದೆ. ಪ್ರಸ್ತುತ ಕದಂಬರ ರಾಜ್ಯದಲ್ಲಿ ಕೊಪ್ಪಳವೂ ಸೇರ್ಪಡೆಯಾಗಿದ್ದುದು ಈ ಶಾಸನದಿಂದ ತಿಳಿದು ಬರುತ್ತದೆ. ಕದಂಬರ ಸಾಮಂತ ಅರಸನಾಗಿದ್ದ ಬಾದಾಮಿ ಚಾಲುಕ್ಯ ವಂಶದ ಒಂದನೆ ಪುಲಿಕೇಶಿಯು ಪ್ರಬಲನಾಗಿ ಕದಂಬರ ಕೊನೆಯ ಅರಸು ಕೃಷ್ಣ ವರ್ಮನನ್ನು ಸೋಲಿಸಿ ಕ್ರಿ.ಶ.540ರಲ್ಲಿ ಸ್ವತಂತ್ರನಾದನೆಂಬುದಾಗಿ ಸ್ಪಷ್ಟವಾಗುತ್ತದೆ.

**ಬಾದಾಮಿ ಚಾಲುಕ್ಯರು :**

ಮೌರ್ಯರ ನಂತರ ಅಧಿಕೃತವಾಗಿ ಕೊಪ್ಪಳವನ್ನು ಆಳಿದ ರಾಜ ಮನೆತನವೆಂದರೆ ಬಾದಾಮಿ ಚಾಲುಕ್ಯ ಮನೆತನ. ಆರನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಬಲರಾದ ಬಾದಾಮಿಯ ಚಾಲುಕ್ಯರು ಈ ಭಾಗಕ್ಕೆ ಒಡೆಯರಾದರು. ಮೊದಲ ದೊರೆಗಳಾದ ಒಂದನೆಯ ಪುಲಿಕೇಶಿ, ಕೀರ್ತಿವರ್ಮ ಮತ್ತು ಮಂಗರಸರ ಕಾಲದಲ್ಲಿ ಕೊಪ್ಪಳ ಪ್ರದೇಶ ಅವರಿಗೆ ಸೇರಿತ್ತೋ ಇಲ್ಲವೋ ನಿಶ್ಚಿತವಾಗಿ ಹೇಳುವ ಶಾಸನಗಳಾವುವು ಇದುವರೆಗೂ ದೊರೆತಿಲ್ಲ. ಆದರೆ ಇಮ್ಮಡಿ ಪುಲಿಕೇಶಿಯ ಕಾಲದಿಂದ (ಕ್ರಿ.ಶ.609–642) ಈ ವಿಷಯದಲ್ಲಿ ಸಂದೇಹಕ್ಕೆ ಆಸ್ಪದವಿಲ್ಲ. ಉತ್ತರದಲ್ಲಿ ನರ್ಮದೆಯವರೆಗೆ, ಪೂರ್ವದಲ್ಲಿ ಕಳಿಂಗದವರೆಗೆ ಹಬ್ಬಿದ್ದ ಈ ರಾಜ್ಯದೊಳಗೆ ಸಹಜವಾಗಿಯೇ ಕೊಪ್ಪಳ ಪ್ರದೇಶ ಸೇರಿರುತ್ತದೆ. ಕದಂಬ, ಗಂಗ, ಅಳುಪ, ಪಲ್ಲವ, ಚೋಳ, ಕೊಂಕಣದ ಮೌರ್ಯ, ಮಾಳವ ಮತ್ತು ಗೂರ್ಜರ ದೊರೆಗಳನ್ನು ಕೋಸಲ ಕಳಿಂಗ ದೇಶಗಳನ್ನು ತನ್ನ ಪ್ರಭುತ್ವಕ್ಕೆ ಒಳಪಡಿಸಿಕೊಂಡವನು ಇಮ್ಮಡಿ ಪುಲಿಕೇಶಿ. ಉತ್ತರಪಥೇಶ್ವರನಾಗಿದ್ದ ಹರ್ಷ ವರ್ಧನನ್ನು ಸೋಲಿಸಿ ದಕ್ಷಿಣಪಥೇಶ್ವರನೆಂಬ ಬಿರುದುವೆತ್ತ ಇಮ್ಮಡಿ ಪುಲಿಕೇಶಿಯು ಕರ್ನಾಟಕದ ಇತಿಹಾಸದಲ್ಲಿಯೇ ಒಬ್ಬ ಶಕಪುರುಷ. ಭಾರತದ

ಸಮುದ್ರದಾಚೆಗೂ ತನ್ನ ಕೀರ್ತಿಯನ್ನು ಪಸರಿಸಿದ್ದ. ಪುಲಿಕೇಶಿ ಪರ್ಷಿಯ ಚಕ್ರವರ್ತಿ ಇಮ್ಮಡಿ ಖುಸ್ರುವಿನೊಂದಿಗೆ ರಾಯಭಾರ ಸಂಬಂಧವನ್ನು ಹೊಂದಿದ್ದನು. ಖುಸ್ರುವಿನ ದೂತನು ಚಾಲುಕೇಶ್ವರನಿಗೆ ಕಾಣಿಕೆಯನ್ನು ನೀಡುತ್ತಿರುವ ದೃಶ್ಯದ ಚಿತ್ರವೊಂದು ಅಜಂತಾದ ಗುಹೆಯೊಂದರ ವರ್ಣಚಿತ್ರದಲ್ಲಿ ಇರುವುದನ್ನು ಇತಿಹಾಸತಜ್ಞರು ಗುರುತಿಸಿದ್ದಾರೆ. ಚೀನಾದ ಬೌದ್ಧ ಯಾತ್ರಿಕ ಹುಯೆನ್‌ತ್ಸಾಂಗ್ ಪುಲಿಕೇಶಿಯ ಆಡಳಿತದ ಕಾಲದಲ್ಲಿ ಇಲ್ಲಿಗೆ ಬಂದಿದ್ದು, ಕರ್ನಾಟಕದ ಭವ್ಯ ಜೀವನದ ಸಂಸ್ಕೃತಿಯನ್ನು ಮುಕ್ತ ಕಂಠದಿಂದ ಹೊಗಳಿದ್ದಾನೆ. ಪಲ್ಲವ ಚಾಲುಕ್ಯ ಹೋರಾಟ ಶ್ರೇಣಿಯಲ್ಲಿ ಸಾಮಾನ್ಯವಾಗಿ ಮೇಲುಗೈ ಪಡೆದಿದ್ದ ಕರ್ನಾಟಕ ರಾಜಶ್ರೀ ಪುಲಿಕೇಶಿಯ ಆಳ್ವಿಕೆಯ ಕೊನೆಗಾಲದಲ್ಲಿ ತಾತ್ಕಾಲಿಕವಾಗಿ ಭೂಗತಗಳಾಗ ಬೇಕಾಯಿತು. ಪಲ್ಲವ ನರಸಿಂಹವರ್ಮನು ಬಾದಾಮಿಯನ್ನು ವಶಪಡಿಸಿಕೊಂಡಾಗ ಉಂಟಾದ ಅಸ್ತವ್ಯಸ್ತ ಪರಿಸ್ಥಿತಿಯಲ್ಲಿ ಪುಲಕೇಶಿಯು ಕಣ್ಮರೆಯಾದನು.

ಒಂದನೇ ಪುಲಿಕೇಶಿಯು ಬಾದಾಮಿಯ ಗಿರಿಯ ಮೇಲೆ ಕಲ್ಲಿನ ಕೋಟೆಯನ್ನು ಕಟ್ಟಿಸಿದನು. ಇದು ಪ್ರಪ್ರಥಮವಾದ ಗಿರಿಯ ಕೋಟೆಯಾಗಿದ್ದು ಕರ್ನಾಟಕದ ಉಳಿದ ಭಾಗದಲ್ಲಿ ಗಿರಿಗಳ ಮೇಲೆ ಕೋಟೆಗಳನ್ನು ನಿರ್ಮಿಸಲು ನಾಂದಿಯಾಯಿತು. ಬಾದಾಮಿ ಚಾಲುಕ್ಯ ವಂಶದಲ್ಲಿಯೇ ಅತ್ಯಂತ ಪ್ರಬಲ ಅರಸ ಮತ್ತು ದಕ್ಷಿಣಪಥೇಶ್ವರನೆಂದು ಬಿರುದು ಪಡೆದಿದ್ದ ಇಮ್ಮಡಿ ಪುಲಿಕೇಶಿಯು ದಕ್ಷಿಣ ಭಾರತವನ್ನಲ್ಲದೇ ಉತ್ತರ ಭಾರತದಲ್ಲಿಯೂ ತನ್ನ ಸಾಮ್ರಾಜ್ಯನ್ನು ವಿಸ್ತರಿಸಿದ್ದನು.

ಜಿಲ್ಲೆಯಲ್ಲಿ ಬಾದಾಮಿಯ ಚಾಲುಕ್ಯರ ಆಡಳಿತದ ಕಾಲಾವಧಿಯನ್ನು ಸೂಚಿಸುವ ಕೆಲವೊಂದು ಶಾಸನಗಳಲ್ಲಿ ಮಾತ್ರ ಕಂಡು ಬರುತ್ತವೆ. ಹೀಗಾಗಿ ಬಾದಾಮಿ ಚಾಲುಕ್ಯ ಆಡಳಿತದ ಕಾಲಾವಧಿವರೆಗಿನ ಈ ಜಿಲ್ಲೆಯ ರಾಜಕೀಯ ಇತಿಹಾಸ ಸ್ಪಷ್ಟವಾಗಿ ದೊರಕುವುದಿಲ್ಲ. ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದಂತೆ ಹಲಗೇರಿ, ಇಟಗಿ, ಕುಕನೂರುಗಳಲ್ಲಿ ಕೆಲವು ಶಾಸನಗಳು ದೊರಕುತ್ತವೆ. ಕ್ರಿ.ಶ.8ನೇ ಶತಮಾನದ ಹಲಗೇರಿಯ ಶಾಸನವು[6] ವಿಜಯಾದಿತ್ಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಈ ಶಾಸನದಲ್ಲಿ **'ಕೊಪಣ'** (ಕೊಪ್ಪಳವೆಂಬುದು ಇತ್ತೀಚಿನ ಹೆಸರು)ದ ಬಗೆಗೆ ಪ್ರಪ್ರಥಮವಾಗಿ ಶಾಸನೋಕ್ತ ಹೆಸರು ದಾಖಲಾಗಿದೆ. ಹಾಗೆಯೇ ಪ್ರಸ್ತುತ ಶಾಸನವು ಕೊಪ್ಪಳದ ಅಂದಿನ ಮೂರು ಜಾತಿ, ಗುತ್ತಿಯ ಮುಖ್ಯಸ್ಥ (ಅಂ)ಗ ರಾಜನನ್ನು ಕುರಿತಾಗಿಯೂ ಉಲ್ಲೇಖಿಸುತ್ತದೆ. ಹಾಗೆಯೇ ಈ ಚಾಲುಕ್ಯ ವಂಶದ ಅರಸು ವಿಜಯಾದಿತ್ಯನ ಕಾಲದಲ್ಲಿ (ಕ್ರಿ.ಶ.696–733) ಈತನ ವಿತ್ತ ಸಚಿವ ಗುತ್ತಿಯ ಒಡೆಯ ಅಂಗರಾಜನು ಈ ಕೊಪ್ಪಳದಲ್ಲಿ ಇದ್ದುದನ್ನು ಪ್ರಸ್ತುತ ಹಲಗೇರಿ ಶಾಸನವು ಸ್ಪಷ್ಟಪಡಿಸುತ್ತದೆ.

ಇಟಗಿಯ ಶಾಸನವೊಂದು[7] ಇದೇ ಬಾದಾಮಿ ಚಾಲುಕ್ಯ ವಂಶದ ಮತ್ತೊಬ್ಬ ಅರಸನಾಗಿದ್ದ ಯುದ್ಧಮಲ್ಲ ಸತ್ಯಾಶ್ರಯನ ಕಾಲಕ್ಕೆ ಸಂಬಂಧಿಸಿದೆ. ಆದರೆ ಈ

ಶಾಸನವು ತೃಟಿತವಾಗಿದ್ದು ವಿವರಗಳು ಸ್ಪಷ್ಟವಾಗಿ ದೊರೆಯಲಾರವು. ಬಾದಾಮಿ ಚಾಲುಕ್ಯ ಮಾಂಡಲೀಕ ದಂತಿದುರ್ಗನು ಈ ಚಾಲುಕ್ಯ ವಂಶದ ಕೊನೆಯ ಅರಸು ಕೀರ್ತಿವರ್ಮನನ್ನು ಸೋಲಿಸಿ ಕ್ರಿ.ಶ.747ರಲ್ಲಿ ಮಾನ್ಯಖೇಟದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಹೀಗಾಗಿ ಪ್ರಸ್ತುತ ಶಾಸನಗಳ ಆಧಾರಗಳಿಂದ ಕೊಪ್ಪಳ ಜಿಲ್ಲೆಯಲ್ಲಿ ಬಾದಾಮಿ ಚಾಲುಕ್ಯ ವಂಶವು ಆಳ್ವಿಕೆ ನಡೆಸಿದೆಯೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

**ರಾಷ್ಟ್ರಕೂಟರು :**

ಬಾದಾಮಿ ಚಾಲುಕ್ಯರ ನಂತರ ಕರ್ನಾಟಕದಲ್ಲಿ ತಮ್ಮ ಸಾಮ್ರಾಜ್ಯದ ಮೂಲಕ ಆಳ್ವಿಕೆ ನಡೆಸಿದ ಅರಸು ಮನೆತನವೆಂದರೆ ರಾಷ್ಟ್ರಕೂಟ ಮನೆತನ. ಈ ವಂಶದ ಪ್ರಖ್ಯಾತ ಅರಸನಾದ ಅಮೋಘವರ್ಷ ನೃಪತುಂಗನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತರದಲ್ಲಿ ಗೋದಾವರಿ ನದಿಯವರೆಗೂ ದಕ್ಷಿಣದಲ್ಲಿ ಕಾವೇರಿ ನದಿಯವರೆಗೂ ಪೂರ್ವದಿಂದ ಪಶ್ಚಿಮದ ಸಾಗರಗಳವರೆಗೂ ಹಬ್ಬಿದ್ದಿತು. ಇಂತಹ ಪ್ರಖ್ಯಾತ ಅರಸು ಮನೆತನಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ದೊರೆಯುತ್ತವೆ.

ಕೊಪ್ಪಳ ಜಿಲ್ಲೆಯ ಇಟಗಿ, ಅರಕೇರಿ, ಸಂಕನೂರು, ಅಳವಂಡಿ, ಬೆಟಗೇರಿ ಮುಂತಾದ ಸ್ಥಳಗಳಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಅನೇಕ ಶಾಸನಗಳು ದೊರಕುತ್ತವೆ. ನೃಪತುಂಗನು ಸೇರಿದಂತೆ ಈ ಮನೆತನದ ಪ್ರಮುಖ ಅರಸರುಗಳಾದ ಮುಮ್ಮಡಿ ಇಂದ್ರ, ಪ್ರಭೂತವರ್ಷ ಗೋವಿಂದ, ಇಮ್ಮಡಿ ಕೃಷ್ಣ, ಮುಮ್ಮಡಿ ಕೃಷ್ಣ, ಜೊಟ್ಟಿಗ.......... ಮುಂತಾದವರನ್ನು ಕುರಿತಂತೆಯೂ ಅನೇಕ ಶಾಸನಗಳು ಈ ಪ್ರದೇಶದಲ್ಲಿ ದೊರಕಿವೆ.

ರಾಷ್ಟ್ರಕೂಟ ವಂಶದ ಪ್ರಥಮ ಪ್ರಸಿದ್ಧ ದೊರೆಯೆನಿಸಿಕೊಂಡಿರುವ ಮುಮ್ಮಡಿ ಇಂದ್ರ (ಕ್ರಿ.ಶ.883)ನ ಕಾಲದಲ್ಲಿ ಕೊಪಣ(ಕೊಪ್ಪಳ)ದ ದಂಡ ನಾಯಕನಾಗಿದ್ದ ಮಾಮರಸನೆಂಬುವವನು ಭೇಟಿ ನೀಡಿ, ಕದಂಬ ವಂಶದ ಮಹಾ ಸಾಮಂತನಾಗಿದ್ದ ದಡಿಯಮರಸನು ಕಟ್ಟಿಸಿದನೆಂದು ಹೇಳಲಾಗುವ ಬಸದಿಗೆ ದಾನವನ್ನು ನೀಡಿದನೆಂಬುದಕ್ಕೆ ಶಾಸನ[8]ವೊಂದು ಆಧಾರವಾಗಿದೆ. ಆದರೆ ಈ ಕಾಲದಲ್ಲಿ ಆಳ್ವಿಕೆ ನಡೆಸುತ್ತಿರುವನು ಮುಮ್ಮಡಿ ಇಂದ್ರನಾಗದೆ ಇಮ್ಮಡಿ ಕೃಷ್ಣ ನೆಂಬುದು ಸ್ಪಷ್ಟ. ಹಾಗೆಯೇ ನೃಪತುಂಗನ ಕಾಲಕ್ಕೆ ಸಂಬಂಧಿಸಿದ ಶಾಸನ[9] ವೊಂದರಲ್ಲಿ ಯೋಧನೊಬ್ಬ ವೀರಮರಣ ಹೊಂದಿದ ವಿವರಣೆಯಿದೆ. ಹೀಗಾಗಿ ನೃಪತುಂಗನಿಗೆ ಸಂಬಂಧಿಸಿದ ವಿವರ ತಿಳಿಸುವ ಇಂತಹ ಶಾಸನಗಳಿಂದ ನಿರ್ವಿವಾದವಾಗಿ ಈ ಕೊಪ್ಪಳ ಜಿಲ್ಲೆಯು ರಾಷ್ಟ್ರಕೂಟರ ರಾಜ್ಯದಲ್ಲಿ ಸೇರಿ ಘನತೆಯನ್ನು ಪಡೆದಿರಬೇಕೆಂದು ಸುಲಭವಾಗಿ ಗುರ್ತಿಸಬಹುದು. ಇಮ್ಮಡಿ ಕೃಷ್ಣನ ಆಡಳಿತದ ಕಾಲದಲ್ಲಿ ಮಹಾಶ್ರೀಮಂತನೆಂಬುವವನು ಬೆಳವೊಲ-300 ಆಳುತ್ತಿದ್ದಾಗ ಕ್ರಿ.ಶ.877ರಲ್ಲಿ ಮುದವೊಳಲಿನಲ್ಲಿ ನಡೆದ ಕಾಳಗದಲ್ಲಿ

ಸಮ್ಮಗಾರ ಚಂದನೆಂಬುವವನು ಹೋರಾಡಿ ವೀರಮರಣ ಹೊಂದಿದನು ಎಂಬುದಾಗಿ ಶಾಸನ[10]ವೊಂದು ತಿಳಿಸುತ್ತದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಶಾಸನ[11]ವು ಅಕಾಲವರ್ಷ ಎಂಬುವವನ ಆಳ್ವಿಕೆಯದ್ದು. ಆಗ ಜಗತ್ತುಂಗನೆಂಬುವವನು ಆತನಿಗೆ ಅಧೀನನಾಗಿ 'ಎಡೆದೊರೆ ನಾಡು' ಎಂಬ ಎರಡು ಸಾವಿರ ಪ್ರಾಂತವನ್ನು 'ಅಣುಗ ಜೀವಿತ'ವಾಗಿ ಆಳುತ್ತಿದ್ದನೆಂದು ಅದು ಹೇಳುತ್ತದೆ. ಶಾಸನದಲ್ಲಿ ತೇದಿ ವಿವರವಾಗಿ ಕೊಡಲ್ಪಟ್ಟಿಲ್ಲ. ವಿರೋಧಿ ಕೃತ್ ಸಂವತ್ಸರ ಮಾತ್ರ ಉಕ್ತವಾಗಿದೆ. ಈ ಸಂವತ್ಸರದ ಆಧಾರದಿಂದ ಶಾಸನದಲ್ಲಿ ಉಕ್ತವಾದ ಅಕಾಲವರ್ಷನು ಇಮ್ಮಡಿ ಕೃಷ್ಣನೆಂದು ಹೇಳಬಹುದು. ಹಾಗೆಯೇ ಇಲ್ಲಿ ಉಲ್ಲೇಖಗೊಂಡಿರುವ ಜಗತ್ತುಂಗನು ಈತನ ಮಗನಾದ ಇಮ್ಮಡಿ ಜಗತ್ತುಂಗನಾಗಿದ್ದಾನೆ. ಈ ಜಗತ್ತುಂಗನು ಎಂಬುದಾಗಿ ಪ್ರಸ್ತುತ ಶಾಸನ ಸ್ಪಷ್ಟಪಡಿಸುತ್ತದೆ. ಆದರೆ ಹೆಚ್ಚಿನ ಮಾಹಿತಿಗಳು ಅಲಭ್ಯವಾಗಿವೆ. ಈತನು ಕ್ರಿ.ಶ.891–92ರಲ್ಲಿ ತಂದೆಯ ಅಧೀನನಾಗಿ ಪ್ರಾಂತವೊಂದರ ಅಧಿಪತಿಯಾಗಿದ್ದ ನೆಂಬುದು ಈ ಭೋಗಾವತಿ ಶಾಸನದಿಂದ ಮಾತ್ರ ತಿಳಿದುಬರುತ್ತದೆ. ಮೇಲೆ ಉಕ್ತವಾಗಿರುವ 'ಎಡೆದೊರೆ–2000' ನಾಡು ಕೃಷ್ಣ–ತುಂಗಭದ್ರಾ ನದಿಗಳ ನಡುವಿನ ಪ್ರದೇಶವಾಗಿದ್ದರಿಂದ ಕೊಪ್ಪಳದ ಬಹು ಭಾಗವು ಈ ಪ್ರದೇಶದಲ್ಲಿರುವುದರಿಂದ ಇಮ್ಮಡಿ ಕೃಷ್ಣನ ಆಡಳಿತ ಇಲ್ಲಿತ್ತೆಂಬುದು ಸುಲಭವಾಗಿ ಗುರುತಿಸಬಹುದು. ಹಾಗೆಯೇ ರಾಯಚೂರು ಜಿಲ್ಲೆಯ ಯರಡೋಣಿಯಲ್ಲಿ ಒಂದು ರಾಷ್ಟ್ರಕೂಟರ ಶಾಸನ[12]ವು ದೊರಕಿದೆ. ಅದರಲ್ಲಿ 'ಹಿರಣ್ಯವರ್ಷ' ಎಂಬ ಬಿರುದಿನ ಅರಸನ ಉಲ್ಲೇಖವಿದೆ. ಕ್ರಿ.ಶ.928ರ ಈ ಶಾಸನದ ಕಾಲದಲ್ಲಿ ಮುಮ್ಮಡಿ ಇಂದ್ರನು ರಾಜ್ಯವಾಳುತ್ತಿದ್ದನು. ಅವನಿಗೆ 'ಹಿರಣ್ಯವರ್ಷ' ಎಂಬ ಬಿರುದು ಇದ್ದಿತೆಂದು ಇದರಿಂದ ತಿಳಿದು ಬರುತ್ತದೆ. ಇವನ ನಂತರ ಅಧಿಕಾರಕ್ಕೆ ಬಂದ 4ನೇ ಗೋವಿಂದನಿಗೆ 'ಸುವರ್ಣವರ್ಷ' ಎಂಬ ಬಿರುದು ಇದ್ದು 'ಹಿರಣ್ಯವರ್ಷ' ಎಂಬ ಬಿರುದು ಅದೇ ಅರ್ಥವಿದ್ದರೂ ಕಾಲದ ವ್ಯತ್ಯಾಸದಿಂದ ಯರಡೋಣಿ ಶಾಸನದ ಅರಸನು ಇಂದ್ರನೇ ಇದ್ದಿರಬಹುದೆಂಬುದು ಹೆಚ್ಚು ಸೂಕ್ತವೆನಿಸುತ್ತದೆ. ಇಲ್ಲವಾದರೆ ಈ ಕೆಲಕಾಲದಲ್ಲಿಯೇ ಗೋವಿಂದನು ಅಧಿಕಾರ ನಡೆಸಲಾರಂಭಿಸಿದ್ದನು ಎಂದು ಊಹಿಸಬೇಕಾಗುತ್ತದೆ. ಅದೇನೇಯಿದ್ದರೂ ಕೂಡ ಈಗಿನ ರಾಯಚೂರು ಜಿಲ್ಲೆಯ ಪ್ರದೇಶಗಳಲ್ಲಿನ ಪ್ರಸ್ತುತ ಶಾಸನಗಳಿಂದ ತಿಳಿದುಬರುವುದೇನೆಂದರೆ ಈ ಪ್ರದೇಶ ಕೊಪ್ಪಳ ಜಿಲ್ಲೆಗೆ ಹತ್ತಿರವಾಗಿರುವುದರಿಂದ ಪ್ರಸ್ತುತ ರಾಷ್ಟ್ರಕೂಟರ ಆಡಳಿತಕ್ಕೆ ಅವಿಭಜಿತ ಕೊಪ್ಪಳ ಜಿಲ್ಲಾ ಪ್ರದೇಶವು ಒಳಗೊಂಡಿತ್ತೆಂದು ಹೇಳಬಹುದು.

ಕ್ರಿ.ಶ.939ರಲ್ಲಿ ಮುಮ್ಮಡಿ ಕೃಷ್ಣನು ಆಳ್ವಿಕೆಯನ್ನು ಮಾಡುತ್ತಿರುವಾಗ ಅವನ ಕೈಕೆಳಗಿನ ಬೂತುಗ ಪೆರ್ಮಾನಾಡಿ ಆಳುತ್ತಿದ್ದನು. ಈತನ ಕೈಕೆಳಗೆ ಬುಟ್ಟಯ್ಯನೆಂಬುವವನು ಎಡದೊರೆ–2000ರನ್ನು ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿದು

ಬರುತ್ತದೆ. ಬೂತುಗ ಪೆರ್ಮಾನಾಡಿ ಬೆಳ್ವೊಲ–300, ಮಾಸವಾಡಿ–140, ಕುಕನೂರು–30, ಕೆಳವಾಡಿ–300ಗಳನ್ನು ಆಳ್ವಿಕೆ ನಡೆಸುತ್ತಿರುವಾಗ ದಾನವಾಗಿ ನೀಡಿದ್ದಾಗಿ ಇಟಗಿ ಶಾಸನ[13]ವೊಂದು ದಾಖಲಿಸಿದೆ. ಈ ಕಾಲವು ಮುಮ್ಮಡಿ ಕೃಷ್ಣನ ಪ್ರಥಮ ಆಡಳಿತದ ವರ್ಷವಾಗಿದೆ. ಇದೇ ಮುಮ್ಮಡಿ ಕೃಷ್ಣನಿಗೆ ಸಂಬಂಧಿಸಿದಂತೆ ಹೊಸಕೇರಿಯಲ್ಲಿ ಇನ್ನೊಂದು ಶಾಸನ[14]ವು ಲಭ್ಯವಾಗಿದೆ. ಹಾಗೆಯೇ ಕ್ರಿ.ಶ.964ರಲ್ಲಿ ರಚಿತವಾದ ಉಪ್ಪಿನ ಬೆಟಗೇರಿ ಶಾಸನ[15]ವು ಸಹಿತ ಇದೇ ಕೃಷ್ಣನ ಆಡಳಿತದ ಬಗ್ಗೆ ವಿವರಣೆ ನೀಡಿದೆ. ಈತನ ಕೈಕೆಳಗೆ ಯಾದವ ವಂಶದವನೆಂದು ಹೇಳಲಾಗುವ ಶಂಕರಗಂಡನೆಂಬುವವನು ಆಳ್ವಿಕೆ ನಡೆಸುತ್ತಿದ್ದನು. ಪ್ರಸ್ತುತ ಶಂಕರಗಂಡನು ಕುಪಣದಲ್ಲಿ ಮಾಡಿಸಿದ ಜಯಧೀರ ಜಿನಾಲಯಕ್ಕೆ ತಳವೃತ್ತಿಯಾಗಿ ಭೂದಾನವನ್ನು ಬೇಡಿದಾಗ ರೊಟ್ಟಯ್ಯನೆಂಬುವವನು ನಾಗನಂದಿ ಪಂಡಿತ ಭಟಾರನ ಕಾಲನ್ನು ತೊಳೆದು ಕುಕ್ಕನೂರು–30ರ ಗ್ರಾಮವೊಂದರಲ್ಲಿ (ಹೆಸರು ತ್ರುಟಿತಗೊಂಡಿದೆ) ಆರು ಮತ್ತರು ಭೂಮಿಯನ್ನು ಬಿಡುತ್ತಾನೆ. ಈ ಶಾಸನದಲ್ಲಿ ರೊಟ್ಟಯ್ಯನ ವಂಶಾವಳಿಯಿದ್ದು ಈತ ಚಾಳುಕ್ಯ ವಂಶದ ಬಿಟ್ಟಿಯಣ್ಣನ ಮಗನಾದ ಸಾಳಕೆ, ಆತನ ಮಗ ಗೊಗ್ಗಿ ಆತನ ಮಗ ರೊಟ್ಟಯ್ಯನೆಂದಿದೆ. ಹಾಗೆಯೇ ನಾಗನಂದಿ ಭಟ್ಟಾರನು ಸಾರಸ್ವಗಣದ ಶ್ರೀನಂದಿಭಟಾರರ ಶಿಷ್ಯ ವಿನಯನಂದಿ ಅವನ ಶಿಷ್ಯ ನಾಗನಂದಿಭಟಾರನೆಂದು ಹೇಳಿ ವಂಶಾವಳಿಯನ್ನು ವಿವರಿಸಿದೆ.

ಕುಕನೂರಿನ ಶಾಸನ[16]ವೊಂದು ಮಾರಸಿಂಹನ ಕಾಲದ್ದಾಗಿದ್ದು ಇದರಲ್ಲಿ ಕ್ರಿ.ಶ.969ರಲ್ಲಿದ್ದ ನಾಲ್ಕನೆಯ ಇಂದ್ರನನ್ನು ಸಿಂಹಾರೋಹಣ ಮಾಡಿಸಿ ಪ್ರಶಂಸೆಗೆ ಗುರಿಯಾದ ವಿವರವು ಸಿಗುತ್ತದೆ. ರಾಜನ ಆಜ್ಞೆಯಂತೆ ಈತನು ಗುರ್ಜರ, ಲಲ್ಲ, ಅಲ್ಲ ಮೊದಲಾದ ರಾಜರನ್ನು ಗೆದ್ದನು. ಪ್ರಸ್ತುತ ಇಮ್ಮಡಿ ಮಾರಸಿಂಹ (ಗಂಗಕಂದರ್ಪ)ನ ಪಾದಗಳನ್ನು ಶತ್ರುಗಳು ಕೂಡ ಪೂಜಿಸುತ್ತಿದ್ದರು. ಈ ಗಂಗ ಚೂಡಾಮಣಿಯ ಕೀರ್ತಿ ಎಂಟು ದಿಕ್ಕುಗಳಿಗೂ ಹಬ್ಬಿದುದಲ್ಲದೇ ಜಿನ ಪೂಜಕನಾದ ಈ ಮಾರಸಿಂಹನು ತನ್ನ ಶತ್ರುಗಳನ್ನೆಲ್ಲಾ ಸಂಹರಿಸಿದ. ಈ ಸತ್ಯವಾಕ್ಯ ಕೊಂಗುಣಿ ಧರ್ಮಮಹಾರಾಜಾಧಿರಾಜ ಪರಮೇಶ್ವರ ಗಂಗಕಂದರ್ಪ ಮಾರಸಿಂಹನ ಅಕ್ಕ ಕುಂದಣಸಾಮಿ. ಈಕೆಯ ಗಂಡ ಚಾಲುಕ್ಯ ವಂಶದ ರಾಜಾದಿತ್ಯ. ಮುಂದೆ ಶಾಸನದಲ್ಲಿ ಕುಂದಣಸಾಮಿಯ ಪ್ರಶಂಸೆ ಬಂದಿದೆ. ಆಕೆಯ ಜಿನಶಾಸನ ಪ್ರೀತಿ, ಜಿನ ಧರ್ಮದ ಮೇಲಿನ ನಂಬಿಕೆಯನ್ನು ವಿವರವಾಗಿ ವರ್ಣಿಸಿದೆ. ರಾಷ್ಟ್ರಕೂಟರ ಚೊಟ್ಟಿಗನೆಂಬ ಅರಸನಿಗೆ ಸಂಬಂಧಿಸಿದ ಇನ್ನೊಂದು ಇಟಗಿಯ ಶಾಸನ[17] ವೊಂದರಲ್ಲಿ ಗಂಗರ ಮಾಂಡಳಿಕರ ವಿಶೇಷಣಗಳಾದ 'ಪೆರ್ಮಾನಾಡಿ' 'ನಂದಿಗಿರಿನಾಥ'–ಮುಂತಾದ ಬಿರುದು–ಬಾವಲಿಗಳ ವರ್ಣನೆ ಬರುತ್ತದೆ.

ಒಟ್ಟಾರೆಯಾಗಿ ಗಮನಿಸಿದರೆ ರಾಷ್ಟ್ರಕೂಟರ ಪ್ರಸಿದ್ಧ ದೊರೆಯಾದ ನೃಪತುಂಗ (ಅಮೋಘವರ್ಷ)ನು ಸೇರಿದಂತೆ ಈ ವಂಶದ ಪ್ರಖ್ಯಾತ ಅರಸರ ಆಳ್ವಿಕೆಯ

ಕಾಲದಲ್ಲಿ ಕೊಪ್ಪಳವು ಒಂದು ಪ್ರಮುಖ ಆಡಳಿತ ಕೇಂದ್ರವಾಗಿದ್ದಿ ತೆಂಬುದಾಗಿ ಹೇಳಬಹುದು. ಹಾಗೆಯೇ ಶಾಸನೇತರ ಆಕರಗಳಲ್ಲಿ ಪ್ರಮುಖವಾದ ನಿದರ್ಶನವನ್ನು ಒದಗಿಸುವ ಶ್ರೀವಿಜಯನ 'ಕವಿರಾಜಮಾರ್ಗ'ದಲ್ಲಿಯೂ ಸಹ ರಾಷ್ಟ್ರಕೂಟರಿಗೆ ಸಂಬಂಧಿಸಿದ ಅನೇಕ ಅಂಶಗಳು ದೊರೆಯುತ್ತವೆ. ಆದುದರಿಂದ ಕೊಪ್ಪಳವು ರಾಷ್ಟ್ರಕೂಟರು ಆಡಳಿತ ನಡೆಸಿದ ಪ್ರಮುಖ ಪ್ರದೇಶವಾಗಿತ್ತೆಂದು ಹೇಳಬಹುದು.

**ಗಂಗರು :**

ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿ ಹೇಳುವುದಾದರೆ ಕೊಪ್ಪಳ ಪ್ರದೇಶದಲ್ಲಿ ಗಂಗರು ಖಚಿತವಾಗಿ ಆಳ್ವಿಕೆಯನ್ನು ನಡೆಸದಿದ್ದರೂ ಪ್ರಭಾವಪೂರ್ವಕವಾಗಿ ಮಹಾಮಾಂಡಳಿಕರಾಗಿ ಇಲ್ಲಿ ಆಳಿದ್ದಾರೆ. ಈ ಅರಸು ಮನೆತನವು ಅಧಿಕಾರದಲ್ಲಿದ್ದಾಗ ಕೊಪ್ಪಳ ಪ್ರದೇಶಕ್ಕೆ ಗಂಗವಾಡಿ–96,000 ಎಂದು ಕರೆಯಲಾಗುತ್ತಿತ್ತು. ಈ ಭಾಗದಲ್ಲಿ ಗಂಗರಿಗೆ ಸಂಬಂಧಿಸಿದಂತೆ ಕುಕನೂರು, ಹೆಬ್ಬಾಳ, ಇಟಗಿ, ಕೊಪ್ಪಳಗಳಲ್ಲಿ ಅನೇಕ ಶಾಸನಗಳು ದೊರಕುತ್ತವೆ.

ಗಂಗರ ರಾಜಕೀಯ ಸಂಬಂಧವು ಕೊಪ್ಪಳದಲ್ಲಿ ಅಧಿಕವಾಗಿದೆ. ಇವರ ಕಾಲದ ಸಮಗ್ರ ಶಾಸನಗಳನ್ನು ಅವಲೋಕಿಸಿದಾಗ ಇವರ ಧಾರ್ಮಿಕ ನಂಟು ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಅಂಟಿಕೊಂಡಿದ್ದು ಅವುಗಳಲ್ಲಿ ಪ್ರಮುಖ ವಾದವುಗಳಾದ ಶ್ರವಣಬೆಳಗೊಳ, ತಲಕಾಡು, ಅಣ್ಣಿಗೆರೆ, ಹೊಂಬುಜ, ಮಂಡಲಿ ಸಾಸಿರ ಪ್ರದೇಶ, ಕೊಪ್ಪಳ ಪ್ರದೇಶ ಮುಂತಾದವುಗಳು. ಇವುಗಳು ಗಂಗರಿಗೆ ಕರ್ನಾಟಕದಲ್ಲಿ ಅತಿಮುಖ್ಯ ಕ್ಷೇತ್ರಗಳಾಗಿ ಮತ್ತು ತೀರ್ಥಕ್ಷೇತ್ರಗಳಾಗಿದ್ದವು. ಶ್ರವಣಬೆಳ್ಗೊಳವು ಗಂಗವಾಡಿ–96,000 ಪ್ರದೇಶದಲ್ಲಿತ್ತು. ಕೊಪ್ಪಳವು ಗಂಗ ವಾಡಿಯಲ್ಲಿರಲಿಲ್ಲ. ಆದರೆ ಕೊಪ್ಪಳ ಪ್ರದೇಶವು ಗಂಗರಿಗೆ ತುಂಬಾ ಹತ್ತಿರವಾದ್ದದ್ದು 10ನೇ ಶತಮಾನದಲ್ಲಿ. ಗಂಗರ ದೊರೆ ದುರ್ವಿನೀತನು ಕೊಪ್ಪಳ ಸಮೀಪದ ಕೋಗಳಿಯಲ್ಲಿ ಒಂದು ಬಸದಿಯನ್ನು ಕಟ್ಟಿಸಿದ್ದು ಅದು ಮತ್ತೆ ಜೀರ್ಣೋದ್ಧಾರ ವಾದದ್ದೂ ಶಾಸನದಲ್ಲಿ ಉಲ್ಲೇಖಗೊಂಡಿದೆ. ರಾಷ್ಟ್ರಕೂಟರ ಸಾಮ್ರಾಜ್ಯ ಅಸ್ಥಿರವಾಗುತ್ತ ಅಳ್ಳಾಡತೊಡಗಿ ಕಡೆಗೆ ಅಸ್ತಂಗತವಾದದ್ದರ ಪರಿಣಾಮ ಪ್ರತಿಷ್ಠಿತ ಗಂಗರ ಕುಟುಂಬಗಳ ಮೇಲೆ ಗಾಢವಾದ ಪರಿಣಾಮವಾಯಿತು. ಗಂಗರು ಒಬ್ಬರಾದ ಮೇಲೊಬ್ಬರು ಕೊಪ್ಪಳದಲ್ಲಿ ಬಂದು ಧಾರ್ಮಿಕ ಮರಣ ಪಡೆದರು. ಗಂಗರ ರಾಜ–ರಾಣಿಯರು ಅನೇಕ ಬಸದಿಗಳನ್ನು ಕಟ್ಟಿಸಿದ್ದು ತಿಳಿರು ಬರುತ್ತದೆ. ಅದಲ್ಲದೆ ಅವರಲ್ಲಿ ಅನೇಕರು ಸಲ್ಲೇಖನ ವಿಧಿಯಿಂದ ಸಮಾಧಿ ಮರಣ ಪಡೆದಿದ್ದು ಕೊಪ್ಪಳದ ಶಾಸನಗಳಿಂದ ತಿಳಿದುಬರುತ್ತದೆ. ಇದು ಗಂಗರ ಇತಿಹಾಸದಲ್ಲಿ ಒಂದು ವೈಶಿಷ್ಟ್ಯತೆಯೆಂದು ಹೇಳಬಹುದು. ರಾಚಮಲ್ಲ, ಆರುಮೋಳಿದೇವ, ಮಾರಸಿಂಹ, ಲೋಕಾ(ರಾಜಾ)ದಿತ್ಯ, ಪದ್ಮಬ್ಬೆ, ಕುಂದಣಸಾಮಿ, ರೇವಕನಿಮ್ಮಡಿ, ಚಂಗಾಂಬೆ, ಬಿಜ್ಜಾಂಬಾ........ ಮೊದಲಾದವರೆಲ್ಲ ಮಡಿದಿದ್ದು ಧಾರ್ಮಿಕ ವಿಧಿಯಿಂದ. ಮತ್ತು

ಇವರಲ್ಲಿ ಕೆಲವರು ಕೊಪ್ಪಳದಲ್ಲಿ ಬಂದು ಮಡಿದಿದ್ದಾರೆ. ಗಂಗರ ಉಗಮ, ಆಗಮನ, ನಿರ್ಗಮನ ಕುರಿತು ಚರ್ಚೆಗಳಿವೆ. ಅವರ ಒಟ್ಟು ಚಲನವಲನ ವ್ಯಾಪ್ತಿ ವಿಸ್ತಾರಗಳ ನಿರ್ದೇಶನ ಇನ್ನೂ ನಿಖರವಾಗಿ ಆಗಬೇಕಾದ್ದದ್ದಿದೆ. ಆದರೆ ಗಂಗರು ಕ್ರಿ.ಶ.3–4ನೇ ಶತಮಾನದ ವೇಳೆಗೆ ಸಿಂಹನಂದಿ ಆಚಾರ್ಯರ ಮುಂದಾಳಿಕೆಯಲ್ಲಿ ಕರ್ನಾಟಕದಲ್ಲಿ ಹೆಜ್ಜೆ ಇಟ್ಟಿದ್ದರೆಂಬುದು ಖಚಿತವಾಗಿದೆ. ಆದಿಕದಂಬರೂ, ಆದಿಚಾಳುಕ್ಯರೂ, ರಾಷ್ಟ್ರಕೂಟರೂ ತೋರಿದ ಆಸಕ್ತಿಗೂ ಸರಿಮಿಗಿಲಾದ ಮತ್ತು ದೀರ್ಘಕಾಲಿಕ ಆಸಕ್ತಿ, ಅನುರಾಗ, ಶ್ರದ್ಧೆಯನ್ನು ಜೈನ ಧರ್ಮದಲ್ಲಿ ಆದಿಗಂಗರೂ ತೋರಿದರು. ಕೊಪ್ಪಳದಲ್ಲಿ ಈಗ ಹೊಸದಾಗಿ ದೊರೆತಿರುವ ಶಾಸನಗಳಲ್ಲಿ ವ್ಯಾಪಕ ಪ್ರಮಾಣದಿಂದ ಪ್ರಕಟವಾಗಿರುವ ಅವರ ಜೈನನಿಷ್ಠೆಯ ಬೇರುಗಳು ಇನ್ನೂ ಆಳಕ್ಕೆ ಮತ್ತು ಆರಂಭಕ್ಕೆ ಹೋಗುತ್ತವೆ. ಅದರ ವಿಸ್ತಾರವಾದ ಸಂವಾದಗಳಿಗೆ ತೊಡಗದೆ ತೀರ ಕಿರಿದಾಗಿಯೇ ಗಂಗರು ಜೈನ ಧರ್ಮನಿಷ್ಠೆಯಿಂದ ಅನುಸರಿಸಿ ಆಚರಿಸಿದ ಸಂಗತಿಯನ್ನು ಅದೂ ಶಾಸನದಲ್ಲಿ ಅಲ್ಲಲ್ಲಿ ಬರೆದಿರುವ ವಿವರಣೆಯಲ್ಲಿ ಸಮೀಕ್ಷಿಸಲಾಗಿದೆ.

ಗಂಗವಂಶದ ಆರಂಭ ಕಾಲದ ಕಥನ ಸಾಮಗ್ರಿ ಕೊಪ್ಪಳ ಶಾಸನಗಳಲ್ಲಿ ಸಿಗುವುದಿಲ್ಲವಾದರೂ ಅವರ ಉತ್ತರ ಕಾಲೀನ ಹಾಗೂ ಇಳಿಗಾಲದ ಮಾಹಿತಿಗಳು ಇಲ್ಲಿ ಸಾಕಷ್ಟಿವೆ. ಗಂಗರ ಮನೆತನದ ಮುಖ್ಯರೆಲ್ಲ ವಲಸೆಯಾಗಿ ಕೊಪ್ಪಳಕ್ಕೆ ಬಂದು ಮುಡುಪಿದ್ದಾರೆ.

ಗಂಗರ ಮನೆತನದ ಇಮ್ಮಡಿ ಬೂತುಗನಿಗೆ ಸಂಬಂಧಿಸಿದ ಕ್ರಿ.ಶ.939ರ ಶಾಸನ[18]ವೊಂದು ಇಟಗಿಯಲ್ಲಿ ದೊರೆತಿದೆ. ಈ ಶಾಸನದಲ್ಲಿ ಬೂತುಗನಿಗೆ ರಾಷ್ಟ್ರಕೂಟರ ದೊರೆ ಮುಮ್ಮಡಿ ಕೃಷ್ಣನು ತುಂಗಭದ್ರಾ ನದಿಯ ಉತ್ತರ ಭಾಗಗಳಾದ ಎಡದೊರೆ–2000, ಬೆಳ್ವೊಲ–300, ಮಾಸವಾಡಿ–140, ಕುಕನೂರು–30....... ಮೊದಲಾದ ನಾಡುಗಳನ್ನು ನೀಡಿದಂತೆ ತಿಳಿದು ಬರುತ್ತದೆ. ರಾಷ್ಟ್ರಕೂಟರ ಅರಸ ಮುಮ್ಮಡಿ ಕೃಷ್ಣನು ಆಡಳಿತ ಕಾಲಾವಧಿಯಲ್ಲಿ ಕುಕನೂರು–30ರ ಒಂದು ಆಡಳಿತದ ಪ್ರಾಂತವಾಗಿದ್ದರಿಂದ ಆ ಕಾಲದಲ್ಲಿ ಈ ನಗರಕ್ಕೆ ಕುಪಣವೆಂದು ಕರೆದಿರಬೇಕು. ಇಲ್ಲವೆ ಬಹುಶಃ ಇದು ಕುಕನೂರು–30ರ[19] ಒಂದು ಘಟಕಕ್ಕೆ ಸೇರಿರಬೇಕೆಂದು ನಂಬಲಾಗಿದೆ. ಆತಕೂರಿನ ಶಾಸನದಲ್ಲಿ ಬೂತುಗನು 'ತಕ್ಕೊಲಂ' ಯುದ್ಧದಲ್ಲಿ ಚೋಳವಂಶದ ರಾಜಾದಿತ್ಯನನ್ನು ಕೊಂದ ಮೇಲೆ ಆತನಿಗೆ ಇವುಗಳನ್ನು ಬಳುವಳಿಯಾಗಿ ನೀಡಿದಂತೆ ತಿಳಿಸುತ್ತದೆ. ಆದರೆ ಈ ಇಟಗಿಯ ಶಾಸನವು ಸ್ಪಷ್ಟವಾಗಿ ಕ್ರಿ.ಶ.939ಕ್ಕೆ ಬೂತುಗನು ಪಡೆದಿರುವುದಾಗಿ ತಿಳಿಸುತ್ತದೆ. ಕ್ರಿ.ಶ.939ಕ್ಕೆ ಆತನು ಇಟಗಿಗೆ ಬಂದಿದ್ದಂತೆ ಪ್ರಸ್ತುತ ಶಾಸನ ತಿಳಿಸುತ್ತದೆ. ಇಮ್ಮಡಿ ಮಾರಸಿಂಹನ ಕಾಲದಲ್ಲಿನ ಕುಕನೂರು ತಾಮ್ರ ಶಾಸನ[20]ದಲ್ಲಿ ಗಂಗರ ಪಾರಂಪರಿಕ ವಂಶಾವಳಿಯನ್ನು ಸವಿವರವಾಗಿ ನೀಡಲಾಗಿದೆ. ಗಂಗ ವಂಶದ ಪ್ರಥಮ ಅರಸನಾದ ಕೊಂಕಣಿವರ್ಮನಿಂದ ಹಿಡಿದು ಇಮ್ಮಡಿ

ಮಾರಸಿಂಹನವರೆಗೆ ಆಳಿದ ರಾಜರನ್ನು ಇದು ಉಲ್ಲೇಖಿಸುತ್ತದೆ. ಈ ತಾಮ್ರ ಶಾಸನದ ಮುದ್ರಿಕೆಯ ಮೇಲೆ ಕೆತ್ತಿದ ಗಂಗರ ರಾಜ ಲಾಂಛನದ ಚಿತ್ರ ತುಂಬ ಸುಂದರವಾಗಿದೆ. ಕ್ರಿ.ಶ.969ರ ಈ ತಾಮ್ರ ಶಾಸನದಲ್ಲಿ ಮಾರಸಿಂಹನ ಅನೇಕ ಬಿರುದುಗಳನ್ನು ನೀಡಲಾಗಿದೆ. ಈತನ ಮಕ್ಕಳಾದ ಕುಂಪಣಸಾಮಿಯು ಕಾಳಪರ್ಯ್ಗೆ ಎಂಬ ಬ್ರಾಹ್ಮಣನಿಗೆ ಅಡ್ಡವುರಗೆ ಎಂಬ ಗ್ರಾಮವನ್ನು ನೀಡಿದಂತೆ ತಿಳಿಸುತ್ತದೆ. ಈ ಕಾಲಕ್ಕೆ ಮುಮ್ಮಡಿ ಕೃಷ್ಣನು ಮೃತನಾಗಿದ್ದು ಗಂಗರ ಮಾರಸಿಂಹನು ಕೃಷ್ಣನ ದಂಡಯಾತ್ರೆಯನ್ನು ರಾಷ್ಟ್ರಕೂಟರ ಪರವಾಗಿ ಮುಂದುವರೆಸಿಕೊಂಡು ಬರುತ್ತಾನೆ. ಕ್ರಿ.ಶ.968ರ ಇಟಗಿಯ ಶಾಸನ[21]ದಲ್ಲಿ ಈತನ ಉಲ್ಲೇಖವಿದೆ. ಕೃಷ್ಣನ ಮರಣದ ನಂತರ ಕೊಟ್ಟಿಗನು ಪಟ್ಟಕ್ಕೆ ಬಂದನು. ಈತನ ಮಹಾಮಾಂಡಳಿಕನಾಗಿ ಗಂಗರ ಪೆರ್ಮಾನಾಡಿಯ ಇದ್ದಂತೆ ತಿಳಿದು ಬಂದಿದೆ. ಈ ಪೆರ್ಮಾನಾಡಿಯೇ ಇಮ್ಮಡಿ ಮಾರಸಿಂಹನಾಗಿರಬೇಕೆಂದು ಊಹಿಸಲಾಗಿದೆ.

ಗಂಗರ ಪಾರಂಪರಿಕ ಬಿರುದುಗಳನ್ನು ಗಂಗರಸನ ಉಲ್ಲೇಖ ಕ್ರಿ.ಶ. 10ನೇ ಶತಮಾನದ ಹೆಬ್ಬಾಳದ ಶಾಸನ[22]ವೊಂದರಲ್ಲಿ ಬರುತ್ತದೆ. ಬಹುಶಃ ಇದು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಮಾರಸಿಂಹನದಾಗಿರಬೇಕೆಂದು ನಂಬಲಾಗಿದೆ. ಮುಂದೆ ಗಂಗರ ಆಳ್ವಿಕೆಯ ಶಾಸನಗಳು ಅಷ್ಟಾಗಿ ದೊರೆಯುವುದಿಲ್ಲ. ಆದರೆ ಕೊಪ್ಪಳದ ನಿಷಧಿ ಶಾಸನಗಳಲ್ಲಿ ಅವರ ಕುರಿತು ಹೆಚ್ಚಿನ ವಿವರ ಸಿಗುತ್ತದೆ. ಕೆಲವು ಶಾಸನಗಳಲ್ಲಿ ರಾಜರು ನಿಖರವಾಗಿ ಉಲ್ಲೇಖಗೊಂಡಿಲ್ಲ. ಬಹುಶಃ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಮರಣ, ಗಂಗರ ಇಮ್ಮಡಿ ಭೂತುಗನ ಮರಣದ ಜೊತೆಗೆ ಗಂಗರ ಭೂತುಗನ ಮಗ ಆರುಮೋಳಿದೇವನ ಮರಣ, ಶಿಥಿಲವಾಗುತ್ತಿದ್ದ ರಾಷ್ಟ್ರಕೂಟರ ಆಡಳಿತ ಮತ್ತು ಕ್ರಿ.ಶ.973ರಲ್ಲಾದ ರಾಷ್ಟ್ರಕೂಟ ಸಾಮ್ರಾಜ್ಯದ ಪತನ ಈ ಎಲ್ಲಾ ಸಂಗತಿಗಳಿಂದ ಭ್ರಮನಿರಸನಗೊಂಡ ಗಂಗ ಅರಸು ಮನೆತನದ ರಾಣಿವಾಸದ ಸ್ತ್ರೀಯರು ಒಬ್ಬೊಬ್ಬರಾಗಿ ಸನ್ಯಾಸವನ್ನು ಕೊಪ್ಪಳದಲ್ಲಿ ಪಡೆದುಕೊಂಡಂತೆ ಕಂಡುಬರುತ್ತದೆ. ಈ ರೀತಿ ಮುಡುಪಿದವರಲ್ಲಿ ಕ್ರಿ.ಶ.976ರ ಗಂಗರಾಜನ ಪತ್ನಿ ಪೋಲೆಯಬ್ಬೆಯ ಮಗಳು ಎರೆಯಬ್ಬೆ[23] ಮಂಕುಟ ಚೂಡಾಮಣಿಗಿಂತ (ಇಮ್ಮಡಿ ಮಾರಸಿಂಹ) ಚಿಕ್ಕವಳಾದ ಚಿನ್ದಿಬ್ಬರಸಿ ಎಂಬುದಾಗಿ ಕ್ರಿ.ಶ.975ರ ಶಾಸನ[24] ತಿಳಿಸುತ್ತದೆ. ಕ್ರಿ.ಶ. 973ರಲ್ಲಿ ಗಂಗ ಭೂತುಗನ ಪತ್ನಿ ಪದ್ಮಬ್ಬಿಯರಸಿ ಮುಡಿಪಿರುತ್ತಾಳೆ. ಕ್ರಿ.ಶ.987ಕ್ಕೆ ಮೊದಲೇ ಕುಂದಣಸಾಮಿ ಸತ್ತಿರುತ್ತಾಳೆ.[25] ಕ್ರಿ.ಶ.987ರಲ್ಲಿ ರಾಯನ ಪತ್ನಿ ಚಂಗಂಬೆ (ಪ್ರಸ್ತುತ ರಾಯನು ಚಾವುಂಡರಾಯನಿರಬಹುದೆಂದು ಗುರ್ತಿಸಲಾಗಿದೆ.) ಕ್ರಿ.ಶ.987ರಲ್ಲಿ ರಾಯನ ಪತ್ನಿ ಪದ್ಮಬ್ಬರಸಿ ಮುಡುಪಿರುತ್ತಾಳೆ. ಕ್ರಿ.ಶ.987ರಲ್ಲಿ ಛಲದಂಕ ಗಂಗನ ಮಗನಾದ ವಾಸವ ಮತ್ತು ಅವನ ಪತ್ನಿ ಕಾವಣಬ್ಬರಸಿಯ ಮಗಳು ರಂಬಲದೇವಿ (ಚಾಲುಕ್ಯ ವಂಶದ ಚಿಕ್ಕದೇವನ ಪತ್ನಿ) ಮುಡುಪುತ್ತಾರೆ.[26] ಕ್ರಿ.ಶ. 992ರಲ್ಲಿ ಗಂಗವಂಶದ ಎರೆಗಂಗನ ಮಗಳು ಗೋನಬ್ಬೆಕಂತಿ ಮುಡಿಪುತ್ತಾಳೆ.[27] ಈಕೆಯ ತಂದೆ ಗಂಗ ವಂಶದ ಎರೆಗಂಗ,

ಗಂಡ ಅಜವರ್ಮ್ಮ, ಮಗನು ಕ್ಷತ್ರಿಯ ಕುಲದ ರಾಮನೆಂಬುವವನೆಂದು ಪ್ರಸ್ತುತ ಶಾಸನ ಸ್ಪಷ್ಟಪಡಿಸುತ್ತದೆ. ಕ್ರಿ.ಶ.998ರಲ್ಲಿ ಗಂಗ ಭೂತುಗನ ಮಗಳು ಮಾರಸಿಂಹನ ತಂಗಿ ಹಾಗೂ ಚಾಲುಕ್ಯ ಹರಿಗನ ಪತ್ನಿ ಜೆಬ್ಬರಸಿ (ಜೆಂಬಾಂಬಿಕೆ) ಕೊನೆಯುಸಿರೆಳೆಯುತ್ತಾಳೆ.[28] ಸೇನಗಣಕ್ಕೆ ಸೇರಿದ ಅಜಿತಸೇನಾಚಾರ್ಯನನ್ನು ಹೆಸರಿಸಿ ಇವನಿಂದ ಭೂಮಿಯ ಮೇಲೆ ಪೆರ್ಮಾಳಿಗಳು ಸುರಿದವಂತೆ. ಹಸಿವು, ನೀರಡಿಕೆಗಳು ಇಲ್ಲವಾದುವೆಂದೂ ತನಗೆ ಗೌರವ ನೀಡಿದವರನ್ನು, ನಿಂದಿಸಿದವರನ್ನು ಸಮಾನವಾಗಿ ಕಾಣುತ್ತಿದ್ದನೆಂದು ಈ ಶಾಸನ ವರ್ಣಿಸಿದೆ. ಈತನ ಶಿಷ್ಯ ಗಂಗ ವಂಶದ ರಾಜಮಲ್ಲ. ಇವನ ಪತ್ನಿ ಕಂಚಿಯಬ್ಬರಸಿ. ತನ್ನ ಪತಿ ಸತ್ತ ಮೇಲೆ ಈಕೆಯು ಅಜಿತಸೇನಾಚಾರ್ಯರ ಬಳಿ ದೀಕ್ಷೆ ಪಡೆದು ಕುಪಣತೀರ್ಥದಲ್ಲಿ ಸಮಾಧಿ ವಿಧಿಯಿಂದ ಮುಡುಪಿದಳು. ಕ್ರಿ.ಶ.1002ರಲ್ಲಿ ಗಂಗ ಬೂತುಗ ಮತ್ತು ಅವನ ಪತ್ನಿ ಪದ್ಮವತಿಯ ಮಗಳು ಎರೆಯಂಗನ ಅಕ್ಕ ಮಲ್ಲಪ್ಪನ ಪತ್ನಿಯಾದ ಬಿಜ್ಜಬ್ಬರಸಿ ಆರಾಧನಾ ವಿಧಾನದಿಂದ ಮುಡುಪುತ್ತಾಳೆ.[29] ಅಂದರೆ ಈಕೆಯು ರತ್ನತ್ರಯವನ್ನು ಸಾಧಿಸಿ ಸತ್ತಂತೆ ಕಂಡು ಬರುತ್ತದೆ. ಶಾಸನವು ಈ ಬಿಜ್ಜರಸಿಯ ಗುರು ಶ್ರೀಧರನೆಂದೂ, ತಮ್ಮ ಎರೆಗಂಗನೆಂಬಂತೆಯೂ ತಿಳಿಸಿದೆ. ಪ್ರಸ್ತುತ ಶಾಸನದ ಇನ್ನೊಂದು ಭಾಗದಲ್ಲಿ ಜಿನಮುನಿ ಕೊಂಡಕುಂದಾನ್ವಯ ಪುಸ್ತಕ ಗಚ್ಛದ ರವಿಚಂದ್ರ, ಇವನ ಶಿಷ್ಯ ದಾಮನಂದಿ ಇವನ ಶಿಷ್ಯ ಶ್ರೀಧರದೇವನನ್ನು ಹೊಗಳಿದ್ದು ಆತನ ಮುಂದೆ ಸಾಮಿದೇವಿ ಇರುವಂತೆ ಶಾಸನ ಪಾಠ ತಿಳಿಸಿದೆ. ಕ್ರಿ.ಶ.1023ರಲ್ಲಿ ಗಂಗ ಅರಸ ರಾಚಮಲ್ಲನ ಪತ್ನಿ ಕಂಚಿಯಬ್ಬರಸಿ ಕುಪಣದಲ್ಲಿ ದೀಕ್ಷೆಯನ್ನು ಕೈಗೊಳ್ಳುತ್ತಾಳೆ.[30] ಕ್ರಿ.ಶ. 1030ರ ಶಾಸನವೊಂದರಲ್ಲಿ ಇಮ್ಮಡಿ ಜಯಸಿಂಹನ ಪತ್ನಿ ಬೊನ್ನಾಥದೇವಿಯ ತಾಯಿ ರೇವಕ್ಕ ನಿಮ್ಮಡಿ ಸತ್ತ ಉಲ್ಲೇಖವಿದೆ.[31] ಈಕೆಯು ಬಹುಶಃ ಗಂಗವಂಶದವಳಿರಬೇಕು. ಇಲ್ಲಿಂದ ಮುಂದೆ ಗಂಗರ ಉಲ್ಲೇಖ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ದೊರೆಯುವುದು ಕಡಿಮೆ. ಇಮ್ಮಡಿ ಬೂತುಗನ ನಂತರದ ಗಂಗರ ವಂಶಾವಳಿಯನ್ನು ಶಾಸನಗಳಿಂದ ಈ ಮುಂದಿನಂತೆ ಪುನರ್‍ರಚಿಸಬಹುದು.

ಇಮ್ಮಡಿ ಬೂತುಗ (ಕ್ರಿ.ಶ.936–96)

- ಮರುಳದೇವ (ಅರಮೊಳಿದೇವ) ಕ್ರಿ.ಶ.961–963
- ಕುಂದಣಸಾಮಿ (ಗಂ.ರಾಜಾದಿತ್ಯ)
- ಬಿಜ್ಜಬ್ಬರಸಿ (ಗಂ.ಮಲ್ಲಪ್ಪ)
- ಜೆಬ್ಬಬರಸಿ (ಗಂ.ಹರಿಗ)
- ಮಾರಸಿಂಹ–II (ಕ್ರಿ.ಶ.963–974)
- ಚೆನ್ದಿಬ್ಬರಸಿ
- ರಾಜಮಲ್ಲ-IV (ಹೆಂ.ಕಂಚೆಬ್ಬರಸಿ)
- ನೀತಿಮಾರ್ಗ (ಗೋವಿಂದ) ಕ್ರಿ.ಶ.999
- ವಾಸವ (ಬಾಸ) (ಹೆಂ.ಕುಂತಲದೇವಿ)
  - ಗೋವಿಂದರ (ಸತ್ಯವಾಕ್ಯ) (ಕ್ರಿ.ಶ.999–1024)
  - ರಂಬಲದೇವಿ ಗಂ.ಚಾಲುಕ್ಯ ಚಿಕ್ಕಲದೇವ
  - ನೀತಿಮಾರ್ಗ ಅದುಮೋಳಿದೇವ ಕ್ರಿ.ಶ.1020–1036
    - ಬಚ್ಚಲದೇವಿ (ಗಂ.ಕಾಡುವೆಣ್ಣ)
    - ಕಾಂತಲದೇವಿ (ಗಂ.ತ್ರೈಳೋಕ್ಯಮಲ್ಲ ವೀರಸಾಂತರ)
    - ರಾಜಾವಿದ್ಯಾಧರ ಲೋಕ ವಿದ್ಯಾಧರ ರಾಜಾದಿತ್ಯ ಕ್ರಿ.ಶ.1034–1035

**ಕಲ್ಯಾಣದ ಚಾಲುಕ್ಯರು :**

ಕರ್ನಾಟಕವನ್ನಾಳಿದ ಪ್ರಮುಖ ಅರಸು ಮನೆತನವೆಂದರೆ ಕಲ್ಯಾಣ ಚಾಲುಕ್ಯರ ಅರಸು ಮನೆತನ. ಈ ವಂಶದ ಸಾಮ್ರಾಜ್ಯ ಸ್ಥಾಪಕನಾದ ಇಮ್ಮಡಿ ತೈಲಪ. ಈತನು ಕ್ರಿ.ಶ.973ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿ ಈ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಇದಕ್ಕೆ ಮೊದಲು ಬೇರೆ ಬೇರೆ ಸ್ಥಳಗಳಲ್ಲಿ ರಾಷ್ಟ್ರಕೂಟರು ಹಾಗೂ ಗಂಗರು ಇವರೊಡನೆ ವೈವಾಹಿಕ ಸಂಬಂಧ ಹೊಂದಿದ್ದ ರೆಂಬುದಾಗಿ ಇತಿಹಾಸ ಹೇಳುತ್ತದೆ. ಈ ಹಿನ್ನೆಲೆಯಿಂದ ಕಲ್ಯಾಣಿ ಚಾಲುಕ್ಯರ ಆಡಳಿತವನ್ನು ಗುರುತಿಸಬಹುದಾಗಿದೆ. ಕಲ್ಯಾಣದ ಚಾಲುಕ್ಯರು ರಾಜಕೀಯ ರಂಗದ ಮೇಲೆ ಬರುವ ಹೊತ್ತಿಗೆ ಕೊಪ್ಪಳ ನಾಡು ಪ್ರಾಮುಖ್ಯತೆಯನ್ನು ಪಡೆದು ಕೊಂಡಿದ್ದು, ಇವರ ಕಾಲಕ್ಕೆ ಪರಾಕಾಷ್ಠೆಯನ್ನು ಮುಟ್ಟಿತ್ತು. ಸ್ಥೂಲವಾಗಿ ಹೇಳಬೇಕೆಂದರೆ ಈ ಮನೆತನದ ಅರಸರ ಶಾಸನಗಳು ಈ ನಾಡಿನ ಪ್ರತಿಯೊಂದು ಹಳ್ಳಿಯಲ್ಲಿಯೂ ದೊರೆಯುತ್ತವೆ.

ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ಶಾಸನಗಳು ಅನೇಕ ಕುರುಹುಗಳನ್ನು ಒದಗಿಸುತ್ತವೆ. ಕ್ರಿ.ಶ.1190ರಲ್ಲಿ ಮಾದಿನೂರಿನ ಶಾಸನ[32]ವು ಕಲ್ಯಾಣ ಚಾಲುಕ್ಯರ ಆರಂಭಿಕ ಆಡಳಿತವನ್ನು ತಿಳಿಸುತ್ತದೆ. ಚಾಲುಕ್ಯ ವಂಶದ ತೈಲಪನು ತನ್ನ ಆಡಳಿದ ಮೊದಲ ವರ್ಷದಲ್ಲಿ 'ಬ್ರಹ್ಮಾಂಡಕ್ರತು' ಎಂಬ ಯಾಗವನ್ನು ಮಾಡಿದಂತೆ ತಿಳಿಸುತ್ತದೆ. ಬಹುಶಃ ರಾಷ್ಟ್ರಕೂಟರನ್ನು ಸೋಲಿಸಿದ ತಾನು ಪಟ್ಟಕ್ಕೆ ಬಂದ ಕಾರಣಕ್ಕೆ ಈ ಯಾಗವನ್ನು ಮಾಡಿಸಿರಬಹುದೆಂದು ಊಹಿಸಲು ಸಾಧ್ಯವಿದೆ. ಶಾಸನದಲ್ಲಿ ಇವನನ್ನು 'ಚಾಲುಕ್ಯಾಭರಣ' 'ಪಾಂಚಾಲಮದೇಭ ಪಂಚಾನನ' 'ರಟ್ಟಘರಟ್ಟ ನೂರ್ಮಡಿ ತೇಜ ಆಹವಮಲ್ಲ'....... ಮುಂತಾಗಿ ಕರೆಯಲಾಗಿದೆ. ಕೊಪ್ಪಳದ ಕ್ರಿ.ಶ.987ರ ಶಾಸನ[33]ದಲ್ಲಿ ಗಂಗ ವಂಶದ ವಾಸವನ(ಬಾಸ) ಮಗಳಾದ ರಂಬಲದೇವಿಯನ್ನು ನಾನಾ ರೀತಿಯಾಗಿ ವರ್ಣಿಸಿದೆ. ಕ್ರಿ.ಶ.988ರ ಪಂಪಸರೋವರದ ಮೆಟ್ಟಲಿಗೆ ಸೇರಿಸಲಾಗಿರುವ ಕಲ್ಲಿನಲ್ಲಿರುವ ಶಾಸನ[34] ಆಹವಮಲ್ಲನು ತುಂಗಭದ್ರೆಯ ದಕ್ಷಿಣ ತಡಿಯ ಪಂಪಾ ಬೀಡಿನಲ್ಲಿದ್ದಂತೆ ತಿಳಿದು ಬರುತ್ತದೆ. ತಳಕಲ್ಲಿನ ಕ್ರಿ.ಶ.991ರ ಶಾಸನ[35]ದಲ್ಲಿ ಆಹವಮಲ್ಲನ ಸಾಮಂತ ಸೋಭರಸನು ಎರಡಾರುನೂರು ಮತ್ತು ಬನವಾಸಿ–12000ನ್ನು ಆಳುತ್ತಿದ್ದಂತೆಯೂ ಅವನ ಮಾಂಡಳೀಕನಾದ ಸಾವಿಯಣ್ಣನು ಕುಕನೂರು–30ನ್ನು ಆಳುತ್ತಿದ್ದಂತೆಯೂ ಉಲ್ಲೇಖಿಸಲಾಗಿದೆ. ಹಿರೇಮನ್ನಾಪುರದ ಕ್ರಿ.ಶ.997ರ ಶಾಸನವು[36] ಜಯಸಿಂಹನ ಕಾಲಕ್ಕೆ ಸೇರಿದ್ದರೂ ಜಯಸಿಂಹನ ಆಡಳಿತ ಇರುವುದಿಲ್ಲ. ಈ ಕಾಲಕ್ಕಾಗಲೇ ಸತ್ಯಾಶ್ರಯನು ಪಟ್ಟಕ್ಕೆ ಬಂದಿರುತ್ತಾನೆ. ಬಳಗೇರಿ ಮತ್ತು ಕಲ್ಲೂರು ಶಾಸನಗಳು ಕ್ರಿ.ಶ.1002ಕ್ಕೆ ಸೇರಿದ್ದು ಸೋಬರಸನು ಸತ್ಯಾಶ್ರಯನ ಸಾಮಂತನಾಗಿ ಮುಂದುವರೆದಿದ್ದನ್ನು ತಿಳಿಸುತ್ತವೆ.[37] ಕುಕನೂರಿನ ಕ್ರಿ.ಶ. 1005ರ ಶಾಸನದಲ್ಲಿ ಇರಿವಬೆಡಂಗನ ಉಲ್ಲೇಖವಿದ್ದು ಕುಕನೂರಿನ ಎರಡು ದೇವಾಲಯಗಳ ಕಳಶಗಳನ್ನು

ಸ್ಥಾಪಿಸಿದಂತೆ ತಿಳಿಯುತ್ತದೆ.[38] ಕೊಪ್ಪಳದ ಕ್ರಿ.ಶ.1008ರ ಶಾಸನದಲ್ಲಿ[39] ವಿಕ್ರಮಾದಿತ್ಯನ ಮೊದಲ ವರ್ಷದ ಉಲ್ಲೇಖವಿದ್ದು ಇವನು ಐದನೇ ವಿಕ್ರಮಾದಿತ್ಯನಾಗಿರುತ್ತಾನೆ. ಸಾಮಿಕುಮಾರ ಎಂಬುವವನು ಬಿಚ್ಚುಕುಂನ್ದೆ ಗ್ರಾಮದಲ್ಲಿ ನಾಗದೇವ ಬಸದಿಯನ್ನು ಕಟ್ಟಿಸಿದ. ಈ ನಾಗದೇವ ಬಹುಶಃ ಚಾಲುಕ್ಯರ ದಂಡನಾಯಕರಲ್ಲೊಬ್ಬನಾದ ಅತ್ತಿಮಬ್ಬೆಯ ಗಂಡ ನಾಗದೇವನೇ ಇದ್ದಿರಬಹುದು. ಈ ಕಾಲಕ್ಕೆ ಆತ ಸತ್ತಿದ್ದು ಅವನ ನೆನಪಿನಲ್ಲಿ ನಾಗದೇವ ಬಸದಿ ಕಟ್ಟಿಸಿ ಅವನ ಹೆಸರಿನ ನಾಗದೇವನ ಸವಣ್ಣಾದ ಗಡಿಂಬ ಎಂಬ ಅಳತೆ ಗೋಲನ್ನು ಹಾಕಿಸಿರುತ್ತಾನೆ. ಈ ಶಾಸನ ದೊರೆತ ಸ್ಥಾನದಲ್ಲಿನ ಕಟ್ಟಡದ ಅವಶೇಷವೇ ಈ ನಾಗದೇವ ಬಸದಿಯಾಗಿರಬಹುದೆಂದು ಹೇಳಬಹುದು.[40] ಗೋತಗಿಯ ಕ್ರಿ.ಶ. 1024ರ ಶಾಸನದ ಪ್ರಕಾರ ಜಗದೇಕ ಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಂತೆ ಅವನ ಪತ್ನಿ ಪದ್ಮಲದೇವಿ ಕರಡಿಕಲ್ಲು–300ನ್ನು ಆಳುತ್ತಿದ್ದಂತೆ ತಿಳಿಸುತ್ತದೆ.[41] ಈತನ ಮತ್ತೊಬ್ಬಳು ಪತ್ನಿಯಾಗಿದ್ದ ಬೊಂಥಾದೇವಿಯ ಉಲ್ಲೇಖವೂ ಸಹ ಕ್ರಿ.ಶ.1030ರ ಶಾಸನ[42]ದಲ್ಲಿ ಕಂಡು ಬರುತ್ತದೆ. ಇದರ ಪ್ರಕಾರ ಬೊಂಥಾದೇವಿಯ ತಾಯಿ ರೇವಕಮ್ಮಡಿಯೂ ಆಗಿರಬಹುದೆಂದು ಗುರ್ತಿಸಬಹುದಾಗಿದೆ.

ತ್ರೈಲೋಕ್ಯಮಲ್ಲನು ಕ್ರಿ.ಶ.1045ರಲ್ಲಿ ಮಾರಗನೂರು ಬೀಡಿನಲ್ಲಿದ್ದಂತೆ ತಿಳಿಯುವ ಹಲವಾರು ಮಾಹಿತಿಗಳಿವೆ. ಸೋಮೇಶ್ವರ ಬೆಟ್ಟದಲ್ಲಿನ ಶಾಸನ ವೊಂದರಲ್ಲಿ ಕ್ರಿ.ಶ.1053ರಲ್ಲಿ ಇದೇ ಅರಸನು ಆಳುತ್ತಿದ್ದಾಗ ಕದಂಬ ವಂಶದ ಪಂಪರಸನೆಂಬುವವನ ಉಲ್ಲೇಖ ದೊರೆಯುತ್ತದೆ. ಪ್ರಸ್ತುತ ಕದಂಬ ಅರಸನು ಕರಡಿಕಲ್ಲಿನ ಕದಂಬನಿರಬಹುದೆಂದು ಊಹಿಸಲು ಸಾಧ್ಯವಿದೆ. ವಿಪ್ರದ ಕ್ರಿ.ಶ.1059ರ ಶಾಸನದಲ್ಲಿ ಸೋಮೇಶ್ವರನು ಈ ಸ್ಥಳಕ್ಕೆ ಬಂದು ದೇವಪೂಜೆ, ನದಿ ಪೂಜೆಯನ್ನು ಮಾಡಿಸಿದಂತೆ ತಿಳಿಸಲಾಗಿದೆ. ಈ ಶಾಸನದಲ್ಲಿ ಕಿಷ್ಕಿಂದೆಯ ಹಾಗೂ ವಿಪ್ರದ 33 ಕೋಟಿ ದೇವರುಗಳ ಉಲ್ಲೇಖ ಸಿಗುತ್ತದೆ.[43] ಅಳವಂಡಿಯ ಕ್ರಿ.ಶ.1061ರ ಶಾಸನದಲ್ಲಿ ಕರುವ ಗುಲ್ಲಿಮಯ್ಯ ಎಂಬುವವನು ಅಳವಂಡಿಯಲ್ಲಿ ತೋಟ, ಬಾವಿ, ಕಲ್ಲದೇಗುಲ, ಸತ್ರ, ಊರ ಬಾಗಿಲನ್ನು ಮಾಡಿಸಿದಂತೆ ತಿಳಿಯುತ್ತದೆ.[44] ತ್ರೈಳೋಕ್ಯಮಲ್ಲದೇವನು ಕಲ್ಯಾಣದಿಂದ ಅಳವಂಡಿಯ ನಾನೂರು ಮಹಾಜನರ ಸನ್ನಿಧಿಯಲ್ಲಿ ಕರುವ ಗುಲ್ಲಿಮಯ್ಯನು ಊರ ಪಶ್ಚಿಮಕ್ಕೆ ತೋಟವನ್ನು, ಪೂರ್ವಕ್ಕೆ ಬಾವಿ, ಕಲ್ಲದೇಗುಲ, ಸತ್ರ, ಸತ್ರದ ಮನೆ ಹಾಗೂ ಊರ ನಡುವೆ ಶ್ರೀ ಬಾಗಿಲನ್ನು ಮಾಡಿಸುತ್ತಾನೆ. ಈ ರಚನೆಗಳಿಗೆ ಗುಲ್ಲಿಮಯ್ಯನ ಮಗ ಬಮರಯ್ಯ ವಸತಿ ಸತ್ರಕ್ಕೆ 18 ಮತ್ತರು, ದೇವರಿಗೆ ಐದು ಮತ್ತರು, ಮಠಕ್ಕೆ ಎರೆ ಮತ್ತರು ಐದು– ಹೀಗೆ ದಾನಗಳನ್ನು ನೀಡಿರುತ್ತಾನೆ. ಶಾಸನದ ಮುಂದಿನ ಭಾಗದಲ್ಲಿ ಕರುವ ಗುಲ್ಲಿಮಯ್ಯನು ಕನ್ಯಾದಾನ, ಕವಿಲೆದಾನ, ಪಾದರಕ್ಷೆ ದಾನಗಳನ್ನು ಮಾಡಿ ಅನೇಕ ತೀರ್ಥಗಳಲ್ಲಿ ಸ್ನಾನ ಮಾಡಿ ದಾನ ಧರ್ಮಗಳನ್ನು ಮಾಡಿ ಮಹಾಪುರುಷ ಮೋಕ್ಷವನ್ನು

ಪಡೆಯುತ್ತಾನೆ ಎಂಬುದಾಗಿ ಸ್ಪಷ್ಟಪಡಿಸಿದೆ. ಮುಧೋಳ ಶಾಸನ[45]ದಲ್ಲಿಯೂ ಈ ತ್ರೈಲೋಕ್ಯಮಲ್ಲನಿಗೆ ಸಂಬಂಧಿಸಿದ ಉಲ್ಲೇಖ ಕಂಡುಬರುತ್ತದೆ. ಈ ಶಾಸನದಲ್ಲಿ ವಿಕ್ರಮಾದಿತ್ಯನಿಂದ ಆರನೆಯ ವಿಕ್ರಮಾದಿತ್ಯನವರೆಗಿನ ಚಾಲುಕ್ಯ ವಂಶಾವಳಿಯನ್ನೇ ನೀಡಿದ್ದು, ಮುಂದೆ ತ್ರೈಲೋಕ್ಯಮಲ್ಲನು ಕಲ್ಯಾಣದಿಂದ ಆಳುತ್ತಿದ್ದಂತೆ ಹೇಳಲಾಗಿದೆ. ಶಾಸನದಲ್ಲಿ ಮುದುವೊಳಲ ಸಾವಿರ ಅಶೇಷ ಮಹಾಜನರನ್ನು ಅನೇಕ ವಿಶೇಷಣಗಳಿಂದ ದೀರ್ಘವಾಗಿ ವರ್ಣಿಸಿದೆ. ಇವರನ್ನು ಶ್ರೀಸ್ವಯಂಭು ಜಡೆಯ ಶಂಕರದೇವ ಪಾದಾರಾಧಕರು ಎಂಬುದಾಗಿ ಕರೆಯಲಾಗಿದೆ. ಈ ವ್ಯಾಪಾರಿಗಳನ್ನು ನಾನಾ ರೀತಿಯಲ್ಲಿ ಶಾಸನದಲ್ಲಿ ವರ್ಣಿಸಲಾಗಿದೆ.

ಕೊಪಣದ ಪುರಾಧೀಶ ಪೆರ್ಮ್ಮಾಡಿ ಕಲ್ಯಾಣಿ ಚಾಲುಕ್ಯರ 6ನೇ ವಿಕ್ರಮಾದಿತ್ಯನಿಗೆ ಸಂಬಂಧಿಸಿದಂತೆ ಹುಲಗಿಯ ಕ್ರಿ.ಶ.1088ರ ಶಾಸನವು[46] ಆತನು ಕಲ್ಯಾಣದಿಂದ ಆಳ್ವಿಕೆ ನಡೆಸುತ್ತಿದ್ದಂತೆ ತಿಳಿಯುತ್ತದೆ. ಹಾಗೆಯೇ ಈತನ ಸುಪುತ್ರ ಮಲ್ಲಿಕಾರ್ಜುನನ ಸೇವಕನೆಂದು ರಾಯತೀರ್ಥ ಶಾಸನದಿಂದ ತಿಳಿಯುತ್ತದೆ. ಈ ಅರಸನ ಕಾಲದಲ್ಲಿ ಈ ಕೊಪ್ಪಳವು ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿಯೇ ಮುಂದುವರೆಯಿತು. ವಿಪ್ರದ ಕ್ರಿ.ಶ.1094ರ ಶಾಸನದಲ್ಲಿ ಪ್ರಭುವಾನ ಸಾಮಂತ ಪ್ರಭುವಾನ ಮಲ್ಲ ವೀರಪಾಂಡ್ಯನು ನೊಳಂಬರ ಪಾರಂಪರಿಕ ಬಿರುದುಗಳನ್ನು ಧರಿಸಿರುವುದನ್ನು ತಿಳಿಯ ಬಹುದಾಗಿದೆ. ಕ್ರಿ.ಶ.1099ರಲ್ಲಿ ತ್ರಿಭುವನ ಮಲ್ಲನ ಕಾಲದ ಶಾಸನ[47] ಅನೇಕ ವ್ಯಾಪಾರಿಗಳನ್ನು ಹೆಸರಿಸಿದೆ. ಹೆಸರೂರಿನ ಈ ವ್ಯಾಪಾರಿಗಳನ್ನು ಚಾಲುಕ್ಯರಾಯರ ಕುಲದೈವದೊಕ್ಕಲುಗಳೆಂದು ಕರೆಯಲಾಗಿದೆ. ಕ್ರಿ.ಶ.1104ರ ಪ್ರಸ್ತುತ ಶಾಸನ[48]ವು ಹೇಳುವಂತೆ ಚಾಲುಕ್ಯ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಚಾಲುಕ್ಯರಾಯರ ಕುಲದೈವದ ಒಕ್ಕಲುಗಳು, ಮಣ್ಣಕೆರೆಯ 500 ತಂತ್ರರು ಊರೊಡೆಯ ಪನ್ನಿರ್ವ್ವರು ಆದಿತ್ಯದೇವರ ಅಂಗಭೋಗಕ್ಕೆ, ಜೀರ್ಣೋದ್ಧಾರಕ್ಕೆ ಚಾಮೋಜನ ಮಗ ಬೊಪ್ಪಣನಿಗೆ ಹೆಗ್ಗೆರೆಯ ಪೂರ್ವಕ್ಕೆ ನಾಲ್ಕು ಮತ್ತರನ್ನು ನೀಡುತ್ತಾರೆ. ಇದಲ್ಲದೆ ಇನ್ನೂ ಕೆಲವು ದಾನಗಳನ್ನು ನೀಡುತ್ತಾರೆ. ಹೆಚ್ಚಿನ ವಿವರಗಳು ನಾಶವಾದರೂ ಇಲ್ಲಿ ಉಲ್ಲೇಖಗೊಂಡಿರುವ ಒಕ್ಕಲುಗಳನ್ನು ಹಾಗೂ ಊರೊಡೆಯರನ್ನು ಶಾಸನದಲ್ಲಿ ಹೆಚ್ಚಾಗಿ ವರ್ಣಿಸಲಾಗಿದೆ. ಮಂಕಲ್ಕೇರಿಯ ಕ್ರಿ.ಶ. 1123ರ ಶಾಸನವು[49] ಈ ರಾಜನ ಜಯಂತಿಪುರದ ನೆಲೆವೀಡಿನಲ್ಲಿದ್ದಂತೆ ಹೇಳಿದೆ. ಕ್ರಿ.ಶ.1128ರ ವರೆಗೆ ಇವನ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುತ್ತವೆ. ಇದೇ ವಂಶದ ಒಂದನೇ ಸೋಮೇಶ್ವರನಿಗೂ ಚೋಳ ಅರಸು ರಾಜಾಧಿರಾಜನಿಗೂ ಕೊಪ್ಪಳದಲ್ಲಿ ಖಾಡಬಾಡಿ ಯುದ್ಧ ನಡೆದು ಚೋಳ ಅರಸು ಸೋತು ಮಡಿದನೆಂದು ಹೇಳಲಾಗುತ್ತಿದೆ. ಇಲ್ಲಿ ಉಲ್ಲೇಖಿತವಾದ **'ಕೊಪ್ಪಂ'** ಈ ಕೊಪ್ಪಳವೆಂದೇ ಅನೇಕ ತಜ್ಞರು ಊಹಿಸಿದ್ದಾರೆ. ಇದು ನಿಜವಿದ್ದರೆ ಇದೊಂದು ಕೊಪ್ಪಳದ ರಾಜಕೀಯ ಇತಿಹಾಸಲ್ಲಿಯೇ ಪ್ರಮುಖ ಮೈಲುಗಲ್ಲೆಂದು ಗುರುತಿಸಲ್ಪಡುತ್ತದೆ.

ಕ್ರಿ.ಶ.1129ರ ಕುಕನೂರಿನ ಶಾಸನವೊಂದು[50] ಭೂಲೋಕಮಲ್ಲನ ಆಳ್ವಿಕೆಯನ್ನು ಹೆಸರಿಸಿದೆ. ತೃಟಿತಗೊಂಡಿರುವ ಈ ಶಾಸನ ಭೂಲೋಕಮಲ್ಲನ ಆಳ್ವಿಕೆಯಲ್ಲಿ ದೇಮೆಯೆಷಣಂಗಿಯು ಗಣೇಶ್ವರ ದೇವಾಲಯದಲ್ಲಿ ರುದ್ರಾದಿತ್ಯ ಘೈಸಾಸನು ಮಾಡಿಸಿದ ಸತ್ರದ ಮನೆಯಲ್ಲಿ ಪ್ರತಿ ದಿವಸವೂ 6 ಜನ ಬ್ರಾಹ್ಮಣರು ಊಟಮಾಡುವಂತೆ ಭೂ ದಾನವನ್ನು ನೀಡುತ್ತಾನೆ. ಇದರೊಂದಿಗೆ ಮತ್ತೆ 12 ಜನರು ಊಟ ಮಾಡಲು ರುದ್ರಾದಿತ್ಯ ಘೈಸಾಸನು ಮತ್ತೆ ಭೂದಾನ ನೀಡುತ್ತಾನೆ. ಇದಲ್ಲದೆ ಬೇರೆ ಬೇರೆಯವರು ದೇವರ ಬೇರೆ ಬೇರೆ ಕಾರ್ಯಗಳಿಗೆ ದಾನ ನೀಡಿರುತ್ತಾರೆ. ಈ ಧರ್ಮವನ್ನು ಸಾವಿರ ಜನರು ಪ್ರತಿಪಾದಿಸಬೇಕೆಂದು ವಿಧಿಸಿದೆ.

ಕಲ್ಲೂರಿನ ಕ್ರಿ.ಶ.1132ರ ಶಾಸನದಲ್ಲಿ[51] ಆಚರಸನ ಮಗ ಪೆರ್ಮಾನಾಡಿಯು ಕುಕನೂರು–30ನ್ನು ಆಳುತ್ತಿದ್ದಂತೆ ಹೇಳಿದೆ. ಈ ಶಾಸನದಲ್ಲಿ ಬರುವ ವಡ್ಡರಾವುಳದ ಅಧಿಕಾರಿ ಮಹೇಶ್ವರಯ್ಯನನ್ನೆ ಶಾಸನದಲ್ಲಿ ಬಹಳವಾಗಿ ಉಲ್ಲೇಖಿಸಲಾಗಿದೆ. ಕ್ರಿ.ಶ.1136ರ ಶಾಸನ[52]ವು ತ್ರಿಭುವನಮಲ್ಲನ ಹೆಂಡತಿಯಾದ ರೆಬ್ಬಲದೇವಿಯನ್ನು ಹೆಸರಿಸಿದೆ. ಈಕೆಯು ಭೂಲೋಕಮಲ್ಲನ ತಾಯಿಯಾಗಿರಬಹುದೆಂದು ಊಹಿಸಬಹುದು. ಶಿವಪುರದ ಕ್ರಿ.ಶ.1033ರ ಶಾಸನ[53]ವು ತೈಲಪನನ್ನು ಮತ್ತು ಅವನ ಸಾಮಂತನನ್ನು ವರ್ಣಿಸಿದೆ. ಪ್ರಸ್ತುತ ಊರಿನ ಕ್ರಿ.ಶ.1143 ಮತ್ತು 1149ರ ಶಾಸನಗಳು ಜಗದೇಕಮಲ್ಲನನ್ನು ಹೆಸರಿಸುತ್ತವೆ.[54] ಕ್ರಿ.ಶ.1143ರ ಶಾಸನದಂತೆ ಜಗದೇಕಮಲ್ಲನು ರಾಜ್ಯವನ್ನು ಆಳುತ್ತಿದ್ದಾಗ ಅಗ್ರಹಾರ ಕುಕ್ಕನೂರಿನ ಸಾವಿರ ಮಹಾಜನರ ಪ್ರಿಯ ಮಕ್ಕಳಾದ ಗಳೆಯ ಮೂನೂರ್ವರು ಸಾವಿರ ಮಹಾಜನರ ಕೈಯಲ್ಲಿ ತಮ್ಮ ತೋಟಿಗೇಶ್ವರ ದೇವರ್ಗ್ಗೆ ವರ್ಷಂಪ್ರತಿ ತೋಟಗೆಲಸದಲ್ಲಿ ಒಂದು ಹಾಗವನ್ನು ಬಿಟ್ಟಂತೆ ಶಾಸನವು ತಿಳಿಸುತ್ತದೆ. ಕ್ರಿ.ಶ.1149ರ ಶಾಸನದಂತೆ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ ಕಾಲದಲ್ಲಿ ಮರಿಮರಸ ದಂಡನಾಥನು ಬೆಳ್ವಲ–200ನ್ನು ಅಳುತ್ತಿದ್ದಾಗ ಇವನ ಕೈ ಕೆಳಗಿನ ಅಧಿಕಾರಿ ಮೇದಿರಾಜ ದಂಡನಾಯಕನು ಕುಕ್ಕನೂರಿನ ಮಲ್ಲಿಕಾರ್ಜುನ ದೇವರ ನೈವೇದ್ಯಕ್ಕೆ ಹೊನ್ನನ್ನು ಬಿಡುತ್ತಾನೆ. ಇವರಲ್ಲದೆ ಮಾಹಿಯಣ್ಣನೂ ಒಂದು ಗಳಂ ದಾನ ಬಿಡುತ್ತಾನೆ.

ಕಲ್ಲೂರು ಮತ್ತು ಮುಧೋಳಿನ ಕ್ರಿ.ಶ.1154ರ ಶಾಸನಗಳಲ್ಲಿ[55] ಅಳವಂಡಿ ಮತ್ತು ಕುಕ್ಕನೂರಿನ ಕ್ರಿ.ಶ.1157ರಲ್ಲಿನ[56] ಶಾಸನಗಳಲ್ಲಿ ಚಾಲುಕ್ಯ ತ್ರೈಲೋಕ್ಯಮಲ್ಲನ ಆಳ್ವಿಕೆಯ ಉಲ್ಲೇಖವಿದೆ. ಇಲ್ಲಿಂದ ಮುಂದೆ ಕ್ರಿ.ಶ.1185ರ ವರೆಗೆ ಚಾಲುಕ್ಯರ ಶಾಸನಗಳು ಈ ಜಿಲ್ಲೆಯಲ್ಲಿ ಅಷ್ಟಾಗಿ ದೊರೆಯುವುದಿಲ್ಲ. ಕಲ್ಲೂರಿನ ಕ್ರಿ.ಶ.1185ರ ಶಾಸನ ಚಾಲುಕ್ಯ ಪ್ರಭುವಿನ ಉಲ್ಲೇಖವನ್ನೇ ಹೆಸರಿಸಿದ್ದು, ಇವನ ಸಾಮಂತನಾದ ಸಿಂಧ ವಂಶದ ವೀರ ಬಿಜ್ಜಳ ಮತ್ತು ವಿಕ್ರಮ ದೇವನಿದ್ದಂತೆ ಉಲ್ಲೇಖ ಬರುತ್ತದೆ.[57] ಅದೇ ಗ್ರಾಮದ ಕ್ರಿ.ಶ.1189ರ ಶಾಸನದಲ್ಲಿ ಭೂಲೋಕಮಲ್ಲನ ಉಲ್ಲೇಖವಿದೆ. ಮಾದಿನೂರಿನ ಕ್ರಿ.ಶ.1190ರ

ಶಾಸನದಲ್ಲಿ[58] ಸೋವಿದೇವನ ಉಲ್ಲೇಖವಿದ್ದು ಇವನು ಯಾರೆಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಚಾಲುಕ್ಯ ವಂಶದ 3ನೇ ತೈಲಪನು ಈ ಚಾಲುಕ್ಯರ ಮಹಾಮಂಡಳೇಶ್ವರ ಮತ್ತು ಇವರ ಬಂಧುವೆಂದು ಹೇಳಲಾಗುವ ಕಲಚೂರಿಯ 2ನೇ ಬಿಜ್ಜಳನು ಕಾಕತೀಯರ 3ನೇ ತೈಲಪನನ್ನು ದಂಡಿಸಲು ಹೋದ ಸಮಯದಲ್ಲಿ ಕಲ್ಯಾಣ ಸಿಂಹಾಸನವನ್ನು ಆಕ್ರಮಿಸಿಕೊಂಡನು ಮತ್ತು ಕಲಚೂರಿಯ ರಾಜ್ಯವನ್ನು ಕ್ರಿ.ಶ.1162ರಲ್ಲಿ ಸ್ಥಾಪಿಸಿದನೆಂದು ಹೇಳಲಾಗುತ್ತದೆ. ಈತನು ಕುಮಾರರಾಮ ಮರಾಠಿ ಸೋವಿದೇವಯ್ಯನನ್ನು ಕೊಪ್ಪಳದ ಸನಿಹದಲ್ಲಿರುವ ಮೊದೆಗನೂರು ರಾಜ್ಯದ ಅರಸನೆಂದು ಸಾರಿದನು. ಈ ವಿಷಯವನ್ನು ಇಟಗಿ ಮತ್ತು ಕುಕನೂರಿನಲ್ಲಿನ ಶಾಸನಗಳು ಸ್ಪಷ್ಟಪಡಿಸುತ್ತವೆ. ಕಾಲ ಸುಮಾರು ಕ್ರಿ.ಶ.1183ರಲ್ಲಿ ಕಲ್ಯಾಣ ವಂಶದ ಅರಸು 4ನೇ ಸೋಮೇಶ್ವರನು ಬ್ರಹ್ಮರಸ...... ಮುಂತಾದ ದಂಡನಾಯಕರ ಸಹಾಯದಿಂದ ಕಲಚೂರಿಗಳನ್ನು ಮಣಿಸಿ ಪುನಃ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ ಮರಳಿ ಪಡೆದನೆಂದು ಹೇಳಬಹುದು.

ಪ್ರಸ್ತುತ ಕೊಪ್ಪಳ, ಬೆಳ್ವಲನಾಡು, ಎಡೆದೊರೆನಾಡುಗಳೊಂದಿಗೆ ಮತ್ತೆ ಕಲ್ಯಾಣ ಚಾಲುಕ್ಯರ ರಾಜ್ಯಕ್ಕೆ ಸೇರಿದಂತಹ ಈ ಚಾಲುಕ್ಯ ವಂಶದ ಸಾಮಂತನಾಗಿದ್ದ ದೇವಗಿರಿಯ ಅರಸು 5ನೇ ಬಿಲ್ಲಮನು, ಅರಸು 4ನೇ ಸೋಮೇಶ್ವರನು ಬನವಾಸಿಯತ್ತ ಸೈನ್ಯದೊಂದಿಗೆ ತೆರಳಿದ ಸಮಯಾವಕಾಶವನ್ನು ಉಪಯೋಗಿಸಿಕೊಂಡು ಕಲ್ಯಾಣವನ್ನು ಹಿಡಿದುಕೊಂಡು ಸ್ವತಂತ್ರ ರಾಜನೆಂದು ಸಾರಿದ. ಕಿಸುಕಾಡು, ಬೆಳ್ವಲ, ಎಡದೊರೆನಾಡು ಈ ದೇವಗಿರಿಯ ಸೇವುಣರ ಅರಸರ ಆಡಳಿತಕ್ಕೆ ಸೇರಿದವು. ಈ ಮೊದಲೇ ಎಡದೊರೆಯ ನಾಡಿನಲ್ಲಿದ್ದ ಈ ಕೊಪ್ಪಳ ಇವುಗಳೊಂದಿಗೆ ಸೇವುಣ ರಾಜ್ಯಕ್ಕೆ ಸೇರಿತು.

**ಸೇವುಣರು :**

ಕೊಪ್ಪಳ ಜಿಲ್ಲೆಯಲ್ಲಿ ಸೇವುಣರಿಗೆ ಸಂಬಂಧಿಸಿದ ಶಾಸನಗಳು ಸ್ಪಷ್ಟವಾಗಿ ದೊರೆಯದಿದ್ದರೂ ಹೊಯ್ಸಳ ಅರಸನಾದ ಇಮ್ಮಡಿ ಬಲ್ಲಾಳನಿಗೂ ಮತ್ತು ಸೇವುಣರ ಅರಸು ಐದನೇ ಬಿಲ್ಲಮನಿಗೂ ಸ್ವರಲೂರಿನಲ್ಲಿ ಯುದ್ಧವಾಯಿತೆಂದು ಹಿಂದೆ ಗಮನಿಸಲಾಗಿದೆ. ಇದರಲ್ಲಿ ಇಮ್ಮಡಿಬಲ್ಲಾಳನು ಜಯಶಾಲಿಯಾಗುತ್ತಾನೆ. ವೈರಿಗಳನ್ನು 'ತೋಳಗುಂಡಿ' (ಈಗಿನ ಲಕ್ಕಂಡಿ ಎಂದು ಹೇಳಲಾಗುವ)ಯ ವರೆಗೂ ಈತನು ಅಟ್ಟಿದನು. ಅವರಾಳುತ್ತಿದ್ದ ಬೆಳ್ವಲನಾಡನ್ನು ತನ್ನ ರಾಜ್ಯ ಕ್ಕೆ ಸೇರಿಸಿಕೊಂಡನು. ಕ್ರಿ.ಶ.1215ರಲ್ಲಿ ಸೇವುಣ ವಂಶದ ಬಲ್ಲಾರ್ಯ ಅರಸನೆಂದು ಹೇಳಲಾಗುವ ಇಮ್ಮಡಿ ಸಿಂಘಣನು ಹೊಯ್ಸಳ ಇಮ್ಮಡಿ ಬಲ್ಲಾಳನನ್ನು ಸೋಲಿಸಿ ಆತನು ವಶಪಡಿಸಿಕೊಂಡಿದ್ದ ತಮ್ಮ ಪ್ರದೇಶಗಳನ್ನು ಪುನಃ ಪಡೆದುಕೊಂಡನು. ಆನಂತರ ಸೇವುಣರ ಅರಸು ರಾಮಚಂದ್ರನ ಕಾಲ ಕ್ರಿ.ಶ.1245ರಲ್ಲಿ ದಿಲ್ಲಿಯಿಂದ ದಕ್ಷಿಣಕ್ಕೆ ಬಂದ ಅಲ್ಲಾವುದ್ದೀನನು

ದೇವಗಿರಿಯನ್ನು ಹಿಡಿದುಕೊಂಡನು. ಈರ್ವರಲ್ಲಿ ಒಪ್ಪಂದ ಏರ್ಪಟ್ಟು ಅಪಾರ ಬಂಗಾರ ಮತ್ತು ಬೆಲೆಯುಳ್ಳ ವಸ್ತುಗಳೊಂದಿಗೆ ದಿಲ್ಲಿಗೆ ಹಿಂದಿರುಗಿದನು. ನಂತರದಲ್ಲಿ ಸ್ವಾಭಿಮಾನಿಗಳಾದ ಕಾಕತೀಯರು, ಹೊಯ್ಸಳರು ಸೇರಿ ದೇವಗಿರಿ ಮೇಲಿನ ದಿಲ್ಲಿಯ ಹಿಡಿತವನ್ನು ಕಿತ್ತೊಗೆದು ಸೇವುಣರನ್ನು ಮರಳಿ ಸ್ವತಂತ್ರಗೊಳಿಸಿದರು. ಹೀಗೆ ಪ್ರಬಲರಾದ ಸೇವುಣರು ನೇರವಾಗಿ ಕೊಪ್ಪಳ ಪ್ರದೇಶದಲ್ಲಿ ತಮ್ಮ ಅಧಿಕಾರವನ್ನು ನಡೆಸಿದರು. ಇಲ್ಲಿನ ಅರಸರು ಪರಕೀಯರ ವಿರುದ್ಧ ಸಾಧನೆ ಮಾಡಿದುದು ಗಮನಿಸುವಂತಹದು.

**ನೊಳಂಬರು :**

ನೊಳಂಬರಿಗೆ ಸಂಬಂಧಿಸಿದಂತೆ ಕೆಲವೆ ಕೆಲವು ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಈ ನೊಳಂಬರು ಪಾರಂಪರಿಕವಾಗಿ ಬಂದಿದ್ದ ನೊಳಂಬ–32,000ದ ಅರಸರಾಗಿದ್ದರು. ಇವರು ಪ್ರಾರಂಭದಲ್ಲಿ ಹೇಮಾವತಿ (ಹೆಂಜೇರು)ಯನ್ನು ರಾಜಧಾನಿಯನ್ನಾಗಿ ಹೊಂದಿದ್ದರೂ ಸಹಿತ ನಂತರದ ಕಾಲದಲ್ಲಿ ಕಂಪಲಿಯನ್ನು (ಈಗಿನ ಕಂಪ್ಲಿ) ರಾಜಧಾನಿಯನ್ನಾಗಿ ಬದಲಾಯಿಸಿ ಕೊಂಡರು. ತುಂಗಭದ್ರಾ ನದಿ ಇವರ ಪ್ರಾಂತ್ಯಕ್ಕೆ ನೈಸರ್ಗಿಕ ಮೇರೆಯನ್ನು ಒದಗಿಸಿಕೊಟ್ಟಿದ್ದರಿಂದ ಈ ನೊಳಂಬವಾಡಿ–32,000 ಪ್ರದೇಶ ಈ ನದಿಯ ಉತ್ತರಕ್ಕೆ ಹೆಚ್ಚಾಗಿ ಹಾಗೆಯೇ ನೊಳಂಬರು ಈ ನದಿಯಿಂದ ಉತ್ತರಕ್ಕೆ ಆಡಳಿತ ನಡೆಸಿದ ಬಗೆಗೆ ದಾಖಲೆಗಳು ಸಹ ಹೆಚ್ಚಿಗೆ ದೊರೆಯುವುದಿಲ್ಲ. ಆದರೆ ಗಂಗಾವತಿ ತಾಲೂಕಿನ ವಿಪ್ರವನ್ನು ಕೆಲವು ಕಾಲ ತಮ್ಮ ನೆಲೆವೀಡನ್ನಾಗಿ ಇವರು ಮಾಡಿಕೊಂಡಿದ್ದಂತೆ ಕಲ್ಕಂಬ ಶಾಸನ[59]ಗಳಿಂದ ತಿಳಿದು ಬರುತ್ತದೆ. ಇಲ್ಲಿನ ನಿಷಧಿ ಶಾಸನಗಳಲ್ಲಿ ಪಲ್ಲವರಾಯನ ಉಲ್ಲೇಖವು ಬಂದಿದ್ದು ಈತನು ನೊಳಂಬ ಅರಸನಾಗಿರಬಹುದೆಂದು ನಂಬಲಾಗಿದೆ. ಕ್ರಿ.ಶ.989ರ ಶಾಸನವೊಂದು ಪರಿಯಬ್ಬರಿಸಿಯು ಪಲ್ಲವರ ರಾಜನ ಪತ್ನಿಯೆಂದು ತಿಳಿಸುತ್ತದೆ. ಈ ಪಲ್ಲವರಾಜನು ಇರಿವ ನೊಳಂಬ ದೀಲಿಪನ ಮಗನಾದ ಇರಿವ ನೊಳಂಬ ನೊಳಿಪ್ಪಯ್ಯನಿರಬಹುದೆಂದು ಊಹಿಸಲಾಗಿದೆ. ಕ್ರಿ.ಶ.1031ರ ಕೊಪ್ಪಳದ ಶಾಸನ[60]ವೊಂದು ಚಿಣ್ಣಕಬ್ಬೆಯ ಪತಿ ದೀಲಿಪನೆಂದು ಈಕೆಯ ಮಗ ಗುಣದ ಬೆಡಂಗನೆಂದು ತಿಳಿಸುತ್ತದೆ. ಈ ದೀಲಿಪನು ಕ್ರಿ.ಶ.950ರಲ್ಲಿ ಆಳ್ವಿಕೆ ನಡೆಸಿದ ದೀಲಿಪನಾಗಿರಲು ಸಾಧ್ಯವಿಲ್ಲ. ಆದುದರಿಂದ ಕ್ರಿ.ಶ.970ರ ನಂತರ ಆಳ್ವಿಕೆ ನಡಿಸಿದ ನೊಳಂಬ ರಾಜರುಗಳಲ್ಲಿ ಈತನು ಒಬ್ಬನಾಗಿರಬೇಕು. ಈ ರಾಜರುಗಳಲ್ಲಿ ಗುಣದ ಬೆಡಂಗ ಎಂಬ ವಿಶೇಷಣ ಯಾರಿಗಿತ್ತೆಂಬುದು ಸ್ಪಷ್ಟವಾಗಿಲ್ಲ. 6ನೇ ವಿಕ್ರಮಾದಿತ್ಯನ ಕಾಲದ ವಿಪ್ರದ ಶಾಸನದಲ್ಲಿ ನೊಳಂಬರ ಪಾರಂಪರಿಕ ಬಿರುದು ಬಾವಲಿಗಳನ್ನೇ ಹೊಂದಿದ್ದ ತ್ರಿಭುವನ ಮಲ್ಲನಾದ ಪಾಂಡ್ಯನ ಉಲ್ಲೇಖ ಕಂಡುಬರುತ್ತದೆ. ಇಲ್ಲಿ ಯಥಾವತ್ತಾಗಿ ನೊಳಂಬ ವಂಶದ ಅರಸರ ಬಿರುದು ಬಾವಲಿಗಳನ್ನು ಸ್ವೀಕರಿಸಿದ್ದರೂ

ಸಹ ಪ್ರಸ್ತುತ ತ್ರಿಭುವನಮಲ್ಲ ಪಾಂಡ್ಯನು ಉಚ್ಚಂಗಿಯ ಪಾಂಡ್ಯನಾಗಿರಬಹುದೆಂದು ಹೇಳಬಹುದು.

**ಕಲ್ಯಾಣದ ಕಲಚೂರಿಗಳು :**

ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಕಲಚೂರಿಗಳಿಗೆ ಸಂಬಂಧಿಸಿದ ಶಾಸನಗಳು ಕುಕನೂರು, ಹಲಗೇರಿ, ಪುರ, ಕವಲೂರು, ಇಟಗಿ, ಅಳವಂಡಿ ಈ ಮುಂತಾದ ಸ್ಥಳಗಳಲ್ಲಿ ದೊರೆಯುತ್ತವೆ. ಕುಕನೂರಿನಲ್ಲಿ ಕ್ರಿ.ಶ.1163ರ ಶಾಸನ[61]ವು ಇಮ್ಮಡಿ ಬಿಜ್ಜಳನ ಆಳ್ವಿಕೆಗೆ ಸೇರಿದ್ದು, ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಮಾಡಿದ ದಾನದ ಬಗೆಗೆ ತಿಳಿಸುತ್ತದೆ. ಈ ಶಾಸನ ಬಿಜ್ಜಳನ ಕೈಕೆಳಗೆ ಅಮ್ಮಣ್ಣರಸ, ಬೊಪ್ಪಣ್ಣ ನಾಯಕ, ಭೀಮರಸ, ಸಾಯಿದೇವ ವಿಟ್ಟಪ್ಪಯ್ಯ, ಬಲದೇವ ದಂಡ ನಾಯಕರಲ್ಲದೇ ಕರಣಗಳಾದ ಮಧುಸೂಧನ ಆದಿತ್ಯದೇವ, ಸೋಮರಾಜ, ಬೊಪ್ಪದೇವ, ಚಾವುಂಡರನ್ನು ಹೆಸರಿಸಿದೆ. ಇದೇ ಗ್ರಾಮದ ಇನ್ನೊಂದು ಶಾಸನವು ಕಲಚೂರಿ ಕನ್ನಮನಿಂದ ಸೋಮದೇವನ ವರೆಗೆ ವಂಶಾವಳಿಯನ್ನು ನೀಡಿದ್ದು ಸೋವಿದೇವನು ಮುದೇನೂರು ನೆಲೆವೀಡಿನಲ್ಲಿದ್ದಂತೆ ತಿಳಿಸುತ್ತದೆ. ಇವನ ದಂಡಾಧೀಶನಾಗಿ ತೇಜಿರಾಜನಿರುತ್ತಾನೆ. ಕ್ರಿ.ಶ.1171ರಲ್ಲಿನ ಚಳಿಗೇರಾ ಶಾಸನ ಇವನ ಇನ್ನೊಬ್ಬ ದಂಡಾಧೀಶನಾದ ಬೂಚಿರಾಜನನ್ನು ಹೆಸರಿಸುತ್ತದೆ. ಕವಲೂರಿನ ಕ್ರಿ.ಶ.1177ರ ಕಾಲಕ್ಕೆ ಸೇರಿದ ಸಂಕಮದೇವನ ಶಾಸನ[62]ದಲ್ಲಿ ಏಚಿಮಯ್ಯ ನಾಯಕನೆಂಬುವವನು ಕವಲೂರಿನಲ್ಲಿ ಹರಿಹರ ದೇವಾಲಯವನ್ನು ನಿರ್ಮಿಸಿ ಅದರ ಪೂಜಾ ಕಾರ್ಯಗಳಿಗೆ ಭೂದಾನವನ್ನು ನೀಡುತ್ತಾನೆ. ಕುಕನೂರಿನ ಕ್ರಿ.ಶ.1178ರ ಶಾಸನ[63]ದಲ್ಲಿ ಸಂಕಮದೇವನು ಮೋದಿಗ ನೂರಿನಲ್ಲಿದ್ದಾಗ ಇವನ ಸೇನಾನಿ ಧಂನುಗಿ(ಧನ್ಯಚಮೂಪನು) ಬೆಳ್ವಲ-200ರನ್ನು ಆಳುತ್ತಿದ್ದನು. ಇವನು ತನ್ನ ತಾಯಿ ಚಾಂಡಾಬಾಯಿ ಅಕ್ಕ ಲಳಿಯದೇವಿಯರೊಡಗೂಡಿ ಕುಕನೂರಿಗೆ ಬಂದು ಜೇಷ್ಠ ದೇವಿಯ ಪೂಜೆಯನ್ನು ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ. ಕವಲೂರಿನ ಕ್ರಿ.ಶ.1179ರ ಶಾಸನ[64]ದಲ್ಲಿ ಸಂಕಮದೇವನು ಕೌರೂರ ಹರಿಹರೇಶ್ವರ ದೇವಾಲಯಕ್ಕೆ ಎಡೆಹಳ್ಳಿಗೇರಿಯನ್ನು ಬಿಡುತ್ತಾನೆ. ಇವನ ಮಾಂಡಳಿಕ ಬಾಚಿದೇವನಾಗಿರುತ್ತಾನೆ. ಅಳವಂಡಿಯಲ್ಲಿ ದೊರೆತ ಶಾಸನ[65]ವೊಂದು ಕಲಚೂರಿ ಆಹವಮಲ್ಲನ ಕಾಲಕ್ಕೆ ಸೇರಿದ್ದು ಅಳವಂಡಿಯ ಮಹಾಜನರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ.ಶ.1183ರ ಶಾಸನ[66]ವೊಂದು ಕಲಚೂರ್ಯ ಸಿಂಘದೇವನ ಕಾಲದ್ದಾಗಿದ್ದು ಕುಕನೂರಿನ ಜೇಷ್ಠಾದೇವಿಗೆ ಕುಕನೂರನ್ನು ಸರ್ವಮಾನ್ಯವಾಗಿ ನೀಡಿದ್ದನ್ನು ವಿವರಿಸುತ್ತದೆ.

**ಹೊಸಮಲೆದುರ್ಗದ ಅರಸರು :**

ಹೊಸಮಲೆ ದುರ್ಗದ ಅರಸರಿಗೆ ಸಂಬಂಧಿಸಿದಂತೆ ಕೇವಲ ಎರಡು ಶಾಸನ[67]ಗಳು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2ರಲ್ಲಿ

ಪ್ರಕಟಗೊಂಡಿವೆ. ಕಮ್ಮಟದುರ್ಗದಲ್ಲಿ ದೊರೆತಿರುವ ಇವುಗಳು ವೀರಗಲ್ಲುಗಳಾಗಿದ್ದ ಒಂದು ಶಾಸನವು ಕಾಲಯುಕ್ತವಾಗಿದೆ. ಕ್ರಿ.ಶ.1315ರಲ್ಲಿ ಸುರತಾಣನ ದಳವು ನೇಮಿಯ ನೇತೃತ್ವದಲ್ಲಿ ಕಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿದಂತೆ ತಿಳಿಸುತ್ತದೆ. ಈ ಯುದ್ಧದಲ್ಲಿ ಗಡೆಸಿಂಘ ನಾಯ್ಕ ಮತ್ತು ಆತನ ತಮ್ಮನಾದ ಕಾಮಿ ನಾಯ್ಕರು ಸತ್ತಂತೆ ತಿಳಿದು ಬರುತ್ತದೆ. ಒಟ್ಟಿನಲ್ಲಿ ಈ ಅರಸರು ಕೆತ್ತಿಸಿದ ಶಾಸನಗಳು ಹೆಚ್ಚಿಗೆ ದೊರೆಯದಿದ್ದರೂ ಇತರೆ ಶಾಸನಗಳ ಹಾಗೂ ಇದೇ ವಂಶದ ಕುಮಾರ ರಾಮನನ್ನು ಕುರಿತು ಬಂದಿರುವ ಕಾವ್ಯಗಳ ಆಧಾರದ ಮೇಲೆ ಇವರ ವಂಶಾವಳಿಯನ್ನು ರಚಿಸಬಹುದಾಗಿದೆ. ಕ್ರಿ.ಶ.1521ರ ಹೊಸಮಲೆ (ರಾಮನಮಲೆ) ಶಾಸನ[68]ವು ಇವರ ವಂಶಾವಳಿಯನ್ನು ಹೀಗೆ ಹೇಳುತ್ತದೆ.

ಮುಮ್ಮಡಸಿಂಗ

↓

ಕಂಪಿಲರಾಯ (ಖಂಡೆಯರಾಯ)

↓

ಕುಮಾರರಾಮ(ರಾಮನಾಥ)

ಇವರಲ್ಲಿ ಮುಮ್ಮಡಸಿಂಗನು ಈ ರಾಜ್ಯದ ಸ್ಥಾಪಕನಾಗಿದ್ದು ಈತನು ಕ್ರಿ.ಶ.1260ರಲ್ಲಿ ಅನಂತಪುರ, ಮೊಳಕಾಲ್ಮೂರು ಪ್ರದೇಶದಿಂದ ಬಂದವ ನಾಗಿರಬೇಕು. ಇವನ ಮನೆದೈವ ಜಟಿಂಗರಾಮೇಶ್ವರ. ಮುಂದೆ ಇವನು ಕಾಕತೀಯ, ಹೊಯ್ಸಳ ಮತ್ತು ಸೇವುಣರ ರಾಜ್ಯಗಳು ಸೇರುವ ಸ್ಥಳವನ್ನೇ ತನ್ನ ರಾಜ್ಯ ವಿಸ್ತಾರ ಮಾಡಲು ಆಯ್ಕೆ ಮಾಡುತ್ತಾನೆ. ಉತ್ತರದಿಂದ ಬರುತ್ತಿದ್ದ ಮುಸಲ್ಮಾನರ ದಾಳಿಯಿಂದ ಸೇವುಣರು, ಕಾಕತೀಯರು ತತ್ತರಿಸುತ್ತಿದ್ದ ಕಾಲದಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿ ಅಲ್ಪಕಾಲದಲ್ಲಿಯೇ ಬಳ್ಳಾರಿಯಿಂದ ಹರಿಹರದವರೆಗೆ ರಾಜ್ಯ ವಿಸ್ತರಿಸಿದ್ದಾನೆ. ಇಂತಹ ಸಂದರ್ಭದಲ್ಲಿ ಸೇವುಣ, ಹೊಯ್ಸಳ, ಕಾಕತೀಯ ರೊಂದಿಗೆ ಯುದ್ಧ ಮಾಡಬೇಕಾದ ಚಾವುಂಡರಸನು ಈ ಮುಮ್ಮಡಿಸಿಂಗನ ಮೇಲೆ ಯುದ್ಧ ಮಾಡಿದಂತೆ ಉಲ್ಲೇಖವಿದೆ. ಸು.13ನೇ ಶತಮಾನದಲ್ಲಿ ಈ ಮುಮ್ಮಡಿಸಿಂಗನು ಯರಂಬಗೇರೆಯನ್ನು ಹಿಡಿದಾಗ ಅಲ್ಲಿದ್ದ ಜೈನರಿಗೆ ಕಿರುಕುಳ ನೀಡಿ ಅವರ ಬಸದಿಗಳನ್ನು ನಾಶ ಮಾಡಿಸಿದಂತೆ ಯಲಬುರ್ಗಾದ ಶಾಸನ[69]ವೊಂದು ತಿಳಿಸುತ್ತದೆ. ಹಾಗೆಯೇ ಮುಮ್ಮಡಿಸಿಂಗನ ಮಗ ಕಂಪಿಲ ದೇವರಾಯ ಈತನು ತನ್ನ ರಾಜಧಾನಿಯನ್ನು ಹೊಸಮಲೆದುರ್ಗದಿಂದ ಕಮ್ಮಟ ದುರ್ಗಕ್ಕೆ ಸ್ಥಳಾಂತರಿಸುತ್ತಾನೆ. ಈತನ ಪತ್ನಿ ಗುಜ್ಜಲ ವಂಶದ ಹರಿಹರದೇವಿ. ಈತನ ಕಾಲದಲ್ಲಿ ನೇಮಿಬಾನನು ಕಮ್ಮಟದುರ್ಗದ ಮೇಲೆ ದಾಳಿ ಮಾಡುತ್ತಾನೆ. ಆಗ ನೇಮಿಬಾನನು

ಸೋತಿರಬಹುದು.

ಈ ಕಂಪಿಲರಾಯನ ಮಗನಾದ ಕುಮಾರರಾಮ(ರಾಮನಾಥ)ನನ್ನು ಹೆಸರಿಸುವ ಶಾಸನ ನೇರವಾಗಿ ದೊರೆಯದಿದ್ದರೂ ಇವನ ಹೆಸರಿನಲ್ಲಿ ಕಟ್ಟಿಸಿದ ದೇವಾಲಯಗಳ ಕುರಿತಾಗಿ ವಿವರ ದೊರೆಯುತ್ತದೆ. ವಿಜಯನಗರ ಅರಸನಾದ ವಿರೂಪಾಕ್ಷನು ಆಗೋಲಿಯ ರಾಮನಾಥ ದೇವರಿಗೆ ಹರಿವಾಣ ನೀಡಿದಂತೆ ಹೇಳಿದ್ದು, ಈ ಶಾಸನದಲ್ಲಿ ಆ ದಾನಕ್ಕೆ ತಪ್ಪದವರು 'ರಾಮನಾಥನ ಲೆಂಕರು' ಎಂಬುದಾಗಿ ಉಲ್ಲೇಖಿಸಲಾಗಿದೆ. ಈ ರಾಮನಾಥ ದೇವಾಲಯ ಕುಮಾರ ರಾಮನ ನೆನಪಿಗಾಗಿ ಕಟ್ಟಿಸಿದ ದೇವಾಲಯವಾಗಿದೆ. ಕೃಷ್ಣದೇವರಾಯನ ಕಾಲದಲ್ಲಿ ಈ ಕುಮಾರರಾಮನ ಆರಾಧನೆಗೆ ಸಂಬಂಧಿಸಿದಂತೆ ಕೊನೇರಿ ನಾಯ್ಕನ ಮಗಳು ಗೋಪಾಯಿ ಹೊಸಮಲೆಯಲ್ಲಿ ರಾಮನಾಥನ ದೇವಾಲಯವನ್ನು ಕಟ್ಟಿಸಿದ್ದಲ್ಲದೇ ಅಲ್ಲಿ ಪೂಜೋಪಕರಣಗಳನ್ನು ದಾನ ನೀಡುತ್ತಾಳೆ ಎಂಬುದು ಸಂಡೂರಿನ ಶಾಸನ[70]ವೊಂದರಿಂದ ತಿಳಿರುಬರುತ್ತದೆ. ಆಕೆಯು ಕಮ್ಮಟದುರ್ಗ ದಲ್ಲಿಯೂ ರಾಮನಾಥನ ದೇವಾಲಯವನ್ನು (ತನ್ನ ತಂದೆಯವರಾದ ರಾಮನಾಥ ಕೊನೇರಿ ನಾಯ್ಕನ ಸ್ಮರಣಾರ್ಥ) ನಿರ್ಮಿಸಿದ್ದಿರಬೇಕೆಂದು ತಿಳಿದು ಬರುತ್ತದೆ.[71] ಆನೆಗೊಂದಿಯಲ್ಲಿಯೂ ರಾಮನಾಥನ ದೇವಾಲಯ ಇದ್ದ ಬಗ್ಗೆ ಉಲ್ಲೇಖವಿದೆ.[72]

**ವಿಜಯನಗರದ ಅರಸರು :**

ಭಾರತದ ವಾಯುವ್ಯ ಭಾಗದಿಂದ ಆಗಮಿಸಿದ ಮುಸ್ಲಿಂ ದಾಳಿಕೋರರು ಕ್ರಮೇಣ ಭಾರತದ ದಕ್ಷಿಣ ಭಾಗದಲ್ಲಿ ದಾಳಿ ನಡೆಸಿ ಕ್ರಿ.ಶ.1296 ರಿಂದ 1336ರ ವರೆಗೆ ಇಲ್ಲಿನ ರಾಜ್ಯಗಳನ್ನೆಲ್ಲಾ ಬಲಹೀನಗೊಳಿಸಿದ್ದರು. ಈ ಅವಧಿಯಲ್ಲಿ ರಾಜಕೀಯ ಅನಾಯಕತ್ವ ತಲೆದೋರಿತು. ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದ ಸೇವುಣರು, ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಹೊಯ್ಸಳರು, ಓರಂಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕಾಕತೀಯರು ಉತ್ತರದಿಂದ ಬರುತ್ತಿದ್ದ ಮುಸ್ಲಿಂರ ದಾಳಿಯನ್ನು ಎದುರಿಸಲಾಗದೆ, ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದರು. ಇಂತಹ ಸಂದಿಗ್ಧ ಸಮಯದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವು ಉದಯಿಸಿತು. ಹೊಯ್ಸಳರ ಆಡಳಿತದ ಕಾಲದಲ್ಲಿ ಅಧಿಕಾರಿಗಳಾಗಿದ್ದ ಸಂಗಮ ವಂಶದ ಸಂಗಮನ ಮಕ್ಕಳಾದ ಹರಿಹರ ಬುಕ್ಕರಾಯರು ಕ್ರಿ.ಶ.1336ರಲ್ಲಿ ಇಂತಹದ್ದೊಂದು ರಾಜ್ಯ ಸ್ಥಾಪಿಸಿ, ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ಕಾರಣವಾದರು. ಆರಂಭದಲ್ಲಿ ಇವರ ರಾಜಧಾನಿ ಆನೆಗೊಂದಿಯಾಗಿತ್ತು. ಆನಂತರ ಅತ್ಯಲ್ಪ ಕಾಲದಲ್ಲಿಯೇ ಪಂಪಾಪುರಿಯ ಸಮೀಪದಲ್ಲಿ ಈ ಒಂದು ಹೊಸ ಪಟ್ಟಣವನ್ನು ನಿರ್ಮಿಸಿ ಅದಕ್ಕೆ

ವಿಜಯನಗರವೆಂದು ಹೆಸರಿಟ್ಟರು. ಅಂದಿನಿಂದಲೂ ಅದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಹಂಪೆ ಎಂದು ಪ್ರಸಿದ್ಧಿ ಪಡೆಯಿತು. ಈ ವಿಜಯನಗರವನ್ನು ಕೇಂದ್ರವಾಗಿಸಿಕೊಂಡು ಸಂಗಮ, ಸಾಳ್ವ, ತುಳುವ ಮತ್ತು ಅರವೀಡು ವಂಶಗಳು ಕ್ರಮವಾಗಿ ಆಡಳಿತ ನಡೆಸಿದವು. ಮೊದಲ ಮೂರು ವಂಶಗಳಿಗೆ ವಿಜಯನಗರ ರಾಜಧಾನಿಯಾಗಿತ್ತು. ಆನಂತರದ ನಾಲ್ಕನೆ ವಂಶವು ಪೆನಗೊಂಡ, ಚಂದ್ರಗಿರಿಗಳಿಂದ ರಾಜ್ಯಭಾರ ಮಾಡಿತು. ಈ ನಾಲ್ಕು ಅರಸು ಮನೆತನಗಳಿಗೆ ಸಂಬಂಧಿಸಿದ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಸಿಗುತ್ತವೆ.

ಕ್ರಿ.ಶ.1342ರಲ್ಲಿ ದೊರೆತಿರುವ ಆನೆಗೊಂದಿಯ ಶಾಸನ[73]ವೇ ಈ ಜಿಲ್ಲೆಯಲ್ಲಿ ಸಂಗಮ ವಂಶದ ಅರಸರ ಬಗೆಗೆ ದೊರೆತಿರುವ ಪ್ರಥಮ ಶಾಸನವಾಗಿದೆ. ಈ ಶಾಸನವು ಒಂದನೇ ಹರಿಹರನ ದಂಡನಾಯಕನಾದ ಭೈರದಂಡನಾಯಕನ ಮಗ ಇರುಗಪ ದಂಡನಾಯಕನು ಆನೆಗೊಂದಿಯಲ್ಲಿ ಬಸದಿಯೊಂದನ್ನು ಕಟ್ಟಿಸಿದಂತೆ ತಿಳಿಸುತ್ತದೆ. ಮುಂದೆ ಕೊಪ್ಪಳದ ಕ್ರಿ.ಶ.1346ರ ಶಾಸನ[74]ದಲ್ಲಿ ಹರಿಹರನ ಉಲ್ಲೇಖವಿದೆ. ಆನೆಗೊಂದಿಯ ಕ್ರಿ.ಶ.1349ರ ಶಾಸನ[75]ವು ಹರಿಹರನ ಮಗ ಸಾವಣ್ಣ ಒಡೆಯನನ್ನು ಹೆಸರಿಸುತ್ತದೆ. ಈ ವರೆಗೆ ನಮಗೆ ದೊರೆತಿರುವ ಸಿದ್ಧ ವಂಶಾವಳಿಗಳು ಸಾವಣನನ್ನು ಒಂದನೇ ಹರಿಹರ ತಮ್ಮನಾದ ಕಂಪಣ ಮಗನೆಂದು ತಿಳಿಸಿವೆ. ಆದರೆ ಪ್ರಸ್ತುತ ಶಾಸನದಲ್ಲಿ ಸ್ಪಷ್ಟವಾಗಿ ಅವನನ್ನು ಹರಿಹರನ ಮಗನೆಂದೇ ಹೇಳಲಾಗಿದೆ.

ಕ್ರಿ.ಶ.1357ರ ಆನೆಗೊಂದಿಯ ಮತ್ತೊಂದು ಶಾಸನ[76]ದಲ್ಲಿ ಪ್ರಧಾನಿ ಬುಳ್ಳರಾಜನ ಉಲ್ಲೇಖವಿದೆ. ಈತನು ಬಹುಶಃ ಬುಕ್ಕರಾಯನ ಪ್ರಧಾನಿಗಳಲ್ಲಿ ಒಬ್ಬನಾಗಿರಬೇಕು. ಕುಕನೂರಿನ ಕ್ರಿ.ಶ.1379ರ ಶಾಸನ[77]ದಲ್ಲಿ ಹರಿಹರರಾಯನು ಕ್ರಿಯಾಶಕ್ತಿ ಗುರುವಿನ ನಿರೂಪದಿಂದ ಕುಕನೂರಿನ ಅಗ್ರಹಾರವನ್ನು ಪುನರ್ ನಿರ್ಮಿಸಿದ ಉಲ್ಲೇಖವಿದೆ. ಇಲ್ಲಿ ಉಲ್ಲೇಖಿತಗೊಂಡಿರುವ ಹರಿಹರನು ಇಮ್ಮಡಿ ಹರಿಹರನಾಗಿರುತ್ತಾನೆ. ಆನೆಗೊಂದಿಯ(ಆನೆಗುಂದಿ) ಕ್ರಿ.ಶ.1382ರ ಶಾಸನ[78]ವು ಹರಿಹರನ ಮಗನಾದ ಕಂಪನನ್ನು ಹೆಸರಿಸುತ್ತದೆ. ವಂಶಾವಳಿಯಲ್ಲಿ ಇವನನ್ನು ಬುಕ್ಕರಾಯನ ಮಗನೆಂದು ಹೇಳಲಾಗಿದೆ. ಆದರೆ ಪ್ರಸ್ತುತ ಶಾಸನದಲ್ಲಿ ಸ್ಪಷ್ಟವಾಗಿ ಕಂಪನನ್ನು ಹರಿಹರನ ಮಗನೆಂದು ಉಲ್ಲೇಖಿಸಲಾಗಿದೆ.

ಅಲ್ಲಿಂದ ಪ್ರೌಢದೇವರಾಯನ ಆಡಳಿತದ ಕಾಲಾವಧಿ (ಕ್ರಿ.ಶ.1428–1442)ಯ ವರೆಗೆ ಶಾಸನಗಳು ದೊರೆಯುವುದಿಲ್ಲ. ಕನಕಗಿರಿಯ ಕ್ರಿ.ಶ.1436ರ ಶಾಸನ[79]ವು ಪ್ರೌಢದೇವರಾಯನು ಕನಕಗಿರಿನಾಥ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಆನೆಗೊಂದಿಯ ಕ್ರಿ.ಶ.1437ರ ಶಾಸನ[80]ವು ಪ್ರೌಢದೇವರಾಯನ ಅಳಿಯ ತಿರುವೆಂಕಟನನ್ನು ಹೆಸರಿಸುತ್ತದೆ. ಬಹುಶಃ ಪ್ರೌಢದೇವರಾಯನಿಗೆ ಮಗಳೊಬ್ಬಳಿದ್ದ ಸಂಗತಿ ಇದರಿಂದ ತಿಳಿದು ಬರುತ್ತದೆ. ಪುರದ ಶಾಸನವು ಉಲ್ಲೇಖಿಸುವ

ವೀರಪ್ರತಾಪದೇವರಾಯನು ಪ್ರೌಢದೇವರಾಯನೇ ಆಗಿರಬಹುದು. ಕಾಲದ ಉಲ್ಲೇಖವಿಲ್ಲದ ಇನ್ನೊಂದು ಶಾಸನವು[81] ವಿರೂಪಾಕ್ಷರಾಯನನ್ನು ಉಲ್ಲೇಖಿದ್ದು ಸಂಗಮ ವಂಶದವರ ಕೊನೆಯ ಶಾಸನ ಇದಾಗಿದೆಯೆಂದು ಹೇಳಬಹುದು.

ಕನಕಗಿರಿಯ ಕ್ರಿ.ಶ.1488ರ ಶಾಸನ[82]ವು ಸಾಳ್ವನರಸಿಂಹ ದೇವನು ರಾಜ್ಯಭಾರ ಮಾಡುತ್ತಿದ್ದಂತೆ ಉಲ್ಲೇಖಿಸಿದ್ದು ಕನಕಗಿರಿನಾಥನಿಗೆ ನಾಲ್ಕು ಗ್ರಾಮಗಳನ್ನು ದಾನ ಕೊಟ್ಟಂತೆ ತಿಳಿಸುತ್ತದೆ. ಈ ನರಸಿಂಹನು ಸಾಳ್ವ ವಂಶದ ಒಂದನೆಯ ನರಸಿಂಹನಾಗಿರುವವನು. ಸಾಳ್ವ ಅರಸು ಮನೆತನದ ಬಗೆಗೆ ಉಲ್ಲೇಖವಿರುವ ಶಾಸಗಳೆಂದರೆ ಇದೊಂದೆ. ಹಾಗೆಯೇ ಕಾಲದ ಉಲ್ಲೇಖವಿಲ್ಲದ ಗಂಗವತಿ ತಾಲೂಕಿನ ಎರಡು ಶಾಸನಗಳಲ್ಲಿ ನರಸನಾಯಕನ ಉಲ್ಲೇಖವಿದ್ದು ಈ ನರಸನಾಯಕನೇ ತುಳು ವಂಶದ ನರಸನಾಯಕನೇ ಆಗಿರಬಹುದು. ಕನ್ನೇರುಮಡುವಿನ ಕ್ರಿ.ಶ.1506ರ ಶಾಸನ[83]ವೊಂದರಲ್ಲಿ ತಿಂಥಣಿ ಶಾಖೆಯ ಗುಜ್ಜಲ ಬೊಮ್ಮಣ್ಣ ನಾಯಕನ ಉಲ್ಲೇಖ ಸಿಗುತ್ತದೆ. ಆದರೆ ರಾಜನ ಹೆಸರು ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ಕ್ರಿ.ಶ.1512ರ ಕನಕಗಿರಿ ಹಾಗೂ ಕ್ರಿ.ಶ.1513ರ ಗೊಂಡಬಾಳು ಶಾಸನ[84]ಗಳಲ್ಲಿ ಕೃಷ್ಣದೇವರಾಯನ ಉಲ್ಲೇಖವಿದೆ. ಕ್ರಿ.ಶ.1513ರ ಮತ್ತು ಕ್ರಿ.ಶ.1514ರ ಶಾಸನ[85]ಗಳಲ್ಲಿಯೂ ಈ ಅರಸನ ಉಲ್ಲೇಖ ಸಿಗುತ್ತದೆ. ಕೊಪ್ಪಳದ ಗಿಣಿಗೇರಿ ಶಾಸನ[86]ದಲ್ಲಿ ಈತನ ಆಳ್ವಿಕೆಯಲ್ಲಿ ಬಂಗಾರು ತಿಮ್ಮರಾಜು ದಳವಾಯಿ ಆನೆಗೊಂದಿಯಲ್ಲಿ ಇದ್ದನೆಂಬ ಸಂಗತಿ ತಿಳಿದುಬರುತ್ತದೆ. ಕೊಪ್ಪಳದ ಮತ್ತೊಂದು ಶಾಸನ[87]ದಲ್ಲಿ ಬಂಡಾರದ ಅಪ್ಪರಸಯ್ಯನ ಮಗ ಬಂಡಾರದ ತಿಮ್ಮಪ್ಪಯ್ಯನ ಉಲ್ಲೇಖ ಸಿಗುತ್ತದೆ. ಕೆಸರಟ್ಟಿಯ ಕ್ರಿ.ಶ.1527ರ ಶಾಸನ[88]ವೇ ಕೊಪ್ಪಳ ಜಿಲ್ಲೆಯಲ್ಲಿ ಶ್ರೀಕೃಷ್ಣದೇವರಾಯನ ಬಗ್ಗೆ ದೊರೆಯುವ ಕೊನೆಯ ಶಾಸನವಾಗಿದೆ.

ಕ್ರಿ.ಶ.1530ರ ಕನ್ನೇರುಮಡುವಿನ ಶಾಸನ[89]ವು ಕೊಪ್ಪಳ ಜಿಲ್ಲೆಯಲ್ಲಿ ಸಿಗುವ ಅಚ್ಯುತದೇವರಾಯನ ಆಡಳಿತದ ಕಾಲದಲ್ಲಿನ ಮೊದಲ ಶಾಸನವಾಗಿದೆ. ಆನೆಗೊಂದಿಯ ಕ್ರಿ.ಶ.1531ರ ಶಾಸನ[90] ಮತ್ತು ಕ್ರಿ.ಶ.1534ರ ಶಾಸನ[91]ಗಳು ಅಚ್ಯುತರಾಯನ ಕುರಿತಾಗಿ ಉಲ್ಲೇಖಿಸುತ್ತವೆ. ಹಾಗೆಯೇ ಕ್ರಿ.ಶ.1537ರ ಕಲ್ಲೂರಿನ[92] ಮತ್ತು ಬಂಡಿಹಾಳದ ಶಾಸನ[93]ಗಳಲ್ಲಿ ಅಚ್ಯುತರಾಯನ ಆಳ್ವಿಕೆಯಲ್ಲಿ ಗುಜ್ಜಲ ವಂಶದ ಅರಸರು ಇವರ ಮಾಂಡಳಿಕರಾಗಿದ್ದಂತೆ ತಿಳಿಯುತ್ತದೆ. ಪಾಳೇಗಾರರು ಮುಂದಿನ ಶಾಸನದಲ್ಲಿ ವಿಜಯನಗರದ ಅರಸರನ್ನು ಉಲ್ಲೇಖಿಸದೇ ತಮ್ಮ ಉಲ್ಲೇಖಗಳನ್ನು ಮಾತ್ರ ದಾಖಲಿಸಿದ್ದಾರೆ. ಹಾಗೆಯೇ ಸದಾಶಿವರಾಯನ ಕಾಲದ ಶಾಸನಗಳು ಕೂಡ ಕೊಪ್ಪಳ ಜಿಲ್ಲೆಯಲ್ಲಿ ದೊರೆಯುತ್ತವೆ. ಹಿರೇಜಂತಗಲ್ ಶಾಸನ[94]ದಲ್ಲಿ ಸದಾಶಿವರಾಯನಿಗೆ ಮತ್ತು ರಾಮರಾಜನ ತಮ್ಮನಾದ ತಿರುವೆಂಕಟಾದ್ರಿ ರಾಜನಿಗೆ ಪುಣ್ಯವಾಗಬೇಕೆಂದು ಚಂದ್ರಗಿರಿಯ ಹೇಮರಸಯ್ಯನು ದಾನ ನೀಡಿದ ಉಲ್ಲೇಖವಿದೆ. ಮುಂದೆ ಕ್ರಿ.ಶ.1584ರಿಂದ ಆಚೆಗೆ ಸದಾಶಿವರಾಯನ ಜೊತೆಯಲ್ಲಿ ಆತನ ಕಾರ್ಯಕರ್ತರಾದ ರಾಮರಾಜಯ್ಯ

ಮತ್ತು ತಿರುಮಲ ರಾಜಯ್ಯನನ್ನು ಉಲ್ಲೇಖಿಸಲಾಗಿದೆ. ಈ ಸ್ಥಳದಲ್ಲಿಯೇ ಹಲವು ದೇವಾಲಯಗಳು ಹಾಗೂ ಮಠ ಮಾನ್ಯಗಳಿಗೆ ದಾನ ನೀಡಿದುದರ ಬಗೆಗೆ ಉಲ್ಲೇಖಗಳು ಸಿಗುತ್ತವೆ.

**ಮರಾಠರು :**

ಮರಾಠ ವಂಶದ ಪ್ರಖ್ಯಾತ ದೊರೆಯಾದ ಶಿವಾಜಿಯ ಆಡಳಿತ ಕಾಲದ ಶಾಸನವೊಂದು ಆನೆಗೊಂದಿಯಲ್ಲಿ ದೊರೆತಿದೆ. ಅದರಲ್ಲಿ ಆನೆಗೊಂದಿ ರಾಜ್ಯವು ಆಗ ಅನ್ಯ ಪ್ರಾಂತ್ಯಕ್ಕೆ ಸೇರಿದ ರಾಜ್ಯವಾಗಿದ್ದು ಶ್ರೀರಂಗರಾಜನು ಮರಣಹೊಂದಿ ನೆಂಬುದಾಗಿ ತಿಳಿಸುತ್ತದೆ. ಈತನ ಪತ್ನಿ ತಿಮ್ಮಾಜಿಯ ಮಕ್ಕಳಾದ ತಿರುಮಲರಾಜ ಮತ್ತು ರಾಮರಾಯನನ್ನು ವಕೀಲರ ಸಂಗಡ ಶಿವಾಜಿಯ ಬಳಿಗೆ ಕಳಿಸಿಕೊಡುತ್ತಾಳೆ. ಆಗ ಸದಾಶಿವರಾಯನು ಅವರ ಸಂರಕ್ಷಣಾರ್ಥವಾಗಿ ಆನೆಗೊಂದಿ ಮೊದಲಾದ ಒಂಬತ್ತು ಸಮೇತಗಳನ್ನು ಆಗಿ ಕ್ರಿ.ಶ.1657ರಲ್ಲಿ ನೀಡುತ್ತಾನೆ. ಈ ಶಾಸನದ ಒಕ್ಕಣಿಕೆಯನ್ನು ಗಮನಿಸಿದಾಗ ಶಿವಾಜಿಯು ಕ್ರಿ.ಶ.1657ರಲ್ಲಿ ಹಂಪೆಗೆ ಬಂದಿರಬಹುದೆಂದು ಹೇಳಬಹುದು.

**ಸ್ಥಳೀಯ ಅರಸರು :**

ಅರಸನು ರಾಜ್ಯ ವಿಸ್ತರಣಾ ಹಾಗೂ ಆಂತರಿಕ ಕಲಹಗಳನ್ನು ಶಮನಗೊಳಿಸುವಲ್ಲಿ ಅಥವಾ ಆಡಳಿತದಲ್ಲಿ ತನಗೆ ಸಹಕಾರಕೊಡುವುದಕ್ಕಾಗಿ ಸ್ಥಳೀಯ ಅರಸರನ್ನು ಅಥವಾ ಪಾಳೆಗಾರರನ್ನು ನೇಮಿಸಿಕೊಳ್ಳುತ್ತಿದ್ದರು. ಇವರು ಅರಸನಿಗೆ ವಿಧೇಯರಾಗಿ ಸಾಮ್ರಾಜ್ಯ ವಿಸ್ತರಣೆ, ಯುದ್ಧ, ಆಡಳಿತ ಮುಂತಾದ ಅನೇಕ ಆಂತರಿಕ ವಿಷಯಗಳಲ್ಲಿ ರಾಜರುಗಳ ಪ್ರತಿನಿಧಿಗಳಾಗಿ ಭಾಗವಹಿಸುತ್ತಿದ್ದರು. ಇಂತಹ ಪಾಳೆಗಾರರಲ್ಲಿ ಆನೆಗೊಂದಿ ಮತ್ತು ಕನಕಗಿರಿ ಪಾಳೆಗಾರರ ವಿವರ ಸಂಕ್ಷಿಪ್ತವಾಗಿ ಕೊಪ್ಪಳ ಜಿಲ್ಲೆಯ ಶಾಸಗಳಲ್ಲಿ ದೊರೆತಿದೆ.

**ಆನೆಗೊಂದಿ ಪಾಳೆಗಾರರು :**

ಈ ಪಾಳೆಗಾರರ ಉಲ್ಲೇಖ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿಯಲ್ಲಿ ದೊರೆತ ಶಾಸನ[95]ದಲ್ಲಿ ಮಾತ್ರ ಬರುತ್ತದೆ. ಈ ಶಾಸನದಲ್ಲಿ ಆನೆಗೊಂದಿಯ ಯಾವುದೇ ಪಾಳೆಗಾರರ ಹೆಸರುಗಳು ಪ್ರಸ್ತಾಪಿಸಲ್ಪಟ್ಟಿಲ್ಲ. ಇದು ದಾನ ಶಾಸನವಾಗಿದ್ದು ಈ ಪಾಳೆಗಾರರು ಅಂಬಿಗರ ಬರಮ ಮತ್ತು ಬಸವ ಎಂಬುವವರಿಗೆ ಐದು ಹುಟ್ಟುಗಳನ್ನು ದಾನ ನೀಡುತ್ತಾರೆಂದು ಹೇಳಲಾಗಿದೆ.

**ಕನಕಗಿರಿ ಪಾಳೆಗಾರರು :**

ಈ ಕನಕಗಿರಿಯ ಪಾಳೆಗಾರರಿಗೆ ಸಂಬಂಧಪಟ್ಟಂತೆ ಕೆಲ ಶಾಸನಗಳು ದೊರೆಯುತ್ತವೆ. ಅವುಗಳಲ್ಲಿ ಲಖಮಣನಾಯಕ, ಮೂರನೇಯ ಮೇದಿನಿರಾಯ, ಎರಡನೆ ವು(ಉ)ಡಸಿನಾಯಕ ಮತ್ತು ಎರಡನೆ ವುಡಸಿನಾಯಕನ ಪತ್ನಿಯರಾದ

ಕನಕಮ್ಮ, ಚಿಣ್ಣಮ್ಮರ ಉಲ್ಲೇಖಗಳು ಶಾಸನಗಳಲ್ಲಿ ಕಂಡು ಬರುತ್ತವೆ. ಗಂಗಾವತಿಯ ಒಂದು ಶಾಸನ[96]ದಲ್ಲಿ ಲಖುಮಣ ಮತ್ತು ಅವನ ಪತ್ನಿ ಬೊಮ್ಮನಾಗತಿ ಕಲ್ಲುಕೆರೆಯನ್ನು ಕಟ್ಟಿಸಿದರೆಂದು ತಿಳಿಸಿದ್ದು, ಅದೇ ರೀತಿ ಮುಮ್ಮಡಿ ಮೇದಿನಿರಾಯನು ಶಾಂತಮಲ್ಲಿಕಾರ್ಜುನ ದೇವರ ಪ್ರತಿಷ್ಠೆ ಮಾಡಿ ದಾನ ನೀಡಿದನೆಂದು ಹಿರೇಸೂಳಿಕೆರೆ ಶಾಸನ[97]ದಲ್ಲಿ ತಿಳಿಸಿದೆ. ಈ ಇಬ್ಬರು ಪಾಳೆಗಾರರ ಬಗ್ಗೆ ಒಂದೊಂದು ಶಾಸನದಲ್ಲಿ ಉಲ್ಲೇಖವಿರುವುದು ಕಂಡು ಬರುತ್ತದೆ. ಈ ಕನಕಗಿರಿಯ ಪಾಳೆಗಾರರಲ್ಲಿ ಇಮ್ಮಡಿ ವುಡಸಿನಾಯಕನು ಪ್ರಮುಖನಾಗಿ ಕಂಡು ಬರುತ್ತಾನೆ. ಇವನು ಕನಕಮ್ಮ ಮತ್ತು ಚಿನ್ನಮ್ಮ ಎಂಬ ಇಬ್ಬರು ಪತ್ನಿಯರನ್ನು ಹೊಂದಿದ್ದನು. ಕನಕಮ್ಮಳು ಬಾವಿ ಕಟ್ಟಿಸಿದ್ದನ್ನು[98] ಮತ್ತು ಚಿಣ್ಣಮ್ಮಳು ಕೆರೆಯನ್ನು ಕಟ್ಟಿಸಿದ್ದು[99] ಶಾಸಗಳಿಂದ ತಿಳಿದು ಬರುತ್ತದೆ. ವುಡಸಿನಾಯಕನು ನರಭಕ್ಷಕ ಪ್ರಾಣಿಯನ್ನು ಕೊಂದ ಸೊಲಬಾಯನಿಗೆ ಗದ್ದೆಯನ್ನು ದಾನವಾಗಿ ನೀಡುತ್ತಾನೆ.[100] ಈ ಪಾಳೆಗಾರನನ್ನು ನಾಯಕ ಶಿರೋಮಣಿ ಎಂದು ಶಾಸನದಲ್ಲಿ ಹೊಗಳಲಾಗಿದೆ.

**ಕೊಪ್ಪಳ ಜಿಲ್ಲೆಯ ಶಾಸನೋಕ್ತ ಅರಸು ಮನೆತನಗಳು ಮತ್ತು ಅರಸರ ಪಟ್ಟಿ**

| ಅರಸು ಮನೆತನಗಳು | ಅರಸರು | ಕಾಲ | ಉಲ್ಲೇಖಿತ ಶಾಸನ ಸ್ಥಳ |
|---|---|---|---|
| ಮೌರ್ಯರು | ಅಶೋಕ ಚಕ್ರವರ್ತಿ | ಕ್ರಿ.ಪೂ.273–233 | ಕೊಪ್ಪಳ |
| ,, | ,, | | ,, |
| ಬಾದಾಮಿ ಚಾಲುಕ್ಯರು | ವಿಜಯಾದಿತ್ಯ | ಕ್ರಿ.ಶ.8ನೇ ಶ | ಇಟಗಿ |
| ,, | ಯುದ್ಧಮಲ್ಲಸತ್ಯಾಶ್ರಯ | ,, | ಬನ್ನಿಕೊಪ್ಪ |
| ರಾಷ್ಟ್ರಕೂಟರು | IIIನೇ ಇಂದ್ರ | ಕ್ರಿ.ಶ.883 | ಕೊಪ್ಪಳ |
| ,, | III ನೇ ಕೃಷ್ಣ | ಕ್ರಿ.ಶ.939 | ಇಟಗಿ |
| ,, | ,, | ಕ್ರಿ.ಶ.964 | ಉಪ್ಪಿನಬೇಟಗೇರಿ |
| ,, | ,, | ಕ್ರಿ.ಶ.983 | ಕೊಪ್ಪಳ |
| ,, | ಕನ್ನರ | ಕ್ರಿ.ಶ.10ನೇ ಶ. | ,, |
| ,, | ,, | – | ,, |
| ಗಂಗವಂಶ | IIನೇ ಭೂತುಗ | ಕ್ರಿ.ಶ.939 | ಇಟಗಿ |
| ,, | ,, | ಕ್ರಿ.ಶ.986 | ,, |
| ,, | IIನೇ ಮಾರಸಿಂಹ | ಕ್ರಿ.ಶ.969 | ಕುಕನೂರು |
| ,, | ? | ಕ್ರಿ.ಶ.971 | ಕೊಪ್ಪಳ |

| | | | |
|---|---|---|---|
| ಗಂಗವಂಶ | ? | ಕ್ರಿ.ಶ.973 | ಕೊಪ್ಪಳ |
| ,, | IIನೇ ಮಾರಸಿಂಹ | ಕ್ರಿ.ಶ.973 | ,, |
| ,, | ,, | ಕ್ರಿ.ಶ.987 | ,, |
| ,, | ,, | ಕ್ರಿ.ಶ.987 | ,, |
| ,, | ,, | ಕ್ರಿ.ಶ.992 | ,, |
| ,, | ,, | ಕ್ರಿ.ಶ.998 | ,, |
| ,, | ,, | ಕ್ರಿ.ಶ.1013 | ,, |
| ,, | ,, | ಕ್ರಿ.ಶ.1023 | ,, |
| ,, | ,, | ಕ್ರಿ.ಶ.1030 | ,, |
| ,, | ,, | ಕ್ರಿ.ಶ.10ನೇ ಶ. | ,, |
| ,, | ,, | ಕ್ರಿ.ಶ.10ನೇ ಶ. | ,, |
| ಕಲ್ಯಾಣಿ ಚಾಲುಕ್ಯರು | ಆಹವಮಲ್ಲ | ಕ್ರಿ.ಶ.973 | ಮಾದಿನೂರು |
| ,, | ,, | ಕ್ರಿ.ಶ.988 | ಆನೆಗುಂದಿ |
| ,, | ,, | ಕ್ರಿ.ಶ.991 | ಬೆಣಕಲ್ |
| ,, | ಇರಿವ ಬೆಡಂಗ | ಕ್ರಿ.ಶ.997 | ಹಿರೇಮನ್ನಾಪುರ |
| ,, | ,, | ಕ್ರಿ.ಶ.1002 | ಕಲ್ಲೂರು,ಬಳಗೇರಿ |
| ,, | ,, | ಕ್ರಿ.ಶ.1005 | ಕುಕನೂರು |
| ,, | ಆಹವಮಲ್ಲ | ಕ್ರಿ.ಶ.11ನೇ ಶ. | ಬಳಗೇರಿ |
| ,, | ವಿಕ್ರಮಾದಿತ್ಯ | ಕ್ರಿ.ಶ.1008 | ಕೊಪ್ಪಳ |
| ,, | ಜಯಸಿಂಹ | ಕ್ರಿ.ಶ.1024 | ಗೋತಗಿ |
| ,, | ತ್ರೈಲೋಕಮಲ್ಲ | ಕ್ರಿ.ಶ.1045 | ,, |
| ,, | ,, | ಕ್ರಿ.ಶ.1053 | ಹುಲಿಗಿ |
| ,, | ,, | ಕ್ರಿ.ಶ.1059 | ವಿಪ್ರ |
| ,, | ,, | ಕ್ರಿ.ಶ.1061 | ಅಳವಂಡಿ |
| ,, | ತ್ರಿಭುವನಮಲ್ಲ | ಕ್ರಿ.ಶ.1088 | ಹುಲಿಗಿ |
| ,, | ,, | ಕ್ರಿ.ಶ.1094 | ವಿಪ್ರ |
| ,, | ,, | ಕ್ರಿ.ಶ.1097 | ಕವಲೂರು |

| | | | |
|---|---|---|---|
| ಕಲ್ಯಾಣಿ ಚಾಲುಕ್ಯರು | ,, | ಕ್ರಿ.ಶ.1099 | ಬಲ್ಲಟಗಿ |
| ,, | ,, | ಕ್ರಿ.ಶ.1104 | ಹೆಸರೂರು |
| ,, | ,, | ಕ್ರಿ.ಶ.1107 | ಕುಕನೂರು |
| ,, | ,, | ಕ್ರಿ.ಶ.1123 | ಮಂಕಲ್ಕೇರಿ |
| ,, | ,, | ಕ್ರಿ.ಶ.1125 | ಕಲ್ಲೂರು |
| ,, | ,, | ಕ್ರಿ.ಶ.1127 | ಕುಕನೂರು |
| ,, | ಭೂಲೋಕಮಲ್ಲ | ಕ್ರಿ.ಶ.1130 | ,, |
| ,, | ,, | ಕ್ರಿ.ಶ.1132 | ಕಲ್ಲೂರು |
| ,, | ,, | ಕ್ರಿ.ಶ.1136 | ಮಾದಿನೂರು |
| ,, | ,, | ಕ್ರಿ.ಶ.1137 | ಕುಕನೂರು |
| ,, | ಜಗದೇಕಮಲ್ಲ | ಕ್ರಿ.ಶ.1143 | ,, |
| ,, | ,, | ಕ್ರಿ.ಶ.1149 | ,, |
| ,, | ತ್ರೈಲೋಕಮಲ್ಲ | ಕ್ರಿ.ಶ.1154 | ಕಲ್ಲೂರು,ಮುಧೋಳ |
| ,, | ,, | ಕ್ರಿ.ಶ.1157 | ಕುಕನೂರು |
| ,, | ತ್ರಿಭುವನೈಕ್ಯಮಲ್ಲ | ಕ್ರಿ.ಶ.1185 | ಕಲ್ಲೂರು,ಯಲಬುರ್ಗಾ |
| ,, | ಭೂಲೋಕಮಲ್ಲ | ಕ್ರಿ.ಶ.1189 | ಕಲ್ಲೂರು |
| ,, | ಸೋವಿದೇವ | ಕ್ರಿ.ಶ.1190 | ಮಾದಿನೂರು |
| ,, | ಇತರರು | – | ಕೊಪ್ಪಳ |
| ,, | ,, | – | ಇಟಗಿ |
| ,, | ,, | – | ಮುಧೋಳು,ಕುಕನೂರು |
| ನೊಳಂಬರು | ರಾಮ ಮಹೀಪಾಲ | ಕ್ರಿ.ಶ.986 | ಕೊಪ್ಪಳ |
| ,, | ,, | ಕ್ರಿ.ಶ.989 | ,, |
| ,, | ಗುಣದ ಬೆಡಂಗ | ಕ್ರಿ.ಶ.1031 | ,, |
| ಕಲಚೂರಿ | ಬಿಜ್ಜಳ | ಕ್ರಿ.ಶ.1163 | ಕುಕನೂರು |
| ,, | ಸೋವಿದೇವ | ಕ್ರಿ.ಶ.1170 | ,, |
| ಕಲಚೂರಿ | ಸಂಕಮದೇವ | ಕ್ರಿ.ಶ.1177 | ಕವಲೂರು |
| ,, | ,, | ಕ್ರಿ.ಶ.1178 | ಕುಕನೂರು |
| ,, | ,, | ಕ್ರಿ.ಶ.1179 | ಕವಲೂರು |

| | | | |
|---|---|---|---|
| ಹೊಯ್ಸಳ | ವೀರಬಲ್ಲಾಳ | ಕ್ರಿ.ಶ.1179–80 | ಕವಲೂರು |
| ಯಾದವ | ಸಿಂಗಣ | ಕ್ರಿ.ಶ.1183 | ಇಟಗಿ |
| ,, | ,, | ಕ್ರಿ.ಶ.1231 | ಕುಕನೂರ |
| ,, | ,, | ಕ್ರಿ.ಶ.1238 | ಸಂಕನೂರು |
| ,, | ,, | ಕ್ರಿ.ಶ.1240 | ಕೊಪ್ಪಳ |
| ,, | ಕನ್ನದೇವ | ಕ್ರಿ.ಶ.1312 | ಸಂಕನೂರು |
| ಹೊಸಮಲೆದುರ್ಗದ ಅರಸರು | III ನೇ ಸಿಂಘ | ಕ್ರಿ.ಶ.14ನೇ ಶ. | ಯಲಬುರ್ಗಾ |
| ,, | ಕಂಪಿಲ | ಕ್ರಿ.ಶ.1315 | ಕುಮ್ಮಟದುರ್ಗ |
| ವಿಜಯನಗರದಅರಸರು | ಹರಿಹರ–I | ಕ್ರಿ.ಶ.1342 | ಆನೆಗುಂದಿ |
| ,, | ,, | ಕ್ರಿ.ಶ.1346 | ಕೊಪ್ಪಳ |
| ,, | ,, | ಕ್ರಿ.ಶ.1349 | ಆನೆಗುಂದಿ |
| ,, | ,, | ಕ್ರಿ.ಶ.1379 | ಕುಕನೂರು |
| ,, | ಕಂಪ ಭೂಪಾಲ | ಕ್ರಿ.ಶ.1382 | ಆನೆಗುಂದಿ |
| ,, | ಪ್ರಭುದೇವರಾಯ (ಪ್ರೌಢದೇವರಾಯ) | ಕ್ರಿ.ಶ.1436 | ಕನಕಗಿರಿ |
| ,, | ,, | ಕ್ರಿ.ಶ.1437 | ಆನೆಗೊಂದಿ |
| ,, | ವಿರೂಪಾಕ್ಷ | ಕ್ರಿ.ಶ.15ನೇ ಶ. | ಅಚಲಾಪುರ |
| ,, | ಸಾಳವ ನರಸಿಂಹ | ಕ್ರಿ.ಶ.1488 | ಕನಕಗಿರಿ |
| ,, | ನರಸಣ್ಣ ನಾಯಕ | ಕ್ರಿ.ಶ.15ನೇ ಶ. | ಸಾನಾಪುರ |
| ,, | ಶ್ರೀಕೃಷ್ಣದೇವರಾಯ | ಕ್ರಿ.ಶ.1512 | ಕನಕಗಿರಿ |
| ,, | ,, | ಕ್ರಿ.ಶ.1513 | ಗೊಂಡಬಾಳು |
| ,, | ,, | ಕ್ರಿ.ಶ.1514 | ಕಿಡಿದಾಳು |
| ,, | ,, | ಕ್ರಿ.ಶ.1520 | ಗಿಣಿಗೇರಿ |
| ,, | ,, | ಕ್ರಿ.ಶ.1521 | ಕೊಪ್ಪಳ |
| ,, | ,, | ಕ್ರಿ.ಶ.1527 | ಕೆಸರಟ್ಟಿ |
| ,, | ಅಚ್ಯುತದೇವರಾಯ | ಕ್ರಿ.ಶ.1530 | ಹನುಮನಾಳ |
| ,, | ,, | ಕ್ರಿ.ಶ.1531 | ಆನೆಗೊಂದಿ |
| ,, | ,, | ಕ್ರಿ.ಶ.1533 | ,, |
| ,, | ,, | ಕ್ರಿ.ಶ.1534 | ಕನಕಗಿರಿ |

| | | | |
|---|---|---|---|
| ,, | ,, | ಕ್ರಿ.ಶ.1536 | ಹನುಮನಾಳ |
| ,, | ,, | ಕ್ರಿ.ಶ.1537 | ಕಲ್ಲೂರು,ಬಂಡಿಹಾಳ |
| ,, | ಸದಾಶಿವರಾಯ | ಕ್ರಿ.ಶ.16ನೇ ಶ. | ತಾವರಗೇರೆ |
| ,, | ,, | ಕ್ರಿ.ಶ.1545 | ನವಲಿ |
| ,, | ,, | ಕ್ರಿ.ಶ.1547 | ,, |
| ,, | ,, | – | ಕುಕನೂರು |
| ,, | ,, | – | ತಾವರಗೇರ,ಪುರ |
| ,, | ,, | ಕ್ರಿ.ಶ.1551 | ಕನಕಗಿರಿ,ಆನೆಗುಂದಿ |
| ,, | ,, | ಕ್ರಿ.ಶ.1552 | ಕನಕಗಿರಿ |
| ,, | ,, | ಕ್ರಿ.ಶ.1556 | ಆನೆಗುಂದಿ |
| ,, | ,, | ಕ್ರಿ.ಶ.16ನೇ ಶ. | ರಾಮದುರ್ಗ |
| ಕನಕಗಿರಿಯ ಪಾಳೇಗಾರರು | ಲಖುಮಣನಾಯಕ | ಕ್ರಿ.ಶ.1506 | ಕನ್ನೇರಮಡು |
| ,, | IIIನೇ ಮೇದಿನಿರಾಯ | ಕ್ರಿ.ಶ.1543 | ಹಿರೇಸೂಳಿಕೇರಿ |
| ,, | IIನೇ ವುಡಿಸಿನಾಯಕ | ಕ್ರಿ.ಶ.1660 | ಕನಕಗಿರಿ |
| ,, | ,, | ಕ್ರಿ.ಶ.1662 | ಹಿರೇಮಾದಿನಾಳ |
| ,, | ,, | ಕ್ರಿ.ಶ.1668 | ಬಸ್ರಿಹಾಳ |
| | | | |
| ,, | ,, | ಕ್ರಿ.ಶ.1673 | ಓಬಳಬಂಡಿ |
| ,, | ,, | ಕ್ರಿ.ಶ.1674 | ಕನಕಗಿರಿ |
| ,, | ,, | ಕ್ರಿ.ಶ.1675 | ,, |
| ,, | ,, | ಕ್ರಿ.ಶ.1679 | ಕನಕಗಿರಿ |
| ,, | IIIನೇ ವುಡಸಿನಾಯಕ | ಕ್ರಿ.ಶ.17ನೇ | ಧಾಣಾಪುರ |
| ಮರಾಠರು | ಶಿವಾಜಿ | ಕ್ರಿ.ಶ.1657 | ಆನೆಗುಂದಿ |
| ಕೋಗುಳಿ ಕದಂಬರು | – | – | ಹ್ಯಾಟಿ |
| ಕರಡಿಕಲ್ಲು ಕದಂಬರು | – | – | ಹಿರೇಮನ್ನಾಪುರ,ಪುರ |
| ಸುರಪುರದ ನಾಯಕರು | ರಂಗಪ್ಪ ನಾಯಕ | ಕ್ರಿ.ಶ.1812 | ಕನಕಗಿರಿ |
| ಆನೆಗೊಂದಿ ಅರಸರು | – | – | ಆನೆಗುಂದಿ |

## ಕೊಪ್ಪಳ ಇತಿಹಾಸದಲ್ಲಿ ಉಲ್ಲೇಖವಿರುವ ಅರಸರ, ಪಾಳೇಗಾರರ, ಸರ್ವಾಧಿಕಾರಿಗಳ ವಂಶ, ಕಾಲ, ರಾಜಧಾನಿ, ಲಾಂಛನ ಮತ್ತು ಧ್ವಜಗಳ ಪಟ್ಟಿ

| ಕ್ರ.ಸಂ. | ಅರಸರು ಮತ್ತು ಇತರರು | ಕಾಲ | ರಾಜಧಾನಿ | ಲಾಂಛನ,ಧ್ವಜ |
|---|---|---|---|---|
| 01 | ಮೌರ್ಯ ಅಶೋಕ | ಕ್ರಿ.ಪೂ.273–236 | ಪಾಟಲೀಪುತ್ರ | ಸಿಂಹ |
| 02 | ಶಾತವಾಹನರು | ಕ್ರಿ.ಪೂ.209–199 | ಪೈಠಾಣ | ಗಜ |
| 03 | ಕದಂಬರು | ಕ್ರಿ.ಶ.325–540 | ಬನವಾಸಿ | ಕದಂಬ |
| 04 | ಬಾದಾಮಿ ಚಾಲುಕ್ಯರು | ಕ್ರಿ.ಶ.540–747 | ಬಾದಾಮಿ | ವರಾಹ |
| 05 | ರಾಷ್ಟ್ರಕೂಟರು | ಕ್ರಿ.ಶ.547–973 | ಮಾನ್ಯಖೇಟ | ಗರುಡ |
| 06 | ಕಲ್ಯಾಣಿ ಚಾಲುಕ್ಯರು | ಕ್ರಿ.ಶ.973–1162 | ಕಲ್ಯಾಣ | ವರಾಹ |
| 07 | ಕಲಚೂರಿಗಳು | ಕ್ರಿ.ಶ.1162–1182 | ಕಲ್ಯಾಣ | ನಂದಿ |
| 08 | ಕಲ್ಯಾಣ ಚಾಲುಕ್ಯರು | ಕ್ರಿ.ಶ.1183–1198 | ಕಲ್ಯಾಣ | ವರಾಹ |
| 09 | ಶಿಲಾಹಾರರು | – | ಕೊಪ್ಪಳ | ಸುವರ್ಣ ಗರುಡ |
| 10 | ಕಂಪಿಲರಾ | ಕ್ರಿ.ಶ.1320–1327 | ಹೊಸಮಲೆದುರ್ಗ | – |
| 11 | ವಿಜಯನಗರ ಅರಸರು | ಕ್ರಿ.ಶ.1336–1565 | ವಿಜಯನಗರ | ವರಾಹ |
| 12 | ಬಹಮನಿ | ಕ್ರಿ.ಶ.1347–1538 | ಕಲಬುರ್ಗಿ | ನಕ್ಷತ್ರಸಹಿತಬಾಲಚಂದ್ರ |
| 13 | ದ್ವಿತೀಯಇಬ್ರಾಹಿಮ್‌ಅಲಿಆದಿಲ್‌ಷಾಹ | ಕ್ರಿ.ಶ.1580–1627 | ಬಿಜಾಪುರ | ನಕ್ಷತ್ರಸಹಿತಬಾಲಚಂದ್ರ |
| 14 | ಈಸ್ಟ್ ಇಂಡಿಯಾ ಕಂಪನಿ | ಕ್ರಿ.ಶ.1610 | – | – |
| 15 | ನಿಜಾಂ ಅಶಫಿಯಾ | ಕ್ರಿ.ಶ.1724–1948 | ಹೈದ್ರಾಬಾದ | ನಕ್ಷತ್ರಸಹಿತಬಾಲಚಂದ್ರ |
| 16 | ಹೈದರ್ ಅಲಿ | ಕ್ರಿ.ಶ.1767–1782 | ಮೈಸೂರು | – |
| 17 | ಟಿಪ್ಪುಸುಲ್ತಾನ | ಕ್ರಿ.ಶ.1782–1799 | – | – |
| 18 | ವೀರಪ್ಪ | ಕ್ರಿ.ಶ.1819 | ಕೊಪ್ಪಳ | – |
| 19 | ಬ್ರಿಟಿಷರು | ಕ್ರಿ.ಶ.1857–1947 | ದಿಲ್ಲಿ | ಯೂನಿಯನ್ ಜಾಕ್ |
| 20 | ನವಾಬ್ ಸಾಲಾರಜಂಗ್ | ಕ್ರಿ.ಶ.1861–1948 | ಹೈದ್ರಾಬಾದ(ಮುಖ್ಯಸ್ಥಳ) | |
| 21 | ಭಾರತ ಒಕ್ಕೂಟ ಸೇರಿಕೆ | ಕ್ರಿ.ಶ.1948 | ದಿಲ್ಲಿ | ಸಿಂಹಗಳು |
| 22 | ಹೊಣೆಗಾರ ಸರ್ಕಾರ | ಕ್ರಿ.ಶ.1950 | ಹೈದ್ರಾಬಾದ | ಸಿಂಹಗಳು |
| 23 | ಮೈಸೂರು ಸರ್ಕಾರ | ಕ್ರಿ.ಶ.1956–1972 | ಮೈಸೂರು | ಸಿಂಹಗಳು |
| 24 | ಕರ್ನಾಟಕ ಸರ್ಕಾರ | ಕ್ರಿ.ಶ.1973 | ಬೆಂಗಳೂರು | ಸಿಂಹಗಳು |

**ಅಡಿಟಿಪ್ಪಣಿಗಳು :**

1. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ–28, ಪುಟ. 37
2. ಅದೇ, ಕೊ–28, ಪುಟ. 37
3. ಇಂಡಿಯನ್ ಆರ್ಕಿಯಾಲಜಿ, ಎ.ರಿವ್ಯೂ, 1977–78
4. ಅ.ಸುಂದರ : ಆದಿ ಇತಿಹಾಸ ಕಾಲ ಸಂಶೋಧನೆಗಳು, ಸನ್ನತಿ–ಹಂಪಿ,
5. ರಾಜಶೇಖರಪ್ಪ ಬಿ. : ಚಂದ್ರವಳ್ಳಿ ಶಾಸನದ ಮೇಲೆ ಹೊಸಬೆಳಕು, ಸಂಪುಟ–69, ಸಂಚಿಕೆ–2
6. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ–22, ಪುಟ. 29
7. ಅದೇ, ಯಲಬುರ್ಗಾ–64, ಪುಟ. 256
8. ಅದೇ, ಕೊಪ್ಪಳ–34, ಪುಟ. 40
9. ಅದೇ ಕೊ–32, ಪುಟ. 39
10. ಅದೇ ಯ–30, ಪುಟ. 189
11. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–7, ಮಾನವಿ–18, ಪುಟ. 242
12. ಅದೇ, ಲಿಂ–17, ಪುಟ. 151
13. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯಲಬುರ್ಗಾ–65, ಪುಟ. 257
14. ಅದೇ, ಗಂಗಾವತಿ–111, ಪುಟ. 390
15. ಅದೇ, ಕೊಪ್ಪಳ–11, ಪುಟ. 22
16. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–56, ಪುಟ. 238
17. ಅದೇ, ಯ–63, ಪುಟ. 256
18. ಅದೇ, ಯ–65, ಪುಟ. 257
19. ದೇಸಾಯಿ ಪಿ.ಬಿ. : ಶಾಸನ ಪರಿಚಯ, ಪುಟ. 73
20. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–56, ಪುಟ. 238
21. ಅದೇ, ಯ–63, ಪುಟ. 256
22. ಅದೇ, ಗಂ–102, ಪುಟ. 385
23. ಅದೇ, ಕೊ–98, ಪುಟ. 87
24. ಅದೇ, ಕೊ–101, ಪುಟ. 90
25. ಅದೇ, ಕೊ–83, ಪುಟ. 68
26. ಅದೇ, ಕೊ–84, ಪುಟ. 69
27. ಅದೇ, ಕೊ–113ಪುಟ. 109
28. ಅದೇ, ಕೊ–99, ಪುಟ. 88

29. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–79, ಪುಟ. 62
30. ಅದೇ ಕೊ–93, ಪುಟ. 80
31. ಅದೇ, ಕೊ–125, ಪುಟ. 121
32. ಅದೇ, ಕೊ–26, ಪುಟ. 31
33. ಅದೇ, ಕೊ–84, ಪುಟ. 69
34. ಅದೇ, ಗಂ–53, ಪುಟ. 353
35. ಅದೇ, ಯ–59, ಪುಟ. 253
36. ಅದೇ, ಕು–7, ಪುಟ. 283
37. ಅದೇ, ಯ–36 & 10, ಪುಟ. 194 & 164
38. ಅದೇ, ಯ–50, ಪುಟ. 222
39. ಅದೇ, ಕೊ–62, ಪುಟ. 56
40. ಅದೇ, ಕೊ–45, ಪುಟ. 46 & XXXVII
41. ಅದೇ, ಕು–3, ಪುಟ. 279
42. ಅದೇ, ಕೊ–124, ಪುಟ. 122
43. ಅದೇ, ಗಂ–2, ಪುಟ. 314
44. ಅದೇ, ಕೊ–6, ಪುಟ.12
45. ಅದೇ, ಯ–29, ಪುಟ. 184
46. ಅದೇ, ಕೊ–148, ಪುಟ. 145
47. ಅದೇ, ಕು–22, ಪುಟ. 302
48. ಅದೇ, ಕು–2, ಪು.277
49. ಅದೇ, ಕು–1, ಪುಟ. 277
50. ಅದೇ, ಯ–53, ಪುಟ. 236
51. ಅದೇ, ಯ–16, ಪುಟ. 173
52. ಅದೇ, ಕೊ–26, ಪುಟ. 31
53. ಅದೇ, ಕೊ–159, ಪುಟ. 153
54. ಅದೇ, ಯ–39&47, ಪುಟ. 202 & 218
55. ಅದೇ, ಯ–29, ಪುಟ. 184
56. ಅದೇ, ಯ–38, ಪುಟ. 197 & ಕೊ–8, ಪುಟ. 16
57. ಅದೇ, ಯ–13, ಪುಟ. 167
58. ಅದೇ, ಕೊ–26, ಪುಟ. 31
59. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1, ಬಳ್ಳಾರಿ–49, ಪುಟ. 65
60. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2 ಕೊ–106, ಪುಟ. 99

61. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–40, ಪುಟ.205
62. ಅದೇ, ಕೊ–3, ಪುಟ. 4
63. ಅದೇ, ಯ–52, ಪುಟ. 228
64. ಅದೇ, ಕೊ–3, ಪುಟ. 4
65. ಅದೇ, ಕೊ–9, ಪುಟ. 20
66. ಅದೇ, ಯ–69, ಪುಟ. 269
67. ಅದೇ, ಕೊ–164 & 165, ಪುಟ. 157&158
68. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1, ಸಂಡೂರು–14, ಪುಟ. 202
69. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–6, ಪುಟ. 162
70. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1, ಸಂಡೂರು–14, ಪುಟ. 202
71. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–167, ಪುಟ. 159
72. ಅದೇ, ಕೊ–166, ಪುಟ. 159
73. ಅದೇ, ಗಂ–21, ಪುಟ. 335
74. ಅದೇ, ಕೊ–31, ಪುಟ. 38
75. ಅದೇ, ಗಂ–28, ಪುಟ. 342
76. ಅದೇ, ಗಂ–34, ಪುಟ. 344
77. ಅದೇ, ಯ–48, ಪುಟ. 219
78. ಅದೇ, ಗಂ–39, ಪುಟ. 347
79. ಅದೇ, ಗಂ–80, ಪುಟ. 369
80. ಅದೇ, ಗಂ–20, ಪುಟ. 335
81. ಅದೇ, ಕೊ–163, ಪುಟ. 157
82. ಅದೇ, ಗಂ–80, ಪುಟ. 369
83. ಅದೇ, ಗಂ–90, ಪುಟ. 379
84. ಅದೇ, ಗಂ–80, ಪುಟ.369 & ಕೊ–155, ಪುಟ. 132
85. ಅದೇ, ಕೊ–138, 160, ಪುಟ. 134&153
86. ಅದೇ, ಕೊ–139, ಪುಟ. 136
87. ಅದೇ, ಕೊ–39, ಪುಟ. 43
88. ಅದೇ, ಗಂ–73, ಪುಟ. 364
89. ಅದೇ, ಗಂ–91, ಪುಟ. 379
90. ಅದೇ, ಗಂ–55, ಪುಟ. 355
91. ಅದೇ, ಗಂ–80, ಪುಟ. 369

92. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–14, ಪುಟ. 170
93. ಅದೇ, ಯ–22, ಪುಟ. 178
94. ಅದೇ, ಗಂ–3, ಪುಟ. 316
95. ಅದೇ, ಗಂ–27, ಪುಟ. 341
96. ಅದೇ, ಗಂ–90(ಎ), ಪುಟ. 379
97. ಅದೇ, ಕೊ–142, ಪುಟ. 142
98. ಅದೇ, ಗಂ–89, ಪುಟ. 377
99. ಅದೇ, ಗಂ–75, ಪುಟ. 367
100. ಅದೇ, ಗಂ–85, ಪುಟ. 375

ಅಧ್ಯಾಯ-4

# ಆಡಳಿತ ವ್ಯವಸ್ಥೆ

ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ಇಂದು ನಿನ್ನೆಯದಲ್ಲ. ಇದಕ್ಕೆ ಅನೇಕ ವರ್ಷಗಳ ಇತಿಹಾಸವಿದೆ. ಅಖಂಡವಾದ ಸಾಮ್ರಾಜ್ಯವನ್ನು ಖಂಡಖಂಡವಾಗಿ ತುಂಡರಿಸಿ ಆಡಳಿತ ಸುಗಮವಾಗಿ ನಡೆಸಲು ಸಹಾಯವಾಗಲು ಈ ರೀತಿಯ ವಿಭಾಗೀಕರಣ ಅತ್ಯಗತ್ಯವಾಗಿದೆ. ಸಾಮ್ರಾಜ್ಯವನ್ನು ನಾಡು, ಪ್ರಾಂತ, ಪ್ರದೇಶ, ವಿಭಾಗ ಮುಂತಾದ ರೂಪಗಳಲ್ಲಿ ವಿಭಾಗಿಸಿ ಅಧಿಕಾರ ನಿರ್ವಹಿಸುತ್ತಿದ್ದರು. ಇದು ಅರಸ, ರಾಣಿ, ಸಾಮಂತ, ದಂಡನಾಯಕ, ಗೌಡ, ತಳವಾರ ಹೀಗೆ ಅನೇಕ ಸ್ತರಗಳಲ್ಲಿ ಅಧಿಕಾರ ನಡೆಸಲಾಗುತ್ತಿತ್ತು. ಇದರಿಂದಾಗಿ ಪ್ರತಿ ಘಟಕದ ಮೇಲೆ ವಿಶೇಷವಾದ ನಿಗಾವಹಿಸಲು ಸಾಧ್ಯವಾಗುತ್ತದೆ. ಹಾಗೆಯೇ ಜನರ ಆಶೋತ್ತರಗಳಿಗೆ ಸ್ಪಂದಿಸಲು ಸಹಾಯವಾಗುತ್ತದೆ. ಅಧಿಕಾರವನ್ನು ವಿವಿಧ ಸ್ತರಗಳ ಮೂಲಕ ಹಂಚಿಕೆಮಾಡಿ ಆಡಳಿತ ನಡೆಸುವುದರಿಂದ ಜವಾಬ್ದಾರಿಯೂ ಹಂಚಿಕೆಯಾಗಿ ಯಾವುದೇ ಕಾರ್ಯಗಳು ನಿರ್ವಿಘ್ನವಾಗಿ ಸಾಗಲು ಸಾಧ್ಯವಾಗುತ್ತದೆ. ಹಂತಹಂತಗಳಲ್ಲಿ ಅಧಿಕಾರ ಹಂಚಿಕೆಯಾಗಿರುವುದರಿಂದ ಮೇಲ್ವಿಚಾರಣೆ ಮಾಡುವುದು ಸುಲಭವಾಗುತ್ತದೆ. ಇದರಿಂದಾಗಿ ಬಹು ಹಿಂದಿನಿಂದಲೂ ಜಾತಿ, ಧರ್ಮ, ಸಂಸ್ಕೃತಿಗಳಲ್ಲಿಯೂ ಭಾಗ-ವಿಭಾಗ ಕಾರ್ಯ ನಡೆಯುತ್ತಾ ಸಾಗಿ ಬಂದಿದೆ.

"ವಿಸ್ತಾರವಾದ ಸಾಮ್ರಾಜ್ಯದ ಮೇಲೆ ಒಬ್ಬ ವ್ಯಕ್ತಿ ಆಡಳಿತ ನಡೆಸುವುದು ಕಷ್ಟದ ಕೆಲಸ. ಇಂದು ಕೂಡ ಆಡಳಿತ ಸೌಕರ್ಯಕ್ಕಾಗಿ ರಾಷ್ಟ್ರವನ್ನು ರಾಜ್ಯ-ವಿಭಾಗ-ಜಿಲ್ಲೆ-ತಾಲೂಕು-ಗ್ರಾಮ ಎಂದು ವಿಭಾಗಿಸಿ ಕ್ರಮವಾಗಿ ಇವುಗಳ ಮೇಲೆ ರಾಷ್ಟ್ರಪತಿ-ರಾಜ್ಯಪಾಲ-ವಿಭಾಗಾಧಿಕಾರಿ-ಜಿಲ್ಲಾಧಿಕಾರಿ-ತಹಸೀಲ್ದಾರ-ಗ್ರಾಮಲೆಕ್ಕಾಧಿಕಾರಿಗಳನ್ನು ನೇಮಿಸಲಾಗುತ್ತದೆ. ಇದರಲ್ಲಿ ರಾಷ್ಟ್ರಪತಿಯೇ ಪರಮೋಚ್ಚ ಅಧಿಕಾರಿಯಾಗಿರುವಂತೆ ಹಿಂದೆ ಚಕ್ರವರ್ತಿಯೇ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದನು. ಸಾಮ್ರಾಜ್ಯವನ್ನು ಆಡಳಿತ ಸೌಕರ್ಯಕ್ಕಾಗಿ ವಿಭಾಗ-ಉಪವಿಭಾಗಗಳನ್ನಾಗಿ ವಿಂಗಡಿಸಿ ಅವುಗಳಿಗೆ ಆತನು ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಈ ಪದ್ಧತಿ ಬಹಳ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ತೀರಾ ಪ್ರಾಚೀನ ಕಾಲದಲ್ಲಿ ಇಂತಹ ವಿಭಾಗಗಳನ್ನು ಆಹಾರ-ಮಂಡಲ-ಭುಕ್ತಿ-ವಿಷಯ-ದೇಶ ಎಂದು ಮುಂತಾಗಿ ಕರೆಯಲಾಗುತ್ತಿತ್ತು."[1]

ಸಾಮ್ರಾಜ್ಯದ ಹಿತದೃಷ್ಟಿಯಿಂದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಈ ವಿಭಾಗೀಕರಣ ಸೂಕ್ತವೆನಿಸುತ್ತದೆ. ಇದರಿಂದಾಗಿ ಪ್ರತಿ ಘಟಕವನ್ನು ನಿರ್ಲಕ್ಷಿಸದೇ ಸಾಮ್ರಾಜ್ಯದಲ್ಲಿ ಸಮತೋಲನ ಕಾಪಾಡಲು ಸಹಾಯಕ ವಾಗುತ್ತದೆ. "ಗ್ರಾಮಗಳ ಮತ್ತು ನಗರಗಳ ಮೊತ್ತವೇ ರಾಜ್ಯ. ಎಲ್ಲಕ್ಕೂ ರಾಜನೇ ಅಧಿಪತಿ. ಎಲ್ಲವೂ ಅವನ

ಆಳ್ವಿಕೆಗೆ ಒಳಪಟ್ಟವು. ಆದರೂ ಪ್ರಾಚೀನ ಕರ್ನಾಟಕದ ಗ್ರಾಮಗಳ ಆಳ್ವಿಕೆಯನ್ನು ಪರಿಶೀಲಿಸಿದರೆ ಒಂದೊಂದು ಗ್ರಾಮವೂ ಕೆಲವು ವಿಷಯಗಳಲ್ಲಿ ಆಡಳಿತದ ಪ್ರತ್ಯೇಕ ಘಟಕವೆಂಬಂತೆ ನಡೆದುಕೊಳ್ಳುತ್ತಿದ್ದಿತು. ಶಾಸನಗಳಲ್ಲಿ ಚಿತ್ರಿತವಾಗಿರುವಂತೆ ಒಂದೊಂದು ಗ್ರಾಮವು ವಿಶಾಲವಾದ ರಾಜ್ಯದೊಳಗಿನ ಒಂದು ಪುಟ್ಟ ರಾಜ್ಯ ಎಂಬ ಭಾವನೆ ಬರುತ್ತದೆ."[2] ಇದರಂತೆ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡ ಆಡಳಿತ ಘಟಕ ಅಥವಾ ವಿಭಾಗಗಳನ್ನು ಗುರುತಿಸಲಾಗಿದೆ.

### I – ಆಡಳಿತ ಘಟಕಗಳು

**ಎಡೆದೊರೆ–2000 :** "ಎಡೆದೊರೆನಾಡು ಎರಡು ಸಾವಿರ ಹಳ್ಳಿಗಳ ಒಂದು ಆಡಳಿತ ವಿಭಾಗ. ಕನ್ನಡ ಶಾಸನಗಳಲ್ಲಿ ಅದು ಎಡೆದೊಱೆ ಇಛ್ಛಾಸಿರ ಮತ್ತು ಎಡೆದೊರೆ–2000ಎಂಬ ರೂಪಗಳಲ್ಲಿ ಕಾಣಿಸಿಕೊಂಡಿದೆ."[3] ಕೊಪ್ಪಳ ಜಿಲ್ಲೆಯ ಕೆಲ ಶಾಸನಗಳಲ್ಲಿ ಎಡೆದೊರೆನಾಡು–2000ನ್ನು ಉಲ್ಲೇಖಿಸಲಾಗಿದೆ. "ಈ ವಿಭಾಗವು ಸ್ಥೂಲವಾಗಿ ಇಂದಿನ ರಾಯಚೂರು, ಕೊಪ್ಪಳ, ಸುರಪುರ ಮತ್ತು ಶಹಾಪುರ ತಾಲೂಕಿನ ವ್ಯಾಪ್ತಿಯನ್ನು ಹೊಂದಿತ್ತು."[4] ಜಿಲ್ಲೆಯ ಶಾಸನಗಳಲ್ಲಿ ಎಡೆದೊರೆ–2000 ನಾಡಿನ ಆಳ್ವಿಕೆಯ ಬಗ್ಗೆ ಉಲ್ಲೇಖಗಳಿವೆ. ಆದರೆ ಅದರ ವ್ಯಾಪ್ತಿಯ ಪ್ರದೇಶವಾಗಲಿ ಇಲ್ಲವೇ ಆ ಎರಡು ಸಾವಿರ ಊರುಗಳ ಬಗ್ಗೆಯಾಗಲಿ ಎಲ್ಲೂ ವಿವರಗಳಿಲ್ಲ. ಮಾದಿನೂರಿನ ಕ್ರಿ.ಶ.1190ರ ಶಾಸನದಲ್ಲಿ ಅಗ್ರಹಾರವಾದ ಮುದೇನೂರಿನ ವರ್ಣನೆ ಜೊತೆಗೆ ಈ ಅಗ್ರಹಾರವು ಎಡೆದೊರೆ–2000 ನಾಡಿನ ವ್ಯಾಪ್ತಿಗೆ ಸೇರಿತ್ತೆಂದು ಉಲ್ಲೇಖಿಸಿದೆ.[5] ಅದೇ ರೀತಿ ಕನ್ನರ ದೇವನು (ಮೂರನೇ ಕೃಷ್ಣ) ರಾಜ್ಯಭಾರ ಮಾಡುತ್ತಿದ್ದಾಗ ಅವನ ಕೈಕೆಳಗೆ ಗಂಗ ಪೆರ್ಮಾಡಿ ರಾಜ್ಯಭಾರ ಮಾಡುತ್ತಿದ್ದ. ಇವನ ಕೈಕೆಗಳಗೆ ಬುಟ್ಟಯ್ಯನೆಂಬುವವನು ಎಡೆದೊರೆ–2000 ಆಳುತ್ತಿದ್ದನೆಂದು ಇಟಗಿ ಶಾಸನದಲ್ಲಿ ತಿಳಿಸುತ್ತದೆ.[6] ಹಿರೇಮನ್ನಾಪುರದ ದಾನ ಶಾಸನದಲ್ಲಿಯೂ ಸಹ ಈ ಎಡೆದೊರೆ–2000 ನಾಡಿನ ಆಳ್ವಿಕೆಯ ಉಲ್ಲೇಖವಿದೆ.[7] ಜೊತೆಗೆ ಚಾಮುಣ್ಡ ಭಟ್ಟೋಪಧ್ಯಾಯನಿಗೆ ಧಾರಪೂರ್ವಕವಾಗಿ 300 ಮೊತ್ತರು ಕರಿಯ ಭೂಮಿಯನ್ನು ಮಾನ್ಯವಾಗಿ ಎಡೆದೊರೆ–2000ದ ಕಂಪಣ ಕರಡಿಕಲ್ಲು–300ರ ಬಳಿಯ ಗೋಮಸ್ತಿಗೆಯಲ್ಲಿ ದಾನ ಕೊಟ್ಟ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ.[8]

**ಕುಕ್ಕನೂರು–30 :** "ಕುಕ್ಕನೂರು ಎಂಬ ನಾಮವನ್ನು ಹೊಂದಿ 30 ಗ್ರಾಮಗಳಿಗೆ ರಾಜಧಾನಿಯಾಗಿತ್ತು."[9] ಮೂವತ್ತು ಹಳ್ಳಿಯಿಂದ ಕೂಡಿದ ನಾಡು ಎಡೆಹಳ್ಳಿ, ಸೆಲೆಗೇರೆ ಮತ್ತು ಹಾಡಲಗೇರೆ ಕುಕನೂರು ಸುತ್ತಲಿನ ಹಳ್ಳಿಗಳು ಇವುಗಳ ಮುಖ್ಯಸ್ಥಳ ಕುಕನೂರು.[10] ಈ ಕುಕನೂರು–30ರ ನಾಡು ಮೂವತ್ತು ಗ್ರಾಮಗಳ ಸಂಗಮವಾಗಿದ್ದು; ಆ ಮೂವತ್ತು ಗ್ರಾಮಗಳ ಹೆಸರುಗಳ ಉಲ್ಲೇಖ ಈ ಜಿಲ್ಲೆಯ ಶಾಸನಗಳಲ್ಲಿ ಮೂರು ನಾಲ್ಕು ಊರುಗಳನ್ನು ಬಿಟ್ಟರೆ ಇನ್ನುಳಿದ ಗ್ರಾಮಗಳ ಹೆಸರಿನ ಪ್ರಸ್ತಾಪ ಕಂಡು

ಬರುವುದಿಲ್ಲ. ಕುಂತಲ ದೇಶದ ಬೆಳ್ವಲ ನಾಡಿನಲ್ಲಿ ಈ ಕುಕ್ಕನೂರು–30 ಇತ್ತು.[11] ಈ ಪ್ರದೇಶವನ್ನು ಅನೇಕ ಅರಸರು ಆಳ್ವಿಕೆ ನಡೆಸಿದ್ದಾರೆ. ಆಹವಮಲ್ಲನ ಆಳ್ವಿಕೆಯಲ್ಲಿ ಇವನ ಸಾಮಂತನಾಗಿ ಸೋಭನರಸನು ಎರಡಾಱುನೂರು, ಬನವಾಸಿ–12,000ನ್ನು ಆಳುತ್ತಿದ್ದ. ಇವನ ಕೆಳಗೆ ಸಾವಿಯಣ್ಣನು ಕುಕ್ಕನೂರು–30ನ್ನು ಆಳುತ್ತಿದ್ದನು.[12] ಕನ್ನರದೇವನು (ಮೂರನೇ ಕೃಷ್ಣ) ರಾಜ್ಯಭಾರಮಾಡುವಾಗ ಅವನ ಕೈಕೆಳಗೆ ಗಂಗ ಪೆರ್ಮಾಡಿ ರಾಜ್ಯಭಾರ ಮಾಡುತ್ತಿದ್ದ. ಇವನ ಕೈಕೆಳಗೆ ಬುಟ್ಟಯ್ಯನೆಂಬುವವನು ಎಡೆದೊರೆ–2000ನ್ನು ಆಳುತ್ತಿದ್ದಾಗ; ಬೂತುಗ ಪೆರ್ಮಾನಡಿಯು ಬೆಳ್ವಲ–300, ಮಾಸವಾಡಿ–140, ಕುಕ್ಕನೂರು–30, ಕೆಳವಾಡಿ–300 ಇತ್ಯಾದಿಗಳನ್ನು ಆಳ್ವಿಕೆ ನಡೆಸುತ್ತಿದ್ದನೆಂದು ಶಾಸನದಲ್ಲಿ ಉಲ್ಲೇಖವಿದೆ.[13] ಇದು ಪ್ರಮುಖವಾದ ಅಗ್ರಹಾರವಾಗಿದ್ದು "ಶ್ರೀಮನ್ಮಹಾಗ್ರಹಾರವ ಸಾಮಾನ್ಯಂ ಕುಕ್ಕುನೂರು ಮಿಗೆ ಸೊಗಯಿಸುಗಂ॥ ಸಾರ ನಲ್ವತ್ತೆಂಟುಂ ಕೇರಿಗಳಿರೆ ಬಳಸಿ ಬೆಳೆದ ಬಾಳೆಯ ಬನದಿಂ ನಾರಂಗದ ತನಿವಣ್ಗಳಿನೋರಂತಿರೆ ಕುಕ್ಕನೂರು ಕಣ್ಗೆಸದಿಕ್ಕು ॥ ಒದವಿದ ವೇದ ವೇದಶಾಸ್ತ್ರನಿನದಂಗಳಿನೊಪ್ಪುವ ದಿವ್ಯದೇವತಾಸದನನಿವಿಷ್ಟ ಭೂಸುರನಿ ಕಾಯದೆ ಕೈರವಪುಂಡರೀಕ ಷಂಡದಿನೆಸೆದಿರ್ಪ್ಪ ದೀರ್ಗ್ಘಿಕೆಗಳಿಂದ ಮನೋಹರವಾಗಿ ಕುಕ್ಕನೂರುದಿತ ಯಶೋವಿಧಾನದಿ ನಳಂಕೃತವಾದುದು."[14] ಎಂದು ಕುಕ್ಕನೂರು–30ರ ಬಗ್ಗೆ ಶಾಸನದಲ್ಲಿ ವರ್ಣಿಸಿದೆ.

**ಕೆಳವಾಡಿ–300 :** ಈ ಕೆಳವಾಡಿ–300ರ ನಾಡು ಮೂರುನೂರು ಗ್ರಾಮಗಳ ಪ್ರದೇಶವನ್ನು ಹೊಂದಿತ್ತೆಂದು ತಿಳಿಯುತ್ತದೆ. "ಇದು ಬಿಜಾಪೂರ ಜಿಲ್ಲೆಯ ಬಾದಾಮಿ ತಾಲೂಕಿನ ಕೆಲವಾಡಿ ಗ್ರಾಮವೇ ಆಗಿದೆ. ಈ ವಿಭಾಗವು ಬಿಜಾಪೂರ ಜಿಲ್ಲೆಯ ಮುಧೋಳ, ಬಾದಾಮಿ, ಬಾಗಲಕೋಟ ತಾಲೂಕುಗಳ ಕೆಲವು ಗ್ರಾಮಗಳನ್ನು ಒಳಗೊಂಡಿದೆ. ಇದು ಬಿಜಾಪೂರ ಜಿಲ್ಲೆಯ ಘಟಪ್ರಭಾ–ಮಲಪ್ರಭಾ–ಕೃಷ್ಣ ನದಿಗಳ ನಡುವಿನ ಭಾಗವನ್ನು ಹೊಂದಿತ್ತು. ಭಾಗಡೆಗೆ–70 ಈ ಉಪವಿಭಾಗವು ಕೆಳವಾಡಿ–300ರಲ್ಲಿತ್ತೆಂದು ಹೇಳಬಹುದು."[15] ಈ ಕೆಳವಾಡಿ–300ಬಗ್ಗೆ ಜಿಲ್ಲೆಯ ಮೂರು ಶಾಸನಗಳಲ್ಲಿ ಮಾತ್ರ ಉಲ್ಲೇಖವಿದೆ. ಈ ನಾಡಿನ ವ್ಯಾಪ್ತಿಯ ಬಗ್ಗೆಯಾಗಲಿ, ಇಲ್ಲವೇ ಆ ಮೂರುನೂರು ಗ್ರಾಮಗಳ ಬಗ್ಗೆಯಾಗಲಿ ಉಲ್ಲೇಖವಿಲ್ಲ. ಅವುಗಳಲ್ಲಿ ಕೆಲವು ಆಡಳಿತ ಉಲ್ಲೇಖಗಳು ಮಾತ್ರ ಇವೆ. ಬೂತುಗ ಪೆರ್ಮಾನಡಿಯು ಬೆಳ್ವಲ–300, ಮಾಸವಾಡಿ–146, ಕುಕ್ಕನೂರು–30, ಕೆಳವಾಡಿ–300 ಇತ್ಯಾದಿಗಳನ್ನು ಆಳ್ವಿಕೆ ನಡೆಸುತ್ತಿದ್ದನು.[16] ಚಾಳುಕ್ಯ ಜಗದೇಕ ಮಲ್ಲನು ಆಳ್ವಿಕೆ ನಡೆಸುತ್ತಿದ್ದಾಗ (ಹೆಸರು ಹಾಳಾಗಿದೆ) ಕೆಳವಾಡಿ–300ನ್ನು ಆಳುತ್ತಿದ್ದನೆಂದು ಒಂದು ಶಾಸನದಲ್ಲಿ ವಿವರಿಸಿದೆ.[17] ಮುದೇನೂರು ಶಾಸನ[18]ದಲ್ಲಿ ಮುದೇನೂರು ಅಗ್ರಹಾರದ ಬಗ್ಗೆ ವರ್ಣಿಸುತ್ತಾ; ಈ ಮುದೇನೂರು ಎಡದೊರೆ–2000ಕ್ಕೆ ಸೇರಿದ ಕೆಳವಾಡಿ–300ರ ತಿಲಕದಂತಿತ್ತು ಎಂದು ವರ್ಣಿಸಿದೆ.

**ಬೆಳ್ಳಟ್ಟಿ–12 :** ಹನ್ನೆರಡು ಗ್ರಾಮಗಳ ಸಂಗಮವಾದ ಇದು ಚಿಕ್ಕ ವಿಭಾಗವಾಗಿತ್ತು. ಕೊಪ್ಪಳ ಜಿಲ್ಲೆಯ ಶಾಸನದಲ್ಲಿ ಉಲ್ಲೇಖಗೊಂಡ ವಿಭಾಗಗಳಲ್ಲಿ ಇದು ಒಂದಾಗಿದೆ. ಈ ವಿಭಾಗದ ಕುರಿತು ಹೆಚ್ಚಿನ ಮಾಹಿತಿ ಶಾಸನಗಳಲ್ಲಿ ದೊರೆಯುವುದಿಲ್ಲ. ಕೇವಲ ಒಂದೇ ಒಂದು ಶಾಸನ[19]ದಲ್ಲಿ 'ಬೆಳ್ಳಟ್ಟಿ ಹಂನೆರಡಮ' ಎಂದು ಉಲ್ಲೇಖಗೊಂಡಿದೆ. ಶಾಸನದ ಬಹುಭಾಗ ತ್ರುಟಿತವಾಗಿರುವುದರಿಂದ ಬೆಳ್ಳಟ್ಟಿ–12ರ ಕುರಿತು ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

**ಕೋಗುಳಿ–500 :** ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡ ಆಡಳಿತ ವಿಭಾಗಗಳಲ್ಲಿ ಕೋಗುಳಿ–500ಕೂಡ ಒಂದಾಗಿದೆ. "ಐದನೂರು ಗ್ರಾಮಗಳನ್ನು ಹೊಂದಿದ್ದ ಈ ವಿಭಾಗದ ಮುಖ್ಯಗ್ರಾಮ ಇಂದಿನ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ **'ಕೋಗುಳಿ'**. ಈ ವಿಭಾಗ ಇಂದಿನ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಕೂಡ್ಲಿಗಿ ತಾಲೂಕುಗಳನ್ನು ಒಳಗೊಂಡಿತ್ತು. ಹಿರೇಹಡಗಲಿ, ನೀಲಗುಂದ, ಹನಸಿ, ಚಿಕ್ಕಮುಣಸಿ, ಪೊಳಲ್ಗುಂದೆ (ಒಳಗುಂದೆ), ಮೋರಿಗೇಱೆ(ಮೋರಿಗೇರೆ), ಮುತ್ತಲಗಿ, ಅಮ್ಮಳೆ(ಅಂಬಳ) ಗ್ರಾಮಗಳು ಈ ವಿಭಾಗದೊಳಗಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ವಿಭಾಗದ ಉತ್ತರಕ್ಕೆ ಹಾಗೂ ಪಶ್ಚಿಮಕ್ಕೆ ತುಂಗಭದ್ರಾ ನದಿ ಪೂರ್ವಕ್ಕೆ ಸಿಂದವಾಡ ಸಾಸಿರ, ದಕ್ಷಿಣಕ್ಕೆ ಕದಂಬಳಿಗೆ ಸಾಸಿರ ಮೇರೆಗಳಾಗಿದ್ದವು."[20] ಕೊಪ್ಪಳ ಜಿಲ್ಲೆಯಲ್ಲಿ ದೊರೆತ ತ್ರುಟಿತ ಶಾಸನ[21]ವು ಕೋಗುಳಿ ಕದಂಬರಿಗೆ ಸಂಬಂಧಿಸಿದ್ದಾಗಿದೆ. ಕೋಗುಳಿ–500ರ ವಿಭಾಗವು ಕದಂಬರ ಅರಸ ಜೊಟ್ಟಯ್ಯನ ಆಳ್ವಿಕೆಗೆ ಒಳಪಟ್ಟಿತ್ತೆಂದು ಹಾಗೂ ಜೊಟ್ಟಯ್ಯನ ವಂಶದ ಕುರಿತು ಮಾಹಿತಿ ನೀಡುತ್ತದೆ.

**ಬನವಾಸಿ–12,000 :** ಹನ್ನೆರಡು ಸಾವಿರ ಹಳ್ಳಿಗಳ ಸಂಗಮವೇ ಈ ಬನವಾಸಿ ನಾಡು. ಇದು ಪ್ರಾಚೀನ ಕನ್ನಡ ಸಾಹಿತ್ಯದ ಮುಕುಟಮಣಿಯೆನಿಸಿದ ಪಂಪನ ಊರು. ಪಂಪನು ತನ್ನ ಊರಿನ ಬಗ್ಗೆ 'ವಿಕ್ರಮಾರ್ಜುನ ವಿಜಯ'ದಲ್ಲಿ 'ಅರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ತನ್ನ ನೆಲದ ಅಭಿಮಾನವನ್ನು ಉಲ್ಲೇಖಮಾಡಿದ್ದಾನೆ. ಈ ವಿಭಾಗವು ತಿರುಳ್ಗನ್ನಡದ ಪ್ರದೇಶವಾದ ಕೊಪ್ಪಳವನ್ನು ಒಳಗೊಂಡಿತ್ತು. ಇದರ ಉಪವಿಭಾಗಗಳೆಂದರೆ ನೊರಂಬಾಡ, ಇಟಗಿ–30, ರಟ್ಟಕ್ಕಳಿ–20, ಸತ್ತಳಿಗೆ–70, ಹೊನ್ನತ್ತಿ–12, ನಾಗರಖಂಡ–70, ಗಜಗಂಡ–600, ಕಾಲದಿ–96, ಎಡೆವಟ್ಟಿ–70, ಭಾಸಊರು–140, ಜಿಡ್ಡಳಗಿ–70 ಮತ್ತು ಕರ್ಬುನಾಲಗೆ–70[22] ಇದ್ದವು. ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಶಾಸನಗಳನ್ನು ಈ ಉಪ ವಿಭಾಗಗಳಲ್ಲಿ ಯಾವುದೊಂದು ಉಪ ವಿಭಾಗದ ಬಗ್ಗೆಯಾಗಲಿ ಅಥವಾ ಈ ಬನವಾಸಿಯ–12,000 ಪ್ರದೇಶದ ವ್ಯಾಪ್ತಿ ಇಲ್ಲವೇ ಗ್ರಾಮಗಳ ಬಗ್ಗೆಯಾಗಲಿ ಉಲ್ಲೇಖಗಳಿಲ್ಲ. ಈ ಶಾಸನಗಳಲ್ಲಿ ಕೇವಲ ಆಳ್ವಿಕೆ ಕುರಿತು ಮಾತ್ರ ವಿವರಗಳಿವೆ. ಇರಿವಬೆಡಂಗ ಸತ್ತಿದೇವ (ಸತ್ಯಾಶ್ರಯ)ನು

ಆಳುತ್ತಿದಾಗ ಇವನ ಸಾಮಂತ ನೊಳಂಬರಸನು ಮಹೇಶ್ವರ ಧರ್ಮವನ್ನು ಆಚರಿಸುತ್ತಾ ಕುಕ್ಕನೂರು–30, ಬನವಾಸಿ–12,000ನ್ನು ಆಳುತ್ತಿದ್ದನು.[23] ಕನ್ನರ ದೇವನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾದ ಚಾವುಂಡರಾಜನು ಬೆಳ್ವಲ–300, ಮಾಸವಾಡಿ–100, ಕಿಸುಕಾಡು–70, ಬನವಾಸಿ–12,000 ಮುಂತಾದವುಗಳನ್ನು ಆಳುತ್ತಿದ್ದನು.[24] ತಳಕಲ್ಲು ಶಾಸನದಲ್ಲಿಯೂ ಸಹ ಆಹವಮಲ್ಲನ ಆಳ್ವಿಕೆಯಲ್ಲಿ ಇವನ ಸಾಮಂತನಾಗಿ ನೊಳಂಬರಸನು ಎರಡಾಱುನೂರು ಮತ್ತು ಬನವಾಸಿ–12,000ನ್ನು ಆಳುತ್ತಿದ್ದನೆಂದು ಉಲ್ಲೇಖಿಸಿದೆ.[25]

**ನೆರೆಯಂಗಲು–12** : "ಧಾರವಾಡ ಜಿಲ್ಲೆಯ ರೋಣ ತಾಲೂಕಿನ ನೆರೆಗಲ್ ಗ್ರಾಮವೇ ನೆರೆಯಂಗಲ್ ಎಂದು ಕರೆಯಲ್ಪಟ್ಟು 12 ಗ್ರಾಮಗಳಿಗೆ ಮುಖ್ಯ ಪಟ್ಟಣವೆನಿಸಿತ್ತು."[26] ಈ ನೆರೆಯಂಗಲ್ಲು–12 ಕೇವಲ ಹನ್ನೆರಡು ಗ್ರಾಮಗಳ ಸಂಗಮವಾಗಿತ್ತು. ಈ ನೆರೆಯಂಗಲ್ಲು 'ನೆರೆಯಂಗಲನ್ನೆರಡಂ ಧಾರಾಂಗನಾ ತಿಳಿಕಮೆನಿಸಿ ಬೆಳ್ವಲ ನಾಡೊಳು'[27] ಎಂದು ಶಾಸನದಲ್ಲಿ ಉಲ್ಲೇಖಿಸಿದ್ದು, ಈ ನೆರೆಯಂಗಲ್ಲು–12 ಬೆಳ್ವಲನಾಡೊಳಗೆ ಇತ್ತೆಂದು ತಿಳಿದು ಬರುತ್ತದೆ. ಇದರಲ್ಲಿ "ತೋರ್ಕ್ಕಮವ ಪೊಳ್ದೊರೆವೆತ್ತ ಮಹಾಗ್ರಹಾರ ವಿಟ್ಟಗೆಯಸಗು"[28] ಎಂದು ಇಟ್ಟಿಗೆಯನ್ನು ನಾನಾ ರೀತಿಯಲ್ಲಿ ವರ್ಣಿಸಿದೆ. ಈ ಉಪವಿಭಾಗವನ್ನು ಚಾವುಂಡರಸನು ಆಳುತ್ತಿದ್ದನು.[29]

**ಬೆಳುವಲ–300 :** "ಬೆಳೆವ ಫಲವತ್ತತೆಯನ್ನು ನಾಮದಲ್ಲಿ ಎತ್ತಿತ್ತೋರಿಸುವ ಬೆಳುವಲ ನಾಡು ಮೂರುನೂರು ಗ್ರಾಮಗಳನ್ನು ಹೊಂದಿದ ವಿಭಾಗವಾಗಿತ್ತು. ಇದು ಧಾರವಾಡ ಜಿಲ್ಲೆಯ ಗದಗ, ನವಲಗುಂದ, ನರಗುಂದ, ರೋಣ, ಹುಬ್ಬಳ್ಳಿ, ಕುಂದಗೋಳ ತಾಲೂಕಿನ ಕೆಲವು ಗ್ರಾಮಗಳನ್ನು, ಬೆಳಗಾವಿ ಜಿಲ್ಲೆಯ ಸವದತ್ತಿ, ರಾಮದುರ್ಗ ತಾಲೂಕಿನ ಕೆಲವು ಗ್ರಾಮಗಳನ್ನು, ಬಿಜಾಪೂರ ಜಿಲ್ಲೆಯ ಬಾದಾಮಿ, ಬಾಗಲಕೋಟ, ಹುನಗುಂದ ತಾಲೂಕುಗಳ ಕೆಲವು ಗ್ರಾಮಗಳನ್ನು ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು."[30] ಇದು ಮುನ್ನೂರು ಗ್ರಾಮಗಳ ಸಂಗಮವಾಗಿದ್ದು; ಇದೊಂದು ದೊಡ್ಡ ವಿಭಾಗವಾಗಿತ್ತೆಂದು ತಿಳಿದುಬರುತ್ತದೆ. 'ಚೆಲ್ವನಪ್ಪ ಬೆಳ್ವಲನಾಡುಂಟಂತದಅಂತಸ್ಥಿತಿಯಿಂ ಕಾನ್ತಂ ತಾಂ ಕುಕ್ಕನೂರು ಮೂವತ್ತೆಂತು"[31] ಎಂದು ಶಾಸನದಲ್ಲಿ ಉಲ್ಲೇಖಗೊಂಡಿರುವುದರಿಂದ ಕುಕ್ಕನೂರು ಉಪವಿಭಾಗವು ಬೆಳ್ವಲನಾಡೊಳಗೆ ಇದ್ದು ಇದೊಂದು ಸುಂದರ ನಾಡಾಗಿತ್ತೆಂದು ಹೇಳಬಹುದು. ಇಂತಹ ಸುಂದರ ನಾಡನ್ನು "X X X X X ಶ್ರೀ ಚಾವುಂಡರಾಜನು ಬೆಳುವಲ ಮೂಂನೂಱು ಹುX X ಮು X X X X X X X ಱು ದ್ವೇದಿ X Xಮಿ ಸಾಯಿರ ಮಾಸವಾಡಿನಾಡು ಕಿಸುಕಾಡು X(ವ್ವತ್ತು) XXX ಬನವಾಸಿ ಪನ್ನ ಸಾಸಿರಮುಂ ಸುಖ ಸಂಕಥಾ ವಿನೋದದಿಂ

ರಾಜ್ಯಂಗೆಯ್ಯು(ತ್ತಮಿರಲು) X X X" ಎಂದು ಮತ್ತೊಂದು ಶಾಸನ[32]ದಲ್ಲಿ ಉಲ್ಲೇಖವಿರುವುದರಿಂದ ಇದನ್ನು ಚಾವುಂಡರಸನ ಆಳ್ವಿಕೆಯಲ್ಲಿದ್ದ ಪ್ರದೇಶವೆಂದು ಹೇಳಲು ಅವಕಾಶವಿದೆ.

**ಮಾಸವಾಡಿ–140** : ಅಧಿಕಾರ ವಿಕೇಂದ್ರಿಕರಣಕ್ಕಾಗಿ ಮಾಡಿಕೊಂಡ ವಿಭಾಗಗಳಲ್ಲಿ ಈ ಮಾಸವಾಡಿಯೂ ಒಂದಾಗಿದೆ. ಈ ಮಾಸವಾಡಿಯ ಕುರಿತು ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯ ಕೆಲ ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಗಮನಿಸಬಹುದು. "ಒಂದು ನೂರ ನಲ್ವತ್ತು ಗ್ರಾಮಗಳಿಂದ ಕೂಡಿದ ಈ ವಿಭಾಗವು ಇಂದಿನ ಧಾರವಾಡ ಜಿಲ್ಲೆಯ ಮುಂಡರಗಿ ತಾಲೂಕಿನ ಗ್ರಾಮಗಳನ್ನು ಹಾಗೂ ರಾಯಚೂರು ಜಿಲ್ಲೆಯ ಕೊಪ್ಪಳ ತಾಲೂಕಿನ (ಈಗ ಕೊಪ್ಪಳ ಪ್ರತ್ಯೇಕ ಜಿಲ್ಲೆಯಾಗಿದೆ) ತುಂಗಭದ್ರಾ ನದಿಯ ಉತ್ತರಕ್ಕಿರುವ ಗ್ರಾಮಗಳನ್ನು ಒಳಗೊಂಡಿತ್ತು."[33] "ಧಾರವಾಡ ಜಿಲ್ಲೆಯ ಮುಂಡರಗಿ ತಾಲೂಕಿನ ಕಕ್ಕೂರು ಗ್ರಾಮದ ಶಾಸನದಲ್ಲಿ 'ಮಾಸವಾಡಿ ನೂಱನಾಲ್ವತ್ತುಂ'ಎಂದು ಉಲ್ಲೇಖವಿರುವುದರಿಂದ ಮುಂಡರಗಿ ತಾಲೂಕಿನ ಡಂಬಳ ಗ್ರಾಮವು ಮಾಸವಾಡಿ–140ರ ರಾಜಧಾನಿಯಾಗಿಬೇಕು."[34]

ಈ ವಿಭಾಗವು ಕ್ರಿ.ಶ.1312ರಲ್ಲಿ ಕನ್ನರದೇವನ ಆಳ್ವಿಕೆಯಲ್ಲಿ ಇವನ ಸಾಮಂತನಾದ ಚಾವುಂಡರಾಜನು ಬೆಳ್ವಲ–300, ಕಿಸುಕಾಡು–70, ಬನವಾಸಿ–12000 ಮುಂತಾದ ವಿಭಾಗಗಳ ಜೊತೆಗೆ ಮಾಸವಾಡಿ ವಿಭಾಗವನ್ನು ಆಳುತ್ತಿದ್ದ ಬಗ್ಗೆ ಶಾಸನ[35] ದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ಕನ್ನರದೇವನ ಬಗ್ಗೆ ವರ್ಣಿಸುತ್ತಾ "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ದ್ವಾರಾವತೀಪುರ ವರಾಧೀಶ್ವರಂ ವಿಷ್ಣುವಂಸೋದ್ಭವಂ ಸುವರ್ಣ ಗರುಡಧ್ವಜವಂ ಯಾದವ ಕುಳಕುಮಳ ಕಳಿಕಾವಿಕಾಸ ಭಾಸ್ಕರಂ ಯರಿರಾಯ ಜಗಝುಂಪಮಾಳವರಾಯ ಮದನ ತ್ರಿಣೇತ್ರ ಗೂರ್ಜ್ಜರರಾಯ ಭಯಂಕರ ತೆಲುಂಗರಾಯ ಸ್ತಾಪನಾಚಾರ್ಯ್ಯ ಮಿತ್ಯಾದಿ ನಾಮಾವಳಿ ವಿರಾಜಿತ ವಿಜಯ ಪ್ರವೂಢ ಭುಜಬಳ ಪ್ರತಾಪ ಚಕ್ರವರ್ತ್ತಿ ರಾಯ ನಾರಾಯಣ ಶ್ರೀ ಕಂನರದೇವರ ಪೃಥುವಿರಾಜ್ಯ ಮು[ತ್ತರೋತ್ತರಾಭಿವೃದ್ಧಿ ಪ್ರ] ವರ್ಧ್ಧ[ಮಾ] ಚಂದಾರ್ಕ ತಾರಂಬರಂ ಸಲ್ಲುತ್ತಿಯಿರೆ ॥" ಎಂದು ಗುಣಗಾನ ಮಾಡಿದೆ.

ಮೇಲೆ ಉಲ್ಲೇಖಿಸಲಾದ ಶಾಸನದ ಕಾಲಕ್ಕಿಂತಲೂ ಮುಂಚೆ ಕ್ರಿ.ಶ.939ರ ಸುಮಾರಿಗೆ ಕನ್ನರದೇವನ ಆಳ್ವಿಕೆಯಲ್ಲಿ ಅವನ ಕೈಕೆಳಗೆ ಗಂಗಪೆರ್ಮಾನಾಡಿ ಆಳ್ವಿಕೆ ಮಾಡುತ್ತಿದ್ದ. ಇವನ ಕೈಕೆಳಗೆ ಬುಟ್ಟಯ್ಯನೆಂಬುವವನು ಎಡದೊರೆ–2000ನ್ನು ಆಳುತ್ತಿದ್ದ. ಭೂತುಗ ಪೆರ್ಮಾನಾಡಿಯು ಬೆಳ್ವಲ–300, ಕುಕ್ಕನೂರು–30, ಕೆಳವಾಡಿ–300ರ ಜೊತೆಗೆ ಮಾಸವಾಡಿ–140ರಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ಶಾಸನ[36]ದಲ್ಲಿ ಉಲ್ಲೇಖಿತವಾಗಿರುವ ಅಂಶ.

**ಕಿಸುಕಾಡು–70** : ಇದು ಎಪ್ಪತ್ತು ಗ್ರಾಮಗಳ ಸಂಗಮವಾಗಿ, "ಇಂದಿನ

ಬಿಜಾಪೂರ ಜಿಲ್ಲೆಯ ಹುನಗುಂದ ತಾಲೂಕಿನ ಕೆಲವು ಗ್ರಾಮಗಳನ್ನು ಹಾಗೂ ಬದಾಮಿ ತಾಲೂಕಿನ ಕೆಲವು ಗ್ರಾಮಗಳನ್ನು ಧಾರವಾಡ ಜಿಲ್ಲೆಯ ರೋಣಾ ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ವಿಕ್ರಮಾದಿತ್ಯನ ಕಾಲದಲ್ಲಿ ಇದರ ಮುಖ್ಯಗ್ರಾಮ ವಿಕ್ರಮಪುರವಾಗಿತ್ತು. ಈ ವಿಕ್ರಮಪುರವು ಇಂದಿನ ಬಿಜಾಪೂರ ಜಿಲ್ಲೆಯ ಅರಸಿಬೀಡಿ ಗ್ರಾಮವೇ ಆಗಿದೆ."[37] ಯಲಬುರ್ಗಾ ತಾಲೂಕಿನ ಸಂಕನೂರು ಗ್ರಾಮದಲ್ಲಿರುವ ಶಾಸನಗಳಲ್ಲಿ ಈ ಕಿಸುಕಾಡು-70ರ ಉಲ್ಲೇಖಗಳು ಸಿಗುತ್ತವೆ.

**ಗಂಗವಾಡಿ-96,000 :** ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಾಗಿರುವ ವಿಭಾಗಗಳಲ್ಲಿ ಗಂಗವಾಡಿ-96000 ವಿಭಾಗವು ಒಂದು. ಈ ಜಿಲ್ಲೆಯ ಉಲ್ಲೇಖಿತ ಶಾಸನಗಳಲ್ಲಿ ಬಹುದೊಡ್ಡ ವಿಭಾಗವಾಗಿತ್ತು. "ಗಂಗಮನೆತನದ ಅರಸರ ಆಡಳಿತಕ್ಕೊಳಪಟ್ಟಿದ್ದ ಪ್ರದೇಶಗಳನ್ನು ಗಂಗವಾಡಿ ಎಂದು ಕರೆಯಲಾಗಿದೆ. ಈ ವಿಭಾಗವು 96,000 ಗ್ರಾಮಗಳನ್ನು ಒಳಗೊಂಡಿತ್ತು. ಇಂದಿನ ಹಾಸನ, ತುಮಕೂರು, ಶಿವಮೊಗ್ಗ, ಚಿಕ್ಕಮಂಗಳೂರು, ಕೊಡಗು, ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿಯ ಗ್ರಾಮಗಳನ್ನು, ತಮಿಳುನಾಡು ಮತ್ತು ಆಂಧ್ರಪ್ರದೇಶದ ಕೆಲವು ಗ್ರಾಮಗಳನ್ನು ಒಳಗೊಂಡ ಇದು ಒಟ್ಟು 96,000 ಗ್ರಾಮಗಳಿಂದ ಕೂಡಿದ ದೊಡ್ಡ ವಿಭಾಗವಾಗಿತ್ತು."[38] ಇಂತಹ ದೊಡ್ಡ ವಿಭಾಗದ ಕುರಿತು ಕೊಪ್ಪಳ ಜಿಲ್ಲೆಯಲ್ಲಿ ಒಂದೇ ಒಂದು ಶಾಸನದಲ್ಲಿ ಉಲ್ಲೇಖವಿರುವುದು ನನ್ನ ಗಮನಕ್ಕೆ ಬಂದಿದೆ. ಯಲಬುರ್ಗಾ ತಾಲೂಕಿನ ಅರಕೇರಿ ಗ್ರಾಮದ ಬಸವಣ್ಣ ದೇವರ ಗುಡಿಯ ನೆಲಕ್ಕೆ ಹಾಸಿರುವ ಕಲ್ಲಿನಲ್ಲಿ ಕೆತ್ತಿರುವ ಕ್ರಿ.ಶ.940ರ ಶಾಸನ[39]ದಲ್ಲಿ ಕನ್ನೇರುದೇವನು ಆಳ್ವಿಕೆಯ ಅವಧಿಯಲ್ಲಿ ಗಂಗರ ಬಿರುದುಗಳನ್ನುಳ್ಳ ಪೆರ್ಮಾನಡಿಯು ಗಂಗವಾಡಿ-96,000ನ್ನು ಮತ್ತು ಇನ್ನಿತರ ಪ್ರಾಂತಗಳನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈ ಶಾಸನವು ತೃಟಿತಗೊಂಡಿದ್ದರಿಂದ ಕಾಲದ ಕುರಿತು ಭಿನ್ನ ಹೇಳಿಕೆ ಗಳಿರುವುದನ್ನು ಕಾಣಬಹುದಾಗಿದೆ. ಹಾಗೂ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

ಶಾತವಾಹನರ ಅವನತಿಯ ಕಾಲದಲ್ಲಿ ಅಂದರೆ ಕ್ರಿ.ಶ.2ನೇ ಶತಮಾನದಲ್ಲಿ ಗಂಗವಾಡಿಯ ಹೆಸರು ಪ್ರಾರಂಭವಾಯಿತೆಂದು ಲೂಯಿಸ್ ರೈಸ್‌ರು ಹೇಳಿದ್ದಾರೆ. ಮುಂದುವರೆದು ಇದರ ಮೇರೆಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. "ಈ ವಿಭಾಗದ ವಿಸ್ತಾರವು ಉತ್ತರಕ್ಕೆ ಮರಂದರಿ, ಪೂರ್ವಕ್ಕೆ ತೊಂಡನಾಡು, ಪಶ್ಚಿಮಕ್ಕೆ ಸಮುದ್ರ, ದಕ್ಷಿಣಕ್ಕೆ ಕೊಂಗನಾಡವರೆಗೂ ಹಬ್ಬಿಕೊಂಡಿತ್ತು. ಕಾವೇರಿಯಿಂದ ತುಂಗಭದ್ರಾದವರೆಗೂ ಹಬ್ಬಿತ್ತೆಂದು ಸ್ಥೂಲವಾಗಿ ಹೇಳಬಹುದಾಗಿದೆ. ಹಾಗೆಯೇ ಇದರ ರಾಜಧಾನಿ 'ಕುವಳಾಲ' ಅಂದರೆ ಇಂದಿನ ಕೋಲಾರ ಆಗಿದ್ದಿತು. ಗಂಗವಾಡಿ 96,000ದ ಉಲ್ಲೇಖ ಅನೇಕ ಶಾಸನದಲ್ಲಿ ಕಂಡು ಬರುವುದನ್ನು ನಾವು ಕಾಣುತ್ತೇವೆ."[40] ಎಂದು ಹೇಳಿದ್ದಾರೆ.

**ಕರಡಿಕಲ್ಲು–300** : ಈ ವಿಭಾಗವು ಲಿಂಗಸೂಗೂರು ತಾಲೂಕಿನಲ್ಲಿರುವ ಒಂದು ಗ್ರಾಮವಾಗಿದೆ. ಈ ಕರಡಕಲ್ಲು ಗ್ರಾಮವೇ ವಿಭಾಗದ ಹಿಂದಿನ ಮುಖ್ಯ ಪಟ್ಟಣವಾಗಿತ್ತು. "ಇದರ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ.ಶ.927ರ ಎರಡೋಣಿ ಶಾಸನವಾಗಿದೆ. ಶಾಸನವು ಇದನ್ನು 'ಕರಡಿಕಲ್ನಾಡು' ಎಂದು ಕರೆದಿದೆ. ಮುಂದೆ ಕ್ರಿ.ಶ.1046ರ ವೇಳೆಗೆ ಅದು ಮೂರುನೂರು ಹಳ್ಳಿಗಳ ವಿಭಾಗವಾಗಿ ರೂಪಗೊಂಡಿತ್ತು. ಕ್ರಿ.ಶ.1191ರ ವೇಳೆಗೆ ಈ ವಿಭಾಗದ ರಾಜಧಾನಿಯು ಮುದಗಲ್ ಪಟ್ಟಣಕ್ಕೆ ಸ್ಥಳಾಂತರವಾಯಿತು."[41] ಈ ವಿಭಾಗವು ಮೂರುನೂರು ಗ್ರಾಮಗಳ ಸಂಗಮವಾಗಿತ್ತು. ಆದರೆ ಆ ಮೂರುನೂರು ಗ್ರಾಮಗಳು ಯಾವವು ಎಂದು ನಿಖರವಾಗಿ ಗುರುತಿಸಲು ಸಾಧ್ಯವಾಗಿದ್ದರೂ "ಅಗ್ರಹಾರವಾಗಿದ್ದ ಬನ್ನಿಗೋಳ, ಭತ್ತಗ್ರಾಮವಾದ ಲಿಂಗಸೂಗೂರು, ತೆಂಗೋಳ, ಎರಡೋಣಿ, ನೊಂದವಾಡಿಗಿ, ಕಲ್ಲೂರು ಮತ್ತು ಮಸ್ಕಿ ಗ್ರಾಮಗಳು, ಇಂದಿನ ಲಿಂಗಸೂಗೂರು ತಾಲೂಕಿನ ಎಲ್ಲಾ ಹಳ್ಳಿಗಳು ಮತ್ತು ಕುಷ್ಟಗಿ, ಹುನಗುಂದ, ಮಾನ್ವಿ ಹಾಗೂ ಸಿಂಧನೂರು ತಾಲೂಕಿನ ಹಳ್ಳಿಗಳು ಈ ವಿಭಾಗದಲ್ಲಿ ಸಮಾವೇಶ ಗೊಂಡಿದ್ದವೆಂದು ಹೇಳಬಹುದು."[42] ಈ ವಿಭಾಗವು ಚಾಲುಕ್ಯ ಜಗದೇಕಮಲ್ಲ ದೇವನು (ಇಮ್ಮಡಿ ಜಯಸಿಂಹ) ಕ್ರಿ.ಶ.1024ರಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಅವನ ಪತ್ನಿಯಾದ ಪದ್ಮಲದೇವಿಯು ಕರಡಿಕಲ್ಲು–300ರ ಬಳಿ ಗೋವನ್ತಿಗೆಯ ಸ್ವಯಂಭೂ ಕಲಿದೇವಸ್ವಾಮಿಗೆ ಕರಿನೆಲ, ಭೂಮಿ, ತೋಟವನ್ನು ದಾನ ಕೊಟ್ಟ ಬಗ್ಗೆ ಒಂದು ಶಾಸನ[43]ದಿಂದ ತಿಳಿದು ಬರುತ್ತದೆ. ಈ ಶಾಸನದಲ್ಲಿ ಪದ್ಮಲದೇವಿಯನ್ನು ಅನವರತ ಪರಮಕಲ್ಯಾನಭ್ಯುದಯ ಸಹಸ್ರ ಫಳಭೋಗಭಾಗಿ ನೀ ದ್ವಿತೀಯ ಲಕ್ಷ್ಮೀ ಸಮಾನೇ ಎಂದು ವರ್ಣಿಸಿದೆ. ತದನಂತರದಲ್ಲಿ ಈ ವಿಭಾಗದಲ್ಲಿ ಕ್ರಿ.ಶ.1045ಕ್ಕೆ ಕಲ್ಯಾಣರ ತ್ರೈಲೋಕ್ಯಮಲ್ಲನು (ಒಂದನೇ ಸೋಮೇಶ್ವರ) ಆಳ್ವಿಕೆಯನ್ನು ಮಾಡುತ್ತಿದ್ದನೆಂದು ಮತ್ತೊಂದು ಶಾಸನ[44]ದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ತ್ರೈಲೋಕ್ಯಮಲ್ಲನು ಚಾಮುಂಡ ಭಟ್ಟೋಪಾಧ್ಯಾಯನಿಗೆ ಭೂಮಿಯನ್ನು ದಾನವಾಗಿ ಕೊಟ್ಟ ಬಗ್ಗೆ ತಿಳಿದು ಬರುತ್ತದೆ. ಉಳಿದಂತೆ ಕೊಪ್ಪಳ ಜಿಲ್ಲೆಯ ಯಾವುದೇ ಶಾಸನದಿಂದ ಕರಡಿಕಲ್ಲು–300ರ ಬಗ್ಗೆ ಮಾಹಿತಿಗಳು ಲಭ್ಯವಾಗುವುದಿಲ್ಲ.

**ನೊಳಂಬವಾಡಿ–32,000 :** "ನೊಳಂಬವಾಡಿ (ನೊಣಂಬವಾಡಿ) ಎಂಬ ಶಬ್ದಕ್ಕೆ ತಮಿಳಿನಲ್ಲಿ ದೊಡ್ಡಭಾಗ ಎಂದು ಅರ್ಥವಿದೆ. ಈ ಪ್ರದೇಶವನ್ನು ಆಳುತ್ತಲಿದ್ದ ಪಲ್ಲವರಿಗೆ ಗಂಗರ, ರಾಷ್ಟ್ರಕೂಟರ, ಚಾಲುಕ್ಯರ ಕಾಲದಲ್ಲಿ 'ನೊಣಂಬರು' ಅಥವಾ 'ನೊಳಂಬರು' ಎಂದು ಕರೆಯಲಾಗಿದೆ. ಆರಂಭದಲ್ಲಿ ಈ ನೊಳಂಬವಾಡಿಯ ರಾಜಧಾನಿ 'ಪೆಂಜೆರು' ಅಥವಾ 'ಹೆಂಜೆರು' ಆಗಿತ್ತು. ಈಗಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ 'ಹೇಮಾವತಿ' ಗ್ರಾಮವೇ ಪುರಾತನ 'ಹೆಂಜೇರು' ಒಂದು ಕಾಲದಲ್ಲಿ ಬಳ್ಳಾರಿ ಜಿಲ್ಲೆಯ ಕಂಪಲಿ(ಈಗಿನ ಕಂಪ್ಲಿ)ಯು ಇದರ ರಾಜಧಾನಿಯಾಗಿತ್ತು. ರಾಷ್ಟ್ರಕೂಟರ

ಕಾಲದಲ್ಲಿ ಚಿಕ್ಕ ವಿಭಾಗವಾಗಿದ್ದು ಇದು ಮುಂಚೆ 32,000 ಗ್ರಾಮಗಳನ್ನು ಹೊಂದಿ ದೊಡ್ಡ ವಿಭಾಗವಾಗಿ ಪರಿಣಮಿಸಿತ್ತು."[45] ಈ ವಿಭಾಗವು 'ಈಗಿನ ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ತುಮಕೂರು ಜಿಲ್ಲೆಯ ಕೆಲವು ಗ್ರಾಮಗಳನ್ನು ಆಂಧ್ರಪ್ರದೇಶದ ಅನಂತಪುರದ ಕರ್ನೂಲ ಜಿಲ್ಲೆಯ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಇದರ ಉಪ ವಿಭಾಗಗಳೆಂದರೆ ಅತ್ತಿಗೇರಿ–12, ಕೋಗುಳಿ–500, ಕದಂಬಳಿ–1,000, ಹಡುವಗೆರೆ–500, ಕುಕ್ಕವಾಡಿ–300, ಸಿಂಧವಾಡಿ–1000, ಕಣಿಮಕಲ್ಲು–300 ಮತ್ತು ರೊದ್ದ–300 ಆಗಿವೆ.[46] ಈ ವಿಭಾಗವು ಪ್ರಮುಖ ವಿಭಾಗಗಳಲ್ಲಿ ಒಂದಾಗಿತ್ತು. ಇದರ ಕುರಿತು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ದೊರೆತ ಶಾಸನದಿಂದ ಮಾಹಿತಿ ಉಪಲಬ್ಧವಿದೆ. ಈ ವಿಭಾಗದ ಕುರಿತು ಕೊಪ್ಪಳ ಜಿಲ್ಲೆಯಲ್ಲಿ ಕೇವಲ ಒಂದೇ ಶಾಸನದಲ್ಲಿ ಉಲ್ಲೇಖ ಬಂದಿರುವುದನ್ನು ಕಾಣಬಹುದಾಗಿದೆ. ಕ್ರಿ.ಶ.1078ರಲ್ಲಿ ಚಾಲುಕ್ಯ ತ್ರಿಭುವನಮಲ್ಲನು ಕಲ್ಯಾಣ ಆಳುತ್ತಿದ್ದಾಗ ನೊಳಂಬವಾಡಿ–32,000ರನ್ನು ಆಳುತ್ತಿದ್ದ. ಅವನ ಮಾಂಡಳಿಕನಾದ ತ್ರಿಭುವನಮಲ್ಲ ಪಾಂಡ್ಯ ವೀರ ನೊಳಂಬ ಪಲ್ಲವ ಪೆರ್ಮಾಡಿಯು ಮಲಯಾಟಿ ಪಂಡಿತ ದೇವರಿಗೆ ಬಲಕುಂದೆ–300ನ್ನು ದಾನವಾಗಿ ಬಿಟ್ಟ ಮಾಹಿತಿ ದೊರೆಯುತ್ತದೆ.[47]

**ಬಲ್ಲಕುಂದೆ–300** : "ಮೂರುನೂರು ಗ್ರಾಮಗಳನ್ನು ಒಳಗೊಂಡಿರುವ ಈ ವಿಭಾಗವು ಬಳ್ಳಾರಿ ಜಿಲ್ಲೆಯ ಶಿರಗುಪ್ಪಾ ತಾಲೂಕು, ಬಳ್ಳಾರಿ ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಶಿರಗುಪ್ಪಾ ಶಾಸನದಲ್ಲಿ 'ಬಲಕುನ್ದೆ ಮೂನೂ" ಉಲ್ಲೇಖ ಬರುತ್ತದೆ. ತೆಕ್ಕಕಲ್ಲ–12 ಇದರ ಉಪವಿಭಾಗವಾಗಿದೆ. ಇದರ ಮಿಕ್ಕ ಉಪವಿಭಾಗಗಳು ತಿಳಿದು ಬರುವುದಿಲ್ಲ."[48] ಈ ಆಡಳಿತದ ವಿಭಾಗದ ಉಲ್ಲೇಖವಿರುವ ಒಂದು ಶಾಸನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿದೆ. ಗಂಗಾವತಿ ತಾಲೂಕಿನ ವಿಪ್ರದಲ್ಲಿ ದೊರೆತ ಶಾಸನದಲ್ಲಿ ಚಾಲುಕ್ಯ ತ್ರಿಭುವನಮಲ್ಲನ ಮಾಂಡಳಿಕನಾದ ತ್ರಿಭುವನಮಲ್ಲ ಪಾಂಡ್ಯ ವೀರ ನೊಳಂಬ ಪಲ್ಲವ ಪೆರ್ಮಾನಡಿಯು ಮಲೆಯಾಱ ಪಣ್ಡಿತ ದೇವರಿಗೆ ಮೂನ್ನೂಱಱ ಕಪ್ಪಣದ ಬಳಿಯ ಬಾಡವಾದ ಇಕುಪಱವನ್ನು ಕಪಿಲೆಯ ಗವಱೇಶ್ವರದ ಸಿದ್ಧೇಶ್ವರ ದೇವರಿಗಾಗಿ ಸರ್ವ್ವನಮಸ್ಯವಾಗಿ ಬಿಡುವ[49] ಉಲ್ಲೇಖವಿದೆ.

**ಎರಡಾಱುನೂರ** : "ಬೆಳ್ವಲ–300 ಪುರಿಗೆರೆ–300 ಇವೆರಡನ್ನು ನಿರ್ದೇಶಿಸಲು ಶಾಸನಗಳಲ್ಲಿ 'ಎರಡಾಱುನೂರ' ಎಂಬ ಶಬ್ದವನ್ನು ಬಳಸಲಾಗಿದೆ. ಎರಡಾಱುನೂರ ಎಂದರೆ ಎರಡು ಆರು ನೂರುಗಳಲ್ಲ; ಪುಲಿಗೇರಿ–300, ಬೆಳ್ವಲ–300 ಎರಡೂ ಸೇರಿ ಆರು ನೂರು ಎಂದು ಅರ್ಥ ಮಾಡಿಕೊಳ್ಳಬೇಕು. ಎಂ.ಎಂ.ಕಲಬುರ್ಗಿಯವರು ಮೂಲ ಬೆಳ್ವಲ ಆರುನೂರು ಗ್ರಾಮಗಳಿಂದ ಅಖಂಡವಾಗಿದ್ದು ಯಾವುದೋ ಒಂದು ಕಾಲದಲ್ಲಿ ದಕ್ಷಿಣ ಬೆಳ್ವಲಕ್ಕೆ ಪುಲಿಗೇರಿ ಎಂಬ ಹೆಸರು ವ್ಯಕ್ತವಾಗಿಬೇಕು ಎಂದು

ಹೇಳಿದ್ದಾರೆ. ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಲ್ಲಿಯೂ ಎರಡನ್ನು ಬೇರೆ ಬೇರೆಯಾಗಿ ಹೇಳಿ ಕೊನೆಗೆ ಅವೆರಡನ್ನು ಕೂಡಿಸಿ ಹೇಳಿರುವುದನ್ನು ಕಾಣುತ್ತೇವೆ."[50] ಈ ವಿಭಾಗವು ಪುಲಿಗೇರಿ–300ರಲ್ಲಿ ಪ್ರಸ್ತಾಪವಾಗಿರುವುದನ್ನು ಗಮನಿಸಬಹುದು. ಇದು ಮೊದಲು ಪುಲಿಗೇರಿಯ ಭಾಗವಾಗಿ ನಂತರ ಬೇರೆ ವಿಭಾಗವಾಗಿ ಬೆಳೆದಿರಬೇಕೆನಿಸುತ್ತದೆ. ಈ ವಿಭಾಗದ ಕುರಿತು ಕೊಪ್ಪಳ ಜಿಲ್ಲೆಯಲ್ಲಿ ಕೇವಲ ಒಂದು ಶಾಸನದಲ್ಲಿ ಉಲ್ಲೇಖವಿದೆ. ಅದುವೇ ಯಲಬುರ್ಗಾ ತಾಲೂಕಿನ ತಳಕಲ್ಲು ಗ್ರಾಮದ ಕಲ್ಲೇಶ್ವರ ದೇವರ ಬಳಿ ಇರುವ ಶಾಸನದಲ್ಲಿ "ಶ್ರೀಬಲ್ಲವರಸ ಪ್ರಸಾದೋಪಲಬ್ಧಿಯಿಂ ಎರಡಾಱುನೂಱುವಂ ಬನವಾಸಿ ಪನ್ನಿಚ್ಛಾಸಿರಮುಮಂ ನಿರಾಕುಳ ಮಾಳುತ್ತಿದೆ ಸ್ವಸ್ತಿಸಮಸ್ತ."[51]ಎಂದು ಉಲ್ಲೇಖವಿದೆ. ಅಂದರೆ ಆಹವಮಲ್ಲನ ಆಳ್ವಿಕೆಯಲ್ಲಿ ಇವನ ಸಾಮಂತನಾದ ಸೋಭರಸ ಎರಡಾರುನೂರನ್ನು ಇತರ ವಿಭಾಗಗಳೊಂದಿಗೆ ಆಳುತ್ತಿದ್ದನೆಂದು ಪ್ರಸ್ತಾಪಿಸುತ್ತದೆ.

**ಶಾಸನೋಕ್ತ ಆಡಳಿತ ಘಟಕಗಳು/ವಿಭಾಗಗಳು :**

| ಕ್ರ.ಸಂ | ಆಡಳಿತ ವಿಭಾಗಗಳು/ಘಟಕಗಳು | ಕಾಲ | ಉಲ್ಲೇಖಿತ ಶಾಸನ ಸ್ಥಳ |
|---|---|---|---|
| 01. | ಎಡೆದೊರೆ–2000 | – | ನರೇಗಲ್ |
| 02. | ಎಡೆದೊರೆ–2000 | ಕ್ರಿ.ಶ. 939 | ಇಟಗಿ |
| 03. | ಎಡೆದೊರೆ–2000 | ಕ್ರಿ.ಶ.1045 | ಗೋತಗಿ |
| 04. | ಎಡೆದೊರೆ–2000 | ಕ್ರಿ.ಶ.997 | ಹಿರೇಮನ್ನಾಪುರ |
| 05. | ಕುಕ್ಕನೂರು–30 | ಕ್ರಿ.ಶ.964 | ಉಪ್ಪಿನಬೆಟಗೇರಿ |
| 06. | ಕುಕ್ಕನೂರು–30 | ಕ್ರಿ.ಶ.1002 | ಕಲ್ಲೂರು |
| 07. | ಕುಕ್ಕನೂರು–30 | ಕ್ರಿ.ಶ.1132 | ಕಲ್ಲೂರು |
| 08. | ಕುಕ್ಕನೂರು–30 | – | ಕಲ್ಲೂರು |
| 09. | ಕುಕ್ಕನೂರು–30 | ಕ್ರಿ.ಶ.1005 | ಕುಕ್ಕನೂರು |
| 10. | ಕುಕ್ಕನೂರು–30 | ಕ್ರಿ.ಶ.1178 | ಕುಕ್ಕನೂರು |
| 11. | ಕುಕ್ಕನೂರು–30 | ಕ್ರಿ.ಶ.991 | ತಳಕಲ್ಲು |
| 12. | ಕುಕ್ಕನೂರು–30 | ಕ್ರಿ.ಶ.939 | ಇಟಗಿ |
| 13. | ಕುಕ್ಕನೂರು–30 | ಕ್ರಿ.ಶ.1108 | ಇಟಗಿ |
| 14. | ಕೆಳವಾಡಿ–300 | – | ನೆರೆಗಲ್ |
| 15. | ಕೆಳವಾಡಿ–300 | ಕ್ರಿ.ಶ.939 | ಇಟಗಿ |

| | | | |
|---|---|---|---|
| 16. | ಕೆಳವಾಡಿ–300 | ಕ್ರಿ.ಶ.1018 | ಪುರ |
| 17. | ಬೆಳ್ಳಟ್ಟೆ–12 | ಕ್ರಿ.ಶ.12ನೇಶ. | ಹಿರೇಸಿಂದೋಗಿ |
| 18. | ಕೋಗುಳಿ–500 | ಕ್ರಿ.ಶ.12ನೇಶ. | ಹ್ಯಾಟಿ |
| 19. | ಬನವಾಸಿ–12000 | ಕ್ರಿ.ಶ.1002 | ಕಲ್ಲೂರು |
| 20. | ಬನವಾಸಿ–12000 | ಕ್ರಿ.ಶ.1312 | ಸಂಕನೂರು |
| 21. | ಬನವಾಸಿ–12000 | ಕ್ರಿ.ಶ.991 | ತಳಕಲ್ಲು |
| 22. | ನರೆಯಂಗಲ್ಲು–12 | – | ಕಲ್ಲೂರು |
| 23. | ನರೆಯಂಗಲ್ಲು–12 | ಕ್ರಿ.ಶ.1108 | ಇಟಗಿ |
| 24. | ಬೆಳುವೊಲ–300 | ಕ್ರಿ.ಶ.1312 | ಸಂಕನೂರು |
| 25. | ಬೆಳುವೊಲ–300 | ಕ್ರಿ.ಶ.939 | ಇಟಗಿ |
| 26 | ಬೆಳುವೊಲ–300 | ಕ್ರಿ.ಶ.1108 | ಇಟಗಿ |
| 27 | ಬೆಳುವೊಲ–300 | ಕ್ರಿ.ಶ.1183 | ಇಟಗಿ |
| 28 | ಬೆಳುವೊಲ–300 | ಕ್ರಿ.ಶ.1005 | ಕುಕ್ಕನೂರು |
| 29 | ಮಾಸವಾಡಿನಾಡು–140 | ಕ್ರಿ.ಶ.1312 | ಸಂಕನೂರು |
| 30 | ಮಾಸವಾಡಿನಾಡು–140 | ಕ್ರಿ.ಶ.939 | ಇಟಗಿ |
| 31 | ಕಿಸುಕಾಡು–70 | ಕ್ರಿ.ಶ.1312 | ಸಂಕನೂರು |
| 32 | ಕಿಸುಕಾಡು–70 | – | ಸಂಕನೂರು |
| 33 | ಕಿಸುಕಾಡು–70 | ಕ್ರಿ.ಶ.1172 | ಚಳಗೇರಿ |
| 34 | ಗಂಗಾವಾಡಿ–96000 | – | ಸಂಕನೂರು |
| 35 | ಕರಡಿಕಲ್ಲು–300 | ಕ್ರಿ.ಶ.1024 | ಗೋತಗಿ |
| 36 | ಕರಡಿಕಲ್ಲು–300 | ಕ್ರಿ.ಶ.1045 | ಗೋತಗಿ |
| 37 | ನೊಳಂಬವಾಡಿ–32000 | ಕ್ರಿ.ಶ.1094 | ವಿಪ್ರ |
| 38 | ಬಲ್ಲಕುಂದೆ–300 | ಕ್ರಿ.ಶ.1094 | ವಿಪ್ರ |
| 39 | ಎಱಡಾಱುನೂಱ | ಕ್ರಿ.ಶ.991 | ತಳಕಲ್ಲು |

## II–ಆಡಳಿತ ವ್ಯವಸ್ಥೆ

ಕೊಪಣನಾಡು ಎಂದು ಪ್ರಸಿದ್ಧಿ ಪಡೆದು ಅನೇಕ ಅರಸು ಮನೆತನಗಳನ್ನು ಕಂಡ ಕೊಪ್ಪಳ ಜಿಲ್ಲೆಯ ಇತಿಹಾಸವನ್ನು ಶಾಸನಗಳ ಮುಖಾಂತರ ಗಮನಿಸಿದಾಗ ತನ್ನದೇ ಆದ ಹಿರಿಮೆಯನ್ನು ಮೆರೆದಿರುವುದು ಕಂಡು ಬರುತ್ತದೆ. ಜಿಲ್ಲೆಯನ್ನಾಳಿದ ಅರಸ, ರಾಣಿ, ಮಹಾಮಂಡಳೇಶ್ವರ, ಮಹಾಸಾಮಂತ, ದಂಡನಾಯಕ ಹೀಗೆ ಮುಂತಾದವರನ್ನು ಕುರಿತು ಶಾಸನಗಳಲ್ಲಿಯ ವಿವರಗಳನ್ನಾಧರಿಸಿ ವಿವೇಚಿಸಲಾಗಿದೆ.

**ಚಕ್ರವರ್ತಿ :**

"ಚಕ್ರವರ್ತಿ–ಅರಸು–ಮನ್ನೆಯ ಈ ಮೂರು ಶಬ್ದಗಳಲ್ಲಿ ಚಕ್ರವರ್ತಿ ಮತ್ತು ಅರಸ (ರಾಜ) ಶಬ್ದಗಳನ್ನು ಅನೇಕರು ಏಕಾರ್ಥ ಪದವಾಗಿ ಉಪಯೋಗಿಸುತ್ತಾರೆ. ಆದರೆ ಈ ಎರಡೂ ಶಬ್ದಗಳು ಭಿನ್ನ ಅರ್ಥಗಳನ್ನು ನಿರ್ದೇಶಿಸುತ್ತವೆ. ಇಡೀ ಸಾಮ್ರಾಜ್ಯಕ್ಕೆ ಒಡೆಯನಾಗಿದ್ದವನಿಗೆ 'ಚಕ್ರವರ್ತಿ'ಎಂದು ಕರೆಯಲಾಗುತ್ತಿತ್ತು. ಮಹಾಮಂಡಳೇಶ್ವರರು, ಮಹಾಸಾಮಂತರು ಇವನ ಕೆಳಗಿನ ಅಧಿಕಾರಿಗಳಾಗಿದ್ದಾರೆ. ಮಹಾರಾಜಾಧಿರಾಜನಾದ ಇವನು ಇಡೀ ಸಾಮ್ರಾಜ್ಯಕ್ಕೆ ಒಬ್ಬನೇ ಇರುತ್ತಾನೆ. ಅಧಿಕಾರದಲ್ಲಿ ಎಲ್ಲರಿಗಿಂತ ದೊಡ್ಡವನಾಗಿದ್ದಾನೆ. ಇವನನ್ನು ಚಕ್ರವರ್ತಿ ಎಂದೇ ಕರೆಯಬೇಕು."[52] ರಾಜನು ಕೇವಲ ರಾಜ್ಯ ಕ್ಕೆ ಒಡೆಯನಾದರೆ ಚಕ್ರವರ್ತಿಯು ಇಂತಹ ಅನೇಕ ರಾಜ್ಯಗಳ ಸಂಗಮವಾದ ಸಾಮ್ರಾಜ್ಯಕ್ಕೆ ಒಡೆಯನಾಗಿದ್ದನು. ಚಕ್ರವರ್ತಿಯು ಕೇಂದ್ರಾಡಳಿತದಲ್ಲಿ ಸಾರ್ವಭೌಮನಾಗಿದ್ದನು. "ಕೇಂದ್ರಾಡಳಿತದಲ್ಲಿ ಚಕ್ರವರ್ತಿ ಮತ್ತು ಅವನ ಮಂತ್ರಿಮಂಡಲ ಪ್ರಮುಖವಾದರೂ ಚಕ್ರವರ್ತಿಯ ಕೈಯಲ್ಲಿಯೇ ರಾಜ್ಯದ ಸಮಸ್ತ ಸೂತ್ರಗಳಿರುತ್ತಿದ್ದವು. ಅವನ ಮನೋಬಲಗಳ ಮೇಲೆ ದೇಶದ ಕಾರ್ಯಗಳು ರೂಪತಳೆಯುತ್ತಿದ್ದವು. ಚಕ್ರವರ್ತಿಗಾಗಿ ನಮ್ಮ ನಾಡಿನ ಜನ ತೆತ್ತ ಬೆಲೆ ಅಪೂರ್ವವಾದುದು ಅದು ಮಳೆ ಬೆಳೆಗಳಿಗಿಂತ ದೊಡ್ಡದಾಗಿದೆ."[53] ಚಕ್ರವರ್ತಿಯು ತನ್ನ ಅಧೀನ ಅರಸರ ಮೇಲೆ ಸದಾ ನಿಗಾ ವಹಿಸುತ್ತಿದ್ದನು. ತನ್ನ ಆದೇಶಗಳನ್ನು ಪಾಲಿಸದವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳುತ್ತಿದ್ದನು. ಇದರಿಂದಾಗಿ ಅಧಿಕಾರಿವರ್ಗದವರು ಚಕ್ರವರ್ತಿಗಳನ್ನು ಗೌರವದಿಂದ ಕಾಣುತ್ತಿದ್ದರು. ಅಲ್ಲದೇ ಕಾಲಕಾಲಕ್ಕೆ ಸರಿಯಾಗಿ ಕಪ್ಪಕಾಣಿಕೆ, ತೆರಿಗೆಗಳನ್ನು ಸಲ್ಲಿಸಿ ನಿರ್ಭಿತರಾಗುತ್ತಿದ್ದರು. ಒಂದು ವೇಳೆ ಕಾಣಿಕೆ ಸಲ್ಲಿಸುವುದು ನಿಲ್ಲಿಸಿದರೆ ಚಕ್ರವರ್ತಿಯ ಆಕ್ರಮಣದ ಪರಿಣಾಮವನ್ನು ಎದುರಿಸಬೇಕಾಗುತ್ತಿತ್ತು. ಚಕ್ರವರ್ತಿಯು ಸಾಕಷ್ಟು ಸೈನಿಕರನ್ನು ಹೊಂದಿರುತ್ತಿದ್ದನು. ಅನೇಕ ಮಹಾ ಮಂಡಳೇಶ್ವರರು ಆಪತ್ ಕಾಲದಲ್ಲಿ, ಚಕ್ರವರ್ತಿಯ ಪರ ಯುದ್ಧದಲ್ಲಿ ತಮ್ಮ ಸೈನ್ಯ ಸಮೇತವಾಗಿ ಭಾಗವಹಿಸುತ್ತಿದ್ದರು. ಚಕ್ರವರ್ತಿಯು ವೈಭವದ ಜೀವನ ಸಾಗಿಸುತ್ತಿದ್ದನು. ಅನೇಕ ರಾಣಿಯರನ್ನು ಹೊಂದಿರುತ್ತಿದ್ದನು. ಇದಕ್ಕೆ ಹಲವು ಕಾರಣಗಳು ಉಂಟು. ವಂಶದ ಉದ್ಧಾರಕ್ಕಾಗಿ, ಸಾಮ್ರಾಜ್ಯದ ವಿಸ್ತಾರಕ್ಕಾಗಿ, ಪ್ರಬಲ

ವಿರೋಧಿಗಳ ವಿರುದ್ಧ ಸಂಘಟಿತರಾಗಲು ಅನೇಕ ಸಾಮಂತರ ಮಧ್ಯೆ ವೈವಾಹಿಕ ಸಂಬಂಧ ಹೊಂದಿರುವುದನ್ನು ಗಮನಿಸಬಹುದು. ಅಷ್ಟೇ ಅಲ್ಲದೇ ಅನೇಕ ರಾಣಿಯರನ್ನು ಹೊಂದಿರುವುದು ಚಕ್ರವರ್ತಿಗೆ ಪ್ರತಿಷ್ಠೆಯ ಅಂಶವಾಗಿತ್ತು. ಒಟ್ಟಾರೆಯಾಗಿ ಪ್ರತಿಷ್ಠೆಯಿಂದಲೋ, ಒತ್ತಡದ ಪರಿಸ್ಥಿತಿಯಿಂದಲೋ ಅನೇಕ ರಾಣಿಯರನ್ನು ಹೊಂದಿರುತ್ತಿದ್ದನು. ಆದರ್ಶ ಸಾಮ್ರಾಜ್ಯ ನಿರ್ಮಿಸಲು ಬೇಕಾದ ಕಟ್ಟುನಿಟ್ಟಾದ ಆಜ್ಞೆಗಳನ್ನು ಜಾರಿಗೆ ತರುತ್ತಿದ್ದನು. ಆಡಳಿತದಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದ್ದನು. ದೊಡ್ಡ ದೊಡ್ಡ ವ್ಯಾಜ್ಯಗಳು ಚಕ್ರವರ್ತಿಯ ಸಮ್ಮುಖದಲ್ಲಿ ಬಗೆಹರಿಯುತ್ತಿದ್ದವು. ಒಟ್ಟಾರೆಯಾಗಿ ಚಕ್ರವರ್ತಿಯು ಸಾಮ್ರಾಜ್ಯದ ನ್ಯಾಯದೇವನು ಆಗಿದ್ದನು. ಇಂತಹ ಚಕ್ರವರ್ತಿಯನ್ನು ಕುರಿತು ಹೆಚ್ಚಿನ ವಿವರಗಳೊಂದಿಗೆ ರಾಜಕೀಯ ಇತಿಹಾಸದ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**ರಾಣಿಯರು :**

ಕೇವಲ ಅಡುಗೆ ಮನೆಯಲ್ಲಿ ಸೀಮಿತವಾಗಿದ್ದ ಮಹಿಳೆ ಕಾಲಕಳೆದಂತೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹವಾದ ಸ್ಥಾನಗಳಿಸಿದಳು. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಷ್ಟೇ ಅಲ್ಲದೆ, ರಾಜಕೀಯ ರಂಗದಲ್ಲೂ ಕೂಡ ಪ್ರವೇಶಿಸಿ ತನ್ನ ಶಕ್ತಿ ಸಾಮರ್ಥ್ಯವನ್ನು ತೋರಿಸಿದಳು. ಸಾಂಪ್ರದಾಯಿಕ ಚೌಕಟ್ಟಿನಿಂದ ಸಿಡಿದು ನಿಂತು ಮಹಿಳೆಗೆ ಯಾವುದು ಅಸಾಧುವೋ ಅದನ್ನು ಸಾಧಿಸುವ ಸಾಧನೆಯೆಡೆಗೆ ಮೈತೊಡವಿಕೊಂಡು ನಡೆದುದನ್ನು ಕಾಣುತ್ತೇವೆ. "ಮಹಿಳೆಗೆ ಕ್ರಮವಾಗಿ ಕೌಟುಂಬಿಕ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಷ್ಟು ಸುರಕ್ಷಿತವಾದುದಲ್ಲ ರಾಜಕೀಯ ಕ್ಷೇತ್ರ. ಶಿಷ್ಟ ಪರಿಪಾಲನ, ದುಷ್ಟ ಮರ್ದನದಂಥ ಉಭಯ ಜವಾಬ್ದಾರಿಯ ಕಾರ್ಯವಲಯವಾಗಿರುವ ಇದು; ಪ್ರಜಾಹಿತಕ್ಕೋಸ್ಕರ ವೈರಿಗಳ ಕೂಡ ನಡೆಸುವ ಅಪಾಯಕಾರಿ ಜೀವನ ವ್ಯಾಪಾರವಾಗಿದೆ. ಅಂದು ದೇಹ ಸಾಮರ್ಥ್ಯ ಶೀಲ ಸಂರಕ್ಷಣೆಯ ದೃಷ್ಟಿಗಳಿಂದ ಇದು ಮಹಿಳೆ ಸಿಲುಕಿಸಿಕೊಳ್ಳಲಾರದ, ಸಿಲುಕಿಸಿಕೊಳ್ಳಬಾರದ ಕ್ಷೇತ್ರವಾಗಿದ್ದಿತು."[54]

ಚಕ್ರವರ್ತಿಯು ಅನೇಕ ಪತ್ನಿಯರನ್ನು ಹೊಂದಿರುತ್ತಿದ್ದನು. ಅದಕ್ಕೆ ಕಾರಣಗಳಿಲ್ಲದಿಲ್ಲ. ಚಕ್ರವರ್ತಿ ಹೊಂದಿದ್ದ ರಾಣಿಯರಲ್ಲಿ ಪಿರಿಯರಸಿ, ಪಿರಿಯರಸಿ ಪಟ್ಟಮಹಾದೇವಿ ಮತ್ತು ರಾಣಿಯರೆಂಬ ಮೂರು ಗುಂಪುಗಳಿದ್ದುದನ್ನು ಕಾಣುತ್ತೇವೆ. ಪಿರಿಯರಸಿಯು ಹಿರಿಯ ರಾಣಿಯಾಗಿದ್ದು ಇವಳಿಗೆ ಮಕ್ಕಳಾದರೆ ಪಿರಿಯರಸಿ ಪಟ್ಟಮಹಾದೇವಿಯೆನಿಸುತ್ತಾಳೆ. ಒಂದು ವೇಳೆ ಮಕ್ಕಳಾಗದಿದ್ದರೆ ಕೇವಲ ಪಿರಿಯರಸಿಯಾಗಿ ಉಳಿದು ಮಕ್ಕಳಿದ್ದ ಮುಂದಿನ ರಾಣಿಯು ಪಟ್ಟಮಹಾದೇವಿಯೆನಿಸಿಕೊಳ್ಳುತ್ತಿದ್ದಳು. 'ಪಟ್ಟದರಾಣಿ' ಎಂಬುದು ಚಕ್ರವರ್ತಿಯಂತೆ ಒಂದು ಪದವಿಯಾಗಿದ್ದು ಅವಳ ಸ್ಥಾನ ಇತರ ರಾಣಿಯರಿಗಿಂತ ಹಿರಿದಾಗಿತ್ತು.

ಉಳಿದವರು ವೈಭವದ ಜೀವನ ನಡೆಸುತ್ತಾ ರಾಣಿವಾಸದಲ್ಲಿರುತ್ತಿದ್ದರು. ಕೆಲವರು ಆಡಳಿತ ಕ್ಷೇತ್ರದಲ್ಲಿ ಮಿಂಚಿರುವುದಕ್ಕೆ ಆಧಾರಗಳಿವೆ. "ರಾಣಿಯರು ಪ್ರಭುವರ್ಗದ ಪ್ರಮುಖ ವ್ಯಕ್ತಿಗಳಾಗಿದ್ದರೂ ಅವರು ಯುವರಾಜ ಮತ್ತು ಇತರ ರಾಜಕುಮಾರರಂತೆ ರಾಜ್ಯದ ಬೇರೆ ಬೇರೆ ವಿಭಾಗಗಳನ್ನು ಆಳುತ್ತಿರಲಿಲ್ಲ. ಆದರೆ ಕೆಲ ವಿದ್ವಾಂಸರು ಅವರು ಸಾಮ್ರಾಜ್ಯದ ವಿವಿಧ ಪ್ರದೇಶಗಳ ಆಡಳಿತಗಳನ್ನು ನಡೆಸುತ್ತಿದ್ದರೆಂದೇ ಅಭಿಪ್ರಾಯಪಟ್ಟಿದ್ದಾರೆ. ರಾಜನು ತನ್ನ ರಾಣಿಯರನ್ನು ರಾಜ್ಯದ ಬೇರೆ ಬೇರೆ ಪ್ರದೇಶಗಳನ್ನಾಳಲು ನೇಮಿಸುತ್ತಿದ್ದನೆಂದು ಎಂ.ಚಿದಾನಂದ ಮೂರ್ತಿಯವರು ಕೆಲ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಆದರೆ ರಾಣಿಯರು ವಿಭಾಗಗಳನ್ನು ಆಳದೆ. ಕೆಲವು ಬಿಡಿಬಿಡಿಯಾದ ಅಗ್ರಹಾರವನ್ನು ಇಲ್ಲವೇ ಅವರ ಜೀವನೋಪಾಯಕ್ಕಾಗಿ ಬಿಟ್ಟ ಬಿಡಿಯಾದ ಭತ್ತಗ್ರಾಮಗಳನ್ನು ಆಳುತ್ತಿದ್ದರು."[55] ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಇಂತಹ ಮಹಾರಾಣಿಯರ ಆಳ್ವಿಕೆ, ದಾನ ಇತ್ಯಾದಿಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

**ಪದ್ಮಾವತಿ ಮತ್ತು ಬಿಜ್ಜರಸಿ :** ಬೂತುಗ ಪೆರ್ಮಾನಡಿಯ ಹೆಂಡತಿ ಪದ್ಮಾವತಿ ಮತ್ತು ಇವರ ಮಗಳಾದ ಬಿಜ್ಜರಸಿಯನ್ನು ಕ್ರಿ.ಶ.924ರ ಶಾಸನ[56]ದಲ್ಲಿ ಇವರಿಬ್ಬರ ಉಲ್ಲೇಖಗಳು ಬರುತ್ತವೆ. ಆದರೆ ಈ ಶಾಸನದಲ್ಲಿ ಬೂತುಗ ಮತ್ತು ಪದ್ಮಾವತಿಯ ಹೆಚ್ಚಿನ ಮಾಹಿತಿ ದೊರೆಯದೇ ಕೇವಲ ಅವರ ಮಗಳಾದ ಬಿಜ್ಜರಸಿಯು ಆರಾಧನ ವಿಧಾನದಿಂದ ರತ್ನತ್ರಯವನ್ನು ಸಾಧಿಸಿ ಮರಣಹೊಂದಿದ ಬಗ್ಗೆ ಮಾಹಿತಿ ಇದೆ. ಈ ಬಿಜ್ಜರಸಿಯ ಗುರು ಶ್ರೀಧರನೆಂದು ಮತ್ತು ಅವಳ ಗಂಡ ಪಲ್ಲವನೆಂದು ಹೇಳಲಾಗಿದೆ.

**ಕಾವಣಬ್ಬರಸಿ ಮತ್ತು ರಂಬಲದೇವಿ :** ಛಲದಂಕ ಗಂಗನ ಪತ್ನಿಯಾದ ಕಾವಣಬ್ಬರಸಿ ಮತ್ತು ಅವರ ಪುತ್ರಿ ರಂಬಲದೇವಿಯರನ್ನು ಒಂದು ಶಾಸನ[57]ದಲ್ಲಿ ಉಲ್ಲೇಖಿಸಿದೆ. ಈ ಶಾಸನದಲ್ಲಿ ರಂಬಲದೇವಿಯ ತಂದೆ ತಾಯಿಗಳಾದ ಕಾವಣಬ್ಬರಸಿ ಮತ್ತು ಛಲದಂಕ ಗಂಗನ ಹೆಸರುಗಳ ಪ್ರಸ್ತಾಪ ಹೊರತು ಪಡಿಸಿ ಉಳಿದಂತೆ ವಿವರಗಳು ಇಲ್ಲ. ಇಲ್ಲಿ ರಂಬಲದೇವಿ ಜಿನಪದವನ್ನು ನೆನೆಯುತ್ತಾ ಸುರಲೋಕಕ್ಕೆ ಹೋದಳೆಂದು ಉಲ್ಲೇಖಿಸಿದೆ. ಅಲ್ಲದೇ ಈ ರಂಬಲದೇವಿಯನ್ನು ಅಪ್ಸರೆಗೆ ಖೇಚರಿಗೆ ಹೋಲಿಸುವುದರ ಜೊತೆಗೆ ಅವಳನ್ನು ಜಗತ್ತಿನಲ್ಲಿ ಮಿಗಿಲಾದ ಹೆಣ್ಣು ಎಂದು ವರ್ಣಿಸಿದೆ.

**ಕಂಚಿಯಬ್ಬರಸಿ :** ಈಕೆ ಗಂಗಮಂಡಳದ ರಾಜಮಲ್ಲನ ಪತ್ನಿ. ರಾಜಮಲ್ಲನು ಅಜಿತಸೇನಾಚಾರ್ಯರ ಶಿಷ್ಯನಾಗಿದ್ದನು. ಇವನು ಸತ್ತ ಮೇಲೆ ಪತ್ನಿ ಕಂಚಿಯಬ್ಬರಸಿಯು ಅಜಿತಸೇನಾಚಾರ್ಯರ ಬಳಿ ದೀಕ್ಷೆ ಪಡೆದು ಕುಪಣಾ ತೀರ್ಥದಲ್ಲಿ ಸಮಾಧಿ ವಿಧಿಯಿಂದ ಮುಡುಪಿದಳೆಂದು ಕೊಪ್ಪಳದ ಶಾಸನ[58]ದಲ್ಲಿ ಉಲ್ಲೇಖಿತವಾಗಿದೆ. ಪ್ರಸ್ತುತ ಶಾಸನದಲ್ಲಿ ಅಜಿತಾಸೇನಾಚಾರ್ಯರನ್ನು ವರ್ಣಿಸಿದೆ.

**ಜೆಬ್ಬರಸಿ(ಜೆಬ್ಬಾಂಬಿಕೆ)** : ಭೂತುಗನ ಮಗಳಾದ ಈಕೆ ಹರಿಗನ ಪತ್ನಿಯಾಗಿದ್ದಳು. ಇವಳು ಮುಡುಪಿದ ವಿಷಯ ಕ್ರಿ.ಶ.998ರ ಶಾಸನ[59]ದಿಂದ ತಿಳಿದು ಬರುತ್ತದೆ. ಈ ಶಾಸನದಲ್ಲಿ ಕೇವಲ ಈಕೆಯನ್ನು ಕಾವ್ಯಮಯವಾಗಿ ವರ್ಣಿಸಿರುವುದು ಕಂಡುಬರುತ್ತದೆ. ಉಳಿದಂತೆ ಈಕೆಯ ಕುರಿತು ಯಾವ ವಿವರಗಳು ಲಭ್ಯವಾಗಿರುವುದಿಲ್ಲ.

**ಚಂದಿಯಬ್ಬರಸಿ** : ಮಾಂಡಳಿಕ ಮಕುಟ ಚೂಡಾಮಣಿ ಎರಡನೆಯ ಮಾರಸಿಂಹನ ತಂಗಿ ಇವಳು. ಈಕೆಯು ಸಹ ಪಂಡಿತ ಮರಣವನ್ನು ಹೊಂದಿದಳೆಂದು ಒಂದು ಶಾಸನ[60]ದಿಂದ ತಿಳಿದುಬರುತ್ತದೆ. ಇಷ್ಟನ್ನು ಹೊರತುಪಡಿಸಿದರೆ ಮತ್ತಾವ ಮಾಹಿತಿಯು ಇವಳ ಬಗ್ಗೆ ನಮಗೆ ದೊರೆಯುವುದಿಲ್ಲ.

**ಗೋನಂಬಿಕಂತಿ** : ಗಂಗವಂಶದ ಎರೆಗಂಗನ ಮಗಳಾದ ಈಕೆ ಅಜವರ್ಮನ ಹೆಂಡತಿಯಾಗಿದ್ದಳು. ಕ್ರಿ.ಶ.992ರ ಶಾಸನ[61]ದಲ್ಲಿ ಈಕೆ ಸ್ವರ್ಗಕ್ಕೆ ಹೋದ ವಿಷಯದ ಉಲ್ಲೇಖವಿದೆ. ಇವಳ ಮಗನಾದ ಕ್ಷತ್ರಿಯ ಕುಲದ ರಾಮನನ್ನೂ ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

**ಪದ್ಮಬ್ಬೆ** : ಇವಳು ಗಂಗರಾಜ ಭೂತುಗನ ಪತ್ನಿಯಾಗಿದ್ದು, ಎಲ್ಲವನ್ನು ತ್ಯಜಿಸಿ ಕುಪಣಕ್ಕೆ ಬಂದು ದೀಕ್ಷೆಯನ್ನು ಪಡೆದು ಸುಗತಿಯನ್ನು ಹೊಂದಿದ್ದನ್ನು ಕ್ರಿ.ಶ.973ರ ಶಾಸನ[62] ತಿಳಿಸುತ್ತದೆ. ಈಕೆಯ ಬಗ್ಗೆಯೂ ಸಹ ಇತರ ಯಾವುದೇ ಮಾಹಿತಿಗಳು ಈ ಜಿಲ್ಲೆಯ ಶಾಸನಗಳಲ್ಲಿ ಲಭ್ಯವಿರುವುದಿಲ್ಲ.

**ಪದ್ಮಲದೇವಿ** : ಈ ಪದ್ಮಲದೇವಿ ಚಾಲುಕ್ಯ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಪತ್ನಿ. ಜಗದೇಕಮಲ್ಲನು ಕಲ್ಯಾಣ ಪುರವನ್ನು ಆಳುತ್ತಿದ್ದಾಗ ಈಕೆಯು ಕರಡಿಕಲ್ಲು-300ರ ಬಳಿಯ ಗೋವಂತಿಗೆಯ ಸ್ವಯಂಭು ಕಲಿದೇವ ಸ್ವಾಮಿಗೆ ಭೂಮಿಯನ್ನು ದಾನವಾಗಿ ಬಿಟ್ಟಳೆಂದು ಶಾಸನ[63]ದಲ್ಲಿ ಉಲ್ಲೇಖವಿದೆ. ಈ ಶಾಸನವು ಈಕೆಯನ್ನು "ಸ್ವಾಸ್ತನವರತ ಪರಮಕಲ್ಯಾಣಾ ಭ್ಯುದಯ ಸಹಶ್ರಪಳ ಭೋಗಭಾಗಿಣೀ ದ್ವಿತೀಯ ಲಕ್ಷ್ಮೀ ಸಮಾನೆಯರಪ್ಪ ಶ್ರೀ ಮತ್ಪದ್ಮಲ ದೇವಿಯರ್"ಎಂದು ವರ್ಣಿಸಿರುವುದನ್ನು ನೋಡಿದಾಗ ಈಕೆಯು ದಾನ ಮಾಡುವುದರಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದಿರಬಹುದೆಂದು ಊಹಿಸಬಹುದಾಗಿದೆ.

**ರಾಣಿರಂಗಮ್ಮ** : ಕ್ರಿ.ಶ.1878ರ ಶಾಸನ[64]ದಲ್ಲಿ ಬಹುಶಃ ರಾಣಿರಂಗಮ್ಮ ಸತ್ತ ಬಗ್ಗೆ ಉಲ್ಲೇಖಿಸುತ್ತದೆ. ಇದೊಂದು ಅತ್ಯಂತ ಚಿಕ್ಕ ಶಾಸನವಾಗಿರುವುದರಿಂದ ಹೆಚ್ಚಿನ ಮಾಹಿತಿ ತಿಳಿಯಲು ಅವಕಾಶವಿಲ್ಲ. ಇದರ ಲಿಪಿ ಕನ್ನಡವಾಗಿದ್ದರೆ ಭಾಷೆ ಮಾತ್ರ ತೆಲುಗು ಆಗಿರುವುದು ಈ ಶಾಸನದ ವಿಶೇಷತೆಯಾಗಿದೆ.

**ಚಿಣ್ಣಮ್ಮ** : ಈಕೆ ಗುಜ್ಜಲ ಇಮ್ಮಡಿ ವುಡಸಿನಾಯಕನ ಪತ್ನಿಯಾಗಿದ್ದಾಳೆ. ಈಕೆಯ ಬಗ್ಗೆ ಜಿಲ್ಲೆಯ ಮೂರು ಶಾಸನಗಳಲ್ಲಿ ಉಲ್ಲೇಖಗಳಿವೆ. ಕ್ರಿ.ಶ.1666ರಲ್ಲಿ

ಒಂದು ಕೆರೆಯನ್ನು ಕಟ್ಟಿಸಿದಳೆಂದು ಒಂದು ಶಾಸನ[65]ದಿಂದ ತಿಳಿದು ಬಂದರೆ, ಕನಕಗಿರಿ ವುಡಸಿನಾಯಕರ ರಾಣಿವಾಸ ಚೆನ್ನಮ್ಮನವರು ಬಸವಂಣ ದೇವರ ಗುಡಿ ಸಂಪೂರ್ಣ ಮಾಡಿಸಿದರ ಶ್ರೀ[66] ಎಂದು ಬಸವಣ್ಣನ ಗುಡಿ ಕಟ್ಟಿಸಿದ ಬಗ್ಗೆ ಮತ್ತೊಂದು ಶಾಸನದಿಂದ ತಿಳಿದು ಬರುತ್ತದೆ. ಅದೇ ರೀತಿ ಕನಕಗಿರಿನಾಥ ಸ್ವಾಮಿಯ ಪೌಳಿಗೆ ಕಲ್ಲು ಹಾಸಿಗೆ ಹಾಕಿಸಿದಳೆಂದು ಇನ್ನೊಂದು ಶಾಸನ[67]ದಲ್ಲಿ ಉಲ್ಲೇಖಿಸಿದೆ. ಇವುಗಳನ್ನು ಗಮನಿಸಿದಾಗ ಚೆಣ್ಣಮ್ಮ ರಾಣಿಯು ದಾನ-ಧರ್ಮ ಸಾಮಾಜಿಕ ಕೆಲಸ-ಕಾರ್ಯಗಳಲ್ಲಿ ತನ್ನನ್ನು ಸಕ್ರೀಯವಾಗಿ ತೊಡಗಿಸಿಕೊಂಡಿದ್ದಳೆಂದು ಹೇಳಬಹುದು.

**ಕನಕಮ್ಮ :** ಈಕೆಯು ಸಹ ಗುಜ್ಜಲ ಇಮ್ಮಡಿ ವುಡಸಿನಾಯಕನ ಮತ್ತೊಬ್ಬ ಪತ್ನಿಯಾಗಿದ್ದಳು. ಅಂದರೆ ಈ ವುಡಸಿನಾಯಕನು ಚೆಣ್ಣಮ್ಮ ಮತ್ತು ಕನಕಮ್ಮ ಎಂಬ ಇಬ್ಬರು ರಾಣಿಯರನ್ನು ಹೊಂದಿದ್ದನೆಂದು ತಿಳಿದು ಬರುತ್ತದೆ. ಈಕೆಯು ಸಹ ಚೆಣ್ಣಮ್ಮಳಂತೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗುತ್ತಿದ್ದಳು. ಬಸ್ರಿಹಾಳದ ಶಾಸನ[68]ದಲ್ಲಿ ಈಕೆ ಬಾವಿಯನ್ನು ಕಟ್ಟಿಸಿದಳೆಂದು ತಿಳಿಸಿದೆ. ಒಟ್ಟಾರೆಯಾಗಿ ಇಮ್ಮಡಿ ವುಡಸಿನಾಯಕರ ಈ ಇಬ್ಬರು ಪತ್ನಿಯರು ಸದಾ ಲೋಕೋಪಯೋಗಿ ಕೆಲಸಗಳಲ್ಲಿ ನಿರತರಾಗಿರುತ್ತಿದ್ದರೆಂದು ಶಾಸನದಿಂದ ಮಾಹಿತಿ ದೊರೆಯುತ್ತದೆ.

ಈ ರೀತಿಯಾಗಿ ಜಿಲ್ಲೆಯ ಶಾಸನಗಳಲ್ಲಿ ಉಕ್ತಗೊಂಡಿರುವ ರಾಣಿಯರ ಮಾಹಿತಿಗಳು ಲಭ್ಯವಾಗುತ್ತವೆ. ಇವರಲ್ಲಿ ಬಹಳಷ್ಟು ಮಂದಿ ಗಂಗರಸರ ರಾಣಿಯರಾಗಿದ್ದು ಪ್ರಸಿದ್ಧ ಜೈನಕ್ಷೇತ್ರವಾಗಿದ್ದ ಕೊಪ್ಪಳಕ್ಕೆ ಮೋಕ್ಷಗಳಿಸಿಕೊಳ್ಳಲು ಬಂದು ಅಲ್ಲಿಯೇ ಮುಡಿಪಿದ ಬಗ್ಗೆ ಉಲ್ಲೇಖ ಕಂಡುಬರುತ್ತದೆಯೇ ಹೊರತು ಅವರ ಆಡಳಿತಾತ್ಮಕ, ಸಾಂಸ್ಕೃತಿಕ ಚಟುವಟಿಕೆಗಳ ಪ್ರಸ್ತಾಪ ಶಾಸನಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಕೆಲವು ಸ್ಥಳೀಯ ಅರಸರ ರಾಣಿಯರು ಮಾತ್ರ ಜೊತೆಜೊತೆಯಲ್ಲಿ ತಾವು ಸಹ ಸಮಾಜದ ಅಭಿವೃದ್ಧಿಗಾಗಿ, ಒಳಿತಿಗಾಗಿ ಟೊಂಕಕಟ್ಟಿ ನಿಲ್ಲುತ್ತಿದ್ದರೆಂದು ಹೇಳಬಹುದಾಗಿದೆ. ಹಾಗೆಯೇ ಕೆಲ ಸಂದರ್ಭದಲ್ಲಿ ರಾಜರು ದಾನ ಅಥವಾ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಿ, ಅದಕ್ಕೆ ರಾಣಿಯರ ಹೆಸರು ಬರೆಯಿಸಿರುವ ಸಾಧ್ಯತೆಯನ್ನು ಸಹ ತಳ್ಳಿಹಾಕುವಂತಿಲ್ಲ. ಏಕೆಂದರೆ ನಮ್ಮ ಚರಿತ್ರೆಯನ್ನು ಅವಲೋಕಿಸಿದಾಗ ಇಂತಹ ಅಂಶಗಳು ಗೋಚರಿಸುವುದನ್ನು ಕಾಣಬಹುದು.

**ಮಹಾಮಂಡಳೇಶ್ವರರು :**

ವಿಸ್ತಾರವಾದ ಸಾಮ್ರಾಜ್ಯದಲ್ಲಿ ಚಕ್ರವರ್ತಿಯ ನಂತರ ಬರುವ ಪ್ರಭು ವರ್ಗವೆಂದರೆ ಈ ಮಹಾಮಂಡಳೇಶ್ವರರು. ಇವರು ಸಾಮ್ರಾಜ್ಯಕ್ಕೆ ಅಧಿಪತಿಯಾದ ಚಕ್ರವರ್ತಿಯ ಪಾದಪದ್ಮೋಪ ಜೀವಿಗಳಾಗಿದ್ದಾರೆ. ಪ್ರಭುವರ್ಗದಲ್ಲಿ ಇವರು ತಮ್ಮದೇ ಆದ ವಿಶಿಷ್ಟಾಂಶಗಳಿಂದ ಗಣನೀಯವಾದ ಸ್ಥಾನವನ್ನು ಪಡೆದು ಕೊಂಡಿದ್ದರು. ಇವರು ಸ್ವತಂತ್ರ ಅರಸರಂತೆ ಅನೇಕ ಅಧಿಕಾರಗಳನ್ನು ಹೊಂದಿದ್ದರು. ಚಕ್ರವರ್ತಿಗೆ

ಕಾಲಕ್ಕೆ ಸರಿಯಾಗಿ ಕಪ್ಪಕಾಣಿಕೆ ಸಲ್ಲಿಸುವುದನ್ನು ಬಿಟ್ಟರೆ ಬಹುತೇಕ ಸ್ವತಂತ್ರರಾಗಿರುತ್ತಿದ್ದರು. ಮಹಾಮಂಡಳೇಶ್ವರು ಚಕ್ರವರ್ತಿಯ ಕರೆಗೆ ಸದಾ ಸಿದ್ಧರಿರಬೇಕಾಗಿತ್ತು. ಚಕ್ರವರ್ತಿಯ ಅಧಿಪತ್ಯವನ್ನು ತಿರಸ್ಕರಿಸಿದರೆ ಅವನು ಚಕ್ರವರ್ತಿಯ ಆಕ್ರಮಣವನ್ನು ಎದುರಿಸಬೇಕಾಗುತ್ತಿತ್ತು. ಚಕ್ರವರ್ತಿಯು ಬಹುದೊಡ್ಡ ಸೈನ್ಯ ಹೊಂದಿದ್ದರಿಂದ ಅಂತಹ ಸಾಹಸಕ್ಕೆ ಮಹಾ ಮಂಡಳೇಶ್ವರರು ಕೈಹಾಕುತ್ತಿರಲಿಲ್ಲ. ಬದಲಿಗೆ ಕಪ್ಪ ಕಾಣಿಕೆ ನೀಡಿ ಚಕ್ರವರ್ತಿ ಕೃಪೆಗೆ ಒಳಗಾಗುತ್ತಿದ್ದರು. ಬೇರೆಯವರ ದಾಳಿಯಿಂದ ರೋಸಿಹೋಗಿದ್ದ ಮಹಾಮಂಡಳೇಶ್ವರರು ಚಕ್ರವರ್ತಿಯ ಅಧೀನದಲ್ಲಿ ಅಭಯದಿಂದ ಅಧಿಕಾರ ನಡೆಸುತ್ತಿದ್ದರು. ಇದರಿಂದಾಗಿ ಅವರಿಗೆ ರಕ್ಷಣೆ, ಭದ್ರತೆ ದೊರಕಿದಂತಾಗುತ್ತಿತ್ತು.

"ಮಹಾಮಂಡಳೇಶ್ವರರನ್ನು ಮಂಡಳೇಶ್ವರ, ಮಂಡಳಿಕ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಮಹಾಮಂಡಳೇಶ್ವರ ಪದದ ಶಬ್ದದ ಅರ್ಥ ವಿಸ್ತಾರವಾದ ಭೂಮಿಗೆ ಅಥವಾ ವಿಭಾಗಕ್ಕೆ ಒಡೆಯ ಎಂದಾಗುತ್ತದೆ. ಇವರು ಕೆಲವೊಮ್ಮೆ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ವಿಭಾಗಗಳನ್ನು ಆಳುತ್ತಿದ್ದರು."[69] "ಚಕ್ರವರ್ತಿಗೆ ಅಧೀನರಾಗಿ ಆಳುತ್ತಿದ್ದ ಇವರು ಸಾಕಷ್ಟು ಅಧಿಕಾರ ಸ್ವತಂತ್ರವನ್ನು ಪಡೆದಿದ್ದರು. ಪ್ರತಿಯೊಬ್ಬ ಮಹಾಮಂಡಳೇಶ್ವರ ತನ್ನದೇ ಆದ ಮಂತ್ರಿಮಂಡಲ, ಅಧಿಕಾರಿ ವರ್ಗ, ಸೈನ್ಯಗಳನ್ನು ಹೊಂದಿರುತ್ತಿದ್ದನು."[70] ಈ ಮಹಾಮಂಡಳೇಶ್ವರರ ಮೇಲೆ ನಿಗಾ ವಹಿಸಲು ಚಕ್ರವರ್ತಿಯು ಯುವರಾಜ ಹಾಗೂ ತನ್ನ ಇತರ ಪುತ್ರರನ್ನು ನೇಮಿಸುತ್ತಿದ್ದನು. ಜೊತೆಗೆ ತನ್ನ ರಾಣಿಯರನ್ನು ನೇಮಿಸಿರುವುದನ್ನು ಗಮನಿಸಬಹುದು. ಇವರು ಮಹಾಮಂಡಳೇಶ್ವರನ ಚಟುವಟಿಕೆಗಳ ಕುರಿತು ವರದಿ ಸಲ್ಲಿಸುತ್ತಿದ್ದರು.

"ಮಹಾಮಂಡಳೇಶ್ವರ ಮತ್ತು ಸಾಮಂತರಿಗೂ ರಾಜರಂತೆಯೇ ಪ್ರತ್ಯೇಕ ಧ್ವಜ, ಲಾಂಛನಗಳಿದ್ದವು. ಆದರೂ ರಾಜರಂತೆ ತಮ್ಮ ತಮ್ಮ ಆಳ್ವಿಕೆಯ ಭಾಗಗಳಲ್ಲಿ ದೇಶ ಸಂಚಾರವನ್ನು ಕೈಗೊಂಡು ಜನರ ಕಷ್ಟ ಸುಖಗಳನ್ನು ವಿಚಾರಿಸುತ್ತಿದ್ದ ಪ್ರಸ್ತಾಪವಿದ್ದು, ಯುದ್ಧದ ಸಮಯದಲ್ಲಿ ಇವರು ತಮ್ಮ ಅಧಿರಾಜನ ಸಹಾಯಕ್ಕೆ ಹೋಗಿ ಅನೇಕ ದೇಶಗಳನ್ನು ಗೆದ್ದುಕೊಟ್ಟದ್ದು ಉಂಟು."[71] ಮಹಾ ಮಂಡಳೇಶ್ವರರನ್ನೇ ಮಂಡಳೇಶ್ವರ, ಮಾಂಡಳಿಕ ಎಂದು ಪರ್ಯಾಯ ನಾಮಗಳಿಂದ ಕರೆಯಲಾಗುತ್ತಿತ್ತು ಎಂಬುದು ಜೆ.ಎಂ.ನಾಗಯ್ಯನವರ ಅಭಿಪ್ರಾಯವಾದರೆ, ಎಂ.ಚಿದಾನಂದಮೂರ್ತಿಯವರು ಮಹಾಮಂಡಳೇಶ್ವರನು ಮಂಡಳೇಶ್ವರನಿಗಿಂತ ಉನ್ನತ ಸ್ಥಾನ ಪಡೆದು ಅಧಿಕಾರದ ವ್ಯಾಪ್ತಿಯಲ್ಲಿಯೂ ಕೂಡ ಹಿರಿಯರು. ಒಬ್ಬ ಮಹಾಮಂಡಳೇಶ್ವರನ ಅಧೀನದಲ್ಲಿ ಅನೇಕ ಮಂಡಳೇಶ್ವರರು ಇರುತ್ತಿದ್ದರೆಂದು ಅಭಿಪ್ರಾಯ ಪಟ್ಟಿದ್ದಾರೆ. ಒಟ್ಟಾರೆ ಈ ಈರ್ವ ವಿದ್ವಾಂಸರ ಅಭಿಪ್ರಾಯಗಳನ್ನಾಧರಿಸಿ ಮಂಡಳೇಶ್ವರರೇ ಚಕ್ರವರ್ತಿಯ ಪ್ರೀತಿಗೆ ಪಾತ್ರರಾಗಿಯೋ ಹಾಗೂ ಇನ್ನಿತರ ಗಣನೀಯ ಸೇವೆಸಲ್ಲಿಸಿದ ಕಾರಣದಿಂದಲೋ ಮಹಾಮಂಡಳೇಶ್ವರು ಬಡ್ತಿ ಹೊಂದುತ್ತಿದ್ದರೆಂದು ಊಹಿಸಲಾಗಿದೆ.

ಮಹಾಮಂಡಳೇಶ್ವರರು ಚಕ್ರವರ್ತಿಯ ಅನುಮತಿಯ ಮೇರೆಗೆ ವಿವಿಧ ವಿಭಾಗಗಳನ್ನು ಇಲ್ಲವೆ ಮಂಡಲಗಳನ್ನು ಆಳುತ್ತಿದ್ದರು. ಬಹುತೇಕ ವಂಶ ಪರಂಪರೆಯಿಂದ ಬಂದ ಮಹಾಮಂಡಳೇಶ್ವರರೇ ಆಗಿರುತ್ತಿದ್ದರು. ಇಂತಹ ಮಹಾಮಂಡಳೇಶ್ವರರ ಕುರಿತು ಜಿಲ್ಲೆಯ ಅನೇಕ ಶಾಸನಗಳಲ್ಲಿ ವಿವರಗಳು ದೊರೆಯುತ್ತವೆ. ಶಾಸನೋಕ್ತ ಮಹಾಮಂಡಳೇಶ್ವರರ ಕೆಲ ವಿವರಗಳನ್ನು ಈ ಮುಂದಿನಂತೆ ನೋಡಬಹುದಾಗಿದೆ.

**ಮಹಾಮಂಡಳೇಶ್ವರ ಸಿಂಘಟಾಲೂರು ಬಾಚಿದೇವ :** ಕೊಪ್ಪಳ ತಾಲೂಕಿನಲ್ಲಿ ದೊರೆತ ಶಾಸನ[72]ದಲ್ಲಿ ಉಲ್ಲೇಖವಿದೆ. ಕೌರೂರು ಊರೊಡೆಯ ಮತ್ತು ಪ್ರಮುಖ ಅಶೇಷ ಮಹಾಜನಗಳ ಸನ್ನಿಧಾನದಲ್ಲಿ ಹರಿಹರ ದೇವರ ಬ್ರಹ್ಮಪುರಿಗೆ ತಮ್ಮ ಶ್ರೇಯೋಭಿವೃದ್ಧಿಗಾಗಿ ಎಡೆ ಹಳ್ಳಿಗೇರಿಯಲ್ಲಿ ಹೊಲವನ್ನು ದಾನವಾಗಿ ಬಿಟ್ಟ ಮಾಹಿತಿ ದೊರೆಯುತ್ತದೆ. ಈ ಶಾಸನದಲ್ಲಿ ಅವನ ಮಗನಾದ ಕುಮಾರ ಬೆಡಂಗಿದೇವನ ಪ್ರಸ್ತಾಪವು ಇರುವುದು ವಿಶೇಷ.

**ಮಹಾಮಂಡಳೇಶ್ವರ ಮಣಿಯೂರು ಬಾಚರಸ ಮತ್ತು ದೊಡ್ಡರಸ :** ಶ್ರೀಮನ್ಮಹಾಮಂಡಳೇಶ್ವರಂ ಮಣಿಯೂರು ಬಾಚರಸನು ದೊಡ್ಡರಸನು ಕೂಡಿ ತಮ್ಮ ನಿಬರುಂ ಬಂದು ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಮಹಾಗ್ರಹಾರ [ತೆಂಕಣಯ್ಯವಳೆಯ ಕೌರೂರ] ಊರೊಡೆಯ ಪ್ರಮುಖ ಅಶೇಷ ಮಹಾಜನಂಗಳಯ್ನೂರ್ವ್ವರ ಸನ್ನಿಧಾನದಲು ಹರಿಹರ ದೇವರ ಬ್ರಹ್ಮಪುರಿಗಂ ಸೂಳೆಗೇರಿಗಂ ಕೊಟ್ಟ ಎಡೆಹಳ್ಳಿಗೇರಿಯಂ.......... ಅಂಗ ಭೋಗ ರಂಗಭೋಗಕಂ ತಮ್ಮ ದಾನವ್ರಿದ್ಧಿಯಿಂ ಬಯಸಿ ಧಾರಪೂರ್ವ್ವಕವಾಗಿ ಕೊಟ್ಟರು ಎಂದು ಕವಲೂರಿನ ಶಾಸನ[73]ದಲ್ಲಿ ಉಲ್ಲೇಖಗೊಂಡಿರುವುದರಿಂದ ಈ ಇಬ್ಬರು ಮಹಾಮಂಡಳೇಶ್ವರರಾಗಿ ಕಾರ್ಯನಿರ್ವಹಿಸಿದ ಬಗ್ಗೆ ಮಾಹಿತಿ ದೊರೆಯುತ್ತದೆ.

**ಮಹಾಮಂಡಳೇಶ್ವರ ರಾಮಮಹೀಪಾಲ :** ಪಲ್ಲವ ವಂಶದವನಾದ ಈ ರಾಮಮಹಿಪಾಲನ ಬಗ್ಗೆ ಕೊಪ್ಪಳದ ಒಂದು ಶಾಸನ[74]ದಲ್ಲಿ ಉಲ್ಲೇಖ ಬರುತ್ತದೆ. ಆದರೆ ಪ್ರಸ್ತುತ ಶಾಸನದಲ್ಲಿ ಇವನ ಆಳ್ವಿಕೆಯಾಗಲಿ ಅಥವಾ ಇನ್ನಾವುದೇ ಮಾಹಿತಿ ಲಭ್ಯವಾಗದೇ ಕೇವಲ ಈತನ ಪತ್ನಿಯಾದ ರೇವಕಯ್ಯ ಕಂತಿಯ ಮಾಹಿತಿ ದೊರೆಯುತ್ತದೆ. ಈ ರೇವಕಯ್ಯ ಕಂತಿಯು ಕಾಣೂರು ಗಣದ ಕನಕನಂದಿಯ ಶಿಷ್ಯೆಯಾಗಿದ್ದು ಸನ್ಯಾಸವನ್ನು ಸ್ವೀಕರಿಸಿ ಮುಡುಪಿದ ವಿಷಯ ತಿಳಿಸುತ್ತದೆ. ಈಕೆಯು ಮಹಾಮಂಡಳೇಶ್ವರನ ಪತ್ನಿಯಾಗಿದ್ದರೂ ಸಹ ದೀಕ್ಷೆಯನ್ನು ತೆಗೆದುಕೊಂಡಿರುವುದು ವಿಶೇಷವಾಗಿದೆ.

**ಮಹಾಮಂಡಳೇಶ್ವರ ಬಂಗಾರು ತಿಮ್ಮರಾಜ :** ಕ್ರಿ.ಶ.1520ರ ಶಾಸನ[75]ದಲ್ಲಿ ಈ ಮಹಾಮಂಡಳೇಶ್ವರ ಉಲ್ಲೇಖ ಕಂಡು ಬರುತ್ತದೆ. ಈ ಶಾಸನದಲ್ಲಿ ವಿದ್ಯಾನಗರ

ಸಿಂಹಾಸನದ ಕಳ ಹಸ್ತಾಚಾರ್ಯ ಹೆಸರಿನ ಸದ್ಯೋಜಾತಸ್ವಾಮಿಗೆ ವಿಜಯನಗರದ ರಾಜನಾದ ಶ್ರೀಕೃಷ್ಣದೇವರಾಯ ತ್ರಿಮತಸ್ತ ಬ್ರಾಹ್ಮಣರು ಮಹಾಮಂಡಳೇಶ್ವರ ಬಂಗಾರು ತಿಮ್ಮರಾಜು ದಳವಾಯಿ ಜಯರೇಖೆಯನ್ನು ಬರೆಯಿಸಿಕೊಟ್ಟ ವಿಷಯವನ್ನು ತಿಳಿಸುವುದರಿಂದ, ಬಂಗಾರು ತಿಮ್ಮರಾಜು ವಿಜಯನಗರದ ಶ್ರೀಕೃಷ್ಣದೇವರಾಯನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರನಾಗಿ ಕಾರ್ಯನಿರ್ವಹಿಸಿದನೆಂದು ಹೇಳಬಹುದು.

**ಪೆರ್ಮಾಡಿ ಕಲಿದೇವರಸ :** ತೃಟಿತಗೊಂಡ ಒಂದು ಶಾಸನ[76]ದಲ್ಲಿ ಪೆರ್ಮಾಡಿ ಕಲಿದೇವರಸನ ಉಲ್ಲೇಖವಿದೆ. ಈ ಶಾಸನದಲ್ಲಿ ಇವನ ಹೆಸರು ಮಾತ್ರ ಪ್ರಸ್ತಾಪವಿದ್ದು. ಆಳ್ವಿಕೆ ಇತ್ಯಾದಿಗಳ ಬಗ್ಗೆ ಉಲ್ಲೇಖಗಳು ಇರುವುದಿಲ್ಲ. ಪ್ರಸ್ತುತ ಶಾಸನದಲ್ಲಿ ಇವನ ಸಾಮಂತನಾದ ಲಕ್ಕಯ್ಯನ ಆಳ್ವಿಕೆಯನ್ನು ಉಲ್ಲೇಖಿಸಲಾಗಿದೆ.

**ಮಹಾಮಂಡಳೇಶ್ವರ ವಿಕ್ರಮಾದಿತ್ಯದೇವ :** ತೃಟಿತವಾಗಿರುವ ಒಂದು ಶಾಸನ[77]ದಲ್ಲಿ ವಿಕ್ರಮಾದಿತ್ಯದೇವನು ಮಹಾಮಂಡಳೇಶ್ವರನಾಗಿದ್ದ ಮಾಹಿತಿ ದೊರೆಯುತ್ತದೆ. ಇವನ ಮಹಾಪ್ರಧಾನ ತಂತ್ರಾಧಿಷ್ಠಾಯಕ ದೇವಣಾರ್ಯ ನಾಯಕನಿಗೆ ಸಂಬಂಧಿಸಿದ ಸ್ತ್ರೀಯಳೊಬ್ಬಳು ಪಾರ್ಶ್ವನಾಥ ಬಸದಿಯನ್ನು ಮಾಡಿಸಿದಂತೆ ಮಾತ್ರ ತಿಳಿಸುತ್ತದೆ. ಈ ಶಾಸನ ತೃಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

**ಮಹಾಮಂಡಳೇಶ್ವರ ಚಾವುಂಡರಸ :** ಕ್ರಿ.ಶ.1186ರ ಕಲ್ಲೂರಿನ ಶಾಸನ[78]ದಲ್ಲಿ ಈ ಮಹಾಮಂಡಳೇಶ್ವರನ ಹೆಸರು ಮಾತ್ರ ಪ್ರಸ್ತಾಪವಾಗಿದೆ. ಈ ಶಾಸನದಲ್ಲಿ ಇವನ ಮಗನಾದ ವೀರಬಿಜ್ಜಲ ದೇವರಸನು ಕಲ್ಲೂರು ಕಲಿದೇವ ಸ್ವಾಮಿಯ ಭಕ್ತನಾದ ಮಲ್ಲೆಯ ಬೊಮ್ಮಯ್ಯನಿಗೆ ಪ್ರಥಮ ವೃತ್ತಿಯಾಗಿ ಗಣಮಠಕ್ಕೆ ಎರಡುನೂರು ಮತ್ತರು ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಅದರಂತೆ 11ನೇ ಶತಮಾನದ ಮತ್ತೊಂದು ಶಾಸನ[79]ದಲ್ಲಿ ಚಾವುಂಡರಸನ ಉಲ್ಲೇಖವಿದ್ದು ಈ ಶಾಸನದಲ್ಲಿ ಇವನ ಕೈಕೆಳಗಿನ ಅಧಿಕಾರಿ ವರ್ಗಗಳ ಉಲ್ಲೇಖಗಳು ಮತ್ತು ವರ್ಣನೆಗಳು ಬರುತ್ತವೆ.

**ಮಹಾಮಂಡಳೇಶ್ವರ ವೀರಬಿಜ್ಜಲದೇವರಸ ಮತ್ತು ವಿಕ್ರಮಾದಿತ್ಯದೇವರಸ : "**ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಭೋಗಾವತಿ ಪುರವರಾಧೀಶ್ವರಂ ಸಿಂದಾನ್ವಯ ರತ್ನಾಕರ ಸುಧಾಕರ ವಂದಿವ್ರಿಂದ ಪದ್ಮಾಕರ ಪ್ರಭಾಕರ ಚಾಮಂಡಮಂಡಳೀಕ ಹ್ರಿದಯನಂದನ ನಿಜವಿಳಾಸೋಪಹಸಿತ ಶ್ರೀನಂದನಮಂಡಳಿಕ ವೀರಬಿಜ್ಜಲದೇವ ಸಹಜಾತ ಬಹು ಕಳಾಕಳಾ ಪಾಂಬೋಜಜಾತರಿಪು ಮದನಿವಾರಣ ಮಂಡಳಿಕ ಮುಖದರ್ಪಣ ವಿದ್ವಜ್ಜನ ಸಂತರ್ಪಣ ಭುಜಬಳಭೀಮ ನಯನಾಭಿರಾಮ ಅನವರತ ದಿವ್ಯಪ್ರಸಂಗ ಸಾಹಸೋತ್ತುಂಗ ನಾಮದಿ ಸಮಸ್ತ ಪ್ರಸಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ

ವೀರಬಿಜ್ಜಲದೇವರಸರುಂ ವಿಕ್ರಮಾದಿತ್ಯದೇವರಸ ಎರಂಬರವಿಯ ನೆಲೆವೀಡಿನಲು ಸುಖಸಂಕಥಾವಿನೋದದಿಂ ರಾಜ್ಯಕೈಯ್ಯುತ್ತಮಿರೆ"[80] ಎಂದು ಶಾಸನದಲ್ಲಿ ಮಹಾಮಂಡಳೇಶ್ವರರಾದ ವೀರಬಿಜ್ಜಲದೇವರಸ ಮತ್ತು ವಿಕ್ರಮಾದಿತ್ಯ ದೇವರಸರನ್ನು ಅನೇಕ ಬಿರುದುಗಳಿಂದ ವರ್ಣಿಸಿರುವುದನ್ನು ಕಾಣುತ್ತೇವೆ. ಇವರಿಬ್ಬರೂ ಸಹೋದರರಾಗಿದ್ದು ಇವರ ವಂಶಾವಳಿಯನ್ನು ಶಾಸನದಲ್ಲಿ ವಿವರಿಸಿರುವುದು ವಿಶೇಷವಾಗಿದೆ.

**ಮಹಾಮಂಡಳೇಶ್ವರ ಸಿಂದರಾಜ ಪೆರ್ಮಾಡಿ ಮತ್ತು ಚಾವುಂಡ :** ಕುಕನೂರಿನ ಒಂದು ಶಾಸನ[81]ದಲ್ಲಿ ಈ ಇಬ್ಬರು ಮಹಾಮಂಡಳೇಶ್ವರರ ಉಲ್ಲೇಖವಿದೆ. ಸಿಂದರಾಜ ಪೆರ್ಮಾಡಿ ಹಾಗೂ ಚಾವುಂಡ ಇಬ್ಬರಿಗೂ ಸೊಂಡಿಯ ನಗರೇಶ್ವರ ಕಾಳಾಮುಖನ್ವಯಕ್ಕೆ ಸೇರಿದ್ದ ಕಳೇಶ್ವರ ಯತಿಯು ಗುರುವಾಗಿದ್ದ ಎಂದು ತಿಳಿದು ಬರುತ್ತದೆ. ಮಹಾಮಂಡಳೇಶ್ವರರಿಗೆ ಚಕ್ರವರ್ತಿಯ ಮಾರ್ಗದರ್ಶನದ ಜೊತೆಗೆ ಗುರುಗಳು ಸಹ ಮಾರ್ಗದರ್ಶಕರಾಗಿರುತ್ತಿದ್ದರೆಂದು ತಿಳಿದು ಬರುತ್ತದೆ. ಈ ಶಾಸನದಲ್ಲಿ ಪೆರ್ಮಾಟಿ ವಂಶಾವಳಿಯನ್ನು ತಿಳಿಸುವುದಲ್ಲದೇ ಗುರು ಕಳೇಶ್ವರ ಯತಿಯ ಗುಣಗಾನ ಮಾಡಿರುವುದು ತಿಳಿದು ಬರುತ್ತದೆ.

**ಮಹಾಮಂಡಳೇಶ್ವರ ದಾಸಿಗ :** ಕಳಚೂರಿ ಚಕ್ರವರ್ತಿ ರಾಯ ಮುರಾರಿ ಸೋವಿದೇವನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಕೈಕೆಳಗೆ ಸಾದಿಗ ಮಂಡಳೇಶ್ವರ ಕಿಸುಕಾಡು-70 ವಿಭಾಗವನ್ನು ಆಳುತ್ತಿದ್ದನೆಂದು ಚಳಿಗೇರಿಯಲ್ಲಿನ ಶಾಸನ[82]ದಲ್ಲಿ ಉಲ್ಲೇಖಗೊಂಡಿದೆ. ದೀರ್ಘವಾದ ಈ ಶಾಸನ ಮುಂದುವರೆದು ದಾಸಿಗನ ವಂಶಾವಳಿಯನ್ನು ವಿವರಿಸುತ್ತದೆ. ಅಲ್ಲದೆ ಅವನ ಕೈಕೆಳಗಿದ್ದ ದಂಡನಾಯಕರನ್ನೂ ಸಹ ಉಲ್ಲೇಖಿಸುತ್ತದೆ.

**ಮಹಾಮಂಡಳೇಶ್ವರ ಜಗದೇಕಮಲ್ಲ ಪೆರ್ಮಾಡಿ ದೇವರಸ :** ಜಗದೇಕಮಲ್ಲನ ಆಳ್ವಿಕೆಯಲ್ಲಿ ಇವನ ಮಹಾಮಂಡಳೇಶ್ವರ ಜಗದೇಕಮಲ್ಲ ಪೆರ್ಮಾಡಿ ದೇವರಸನು ಹತ್ತರ ಠಾಣದ ಶ್ರೀ ಸ್ವಯಂಭೂ ದೇವರ ಅಂಗಭೋಗ ನೈವೇದ್ಯಕ್ಕೆ ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ದಾನ ಕೊಟ್ಟ ವಿವರವನ್ನು ಅಂಟೂರುಠಾಣದಲ್ಲಿ ದೊರೆತ ಒಂದು ತೃಟಿತವಾದ ಶಾಸನ[83]ದಲ್ಲಿ ವಿವರವಿದೆ. ಇದು ಕ್ರಿ.ಶ.1082ರ ಕಾಲದ್ದಾಗಿದೆ. ಈ ಮಹಾಮಂಡಳೇಶ್ವರನು ಕಿಸುಕಾಡು-70 ವಿಭಾಗವನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಈ ಶಾಸನದಲ್ಲಿ ಚಕ್ರವರ್ತಿ ಮತ್ತು ಮಹಾಮಂಡಳೇಶ್ವರ ಇಬ್ಬರ ಹೆಸರು 'ಜಗದೇಕಮಲ್ಲ' ಎಂದು ಇರುವುದು ವಿಶೇಷವಾಗಿದೆ.

**ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯವೀರ ನೊಳಂಬ ಪಲ್ಲವ ಪೆರ್ಮಾನಡಿ :** ಇವನ ಕುರಿತು ವಿಪ್ರದಲ್ಲಿ ದೊರೆತ ಒಂದು ಶಾಸನ[84]ವು ಮಾಹಿತಿಯನ್ನು ನೀಡುತ್ತದೆ. ಕ್ರಿ.ಶ.1094ಕ್ಕೆ ಸೇರಿದ ಈ ಶಾಸನದಲ್ಲಿ ಚಾಲುಕ್ಯತ್ರಿಭುವನ

ಮಲ್ಲನ ಮಂಡಳೇಶ್ವರನಾದ ತ್ರಿಭುವನಮಲ್ಲ ಪಾಂಡ್ಯವೀರ ನೊಳಂಬ ಪಲ್ಲವ ಪೆರ್ಮಾನಡಿಯು ನೊಳಂಬವಾಡಿ–32000 ವಿಭಾಗವನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಚಾಳುಕ್ಯ ತ್ರಿಭುವನ ಮಲ್ಲನ ಆಡಳಿತದಲ್ಲಿ ಮಹಾಮಂಡಳೇಶ್ವರನಾಗಿದ್ದ ಇವನು ಮಲಯೂರು ಪಂಡಿತ ದೇವರಿಗೆ ಬಲ್ಲಕುಂದೆ–300ರ ಕಂಪಣ ಬಳಿಯ ಬಾಡವಾದ ಇಕುಪರವನ್ನು ಕಂಪಿಲೆಯ ಗವರೇಶ್ವರದ ಸಿದ್ಧೇಶ್ವರ ದೇವರಿಗಾಗಿ ಸರ್ವಮಾನ್ಯವಾಗಿ ದಾನ ಬಿಟ್ಟ ವಿಚಾರ ಶಾಸನದಲ್ಲಿ ಉಲ್ಲೇಖವಿದೆ.

**ಮಹಾಮಂಡಳೇಶ್ವರ ರಾಮರಾಜ :** ಸದಾಶಿವರಾಯನು ಆಳುತ್ತಿದ್ದಾಗ ಇವನ ಮಹಾಮಂಡಳೇಶ್ವರನಾಗಿ ರಾಮರಾಜನು ಆಳ್ವಿಕೆ ನಡೆಸಿದ್ದು ಕ್ರಿ.ಶ.1544ರ ಶಾಸನ[85] ತಿಳಿಸುತ್ತದೆ. ಈ ಶಾಸನದಲ್ಲಿ ತನ್ನ ಅರಸನಾದ ಸದಾಶಿವರಾಯನಿಗೆ ಪುಣ್ಯವಾಗಲೆಂದು ತಿರುವೆಂಕಟಾದ್ರಿ ರಾಜನ ಕಾರ್ಯಕ್ಕೆ ಕರ್ತನಾದ ಚಂದ್ರಗಿರಿಯ ದೇಮರಸಯ್ಯನು ಜಂತಗಲ್ ಮಾಗಣೆಯ ದೇವರಾಯ ಬ್ರಹ್ಮದಾಯಗಳಿಗೆ ಒಂದು ವೊಕ್ಕಳ ಗದ್ದೆಯನ್ನು ಸರ್ವಮಾನ್ಯವಾಗಿಯೇ ಬಿಟ್ಟ ಈ ಧರ್ಮ ಶಿಲಾಶಾಸನ ಬರಿಸಿದನೆಂದು ಉಲ್ಲೇಖಿಸಿದೆ.

**ಮಹಾಮಂಡಳೇಶ್ವರ ಕಂನೆಪವೊಡೆಯ :** ಗುಂಡೂರಿನ ಕ್ರಿ.ಶ.1452ರ ಶಾಸನ[86]ದಲ್ಲಿ ಈ ಮಹಾಮಂಡಳೇಶ್ವರನು ನಾಗನಾಥ ದೇವರಿಗೆ ಐಗಳದ ಭೂಮಿಯನ್ನು ದಾನ ಕೊಟ್ಟಿದ್ದು ಉಲ್ಲೇಖಿಸಿದೆ. ಈ ಶಾಸನ ಅಸ್ಪಷ್ಟ ವಾಗಿರುವುದರಿಂದ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ.

**ಮಹಾಮಂಡಳೇಶ್ವರ ಅಳಿಯ ತಿರುಮಲರಾಜ :** ಕ್ರಿ.ಶ.1551ರಲ್ಲಿ ಸದಾಶಿವರಾಯನು ಆಳುತ್ತಿದ್ದಾಗ ಮಹಾಮಂಡಳೇಶ್ವರ ಅಳಿಯ ತಿರುಮಲ ರಾಜನು ನಾವಿಂದರಾದ ತಿಂಮೋಜ ಕಂಡೋಜರಿಗೆ ಕನಕಗಿರಿಯಲ್ಲಿ ಬಿಟ್ಟ ಬಿರಾಡ, ಅನ್ನು–ಪನ್ನು ಮುಂತಾದ ತೆರಿಗೆಗಳನ್ನು ಬಿಟ್ಟಂತೆ ಕನಕಗಿರಿಯಲ್ಲಿ ದೊರೆತ ಶಾಸನ[87]ದಲ್ಲಿ ಉಲ್ಲೇಖವಿದೆ. ಇದರಿಂದ ತೆರಿಗೆಗಳನ್ನು ಮನ್ನಾ ಮಾಡುವ ಅಧಿಕಾರವು ಮಹಾಮಂಡಳೇಶ್ವರರಿಗೆ ಇತ್ತೆಂದು ತಿಳಿದು ಬರುತ್ತದೆ.

**ಮಹಾಮಂಡಳೇಶ್ವರ ಆಚರಸ :** ಕ್ರಿ.ಶ. 1132ರ ಶಾಸನ[88]ದಲ್ಲಿ ಆಚರಸನನ್ನು ಮಹಾಮಂಡಳೇಶ್ವರನೆಂದು ಉಲ್ಲೇಖಿಸಿದೆ. ಆದರೆ ಈ ಶಾಸನದಲ್ಲಿ ಈತನ ಕುರಿತು ಮಾಹಿತಿ ದಾಖಲಾಗದೆ ಅವನ ಮಗನಾದ ರಾಯಸಾದರ ಪೆರ್ಮಾಡಿದೇವನ ಆಳ್ವಿಕೆಯನ್ನು ಮಾತ್ರ ಉಲ್ಲೇಖಿಸುತ್ತದೆ.

ಈ ರೀತಿಯಾಗಿ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಮಹಾಮಂಡಳೇಶ್ವರರ ಉಲ್ಲೇಖಗಳ ಜೊತೆಗೆ ಅವರು ನಿರ್ವಹಿಸಿದ ಕರ್ತವ್ಯ, ಮಾಡಿದ ದಾನ–ಧರ್ಮ, ಆಳ್ವಿಕೆ, ವಂಶಾವಳಿ ಮುಂತಾದವುಗಳ ಮಾಹಿತಿಗಳು ಲಭ್ಯವಾಗುತ್ತವೆ. ಆದಾಗ್ಯೂ

ಮಹಾಮಂಡಳೇಶ್ವರರ ರಾಜಕೀಯ ನೀತಿಗಳ ಬಗೆಗೆ ಶಾಸನಗಳಲ್ಲಿ ಯಾವುದೇ ಮಾಹಿತಿ ಲಭ್ಯವಿಲ್ಲ.

## ಕೊಪ್ಪಳ ಜಿಲ್ಲೆಯ ಶಾಸನೋಕ್ತ ಮಹಾಮಂಡಳೇಶ್ವರರ ಪಟ್ಟಿ :

| ಕ್ರ. ಸಂ. | ಮಹಾಮಂಡಳೇಶ್ವರರ ಹೆಸರು | ಅರಸರ ಹೆಸರು | ಕಾಲ | ಉಲ್ಲೇಖಿತ ಶಾಸನಸ್ಥಳ |
|---|---|---|---|---|
| 01. | ಸಿಂಘಟಾಲೂರು ಬಾಚಿದೇವ | ಬಿಜ್ಜಳ | ಕ್ರಿ.ಶ.1178 | ಕವಲೂರು |
| 02. | ಬಾಚರಸ | ,, | ಕ್ರಿ.ಶ.1178 | ಕವಲೂರು |
| 03. | ದೊಡ್ಡರಸ | ,, | ಕ್ರಿ.ಶ.1178 | ಕವಲೂರು |
| 04. | ರಾಮಮಹಿಪಾಲ | – | – | ಕೊಪ್ಪಳ |
| 05. | ಬಂಗಾರು ತಿಮ್ಮರಾಜು | ಶ್ರೀಕೃಷ್ಣದೇವರಾಯ | ಕ್ರಿ.ಶ.1520 | ಗಿಣಿಗೇರಿ |
| 06. | ಪೆರ್ಮಾನಡಿ ಕಲಿದೇವರಸ | – | ಕ್ರಿ.ಶ.1196 | ಕೊಪ್ಪಳ |
| 07 | ವಿಕ್ರಮಾದಿತ್ಯ ದೇವ | – | – | ಯಲಬುರ್ಗಾ |
| 08. | ಚಾವುಂಡರಸ | ಸೋಮೇಶ್ವರ | ಕ್ರಿ.ಶ.1186 | ಕಲ್ಲೂರು |
| 09. | ವೀರಬಿಜ್ಜಳದೇವರಸ | ತ್ರಿಭುವನಮಲ್ಲಸೋಮೇಶ್ವರ | ಕ್ರಿ.ಶ.1186 | ಕಲ್ಲೂರು |
| 10. | ವಿಕ್ರಮಾದಿತ್ಯರಸ | ,, | ಕ್ರಿ.ಶ.1186 | ಕಲ್ಲೂರು |
| 11. | ಚಾವುಂಡರಸ | ತ್ರೈಲೋಕಮಲ್ಲ | 11ನೇಶ. | ಮುಧೋಳ |
| 12. | ಸಿಂಧರಾಜ ಪೆರ್ಮಾಡಿ | ಆಹವಮಲ್ಲ | ಕ್ರಿ.ಶ.1178 | ಕುಕನೂರು |
| 13. | ಚಾವುಂಡ | ,, | ಕ್ರಿ.ಶ.1178 | ಕುಕನೂರು |
| 14 | ದಾಸಿಗ | ಕಳಚೂರಿರಾಯ ಮುರಿಸೋವಿದೇವ | ಕ್ರಿ.ಶ.1172 | ಚಳಿಗೇರಿ |
| 15. | ಜಗದೇಕಮಲ್ಲ | ಪೆರ್ಮಾಡಿದೇವರಸಜಗದೇಕಮಲ್ಲ | ಕ್ರಿ.ಶ.1082 | ಅಚಿಟೂರಠಾಣ |
| 16. | ತ್ರಿಭುವನಮಲ್ಲ | ಪಾಂಡ್ಯಚಾಲುಕ್ಯ ತ್ರಿಭುವನಮಲ್ಲ | ಕ್ರಿ.ಶ.1094 | ವಿಪ್ರ |
| 17. | ರಾಮರಾಜ | ಸದಾಶಿವರಾಯ | ಕ್ರಿ.ಶ.1588 | ಹಿರೇಜಂತಗಲ್ |
| 18. | ಅಳಿಯ ತಿರುಮಲರಾಜ | ,, | ಕ್ರಿ.ಶ.1551 | ಕನಕಗಿರಿ |
| 19. | ಕಂನೆಪವೊಡೆಯ | – | ಕ್ರಿ.ಶ.1550 | ಗುಂಡೂರು |
| 20. | ಆಚರಸ | ಭೂಲೋಕಮಲ್ಲ | ಕ್ರಿ.ಶ.1132 | ಕಲ್ಲೂರು |

**ಮಹಾಸಾಮಂತರು :**

ಚಕ್ರವರ್ತಿಯ ಅಧೀನದಲ್ಲಿದ್ದು ಹಲವಾರು ಸಣ್ಣ ಪುಟ್ಟ ಪ್ರದೇಶಗಳಲ್ಲಿಯೇ ಆಳ್ವಿಕೆ ನಡೆಸುತ್ತಿದ್ದ ಪ್ರಭುವರ್ಗವೇ ಮಹಾಸಾಮಂತರು. ತಮ್ಮ ಸೀಮಿತ ಪ್ರದೇಶದಲ್ಲಿ ತಾವು ಸರ್ವಾಧಿಕಾರಿಗಳಾಗಿದ್ದರು. ಇವರು ಸಹ ಮಂಡಳೇಶ್ವರರಂತೆ ಮಂತ್ರಿಮಂಡಲವನ್ನು ಅಧಿಕಾರಿ ವರ್ಗದವರನ್ನು ಸೈನ್ಯವನ್ನು ಹೊಂದಿರುತ್ತಿದ್ದರು. ರಾಜನಿಗೆ ಸಲ್ಲಿಸಬೇಕಾದ ಕಪ್ಪಕಾಣಿಕೆ ಸಲ್ಲಿಸಿ ತಮ್ಮ ಪ್ರದೇಶದಲ್ಲಿ ನಿಶ್ಚಿಂತೆಯಿಂದ ಆಳ್ವಿಕೆ ನಡೆಸುತ್ತಿದ್ದರು. ಮಹಾಮಂಡಳೇಶ್ವರರಿಗೂ ಹಾಗೂ ಮಹಾಸಾಮಂತರಿಗೂ ವ್ಯತ್ಯಾಸವನ್ನು ಎಂ.ಚಿದಾನಂದಮೂರ್ತಿಯವರು ಸ್ಪಷ್ಟವಾಗಿ ಗುರುತಿಸಿದ್ದಾರೆ. “ಸಾಮಂತರು ಯಾವುದೇ ಪ್ರಾಂತವನ್ನು ಮೊದಲಿನಿಂದಲೂ ಆಳುತ್ತಾ ಬಂದಿರತಕ್ಕವರು. ಆದಿರಾಜನು

ತಮ್ಮನ್ನು ಗೆದ್ದಿರುವುದರಿಂದ ಅವನ ಅಧೀನರು ಮತ್ತು ಸಮಯಸಿಕ್ಕಿದಾಗ ಸ್ವತಂತ್ರರಾಗಲು ಹವಣಿಸುವವರು. ಮಹಾ ಮಂಡಳೇಶ್ವರರನ್ನು ರಾಜ್ಯದ ಬೇರೆ ಬೇರೆ ಮಂಡಲ ಅಥವಾ ಭಾಗಗಳಿಗೆ ಅಧಿರಾಜನು ನೇಮಿಸುತ್ತಿದ್ದಂತೆ ಕಾಣುತ್ತದೆ."[89]

"ಸಾಮಂತ ಎಂಬ ಪದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ನಿಘಂಟಿನಲ್ಲಿ ಒಬ್ಬ ರಾಜನಿಗೆ ಅಧೀನರಾಗಿರುವ ರಾಜ ಮಾಂಡಳಿಕ ಎಂದು ಅರ್ಥ ಕೊಟ್ಟಿರುತ್ತದೆ. ಇದು ತೀರ ಸಾಮಾನ್ಯ ಸರಳ ಅರ್ಥ. ಮಹಾಸಾಮಂತ ಎಂಬುದರಲ್ಲಿ ಎರಡು ಪದಗಳಿವೆ 'ಮಹಾ' ಮತ್ತು 'ಸಾಮಂತ'; 'ಸಾಮಂತ' ಸ್ವಾಮ್ಯವಂತ (ಒಡೆಯ, ಒಡೆತನ ಪಡೆದವ)>ಸಾಮಂತ>ಸಾವಂತ ಎಂಬ ರೂಪಾಂತರ ಹೊಂದುತ್ತಾ ಬಂದಿದೆ. ಇದಕ್ಕೆ ಕೇವಲ ಗೌರವ ಸೂಚಕವಾಗಿ 'ಮಹಾ' ವಿಶೇಷಣ ಸೇರಿ ಮಹಾಸಾಮಂತ ಎಂಬ ಪದವಾಗಿದೆ. ಅಂದರೆ ಇಲ್ಲಿ ಸಾಮಂತ ಎಂದರೂ ಒಂದೇ, ಮಹಾಸಾಮಂತ ಎಂದರೂ ಒಂದೆ. ಇದು ಹುದ್ದೆಯನ್ನು ಸೂಚಿಸುವ ಪದವಾಗಿದೆ. ಇಂದು 'ಸಾಮಂತ' ಎಂಬ ಅಡ್ಡಹೆಸರಿನವರು ಮೂಲತಃ ಇಂಥ ಒಡೆಯರಾಗಿರುತ್ತಾರೆಂದು ಹೇಳ ಬಹುದಾಗಿದೆ."[90] ಎನ್ನುತ್ತಾರೆ ಜೆ.ಎಂ.ನಾಗಯ್ಯ. ಅದೇ ರೀತಿ ಮಂಡಳೇಶ್ವರ ಮತ್ತು ಮಹಾಮಂಡಳೇಶ್ವರರ ನಡುವಿನ ವ್ಯತ್ಯಾಸದಲ್ಲಿ ಎಂ.ಚಿದಾನಂದ ಮೂರ್ತಿಯವರ ಅಭಿಪ್ರಾಯವನ್ನು ಇಲ್ಲಿ ತೆಗೆದುಕೊಂಡಾಗ ಜೆ.ಎಂ.ನಾಗಯ್ಯನವರ ಅಭಿಪ್ರಾಯವನ್ನು ಒಪ್ಪಲಾಗುವುದಿಲ್ಲ. ಸಾಮಂತರ ಮೇಲೆ ಮಹಾಸಾಮಂತ ನಿರಬೇಕೆಂದು ಅನಿಸುತ್ತದೆ. ಸಾಮಂತ, ಮಹಾಸಾಮಂತ ಒಂದೇ ಎಂದರೂ ಸ್ವಲ್ಪ ಮಟ್ಟಿನ ವ್ಯತ್ಯಾಸಗಳನ್ನು ಗುರುತಿಸಬಹುದು. ಮಹಾಸಾಮಂತನು ಸಾಮಂತನಿಗಿಂತ ತುಸು ಹೆಚ್ಚಿನ ಅಧಿಕಾರವನ್ನು ಹೊಂದಿದ್ದನೆಂದು ಹೇಳಬಹುದು.

"ಸಾಮಂತರಲ್ಲಿ ಕೆಲವರು ರಾಜ ವಂಶಿಯರು ಇದ್ದರೆ, ಕೆಲವರು ರಾಜ ವಂಶದವರಲ್ಲದವರೂ ಇದ್ದಾರೆ. ಇವರೆಲ್ಲರೂ ಪ್ರಶಸ್ತಿಯನ್ನು ಧರಿಸಿದ್ದಾರೆ. ರಾಜವಂಶಿಯರು ವೈಯಕ್ತಿಕವಾಗಿ ಗಳಿಸಿದ ಬಿರುದುಗಳೊಂದಿಗೆ ತಮ್ಮ ಪಿತ್ರಾರ್ಜಿತ ಪ್ರಶಸ್ತಿಗಳನ್ನು ಧರಿಸಿದ್ದಾರೆ."[91] ಸಾಮಂತರು ಧರಿಸಿದ ಪ್ರಶಸ್ತಿಯನ್ನು ಸಾಮಾನ್ಯವಾಗಿ "ಸ್ವಸ್ತಿ, ಸಮಾಧಿಗತ, ಪಂಚಮಹಾಶಬ್ದ, ಮಹಾಸಾಮನ್ತಂ, ವೀರಲಕ್ಷ್ಮೀಕಾಂತಂ, ನುಡಿದು ಮತ್ತೆನ್ನಂ ಸುಜನ ಪ್ರಸನ್ನ ಎಂದು ಪ್ರಾರಂಭವಾಗುತ್ತದೆ. ಪ್ರತಿಯೊಬ್ಬರು ವಿಜಯಲಕ್ಷ್ಮಿಕಾಂನ್ತಂ ಇಲ್ಲವೆ ವೀರ ಲಕ್ಷ್ಮೀಕಾಂನ್ತಂ ಎಂಬ ಪ್ರಶಸ್ತಿಯನ್ನು ಧರಿಸಿದ್ದಾರೆ."[92] ಸಾಮಂತರು ರಾಜರಂತೆ ಪ್ರತ್ಯೇಕ ಧ್ವಜ ಲಾಂಛನಗಳನ್ನು ಹೊಂದಿರುತ್ತಿದ್ದರು. ರಾಜರಂತೆ ದೇಶ ಸಂಚಾರವನ್ನು ಕೈಗೊಂಡು ಪ್ರಜೆಗಳ ಸುಖ–ದುಃಖಗಳನ್ನು ವಿಚಾರಿಸುತ್ತಿದ್ದರು. ಆದಿ ರಾಜನ ಆಜ್ಞೆಯ ಮೇರೆಗೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಜಯ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಹೆಸರಿಸಲಾಗಿರುವ ಮಹಾಸಾಮಂತರನ್ನು ಕುರಿತು ಈ

ಮುಂದಿನಂತೆ ನೋಡಬಹುದಾಗಿದೆ.

**ಮಹಾಸಾಮಂತ ಲಖ್ಖಯ್ಯ :** ಕೊಪ್ಪಳದ ಕೋಟೆಯ ಬಳಿ ಬಿದ್ದಿರುವ ಶಾಸನ[93]ದಲ್ಲಿ ಮಹಾಸಾಮಂತ ಲಖ್ಖಯ್ಯನ ಉಲ್ಲೇಖ ಕಂಡುಬರುತ್ತದೆ. ಇವನು ಬಲ್ಲಕುಂದೆನಾಡು, ದೊರವದಿನಾಡು, ಸ್ವಾಮಿಆರುಂಬಾಡುವನ್ನು ಕುರುಗೋಡಿನಿಂದ ಆಳುತ್ತಿದ್ದನು. ಲಖ್ಖಯ್ಯನು ಮಹಾಮಂಡಳೇಶ್ವರ ಪೆರ್ಮಾಡಿ ಕಲಿದೇವರಸನ ಮಹಾಸಾಮಂತನಾಗಿದ್ದನು. ಈ ಸಾಮಂತನ ಕುರಿತು ಶಾಸನಗಳಲ್ಲಿ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

**ಸಾಮಂತ ಸೋಬನರಸ :** ಈ ಸೋಬನರಸ ಸಾಮಂತನ ಬಗ್ಗೆ ಜಿಲ್ಲೆಯ ಕೇವಲ ಎರಡು ಶಾಸನಗಳಲ್ಲಿ ಮಾತ್ರ ಉಲ್ಲೇಖವಿದೆ. ಇರಿವಬೆಡಂಗ ಸತ್ತಿದೇವ (ಸತ್ಯಾಶ್ರಯ)ನ ಆಳ್ವಿಕೆಯಲ್ಲಿ ಇವನ ಸಾಮಂತನಾದ ಸೋಬನರಸನು ಮಹೇಶ್ವರ ಧರ್ಮವನ್ನು ಆಚರಿಸುತ್ತಾ ಕುಕ್ಕನೂರು–30, ಬನವಾಸಿ–12000 ನಾಡುಗಳನ್ನು ಆಳ್ವಿಕೆ ನಡೆಸುತ್ತಿದ್ದಾಗ ಶ್ರೀ ಸೋಬನೇಶ್ವರ ದೇವರ ಅಂಗಭೋಗ ಮುಂತಾದವಕ್ಕೆ ದಾನ ನೀಡಿದಂತೆ ಕಲ್ಲೂರಿನ ಒಂದು ಶಾಸನ[94]ದಲ್ಲಿ ಉಲ್ಲೇಖ ಬಂದಿದೆ. ಅದರಂತೆ ಆಹವಮಲ್ಲನ ಆಳ್ವಿಕೆಯಲ್ಲಿಯೂ ಸಹ ಇವನು ಸಾಮಂತನಾಗಿ ಎಜಜಾಜುನೂಜು ಮತ್ತು ಬನವಾಸಿ–12000 ನಾಡುಗಳನ್ನು ಆಳುತ್ತಿದ್ದಾಗ ಬಂಕಾಪುರ ನೆಲೆ ವೀಡಿನಲ್ಲಿದ್ದಾಗ ಕಾಳದಾಲೂರಿನ ಸಿದ್ಧೇಶ್ವರದ ಸಂಕರಾಶಿಭಟಾರನ ಶಿಷ್ಯನಾದ ಅಮೃತರಾಶಿಮುನೀಶ್ವರನ ಕಾಲನ್ನು ತೊಳೆದು ಅಗ್ರಹಾರ ತಳಕಲ್ಲಿನ ನಾಗಲೇಶ್ವರ ದೇವಾಲಯಕ್ಕೆ 400 ಮತ್ತರು ಭೂಮಿಯನ್ನು ಧಾರೆಯೆರದ ಮಾಹಿತಿಯು ತಳಕಲ್ಲಿನಲ್ಲಿ ದೊರೆತ ಶಾಸನ[95]ದಲ್ಲಿ ದಾಖಲಾಗಿದೆ.

ಮೇಲಿನ ಎರಡು ಶಾಸನಗಳ ಕಾಲ ಕ್ರಿ.ಶ.991 ಮತ್ತು ಕ್ರಿ.ಶ.1002 ಆಗಿರುತ್ತದೆ. ಸೊಬನರಸನು ಈ ಎರಡು ಕಾಲದಲ್ಲಿ ಬನವಾಸಿ–12,000 ಹಾಗೂ ಇತರ ಪ್ರದೇಶಗಳಲ್ಲಿ ಸಾಮಂತನಾಗಿ ಕಾರ್ಯನಿರ್ವಹಿಸಿದ ಬಗ್ಗೆ ತಿಳಿದು ಬರುತ್ತದೆ.

ಈ ರೀತಿಯಾಗಿ ಜಿಲ್ಲೆಯ ಶಾಸನಗಳಲ್ಲಿ ಮಹಾಸಾಮಂತರ ಬಗ್ಗೆ ಕೆಲವೇ ಶಾಸನಗಳಲ್ಲಿ ಉಲ್ಲೇಖ ಬಂದಿವೆ. ಮೇಲಿನ ಶಾಸನಗಳಲ್ಲದೇ ಇನ್ನೂ ಕೆಲವು ಶಾಸನಗಳಲ್ಲಿ ಹೆಸರು ಉಲ್ಲೇಖವಿರದ ಮಹಾಸಾಮಂತರ ಪ್ರಸ್ತಾಪಗಳು ಬರುತ್ತವೆ. ನರೆಗಲ್‌ನಲ್ಲಿ ದೊರೆತ ಶಾಸನ[96]ದಲ್ಲಿ ಅರಸ ಮತ್ತು ಅವನ ಯಾವುದೋ ಒಬ್ಬ ಸಾಮಂತನು ಆಳ್ವಿಕೆ ನಡೆಸುತ್ತಿದ್ದುದನ್ನು ಉಲ್ಲೇಖಿಸುತ್ತದೆ. ಆದರೆ ಈ ಶಾಸನದಲ್ಲಿ ಆ ಸಾಮಂತನ ಹೆಸರುಗಳು ಅಥವಾ ಇತರ ಮಾಹಿತಿಗಳು ಲಭ್ಯವಾಗಿಗುವುದಿಲ್ಲ. ಅದರಂತೆ ಮಹಾಸಾಮಂತನನ್ನು ಅನೇಕ ಬಿರುದುಗಳಿಂದ ವರ್ಣಿಸಿದ ಒಂದು ಶಾಸನ[97] ಇಟಗಿಯಲ್ಲಿ ದೊರೆತಿದೆ. ಈ ಶಾಸನದಲ್ಲಿ ಮಹಾಸಾಮಂತನನ್ನು "ಶಿಷ್ಟಜನ ವತ್ಸಳ ವೀರಭೂಶ್ರಮನಹಿತ ಭದ್ರಾತವಿದೋಹ ಕಾಳನಳ ಸಮರದನಂಜಯ

ಪದಿನೆಣ್ಬುಗಣ್ಡ ಕಳೆಗೊಳ್ದಯ್ವೊನ ಸಹಿತ ಪರೋಪಕಾರಿ ಪುನಿಕಲ್ಲಳಿಸ ವೈರಿಕ್ರಿತ್ಸೆಲ್ಲ" ಎಂಬ ಮುಂತಾದ ಮಾತುಗಳಿಂದ ವರ್ಣಿಸಿದೆ. ಆದರೆ ಈ ಶಾಸನದ ಅರ್ಧ ಭಾಗವು ತೃಟಿತವಾಗಿರುವುದರಿಂದ ಸಾಮಂತನ ಹೆಸರಾಗಲಿ ಅಥವಾ ಇನ್ನಾವುದೇ ಮಾಹಿತಿ ದೊರೆಯುವುದಿಲ್ಲ. ಹಾಗೆಯೇ ಮತ್ತೊಂದು ಶಾಸನ[98]ದಲ್ಲಿ ವರ್ಮದೇವ ಸಾಮಂತನೊಬ್ಬನ ಹೆಸರು ಪ್ರಸ್ತಾಪಗೊಂಡಿದ್ದು ಉಳಿದ ಮಾಹಿತಿ ದೊರೆಯುವುದಿಲ್ಲ.

**ಕೊಪ್ಪಳ ಜಿಲ್ಲೆಯ ಶಾಸನೋಕ್ತ ಮಹಾಸಾಮಂತರ ಪಟ್ಟಿ**

| ಕ್ರ.ಸಂ. | ಸಾಮಂತರ ಹೆಸರು | ಅರಸರಹೆಸರು | ಕಾಲ | ಉಲ್ಲೇಖಿತ ಶಾಸನಸ್ಥಳ |
|---|---|---|---|---|
| 01. | ಉಲ್ಲೇಖವಿಲ್ಲ | ಉಲ್ಲೇಖವಿಲ್ಲ | 12ನೇ ಶ. | ನರೇಗಲ್ಲ |
| 02. | ಲಖ್ಖಿಯ್ಯ | ಪೆರ್ಮಾಡಿ ಕಲಿದೇವರಸ | ಕ್ರಿ.ಶ.1196 | ಕೊಪ್ಪಳ |
| 03. | ಸೋಬನರಸ | ಇರಿವಬೆಡಂಗ ಸತ್ತಿದೇವ | ಕ್ರಿ.ಶ.1002 | ಕಲ್ಲೂರು |
| 04. | ,, | ಆಹವಮಲ್ಲ | ಕ್ರಿ.ಶ.991 | ತಳಕಲ್ಲು |
| 05. | ಉಲ್ಲೇಖವಿಲ್ಲ | ಪೆರ್ಮಾನಡಿ ಮಾರಸಿಂಹ | ಕ್ರಿ.ಶ.968 | ಇಟಗಿ |
| 06. | ವರ್ಮದೇವ | ಆಹವಮಲ್ಲದೇವ | 11ನೇ ಶ. | ಹಿರೇಮನ್ನಾಪುರ |

**ದಂಡನಾಯಕ :**

ಚಕ್ರವರ್ತಿಯಿಂದ ನೇಮಿಸಲ್ಪಟ್ಟ ಅಧಿಕಾರಿ ವರ್ಗದವರಲ್ಲಿ ದಂಡನಾಯಕರಿಗೆ ವಿಶೇಷವಾದ ಗೌರವ ಸಲ್ಲುತ್ತಿತ್ತು. ದಂಡನಾಯಕನು ಚಕ್ರವರ್ತಿ ಹಾಗೂ ಪ್ರಜೆಗಳ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಾಮ್ರಾಜ್ಯದಲ್ಲಿ ಗಲಭೆ ಗದ್ದಲಗಳು ಜರುಗಿದರೆ ಈ ದಂಡನಾಯಕರು ದಮನ ಮಾಡುತ್ತಿದ್ದರು. ಸಾಮ್ರಾಜ್ಯದ ಬೇರೆ ಬೇರೆ ವಿಭಾಗಳಲ್ಲಿನ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಡಲು ಚಕ್ರವರ್ತಿಯು ದಂಡನಾಯಕನನ್ನು ನೇಮಿಸುತ್ತಿದ್ದನು. ದಂಡನಾಯಕರು ತಮ್ಮ ತಮ್ಮ ವಿಭಾಗದಲ್ಲಿನ ಪರಿಸ್ಥಿತಿಯ ಕುರಿತು ಚಕ್ರವರ್ತಿಗೆ ವರದಿ ಒಪ್ಪಿಸುತ್ತಿದ್ದರು.

"ದಂಡನಾಯಕರೆಲ್ಲರೂ ವೀರರಾಗಿದ್ದುದರಿಂದಲೂ 'ದಂಡ' ಶಬ್ದಕ್ಕೆ 'ಸೈನ್ಯ' ಎಂಬ ಅರ್ಥವಿರುವುದರಿಂದಲೋ ದಂಡನಾಯಕರೆಂದರೆ 'ಸೇನಾಪತಿ' ಎಂದೇ ಕರೆಯಲಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ 'ದಂಡ'ಕ್ಕೆ ವಿಶಿಷ್ಟ ಸ್ಥಾನವಿದೆ. ಸ್ವಾಮಿಗಳು, ಸನ್ಯಾಸಿಗಳು, ವಟುಗಳು ದೀಕ್ಷೆ ಮುಂತಾದ ಸಮಯದಲ್ಲಿ ದಂಡವನ್ನು ಹಿಡಿದಿರುತ್ತಾರೆ. ರಾಜನಿಂದ ಹುದ್ದೆಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅವರು ದಂಡವನ್ನು ಹಿಡಿಯುತ್ತಿರಬೇಕು. ಆದ್ದರಿಂದ ಅವರಿಗೆಲ್ಲ ದಂಡನಾಯಕ ಎಂಬ ಹೆಸರು ಸಾಮಾನ್ಯವಾಗಿ ಬಳಕೆಗೊಂಡಿರಬೇಕು."[99]

ಚಕ್ರವರ್ತಿಯು ಕೇಂದ್ರದಲ್ಲಿ ಮತ್ತು ಪ್ರಾಂತದಲ್ಲಿನ ಸುಂಕದ ಇಲಾಖೆಯಲ್ಲಿ, ಸೈನ್ಯದ ಇಲಾಖೆಯಲ್ಲಿ ಭಂಡಾರದ ಉಸ್ತುವಾರಿ ನೋಡಿಕೊಳ್ಳಲು ವಿದೇಶಾಂಗ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಲು ದಂಡನಾಯಕರನ್ನು ನೇಮಿಸುತ್ತಿದ್ದನು. ದಂಡನಾಯಕರ

ನೇಮಕದಲ್ಲಿ "ಪ್ರಲೋಭನೆಗಳಂಥ ವಿವಿಧ ಪರೀಕ್ಷೆಗಳನ್ನೊಡ್ಡಿ ಅದರಲ್ಲಿ ಯಶಸ್ವಿಯಾದವರನ್ನು ಮಾತ್ರ 'ದಂಡನಾಯಕ' ಹುದ್ದೆಗೆ ನೇಮಿಸಲಾಗುತ್ತಿತ್ತು. ಇದರಲ್ಲಿ ಕೆಲವರಿಗೆ ಮಹಾಪ್ರಧಾನ ಎಂಬುದು ಬಳಸಿದ್ದರೂ ಅದು ಗೌರವ ಸೂಚಕವಾಗಿದೆ."[100] ಮಹಾ ಎಂಬುದು ಏನೇ ಗೌರವ ಸೂಚಕ ಪದವಾದರೂ ಅವರು ದಂಡನಾಯಕರಲ್ಲಿ ಹಿರಿಯರಾಗಿದ್ದರು ಎಂಬುದನ್ನು ಮಂಡಳೇಶ್ವರ ಮತ್ತು ಸಾಮಂತ ಹುದ್ದೆಗಳಲ್ಲಿ ಗಮನಿಸಲಾಗಿದೆ. ದಂಡನಾಯಕರು ದೈಹಿಕವಾಗಿ ದಷ್ಟಪುಷ್ಟರಾಗಿರಬೇಕಾಗಿತ್ತು. ಇವರು ಯುದ್ಧದ ಹಾಗೂ ಗಲಭೆ ಸಂದರ್ಭಗಳಲ್ಲಿ ಹೋರಾಟ ಮಾಡಬೇಕಾಗಿತ್ತು. ಇದು ಇವರ ಜವಾಬ್ದಾರಿಗಳಲ್ಲಿ ಒಂದಾಗಿತ್ತು. ದಂಡನಾಯಕರು ಶಾಸನಗಳಲ್ಲಿ ರಾರಾಜಿಸಿದ್ದಾರೆ. ದಂಡನಾಯಕರು "ಪಿತ್ರಾರ್ಜಿತ ಪ್ರಶಸ್ತಿಗಳಿಗಿಂತ ಹೆಚ್ಚು ಸ್ವಾರ್ಜಿತ ಬಿರುದುಗಳನ್ನೇ ಧರಿಸಿದ್ದಾರೆ. ಅಧಿಕಾರಿವರ್ಗದವರಾಗಿದ್ದರಿಂದ ಇವರ ಮಗನು ದಂಡನಾಯಕನಾಗಬೇಕೆಂಬ ನಿಯಮವಿಲ್ಲ. ಅರ್ಹನಾಗಿದ್ದರೆ ಮಾತ್ರ ಅವನಿಗೆ ತಂದೆ ವಹಿಸಿದ್ದ ಹುದ್ದೆಯನ್ನು ಕೊಡಲಾಗುತ್ತಿತ್ತು ಹೀಗಾಗಿ ಸ್ವಾರ್ಜಿತ ಬಿರುದುಗಳನ್ನೇ ಇವರು ಧರಿಸಿದ್ದಾರೆ. ಇವರು ತಮ್ಮ ವಿದ್ಯಾಪಾರಂಗತೆ, ಶೌರ್ಯ, ಬುದ್ಧಿವಂತಿಕೆಗೈದು ಕಾರ್ಯಕ್ರಮಗಳನುಸಾರವಾಗಿ ಬಿರುದುಗಳನ್ನು ಹೊಂದಿರುತ್ತಾರೆ."[101]

**ದಂಡನಾಯಕ ಮಾವರಸ :** ರಾಷ್ಟ್ರಕೂಟ ರಾಜೇಂದ್ರನ ಕಾಲದಲ್ಲಿ ಈ ದಂಡನಾಯಕನು ರಾಜ್ಯಭಾರ ಮಾಡುತ್ತಿದ್ದನು. ಕದಂಬರು ತಮಗೆ ಪುಣ್ಯವಾಗಲೆಂದು ತಾವು ಕಟ್ಟಿಸಿದ ಒಂದು ಬಸದಿಗೆ ಈ ದಂಡನಾಯಕನು ಕಳಸಾರೋಹಣ ಮಾಡಿಸಿ ದಾನ ಕೊಟ್ಟನೆಂದು ಕೊಪ್ಪಳದ ಒಂದು ಶಾಸನ[102]ದಲ್ಲಿ ಉಲ್ಲೇಖವಿದೆ.

**ದಂಡನಾಯಕ ಗುಣದಬೆಡಂಗ :** "ಸ್ವಾಸ್ತ್ಯತಿಶಯ ವಿಶೇಷ ಗುಣಗಣಾಳಂಕೃತಂ ಸತ್ಯಶೌಚ ಸಂಪೂರ್ಣಂ ಕಲಿಕಾಲರ್ಣ್ಣಂನಾಶ್ರಿತ ಕಳ್ಪವೃಕ್ಷಂ ಪತಿಕಾರ್ಯ್ಯದಕ್ಷಂ ಪಿರಿದಿತ್ತು ಮಱೆವಂ ನಯವಂ ಮೆಱೆವಂ ಪತಿಹಿತಾಂಜನೇಯಂ ವಿಶ್ರಾನ್ತಕ......... ಯಣಂ ನೀತಿಪಾರಾಯಣಂ ಗಡಿಯಂಕಮಲ್ಲಂ ಕೀರ್ತಿಗೆನಲ್ಲಂ ಗಣ್ಡ ಪ್ರಚಣ್ಡಂ ಪರಿಚ್ಛೇದಿಗಣ್ಡಂ ಜಿನಪಾದಂಭೋಜಭೃಂಗಂ ಶ್ರೀಮದ್ದಣ್ಡನಾಯಕ ಗುಣದಬೆಡೆಂಗಂ"[103] ಎಂದು ದಂಡನಾಯಕನಾದ ಗುಣದಬೆಡಂಗನನ್ನು ವರ್ಣಿಸಿದೆ. ಆದರೆ ಈತನು ಯಾರ ಕೈಕೆಳಗೆ ಅಧಿಕಾರದಲ್ಲಿದ್ದ ಅಥವಾ ಯಾವ ಪ್ರದೇಶವನ್ನಾಳುತ್ತಿದ್ದ ಎಂಬ ಬಗ್ಗೆ ಉಲ್ಲೇಖಗಳಿಲ್ಲ. ಇವನ ತಂದೆ ತಾಯಿ ದಿಲೀಪ–ಚಿಣ್ಣಕಬ್ಬೆ ಮತ್ತು ಗುರು ನಯನಂದಿ ಭಟ್ಟಾರಕ ಎಂಬುದಾಗಿ ಶಾಸನ ತಿಳಿಸುತ್ತದೆ. ಪ್ರಸ್ತುತ ಶಾಸನದಲ್ಲಿ ತನ್ನ ಗುರುಗಳ ಸನ್ನಿಧಿಯಲ್ಲಿ ಸನ್ಯಸನ ವಿಧಿಯಿಂದ ಮುಡುಪಿದ ಬಗ್ಗೆ ಮಾತ್ರ ವಿವರವಿದೆ.

**ಮಾದಣ ದಂಡನಾಯಕ** : ಮಾದಣ ದಂಡನಾಯಕ ಕಟ್ಟಿಸಿದ ಬಸದಿ ರಾಯರ ರಾಜಗುರು ಮಂಡಳಾಚಾರ್ಯ ಶ್ರೀಮತ್ ಮಾಘನಂದಿ ಸಿದ್ಧಾನ್ತ ಚಕ್ರವರ್ತಿಯ ಪ್ರಿಯಶಿಷ್ಯ ಕೊಪಣಾತೀರ್ಥದ ಪ್ರೀಥಿಗೌಡ ಮತ್ತು ಅವನ ಹೆಂಡತಿ ಮಾತೌವೆಯ ಮಗ ಬೊಪ್ಪಣ ತಮ್ಮ ನೋಂಪಿ ಮುಂತಾದವರು ಚೌವೀಸ ತೀರ್ಥಂಕರ ಬಿಂಬ ಮಾಡಿಸಿದರೆಂದು ಶಾಸನ[104]ದಲ್ಲಿ ತಿಳಿಸಿದೆ. ಅಂದರೆ ಮಾದಣ ದಂಡನಾಯಕ ಒಂದು ಬಸದಿ ಕಟ್ಟಿಸಿದನೆಂದು ತಿಳಿದು ಬರುತ್ತದೆ. ಉಳಿದಂತೆ ದಂಡನಾಯಕನ ವಿವರಗಳು ತಿಳಿದು ಬರುವುದಿಲ್ಲ.

**ಮಹಾದೇವಯ್ಯ :** ಕ್ರಿ.ಶ.1125ರಲ್ಲಿ ಎರಡಾಋುನೂಱನ್ನು ಆಳುತ್ತಿದ್ದನು.[105] ಇವನು ಮಹಾಪ್ರಧಾನ ದಂಡನಾಯಕ ಹುದ್ದೆಯ ಜೊತೆಗೆ ಕನ್ನಡ ಸಂಧಿವಿಗ್ರಹಿ (ವಿದೇಶಾಂಗ ವಕ್ತಾರ) ಮತ್ತು ಮನೆವೆರ್ಗ್ಗಡೆ (ಸುಂಕಾಧಿಕಾರಿ) ಎರಡು ಖಾತೆಗಳನ್ನು ಹೊಂದಿದ್ದನು. ಇದರಿಂದ ರಾಜಾಡಳಿತದಲ್ಲಿ ಇವನೊಬ್ಬ ಪ್ರಬಲ ಅಧಿಕಾರಿಗಳಾಗಿದ್ದನೆಂದು ಹೇಳಬಹುದು.

**ಸೋವರಸ :** ಚಾಲುಕ್ಯ ತ್ರೈಲೋಕ ಮಲ್ಲನು ಆಳುತ್ತಿದ್ದಾಗ ಸೇನಾಪತಿ; ಮಹಾಪ್ರಚಂಡ ದಂಡನಾಯಕನಾಗಿ ಸೋವರಸನು ಆಳುತ್ತಿದ್ದನೆಂದು ಮುಧೋಳ ಶಾಸನ[106]ದಲ್ಲಿ ಉಲ್ಲೇಖಿಸಿದೆ. ಈ ಶಾಸನದಲ್ಲಿ ಸೋವರಸನನ್ನು ಮತ್ತು ಅವನ ಪತ್ನಿಯನ್ನು ವರ್ಣಿಸಿದೆ. ಇವನ ಪತ್ನಿ ಬೊಮ್ಮಲದೇವಿ ಹರಿಹರನ ದೇವಾಲಯವನ್ನು ನಿರ್ಮಿಸಿದಳೆಂದು ಮೇಲಿನ ಶಾಸನದಲ್ಲಿ ಉಲ್ಲೇಖವಿದೆ.

**ಬೀವರಸ, ಅಮ್ಮಣರಸ, ಅಮ್ಮಣಯ್ಯ, ವಿಟ್ಟಪ್ಪಯ್ಯ, ಬಲದೇವಯ್ಯ, ಬಲದೇವ, ಸಾಯಣ, ಬೊಪ್ಪಣ ನಾಯಕ** : ಬಿಜ್ಜಳನ ಆಳ್ವಿಕೆಯಲ್ಲಿ ಅವನ ಕೈಕೆಳಗಿದ್ದ ದಂಡನಾಯಕರುಗಳು ಇವರು. ಈ ಎಲ್ಲಾ ದಂಡನಾಯಕರನ್ನು ಕುಕ್ಕನೂರಿನ ಒಂದು ಶಾಸನ[107]ದಲ್ಲಿ ಕಾವ್ಯಮಯವಾಗಿ ವರ್ಣಿಸಿದೆ. ಮತ್ತು ಅರಸ ಬಿಜ್ಜಳನನ್ನು ಮಲ್ಲಿಕಾರ್ಜುನ ದೇವರನ್ನು ಸವಿಸ್ತಾರವಾಗಿ ವರ್ಣಿಸಿದೆ. ಈ ಶಾಸನದಲ್ಲಿ ಈ ಎಲ್ಲಾ ದಂಡನಾಯಕರು ಹಾಗೂ ಇತರ ಅಧಿಕಾರಿ ವರ್ಗದವರು ಸೇರಿಕೊಂಡು ಹಂಪೆಯ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಊರಿನ 15 ಜನ ಬ್ರಾಹ್ಮಣರಿಗೆ ದಾನ ನೀಡುತ್ತಾರೆ.

**ತೇಜರಾಜ, ಶ್ರೀಕರಣದ ವಾವಣದೇವ, ಬಂಮಿದೇವ, ಬೊಪ್ಪಣ ನಾಯಕ, ಮಹಾದೇವ ನಾಯಕ, ಕಾಳಿಮಯ್ಯ ನಾಯಕ, ಮಧುವಯ್ಯ :** ಕಳಚೂರಿ ಅರಸನಾದ ಸೋವಿದೇವನ ದಂಡನಾಯಕರು ಇವರುಗಳಾಗಿದ್ದಾರೆ. ಇವರನ್ನು ಉಲ್ಲೇಖಿಸುವ ಶಾಸನ[108] ಕುಕ್ಕನೂರಿನಲ್ಲಿದೆ. ಈ ಎಲ್ಲ ದಂಡನಾಯಕರ ಹೆಸರುಗಳು ಮಾತ್ರ ಪ್ರಸ್ತಾಪವಿದೆ. ಉಳಿದಂತೆ ಯಾವುದೇ ಮಾಹಿತಿಗಳು ಲಭ್ಯವಾಗುವುದಿಲ್ಲ.

**ಹರಿಶ್ಚಂದ್ರ, ಲಿಖ್ಖಿದೇವ, ದುನುಂಗಿ :** ಯಲಬುರ್ಗಾ ತಾಲೂಕಿನ ಕುಕನೂರಿನ ಒಂದು ಶಾಸನ[109]ದಲ್ಲಿ ಈ ಮೂರು ದಂಡನಾಯಕರ ಉಲ್ಲೇಖಗಳು ಬರುತ್ತವೆ. ಈ

ಮೂರು ದಂಡನಾಯಕರು ತಂದೆ, ಮಗ ಮತ್ತು ಮೊಮ್ಮಗರಾಗಿದ್ದಾರೆ. ಈ ಶಾಸನದಲ್ಲಿ ಇವರ ವಂಶಾವಳಿಯನ್ನು ವಿವರಿಸುವುದರ ಜೊತೆಗೆ ಲಿಖ್ಖಿದೇವನು ಕುಕನೂರಿನ ಕಾಳಿಕಾಜೇಷ್ಠಿಗೆ ಮಹಾಪೂಜೆ ಮಾಡಿದನೆಂದು ವಿವರಿಸಿದೆ. ಪ್ರಸ್ತುತ ಶಾಸನದಲ್ಲಿ ಒಂಬತ್ತು ಶಿವಲಿಂಗ ಪೀಠಗಳನ್ನು ಮತ್ತು ಅನೇಕ ಹೆಣ್ಣು ದೇವತೆಗಳನ್ನು ವರ್ಣಿಸಿದೆ.

**ಮಹಾದೇವ ದಂಡನಾಯಕ :** ಜಿಲ್ಲೆಯ ಶಾಸನಗಳಲ್ಲಿ ಪ್ರಸ್ತಾಪಿತ ದಂಡನಾಯಕರಲ್ಲಿ ಪ್ರಮುಖನಾದ ದಂಡನಾಯಕನು ಮಹಾದೇವನೆಂದರೆ ತಪ್ಪಾಗಲಾರದು. ಇವನನ್ನು ಕುರಿತು ಒಂದು ಶಾಸನ[110]ದಲ್ಲಿ ಉಲ್ಲೇಖವಿದೆ. ಈತನು ದಂಡನಾಥ, ಮಹಾಪ್ರಧಾನ, ಕನ್ನಡ ಸಂಧಿವಿಗ್ರಹಿ, ಮನವೆರ್ಗಡೆ ಮುಂತಾದ ಅಧಿಕಾರಗಳನ್ನು ಪಡೆದಿದ್ದನು. ಪ್ರಸ್ತುತ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯನ ಮತ್ತು ಈ ದಂಡನಾಯಕನ ವಂಶಾವಳಿಯನ್ನು ವಿವರಿಸಿದೆ. ಈ ಮಹಾದೇವ ದಂಡನಾಯಕನು ತನ್ನ ಹೆಸರಿನಲ್ಲಿ ಈಶ್ವರ ದೇವಾಲಯವನ್ನು, ತಂದೆಯ ಹೆಸರಿನಲ್ಲಿ ನಾರಾಯಣ ದೇವಾಲಯವನ್ನು, ತಾಯಿಯ ಹೆಸರಿನಲ್ಲಿ ಚಂದಲೇಶ್ವರಿ ದೇವಾಲಯವನ್ನು ಕಟ್ಟಿಸುತ್ತಾನೆ. ಈ ಮಹಾದೇವನು ತಾನು ಇಟಗಿಯಲ್ಲಿ ಕಟ್ಟಿಸಿದ ಮಹಾದೇವ ದೇವಾಲಯಕ್ಕೆ ದಾನ ನೀಡುತ್ತಾನೆ. ಈ ಮಹಾದೇವ ದೇವಾಲಯದ ಕೆತ್ತನೆ ಶಿಲ್ಪ ಕಲೆಗಳಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದ್ದು ಇದನ್ನು ಶಾಸನದಲ್ಲಿ ದೇವಾಲಯಗಳ ಚಕ್ರವರ್ತಿ ಎಂದೇ ವರ್ಣಿಸಿದೆ. ಇಂತಹ ಮಹಾನ್ ದೇವಾಲಯವನ್ನು ಕಟ್ಟಿಸಿದ ಮಹಾದಂಡನಾಯಕನೇ ಈ ಮಹಾದೇವನಾಗಿದ್ದಾನೆ.

**ಕಠಾರದ ದಿವಾಕರ :** ಇವನು ಕಳಚೂರಿಗಳ ಸಿಂಘಣದೇವನ ಆಳ್ವಿಕೆಯಲ್ಲಿ ದಂಡನಾಯಕನಾಗಿದ್ದನೆಂದು ಶಾಸನ[111]ದಲ್ಲಿ ಉಲ್ಲೇಖಿಸಿದೆ. ಈ ಶಾಸನದಲ್ಲಿ ಕಲಚೂರಿಗಳ ವಂಶಾವಳಿಯನ್ನು ವಿವರಿಸಿದೆ. ಅಲ್ಲದೆ ಸಿಂಘಣದೇವನು ಕುಕನೂರಿನ ಜೇಷ್ಠಾದೇವಿಗೆ ಎಲ್ಲಾ ರೀತಿಯ ತೆರಿಗೆಯನ್ನು ಮುಕ್ತಗೊಳಿಸಿದ. ಈ ದಂಡನಾಯಕನಾದ ದಿವಾಕರನು ಐದು ಮತ್ತರು ಭೂಮಿ ಮತ್ತು ಒಂದು ಮನೆಯನ್ನು ದಾನ ಬಿಟ್ಟನೆಂದು ತಿಳಿಸುತ್ತದೆ.

**ಶ್ರೀಧರ ದಂಡನಾಯಕ :** ರಾಜೂರು ಶಾಸನ[112]ದಲ್ಲಿ ಇವನ ಹೆಸರು ಮಾತ್ರ ಉಲ್ಲೇಖವಿದ್ದು, ಇವನ ಮಗನಾದ ಮಾಳಪರಸನ ದಾನದ ವಿವರವಿದೆ. ಈ ಮಾಳಪರಸನ ಅಧಿಕಾರದ ಯಾವುದೇ ಮಾಹಿತಿ ದೊರೆಯದೆ ತಾನು ಕಟ್ಟಿಸಿದ ಬಸದಿಗೆ ಹೊಲ ಗದ್ದೆ ದಾನ ಕೊಟ್ಟ ಬಗ್ಗೆ ಶಾಸನದಲ್ಲಿ ಹೇಳಲಾಗಿದೆ.

**ರೇಚಿಮಯ್ಯ ದಂಡನಾಯಕ :** ಪುರದ ಒಂದು ತೃಟಿತ ಶಾಸನ[113]ದಲ್ಲಿ ಇವನ ಉಲ್ಲೇಖ ಬರುತ್ತದೆ. ಈ ಶಾಸನದಲ್ಲಿ ಅನೇಕ ಕರಣಗಳು, ಅಧಿಕಾರಿಗಳು, ಅರಸರು, ಅಗ್ರಹಾರಗಳ ಅಧಿಕಾರಿಗಳು ಮಹಾಸಭೆ ಸೇರಿದ್ದ ಈ ಸಭೆಯಲ್ಲಿ ರೇಚಿಮಯ್ಯನು ದಂಡನಾಯಕನು ಪಾಲ್ಗೊಂಡಿದ್ದನು. ಮಹಾನ್ ಮಹಾನ್ ವ್ಯಕ್ತಿಗಳು ಸೇರಿದ್ದ ಈ

ಸಭೆಯನ್ನು ದೇವಸಭೆ, ರಾಜ್ಯಸಭೆ, ಮಹಾಸಭೆ ಎಂದು ಶಾಸನದಲ್ಲಿ ವರ್ಣಿಸಿದೆ. ಈ ಸಭೆಯಲ್ಲಿ ಶ್ರೀ ಗವರೇಶ್ವರ ದೇವರಿಗೆ ಮತ್ತು ಬ್ರಾಹ್ಮಣರಿಗೆ ದಾನ ಕೊಡುವ ಬಗ್ಗೆ ಒಮ್ಮತದಿಂದ ತೀರ್ಮಾನಿಸಿದರೆಂದು ಶಾಸನದಲ್ಲಿ ಉಲ್ಲೇಖಿಸಿದೆ.

**ಲಕ್ಷ್ಮೀದೇವ, ಬೊಪ್ಪ, ಚಾಮುಂಡ, ಮಾಚಣ, ಬೂಚ :** ಕುಷ್ಟಗಿ ತಾಲೂಕಿನ ಚಳಗೇರಿಯಲ್ಲಿನ ಕ್ರಿ.ಶ.12ನೇ ಶತಮಾನದ ಕಾಲಕ್ಕೆ ಸೇರಿದ ಶಾಸನ[114]ದಲ್ಲಿ ಒಂದೇ ವಂಶದ ಈ ಎಲ್ಲಾ ದಂಡನಾಯಕರನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ಅವರ ವಂಶಾವಳಿಯನ್ನು ವಿವರಿಸಿದೆ. ಇಲ್ಲಿ ಬೂಚ ದಂಡನಾಥನು ಕಟ್ಟಿಸಿದ ಲಕ್ಷ್ಮೀನಾರಾಯಣ ದೇವಾಲಯಕ್ಕೆ ಲಕ್ಷ್ಮೀ ದಂಡನಾಥನು ದಾನವನ್ನು ನೀಡುತ್ತಾನೆ. ಜೊತೆಗೆ ಅನೇಕ ಅಧಿಕಾರಿಗಳೂ ದೇವಾಲಯಕ್ಕೆ ಮತ್ತು ಊರಿನ ಬ್ರಾಹ್ಮಣ ವರ್ಗಕ್ಕೆ ದಾನ ನೀಡುತ್ತಾರೆ.

**ಮಹಾವಿಷ್ಣುವರಸ :** ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಈ ದಂಡನಾಯಕನು ಆಳ್ವಿಕೆ ನಡೆಸುತ್ತಿದ್ದನು. ಈತನನ್ನು ಕುರಿತು ಕೇವಲ ಒಂದು ಶಾಸನ ಉಲ್ಲೇಖಿಸುತ್ತದೆ. ಮಹಾಪ್ರಧಾನ ಧರ್ಮಾಧ್ಯಕ್ಷ ಸೋಮೇಶ್ವರ ಭಟ್ಟೋಪಾಧ್ಯಾಯರು ಮಹಾವಿಷ್ಣುವರಸ ಮತ್ತು ಇನ್ನೂ ಕೆಲವರು ಅಧಿಕಾರಿಗಳು ಜೊತೆಗೂಡಿ ಪೆಂದೇಕೆರೆಯಲ್ಲಿ ಸತ್ರ ಶಾಲೆಯನ್ನು ಮಾಡಿಸಿದರೆಂದು ಕ್ರಿ.ಶ.1095ರ ಶಾಸನ[115]ದಿಂದ ತಿಳಿದುಬರುತ್ತದೆ.

**ಸೋಬನರಸ, ಪತ್ತರತಾಣ, ಬಮ್ಮೆಯ ನಾಯಕ :** 11–12ನೇ ಶತಮಾನಕ್ಕೆ ಸೇರಿದ ಬಹಳ ತೃಟಿತಗೊಂಡ ಒಂದು ಶಾಸನ[116]ದಲ್ಲಿ ಹೆಸರುಗಳು ಮತ್ತು ಕೇಶವ ದೇವರ ಉಲ್ಲೇಖಗಳಿವೆ. ಈ ಶಾಸನದ ಬಹುಭಾಗ ತೃಟಿತಗೊಂಡಿರುವುದರಿಂದ ಯಾವುದೇ ಮಾಹಿತಿಗಳು ದೊರೆಯುವುದಿಲ್ಲ.

**ಹರಿಹರ ದಂಡನಾಯಕ, ಬೈಚ ದಂಡನಾಯಕ :** ಆನೆಗೊಂದಿಯ ಒಂದು ಶಾಸನ[117]ದಲ್ಲಿ ಈ ದಂಡನಾಯಕರ ಹೆಸರುಗಳು ಮಾತ್ರ ಉಲ್ಲೇಖಗೊಂಡಿವೆ. ಹರಿಹರನ ದಂಡನಾಯಕನಾದ ಬೈಚದಂಡನಾಯಕನ ಮಗ ಇರುಗಪನು ಶಿಲಾಚೈತ್ಯಾಲಯವನ್ನು ನಿರ್ಮಿಸಿದನು. ಇದಕ್ಕೆ ಬೈಚ ದಂಡನಾಯಕನು ದಾನ ನೀಡಿದನೆಂದು ಶಾಸನದಲ್ಲಿ ಉಲ್ಲೇಖಿಸಿದೆ. ಈ ಶಾಸನವು ಕೂಡ ತೃಟಿತಗೊಂಡಿರುವುದರಿಂದ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

ಈ ರೀತಿಯಾಗಿ ಜಿಲ್ಲೆಯಾದ್ಯಂತ ದೊರೆತ ಶಾಸನಗಳಲ್ಲಿ ದಂಡನಾಯಕರ ಪ್ರಸ್ತಾಪಗಳು ಬಂದಿರುವುದನ್ನು ಈ ಮೇಲಿನಂತೆ ನೋಡಬಹುದಾಗಿದೆ. ಆದರೆ ಬಹುತೇಕ ಶಾಸನಗಳ ಪಾಠಗಳು ತೃಟಿತಗೊಂಡಿರುವುದರಿಂದ ಅವರ ಬಗೆಗಿನ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಆದುದರಿಂದ ದೊರೆತ ಮಾಹಿತಿಗಳ ಆಧಾರದ ಮೇಲೆ ದಂಡನಾಯಕರ ವಿವರಗಳನ್ನು ಅದರಲ್ಲೂ ಅವರ ಸಾಂಸ್ಕೃತಿಕ ಕೊಡುಗೆಯ ವಿವರಗಳನ್ನು ಮಾತ್ರ ವಿವೇಚಿಸಲಾಗಿದೆ. ದಂಡನಾಯಕರಾದವರು ಕೆಲವೊಮ್ಮೆ

ವಂಶಪಾರಂಪರ್ಯವಾಗಿ ಬಂದ ಹುದ್ದೆಯನ್ನು ನಿರ್ವಹಿಸಿದರೆ, ಕೆಲವೊಮ್ಮೆ ಅವರ ಸಾಮರ್ಥ್ಯವನ್ನು ನೋಡಿ ರಾಜನೇ ಅವರನ್ನು ಆ ಸ್ಥಾನಕ್ಕೆ ನೇಮಿಸಿರುವ ಸಾಧ್ಯತೆಗಳು ಕಾಣಿಸಿಕೊಳ್ಳುತ್ತವೆ.

**ಶಾಸನೋಕ್ತ ದಂಡನಾಯಕರ ಪಟ್ಟಿ :**

| ಕ್ರ.ಸಂ. | ದಂಡನಾಯಕರಹೆಸರು | ಅರಸರು | ಕಾಲ | ಉಲ್ಲೇಖಿತ ಶಾಸನಸ್ಥಳ |
|---|---|---|---|---|
| 01. | ಮಾಮರಸ | ರಾಷ್ಟ್ರಕೂಟಇಂದ್ರ | ಕ್ರಿ.ಶ.883 | ಕೊಪ್ಪಳ |
| 02. | ಗುಣದಬೆಡಂಗ | – | ಕ್ರಿ.ಶ.1032 | ಕೊಪ್ಪಳ |
| 03. | ಮಾದಣ | ನಂದಿ ಸಿದ್ಧಾಂತ ಚಕ್ರವರ್ತಿ | – | ಯಲಬುರ್ಗಾ |
| 04. | ಮಹಾದೇವಯ್ಯ | ಚಾಲುಕ್ಯತ್ರೈಲೋಕ್ಯ ಮಲ್ಲದೇವ | ಕ್ರಿ.ಶ.1125 | ಕಲ್ಲೂರು |
| 05. | ಸೋವರಸ | ಚಾವುಂಡರಸ | 11ನೇ ಶ. | ಮುಧೋಳ |
| 06. | ಅಮ್ಮಣರಸ | ಬಿಜ್ಜಳ | ಕ್ರಿ.ಶ.1163 | ಕುಕನೂರು |
| 07. | ಬೊಪ್ಪಣ ನಾಯಕ | ಬಿಜ್ಜಳ | ಕ್ರಿ.ಶ.1163 | ಕುಕನೂರು |
| 08. | ಬೀವರಸ | ಬಿಜ್ಜಳ | ಕ್ರಿ.ಶ.1163 | ಕುಕನೂರು |
| 09. | ಸಾಯಣ | ಬಿಜ್ಜಳ | ಕ್ರಿ.ಶ.1163 | ಕುಕನೂರು |
| 10. | ಬಲದೇವ | ಬಿಜ್ಜಳ | ಕ್ರಿ.ಶ.1163 | ಕುಕನೂರು |
| 11. | ವಿಟ್ಟಪ್ಪಯ್ಯ | ಬಿಜ್ಜಳ | ಕ್ರಿ.ಶ.1163 | ಕುಕನೂರು |
| 12. | ತೇಜರಾಜ | ಕಳಚೂರಿ ಸೋವಿದೇವ | ಕ್ರಿ.ಶ.1170 | ಕುಕನೂರು |
| 13. | ಬೊಪ್ಪಣನಾಯಕ | ಕಳಚೂರಿ ಸೋವಿದೇವ | ಕ್ರಿ.ಶ.1170 | ಕುಕನೂರು |
| 14. | ಶ್ರೀಕರಣದವಾಮಣದೇವ | ಕಳಚೂರಿ ಸೋವಿದೇವ | ಕ್ರಿ.ಶ.1170 | ಕುಕನೂರು |
| 15. | ಮಹಾದೇವನಾಯಕ | ಕಳಚೂರಿ ಸೋವಿದೇವ | ಕ್ರಿ.ಶ.1170 | ಕುಕನೂರು |
| 16. | ಕಾಳಿಮಯ್ಯ ನಾಯಕ | ಕಳಚೂರಿ ಸೋವಿದೇವ | ಕ್ರಿ.ಶ.1170 | ಕುಕನೂರು |
| 17. | ಮಧುವಯ್ಯ | ಕಳಚೂರಿ ಸೋವಿದೇವ | ಕ್ರಿ.ಶ.1170 | ಕುಕನೂರು |
| 18. | ಬಂಮ್ಮಿದೇವ | ಕಳಚೂರಿ ಸೋವಿದೇವ | ಕ್ರಿ.ಶ.1170 | ಕುಕನೂರು |
| 19. | ಹರಿಶ್ಚಂದ್ರ | ಸಿಂದರಾಜ ಪೆರ್ಮಾಡಿ | ಕ್ರಿ.ಶ.1178 | ಕುಕನೂರು |
| 20. | ದನುಂಗಿ | ಸಿಂದರಾಜ ಪೆರ್ಮಾಡಿ | ಕ್ರಿ.ಶ.1178 | ಕುಕನೂರು |
| 21. | ಲಖ್ಖಿದೇವ | ಸಿಂದರಾಜ ಪೆರ್ಮಾಡಿ | ಕ್ರಿ.ಶ.1178 | ಕುಕನೂರು |
| 22. | ಮಹಾದೇವ | 6ನೇ ವಿಕ್ರಮಾದಿತ್ಯ | ಕ್ರಿ.ಶ.1113 | ಇಟಗಿ |
| 23. | ದಿವಾಕರ | ಸಿಂಘಣದೇವ | ಕ್ರಿ.ಶ.1183 | ಇಟಗಿ |
| 24. | ಶ್ರೀಧರ | 6ನೇ ವಿಕ್ರಮಾದಿತ್ಯ | – | ರಾಜೂರು |
| 25. | ರೇಚಿಮಯ್ಯ | – | 12ನೇ ಶ. | ಪುರ |

| | | | | |
|---|---|---|---|---|
| 26. | ಚಿಮಯ್ಯ | | ಪುರ | |
| 27. | ಲಕ್ಷ್ಮೀದೇವ | ದಾಸಿಗ(ಮಂಡಳೇಶ್ವರ) | ಕ್ರಿ.ಶ.1172 | ಚಳಗೇರಿ |
| 28. | ಬೊಪ್ಪದಂಡೇಶ | ದಾಸಿಗ(ಮಂಡಳೇಶ್ವರ) | ಕ್ರಿ.ಶ.1172 | ಚಳಗೇರಿ |
| 29. | ಚಾಮುಂಡದಂಡೇಶ | ದಾಸಿಗ(ಮಂಡಳೇಶ್ವರ) | ಕ್ರಿ.ಶ.1172 | ಚಳಗೇರಿ |
| 30. | ಬೂಚದಂಡನಾಥ | ದಾಸಿಗ(ಮಂಡಳೇಶ್ವರ) | ಕ್ರಿ.ಶ.1172 | ಚಳಗೇರಿ |
| 31. | ಮಾಚಣ | ದಾಸಿಗ(ಮಂಡಳೇಶ್ವರ) | ಕ್ರಿ.ಶ.1172 | ಚಳಗೇರಿ |
| 32. | ಮಹಾವಿಷ್ಣುವರಸ | ತ್ರಿಭುವನಮಲ್ಲ | ಕ್ರಿ.ಶ.1095 | ಅಂತೂರುತಾಣ |
| 33. | ಸೋಬನರಸ | ತ್ರಿಭುವನಮಲ್ಲ | 11–12ಶ. | ಅಂತೂರುತಾಣ |
| 34. | ಪತ್ತರತಾಣ | ತ್ರಿಭುವನಮಲ್ಲ | 11–12ಶ. | ಅಂತೂರುತಾಣ |
| 35. | ಬಮ್ಮೆಯ ನಾಯಕ | ತ್ರಿಭುವನಮಲ್ಲ | 11–12ಶ. | ಅಂತೂರುತಾಣ |
| 36. | ಬೈಚದಂಡನಾಯಕ | ಹರಿಹರ | ಕ್ರಿ.ಶ.1342 | ಆನೆಗೊಂದಿ |
| 37. | ಹರಿಹರ | – | ಕ್ರಿ.ಶ.1342 | ಆನೆಗೊಂದಿ |
| 38. | ಉಲ್ಲೇಖವಿಲ್ಲ | ಚಾಳುಕ್ಯ ಜಗದೇಕಮಲ್ಲ | ಕ್ರಿ.ಶ.1018 | ಪುರ |

**II–ಅಧಿಕಾರಿವರ್ಗ:**

ಆಡಳಿತ ವ್ಯವಸ್ಥೆ ನಿರ್ವಿಘ್ನವಾಗಿ ಸಾಗಬೇಕಾದರೆ ಪ್ರಭುವರ್ಗದವರ ಆಜ್ಞಾನುಸಾರ ಆಡಳಿತ ಕಾರ್ಯ ನಿರ್ವಹಿಸುವ ಅಧಿಕಾರಿವರ್ಗ ಅತ್ಯವಶ್ಯ. ಪ್ರಾಚೀನ ಕಾಲದಿಂದಲೂ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಕೇಂದ್ರಾಡಳಿತ ಮತ್ತು ಗ್ರಾಮಾಡಳಿತವೆಂದು ಎರಡು ರೀತಿಯಲ್ಲಿ ಆಡಳಿತ ಪದ್ಧತಿ ರೂಢಿಯಲ್ಲಿತ್ತು. ಕೇಂದ್ರದಲ್ಲಿ ಚಕ್ರವರ್ತಿಯು ವಿವಿಧ ಇಲಾಖೆಗಳಿಗೆ ಹಲವು ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಅದರಂತೆ ಗ್ರಾಮಾಡಳಿತದಲ್ಲಿನ ಅಧಿಕಾರಿಗಳನ್ನು ಪ್ರಭುಗಾವುಂಡರು ನೇಮಿಸುತ್ತಿದ್ದರು. ವಿವಿಧ ಇಲಾಖೆಗಳಿಗೆ ಅಧಿಕಾರಿಗಳನ್ನು ನೇಮಿಸುವಾಗ ಅವರ ವಿದ್ಯೆ, ಪ್ರತಿಭೆ, ಚಾಣಕ್ಷತನ, ಬುದ್ಧಿವಂತಿಕೆಗಳನ್ನು ಗಮನಿಸಿ ನೇಮಕಾತಿ ಮಾಡಿಕೊಳ್ಳುತ್ತಿದ್ದರು. ನೇಮಕಾತಿ ಪೂರ್ವದಲ್ಲಿ ಅವರನ್ನು ಅನೇಕ ರೀತಿಯ ಪ್ರಲೋಭನೆಗಳನ್ನೊಡ್ಡಿ ಪರೀಕ್ಷಿಸಲಾಗುತ್ತಿತ್ತು. ಒಳ್ಳೆಯ ಗುಣಗಳಿಂದ, ಪ್ರಾಮಾಣಿಕತೆಯಿಂದ, ದಕ್ಷತೆ, ನಿಸ್ವಾರ್ಥ ಸೇವೆಯಿಂದ ಉನ್ನತ ಅಧಿಕಾರಿಗಳಾಗುತ್ತಿದ್ದರು. ಅಂದು ಗುಣ ಮತ್ತು ಪ್ರತಿಭಾವಂತರಿಗೆ ಪ್ರೋತ್ಸಾಹವಿತ್ತು.

"ಶಾಸನಗಳಲ್ಲಿ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಅನೇಕ ಪಾರಿಭಾಷಿಕ ಪದಗಳು ಕಂಡು ಬರುತ್ತವೆ. ಈವರೆಗೆ ಈ ಎಲ್ಲ ಪದಗಳು ಹುದ್ದೆಗಳನ್ನು ಸೂಚಿಸುತ್ತವೆ ಎಂದು ನಂಬಲಾಗಿದೆ. ಆದರೆ ಇವುಗಳನ್ನು ಪದವಿ, ಶ್ರೇಣಿ ಮತ್ತು ಹುದ್ದೆ ಎಂಬ ಮೂರು ವರ್ಗಗಳಾಗಿ ವಿಂಗಡಿಸಬಹುದೆಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಮಹಾಮಾತ್ಯ, ಮಹಾಪ್ರಧಾನ, ಸಚಿವ–ಮಂತ್ರಿ, ಪಸಾಯಿತ ಎಂಬ ಪದವಿ ಸೂಚಿಗಳಾದರೆ ಮಹಾಸಾಮಂತ ಅಧಿಪತಿ, ಮಹಾಪ್ರಚಂಡ ದಂಡನಾಯಕ

ಮತ್ತು ದಂಡನಾಯಕ ಎಂಬ ಅಧಿಕಾರಿ ಶ್ರೇಣಿಗಳಾಗಿದ್ದು, ರಾಜ್ಯಾಧ್ಯಕ್ಷ, ಅಂತಃಪುರಾಧ್ಯಕ್ಷ, ನಿಯೋಗಿ, ಪಡೆವಳ, ಪೆರ್ಗಡೆ, ಪಡಿಹಾರ, ಎಡೆಪವಳ, ಕರಣಿಕ–ಸೇನಬೋವ–ಕುಲಕರ್ಣಿ, ತಳವಾರ ಎಂಬ ನೇರವಾಗಿ ಹುದ್ದೆಯನ್ನು ಸೂಚಿಸುತ್ತವೆ."[118] "ಚಕ್ರವರ್ತಿಯಿಂದ ನೇಮಿಸಲ್ಪಟ್ಟ ಅಧಿಕಾರಿಗಳಲ್ಲಿ ಕೆಲವರು ಮಾತ್ರ ರಾಜಧಾನಿಯಲ್ಲಿರುತ್ತಿದ್ದರು. ಸುಂಕದ ಅಧಿಕಾರಿಗಳು ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿದ್ದು ಸುಂಕ ಸಂಗ್ರಹಿಸುತ್ತಿದ್ದರು. ಸೈನ್ಯದ ಅಧಿಕಾರಿಗಳಲ್ಲಿ ಕೆಲವರು ರಾಜಧಾನಿಯಲ್ಲಿದ್ದರೆ ಹೆಚ್ಚಿನ ಅಧಿಕಾರಿಗಳು ಸಾಮ್ರಾಜ್ಯದ ವಿವಿಧಡೆಗಳಲ್ಲಿ ಸೈನ್ಯದೊಂದಿಗೆ ಇರುತ್ತಿದ್ದರು. ಬಿಡಿ ಭಾಗಗಳಲ್ಲಿ ಇಂತಹ ಅಧಿಕಾರಿಗಳು ಸದಾ ಸಿದ್ಧರಿರುತ್ತಿದ್ದರು. ಈ ಶ್ರೇಣಿಯ ಅಧಿಕಾರಿಗಳು ಚಕ್ರವರ್ತಿಯ ಸಾಮ್ರಾಜ್ಯಕ್ಕೆ ಆಧಾರ ಸ್ತಂಭಗಳಾಗಿದ್ದರು. ಚಕ್ರವರ್ತಿಗಾಗಿ ಯಾವುದೇ ಸಮಯದಲ್ಲಿ ಎಂಥ ತ್ಯಾಗಕ್ಕೂ ಇವರು ಸಿದ್ಧರಿರುತ್ತಿದ್ದರು."[119] ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಕೇವಲ ಪೆರ್ಗಡೆ ಮತ್ತು ಸ್ಥಾನಾಚಾರ್ಯ ಎಂಬ ಅಧಿಕಾರಿಗಳನ್ನು ಮಾತ್ರ ಉಲ್ಲೇಖಿಸಲಾಗಿದೆ.

**ಪೆರ್ಗಡೆ/ಹೆಗ್ಗಡೆ :** "ಪೆರ್ಗಡೆಗಳು ಸುಂಕದ ಅಧಿಕಾರಿಗಳಾದ್ದರು. ವಿವಿಧ ಸುಂಕಗಳನ್ನು ಸಂಗ್ರಹಿಸುವ ಇವರು ಗಾವುಂಡರಿಗಿಂತ ಹಿರಿಯರು. 'ಪಿರಿಯ ಗಾವುಂಡ' ಎಂಬುದು ಪೆರ್ಗಾವುಂಡ>ಪೆರ್ಗಾವುಡ>ಪೆರ್ಗ್ಗಡೆ>ಹೆಗ್ಗಡೆ ಎಂದಾಗಿದೆ. ಇವರು ಪ್ರಭುವಾಗಿ ಯಾವುದೇ ಗ್ರಾಮವನ್ನು ಆಳಿಲ್ಲ. ಆದರೆ ಸುಂಕವನ್ನು ಸಂಗ್ರಹಿಸುವ ಅಧಿಕಾರವನ್ನು ಮಾತ್ರ ಹೊಂದಿದ್ದರು. ಸಂಗ್ರಹವಾದ ಸುಂಕವನ್ನು ತಮ್ಮ ಮೇಲಾಧಿಕಾರಿಗಳಾದ ದಂಡನಾಯಕರಿಗೆ ಒಪ್ಪಿಸುತ್ತಿದ್ದರು. ಸಂಗ್ರಹಿಸಿದ ಒಟ್ಟು ಸುಂಕದಲ್ಲಿ ಇಂತಿಷ್ಟು ಭಾಗ ಪೆರ್ಗ್ಗಡೆಗಳಿಗೆ ಸಲ್ಲುತ್ತಿತ್ತು. ಅದೇ ಅವರಿಗೆ ಸಂಬಳವಾಗಿರುತ್ತಿತ್ತು."[120]

"ಪೆರ್ಗಡೆ=ಮಹತ್ತರ ಇವೆರಡೂ ದೊಡ್ಡ ಅಧಿಕಾರಿಗಳನ್ನು ಸೂಚಿಸುವ ಪದಗಳು. ಪೆರ್ಗಡೆ ಎನ್ನುವುದು ಸಂಸ್ಕೃತದ ಮಹತ್ವದ ಅನುವಾದ ವಾಗಿರುವಂತಿದೆ. ಮಹಾತ್ತರ=ಮಹತ್+ತರ, ಊಡಿಜಚಿಣಜಡಿ, 'ಮಹಾತ್'ಗಿಂತ ದೊಡ್ಡದು ಎಂಬ ಅರ್ಥದಲ್ಲಿ ಪೆರ್+ಕಡೆ(>ಪೆರ್ಗಡೆ) ಎಂಬಲ್ಲಿಯೂ (ಕಡೆ) ಎಂಬುದು ಪೆರ್‌ಗಿಂತ ದೊಡ್ಡದು ಎಂಬ ಅರ್ಥವನ್ನು ಸೂಚಿಸುವಂತೆ ಕಾಣುತ್ತದೆ. ಕಡ(ಡೆ)= Exceed, Excell, Transgress, Exd ಪೆರ್ಗಡೆ ಎಂಬುದೇ ಈಗಿನ ಹೆಗ್ಗಡೆ."[121] "ಪೆರ್ಗಡೆಗಳನ್ನು ಕುರಿತು ಜಿ.ಎಸ್.ದೀಕ್ಷಿತ್ ಇವರು ನಾಡು ಅಥವಾ ಗ್ರಾಮದ ಮುಖ್ಯಸ್ಥ, ಗಾವುಂಡ, ಪೆರ್ಗಡೆ ಎಂಬುವರು ನಾಡುಗಳ ಇಲ್ಲವೇ ಹಳ್ಳಿಗಳ ಇಲ್ಲವೇ ಯಾವುದೇ ವಿಭಾಗದ ಮುಖ್ಯಸ್ಥರಾಗಿದ್ದಾರೆ. ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿದ್ದ ಪೆರ್ಗಡೆಯನ್ನು ಸುಂಕದ ಹೆಗ್ಗಡೆ ಎಂದು ಕರೆದಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿರುವರು."[122] ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಹೆಗ್ಗಡೆ ಕುರಿತು ಮಾಹಿತಿ ದೊರೆತಿರುವುದನ್ನು ಗಮನಿಸಬಹುದಾಗಿದೆ. ಗಂಗಾವತಿ ತಾಲೂಕಿನ

ಹೆಬ್ಬಾಳದಲ್ಲಿ ದೊರೆತ ಶಾಸನ[123]ದಲ್ಲಿ ಹಾಗೂ ಕುಷ್ಟಗಿಯಲ್ಲಿ ದೊರೆತ ಶಾಸನ[124]ದಲ್ಲಿ ಹೆಗ್ಗಡೆಗಳ ಹೆಸರು ಉಲ್ಲೇಖವಿದೆ. ಸುಂಕ ಸಂಗ್ರಹಿಸುವುದಷ್ಟೇ ಇವರ ಪ್ರಮುಖ ಕಾರ್ಯವಾಗಿದ್ದರೂ ದೇವಾಲಯಗಳಿಗೆ ದಾನ ಬಿಟ್ಟ ಮಾಹಿತಿಯನ್ನು ಜಿಲ್ಲೆಯ ಶಾಸನಗಳಲ್ಲಿ ದಾಖಲಿಸಲಾಗಿದೆ. ಅವುಗಳೆಂದರೆ ಯಲಬುರ್ಗಾ ತಾಲೂಕಿನ ಅರಿಕೇರಿ ಗ್ರಾಮದಲ್ಲಿ ದೊರೆತ ಶಾಸನ[125]ದಲ್ಲಿ ಚಾವುಂಡರಾಯನ ಮಾನ್ಯದಲ್ಲಿ ಹೆಗ್ಗಡೆ ಚಾವುಣ್ಡಯ್ಯನು 450 ಕಮ್ಮ ಗದ್ದೆಯನ್ನು ಕ್ರಯವಾಗಿ ತೆಗೆದುಕೊಂಡು ಸಿದ್ಧೇಶ್ವರ ದೇವರ ನೈವೇದ್ಯಕ್ಕೆ ಬಿಟ್ಟಂತೆ ತಿಳಿಯುತ್ತದೆ. ಯಲಬುರ್ಗಾ ತಾಲೂಕಿನ ಕುಕನೂರಿನಲ್ಲಿ ದೊರೆತ ಶಾಸನ[126]ವು ಶ್ರೀ ಮಲ್ಲಿಕಾರ್ಜುನ ದೇವರಿಗೆ ಪೆರ್ಗ್ಗಡೆ ಮಹಾದೇವ ಭಟ್ಟೋಪಾಧ್ಯಾಯನು 12 ಮತ್ತರು 160 ಕಂಬ ಗದ್ದೆಯನ್ನು ಬಿಟ್ಟ ಮಾಹಿತಿ ದಾಖಲಿಸಿದೆ. ಅದೇ ರೀತಿಯಾಗಿ ಯಲಬುರ್ಗಾದ ಕಲ್ಲೂರು ಗ್ರಾಮದಲ್ಲಿ ದೊರೆತ ಶಾಸನ[127]ದಲ್ಲಿಯೂ ಸಹ ಸುಂಕವೆಗ್ಗಡೆ ಮಹೇಶ್ವರಯ್ಯನು ಕಲ್ಲೂರು ಸ್ವಯಂಭೂ ಕಲಿದೇವರಿಗೆ ದಾನ ನೀಡಿದ ಮಾಹಿತಿಯನ್ನು ಕಾಣುತ್ತೇವೆ.

ಒಟ್ಟಾರೆಯಾಗಿ ಹೆಗ್ಗಡೆಗಳು ಸುಂಕ ಸಂಗ್ರಹಿಸುವುದರ ಜೊತೆಗೆ ದೇವಾಲಯಗಳಿಗೆ ದಾನ-ಧರ್ಮದಂತಹ ಪುಣ್ಯದ ಕೆಲಸಗಳನ್ನು ಮಾಡುತ್ತಿದ್ದರು ಎಂಬುದು ಇಲ್ಲಿ ದೊರೆತ ಶಾಸನಗಳ ಆಧಾರದಿಂದ ಹೇಳಬಹುದಾಗಿದೆ. ಇವರು ತಾವು ಸಂಗ್ರಹಿಸಿದ ಸುಂಕದಲ್ಲಿ ರಾಜನು ನಿಗದಿ ಪಡಿಸಿದಷ್ಟು ಭಾಗವನ್ನು ತಮ್ಮ ಸಂಬಳವನ್ನಾಗಿ ಪಡೆದು ರಾಜನ ಆಜ್ಞೆಯಂತೆ ಪ್ರಾಮಾಣಿಕ ಕೆಲಸ ನಿರ್ವಹಿಸಿ ಒಳ್ಳೆಯ ಹೆಸರನ್ನು ಪಡೆದುಕೊಳ್ಳುತ್ತಿದ್ದರು.

**ಸ್ಥಾನಾಚಾರ್ಯರು :** ಅಧಿಕಾರಿ ವರ್ಗದವರಲ್ಲಿ ದೇವಾಲಯ ಹಾಗೂ ಮಠಗಳಿಗೆ ಸಂಬಂಧಿಸಿದ ವ್ಯವಹಾರದ ಉಸ್ತುವಾರಿಯನ್ನು ನಿರ್ವಹಿಸುವವನೇ ಈ ಸ್ಥಾನಾಚಾರ್ಯ. ಭಕ್ತರು ಭಕ್ತಿಯಿಂದಾಗಲಿ, ಪುಣ್ಯಲಭಿಸಲೆಂದಾಗಲಿ ಬಿಟ್ಟ ದಾನ-ದತ್ತಿಗಳನ್ನು ಸ್ವೀಕರಿಸಿ ಅದನ್ನು ದೇವಾಲಯಗಳ ನಿತ್ಯ ಕರ್ಮಗಳಿಗೆ ಉಪಯೋಗವಾಗುವಂತೆ ನೋಡಿಕೊಳ್ಳುತ್ತಿದ್ದರು. ಪ್ರಭುವರ್ಗದವರು, ಅಧಿಕಾರಿವರ್ಗದವರು, ಜನ ಸಾಮಾನ್ಯರೂ ಹಾಗೂ ಇತರರು ದೇವಾಲಯಗಳಿಗೆ ಬಿಟ್ಟ ದಾನ-ದತ್ತಿಗಳಿಂದ ದೇವಾಲಯದ ಸಂಪತ್ತು ದ್ವಿಗುಣಗೊಳ್ಳುತ್ತಿತ್ತು. ಈ ಸಂಪತ್ತನ್ನು ದೇವಾಲಯದಲ್ಲಿ ಸಕಾರಣಕ್ಕೆ ಬಳಕೆಯಾಗುವಂತೆ ಈ ಸ್ಥಾನಾಚಾರ್ಯರು ನೋಡಿಕೊಳ್ಳುತ್ತಿದ್ದರು. ಜಿಲ್ಲೆಯ ಶಾಸನದಲ್ಲಿ ಅನೇಕ ಸ್ಥಾನಾಚಾರ್ಯರು ಉಲ್ಲೇಖಗೊಂಡಿದ್ದಾರೆ. ಈ ಸ್ಥಾನಾಚಾರ್ಯರನ್ನು ಕುರಿತು ಸಾಮಾಜಿಕ ವ್ಯವಸ್ಥೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

### ಶಾಸನೋಕ್ತ ಅಧಿಕಾರಿ ವರ್ಗ :


| ಕ್ರ.ಸಂ. | ಹುದ್ದೆ | ಅಧಿಕಾರಿ ಹೆಸರು | ಅರಸನ ಹೆಸರು | ಕಾಲ | ಉಲ್ಲೇಖಿತ ಶಾಸನ ಸ್ಥಳ |
|---|---|---|---|---|---|
| 01. | ಸುಂಕವೆಗ್ಗಡೆ | ಮಹೇಶ್ವರಯ್ಯ | ಭೂಲೋಕಮಲ್ಲ | ಕ್ರಿ.ಶ.1132 | ಕಲ್ಲೂರು |
| 02. | ಮನೆವೆಗ್ಗಡೆ | ಮಹಾದೇವಯ್ಯ | – | ಕ್ರಿ.ಶ.1125 | ಕಲ್ಲೂರು |
| 03. | ಪೆಗ್ಗಡೆ | ಚಾವುಂಡಯ್ಯ | ಚಾವುಂಡರಾಯ | ಕ್ರಿ.ಶ.1033 | ಅರಕೇರಿ |
| 04. | ಪೆರ್ಗ್ಗಡೆ | ಮಹಾದೇವ ಭಟ್ಟೋಪಾಧ್ಯಾಯ | ಭೂಲೋಕಮಲ್ಲ | ಕ್ರಿ.ಶ.1229 | ಕುಕನೂರು |
| 05. | ಹೆಗ್ಗಡೆ | ಮಾರಮಯ್ಯ | – | ಕ್ರಿ.ಶ.1345 | ಚಂದಾಲಿಂಗ |
| 06. | ಹೆಗ್ಗಡೆ | ಸಹವಾಸಿ ಅರ್ಜುನ | – | 10ನೇ ಶ. | ಹೆಬ್ಬಾಳ |
| 07. | ರೂಢಾಚಾರ್ಯ | – | – | ಕ್ರಿ.ಶ.1520 | ಗಿಣಿಗೇರಿ |
| 08. | ಆಚಾರ್ಯ | – | 6ನೇವಿಕ್ರಮಾದಿತ್ಯ | ಕ್ರಿ.ಶ.1088 | ಹುಲಿಗಿ |
| 09. | ಆಚಾರ್ಯ | – | – | 10ನೇ.ಶ. | ಕೊಪ್ಪಳ |
| 10. | ಆಚಾರ್ಯ | ರಾಮಾಚಾರ್ಯ | – | 13ನೇ.ಶ | ಯಲಬುರ್ಗಾ |
| 11. | ಆಚಾರ್ಯ | – | – | – | ಬಾಳೆಗೇರಿ |
| 12. | ಆಚಾರ್ಯ | ಸೋಮೇಶ್ವರಾಚಾರ್ಯ | ಜಗದೇಕಮಲ್ಲ | ಕ್ರಿ.ಶ.1005 | ಕುಕನೂರು |

### IV–ಗ್ರಾಮಾಡಳಿತ

ಆಡಳಿತ ವಿಭಾಗಗಳಲ್ಲಿ ಅತ್ಯಂತ ಕೊನೆಯ ಆಡಳಿತ ವಿಭಾಗವೆಂದರೆ ಗ್ರಾಮಾಡಳಿತ ಅಥವಾ ಸ್ಥಳೀಯ ಸರ್ಕಾರ. ಪ್ರಭುಗಾವುಂಡ, ಗವುಂಡ(ಗೌಡ, ಗವುಡ), ಸೇನಬೋವ(ಕುಲಕರ್ಣಿ), ತಳವಾರ, ದೇಸಾಯಿಗಳು ಗ್ರಾಮಾಡಳಿತದಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತಾರೆ. ಇವರುಗಳು ಗ್ರಾಮದ ಶ್ರೇಯೋಭಿವೃದ್ಧಿಗಾಗಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಒಂದು ಗ್ರಾಮದ ಏಳಿಗೆ ಇಲ್ಲವೆ ಅಧಃಪತನ ಆ ಗ್ರಾಮದ ಆಡಳಿತ ವರ್ಗದವರ ಮೇಲೆ ಅವಲಂಬನೆಯಾಗಿರುತ್ತಿತ್ತು. ಗ್ರಾಮದ ಒಡೆಯನಾಗಿ ಪ್ರಭುಗಾವುಂಡರು, ಗೌಡರು ಕಾರ್ಯ ನಿರ್ವಹಿಸಿದರೆ ವಿದ್ಯಾವಂತನಾದ ಸೇನಬೊವ ಊರಿನ ಲೆಕ್ಕ ಪತ್ರಗಳನ್ನು ಬರೆದುಕೊಳ್ಳುತ್ತಿದ್ದನು. ಹಾಗೂ ಕೆಲವು ಸಂಧರ್ಭದಲ್ಲಿ ಸೇನಬೋವ ಶಾಸನ ಬರೆಯಿಸಿದ ಬಗ್ಗೆ ಮಾಹಿತಿಯನ್ನು ಕಾಣಬಹುದಾಗಿದೆ. ಹಗಲೂ ರಾತ್ರಿ ಕಳ್ಳ ಕಾಕರಿಂದ, ತುರುಗಳ್ಳರಿಂದ, ಸಮಾಜ ಘಾತಕರಿಂದ ಗ್ರಾಮವನ್ನು ರಕ್ಷಿಸುವ ಹೊಣೆ ತಳವಾರನ ಮೇಲೆ ಇರುತ್ತಿತ್ತು. ಹೀಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದರು. "ಇಂತಹ ಸ್ಥಳೀಯ ಸಂಸ್ಥೆಗಳಲ್ಲಿ ಹಳ್ಳಿಗಳ ಗಾವುಂಡರುಗಳ

ಸಮೂಹವು ಒಂದು. ಈ ಸಮೂಹವನ್ನು ಬಹು ಸ್ಥೂಲಾರ್ಥದಲ್ಲಿ ಕೇವಲ ಸೌಕರ್ಯಕ್ಕಾಗಿ 'ಗ್ರಾಮಸಭೆ' ಎಂದು ಕರೆದಿದ್ದೇವೆ."[128] "ಈ ಸಭೆಗೆ ಮುಖ್ಯಸ್ಥ ಅಲ್ಲಿಯ ಗಾವುಂಡ ಅಥವಾ ಪ್ರಭುಗಾವುಂಡ; ಗ್ರಾಮ ಸಭೆಯ ಇತರ ಸದಸ್ಯರು ಆ ಊರಿನ ಸಹಜ ನಾಯಕರಾದ ಹಿರಿಯರು"[129] ಗ್ರಾಮದ ಹಿರಿಯರೆಂದರೆ ಗೌಡನನ್ನೊಳಗೊಂಡ ಸೇನಬೋವ, ತಳವಾರ, ದೇಸಾಯಿ ಹಾಗೂ ಇತರ ಜಮೀನ್ದಾರರೆಂದು ಹೇಳಬಹುದು. ಹಾಗೆ ನೋಡಿದರೆ ಇದನ್ನು ಸಭೆ ಅಥವಾ ಸಂಸ್ಥೆ ಎಂದು ಕರೆಯುವುದು ಅಷ್ಟು ಉಚಿತವೇನು ಅಲ್ಲ. ಏಕೆಂದರೆ ಆ ಗ್ರಾಮ ಸಭೆಗಳಲ್ಲಿ ರುತ್ತಿದ್ದವರು ರಾಜನಿಂದ ನೇಮಿಸಲ್ಪಟ್ಟವರು ಅಲ್ಲ, ಊರಿನವರು ಚುನಾಯಿಸಿದವರೂ ಅಲ್ಲ; ಅವರು ವಯಸ್ಸಿನ ಕಾರಣದಿಂದಲೋ, ಅನುವಂಶಿಕ ಕಾರಣದಿಂದಲೋ ಊರಿನ ಸಹಜ ನಾಯಕರು. ಆ ಊರಿನ ಹಿತಾಸಕ್ತಿಗಳನ್ನು ನೋಡಿಕೊಳ್ಳುತ್ತಿದ್ದವರು. ಊರಿನ ಜನತೆ ಅವರಲ್ಲಿ ನಂಬಿಕೆಯಿಟ್ಟು ಊರಿನ ಆಡಳಿತವನ್ನು ಅವರಿಗೆ ಒಪ್ಪಿಸಿದ್ದರಿಂದ ಆಧುನಿಕ ಯುಗದ ಪ್ರಜಾಪ್ರಭುತ್ವದ ಮೂಲ ಬೀಜಗಳನ್ನು ಆ ಗ್ರಾಮಸಭೆಗಳಲ್ಲಿ ಕಾಣಬಹುದು.[130] ಹೀಗೆ ಪ್ರಾಚೀನರು ತಮ್ಮ ಗ್ರಾಮದ ಸುವ್ಯವಸ್ಥಿತ ಆಡಳಿತಕ್ಕಾಗಿ ರೂಪಿಸಿಕೊಂಡಿರುವ ವೈವಿಧ್ಯ ಮಯವಾದ ಆಡಳಿತ ವರ್ಗವು ಇಂದಿನ ಗ್ರಾಮ ಪಂಚಾಯಿತಿಗಿಂತ ವಿಭಿನ್ನವಾಗಿದ್ದರೂ, ಕಾರ್ಯ ವೈಖರಿಯಲ್ಲಿ ಸಾಮ್ಯತೆಯನ್ನು ಕಾಣಬಹುದಾಗಿದೆ. "ಪ್ರಾಚೀನ ಭಾರತದಲ್ಲಿ ಕೆಲವು ಸ್ಥಳೀಯ ಸಂಸ್ಥೆಗಳು ಕೇಂದ್ರಾಡಳಿತದ ಅಂಗಗಳಾಗಿದ್ದವು. ಆದರೂ ಅವು ಅನ್ಯ ನಿಯಂತ್ರಣಗಳಿಗೆ ಒಳಗಾಗದೆ ತಮ್ಮನ್ನು ತಾವು ಆಳಿಕೊಳ್ಳುತ್ತಿದ್ದವು. ಈ ಸ್ಥಳೀಯ ಸಂಸ್ಥೆಗಳ ಭದ್ರ ಬುನಾದಿಯ ಮೇಲೆ ಕೇಂದ್ರಾಡಳಿತ ರೂಪಿತವಾಗಿದ್ದಿತು."[131]

ಅತ್ಯಂತ ಪ್ರಾಚೀನ ಕಾಲದಿಂದಲೂ ಭರತ ಖಂಡದಲ್ಲಿ ಹಳ್ಳಿಯ ಆಡಳಿತ ಒಂದು ಘಟಕವಾಗಿ ಪರಿಣಮಿಸಿದ್ದಿತು. ಹೆಚ್ಚು ಕಡಿಮೆ ಸಮಾನ ಸ್ಥಿತಿಗಳಲ್ಲಿ ಬಾಳುತ್ತಾ, ಅನೇಕ ಸಮಾನಾಂಶಗಳೆಂಬ ಸೂತ್ರದಿಂದ ಬದ್ಧರಾಗಿ ಒಂದು ಗ್ರಾಮಾಡಳಿತದ ಕೆಳಗೆ ಬದುಕುವ ಜನರಿಂದ ಕೂಡಿದ್ದ ಹಳ್ಳಿಗಳು ದೇಶದ ಬಹುಮಟ್ಟಿಗೆ ಎಲ್ಲೆಡೆಗಳಲ್ಲಿಯೂ ಆರ್ಥಿಕ ಘಟಕವಾಗಿ ಪರಿಣಮಿಸಿದ್ದವು.[132] ಸ್ಥಳೀಯ ಸರ್ಕಾರಗಳು ಕೇಂದ್ರಾಡಳಿತದ ಪುಟ್ಟ ಆರ್ಥಿಕ ಘಟಕವಾಗಿಯೂ ಕಾರ್ಯನಿರ್ವಹಿಸಿದ್ದು ಗಮನಾರ್ಹವಾಗಿದೆ. "ಒಂದೊಂದು ಹಳ್ಳಿಯೂ ರಾಜನಿಗೆ ಸಲ್ಲಿಸಬೇಕಾದ ತೆರಿಗೆಗಳನ್ನು ಸಲ್ಲಿಸಿ ಬಿಟ್ಟರೆ ಸಾಕಾಗಿತ್ತು. ವರ್ಷದುದ್ದಕ್ಕೂ ಅದೊಂದು ಪ್ರತ್ಯೇಕ ರಾಜ್ಯವೆಂಬಂತೆ ಒಂದು ರೀತಿಯ ಸ್ವತಂತ್ರವಾಗಿ ತನ್ನಷ್ಟಕ್ಕೆ ತಾನು ಬದುಕುತ್ತಿತ್ತು."[133]




ಈ ರೀತಿಯಾಗಿ ಕೇಂದ್ರಾಡಳಿತದಿಂದ ವಿಭಾಗಿಸಲ್ಪಟ್ಟ ಪುಟ್ಟ ಆಡಳಿತ ಘಟಕವಾಗಿರುವ ಗ್ರಾಮಾಡಳಿತದಲ್ಲಿ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವರ ಅಧಿಕಾರಿ ವರ್ಗದ ಕುರಿತು ಈ ಕೆಳಗೆ ಚರ್ಚಿಸಲಾಗಿದೆ.

**ಪ್ರಭುಗಾವುಂಡರು** : ಪ್ರಭುಗಾವುಂಡರನ್ನು ಕುರಿತು ವಿದ್ವಾಂಸರು ವಿವಿಧ ರೀತಿಯ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. "ಡಾ.ಜಿ.ಎಸ್.ದೀಕ್ಷಿತ್‌ರವರು ಗ್ರಾಮದ ಗಾವುಂಡರನ್ನೇ ಪ್ರಭುಗಾವುಂಡರೆಂದು ಕರೆಯಬಹುದಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಡಾ.ಎಂ.ಚಿದಾನಂದಮೂರ್ತಿಯವರು ಕೂಡ ಊರಗಾವುಂಡರನ್ನೇ ಪ್ರಭುಗಾವುಂಡರೆಂದು ಕರೆಯುತ್ತಾರೆಂಬ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ. ಅವರು ನಾಡಿನ ಆಯಾ ಊರಿಗೆ ಮುಖ್ಯಸ್ಥನಾಗಿ ಪ್ರಭುಗಾವುಂಡ ಅಥವಾ ಊರ ಗಾವುಂಡನಿರುತ್ತಿದ್ದನು."[134]

"ಗಾವುಂಡನು ಪ್ರಭುಗಾವುಂಡನಿಗೆ ನಿಷ್ಠೆಯಿಂದರಬೇಕಾಗಿತ್ತು. ಪ್ರಭು ಗಾವುಂಡರು ಮಹಾ ಸಾಮಂತನಿಗೆ ನಿಷ್ಠೆಯಿಂದಿದ್ದು ದೇವಾಲಯ, ಮಠ, ಬಸದಿ ಮೊದಲಾದ ಸಾರ್ವಜನಿಕ ಕ್ಷೇತ್ರಗಳಿಗೆ ವಿವಿಧ ಜನರು ಬಿಟ್ಟ ದತ್ತಿ, ದಾನ ಇವುಗಳನ್ನು ರಕ್ಷಿಸಿಕೊಂಡು ಹೋಗಬೇಕು, ಪ್ರಭುಗಾವುಂಡರು ವೀರರಾಗಿದ್ದು ಮಹಾಸಾಮಂತರ ಸಲುವಾಗಿ ಯುದ್ಧದಲ್ಲಿ ಭಾಗವಹಿಸಿ ಜಯ ತಂದುಕೊಡುತ್ತಿದ್ದರು."[135]

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಗ್ರಾಮಾಡಳಿತದಲ್ಲಿ ಪ್ರಭುಗಾವುಂಡನು ಪ್ರಮುಖನಾಗಿದ್ದು, ಒಂದು ಗ್ರಾಮಕ್ಕಿಂತ ಅಧಿಕ ಗ್ರಾಮಗಳಿಗೆ ಮುಖ್ಯಸ್ಥನಾಗಿದ್ದನು. ಗೌಡನಿಗಿಂತ ಮೇಲಿನ ಸ್ತರದಲ್ಲಿರುವ ಇವನು ಗೌಡನಿಗಿಂತ ಹೆಚ್ಚಿನ ಅಧಿಕಾರವನ್ನು ಪಡೆದುಕೊಂಡಿದ್ದನು. ಎಂಬ ಅಂಶವು ಸತ್ಯದಿಂದ ದೂರವಾದುದಲ್ಲ ಎಂಬುವುದು ನನ್ನ ಅಭಿಪ್ರಾಯ. ಈ ಪ್ರಭುಗಾವುಂಡನನ್ನು ಕುರಿತು ಕೊಪ್ಪಳ ಜಿಲ್ಲೆಯಲ್ಲಿನ ಯಾವುದೇ ಶಾಸನದಲ್ಲಿ ಉಲ್ಲೇಖವಿರುವುದು ನನ್ನ ಗಮನಕ್ಕೆ ಬಂದಿರುವುದಿಲ್ಲ.

**ಗಾವುಂಡ/ಗಾವುಡ/ಗೌಡ** : ಅಧಿಕಾರ ವಿಕೇಂದ್ರಿಕರಣದಿಂದ ಗ್ರಾಮಾಡಳಿತವು ರಾಜ್ಯದ ಆಡಳಿತ ಘಟಕವಾಗಿತ್ತು. ಇದರ ಮುಖ್ಯಸ್ಥನಾದವನೇ ಗಾವುಂಡ. ದೊಡ್ಡ ವಿಭಾಗಗಳಿಗೆ ಮಂಡಳೇಶ್ವರನು ಪ್ರಭುವಾಗಿರುವಂತೆ ಗ್ರಾಮಕ್ಕೆ ಗೌಡನೇ ಒಡೆಯನಾಗಿರುತ್ತಾನೆ. "ಗಾವುಂಡ ಎನ್ನುವ ಪದವು ಗ್ರಾಮ ವೃದ್ಧದಿಂದ ಬಂದಿದೆಯೆಂದು ಕೆಲವು ಅಭಿಪ್ರಾಯ ಪಡುತ್ತಾರೆ. ರಾಜ್ಯದ ಅಧಿಕಾರಿಗಳನ್ನು ಹೆಸರಿಸುವಾಗ ಗ್ರಾಮಾವೃದ್ಧ ಎಂಬ ಅಧಿಕಾರಿಯ ಹೆಸರು ಎಲ್ಲಿಯೂ ಉಕ್ತವಾಗಿಲ್ಲ. 'ಗ್ರಾಮಕೂಟ' ಎಂಬ ಅಧಿಕಾರಿಯ ಹೆಸರಿದೆ. ಈ ಗ್ರಾಮಕೂಟವೇ 'ಗಾವುಂಡ'(=ಗೌಡ) ಆಗಿರಬಹುದೇ ಎಂಬುದು ವಿಚಾರ ಯೋಗ್ಯವಾದದ್ದು. ಗ್ರಾಮಉಡ, ಗಾಮಊಡ ಎಂಬ ರೂಪಗಳು ಪ್ರಾಕೃತದಲ್ಲಿ ದೊರೆಯುತ್ತವೆ. 'ಗ್ರಾಮಕೂಟ' ಎಂದರೆ ಸಂಸ್ಕೃತದಲ್ಲಿ ಗ್ರಾಮದ ಮುಖ್ಯಸ್ಥ ಎಂದರ್ಥ. ಗೌಡ ಶಬ್ದದ ಉತ್ಪತ್ತಿ ಬಹುಶಃ ಹೀಗೆ ಸಂ. ಗ್ರಾಮಕೂಟ>ಪ್ರಾಕೃತ, ಗಾಮಉಡ, ಗಾಮಊಡ>ಕನ್ನಡ ಗಾಮುರಸ ಇದೇ ಕ್ರಮೇಣ ಗಾಮುಂಡ, ಗೌಡ ಎಂದಾಗಿದೆ."[136]

ಗಾವುಂಡರು ಗ್ರಾಮದ ಮುಖ್ಯಸ್ಥನಾಗಿರುವುದರಿಂದ ಅವನ ಮೇಲೆ ಸಾಕಷ್ಟು ಜವಾಬ್ದಾರಿಗಳಿರುತ್ತಿದ್ದವು. ಗ್ರಾಮದ ಆಡಳಿತ, ಗ್ರಾಮಾಭಿವೃದ್ಧಿ, ಗ್ರಾಮದ ರಕ್ಷಣೆ, ಸುಂಕಸಂಗ್ರಹ, ಧಾರ್ಮಿಕ ಕಾರ್ಯ, ದತ್ತಿ ದಾನಗಳ ಸಂರಕ್ಷಣೆಯ ಹೊಣೆ ಇವರದಾಗಿತ್ತು. ಇವನು ಪ್ರಭುಗಾವುಂಡನಿಗೆ ನಿಷ್ಠೆಯಿಂದ ಗ್ರಾಮಾಡಳಿತದ ವರ್ತಮಾನವನ್ನು ವರದಿ ಮಾಡುತ್ತಿದ್ದನು. "ಗ್ರಾಮದ ಪ್ರಭುವಾಗಿರುವ ಗಾವುಂಡನು ಕೆಲವು ಅಧಿಕಾರಿಗಳನ್ನು ಹೊಂದಿದ್ದನು. ಆ ಅಧಿಕಾರಿಗಳಲ್ಲಿ ಪ್ರಮುಖನೆಂದರೆ ಸೇನುಬೋವ. ಇವನು ಗ್ರಾಮದ ಲೆಕ್ಕ ಪತ್ರವನ್ನು ನೋಡಿಕೊಳ್ಳುತ್ತಿದ್ದನು. ಇನ್ನೊಬ್ಬ ಪ್ರಮುಖ ಅಧಿಕಾರಿಯೆಂದರೆ ತಳಾರ. ಇವನು ಗ್ರಾಮದ ರಕ್ಷಣಾಧಿಕಾರಿಯಾಗಿದ್ದನು."[137]

ಗಾವುಂಡನು ಶೂರನಾಗಿರಬೇಕಾಗಿತ್ತು. ಗ್ರಾಮವು ಅಪಾಯದ ಅಂಚಿನಲ್ಲಿದ್ದಾಗ ಪ್ರಾಣದ ಹಂಗುತೊರೆದು ಗ್ರಾಮವನ್ನು ರಕ್ಷಿಸಬೇಕಾಗಿತ್ತು. ತುರುಗಳ್ಳರು ಅಪಹರಣಕಾರರು ಗ್ರಾಮದಲ್ಲಿ ನುಗ್ಗಿ ಊರನ್ನು ಹಾಳುಗೆಡುವುದನ್ನು ತಡೆಯಲು ಗಾವುಂಡ ಹೋರಾಡಲೇ ಬೇಕಾಗಿತ್ತು. ಹಾಗೂ ಮೇಲಿನ ಮಹಾಸಾಮಂತರ ಪರವಾಗಿ ಯುದ್ಧದಲ್ಲಿ ಭಾಗವಹಿಸಿ ಜಯಿಸಬೇಕಾಗಿತ್ತು. "ಗಾವುಂಡಗಳು ಗ್ರಾಮವನ್ನು ಆಳುತ್ತಿದ್ದರು. ಅವರು ಊರೊಡೆಯರೂ ಹೌದು.; ಊರಿನಲ್ಲಿ ಯಾವುದೇ ಸಾರ್ವಜನಿಕ ಕ್ರಿಯೆ ನಡೆದರೂ ಅದು ಊರಿನ ಗಾವುಂಡನ ಸಮ್ಮುಖದಲ್ಲಿ ನಡೆಯುತ್ತಿದ್ದಿತು. ದೇವಸ್ಥಾನಕ್ಕೆ ಬಿಟ್ಟು ಕೊಟ್ಟ ದತ್ತಿಯನ್ನು ಊರಿನ ಗಾವುಂಡನು ಪ್ರತಿಪಾಲಿಸುತ್ತಾನೆ. ಎಂದು ಶಾಸನ ಕೊನೆಯಾಗುವುದನ್ನು ನೋಡಿದರೆ ಅನೇಕ ದತ್ತಿಗಳಿಗೆ ಗಾವುಂಡಗಳು ಧರ್ಮದರ್ಶಿಗಳಾಗಿರುತ್ತಿದ್ದರು ಎಂಬುದು ತಿಳಿಯುತ್ತದೆ."[138]

"ಕೇಂದ್ರಾಡಳಿತಕ್ಕೂ ಆ ಊರಿನ ಜನರಿಗೂ ಮಧ್ಯವರ್ತಿಯಾಗಿದ್ದ ಗಾವುಂಡಗಳನ್ನು ಅಥವಾ ಪ್ರಭುಗಾವುಂಡರನ್ನು ರಾಜ್ಯದ ಅಧಿಕಾರಿಗಳೆಂದು ಭಾವಿಸುವುದಕ್ಕಿಂತ ಜನತಾ ಪ್ರತಿನಿಧಿಗಳೆಂದು ಭಾವಿಸುವುದೇ ಹೆಚ್ಚು ಉಚಿತವಾದದ್ದು."[139] ಗ್ರಾಮದಲ್ಲಿ ನಡೆದ ಜಗಳ ಮತ್ತು ಅಪರಾಧಿಗಳಿಗೆ ಗಾವುಂಡ ಗ್ರಾಮದ ಅಧಿಕಾರಗಳ ಸಮಕ್ಷಮದಲ್ಲಿ ತೀರ್ಪನ್ನು ನೀಡುತ್ತಿದ್ದು ಸ್ಥಳೀಯ ನ್ಯಾಯಾಧೀಶನಂತೆ ವರ್ತಿಸುತ್ತಿದ್ದನು. "ಗ್ರಾಮದ ಒಡೆಯರಾದ ಗಾವುಂಡರ ಕರ್ತವ್ಯ, ಹೊಣೆಗಾರಿಕೆ ಹೆಚ್ಚಿನದಾಗಿದೆ, ಗ್ರಾಮದ ಆಡಳಿತವನ್ನು ನೋಡಿಕೊಂಡು ಹೋಗುವುದರ ಜೊತೆಗೆ ಗ್ರಾಮ ರಕ್ಷಣೆ ಮಾಡುವುದು ಪ್ರಮುಖ ಕೆಲಸವಾಗಿತ್ತು. ಸುಂಕ ಸಂಗ್ರಹಣೆಯ ಕೆಲಸವೂ ಇವರದಾಗಿತ್ತು. ಒಳ್ಳೆಯ ಭಟರೂ ಆಗಿದ್ದ ಇವರು ತಮ್ಮ ಚಕ್ರವರ್ತಿಯ ಇಲ್ಲವೆ ಮಹಾಮಂಡಳೇಶ್ವರ ಇಲ್ಲವೆ ಮಹಾಸಾಮಂತರ ಪರವಾಗಿ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಅಲ್ಲದೆ ಗ್ರಾಮಕ್ಕೆ ಕೊಳ್ಳೆಯ, ಬಾಧೆ ಮುಂತಾದ ಸಂದರ್ಭದಲ್ಲಿ ಗೋವುಗಳನ್ನು-ಸ್ತ್ರೀಯರನ್ನು ಅಪಹರಿಸುವ ಸಮಯದಲ್ಲಿ ಇವರು ತಮ್ಮ ಜೀವನ ಹಂಗು ತೊರೆದು ಹೋರಾಡಿ ಗ್ರಾಮವನ್ನು, ಗ್ರಾಮದ ಜನ-ಸಂಪತ್ತನ್ನು ರಕ್ಷಿಸುತ್ತಿದ್ದರು."[140]

ಗಾವುಂಡರನ್ನು ಕುರಿತು ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಕೆಲವು ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಕಾಣುತ್ತೇವೆ. ಶಾಸನಗಳಲ್ಲಿ ಗಾವುಂಡ, ಗಾವುಡ, ಗೌಂಡ, ಗಾಡ ಎಂದು ಅನೇಕ ನಾಮದೇಯಗಳಿಂದ ಪ್ರಸ್ತಾಪ ವಾಗಿರುವುದನ್ನು ಗಮನಿಸಬಹುದು. ಗೌಡರು ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಅನೇಕ ದಾನ ದತ್ತಿಗಳನ್ನು ಬಿಡುತ್ತಿದ್ದರು. ಇಂತಹ ಮಾಹಿತಿಯನ್ನು ಅನೇಕ ಶಾಸನಗಳು ದಾಖಲಿಸಿವೆ. ಅವುಗಳಲ್ಲಿ ಒಂದಾದ ಯಲಬುರ್ಗಾ ತಾಲೂಕಿನ ಕುಕನೂರಿನಲ್ಲಿ ದೊರೆತ ಶಾಸನ[141] ದಲ್ಲಿ ಶ್ರೀ ಜೇಷ್ಠಾಮಹಾಲಕ್ಷ್ಮಿದೇವರ ದೇವಾಲಯದ ಬಾಗಿಲನ್ನು ಮುಸಲ್ಮಾನರು ಸುಟ್ಟು ನಾಶ ಮಾಡಿದ್ದರು. ಈ ಬಾಗಿಲನ್ನು ದೇವಸ್ಥಾನದ ಆಚಾರ್ಯ, ಕುಕನೂರಿನ ಭಟಾಚಾರ್ಯನ ಮೊಮ್ಮಕ್ಕಳು ಭಟ್ಟಪ್ಪಗೌಡ, ಮಹಾದೇವಗೌಡ ಅವನ ಮಕ್ಕಳು ಬೆನಕರಸಗೌಡ ಅವನ ತಮ್ಮ ದೇವರಸಗೌಡನ ಮಕ್ಕಳು ಕುಕನೂರು ಸೀಮೆಯ ದೇಸಾಯಿ ಗೌಡನು ನಾಡ ಗೌಡಕೆಯನ್ನು ಮಾಡುತ್ತಿದ್ದಾಗ ಜೀರ್ಣೋದ್ಧಾರ ಮಾಡಿಸುತ್ತಾರೆ ಎಂದು ವಿವರವಿದೆ. ಗೌಡರು ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಗ್ರಾಮದ ಅಭಿವೃದ್ಧಿಗಾಗಿ ಇವರು ಶ್ರಮವಹಿಸುತ್ತಿದ್ದರು. ಕೊಪ್ಪಳದಲ್ಲಿ ದೊರೆತ ಶಾಸನ[142]ದಿಂದ ದೇವರಸಯ್ಯ ಮತ್ತು ಗೌತಮರಸಯ್ಯ ಧರಣೇಗೌಡನ ಮಕ್ಕಳಾದ ಮಲೆಯಪ್ಪಗೌಡ ಮತ್ತು ಚಂದನಗೌಡರಿಗೆ ಶಾನುಭೋಗಿಕೆಯ ಅರ್ಧ ಭಾಗವನ್ನು ಮಾರಿದ ವಿಷಯವನ್ನು ತಿಳಿಯಬಹುದಾಗಿದೆ.

ಗೌಡರಿಗೆ ಗ್ರಾಮದ ಕುರಿತು ವಿಶೇಷ ಅನುಭವ ಮತ್ತು ಅಪಾರ ಅಭಿಮಾನ.

ಗ್ರಾಮದ ಏಳಿಗೆಗಾಗಿ, ರಕ್ಷಣೆಗಾಗಿ ಹೋರಾಡಿದವರನ್ನು ಪ್ರಶಂಸಿಸುತ್ತಿದ್ದರು. ಹೋರಾಟದಲ್ಲಿ ಮಡಿದರೆ ಅವರ ಕುಟುಂಬದವರಿಗೆ ವಿಶೇಷವಾದ ಗೌರವದ ಸ್ಥಾನಮಾನ ನೀಡುವುದರೊಂದಿಗೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು. ಇದಕ್ಕೆ ನಿದರ್ಶನವೆಂಬಂತೆ ಕುಷ್ಟಗಿಯಲ್ಲಿ ದೊರೆತ ಒಂದು ಶಾಸನ[143]ವು ಸಿರಗೊಪ್ಪದ ರಾಚಮಗಾವುಣ್ಡ, ನಿರಮೊಪ್ಪ ಆಚಗಾವುಣ್ಡನು ಇದ್ದಾಗ ತುರುಗಳ್ಳರೊಡನೆ ಹೋರಾಡಿ ತಳಾರಿ ಕಾಳಬೋವನು ಮಡಿಯುತ್ತಾನೆ. ಇವನ ಮಗ ಬಮ್ಮಪನಿಗೆ ಹೊಲ ಹಾಗೂ ಮನೆಯನ್ನು ಮಾನ್ಯವಾಗಿ ನೀಡುತ್ತಾರೆ. ಹೀಗೆ ದೊರೆತ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಗಾವುಂಡಗಳ ವಂಶಾವಳಿ, ದೇವಾಲಯಗಳ ಜೀರ್ಣೋದ್ಧಾರ್ಕಕಾಗಿ ನೀಡಿದ ದಾನದ ಕುರಿತು, ಗೌಡಿಕೆಯನ್ನು ಪಡೆದ ಪ್ರಸ್ತಾಪ, ತಮಗೆ ಸಲ್ಲಬೇಕಾದ ಆದಾಯದ ಪ್ರಸ್ತಾಪ, ಶಾನುಭೋಗಿಕೆಯ ಅರ್ಧಭಾಗ ಪಡೆದ ವಿವರ, ತುರುಗಳ್ಳರೊಡನೆ ಹೋರಾಡಿ ಮಡಿದ ಕುಟುಂಬಕ್ಕೆ ಅನುಕಂಪದಿಂದ ಹೊಲಮನೆ ನೀಡಿದ ವಿವರವನ್ನು ಕಾಣಬಹುದಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಕೇವಲ ಹದಿನೇಳು ಶಾಸನಗಳಲ್ಲಿ ಗಾವುಂಡಗಳ ಕುರಿತು ಮಾಹಿತಿ ದೊರೆತಿದೆ.

**ಸೇನುಬೋವ** : ಗ್ರಾಮದ ಆಡಳಿತದಲ್ಲಿ ಸೇನುಬೋವನು ಬಹು ಪ್ರಭಾವಶಾಲಿದ್ದನು. ಇವನು ಗ್ರಾಮದಲ್ಲಿನ ಅಂಕಿ ಅಂಶಗಳನ್ನು ದಾಖಲಿಸುತ್ತಿದ್ದನು. "ಸೇನುಬೋವನು ವಿದ್ಯಾವಂತನಾಗಿದ್ದು ಗ್ರಾಮಸಭೆಯ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದನು. ವಾಸ್ತವವಾಗಿ ಇವನ ಸ್ಥಾನ ಗ್ರಾಮದ ಗೌಡನಿಗಿಂತ ಕೆಳಗಿನದಾದರೂ ಅಕ್ಷರಸ್ಥನಾಗಿದ್ದ ಇವನು ಬಹು ಪ್ರಧಾನ ಶಾಲಿಯಾಗಿರಬೇಕು. ಇವನ ಅಕ್ಷರ ಪಕ್ಷಪಾತಿಯಾಗಿದ್ದನೆಂದು ಶಾಸನದ ಮೂಲಕ ತಿಳಿದು ಬರುತ್ತದೆ. ಎಷ್ಟೋ ವೇಳೆ ಶಾಸನಗಳ ಪಾಠವನ್ನು ಸಿದ್ಧಪಡಿಸುತ್ತಿದ್ದವನು ಸೇನಬೋವನೇ ಆಗಿದ್ದನು. ಕುಳಕರ್ಣಿ ಎನ್ನುವುದು ಸೇನುಬೋವನಿಗಿದ್ದ ಮತ್ತೊಂದು ಹೆಸರು."[144] ಸೇನಬೋವ, ಶಾನುಭೋವ ಎಂಬ ಮುಂತಾದ ಹೆಸರುಗಳಿಂದ ಗುರುತಿಸಿಕೊಂಡಿದ್ದ ಈ ಕುಳಕರ್ಣಿಯು ಗ್ರಾಮದಲ್ಲಿನ ಕಾರ್ಯ ಚಟುವಟಿಕೆಗಳನ್ನು ದಾಖಲಿಸುತ್ತಿದ್ದನು. ಇವನು ಗ್ರಾಮದ ಗೌಡನಿಂದ ನೇಮಿಸಲ್ಪಟ್ಟವ ನಾಗಿದ್ದರಿಂದ ಗೌಡನಿಗೆ ನಿಷ್ಠೆಯಿಂದ ಇರಬೇಕಾಗಿತ್ತು. "ಗ್ರಾಮಾಡಳಿತದ ಅಧಿಕಾರಿಗಳಲ್ಲಿ ಪ್ರಮುಖನಾದವನೆಂದರೆ ಸೇನುಬೋವ, ಇವನು ಗ್ರಾಮದ ಲೆಕ್ಕಪತ್ರವನ್ನು ನೋಡಿಕೊಳ್ಳುತ್ತಿದ್ದನು."[145]

ಕೊಪ್ಪಳ ಜಿಲ್ಲೆಯಲ್ಲಿ ಸೇನಬೋವ, ಶಾನುಬೋವ ಪದಗಳು ಬಳಕೆಯಾಗಿರುವ ಕೆಲವು ಶಾಸನಗಳನ್ನು ಕಾಣಬಹುದಾಗಿದೆ. ಹಾಗೂ ಸೇನುಬೋವರ ಹೆಸರನ್ನು ಸಹ ಕೆಲವು ಶಾಸನಗಳು ಪ್ರಸ್ತಾಪಿಸಿವೆ. ಗಂಗಾವತಿಯಲ್ಲಿ ದೊರೆತ ಶಾಸನ[146]ದಲ್ಲಿ ಸೇನುಬೋವ ನರಸಪ್ಪಯ್ಯನನ್ನು ಹೆಸರಿಸುತ್ತದೆ. ಯಲಬುರ್ಗಾದಲ್ಲಿ ದೊರೆತ ಶಾಸನ[147]ವು ಸೇನುಬೋವ ಕೊಪ್ಪನ ಹೆಸರನ್ನು ದಾಖಲಿಸಿದೆ. ಸೇನುಬೋವರು

ದಾನಗಳನ್ನು ನೀಡುತ್ತಿದ್ದರು ಎನ್ನುವುದಕ್ಕೆ ಗಂಗಾವತಿಯಲ್ಲಿ ದೊರೆತ ಶಾಸನ[148] ಸಾಕ್ಷಿಯಾಗಿದೆ. ಈ ಶಾಸನದಲ್ಲಿ ಅಮರೇಶ್ವರ ದೇವಾಲಯಕ್ಕೆ ಇಕ್ಕಳ ಗದ್ದೆಯನ್ನು ಸೇನುಬೋವ ಮಾಳಯ್ಯನು ನೀಡಿದ ವಿವರ ಕಾಣುತ್ತೇವೆ. ಅದೇ ರೀತಿಯಾಗಿ ಗೌಡರ ಜೊತೆ ಸೇರಿ ಪಂಡಿತಾರಾಧ್ಯ ಸಿವಾಪದೇವರಿಗೆ ಮಾನ್ಯವಾಗಿ ಭೂಮಿಯನ್ನು ದಾನ ನೀಡುತ್ತಾರೆ ಎಂದು ಗಂಗಾವತಿಯಲ್ಲಿ ದೊರೆತ ಇನ್ನೊಂದು ಶಾಸನ[149]ದಲ್ಲಿ ಮಾಹಿತಿ ದೊರೆಯುತ್ತದೆ. ಕೊಪ್ಪಳದಲ್ಲಿನ ಶಾಸನ[150]ದಲ್ಲಿ ದೇಮರಸಯ್ಯ ಮತ್ತು ಗೌತಮರಸಯ್ಯರು ಧರಣೇಗೌಡನ ಮಕ್ಕಳಾದ ಮಲೆಯಪ್ಪಗೌಡ ಮತ್ತು ಚಂದನಗೌಡರಿಗೆ ಶಾನುಭೋಗಿಕೆಯ ಅರ್ಧಭಾಗ ಮಾರಿದ ವಿಷಯ ಪ್ರಸ್ತಾಪಿಸಿದೆ.

**ತಳವಾರ :** ಗ್ರಾಮಾಡಳಿತದ ಕರ್ತವ್ಯಗಳಲ್ಲಿ ಗ್ರಾಮದ ರಕ್ಷಣೆ ತುಂಬ ಮುಖ್ಯವಾದದ್ದು. ಈ ರಕ್ಷಣೆಯ ಉಸ್ತುವಾರಿಯನ್ನು ವಹಿಸಿಕೊಂಡವನೇ ತಳವಾರ. ಗೌಡನ ಕೈಕೆಳಗಿನ ಇವನು ಹಗಲು ರಾತ್ರಿಯೆನ್ನದೇ ಕಳ್ಳರಿಂದ, ತುರುಗಳ್ಳರಿಂದ, ಅಪಹರಣಕಾರರಿಂದ, ದ್ರೋಹಿಗಳಿಂದ, ಸಮಾಜ ಘಾತುಕ ಶಕ್ತಿಗಳಿಂದ ಗ್ರಾಮವನ್ನು ರಕ್ಷಿಸಬೇಕಾಗಿತ್ತು. ಗ್ರಾಮದ ಜನರಿಗೆ ನಿರ್ಭಯದ ವಾತಾವರಣ ಕಲ್ಪಿಸುವುದು ಈತನ ಪರಮ ಧ್ಯೇಯವಾಗಿತ್ತು ಎಂದರೆ ಅತಿಶಯವಲ್ಲ. ರಾತ್ರಿಯಲ್ಲಿ ಗ್ರಾಮ ರಕ್ಷಣೆಯಲ್ಲಿ ನಿರತನಾದಾಗ ಅಪಾಯಗಳು ಎದುರಾಗುವುದು ಸಹಜ. ಆದುದರಿಂದ ಅವನು ತನ್ನ ರಕ್ಷಣೆಯ ಮೂಲಕ ಗ್ರಾಮದ ರಕ್ಷಣೆ ಮಾಡಬೇಕಾಗಿರುವುದರಿಂದ ಖಡ್ಗವನ್ನು ತನ್ನ ಹತ್ತಿರ ಇಟ್ಟುಕೊಳ್ಳುತ್ತಿದ್ದಿರಬೇಕು. ಹೀಗಾಗಿ ಸ್ಥಳ ಹಾಗೂ ತಲ್ವಾರ್ (ಖಡ್ಗ) ಮೂಲದಿಂದ 'ತಳಾರ' ಶಬ್ದ ಉತ್ಪತ್ತಿಯಾಗಿರಬಹುದೆಂದು ಹೇಳಬಹುದು. ಅವಶ್ಯಕತೆಯಿದ್ದಾಗ ಬೇರೆ ಬೇರೆ ಸ್ಥಳಗಳ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುತ್ತಿದ್ದನು. ತನ್ನ ಸೇವೆಯ ಪ್ರತಿಫಲವಾಗಿ ಭೂಮಿ, ಧನ ಮುಂತಾದವುಗಳನ್ನು ಪಡೆಯುತ್ತಿದ್ದನು.

ಕೊಪ್ಪಳ ಜಿಲ್ಲೆಯಲ್ಲಿನ ಕೆಲವು ಶಾಸನಗಳಲ್ಲಿ ತಳಾರಿ, ತಳವಾರ ಪದಗಳು ಉಲ್ಲೇಖಗೊಂಡಿರುವುದನ್ನು ಗಮನಿಸಬಹುದಾಗಿದೆ. ತಳವಾರನ ಕುರಿತು ಕೊಪ್ಪಳ ಜಿಲ್ಲೆಯಲ್ಲಿ ಕೇವಲ 5 ಶಾಸನಗಳಲ್ಲಿ ಮಾಹಿತಿ ಇರುವುದು ನನ್ನ ಗಮನಕ್ಕೆ ಬಂದಿದೆ. ಗಂಗಾಪಂಡಿತರು ಊರ ತಳವಾರಿಕೆ, ನಾಡ ತಳವಾರಿಕೆ ಮತ್ತು ಸುತ್ತಿಗೆ ಮಾನ್ಯವಾಗಿ ಆರುಗುಳ ಮಾನ್ಯವನ್ನು ನೀಡಿದ್ದಾರೆಂಬುದನ್ನು ಕೊಪ್ಪಳದಲ್ಲಿ ದೊರೆತ ಶಾಸನ[151]ದಲ್ಲಿ ಉಲ್ಲೇಖವಿದೆ. ತುರುಗಳ್ಳರೊಡನೆ ಹೋರಾಡಿ ಮಡಿದ ತಳವಾರನ ವಿವರ ಕುಷ್ಟಗಿಯಲ್ಲಿ ದೊರೆತ ಶಾಸನ[152]ದಲ್ಲಿ ಉಲ್ಲೇಖವಿದೆ. ಈ ಶಾಸನದಲ್ಲಿ ತಳಾರಿ ಕಾಳಬೋವಯ್ಯ ಎಂಬುವವನು ತುರುಗಳ್ಳರೊಡನೆ ಹೋರಾಡಿ ಮರಣ ಹೊಂದಿದ್ದನ್ನು ಹಾಗೂ ಊರ ಗೌಡ ತಳಾರಿಯ ಮಗ ಬೊವಯ್ಯನಿಗೆ ಹೊಲ–ಮನೆ ದಾನ ನೀಡಿದ ಕುರಿತು ಮಾಹಿತಿಯಿದೆ. ತಳಾರನು ಗ್ರಾಮದಲ್ಲಿನ ತುರುಗಳನ್ನು

ಕಾಪಾಡುವುದಕ್ಕೋಸ್ಕರ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ತುರುಗುಳ್ಳರೊಡನೆ ಏಕಾಂಗಿಯಾಗಿ ಹೋರಾಡಿ ವೀರತ್ವದಿಂದ ಮೆರೆದ ತಳಾರಿಯು ತನ್ನ ದೇಹದಲ್ಲಿ ಉಸಿರು ಇರುವವರೆಗೂ ತನ್ನ ಕರ್ತವ್ಯ ಪ್ರಜ್ಞೆಯನ್ನು ಮರೆಯುತ್ತಿರಲಿಲ್ಲ.

**ದೇಸಾಯಿ :** ದೇಸಾಯಿ ಗ್ರಾಮಾಡಳಿತದಲ್ಲಿ ವಿಶಿಷ್ಟ ಸ್ಥಾನಮಾನವನ್ನು ಹೊಂದಿದ್ದನು. ದೇಸಾಯಿ ಕೆಲವು ಪ್ರಮುಖ ಸಂದರ್ಭದಲ್ಲಿ ಸಾಕ್ಷಿಯಂತೆ ಇರುತ್ತಿದ್ದನು. ಇದಕ್ಕೆ ನಿದರ್ಶನವೆಂಬಂತೆ ಕೊಪ್ಪಳದಲ್ಲಿ ದೊರೆತ ಶಾಸನ[153]ವು ಸೇಮರಸಯ್ಯ ಮತ್ತು ಗೌತಮರಸಯ್ಯರು ಧರಣೇಗೌಡನ ಮಕ್ಕಳಾದ ಮರೆಯಪ್ಪಗೌಡ ಮತ್ತು ಚಂದನಗೌಡರಿಗೆ ಶಾನುಭೋಗಿಕೆಯ ಅರ್ಧ ಭಾಗ ಮಾರಿದ ವಿಷಯ ದಾಖಲಿಸುವುದರೊಂದಿಗೆ ಈ ಕ್ರಯಕ್ಕೆ ಕೊಪ್ಪಳ ಸೀಮೆಯ ದೇಸಾಯಿಯವರು, ಗೌಡರು, ಅಷ್ಟಾದಶ ನಾಗರಿಕರು ಮತ್ತು ಆಯಗಾರರು ಹಾಗೂ ಕುಕನೂರು ಮಹಾಮಾಯಿ ಸಾಕ್ಷಿಗಳಾಗಿದ್ದರು ಎಂದು ತಿಳಿಸುತ್ತದೆ. ಯಲಬುರ್ಗಾದ ಕುಕನೂರಿನಲ್ಲಿ ದೊರೆತ ಶಾಸನ[154] ದೇಸಾಯಿ ರಾಯಗೌಡನು ಬಣಜಿಗ, ಗೌಡ, ನಾಯಿಂದ, ಅಕ್ಕಸಾಲಿ, ಜೇಡರು ಮುಂತಾದವರು ತಮಗೆ ಸಲ್ಲಬೇಕಾದ ಆದಾಯವನ್ನು ನಿಗದಿಪಡಿಸಿದಂತೆ ತಿಳಿಸುತ್ತದೆ.

## ಜಿಲ್ಲೆಯ ಶಾಸನೋಕ್ತ ಅಧಿಕಾರಿ ವರ್ಗ :

| ಕ್ರ.ಸಂ. | ಹುದ್ದೆ | ಅಧಿಕಾರಿ ಹೆಸರು | ಅರಸರ ಹೆಸರು | ಕಾಲ | ಉಲ್ಲೇಖಿತ ಶಾಸನ ಸ್ಥಳ |
|---|---|---|---|---|---|
| 01. | ಗಾವುಡ/ಗೌಡ | ಹಾಳಾಗಿದೆ | – | 16 ನೇ ಶ. | ಕವಲೂರು |
| 02. | ಗಾವುಡ/ಗೌಡ | ಹಲಗೇರಿಮಲ್ಲನಗೌಡ | – | ,, | ಹಲಗೇರಿ |
| 03. | ಗಾವುಡ/ಗೌಡ | 7 ಜನ ಗೌಡರ ಉಲ್ಲೇಖವಿರ | – | 18 ನೇ ಶ. | ಕೊಪ್ಪಳ |
| 04. | ಗಾವುಡ/ಗೌಡ | ತಿಂಮಣಗೌಡ | – | 16 ನೇ ಶ. | ಹಾಲಳ್ಳಿ |
| 05. | ಗಾವುಡ/ಗೌಡ | ಉಲ್ಲೇಖವಿಲ್ಲ | ಉಲ್ಲೇಖವಿಲ್ಲ | – | ಹಿರೇಕಾಸನಕಂಡಿ |
| 06. | ಗಾವುಡ/ಗೌಡ | 3 ಜನ ಗೌಡರ ಉಲ್ಲೇಖವಿದೆ | – | ಕ್ರಿ.ಶ.1581 | ಕೊಪ್ಪಳ |
| 07. | ಗಾವುಡ/ಗೌಡ | 4 ಜನ ಗೌಡರ ಉಲ್ಲೇಖವಿದೆ | – | ಕ್ರಿ.ಶ.1583 | ಕೊಪ್ಪಳ |
| 08. | ಗಾವುಡ/ಗೌಡ | ಕೊಪಣದ ಅಜ್ಜಗೌಂಡ | – | ಕ್ರಿ.ಶ.1212 | ಕೊಪ್ಪಳ |
| 09. | ಗಾವುಡ/ಗೌಡ | 8 ಜನ ಗೌಡರ ಉಲ್ಲೇಖವಿದೆ | – | ತ್ರುಟಿತ | ಕಲ್ಲೂರು |
| 10. | ಗಾವುಡ/ಗೌಡ | ರಾಯಗೌಡ | – | ಕ್ರಿ.ಶ.1584 | ಕುಕನೂರು |
| 11. | ಗೌಡಕಿ ವಿವರ | – | – | ಕ್ರಿ.ಶ.1379 | ಕುಕನೂರು |
| 12. | ಗಾವುಡ/ಗೌಡ | 5 ಜನ ಗೌಡರ ಉಲ್ಲೇಖವಿದೆ | – | ಕ್ರಿ.ಶ.1561 | ಕುಕನೂರು |
| 13. | ಗಾವುಡ/ಗೌಡ | ಬೊಮ್ಮಗಾವುಂಡ | ತ್ರಿಭುವನಮಲ್ಲ | ಕ್ರಿ.ಶ.1123 | ಮಂಕಲ್ಕೇರಿ |
| 14. | ಗಾವುಡ/ಗೌಡ | 2ಜನ ಗೌಡರ ಉಲ್ಲೇಖವಿದೆ | – | ಕ್ರಿ.ಶ.1110 | ಸಿರಿಗುಪ್ಪ |
| 15. | ಗೌಡಕಿ??ದಾನ | – | ಸದಾಶಿವರಾಯ | ಕ್ರಿ.ಶ.1547 | ಪುರ |
| 16. | ಗೌಡ/ಗಾವುಡ/ಗಾವುಂಡ | ಮೇಲರಿಗೌಡ | ಅಸ್ಪಷ್ಟ | ಅಸ್ಪಷ್ಟ | ಯರಗೇರಿ |
| 17. | ಗೌಡ/ಗಾವುಡ/ಗಾವುಂಡ | ಬರಗೂರಿನಗೌಡ | ಅಸ್ಪಷ್ಟ | ಅಸ್ಪಷ್ಟ | ಬರಗೂರು |
| 18. | ಸೇನಬೋವ | ಚಂದನಗೌಡ ಶಾನುಭೋಗಿಕೆ | ಅರ್ಧ | ಕ್ರಿ.ಶ.1581 | ಕೊಪ್ಪಳ |
| 19. | ಸೇನಬೋವ | ಕೊಪ್ಪ | – | – | ಕಲ್ಲೂರು |
| 20. | ಸೇನಬೋವ | ನರಸಪ್ಪಯ್ಯ | – | – | ಹಿರೇಜಂತಗಲ್ |
| 21. | ಸೇನಬೋವ | ಮಾಳಯ್ಯ | – | ಕ್ರಿ.ಶ.1530 | ಕನ್ನೇರುಮಡು |
| 22. | ಸೇನಬೋವ | ಉಲ್ಲೇಖವಿಲ್ಲ | – | – | ಬರಗೂರು |
| 23. | ತಳವಾರ/ತಳಾರ | ಎಱೆಯಮ್ಮ | – | ಕ್ರಿ.ಶ.1018 | ಹಲಗೇರಿ |
| 24. | ತಳವಾರ/ತಳಾರ | ಹುಚಮಲಿನಾಯಕ | – | 16ನೇ ಶ. | ಅಗಳಕೇರಿ |
| 25. | ತಳವಾರ/ತಳಾರ | – | – | – | ಅಗಳಕೇರಿ |
| 26. | ತಳವಾರ/ತಳಾರ | ಕಾಳಬೋವ | – | ಕ್ರಿ.ಶ.1110 | ಸಿರಗುಪ್ಪ |
| 27. | ತಳವಾರ/ತಳಾರ | – | ಸದಾಶಿವರಾಯ | ಕ್ರಿ.ಶ.1547 | ಪುರ |
| 28. | ದೇಸಾಯಿ | – | – | ಕ್ರಿ.ಶ.1581 | ಕೊಪ್ಪಳ |
| 29. | ದೇಸಾಯಿ | ರಾಯಗೌಡ | – | ಕ್ರಿ.ಶ.1584 | ಕುಕನೂರು |

**ಅಡಿಟಿಪ್ಪಣಿಗಳು :**

1. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯ ಶಾಸನಗಳು : ಒಂದು ಅಧ್ಯಯನ, ಪುಟ. 87
2. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 356
3. ಚನ್ನಬಸವ ಹಿರೇಮಠ : ಎಡೆದೊರೆ ನಾಡು, ಪುಟ. 1
4. ಅದೇ, ಪುಟ. 1
5. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–26, ಪುಟ. 32
6. ಅದೇ, ಯ–65, ಪುಟ. 257
7. ಅದೇ, ಕು–8, ಪುಟ. 283
8. ಅದೇ, ಕು–4, ಪುಟ. 280
9. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 105
10. ಬಿ.ಸಿ.ಪಾಟೀಲ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ. ಫಿಗಿಖ
11. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–51, ಪುಟ. 226
12. ಅದೇ, ಯ–59, ಪುಟ. 253
13. ಅದೇ, ಯ–65, ಪುಟ. 257
14. ಅದೇ, ಯ–51, ಪುಟ. 226
15. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 109
16. ಪೂರ್ವೋಕ್ತ, ಯ–65, ಪುಟ. 257
17. ಅದೇ, ಕು–18, ಪುಟ. 296
18. ಅದೇ, ಕೊ–26, ಪುಟ. 32
19. ಅದೇ, ಕೊ–12, ಪುಟ. 23
20. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 119
21. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–136, ಪುಟ. 133
22. ಪೂರ್ವೋಕ್ತ, ಪುಟ. 110
23. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–10, ಪುಟ.145
24. ಅದೇ, ಯ–24, ಪುಟ. 180
25. ಅದೇ, ಯ–59, ಪುಟ. 253

26. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 104
27. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–67, ಪುಟ. 263
28. ಅದೇ, ಯ–67, ಪುಟ. 263
29. ಅದೇ, ಯ–17, ಪುಟ. 175
30. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 104
31. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–51, ಪುಟ. 226
32. ಅದೇ, ಯ–24, ಪುಟ. 180
33. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 108
34. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 108
35. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–24, ಪುಟ. 180
36. ಅದೇ, ಯ–65, ಪುಟ. 257
37. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 106
38. ಅದೇ, ಪುಟ. 115
39. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–35, ಪುಟ. 193
40. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 115
41. ಚೆನ್ನಬಸವ ಹಿರೇಮಠ : ಎಡೆದೊರೆ ನಾಡು, ಪುಟ. 4
42. ಅದೇ, ಪುಟ. 4
43. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕು–3, ಪುಟ. 279
44. ಅದೇ, ಕು–4, ಪುಟ. 280
45. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 118
46. ಅದೇ, ಪುಟ. 119
47. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಗಂ–1, ಪುಟ. 315
48. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 123
49. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಗಂ–1, ಪುಟ. 313

50. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಪುಟ. 103
51. ಪೂರ್ವೋಕ್ತ, ಯ–59, ಪುಟ. 253
52. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಆಧ್ಯಯನ, ಪುಟ. 78
53. ಉದ್ಧೃತ : ಚನ್ನಬಸವ ಹಿರೇಮಠ : ಕುರುಗೋಡ ಸಿಂಧರು : ಒಂದು ಅಧ್ಯಯನ, ಪುಟ. 136
54. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಪುಟ. 181
55. ಚನ್ನಬಸವ ಹಿರೇಮಠ : ಕುರುಗೋಡ ಸಿಂಧರು : ಒಂದು ಅಧ್ಯಯನ, ಪುಟ. 139
56. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–79, ಪುಟ. 62
57. ಅದೇ, ಕೊ–84, ಪುಟ. 69
58. ಅದೇ, ಕೊ–93, ಪುಟ. 80
59. ಅದೇ, ಕೊ–99, ಪುಟ. 88
60. ಅದೇ, ಕೊ–101, ಪುಟ. 90
61, ಅದೇ, ಕೊ–113, ಪುಟ. 109
62. ಅದೇ, ಕೊ–118, ಪುಟ. 113
63. ಅದೇ, ಕು–3, ಪುಟ. 279
64. ಅದೇ, ಗಂ–22, ಪುಟ. 337
65. ಅದೇ, ಗಂ–75, ಪುಟ. 367
66. ಅದೇ, ಗಂ–78, ಪುಟ. 368
67. ಅದೇ, ಗಂ–79, ಪುಟ. 369
68. ಅದೇ, ಗಂ–88, ಪುಟ. 377
69. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ. 151
70. ಅದೇ, ಪುಟ. 152
71. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ,ಪುಟ. 376
72. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–3, ಪುಟ. 10
73. ಅದೇ, ಕೊ–3, ಪುಟ. 10
74. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–112, ಪುಟ. 108
75. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–139, ಪುಟ. 136

76. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–172, ಪುಟ. 397
77. ಅದೇ, ಯ–1, ಪುಟ. 160
78. ಅದೇ, ಯ–12, ಪುಟ. 167
79. ಅದೇ, ಯ–32, ಪುಟ. 190
80. ಅದೇ, ಯ–13, ಪುಟ. 169
81. ಅದೇ,, ಯ–52, ಪುಟ. 229
82. ಅದೇ, ಕು–21, ಪುಟ. 298
83. ಅದೇ, ಕು–27, ಪುಟ. 306
84. ಅದೇ, ಗಂ–1, ಪುಟ. 313
85. ಅದೇ, ಗಂ–3, ಪುಟ. 316
86. ಅದೇ, ಗಂ–99, ಪುಟ. 383
87. ಅದೇ, ಗಂ–82, ಪುಟ. 373
88. ಅದೇ, ಯ–16, ಪುಟ. 173
89. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 376
90. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯ ಶಾಸನಗಳು ಒಂದು ಅಧ್ಯಯನ, ಪುಟ. 230
91. ಅದೇ, ಪುಟ.394
92. ಅದೇ, ಪುಟ. 393
93. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–172, ಪುಟ. 398
94. ಅದೇ, ಯ–10, ಪುಟ. 164
95. ಅದೇ, ಯ–59, ಪುಟ. 253
96. ಅದೇ, ಕೊ–23, ಪುಟ. 30
97. ಅದೇ, ಯ–63, ಪುಟ. 256
98. ಅದೇ, ಕುಷ್ಟಗಿ–8, ಪುಟ. 283
99. ಚನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 142
100. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಆಧ್ಯಯನ, ಪುಟ. 320
101. ಅದೇ, ಪುಟ. 395
102. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–34, ಪುಟ. 40
103. ಅದೇ, ಕೊ–106, ಪುಟ. 99

104. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2,ಯ–4, ಪುಟ. 161
105. ಅದೇ, ಯ–17, ಪುಟ. 176
106. ಅದೇ, ಯ–32, ಪುಟ. 190
107. ಅದೇ, ಯ–40, ಪುಟ. 205
108. ಅದೇ, ಯ–41, ಪುಟ. 210
109. ಅದೇ, ಯ–52, ಪುಟ. 229
110. ಅದೇ, ಯ–67, ಪುಟ 259
111. ಅದೇ, ಯ–69, ಪುಟ. 269
112. ಅದೇ, ಯ–70, ಪುಟ. 273
113. ಅದೇ, ಕು–13, ಪುಟ. 289
114. ಅದೇ, ಕು–21, ಪುಟ. 198
115. ಅದೇ, ಕು–28, ಪುಟ. 308
116. ಅದೇ, ಕು–29, ಪುಟ. 310
117. ಅದೇ, ಗಂ–21, ಪುಟ. 335
118. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ. 277
119. ಅದೇ, ಪುಟ. 83
120. ಜೆ.ಎಂ.ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ. 193
121. ಎಂ.ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 367
122. ಜೆ.ಎಂ.ನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ. 350
123. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಗಂ–102, ಪುಟ. 355
124. ಅದೇ, ಕು–25, ಪುಟ. 305
125. ಅದೇ, ಯ–34, ಪುಟ. 192
126. ಅದೇ, ಯ–39, ಪುಟ. 202
127. ಅದೇ, ಯ–16, ಪುಟ. 173
128. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 195
129. ಅದೇ, ಪುಟ. 401
130. ಎಂ.ಚಿದಾನಂದ ಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 395

131. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 395
132. ಅದೇ, ಪುಟ. 391
133. ಅದೇ, ಪುಟ. 392
134. ಜೆ.ಎಂನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ. 249
135. ಅದೇ, ಪುಟ. 250
136. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 396
137. ಜೆ.ಎಂನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ. 84
138. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 397
139. ಅದೇ, ಪುಟ. 385–396
140. ಜೆ.ಎಂನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ. 253
141. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–49, ಪುಟ. 222
142. ಅದೇ, ಕೊ–169, ಪುಟ. 393
143. ಅದೇ, ಕು–4, ಪುಟ. 281
144. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 400
145. ಜೆ.ಎಂನಾಗಯ್ಯ : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪುಟ. 84
146. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಗಂ–9, ಪುಟ. 320
147. ಅದೇ, ಯ–9, ಪುಟ. 164
148. ಅದೇ, ಗಂ–91, ಪುಟ. 379
149. ಅದೇ, ಗಂ–101, ಪುಟ. 384
150. ಅದೇ, ಕೊ–169, ಪುಟ.393
151. ಅದೇ, ಕೊ–146, ಪುಟ. 144
152. ಅದೇ, ಕು–5, ಪುಟ. 281
153. ಅದೇ, ಕೊ–169, ಪುಟ. 393
154. ಅದೇ, ಯ–45, ಪುಟ. 216

ಅಧ್ಯಾಯ–5

# ಆರ್ಥಿಕ ವ್ಯವಸ್ಥೆ

ಪ್ರಾಚೀನ ಇತಿಹಾಸದ ಕಾಲದಿಂದಲೂ ಆರ್ಥಿಕ ವ್ಯವಸ್ಥೆಯು ಇತಿಹಾಸದ ಒಂದು ಭಾಗವೆಂದು ಗುರುತಿಸಿದ್ದಾರೆ. ಇದು ರಾಜರ ಆಳ್ವಿಕೆಯ ಕಾಲದಿಂದ ಹಿಡಿದು ಒಂದು ವ್ಯವಸ್ಥೆಯಾಗಿ ಆರ್ಥಿಕ ಅಭಿವೃದ್ಧಿಗೆ ಪ್ರೇರಕ ಶಕ್ತಿಯಾಗಿ ನಿಂತಿದೆ. ಅಂದಿನ ಕಾಲದಲ್ಲಿ ಸಮಾಜದ ಒಂದು ಪ್ರಮುಖ ಅಂಗ ಎಂದರೆ ಕೃಷಿ ಪದ್ಧತಿಯೇ ಆಗಿದೆ. ಆದ್ದರಿಂದಲೇ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳು ಆರ್ಥಿಕ ವ್ಯವಸ್ಥೆಯಿಂದ ತಿಳಿಯಬಹುದು. ವ್ಯಾಪಾರ ಎನ್ನುವುದು ಒಂದು ವೃತ್ತಿ ಎಂದು ಹೇಳಬಹುದು. ವೃತ್ತಿ ಎನ್ನುವುದು ಇಂದು ನಿನ್ನೆಯದಲ್ಲ; ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವಂತಹದ್ದು. ಆದುದರಿಂದ ಸಮಾಜದಲ್ಲಿ ವೃತ್ತಿ ಜೀವನ ಒಂದು ಅವಶ್ಯಕತೆಯಾಗಿ ನಿಂತಿದೆ. ವೃತ್ತಿಗೆ ಮಾನವನಷ್ಟು ಇತಿಹಾಸವಿದ್ದುದು ಕಡತಗಳಲ್ಲಿ, ದಾಖಲೆಗಳಲ್ಲಿ, ಶಾಸನಗಳಲ್ಲಿ ಉಲ್ಲೇಖವಿದೆ. ಏಕೆಂದರೆ ಮಾನವನು ವೃತ್ತಿಯನ್ನು ಅವಲಂಬಿಸ ಬೇಕಾದುದು ಅನಿವಾರ್ಯವಾಗಿದ್ದು, ಈ ವೃತ್ತಿಯಿಂದಲೇ ಮಾನವನು ಜೀವನ ಸಾಗಿಸುತ್ತಿದ್ದನು. ಇನ್ನೊಂದೆಡೆ ಅನಾಗರಿಕತೆ ತಾಂಡವಾಡುತ್ತಿದ್ದರಿಂದ ಅಷ್ಟೇನು ವ್ಯಾಪಾರ ವೃತ್ತಿ ಬೆಳಕಿಗೆ ಬಂದಿರಲಿಲ್ಲ. ಏಕೆಂದರೆ ನೈಸರ್ಗಿಕವಾದ ಸಂಪತ್ತಿನಲ್ಲಿಯೇ ವೃತ್ತಿ ಮಾಡಲೇ ಬೇಕಾಗಿತ್ತು. ಆದುದರಿಂದ ಮಾನವನ ಶ್ರಮ ಅಪಾರವಾಗಬೇಕಿತ್ತು. ಭೂಮಿಯಲ್ಲಿ ನೈಸರ್ಗಿಕವಾಗಿ ದೊರೆಯುವ ಸಂಪನ್ಮೂಲಗಳನ್ನು ಉಪಯೋಗಿಸುತ್ತಾ ತನ್ನ ಬದುಕನ್ನು ಸಾಗಿಸುತ್ತಿದ್ದನು.

ಮಾನವ ಬುದ್ದಿಜೀವಿ. ಬೌದ್ಧಿಕ ವಿಕಾಸವಾದಂತೆಲ್ಲ ವೃತ್ತಿಗಳಲ್ಲಿ ಹಲವಾರು ಬದಲಾವಣೆಗಳನ್ನು ಕಂಡುಕೊಂಡನು. ವೃತ್ತಿಯ ಗುಣಮಟ್ಟ ಹಾಗೂ ಅವುಗಳನ್ನು ಬಳಸಿಕೊಳ್ಳುವ ವಿಧಾನದಿಂದಲೇ ಆ ನಾಡಿನ ಆರ್ಥಿಕಾಭಿವೃದ್ಧಿಯು ತಿಳಿದು ಬರುತ್ತಿತ್ತು. ಆರ್ಥಿಕ ವ್ಯವಸ್ಥೆಯು ಸಮಾಜದ ಮಹತ್ವದ ಒಂದು ಭಾಗ. ಮಾನವ ಶ್ರಮಜೀವಿ. ತನ್ನ ನಿತ್ಯ ದುಡಿಮೆಯ ಮೂಲಕ ಆರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆ ಹೊಂದುತ್ತಿದ್ದನು. ಹೀಗಾಗಿ ಮಾನವನ ವೃತ್ತಿ ಬದುಕಿನಲ್ಲಿ ಅತ್ಯಂತ ಮೌಲ್ಯವುಳ್ಳ ಅಂಶವಾಗಿ ಕಾಣುತ್ತದೆ. ಶ್ರಮದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಷ್ಟು ವೃತ್ತಿಗೆ ಹೊಳಪು ಬರುತ್ತದೆ. "ಶ್ರಮ ಮತ್ತು ವೃತ್ತಿಗಳು ನಾಡಿನ ಆರ್ಥಿಕ ಜೀವನದ ನಾಡಿ ಎನಿಸಿದ್ದವು."[1] ಅದರಂತೆಯೇ ಕರ್ನಾಟಕದ ಅನೇಕ ಶಾಸನಗಳಲ್ಲಿ ಅದರಂತೆ ಕೊಪ್ಪಳ ಜಿಲ್ಲೆಯ ಶಾಸನಗಳು ಆರ್ಥಿಕ ವ್ಯವಸ್ಥೆಯ ಬಗ್ಗೆ ತಿಳಿಸುವಲ್ಲಿ ಹೊರತಾಗಿಲ್ಲ ಎಂದು ಹೇಳಬಹುದು. ಕರ್ನಾಟಕವನ್ನಾಳಿದ ಅನೇಕ ರಾಜಮನೆತನಗಳಲ್ಲಿ ರೂಢಿಯಲ್ಲಿರುವ

ಆರ್ಥಿಕ ವ್ಯವಸ್ಥೆಯನ್ನು ಅವರು ಬರೆಸಿದ ಶಾಸನಗಳಿಂದ ತಿಳಿದುಬರುತ್ತದೆ. ಇಂಥ ವ್ಯವಸ್ಥೆಯು ಜಿಲ್ಲೆಯ ಅನೇಕ ಶಾಸನಗಳಲ್ಲಿ ಪ್ರಸ್ತಾಪವಿರುವುದು ಕಂಡು ಬರುತ್ತದೆ.

**ಭೂ ಸಂಪತ್ತು :**

ಮಾನವ ಸಂಘಜೀವಿ ಹಾಗೂ ಶ್ರಮಜೀವಿಯೂ ಕೂಡ. ಆದ್ದರಿಂದ ಸಮಾಜದಲ್ಲಿ ಬಾಳಿ ಬದುಕುವ ಪ್ರತಿಯೊಬ್ಬ ಮನುಷ್ಯನು ತನ್ನ ಜೀವನದ ನಿರ್ವಹಣೆಗಾಗಿ ಆರ್ಥಿಕ ವ್ಯವಸ್ಥೆಯ ತಳಹದಿಯಲ್ಲಿಯೇ ಜೀವನ ಸಾಗಿಸಬೇಕಾಗುತ್ತಿತ್ತು. ನೈಸರ್ಗಿಕ ಕೊಡುಗೆಯಾದ ಭೂಮಿಯನ್ನು ಮಾನವ ಅವಲಂಬಿಸಲೇ ಬೇಕಾಗಿತ್ತು. ಇದನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ. ಭೂಮಿ ಅನೇಕ ವಿಧಗಳಿಂದ ಕೂಡಿರುವಂತಹದ್ದು ಅದರಲ್ಲಿ ನೀರು, ಮಣ್ಣು, ಕಾಡು, ಖನಿಜಸಂಪತ್ತು, ನದಿ ಮುಂತಾದವುಗಳಲ್ಲದೇ ಅನೇಕ ಜೀವರಾಶಿಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ. ಭೂಮಿ ಒಂದು ಸಂಪತ್ತು. ಇದರಿಂದ ನಾವು ಏನಾದರೂ ಪಡೆಯಬಹುದು. ಆದ್ದರಿಂದಲೇ ಮಾನವನು ವ್ಯವಸಾಯಕ್ಕಾಗಿ ಬಳಸಿಕೊಂಡನು. ಎಲ್ಲಾ ಭೂಮಿಯು ವ್ಯವಸಾಯಕ್ಕೆ ಬರುತ್ತದೆ ಎಂದು ಹೇಳಲುಬಾರದು. ಒಂದೆಡೆ ನೀರಿನಿಂದ ಕೂಡಿದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇದ್ದರೆ ಇನ್ನೊಂದೆಡೆ ಮಳೆಯನ್ನೇ ಅವಲಂಬಿತ ಭೂಮಿ ಕಂಡು ಬರುತ್ತದೆ.

ಮಾನವ ಸಂಘಜೀವಿ ಎನ್ನುವ ಕಾರಣಕ್ಕಾಗಿಯೇ ಅನೇಕ ಜನರನ್ನು ಕೂಡಿಸಿ ಒಂದು ಊರನ್ನಾಗಿ ನಿರ್ಮಾಣ ಮಾಡಿ, ತನ್ನ ಊರ ಸುತ್ತಮುತ್ತಲಿನ ಭೂಮಿಯನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದನು. ವ್ಯವಸಾಯಕ್ಕೆ ಬಾರದ ಬೀಳು ಭೂಮಿಯಲ್ಲಿ ಸಿಗುವ ಹುಲ್ಲನ್ನು ದನಕರುಗಳಿಗೆ ಮೀಸಲಾಗಿಡುತ್ತಿದ್ದರು. "ಒಂದು ವೇಳೆ ಬೀಳು ಭೂಮಿ ಇರದಿದ್ದರೆ ಅಂತಹ ಊರುಗಳಲ್ಲಿ ನೂರು ಬಿಲ್ಲಳತೆಯ ಭೂಮಿಯನ್ನು ಕಾಯ್ದಿಡಬೇಕೆಂದು ಯಜ್ಞವಲ್ಕ್ಯಸ್ಮೃತಿ ಹೇಳುತ್ತದೆ."[2] ಆದರೆ ಬಹಳಷ್ಟು ಬೀಳು ಬಿದ್ದ ಭೂಮಿ ಇದ್ದರೆ ಸ್ವಲ್ಪ ಭಾಗ ಭೂಮಿಯನ್ನು ರೈತರು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಇದರಿಂದ ಬೀಳು ಬಿದ್ದ ಭೂಮಿಯನ್ನು ರೈತರು ವ್ಯವಸಾಯಕ್ಕೆ ತೊಡಗಿಸಿಕೊಂಡರೆ ಭೂಮಿಯ ಕರವನ್ನು ಕೊಡುವಲ್ಲಿ ವಿನಾಯ್ತಿ ಇರುತ್ತಿತ್ತು. ಆದುದರಿಂದ ಬೀಳು ಭೂಮಿಯನ್ನು ಬಹಳಷ್ಟು ಶ್ರಮವಹಿಸಿ ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿದ್ದರು. ಇಲ್ಲಿ ವ್ಯವಸಾಯವನ್ನು ಜನ ಅವಲಂಬಿಸಲೇ ಬೇಕಾಗಿದ್ದರಿಂದ "ಒಕ್ಕಲುತನ ಅಭಿವೃದ್ಧಿ ಎಂದರೆ ಒಂದು ನಾಡಿನ ನಿಜವಾದ ಅಭಿವೃದ್ಧಿ ಎಂಬುದನ್ನು ನಮ್ಮ ಪ್ರಾಚೀನರು ಚೆನ್ನಾಗಿ ಮನಗಂಡಿದ್ದರು."[3]

ಪ್ರಾರಂಭದಲ್ಲಿ ಮಾನವ ಅಲೆಮಾರಿಯಾಗಿ ಜೀವನೋಪಾಯಕ್ಕಾಗಿ ಗುಡ್ಡ–ಗಾಡುಗಳಲ್ಲಿ ಅಲೆದಾಡಿ ಅಲ್ಲಿ ಸಿಗುವ ಗಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದ. ನಾಗರಿಕತೆ ಬೆಳೆದಂತೆಲ್ಲ ಅವನು ಶ್ರಮಜೀವಿಯಾಗಿ ಭೂಮಿಯನ್ನು ಉತ್ತಿ ಬಿತ್ತಿ ವಿವಿಧ

ಬೆಳೆಗಳನ್ನು ಬೆಳೆಸುವಲ್ಲಿ ನಿರತನಾದನು. ಆರಂಭದಲ್ಲಿ ಭೂಮಿಯನ್ನು ಊಳಲು ನೇಗಿಲು, ಕುಂಟೆ, ಕೂರಿಗಿ ಇತ್ಯಾದಿ ಕೃಷಿ ಸಲಕರಣೆಗಳು ಇರಲಿಲ್ಲ. ಆದ್ದರಿಂದ ಭೂಮಿಯನ್ನು ಊಳಲು ಚೂಪಾದ ಕಲ್ಲಿನಿಂದ ಕೊರೆದು ಬೀಜಗಳನ್ನು ಬಿತ್ತುತ್ತಿದ್ದನು. ಕ್ರಮೇಣವಾಗಿ ತನ್ನ ಬೌದ್ಧಿಕ ವಿಕಾಸವಾದಂತೆ ನೇಗಿಲು, ಕುಂಟೆ, ಕೂರಿಗಿ ಇತ್ಯಾದಿ ಸಲಕರಣೆಗಳ ಮೂಲಕ ಭೂಮಿಯನ್ನು ಊಳಲು ಆರಂಭಿಸಿದನು. ಅದಕ್ಕಾಗಿಯೇ ಎತ್ತುಗಳನ್ನು ಆಶ್ರಯಿಸಿದನು. ಅಲ್ಲದೇ ಭೂಮಿಯಲ್ಲಿ ವಿಧಗಳನ್ನು ಕಂಡುಕೊಂಡನು. ಯಾವ ತರಹದ ಭೂಮಿಯಲ್ಲಿ ಯಾವ ಬೆಳೆ ಚೆನ್ನಾಗಿ ಬರಬಲ್ಲದು ಎಂಬುವುದನ್ನು ಮನಗಂಡನು. ಆದ್ದರಿಂದಲೇ ನೀರಾವರಿ ಮೂಲಕ ವ್ಯವಸಾಯ ಮಾಡುವುದು ಮತ್ತು ಮಳೆಯನ್ನೇ ಅವಲಂಭಿಸಿ ವ್ಯವಸಾಯ ಮಾಡುವುದು ಎಂಬ ಎರಡು ಪ್ರಕಾರಗಳನ್ನು ಶಾಸನಗಳ ಆಧಾರದಿಂದ ಗುರುತಿಸಬಹುದು. ಕೆರೆ, ಬಾವಿಗಳ ನೀರನ್ನು ಉಪಯೋಗಿಸಿ ವ್ಯವಸಾಯ ಮಾಡುತ್ತಿದ್ದನು. ಆದರೆ ವರುಣನ ಕೃಪೆಗೆ ಪಾತ್ರವಾದ ಭೂಮಿಯಲ್ಲಿ ಮಳೆಯನ್ನೇ ಆಶ್ರಯಿಸಿ ಬೆಳೆಯಬೇಕಾಗಿತ್ತು. "ಮಳೆಯನ್ನೇ ಅವಲಂಬಿಸಿರುವ ವ್ಯವಸಾಯ ದೇವ ಮಾತೃಕೆಯೆಂದೂ ಕೆರೆ, ಬಾವಿ, ನದಿ ಮುಂತಾದವುಗಳನ್ನು ನದಿ ಮಾತೃಕೆವೆಂದು ವಿಂಗಡಿಸಿ ಕರೆಯಲಾಗುತ್ತಿತ್ತು."[4] ನೀರಾವರಿಯ ಮೂಲಕ ವ್ಯವಸಾಯ ಮಾಡುವುದು ಬಹಳ ಸುಲಭವಾಗಿತ್ತು. ಏಕೆಂದರೆ ನಮ್ಮ ದೇಶದಲ್ಲಿ 'ಮಳೆಯು ಮಾನ್ಸುನ್ ಜೊತೆಗೆ ಆಡುವ ಜೂಜಾಟ' ವಾಗಿದ್ದರಿಂದ ಮಳೆಯನ್ನು ಅವಲಂಬಿಸಿದ ಭೂಮಿಯಿಂದ ಫಸಲನ್ನು ತೆಗೆಯುವುದು ಕಷ್ಟದ ಕೆಲಸವೇ ಸರಿ. ಅದು ಇಂದಿಗೂ ನಾವು ಕಾಣುತ್ತೇವೆ.

**ಭೂಮಿಯ ವಿಧಗಳು :**

ಭೂಮಿಯು ಎಲ್ಲಾ ಪ್ರದೇಶಗಳಲ್ಲಿ ಒಂದೇ ತೆರನಾಗಿ ಇರಲು ಸಾಧ್ಯವಿಲ್ಲ. ನಾನಾ ಪ್ರದೇಶಗಳಲ್ಲಿ ನಾನಾ ಪ್ರಕಾರದ ಭೂಮಿ ಇದ್ದುದನ್ನು ಪ್ರಾಚೀನ ಕಾಲದಿಂದಲೂ ಇಂದಿನ ತನಕ ಗುರುತಿಸುತ್ತೇವೆ. ಯಾವ ರೀತಿಯ ಭೂಮಿಯಲ್ಲಿ ಯಾವ ತೆರನಾದ ಬೆಳೆಯನ್ನು ಬೆಳೆದರೆ ಸೂಕ್ತ ಎಂಬ ಬಗ್ಗೆ ಮಾನವನು ಕಂಡುಕೊಂಡು ಅದೇ ರೀತಿಯ ಬೆಳೆಗಳನ್ನು ಬೆಳೆಯಲು ಆರಂಭಿಸಿದನು.

ಜಿಲ್ಲೆಯ ಶಾಸನಗಳು ಎರೆಹೊಲ, ಕರಿನೆಲ ಮತ್ತು ಕೆಂಪುನೆಲ ಎಂಬ ಮೂರು ಪ್ರಕಾರದ ಭೂಮಿಯ ವಿಧಗಳನ್ನು ಮಾತ್ರ ತಿಳಿಸುತ್ತವೆ. ಶಾಸನಗಳಲ್ಲಿ ಭೂಮಿಯ ವಿಧಗಳನ್ನು ಉಲ್ಲೇಖಿಸುವ ಶಾಸನಗಳೆಲ್ಲವುಗಳು ದಾನ ಶಾಸನಗಳಾಗಿರುವುದರಿಂದ ಇಂತಹ ನೆಲದ ಪ್ರಕಾರದಲ್ಲಿ ಇಂತಹ ಬೆಳೆಗಳನ್ನು ಬೆಳೆಯುತ್ತಿದ್ದರೆಂದು ನಿಖರವಾಗಿ ಹೇಳಲು ಸಾಧ್ಯವಾಗದೆ; ಕೇವಲ ಭೂಮಿಯ ಪ್ರಕಾರಗಳನ್ನು ಮಾತ್ರ ಗುರುತಿಸಬಹುದಾಗಿದೆ. ಕುಕನೂರು[5], ರಾಜೂರು[6], ಪುರ[7] ಗ್ರಾಮಗಳಲ್ಲಿನ ಶಾಸನಗಳಲ್ಲಿ ಎರೆ ಹೊಲದ ಉಲ್ಲೇಖಗಳಿವೆ. ಅದೇ ರೀತಿ ಗೋತಗಿ[8]ಯ ಶಾಸನದಲ್ಲಿ ಕರಿಯ

ನೆಲದ ಬಗ್ಗೆ ಮತ್ತು ಮಂಕಲ್ಕೇರಿ[9] ಶಾಸನದಲ್ಲಿ ಕೆಂಪು ಮಣ್ಣಿನ ಬಗ್ಗೆ ಉಲ್ಲೇಖಗಳಿವೆ. ಈ ಎಲ್ಲಾ ಶಾಸನಗಳು ದಾನ ಶಾಸನಗಳಾಗಿರುವುದರಿಂದ ದಾನದ ವಿಷಯವನ್ನು ಹೊರತುಪಡಿಸಿ ಭೂಮಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ನೀಡುವುದಿಲ್ಲ.

**ನೀರಾವರಿ :**

ಪ್ರಾಚೀನ ಕಾಲದಿಂದಲೂ ಜಲ ಸಂಗ್ರಹಣ ಕಾರ್ಯ ಶ್ಲಾಘನೀಯವಾದದ್ದು. ಮಳೆಯನ್ನು ಅವಲಂಬಿಸದೇ ಕೃಷಿ ಉತ್ಪಾದನೆಗೆ ಹಾಗೂ ವ್ಯವಸಾಯಕ್ಕೆ ಅನುಕೂಲವಾಗುವಂತೆ ಕೆರೆ, ಬಾವಿ, ನದಿ, ಹಳ್ಳಗಳಿಂದ ನೀರ ಸಂಗ್ರಹಿಸಿಕೊಳ್ಳುತ್ತಿದ್ದರು. ದನ–ಕರುಗಳಿಗೆ, ಪಶು–ಪಕ್ಷಿಗಳಿಗೆ, ವ್ಯವಸಾಯಕ್ಕೆ ನೀರು ಅವಶ್ಯವಾಗಿ ಬೇಕಾಗಿತ್ತು. ನೀರನ್ನು ಪಡೆಯಲು ಮಾನವನು ಭಗೀರಥ ಪ್ರಯತ್ನವನ್ನು ಮಾಡಿದ್ದಾನೆ. ಕೆರೆ, ಬಾವಿ, ನಾಲೆ, ಕಟ್ಟೆ ಮುಂತಾದ ನಾನಾ ರೀತಿಯ ಕಟ್ಟೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿ ಅದನ್ನು ಉಪಯೋಗಿಸುತ್ತಾ ಬಂದಿದ್ದಾನೆ. "ನಮ್ಮ ಪ್ರಾಚೀನರು ಇಂತಹ ಕೆರೆ, ಕಟ್ಟೆ, ಬಾವಿಗಳನ್ನು ಕಟ್ಟಿಸುವುದು ಪುಣ್ಯಕರ, ಶ್ರೇಯಸ್ಸಕರ ಎಂದು ಭಾವಿಸಿದ್ದರು. ಅವರೆಲ್ಲರ ಮನೋಭಾವದ ಫಲವಾಗಿಯೇ ಈ ನಾಡಿನ ಉದ್ದಗಲಕ್ಕೂ ಅನೇಕ ಕೆರೆ–ಬಾವಿಗಳು ವ್ಯಾಪಿಸಿ ನಿಂತದ್ದನ್ನು ಶಾಸನಗಳು ಉಲ್ಲೇಖಿಸಿವೆ."[10]

ನೀರಾವರಿಗೆ ಸಂಬಂಧಪಟ್ಟಂತೆ ಜಿಲ್ಲೆಯ ಅನೇಕ ಶಾಸನಗಳಲ್ಲಿ ಉಲ್ಲೇಖ ಇರುವುದನ್ನು ಗುರುತಿಸಬಹುದಾಗಿದೆ. ಕವಲೂರಿನ ಶಾಸನ[11]ದಲ್ಲಿ ಸೋಮಯಾಜಿಯು ಕೆರೆ, ಸತ್ರ ಮತ್ತು ದೇವಾಲಯಗಳನ್ನು ಕಟ್ಟಿಸಿದಂತೆ ಉಲ್ಲೇಖಿಸಲಾಗಿದೆ. ಕೆರೆಗಳನ್ನು ಮಣ್ಣು ಕಲ್ಲುಗಳಿಂದ ನಿರ್ಮಾಣ ಮಾಡುತ್ತಿದ್ದರು. ಕ್ರಿ.ಶ.1506ರ ಶಾಸನ[12]ದಲ್ಲಿ ಲಖಿಮಣರಾಯ ಮತ್ತು ಅವನ ಪತ್ನಿ ಬೊಮ್ಮನಾಗತಿ ಕಲ್ಲು ಕೆರೆಯನ್ನು ನಿರ್ಮಿಸಿದರೆಂದು ತಿಳಿಸುತ್ತದೆ. ಅಂದರೆ ಕಲ್ಲಿನಿಂದ ನಿರ್ಮಾಣವಾದ ಕೆರೆಗಳು ಗಟ್ಟಿಮುಟ್ಟಾಗಿರುವುದರಿಂದ ಈ ರೀತಿ ನಿರ್ಮಿಸುತ್ತಿದ್ದರೆಂದು ಹೇಳಬಹುದು. ಸ್ತ್ರೀಯರೂ ಸಹ ನೀರಾವರಿಗೆ ಸಂಬಂಧ ಪಟ್ಟಂತೆ ಮತ್ತು ಅದರ ಅಭಿವೃದ್ಧಿಗಾಗಿ ಶ್ರಮಿಸಿರುವುದು ಜಿಲ್ಲೆಯ ಶಾಸನಗಳಿಂದ ತಿಳಿದು ಬರುತ್ತದೆ. ಇಮ್ಮಡಿ ಉಡುಚಿನಾಯಕನ ಪತ್ನಿ ಕನಕಮ್ಮಳು ಬಾವಿಯನ್ನು ಕಟ್ಟಿಸಿದಳೆಂದು ಕ್ರಿ.ಶ.1668ರ ಶಾಸನ[13]ದಲ್ಲಿ ಉಲ್ಲೇಖಿಸಿದೆ. ಇದರಿಂದ ಸ್ತ್ರೀಯರಿಗೂ ಸಹ ನೀರಾವರಿಯ ಬಗ್ಗೆ ಕಾಳಜಿ ಇದ್ದು, ಇದರ ಬಗ್ಗೆ ಗಮನ ಹರಿಸಿ ಅಭಿವೃದ್ಧಿಗಾಗಿ ಸಕ್ರಿಯವಾಗಿ ಪಾಲ್ಗೊಂಡಿರುವುದು ವ್ಯಕ್ತವಾಗುತ್ತದೆ. ಕೆರೆಗಳ ಜೊತೆಗೆ ನಾಲೆಗಳನ್ನು ನಿರ್ಮಿಸಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಉಥ್‌ಮಾನ್ ಎಂಬ ವ್ಯಕ್ತಿಯು ಕೆರೆಯಿಂದ ಬಾವಿಯವರೆಗೆ ನಾಲೆಯನ್ನು ನಿರ್ಮಿಸಿದನೆಂದು ಕೊಪ್ಪಳದ ಮಸೀದಿ

ಬಳಿಯಲ್ಲಿರುವ ಶಾಸನ[14]ದಲ್ಲಿ ಉಲ್ಲೇಖಿಸಲಾಗಿದೆ. ಅದೇ ರೀತಿ ಚೌವೇದಿಭಟ್ಟನು ತುಂಗಭದ್ರಾ ನದಿಯಿಂದ ಸೀಳು ನಾಲೆಯೊಂದನ್ನು ನಿರ್ಮಿಸಿದ್ದನ್ನು ಹುಲಗಿ ಶಾಸನ[15]ದಲ್ಲಿ ಹೇಳಲಾಗಿದೆ. ನೀರನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಬೇಕಾದರೆ ಕೆರೆಗಳನ್ನು ನಿರ್ಮಿಸಿದರೆ; ಅಂತರ್ಜಲದಿಂದ ನೀರನ್ನು ಪಡೆಯಲು ಬಾವಿಗಳನ್ನು ನಿರ್ಮಾಣ ಮಾಡುತ್ತಿದ್ದರು. ಕ್ರಿ.ಶ.1061ರ ಶಾಸನ[16]ದಲ್ಲಿ ಗುಲ್ಲಿಮಯ್ಯನು ಬಾವಿ ಮುಂತಾದವುಗಳನ್ನು ನಿರ್ಮಿಸಿದನೆಂದು ತಿಳಿಸಿದೆ. ಮತ್ತೊಂದು ಶಾಸನ[17]ದಲ್ಲಿ ನೀರು ಜನರಿಗೆ, ಪಶು-ಪಕ್ಷಿಗಳಿಗೆ ಅವಶ್ಯವೆಂದು ಹೇಳಿ ನವಾಬ್ ಬಹದ್ದೂರ್ ದಿಕ್ಕು ದಿಕ್ಕುಗಳಲ್ಲಿ ಕೆರೆ, ಬಾವಿ, ಜಲಾಶಯಗಳನ್ನು ನಿರ್ಮಿಸಿದನೆಂದು ವಿವರಿಸಿದೆ. ಅಂದರೆ ನೀರಾವರಿಯ ಸಂಗ್ರಹಣೆಯ ಮತ್ತೊಂದು ರೂಪವಾದ ಜಲಾಶಯದ ಮಾಹಿತಿಯು ಸಹ ಶಾಸನಗಳಿಂದ ತಿಳಿದು ಬರುತ್ತದೆ.

ನೀರಾವರಿ ಎಂದರೆ ಕೇವಲ ಕೆರೆ, ಬಾವಿ, ನಾಲೆ, ಜಲಾಶಯಗಳನ್ನು ನಿರ್ಮಿಸುವುದು ಅಷ್ಟೇ ಮಹತ್ವದ ಕೆಲಸವಲ್ಲ. ಅವುಗಳನ್ನು ಕಾಪಾಡಿಕೊಂಡು ರಕ್ಷಿಸುವುದು, ಜೀರ್ಣೋದ್ಧಾರ ಮಾಡುವುದು ಮುಖ್ಯವಾಗುತ್ತದೆ. ಕಂಪ ಭೂಪಾಲನು ತುಂಗಭದ್ರಾ ತೀರದಲ್ಲಿ ಸೋಪಾನ ಮಾಡಿಸಿದ್ದನ್ನು ಆನೆಗೊಂದಿ ಶಾಸನ[18]ದಲ್ಲಿ ಉಲ್ಲೇಖಿಸಿದೆ. ಕನಕಬೋವ, ತಿಂಮಬೋವ, ಯಲಬೋವ ಈ ಮೂವರು ಒಡೆದಿದ್ದ ಕೆರೆಯನ್ನು ಜೀರ್ಣೋದ್ಧಾರ ಮಾಡಿದ್ದು ಅಚಲಾಪುರ ಶಾಸನ[19]ದಲ್ಲಿ ಉಲ್ಲೇಖಿಸಲಾಗಿದೆ. ಈ ರೀತಿಯಾಗಿ ಜಿಲ್ಲೆಯ ಶಾಸನಗಳಿಂದ ನೀರಾವರಿಗೆ ಹೊತ್ತು ಕೊಟ್ಟಿರುವುದು ತಿಳಿದು ಬರುತ್ತದೆ. ಕೆರೆ, ಬಾವಿ, ನಾಲೆ, ಜಲಾಶಯ ನಿರ್ಮಾಣ ಅಥವಾ ಜೀರ್ಣೋದ್ಧಾರ ಮಾಡಿರುವುದು ಶಾಸನಗಳಿಂದ ತಿಳಿದು ಬರುತ್ತದೆಯೇ ಹೊರತು; ಅವುಗಳಿಂದ ಬೆಳೆಗಳಿಗೆ ಅಥವಾ ಯಾವುದೇ ಉಪಯೋಗಕ್ಕೆ ಬಳಸಿಕೊಂಡ ವಿವರಗಳು ತಿಳಿದು ಬರುವುದಿಲ್ಲ. ಅದೇನೆ ಇರಲಿ ಒಟ್ಟಾರೆಯಾಗಿ ಅವಶ್ಯಕವಾದ ನೀರಾವರಿ ಬಗ್ಗೆ ಪ್ರಾಚೀನರು ಹೆಚ್ಚಿನ ಗಮನಹರಿಸಿ ಅದರ ಅಭಿವೃದ್ಧಿಗಾಗಿ ಅವಿರತ ಶ್ರಮವಹಿಸಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ.

**ವ್ಯವಸಾಯ :**

ಮಾನವನ ಜೀವನದ ಆಧಾರವೇ ವ್ಯವಸಾಯ. ಇದು ಪ್ರಾಚೀನ ಕಾಲದಿಂದ ಹಿಡಿದು ಇಲ್ಲಿಯವರೆಗೂ ಮುಂದುವರೆದುಕೊಂಡು ಬಂದಿದೆ. ವ್ಯವಸಾಯ ಎಂಬುವುದು ಜೀವನೋಪಾಯದ ಪ್ರಮುಖ ಅಂಗ. ನಾಗರಿಕತೆಯ ಪೂರ್ವದಿಂದಲೂ ಸಾಗುತ್ತಾ ಬಂದಿದೆ. ಭಾರತ ದೇಶ ಕೃಷಿ ಪ್ರಧಾನವಾದ ದೇಶ ಎಂಬ ಹೆಗ್ಗಳಿಕೆಗೆ ವ್ಯವಸಾಯವೇ ಕಾರಣವಾಗಿದೆ. ವ್ಯವಸಾಯವೇ ಈ ದೇಶದ ಜೀವನಾಡಿಯಾಗಿದೆ. ಈ ವ್ಯವಸಾಯ ಪದ್ಧತಿಯು ನಾಗರಿಕತೆಯ ಆರಂಭದಲ್ಲಿ ಹುಟ್ಟಿ ಇಂದಿಗೂ ಮುಂದುವರೆದುಕೊಂಡು ಬಂದಿರುವುದು ಕಾಣುತ್ತೇವೆ. ದೇಶದ

ಪ್ರಗತಿಗೆ ಕೃಷಿ, ವ್ಯಾಪಾರ, ಉದ್ಯೋಗ ಅಲ್ಲದೆ ಕೈಗಾರಿಕೆಗಳಂತಹ ಕಸುಬುಗಳು ಈ ದೇಶದ ಜನರ ಜೀವನದ ಆಧಾರ ಸ್ತಂಭಗಳಾಗಿದ್ದವು. ಆದ್ದರಿಂದಲೇ ಪ್ರಾಚೀನ ಕಾಲದ ಜನರು ಒಂದು ನಾಡಿನ ನಿಜವಾದ ಸಂಪತ್ತು ಮತ್ತು ಅಭಿವೃದ್ಧಿಗೆ ವ್ಯವಸಾಯವೇ ಮೂಲ ಸೆಲೆ ಎಂದು ನಂಬಿದ್ದರು. ಒಕ್ಕಲಿಗ ಒಕ್ಕಿದಿರೆ ಬಿಕ್ಕುವುದು ಜಗವೆಲ್ಲ ಎಂಬ ಮಾತಿನಂತೆ ಒಕ್ಕಲಿಗ ಜನರ ಆಶ್ರಯದಾತನಾಗಿದ್ದಾನೆ. ಕೃಷಿಕಾರರನ್ನು ಶಾಸನಗಳು ಒಕ್ಕಲ ಮಕ್ಕಳೆಂದು ಕರೆದಿವೆ. "ಕನ್ನಡ ಶಾಸನಗಳಲ್ಲಿ ವ್ಯವಸಾಯದ ವಿಧಿ ವಿಧಾನಗಳನ್ನು ಕುರಿತಂತೆ 'ಬೆಟ್ಟಲೆ' (ಬೆದ್ದಲೆ) ಮತ್ತ 'ಗಟ್ಟೆ'(ಗದ್ದೆ) ಗಳೆಂದು ಕರೆದಿರುವುದು. 'ಬೆದೆಮಣ್' (ಬೆರ್ದಲೆ) ಎನ್ನುವ ಪದಗಳು ಬೆದ್ದಲೆ ಭೂಮಿಯನ್ನು ಸೂಚಿಸುತ್ತವೆ. ನೀರ್ಮಣ್ಣು ಎಂಬುವುದು ಗದ್ದೆಯನ್ನು ಸೂಚಿಸುತ್ತದೆ. ಹಾಗೆಯೇ "ಬೆದೆಗಟ್ದೆ, ಬೆದನೆಲ್ಮಣೆ (ಬೆದೆ+ನೆಲ್+ಮಣ್ ನೆಲ್=ಭತ್ತ) ಇವು ನೀರು ನಿಲ್ಲುವಂತೆ ಕಟ್ಟೆಯನ್ನು ಕಟ್ಟಿ ಮಳೆಯ ನೀರನ್ನು ಸಂಗ್ರಹಿಸಿ ಭತ್ತವನ್ನು ಬೆಳೆಯುವ ತಾತ್ಕಾಲಿಕ ಗದ್ದೆಗಳು. ಕಟ್ಟೆ ಇದ್ದರೆ ಅವು ಗದ್ದೆಗಳು ಕಟ್ಟೆ ಹೊಡೆದರೆ ಬೆದ್ದಲು ಭೂಮಿಗಳು."[20] ಇಂತಹ ವ್ಯವಸಾಯದ ಪ್ರಕಾರಗಳನ್ನು ರೂಢಿಸಿಕೊಂಡು ತನ್ನ ಜೀವನೋಪಾಯಕ್ಕಾಗಿ ವ್ಯವಸಾಯವನ್ನು ಅವಲಂಬಿಸಿದ ಒಕ್ಕಲಿಗ ಈ ದೇಶದ ಭೂಮಿಯ ನಿಜವಾದ ಒಡೆಯ. ಅವನು ತನ್ನ ಸಹಾಯಕ್ಕಾಗಿ ಭೂಮಿಯನ್ನು ಊಳಲು ಪ್ರಾಣಿಗಳನ್ನು ಬಳಸಿಕೊಳ್ಳುತ್ತಿದ್ದನು. ಯಲಬುರ್ಗಾ ತಾಲೂಕಿನ ಶಾಸನ[21]ದಲ್ಲಿ "ಎತ್ತು, ಕತ್ತೆ, ಕೋಣ"ಗಳ ಬಗ್ಗೆ ಉಲ್ಲೇಖ ಬರುವುದರಿಂದ ಬಹುಶಃ ಇವುಗಳನ್ನೇ ವ್ಯವಸಾಯಕ್ಕೆ ಉಪಯೋಗಿಸಿ ಕೊಳ್ಳುತ್ತಿರಬೇಕು. ಒಕ್ಕಲಿಗನನ್ನು ಕುಷ್ಟಗಿಯ ಹೆಸರೂರಿನ ಶಾಸನ[22] ಒಕ್ಕಲುಗಳು ಎಂದು ಹೆಸರಿಸಿದೆ.

ವ್ಯವಸಾಯಕ್ಕಾಗಿ ಭೂಮಿಯನ್ನು ದಾನದ ರೂಪದಲ್ಲಿ ನೀಡಿದ್ದು ಶಾಸನಗಳಿಂದ ತಿಳಿದು ಬರುತ್ತದೆ. ದಾನದ ವಸ್ತುಗಳಲ್ಲಿ ವ್ಯವಸಾಯ ಯೋಗ್ಯ ಭೂಮಿಗೆ ಪ್ರಾಶಸ್ತ್ಯವಿದ್ದು ಕರ್ನಾಟಕದ ಮುಕ್ಕಾಲು ಪಾಲು ಶಾಸನಗಳು ಭೂದಾನಕ್ಕೆ ಸಂಬಂಧಿಸಿವೆ. ಧಾನ್ಯಾದಿ ಫಲ ಕೊಡುವ ಭೂಮಿಯನ್ನೇ ದಾನ ಮಾಡುವ ಧಾತೃ ಸ್ವರ್ಗಲೋಕದಲ್ಲಿ ಪೂಜ್ಯನಾಗುವನು ಎಂದು ಯಜ್ಞವಲ್ಕ್ಯ ಸ್ಮೃತಿ ಹೇಳಿದೆ.[23]

ಪದ್ಮಲದೇವಿಯು ಕರಿನೆಲ 54 ಮತ್ತರು, 450 ಕಮ್ಮ ಭೂಮಿಯನ್ನು 450 ಕಮ್ಮ ತೋಟವನ್ನು ಒಟ್ಟು 55 ಮತ್ತರು ಭೂಮಿಯನ್ನು ಬಿಟ್ಟದ್ದನ್ನು ಕುಷ್ಟಗಿ ತಾಲೂಕಿನ ಗೋತಗಿ ಗ್ರಾಮದ ಶಾಸನ[24] ತಿಳಿಸುತ್ತದೆ. ಅದೇ ರೀತಿಯಾಗಿ 1045ರ ಶಾಸನ[25]ದಲ್ಲಿ ಕಲ್ಯಾಣಿ ಚಾಲಕ್ಯ ಅರಸ ತ್ರೈಲೋಕ್ಯಮಲ್ಲನು ಚಾಮುಣ್ಡಭಟ್ಟೋಪಾಧ್ಯರಿಗೆ ಧಾರಾಪೂರ್ವಕವಾಗಿ 300 ಮತ್ತರು ಕರಿಯ ಭೂಮಿಯನ್ನು ಮಾನ್ಯವಾಗಿ ನೀಡುತ್ತಾನೆ ಎಂದು ಹೇಳಿದೆ. ಮತ್ತೊಂದು ಶಾಸನದಲ್ಲಿ ನರಸಿಂಹ ದೇವರ ಅರಮನೆಯ ಸೇನಬೋವ ಬಸವರಸನಿಗೆ ಹಿರಿಯ ಕೋಲಲ್ಲಿ 1 ಮತ್ತರು ದೇವರ ಅರಮನೆಯ

ಬಡಗಿ ಕಾಳೋಜನಿಗೆ 1 ಮತ್ತರು ಇನ್ನೊಬ್ಬ ಬಡಗಿ ಕಲ್ಲೋಜನಿಗೆ ಅರೆ ಮತ್ತರು ದೇವರ ಅರಮನೆಯ ಸ್ಥಾನದವರಿಗೆ ಬಾಚಿದೇವನ ಎರೆಯಲ್ಲಿ 5 ಮತ್ತರು ಭೂಮಿಯನ್ನು ನೀಡಿದ ಉಲ್ಲೇಖವಿದೆ.[26] ಇನ್ನು ಕೆಲವು ದೇವರಿಗೆ ಬಿಟ್ಟ ದಾನವನ್ನು ಶಾಸನಗಳು ಉಲ್ಲೇಖಿಸಿವೆ. ಅಂತಹವುಗಳಲ್ಲಿ ಮಂಕಲ್ಕೇರಿ ಬಳಿಯ ಶಾಸನ[27]ದಲ್ಲಿ ಮೂಡಿಕೇರಿಯ ಬೊಂಮ್ಮಗಾವುಂಡನು ಎರೆಯ ಹೊಲದಲ್ಲಿ 3 ಮತ್ತರು ನಾಮಾಗಾವುಂಡನು ಕಬ್ಬಳಿಯ ಗುಂಡಿನ ದಕ್ಷಿಣಕ್ಕೆ 1 ಮತ್ತರು ಕೆಂಪು ಮಣ್ಣಿನ ಹೊಲವನ್ನು ದೇವರ ನೈವೇದ್ಯಕ್ಕಾಗಿ ಬಿಟ್ಟ ಉಲ್ಲೇಖ ಇದೆ.

ದಾನ ಪುಣ್ಯದ ಫಲ ಎನ್ನುವಂತೆ ತಮ್ಮ ಹಿರಿಯರಿಗೆ ಪುಣ್ಯ ಲಭಿಸಲೆಂದು ಭೂಮಿ ದಾನ ಮಾಡುತ್ತಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಭೂಮಿಯನ್ನು ದಾನದ ರೂಪದಲ್ಲಿ ಪಡೆದವರು ಅದನ್ನು ಕಾಪಾಡುವುದು ಪ್ರಮುಖವಾಗಿತ್ತು. ಒಂದು ವೇಳೆ ಅದನ್ನು ಕಾಪಾಡದಿದ್ದರೆ "ಸಾಮಾನ್ಯೋಯಿಂ ಧರ್ಮಸೇತುನೃಪಾಣಂ ಕಾಲೇಕಾಲೆ ಪಾಲನಿಯೋಭವೃದ್ಧಿ"[28] ಎಂಬ ಮಾತು ನಿದರ್ಶನವಾಗಿದೆ. ಒಂದು ಕಡೆ ಭೂಮಿಯನ್ನು ಕಾಪಾಡುವವರಿಗೆ ಪುಣ್ಯ ಲಭಿಸುತ್ತದೆ. ಅದನ್ನು ಹಾಳುಗೆಡವುವವರಿಗೆ ಪಾಪ ಪ್ರಾಪ್ತವಾಗುತ್ತದೆ ಎಂಬುವುದನ್ನು ಗಮನಿಸಿದಾಗ ಒಕ್ಕಲುತನದ ಬಗ್ಗೆ ಅವರ ನಂಬಿಕೆ ಗಮನಾರ್ಹ.

ವ್ಯವಸಾಯದಲ್ಲಿ ಅನೇಕ ವಿಧವಾದ ಬೆಳೆಗಳನ್ನು ಆಯಾ ಮಣ್ಣಿನ ವಿಧದಲ್ಲಿ ಬೆಳೆದು ಆರ್ಥಿಕತೆಯ ಸಮತೋಲನ ಸಾಧಿಸುವಲ್ಲಿ ಒಕ್ಕಲಿಗರ ಶ್ರಮ ಅಪಾರವಾದುದಾಗಿದೆ. ಆದ್ದರಿಂದಲೇ "ತನ್ನ ಗರ್ಭದಿಂದ ಹೊರಟ ಧಾನ್ಯಾದಿಗಳಿಂದ ಜನರನ್ನು ಸಾಕುವ ಭೂಮಿಯನ್ನು ತಾಯಿ ಎಂದು, ಬೆಳೆಗಳನ್ನು ಬೆಳೆಯುವ ರೈತನನ್ನು ಭೂದೇವಿಯ ಮಗನೆಂದು ಶಾಸನವೊಂದರಲ್ಲಿ ಉಲ್ಲೇಖವಿದೆ."[29] ಆದುದರಿಂದ ವ್ಯವಸಾಯಕ್ಕಾಗಿ ಬಾವಿ, ಕೆರೆಗಳನ್ನು ಬಳಸಿಕೊಂಡ ಉಲ್ಲೇಖಗಳು ಶಾಸನದಲ್ಲಿ ಇವೆ. ಕೊಪ್ಪಳ ತಾಲೂಕಿನ ಮಾದಿನೂರು ಗ್ರಾಮದ ಶಾಸನ[30]ದಲ್ಲಿ ತೋಟ ಗದ್ದೆ, ಕೆರೆಯ ಬಗ್ಗೆ ಬಾವಿಯ ದಾಖಲೆ[31] ಅಲ್ಲದೇ ಎರೆಹೊಲದ ಉಲ್ಲೇಖ ಕಂಡು ಬರುತ್ತದೆ. ಹಾಗೆಯೇ ಭತ್ತ, ಅಡಿಕೆ, ಎಲೆ, ಅರಿಶಿನ, ಬಾಳೆ, ತೆಂಗು, ಸೇವಂತಿಗೆ, ಮಲ್ಲಿಗೆ, ಜಾಜಿ, ಸೂಜಿ ಮುಂತಾದ ಬೆಳೆಗಳ ಪ್ರಸ್ತಾಪವಿದೆ.

**ಬೆಳೆಗಳು :**

ಜಿಲ್ಲೆಯಲ್ಲಿ ಅನೇಕ ತರದ ಭೂಮಿ ಇರುವುದನ್ನು ಗಮನಿಸಿದ್ದೇವೆ. ಅದರಂತೆ ಈ ಭೂಮಿಯಲ್ಲಿ ನಾನಾ ವಿಧಗಳ ಬೆಳೆಗಳನ್ನು ಬೆಳೆದಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಕುಷ್ಟಗಿ ತಾಲೂಕಿನ ಪುರದ ಶಾಸನ[32]ದಲ್ಲಿ ಬಾಳೆ, ತೆಂಗು, ಹಲಸು, ಮಾವು, ನಿಂಬೆ, ಹಜೇಳು, ಅರನೇರಿಲು, ಕಿತ್ತಳೆ, ಸಂಪಿಗೆ, ಸೇವಂತಿಗೆ, ಇರುವಂತಿಗೆ, ಮಲ್ಲಿಗೆ, ಜಾಜಿ, ಕಣಗಿಲೆ, ಕೊಂಚಿವಾಳ, ಬೆಲ್ಲವತ್ತ

ಮುಂತಾದ ಫಲ-ಪುಷ್ಪಗಳ ಉಲ್ಲೇಖ ಬರುತ್ತವೆ. ಅಂದರೆ ಈ ಎಲ್ಲಾ ಬೆಳೆಗಳನ್ನು ಪ್ರಾಚೀನರು ಬೆಳೆಯುತ್ತಿದ್ದರೆಂದು ತಿಳಿದು ಬರುತ್ತದೆ. ಈ ಮೇಲಿನ ಬೆಳೆಗಳಲ್ಲಿ ಕೆಲವು ಬೆಳೆಗಳು ಇಂದಿಗೂ ಬೆಳೆಯುವ ಬೆಳೆಗಳಾದರೆ ಇನ್ನೂ ಕೆಲವು ಬೆಳೆಗಳು ಕಂಡು ಬರುವುದಿಲ್ಲ. ಇದೇ ಗ್ರಾಮದ ಇನ್ನೊಂದು ಶಾಸನ[33]ದಲ್ಲಿ ಅಡಿಕೆ, ಅರಿಶಿನ, ಮೆಣಸುಗಳ ಉಲ್ಲೇಖಗಳು ಬರುತ್ತವೆ. ಕ್ರಿ.ಶ.1547ರ ಶಾಸನ[34]ದಲ್ಲಿ ಭತ್ತ ಮತ್ತು ಹುಣಸೆ ಮರಗಳ ಉಲ್ಲೇಖಗಳು ಬರುವುದನ್ನು ಕಾಣಬಹುದುದಾಗಿದೆ. ಪುರದ ಮತ್ತೊಂದು ಶಾಸನ[35]ದಲ್ಲಿ ನೆಲ್ಲಿನ ಉಲ್ಲೇಖವಿದೆ. ಇಲ್ಲಿ ಭತ್ತ ಮತ್ತು ನೆಲ್ಲು ಎರಡು ಶಬ್ದಗಳು ಒಂದೇ ಅರ್ಥವನ್ನು ಸೂಚಿಸುತ್ತವೆ. ಈ ರೀತಿಯಾಗಿ ಜಿಲ್ಲೆಯ ಶಾಸನಗಳಲ್ಲಿ ವ್ಯಕ್ತಗೊಂಡಿರುವ ಬೆಳೆಗಳನ್ನು ಕುರಿತು ಮಾಹಿತಿ ತಿಳಿಯಬಹುದಾಗಿದೆ.

**ತೂಕ ಮತ್ತು ಅಳತೆ :**

ಮಾನವರು ತಮ್ಮ ದಿನನಿತ್ಯದ ವ್ಯವಹಾರಕ್ಕಾಗಿ ತಮ್ಮದೇ ಆದ ವಿಧಾನವನ್ನು ಅನುಸರಿಸಿ ತೂಕ ಮತ್ತು ಅಳತೆಯ ರೂಪದಲ್ಲಿ ವಿಭಾಗ ಮಾಡಿಕೊಂಡಿದ್ದರು. ತಾವು ಬೆಳೆದ ದವಸ ಧಾನ್ಯಗಳನ್ನು ಮಾರಲು ಅಥವಾ ಇನ್ನೊಬ್ಬರಿಗೆ ಕಡದ ರೂಪದಲ್ಲಿ ನೀಡುವ ಸಂದರ್ಭದಲ್ಲಿ ತೂಕ ಮತ್ತು ಅಳತೆ ಪ್ರಮುಖ ಊರುಗೋಲಾಗಿ ಕೆಲಸ ಮಾಡುತ್ತದೆ. ಅಲ್ಲದೇ ಭೂಮಿಯನ್ನು ಅಳೆಯಲು ಅಳತೆಯು ಮಹತ್ವಪೂರ್ಣವಾಗಿದೆ. ಈ ಮಾತಿಗೆ ಈ ಜಿಲ್ಲೆಯ ಶಾಸನಗಳು ನಿದರ್ಶನವಾಗಿವೆ. ತೂಕ ಮತ್ತು ಅಳತೆಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನೀಡುವ ಅನೇಕ ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಅವರು ಅನುಸರಿಸಿದ ಅಳತೆ ಮಾಪನಗಳ ಪದ್ಧತಿಯು ಕಂಡು ಬರುವುದರ ಜೊತೆಗೆ ಅವರ ಆರ್ಥಿಕ ವ್ಯವಸ್ಥೆಯ ಒಂದು ಭಾಗ ತಿಳಿದು ಬರುತ್ತದೆ. ಅಳವಂಡಿಯ ಶಾಸನ[36]ದಲ್ಲಿ ಬರಮಯ್ಯನು ವಸತಿ ಸತ್ರಕ್ಕೆ 18 ಮತ್ತರು ದೇವರಿಗೆ 5 ಮತ್ತರು ಮಠಕ್ಕೆ ಎರೆ ಮತ್ತರು ಭೂಮಿ ದಾನ ಬಿಟ್ಟನೆಂದು ಉಲ್ಲೇಖಿಸಿದೆ. "ಭೂಮಿಯನ್ನು ಅಳೆಯುವುದಕ್ಕೆ ಮತ್ತರು ಎಂಬುವುದಾಗಿಯೂ, ಮತ್ತರು ಎಂದರೆ 900 ಕಂಭಗಳು ಎಂದರ್ಥ."[37] ಕಲ್ಲೂರು ಶಾಸನ[38]ದಲ್ಲಿ ಅನೇಕರು ಸೇರಿ 52 ಮತ್ತರು ಭೂಮಿಯನ್ನು ಸೋಮೇಶ್ವರ ಪಂಡಿತರಿಗೆ ದಾನವನ್ನು ಕೊಟ್ಟ ಉಲ್ಲೇಖವಿದೆ. ಜಿಲ್ಲೆಯ ಹೆಚ್ಚಿನ ಶಾಸನಗಳು ದಾನ ಶಾಸನಗಳಾಗಿರುವುದರಿಂದ ಒಂದಲ್ಲ ಒಂದು ರೀತಿಯ ಮತ್ತರುಗಳ ಉಲ್ಲೇಖ ಬರುತ್ತದೆ. ಈ ಮತ್ತರು ಅಳತೆ ಮಾಪನವಲ್ಲದೇ ಖಂಡಗ, ಕೊಳ, ಗದ್ಯಾಣ, ಕಂಭ, ವೊಕ್ಕಳ, ವರಹ, ಎಕರೆ, ಹೇರಿಗೆ, ಹಿರೇಕೋಲು, ಕಾಸು, ಕಮ್ಮ, ಪಣ, ಮಾನ, ಕೈಯಗಲ ಎನ್ನುವ ಅಳತೆ ಮತ್ತು ತೂಕ ಮಾಪನಗಳು ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಅವುಗಳಿಂದ ತಮ್ಮ ದಿನ ನಿತ್ಯದ ವ್ಯವಹಾರವನ್ನು ನಡೆಸುತ್ತಿದ್ದರು. ಕೊಪ್ಪಳದ ಚಂದ್ರಬಂಡೆಯ ಆವರಣದ ಶಾಸನ[39]ದಲ್ಲಿ ಅಳತೆ ಕೋಲನ್ನು, ಹುಲಗಿ ಶಾಸನ[40]ದಲ್ಲಿ ಗದ್ಯಾಣ, ಕೊಳಗ, ಪಣ,

ಕಮ್ಮ, ಮಾನ ಎಂಬ ಅಳತೆ ಮಾಪನಗಳ ಉಲ್ಲೇಖಗಳಿವೆ. ಶಿವಪುರದ ಶಾಸನ[41]ದಲ್ಲಿ ಕಾಸು, ಹೇರಿಗೆ, ಆನೆಗೊಂದಿ ಶಾಸನ[42]ದಲ್ಲಿ ಖಂಡಗ, ಅಚಲಾಪುರ ಶಾಸನ[43]ದಲ್ಲಿ ವರಹದ ಉಲ್ಲೇಖಗಳು ಬರುತ್ತವೆ.

| | | |
|---|---|---|
| 1 ಖಂಡಗ | = | 4 ಪಂಚಕ |
| 1 ಪಂಚಕ | = | 5 ಕೊಳಗ |
| 1 ಕೊಳಗ | = | 4 ಬಳ್ಳ |
| 1 ಬಳ್ಳ | = | 4 ಮಾನ |
| 1 ಮಾನ | = | 4 ಸೊಲ್ಲಿಗೆ |
| 1 ಸೊಲ್ಲಿಗೆ | = | 4 ಗಿದ್ದಿಗೆ |
| 1 ಭಾಗ | = | 20 ತೊಲ |
| 1 ತೊಲ | = | 5 ಬೆಸುಗೆ |
| 1 ಬೆಸುಗೆ | = | 20 ಫಲ |
| 1 ಫಲ | = | 4 ಕರ್ಷ |
| 1 ಕರ್ಷ | = | 4 ಸುವರ್ಣ[44] |

ಈ ರೀತಿಯಾಗಿ ಪ್ರಾಚೀನರು ತಮಗೆ ಅನುಕೂಲವಾದ ರೀತಿಯಲ್ಲಿ ಅಳತೆ ಮಾಪನಗಳನ್ನು ರೂಢಿಯಲ್ಲಿಟ್ಟುಕೊಂಡಿದ್ದರೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಈ ಅಳತೆ ಮಾಪನಗಳಲ್ಲಿ ಖಂಡಗ, ಪೊಕ್ಕಳ, ಎಕರೆ, ಮಾನ, ಕೈಯಗಲಗಳಂತ ಅಳತೆ ಮಾಪನಗಳು ಇಂದಿಗೂ ಕೆಲವು ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವುದು ಕಂಡು ಬರುತ್ತದೆ.

**ನಾಣ್ಯಗಳು :**

ಮಾನವನು ಸಂಘಜೀವನವನ್ನು ಆರಂಭಿಸಿದ ಮೊದಲ ಕಾಲಘಟ್ಟದಲ್ಲಿ ನಾಣ್ಯಗಳ ಬಳಕೆಯಿರಲಿಲ್ಲ. ಆಗ ತಮ್ಮ ದೈನಂದಿನ ವ್ಯವಹಾರವನ್ನು ಕೊಡು–ಕೊಳ್ಳುವಿಕೆಯ ಮೂಲಕ ವಿನಿಮಯ ಮಾಡಿಕೊಳ್ಳುತ್ತಿದ್ದರು. ವಿನಿಮಯ ಮಾಡಿಕೊಳ್ಳುವ ಸಂದರ್ಭದಲ್ಲಿ ವಸ್ತುಗಳೇ ಪ್ರಮುಖವಾಗಿ ಬಳಕೆಗೊಳ್ಳುತ್ತಿದ್ದವು. ಒಕ್ಕಲಿಗರು ತಾವು ಬೆಳೆದ ದವಸ–ಧಾನ್ಯಗಳನ್ನು ವರ್ತಕರಿಗೆ ನೀಡಿ ಅವರಿಂದ ತಮ್ಮ ಉಪಜೀವನಕ್ಕೆ ಬೇಕಾಗುವ ವಸ್ತುಗಳನ್ನು ಪಡೆದುಕೊಳ್ಳುತ್ತಿದ್ದರು. ನಂತರ ನಾಗರಿಕತೆಯ ಮೂಲಕ ನಾಣ್ಯಗಳನ್ನು ಮುದ್ರಿಸುವಲ್ಲಿ ಹಾಗೆಯೇ ಚಲಾವಣೆಗೆ ತರುವ ಪದ್ಧತಿಯನ್ನು ರೂಢಿಸಿಕೊಂಡರು. ಆದ್ದರಿಂದಲೇ ನಾಣ್ಯಗಳು ಒಂದು ನಾಡಿನ ಆರ್ಥಿಕಾಭಿವೃದ್ಧಿಯನ್ನು ಗುರುತಿಸುವಲ್ಲಿ ಪ್ರಮುಖ ನಿದರ್ಶನಗಳಾಗಿ ನಿಲ್ಲುತ್ತವೆ. "ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು 'ಕಮ್ಮಟ'ಗಳೆಂದು 'ಅಚ್ಚಿನ ಟಂಕಸಾಲೆ'ಗಳೆಂದೂ ಕರೆಯುತ್ತಿದ್ದರು."[45] ಹಾಗೆಯೇ "ಚಲಾವಣೆಯಲ್ಲಿದ್ದ ನಾಣ್ಯವನ್ನು ಗದ್ಯಾಣವೆಂದು ಗುರುತಿಸಿ ಅದಕ್ಕೆ ಇನ್ನೊಂದು

ಹೆಸರು ಪೊನ್ ಎಂಬುದಾಗಿಯೂ ಕರೆಯುತ್ತಿದ್ದರು. ಇದರ ತೂಕ 96grs ಎಂದು ಅಲ್ಬೇಕರರೂ ಸುಮಾರು 63 grs (ಗ್ರೇನು) ಎಂದು ಅಪ್ಪಾದೊರೈ ಅವರು ಅಭಿಪ್ರಾಯ ಪಟ್ಟಿದ್ದಾರೆ."[46]

ನಾಣ್ಯಗಳ ಸಂಬಂಧವನ್ನು ವ್ಯವಹಾರದ ಸಂದರ್ಭದಲ್ಲಿ ರಾಜಾದಿತ್ಯ ಅವರು ಗಣಿತ ರೂಪದಲ್ಲಿ ಹೇಳಿದ್ದಾರೆ.

| | | |
|---|---|---|
| 4 ಕಾಣಿ | = | 1 ಮೀಸ |
| 5 ಮೀಸ | = | 1 ಹಾಗ |
| 4 ಹಾಗ | = | 1 ಪಣ |
| 10 ಪಣ | = | 1 ಗದ್ಯಾಣ[47] |

ಅಲ್ಲದೆ ರಾಜಾಧಿತ್ಯನ ಲೀಲಾವತಿ ನಾಣ್ಯಗಳ ಸಂಬಂಧವನ್ನು ಹೀಗೆ ತಿಳಿಸುತ್ತದೆ.

| | | |
|---|---|---|
| 1 ವರಹ | = | 2 ಹೊನ್ನು |
| 1 ಹೊನ್ನು | = | 5 ಹಣ |
| 1 ಹಣ | = | 2 ಅಡ್ಡ |
| 1 ಅಡ್ಡ | = | 2 ಹಾಗ |
| 1 ಹಾಗ | = | 2 ಬೆಳೆ |
| 1 ಬೇಳೆ | = | 2 ವೀಸ |
| 1 ವೀಸ | = | 2 ಅರೆವೀಸ |
| 1 ಅರೆವೀಸ | = | 2 ಕಾಣಿ |
| 1 ಕಾಣಿ | = | 4 ಗದ್ಯಾಣ[48] |

ಇಂತಹ ನಾಣ್ಯಗಳು ಅಂದಿನ ಸಮಾಜದಲ್ಲಿ ಚಲಾವಣೆಯ ವಿವರ ಉಲ್ಲೇಖವಿದೆ. ಕೊಪ್ಪಳ ತಾಲೂಕಿನ ಅಚಲಾಪುರ ಶಾಸನ[49]ದಲ್ಲಿ ಒಂದು ವರಹದ ಹೊಲವನ್ನು ನೀಡಿದ ವಿವರವಿದೆ. ಸಮಸ್ತ ಧಾನ್ಯವನ್ನು ಮಾರಿದಲ್ಲಿ ಚಿನ್ನದ 'ಕಾಣಿ' ಎರಡು ಸೀರೆಯ ದಿಂಡಿನ ಬಂಡಿಯೊಂದಕ್ಕೆ ಒಂದು 'ಒಣ' ಎತ್ತಿನ ಮೇಲಿನ ಮಳವಿಗೆ ಐದು 'ವೀಸ' ಕತ್ತೆಯ ಮೇಲಿನ ಮಳವಿಗೆ ಎರಡು 'ವೀಸ' ತಲೆಯ ತರುವ ಜವಳಿ ಸೀರೆಗೆ ಒಂದು 'ವೀಸ'ವನ್ನು ದೇವರಿಗೆ ನೀಡಿದ ಉಲ್ಲೇಖವಿದೆ.[50] ಇಲ್ಲಿನ ವರಹ ಗದ್ಯಾಣವಾಗಿದ್ದಲ್ಲಿ ಅದು 2 ಹೊನ್ನುಗಳಿಗೆ ಸಮಾನವೆಂದು ಶಾಸನ ಹೇಳುವಲ್ಲಿ 'ಪೊನ್'ಎನ್ನುವುದು ಅರ್ಧ ಗದ್ಯಾಣವಾಗಬೇಕಾಗುತ್ತದೆ. ನಾಣ್ಯಗಳಲ್ಲಿ ಅಧಿಕ ಬೆಲೆಯುಳ್ಳದ್ದು ಗದ್ಯಾಣ ಎಂಬುದು ಸ್ಪಷ್ಟ.[51] 12ನೇ ಶತಮಾನದ ಶಿವಶರಣರ ವಚನಗಳಲ್ಲಿ ಅರ್ಧ ಕಾಣಿಯ ಉಲ್ಲೇಖ ಕಂಡುಬರುತ್ತದೆ.

**ವಾಣಿಜ್ಯ ವರ್ತಕರು :**

ಜೀವನೋಪಾಯಕ್ಕೆ ವೃತ್ತಿಯನ್ನೇ ಅವಲಂಬಿಸಿ ವ್ಯಾಪಾರವನ್ನೇ ತೊಡಗಿಸಿ

ಕೊಂಡವರನ್ನು ವರ್ತಕರೆಂದು ಕರೆಯುತ್ತೇವೆ. ಭಾರತದಲ್ಲಿ ವೈದಿಕ ಸಾಹಿತ್ಯಕ್ಕಿಂತ ಮುಂಚೆಯೇ ಇತಿಹಾಸದುದ್ದಕ್ಕೂ ವರ್ತಕರ ಉಲ್ಲೇಖವಿರುವುದು ಕಂಡುಬರುತ್ತದೆ. ಆದರೆ ಕರ್ನಾಟಕ ಇತಿಹಾಸದಲ್ಲಿ ಇವರ ಬಗ್ಗೆ ಸುಮಾರು ಕ್ರಿ.ಶ.7–8ನೇ ಶತಮಾನದಿಂದೀಚೆಗೆ ಉಲ್ಲೇಖಗಳನ್ನು ಕಾಣಬಹುದು. ಭಾರತೀಯ ವರ್ತಕರಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿಯೂ ಸಹ ವರ್ತಕರಲ್ಲಿ ಅನೇಕ ಪ್ರಕಾರಗಳಲ್ಲಿ ಕಾಣಬಹುದು. ಜಿಲ್ಲೆಯ ಶಾಸನಗಳಲ್ಲಿ ಶೆಟ್ಟಿ (ಬಣಜಿಗ), ಕುಂಬಾರ, ಬಡಿಗ, ತೆಲ್ಲಿಗ(ಗಾಣಿಗ) ಎಂಬ ನಾಲ್ಕು ಬಗೆಯ ವರ್ತಕ ಸಮುದಾಯಗಳ ಉಲ್ಲೇಖಗಳು ಬರುತ್ತವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಈ ವರ್ಗಗಳ ಬಗ್ಗೆ ಹೆಚ್ಚಿನ ವಿವರಗಳೊಂದಿಗೆ ಚರ್ಚಿಸಲಾಗಿದ್ದರೂ ಸಹ ಇಲ್ಲಿ ಕೇವಲ ಔಚಿತ್ಯವಾಗಿ ಚರ್ಚಿಸಲಾಗಿದೆ.

**ಸೆಟ್ಟಿ–ಬಣಂಜಿಗ :** ಸಂಸ್ಕೃತದ ವಣಜ ಶ್ರೇಷ್ಠನ್ ಪದಗಳ ಕನ್ನೆ ರೂಪ ಬಣಂಜಿಗ. ಸೆಟ್ಟಿ ಮೂಲದಲ್ಲಿ ವಣಿಜ ವೃತ್ತಿ ಸೂಚಕ, ಸೆಟ್ಟಿ(<ಶ್ರೇಷ್ಠನ್) ಪ್ರತಿಷ್ಠಾ ಸೂಚಿಯಾಗಿದ್ದು ಕ್ರಮೇಣ ಈ ಎರಡೂ ಪದಗಳು ವೃತ್ತಿವಾಚಿಯಾಗಿ ನಂತರ ಜಾತಿ ವಾಚಕವಾಗಿ ಬೆಳೆದವು. ಇವರನ್ನು "ಬಿರುದ ಬಣಂಜಿಗ, ವೀರ ಬಣಂಜಿಗ, ಸ್ಥಳದ ಹಣ್ಣವಣಿಗ, ತಳರದಯ್ಯೂರ್ವರು, ವಣಿಜಸ್ವಾಮಿ, ಮಾಹೇಶ್ವರ ವರ್ತಕ, ವಿಭೂತಿ ಕುಲ ಜಾತಿ"[52] ಎಂದು ಶಾಸನಗಳು ಗುರುತಿಸಿವೆ. ಇಂತಹ ಬಣಜಿಗರು ಸ್ವಂತ ಗ್ರಾಮದಲ್ಲಿ ವ್ಯಾಪಾರ ಮಾಡುವುದಲ್ಲದೆ ಅನ್ಯಗ್ರಾಮಗಳಲ್ಲಿ ವ್ಯಾಪಾರಕ್ಕಾಗಿ ವಸ್ತುಗಳನ್ನು ಸಾಗಿಸಲು ಎತ್ತು, ಕುದುರೆ, ಕತ್ತೆ ಮುಂತಾದವುಗಳನ್ನು ಬಳಸುತ್ತಿದ್ದರು. ಇವರನ್ನು ಸೆಟ್ಟಿ ಎಂದು ಕರೆದಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಕುಷ್ಟಗಿ ತಾಲೂಕಿನ ಹನುಮನಾಳ ಚಾವಡಿಯಲ್ಲಿರುವ ಶಾಸನ[53]ದಲ್ಲಿ ವೀರಬಣಂಜು ಧರ್ಮಕ್ಕೆ ಸೇರಿದ ಮಲೆಯರ ಸಿಂಗಿಸೆಟ್ಟಿ, ರೇವಯ ಸೆಟ್ಟಿ, ಮಂಗಲದ ಕಲೆಯ ಬಾಚಿಸೆಟ್ಟಿ ಇತ್ಯಾದಿಗಳ ಉಲ್ಲೇಖವಿದೆ. ಅಲ್ಲದೆ ಜಿಲ್ಲೆಯ ಇನ್ನೂ ಅನೇಕ ಶಾಸನಗಳಲ್ಲಿ ಈ ವರ್ತಕರ ಉಲ್ಲೇಖಗಳಿವೆ. ಇಂತಹ ವರ್ತಕರು ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡು ತಮ್ಮ ಜೀವನ ನಡೆಸುತ್ತಿದ್ದುದು ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ.

**ಕುಂಬಾರ :** ವಾಣಿಜ್ಯ ವರ್ತಕರಲ್ಲಿ ಕುಂಬಾರ ಜನಾಂಗವು ಒಂದು. ತಮ್ಮ ವೃತ್ತಿಯ ಮೇಲೆ ಜೀವನ ಸಾಗಿಸುತ್ತಿದ್ದರು. ಅವರ ವೃತ್ತಿಯೇ ಕುಂಬಾರಿಕೆ ಅಂದರೆ ಮಣ್ಣಿನ ಮಡಿಕೆಗಳನ್ನು ತಯಾರಿಸಿ ಮಾರುತ್ತಿದ್ದರು. ಇವು ಪ್ರಾಚೀನ ಕಾಲದಲ್ಲಿ ಮಾನವನಿಗೆ ಅತ್ಯಂತ ಅವಶ್ಯಕತೆಯ ವಸ್ತುಗಳಾಗಿದ್ದವು. ಅಡುಗೆ ತಯಾರಿಸಲು, ಧಾನ್ಯ ಸಂಗ್ರಹ, ನೀರಿನ ಶೇಖರಣೆಗಾಗಿ ಉಪಯೋಗವಾಗುತ್ತಿದ್ದವು. ಇವರ ಮೂಲದ ಬಗೆಗೆ ಗಂಗಾವತಿ ತಾಲೂಕಿನ ಆನೆಗೊಂದಿಯ ತಾಮ್ರ ಶಾಸನ[54]ದಲ್ಲಿ ಕುಂಬಾರರ ಹೆಗ್ಗಳಿಕೆಯನ್ನು ಹಾಗೂ ಕುಂಬಾರ ಕುಲ ಹುಟ್ಟಲು ಕಾರಣಗಳನ್ನು ಶಿವ–ಗಿರಿಜೆಯ ವಿವಾಹದ ಕಥೆಯೊಂದಿಗೆ ಸಮೀಕರಿಸಿ ಹೇಳಲಾಗಿದೆ.

**ಬಡಿಗ :** ಕುಂಬಾರರಂತೆ ಬಡಗಿಗಳೂ ಶ್ರಮಜೀವಿಗಳು. ಮರಗಳಿಂದ ವಸ್ತುಗಳನ್ನು ಕೆತ್ತನೆ ಕೆಲಸ ಮಾಡುವ ವೃತ್ತಿ ಇವರದಾಗಿತ್ತು. ಅಲ್ಲದೆ ಒಕ್ಕಲಿಗನಿಗೆ ಬೇಕಾಗುವ ಎಲ್ಲಾ ಸಲಕರಣೆಗಳನ್ನು ತಯಾರಿಸುವಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದಾರೆ. ಕುಂಟೆ, ಕೂರಿಗೆ, ನೇಗಿಲು ಮುಂತಾದವುಗಳು ಅಲ್ಲದೆ ಮಾನವನ ಆಶ್ರಯಕ್ಕಾಗಿಯೇ ಮನೆಗಳನ್ನು ಅವಲಂಬಿಸಿದ್ದು, ಮನೆಗಳಿಗೆ ಬೇಕಾಗುವ ಬಾಗಿಲು, ಕಿಟಕಿ, ಜಂತೆ ಮುಂತಾದವುಗಳನ್ನು ತಯಾರಿಸುವ ಕಸುಬು ಇವರದಾಗಿತ್ತು. ಇಂತಹ ಬಡಿಗರಿಗೆ ಹಲವಾರು ಹೆಸರುಗಳುಂಟು. ವಿಶ್ವಕರ್ಮ, ಬಡಿಗ, ಪಂಚಾಳಿ ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು. ಜಿಲ್ಲೆಯ ಶಾಸನದಲ್ಲಿ ದೇವರ ಅರಮನೆಗೆ ಬಡಗಿ ಕಾಲೋಜನಿಗೆ ಒಂದು ಮತ್ತರು ಇನ್ನೊಬ್ಬ ಬಡಗಿ ಕಲ್ಲೋಜನಿಗೆ ಅರೆ ಮತ್ತರು ಭೂಮಿದಾನ ಮಾಡಿದ ಉಲ್ಲೇಖವಿದೆ.[55]

**ಗಾಣಿಗ/ತೆಲ್ಲಿಗ :** ಕಾಳನ್ನು ಗಾಣಕ್ಕೆ ಹಾಕಿ ತಿರುವಿ ಎಣ್ಣೆಯನ್ನು ತಯಾರಿಸುವ ವೃತ್ತಿಯವರೇ ಗಾಣಿಗರು. ಕುಸುಬೆ, ಶೇಂಗಾ, ಎಳ್ಳು ಇತ್ಯಾದಿ ಧಾನ್ಯಗಳಿಂದ ಎಣ್ಣೆ ತಯಾರಿಸುತ್ತಿದ್ದರು. ಅದರಿಂದ ಬಂದ ಆದಾಯದಿಂದಲೇ ತಮ್ಮ ಜೀವನ ಸಾಗಿಸುತ್ತಿದ್ದರು. ಈ ಜನಾಂಗದ ಉಗಮದ ಬಗ್ಗೆ ಹೇಳುವುದಾದರೆ ಇವರು ಪ್ರಾಚೀನ ಕಾಲದಿಂದಲೂ ತಮ್ಮ ವೃತ್ತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ರಾಮಾಯಣದಲ್ಲಿಯೇ ಇವರ ಬಗೆಗೆ ಉಲ್ಲೇಖಗಳು ಕಂಡು ಬರುತ್ತವೆ. ಜಗತ್ತು ಕತ್ತಲೆಯಲ್ಲಿದ್ದ ಸಂದರ್ಭದಲ್ಲಿ ಬೆಳಕನ್ನು ಹರಿಸಲು ಶಿವನು ಗಾಣಿಗನನ್ನು ಹುಟ್ಟಿಸಿ ಎಣ್ಣೆ ತಯಾರಿಸುವ ವಿಧಾನವನ್ನು ಹೇಳಿಕೊಟ್ಟಂತೆ ಐತಿಹ್ಯಗಳಿವೆ. ಇವರಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ಅಳವಂಡಿ ಶಾಸನ[56]ದಲ್ಲಿ ತೆಲ್ಲಿಗರ ಕೇರಿಯಲ್ಲಿ ಎಂಬ ಉಲ್ಲೇಖ ಸಿಕ್ಕಿದೆ. ಅದೇ ರೀತಿಯಾಗಿ ಕುಷ್ಟಗಿ ಶಾಸನ[57]ದಲ್ಲಿ ತೆಲ್ಲಿಗ ಎಂಬ ಉಲ್ಲೇಖ ಕಂಡು ಬರುತ್ತದೆ.

**ಉತ್ಪಾದನಾ ಕೈಗಾರಿಕೆಗಳು** : ಕೈಗಾರಿಕೆ ಎಂಬುದು ಒಂದು ಕಸುಬು. ಇದರಿಂದ ಮಾನವ ಹೊರತಾಗಿರುವುದಿಲ್ಲ. ಕಸುಬು ಯಾವುದಾದರೂ ಆಗಿರಬಹುದು. ಗಾಣಿಗ ಎಣ್ಣೆ ತಯಾರಿಸುವುದು, ಕುಂಬಾರ ಮಡಿಕೆ ತಯಾರಿಸುವುದು. ಬಡಿಗ ಬಡಗಿತನ ಮಾಡುವುದು ಇವೆಲ್ಲವುಗಳನ್ನು ನಾಗರಿಕತೆ ಬೆಳೆದಂತೆಲ್ಲಾ ಮಾನವಜೀವಿ ಅನುಸರಿಸಿಕೊಂಡು ಬಂದಿದ್ದಾನೆ. ಸಮಾಜ ಮತ್ತು ವ್ಯಕ್ತಿಯ ಅರ್ಥ ವ್ಯವಸ್ಥೆಯಲ್ಲಿ ಭೂಮಿಗಿರುವಷ್ಟು ಪ್ರಾಧಾನ್ಯತೆ ಕೈಗಾರಿಕೆಗಳಿಗಿದೆ. ಇಂತಹ ಕೈಗಾರಿಕೆಗಳಿಗೆ ಭೂಮಿಯಲ್ಲಿ ದೊರೆಯುವ ಕಚ್ಚಾ ಸಾಮಗ್ರಿಗಳೇ ಸಂಪನ್ಮೂಲಗಳಾಗಿವೆ. ಇಂತಹ ಕೈಗಾರಿಕೆಗಳಿಂದ ಜೀವನ ಸಾಗಿಸುವ ವರ್ತಕರು ದಾನದ ರೂಪದಲ್ಲಿ ನೀಡಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ.

**ಎಣ್ಣೆ ಕೈಗಾರಿಕೆ :** ಸನಾತನ ಕಾಲದಿಂದಲೂ ಮನುಷ್ಯ ತನ್ನ ಬದುಕಿಗೆ

ಅತ್ಯವಶ್ಯಕವಾದ ವಸ್ತುಗಳನ್ನು ತಯಾರಿಸಿಕೊಳ್ಳುತ್ತಿದ್ದನು. ಅಂತವುಗಳಲ್ಲಿ ಎಣ್ಣೆ ಕೈಗಾರಿಕೆಯು ಒಂದಾಗಿದೆ. ಎಣ್ಣೆ ತಯಾರಿಸುವವರನ್ನು ಶಾಸನಗಳು ಗಾಣಿಗ, ತೆಲ್ಲಿಗರೆಂದು ಉಲ್ಲೇಖಿಸಿವೆ. ಇಂತಹ ಗಾಣಿಗರು ಎಣ್ಣೆಯನ್ನು ಗಾಣದ ಸಹಾಯದಿಂದ ತಯಾರಿಸುತ್ತಿದ್ದರು. ಗಾಣವನ್ನು ಕಟ್ಟಿಗೆ ಹಾಗೂ ಕಲ್ಲಿನಿಂದ ತಯಾರಿಸಲಾಗುತ್ತಿತ್ತು. ಎಣ್ಣೆಯು ದಿನನಿತ್ಯ ಅವಶ್ಯವಾಗಿ ಬೇಕಾಗಿದ್ದ ವಸ್ತುವಾಗಿದ್ದರಿಂದ ಅದರ ಅಗತ್ಯತೆ ತುಂಬ ಮಹತ್ವವನ್ನು ಪಡೆದುಕೊಂಡಿದೆ. ಅಡುಗೆಗಾಗಿ, ದೇವರ ನಂದಾದೀವಿಗೆಗಾಗಿ ಎಣ್ಣೆಯನ್ನು ಬಳಸಲಾಗುತ್ತಿತ್ತು. ಎಣ್ಣೆಯನ್ನು ತಯಾರಿಸುವ ಗಾಣವನ್ನೇ ದೇವರ ನಂದಾದೀವಿಗೆಗೆಂದು ದಾನ ನೀಡಿದ ಉಲ್ಲೇಖಗಳು ಶಾಸನಗಳಲ್ಲಿ ಕಂಡು ಬರುತ್ತವೆ. ಪರಾಭವ ಸಂವತ್ಸರದ ಸಕ್ರಮಣದಂದು ಅರಂಚಿಗೆಯ ದೋಣ ಆನರಸನ ತಮ್ಮ ಬಾಣರಸನು ಪುಲ್ಲವಿಗೆಯ ತನ್ನ ಸಿದ್ದಾಯದಲ್ಲಿ ದೇವರ ದೀಪದ ಎಣ್ಣೆಗಾಗಿ ಐದು ಪಣ ಬಿಡುತ್ತಾನೆ.[58] ಹಾಗೆಯೇ ಗೌರೇಶ್ವರದ ದೇವರ ಪೂಜೆ-ಪುನಸ್ಕಾರಕ್ಕಾಗಿ ಒಂದು ಗಾಣವನ್ನು ದಾನ ನೀಡಿದ ಉಲ್ಲೇಖ ಕಂಡುಬರುತ್ತದೆ.[59] ಎಣ್ಣೆ ತಯಾರಿಕೆಯು ಒಂದು ಪ್ರಮುಖವಾದ ಕೈಗಾರಿಕೆಯಾಗಿದ್ದು ಅದನ್ನು ದಾನ ಧರ್ಮದ ರೂಪದಲ್ಲಿ ದೇವರಿಗೆ ಅರ್ಪಿಸಿ ಮುಕ್ತರಾಗುತ್ತಿದ್ದರೆಂದು ತಿಳಿದು ಬರುತ್ತದೆ.

**ಕಟ್ಟಿಗೆಯಿಂದ ವಸ್ತುಗಳ ತಯಾರಿಕೆ :** ಅನಾದಿ ಕಾಲದಿಂದಲೂ ಕಟ್ಟಿಗೆ ಮತ್ತು ಮಾನವನಿಗೆ ನಿಕಟವಾದ ಸಂಬಂಧವಿದೆ. ವ್ಯವಸಾಯಕ್ಕೆ ಬೇಕಾಗುವ ಕುಂಟೆ, ಕೂರಿಗೆ, ರಂಟೆ, ನೇಗಿಲು ಇತ್ಯಾದಿಗಳನ್ನು ತಯಾರಿಸುವ ಕೆಲಸ ಬಡಿಗನಾದಾಗಿದ್ದಿತು. ದೇವರ ಅರಮನೆಯ ಬಡಗಿ ಕಾಳೋಜನಿಗೆ ಒಂದು ಮತ್ತರು, ಇನ್ನೊಬ್ಬ ಬಡಗಿ ಕಲ್ಲೋಜನಿಗೆ ಅರೆ ಮತ್ತರು ದಾನದ ಉಲ್ಲೇಖ ಕಂಡು ಬರುತ್ತದೆ.[60] ಅಂದರೆ ವ್ಯವಸಾಯಕ್ಕೆ ಹಾಗೂ ಮನೆಗಳಿಗೆ ಸಂಬಂಧಿಸಿದಂತೆ ಕಟ್ಟಿಗೆಯಿಂದ ತಯಾರಿಸಿ ಕೊಡುತ್ತಿದ್ದ ಬಡಿಗನಿಗೆ ಭೂಮಿಯನ್ನು ದಾನವಾಗಿ ನೀಡುವುದರ ಮೂಲ ಅರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆಗೊಳಿಸಿದ ನಿದರ್ಶನಗಳಿವೆ. ಕಟ್ಟಿಗೆಯಿಂದ ಸಲಕರಣೆಗಳ ತಯಾರಿಕೆಯು ಒಂದು ಸಣ್ಣ ಕೈಗಾರಿಕಾ ಕೇಂದ್ರವಾಗಿದ್ದು, ಇದೂ ಸಹ ಆರ್ಥಿಕ ವ್ಯವಸ್ಥೆಯ ಏರು ಪೇರುಗಳಿಂದ ಕೂಡಿರುವುದರಿಂದ ಇದರ ಉತ್ತೇಜನಕ್ಕಾಗಿ ದಾನ-ದತ್ತಿ ಬಿಟ್ಟ ಉದಾಹರಣೆಗಳು ಶಾಸನದಿಂದ ಗಮನಿಸಬಹುದಾಗಿದೆ.

**ಮಣ್ಣಿನ ಗಡಿಗೆ ತಯಾರಿಕೆ :** ಗಡಿಗೆ ಅಥವಾ ಮಡಿಕೆ ಎಂಬ ಹೆಸರಿನ ವೃತ್ತಿ ಕುಂಬಾರದ್ದಾಗಿದೆ. ಮಾನವ ತನ್ನ ಆಹಾರ ತಯಾರಿಸುವುದರಿಂದ ಹಿಡಿದು ಎಲ್ಲ ಕೆಲಸ ಕಾರ್ಯಗಳಿಗಾಗಿ ಮಡಕೆಗಳನ್ನು ಬಳಸಿಕೊಂಡದ್ದು ಇತಿಹಾಸದಿಂದ ತಿಳಿದು ಬರುತ್ತದೆ. ಇದು ನೈಸರ್ಗಿಕ ಸಂಪತ್ತಿನ ಭೂಮಿಯ ಮಣ್ಣಿನಿಂದಲೇ ತಯಾರಿಸುತ್ತಿದ್ದರು. ಕುಷ್ಟಗಿ ತಾಲೂಕಿನ ಪುರದಲ್ಲಿರುವ ಶಾಸನ[61]ದಲ್ಲಿ ಕುಂಬಾರರು ತರುವ ಹಣ ಹಾಗೂ ಇತ್ಯಾದಿಗಳು ಸೋಮೇಶ್ವರ ಮಹಾಲಿಂಗಕ್ಕೆ ದಾನ ಕೊಟ್ಟ ಉಲ್ಲೇಖವಿದೆ. ಗಂಗಾವತಿ

ತಾಲೂಕಿನ ಆನೆಗೊಂದಿ ತಾಮ್ರ ಶಾಸನ[62]ದಲ್ಲಿ ಕುಂಬಾರರ ಕುಲದ ಹುಟ್ಟಿನ ಕಥೆ ಇರುವುದನ್ನು ನೋಡಬಹುದಾಗಿದೆ. ಆದರೆ ಕೇವಲ ಜಾತಿಯ ಹೆಸರಿನ ಉಲ್ಲೇಖವಿದೆಯೇ ವಿನಃ ಅವರ ವೃತ್ತಿಯ ಬಗೆಗೆ ಹೆಚ್ಚಿನ ಮಾಹಿತಿಗಳು ಇಲ್ಲಿನ ಶಾಸನಗಳಿಂದ ನಮಗೆ ಸಿಗುವುದಿಲ್ಲ.

**ತೆರಿಗೆ/ಸುಂಕ :** ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ತೆರಿಗೆಯ ಬಗೆಗೆ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ. ಭೂಮಿ ಹಾಗೂ ಇನ್ನಿತರ ವ್ಯಾಪಾರ, ವಸ್ತುಗಳ ಮೇಲೆ ಯಾವ ರೀತಿ ತೆರಿಗೆ ವಿಧಿಸಲಾಗುತ್ತಿತ್ತು ಎನ್ನುವುದನ್ನು ಶಾಸನಗಳ ಆಧಾರದಿಂದ ತಿಳಿದುಕೊಳ್ಳ ಬಹುದಾಗಿದೆ. ಒಂದು ನಾಡಿನ ಭದ್ರ ಅರ್ಥ ವ್ಯವಸ್ಥೆಗೆ ಭೂಮಿಯೇ ಮೂಲವಾದುದರಿಂದ ರಾಜ್ಯಾದಾಯದಲ್ಲಿ ಭೂಕಂದಾಯದ ಮೊತ್ತ ದೊಡ್ಡದಾಗಿರುತ್ತಿತ್ತು. ಆದುದರಿಂದ "ಭೂಕಂದಾಯ ಪದ್ಧತಿ ಪರಂಪರಾನುಗತವಾಗಿ ನಡೆದುಬಂದರೂ ಸಾಗವಳಿ, ಭೂಮಿಯ ಫಲವತ್ತತೆ ಮತ್ತು ಅಳತೆಯ ಪ್ರಮಾಣಕ್ಕನುಸರಿಸಿ ನಿರ್ಧರಿತವಾಗುತ್ತಿತ್ತು."[63] ಇಂತಹ ಭೂ ಕಂದಾಯ ಅಥವಾ ತೆರಿಗೆ ಪದ್ಧತಿ ಜಿಲ್ಲೆಯ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ. ತೆರಿಗೆ ಎಂದರೆ ಕೇವಲ ಸುಂಕ ವಿಧಿಸುವ ಪದ್ಧತಿ ಎಂದಲ್ಲ ಸಂದರ್ಭಾನುಸಾರ ವಿನಾಯ್ತಿ, ಮನ್ನ, ಮುಕ್ತಗೊಳಿಸುವುದು ಒಂದು ಪದ್ಧತಿಯಾಗಿರುವುದು ಶಾಸನಗಳಿಂದ ತಿಳಿದು ಬರುತ್ತದೆ.

"ರಾಜನ ಆದಾಯದ ಬಹುಭಾಗವು ತೆರಿಗೆಗಳಿಂದ ಬರುತ್ತಿದ್ದಿತು. ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು (ಸಂ 'ಕರ') ಗೌತಮ ಸಂಹಿತೆ, ನಾರದ ಸಂಹಿತೆ ಮುಂತಾದ ಸ್ಮೃತಿಗಳು ಭಾವಿಸುತ್ತವೆ."[64] ಇಂತಹ ತೆರಿಗೆಯೂ ಆಯಾ ವೃತ್ತಿಗಳ ಮೇಲೆ ವಿಧಿಸಿದ್ದನ್ನು ಕಾಣಬಹುದು. ಕ್ರಿ.ಶ.1584ರ ಶಾಸನ[65]ವೊಂದರಲ್ಲಿ ದೇಸಾಯಿ ರಾಯಗೌಡನು, ಬಣಜಿಗ, ಗೌಡ, ನಾಯಿಂದ, ಅಕ್ಕಸಾಲಿ, ಜೇಡರು ಮುಂತಾದವರು ತಮಗೆಸಲ್ಲಿಸಬೇಕಾದ ತೆರಿಗೆಯನ್ನು ನಿಗದಿಪಡಿಸಿದ್ದನ್ನು ಹೇಳಲಾಗಿದೆ. ಕುಷ್ಟಗಿಯ ಶಾಸನ[66]ವೊಂದರಲ್ಲಿ ಭತ್ತದ ಆದಾಯದ ತೆರಿಗೆಯನ್ನು ನಿಗದಿ ಪಡಿಸಿದ ವಿವರವಿದೆ. ಅದೇ ರೀತಿ ದವಸ, ಅಡಿಕೆ, ಅರಿಶಿನ, ಮೆಣಸಿನ ಮೇಲಿನ ತೆರಿಗೆಯನ್ನು ಕೊಟ್ಟರೆಂದು ಪುರದ ಶಾಸನದಲ್ಲಿ ಉಲ್ಲೇಖವಿದೆ.[67] ಕೆಲವು ವಿಶೇಷ ಸಂದರ್ಭಗಳಲ್ಲಿ ತೆರಿಗೆಯಿಂದ ವಿನಾಯ್ತಿ ನೀಡಿದ ಮಾಹಿತಿಯನ್ನು ಇಲ್ಲಿನ ಶಾಸನಗಳು ಹೇಳುತ್ತವೆ. "ಸದಾಶಿವರಾಯನು ಆಳುವ ರಾಜ್ಯದಲ್ಲಿನ ಅನ್ನು-ಪನ್ನು ಬಿಡ್ಡಿ-ಬಿಡಾರ ಮುಂತಾದ ತೆರಿಗೆಗಳಿಂದ ವಿನಾಯ್ತಿ ನೀಡುತ್ತಾನೆ."[68] ಕುಂದಣಸಾಮಿಯು ಆಡಳಿತ ನಡೆಸುವ ಕಾಲದಲ್ಲಿ ಗ್ರಾಮದಿಂದ ಉತ್ಪನ್ನವಾಗುವ 99 ದಿನಾರುಗಳನ್ನು ಪ್ರತಿವರ್ಷವೂ ನೀಡಬೇಕೆಂದು ಆ ಆದಾಯಕ್ಕೆ ತೆರಿಗೆ ಇಲ್ಲವೆಂದು ಒಂದು ಶಾಸನ[69]ದಲ್ಲಿ ಉಲ್ಲೇಖವಿದೆ. ಅದೇ

ರೀತಿಯಾಗಿ ಆಡಳಿತದ ಸುವ್ಯವಸ್ಥಿತವಾಗಿ ನಡೆಯುತ್ತಿತ್ತು ಎಂದರೆ ತೆರಿಗೆ ವಿಧಿಸುವ ಬದಲು ತೆರಿಗೆಯ ಮನ್ನ ಮಾಡುವುದು ಕೂಡಾ ಶಾಸನಗಳಲ್ಲಿ ಉಲ್ಲೇಖವಿದೆ. ವಿರೂಪಾಕ್ಷಸ್ವಾಮಿಯು ಗಾಣಕ್ಕೆ ಸಂಬಂಧಿಸಿದ ತೆರಿಗೆಯನ್ನು ಮನ್ನಾ ಮಾಡಿಸುತ್ತಾನೆ.[70] ಕುಷ್ಟಗಿ ತಾಲೂಕಿನ ಶಾಸನ[71]ವು ಸದಾಶಿವರಾಯರ ಆಡಳಿತದ ಸಂದರ್ಭದಲ್ಲಿ ಅವರ ಅಳಿಯ ಮತ್ತು ಕಾರ್ಯಕರ್ತನಾದ ರಾಮರಾಜದೇವನು ತಾವರಕೆರೆಯ ತಿಂಬೋಜ, ಕೊಂಡೋಜ, ಭದ್ರಜೋ ಇವರ ಬಿನ್ನಹವನ್ನು ಕೇಳಿ ತಾವರಕೆರೆಯ ಸೀಮೆಯ ಗ್ರಾಮಗಳ ಕ್ಷೌರಿಕರಿಗೆ ಅಂನು ಪನ್ನು ಬಿಟ್ಟ ಬಿಡಾರ ಎಲ್ಲವನ್ನು ಮನ್ನಾ ಮಾಡಿದನೆಂದು ತಿಳಿಸುತ್ತದೆ. ಹಾಗೆಯೇ ಕುಕನೂರಿನ ಶಾಸನ[72]ದಲ್ಲಿ ಎಲ್ಲಾ ರೀತಿಯ ತೆರಿಗೆಗಳಿಂದ ಮುಕ್ತಗೊಳಿಸಿದ ಬಗ್ಗೆ ಮಾಹಿತಿ ಇದೆ. ಅಲ್ಲದೇ ಕುಕನೂರು ಸ್ಥಳದ ಸಮಸ್ತರು ಸೇರಿ ಊರಿನ ದಂಡ, ದೋಷ ಕೆಲವು ತೆರಿಗೆಗಳನ್ನು ದೇವರಿಗೆ ಬಿಟ್ಟ ಉಲ್ಲೇಖಿದೆ.[73]

ಈ ರೀತಿಯಾಗಿ ತೆರಿಗೆ ವಿಧಿಸಿದ ಹಾಗೂ ವಿನಾಯಿತಿ ನೀಡಿದ ಜೊತೆಗೆ ಮನ್ನಾಮಾಡಿದ ವಿವರಗಳು ಜಿಲ್ಲೆಯ ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ತೆರಿಗೆಯನ್ನು ವಿಧಿಸಲು ಕೂಡಾ ಅಧಿಕಾರಿ ವರ್ಗವನ್ನು ಅಂದಿನ ರಾಜರು ನೇಮಿಸುತ್ತಿದ್ದರು. ಏಕೆಂದರೆ ತೆರಿಗೆಗಳನ್ನು ಸಂಗ್ರಹಿಸುವುದು ಕಷ್ಟದ ಕೆಲಸವಾಗಿತ್ತು. ಇಂತಹ ತೆರಿಗೆಯನ್ನು ವಸೂಲಿ ಮಾಡುವ ಅಧಿಕಾರಿ ವರ್ಗವನ್ನು ಸುಂಕಾಧಿಕಾರಿ ಎಂದು ಮನೆವೆಗ್ಗಡೆ, ಸುಂಕವೆಗ್ಗಡೆ ಎಂಬುದಾಗಿಯೂ ಉಲ್ಲೇಖಗೊಂಡಿವೆ. ಯಲಬುರ್ಗಾ ತಾಲೂಕಿನ ಶಾಸನ[74]ವೊಂದರಲ್ಲಿ ಭೂಲೋಕ ಮಲ್ಲನ ಆಳ್ವಿಕೆಯಲ್ಲಿ ಇವನ ಸಾಮಂತನಾದ ಆಚರಸನ ಮಗ ರಾಯಸಾಧಾರ ಪೆರ್ಮಡಿದೇವನು ಆಳುತ್ತಿದ್ದ ಕುಕನೂರು–30ರೊಳಗಿನ ಕಲ್ಲೂರು ಸ್ವಯಂಭುದೇವರಿಗೆ ಸುಂಕವೆಗ್ಗಡೆ ಮಹೇಶ್ವರಯ್ಯ ಎಂಬ ಉಲ್ಲೇಖವಿದೆ. ಅದೇ ತಾಲೂಕಿನ ಇನ್ನೊಂದು ಶಾಸನ[75]ದಲ್ಲಿ ಮನೆವೆಗಗ್ಡೆ ಮಹಾದೇವಯ್ಯ ಎಂಬ ಉಲ್ಲೇಖ ಕಂಡು ಬರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿ ವಿಠ್ಠಲದೇವರ ಹಾಗೂ ಕೆಲವು ಸುಂಕಗಳನ್ನು ಬಿಟ್ಟ ವಿವರ[76] "ಒಂದೊಂದು ಸುಂಕಕ್ಕೂ ಕೆಲವು ಸಾರಿ ಹಲವಾರು ಸುಂಕಗಳನ್ನು ಒಟ್ಟಿಗೆ ನೋಡಿಕೊಳ್ಳುವುದಕ್ಕೆ ಪ್ರತ್ಯೇಕ ಅಧಿಕಾರಿಗಳಿರುತ್ತಿದ್ದರು. ಅವರ ವೇತನದ ವಿಧಾನ ಗಮನೀಯವಾದುದು. ಅವರು ಸಂಗ್ರಹಿಸುತ್ತಿದ್ದ ಸುಂಕ ಅಥವಾ ತೆರಿಗೆಗಳ ಒಂದು ನಿರ್ದಿಷ್ಟ ಭಾಗವನ್ನು ಅವರು ತಮ್ಮ ವೇತನಕ್ಕಾಗಿ ತೆಗೆದುಕೊಳ್ಳಬೇಕೆಂಬ ಪದ್ಧತಿ ಇದ್ದಂತೆ ಕಾಣಿಸುತ್ತದೆ."[77] ಈ ಮಾತಿಗೆ ಮೇಲಿನ ಶಾಸನವೇ ನಿದರ್ಶನವಾಗಿದೆ. ಇಂತಹ ಸುಂಕದಾರರು ರೈತರಿಂದ ತೆರಿಗೆಗಳನ್ನು ವಸೂಲಿ ಮಾಡಲು ಸುಗ್ಗಿಕಾಲದಲ್ಲಿ ಬರುತ್ತಿದ್ದರು. ಏಕೆಂದರೆ ರೈತರು ಬೆಳೆದು ಮಾರಾಟ ಮಾಡುವುದರಿಂದಲೇ ತೆರಿಗೆ ವಿಧಿಸುತ್ತಿದ್ದರು. ತೆರಿಗೆಗಳನ್ನು ಸರಿಯಾದ ಕಾಲ, ದೇಶ, ರೀತಿಗಳಲ್ಲಿ ಸಂಗ್ರಹಿಸಬೇಕೆಂದು ಸೂಚಿಸುತ್ತದೆ.[78] ವರ್ತಕರು

ಮಾರಾಟ ಮಾಡುವ ವಸ್ತುಗಳ ಮೇಲೆಯೂ ಸಹ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಆದರೆ ಅಂತಹ ಉಲ್ಲೇಖಗಳನ್ನೊಳಗೊಂಡ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿರುವುದಿಲ್ಲ.

**ಅಡಿಟಿಪ್ಪಣಿ :**

1. ಬಿ.ಆರ್.ಹಿರೇಮಠ : ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪುಟ. 7
2. ಉದ್ಧೃತ : ಚನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 211
3. ಅದೇ, ಪುಟ. 212
4. ಎಂ.ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 404
5. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–38, ಪುಟ. 199 & ಯ–48, ಪುಟ. 219
6. ಅದೇ, ಯ–70, ಪುಟ. 272
7. ಅದೇ, ಕು–13, ಪುಟ. 287
8. ಅದೇ, ಕು–3, ಪುಟ. 279
9. ಅದೇ, ಕು–1, ಪುಟ. 276
10. ಚನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 213
11. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–1, ಪುಟ. 1
12. ಅದೇ, ಗಂ–90(ಎ), ಪುಟ. 379
13. ಅದೇ, ಗಂ–89, ಪುಟ. 377
14. ಅದೇ, ಕೊ–129, ಪುಟ. 128
15. ಅದೇ, ಕೊ–148, ಪುಟ. 145
16. ಅದೇ, ಕೊ–6, ಪುಟ. 13
17. ಅದೇ, ಕೊ–131, ಪುಟ. 130
18. ಅದೇ, ಗಂ–39, ಪುಟ. 347
19. ಅದೇ, ಕೊ–162, ಪುಟ. 156
20. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 404–405
21. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–17, ಪುಟ. 175
22. ಅದೇ, ಕು–2, ಪುಟ. 278
23. ಉದ್ಧೃತ : ಚೆನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 212
24. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕು–3, ಪುಟ. 279

25. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕು–4, ಪುಟ. 280
26. ಅದೇ, ಕು–13, ಪುಟ. 289
27. ಅದೇ, ಕು–1, ಪುಟ. 276
28. ಚೆನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 212
29. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 404
30. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–26, ಪುಟ. 33
31. ಅದೇ, ಕೊ–57, ಪುಟ. 54
32. ಅದೇ, ಕು–14, ಪುಟ. 291
33. ಅದೇ, ಕು–15, ಪುಟ. 292
34. ಅದೇ, ಕು–17, ಪುಟ. 294
35. ಅದೇ, ಕು–12, ಪುಟ. 287
36. ಅದೇ, ಕೊ–5, ಪುಟ. 12
37. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 437
38. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–11, ಪುಟ. 166
39. ಅದೇ, ಕೊ–46, ಪುಟ. 46
40. ಅದೇ, ಕೊ–148, ಪುಟ. 145
41. ಅದೇ, ಕೊ–154, ಪುಟ. 151
42. ಅದೇ, ಗಂ–38, ಪುಟ. 347
43. ಅದೇ, ಕೊ–162, ಪುಟ 156
44. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 439
45. ಅದೇ, ಪುಟ. 432
46. ಅದೇ, ಪುಟ. 433
47. ಚೆನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 227
48. ಅದೇ, ಪುಟ. 227
49. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–162, ಪುಟ. 156
50. ಅದೇ, ಯ–17, ಪುಟ. 175
51. ಅದೇ, ಕೊ–162, ಪುಟ. 156
52. ಚೆನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 219

53. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕು–22, ಪುಟ. 303
54. ಅದೇ, ಗಂ–18, ಪುಟ. 325
55. ಅದೇ, ಕು–13, ಪುಟ. 289
56. ಅದೇ, ಕೊ–5, ಪುಟ. 12
57. ಅದೇ, ಕು–21, ಪುಟ. 301
58. ಅದೇ, ಕೊ–149, ಪುಟ. 146
59. ಅದೇ, ಕು–15, ಪುಟ. 292
60. ಅದೇ, ಕು–13, ಪುಟ. 289
61. ಅದೇ, ಕು–17, ಪುಟ. 294
62. ಅದೇ, ಗಂ–18, ಪುಟ. 325
63. ಚನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ, ಪುಟ. 230
64. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 395
65. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–45, ಪುಟ. 216
66. ಅದೇ, ಕು–17, ಪುಟ. 294
67. ಅದೇ, ಕು–15, ಪುಟ. 292
68. ಅದೇ, ಯ–42, ಪುಟ. 215
69. ಅದೇ, ಯ–56, ಪುಟ. 240
70. ಅದೇ, ಯ–38, ಪುಟ. 200
71. ಅದೇ, ಕು–10, ಪುಟ. 285
72. ಅದೇ, ಯ–69, ಪುಟ. 270
73. ಅದೇ, ಯ–50, ಪುಟ. 223
74. ಅದೇ, ಯ–16, ಪುಟ. 173
75. ಅದೇ, ಯ–17, ಪುಟ. 175
76. ಅದೇ, ಕೊ–153, ಪುಟ. 150
77. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ. 402
78. ಅದೇ, ಪುಟ. 403

**ಅಧ್ಯಾಯ–6**

# ಧಾರ್ಮಿಕ ವ್ಯವಸ್ಥೆ

ಧರ್ಮ ಮಾನವನ ಸಾಂಸ್ಕೃತಿಕ ಬದುಕಿನ ಜೀವನಾಡಿ. ಅದರಲ್ಲೂ ಭಾರತೀಯರ ಸಾಂಸ್ಕೃತಿಕ ಬದುಕಿಗೆ ಧರ್ಮವೇ ಮಾರ್ಗದರ್ಶಿ. ಧಾರ್ಮಿಕ ವಿಚಾರಗಳ ತಳಹದಿಯ ಮೇಲೆ ನಮ್ಮ ಪೂರ್ವಜರು ಜೀವನ ಸಾಗಿಸುತ್ತಾ ಬಂದಿದ್ದಾರೆ. ಭಾರತದಲ್ಲಿ ಕ್ರಿ.ಪೂ.ದಿಂದಲೇ ಅಸ್ತಿತ್ವದಲ್ಲಿದ್ದ ಸನಾತನ ಧರ್ಮವು, ನಂತರದಲ್ಲಿ ತನ್ನ ಸ್ವರೂಪದಲ್ಲಿ ಹಲವಾರು ಬದಲಾವಣೆಗಳನ್ನು ಹೊಂದಿ, ಹಲವು ಆಚಾರ–ವಿಚಾರಗಳು ಪರಿವರ್ತನೆಗೊಂಡು ಅನೇಕ ಧರ್ಮಗಳಾಗಿ ಪರಿಣಮಿಸಿದವು. ಹೀಗೆ ವಿಭಿನ್ನ ಆಚರಣೆಗನುಗುಣವಾಗಿ ಹತ್ತು–ಹಲವು ಧರ್ಮಗಳು ಕಾಲ ಕಾಲಕ್ಕೆ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾನಪಲ್ಲಟಗೊಳ್ಳುತ್ತಾ ಬಂದಿವೆ. ಆಯಾ ಕಾಲದ ರಾಜಕೀಯ ಸ್ಥಿತಿಗತಿಯು ಧರ್ಮದ ಸ್ಥಿತಿಗತಿಯನ್ನು ನಿರ್ಧರಿಸಿದೆ. ಅನೇಕ ಧರ್ಮಗಳ ತಾಣವಾಗಿದ್ದ ಈ ನೆಲದ ಧಾರ್ಮಿಕ ವ್ಯವಸ್ಥೆಯು ಹೇಗೆ ಬದಲಾಗುತ್ತಾ ಬಂದಿದೆ ಎನ್ನುವುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕರ್ನಾಟಕದಲ್ಲಿ ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದ ಧರ್ಮಕ್ಕೆ ಅತ್ಯಂತ ಉನ್ನತವಾದ ಸ್ಥಾನವನ್ನು ನೀಡಲಾಗಿದೆ. ಸಮಾಜದ ನಡುವೆ ಸಾಮರಸ್ಯತೆ ಉಂಟುಮಾಡುವ ಫಲವಾಗಿ ಧರ್ಮದೃಷ್ಟಿ ವಿಕಾಸಗೊಳ್ಳುತ್ತಾ ಬಂದಿತು. ಹೀಗಾಗಿ ಪ್ರತಿಯೊಂದು ಪ್ರದೇಶದಲ್ಲಿನ ಮಾನವನ ಪ್ರಗತಿಗೆ ಇಂತಹ ಧರ್ಮಗಳು ಶ್ರಮಿಸಿವೆ. ವಿಶೇಷವಾಗಿ ಕನ್ನಡನಾಡಿನ ಸಾಂಸ್ಕೃತಿಕ ಪ್ರಗತಿಗೆ ರಾಜಕೀಯದಂತೆಯೇ ಇಲ್ಲಿನ ಧಾರ್ಮಿಕ ವ್ಯವಸ್ಥೆಯೂ ಮಹತ್ವದ ಪಾತ್ರ ವಹಿಸಿದೆ. ಪ್ರಾಚೀನ ಕಾಲದಿಂದಲೂ ಕರ್ನಾಟಕದ ಇತಿಹಾಸದೊಂದಿಗೆ ಬೌದ್ಧ, ಜೈನ, ವೈಷ್ಣವ ಮತ್ತು ಶೈವ ಧರ್ಮಗಳು ಬೆಳೆದುಕೊಂಡು ಬಂದಿದ್ದನ್ನು ಕಾಣುತ್ತೇವೆ.

ಧರ್ಮ ಸಹಿಷ್ಣುತೆಯನ್ನನುಸರಿಸಿದ ಕರ್ನಾಟಕದ ಅರಸು ಮನೆತನಗಳು ಧರ್ಮಗಳ ಅನುಯಾಯಿಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದ್ದವು. ಧರ್ಮ ಸಮನ್ವಯತೆ ಆ ಕಾಲದ ರಾಜ್ಯಾಡಳಿತದ ಮುಖ್ಯ ಲಕ್ಷಣವಾಗಿತ್ತು. ಸ್ವಧರ್ಮ ರಕ್ಷಣೆ ಮತ್ತು ಪರಧರ್ಮ ಸಹಿಷ್ಣುತೆ ಎನ್ನುವುದು ಅಂದಿನ ಅರಸರ ಧ್ಯೇಯವಾಗಿತ್ತು. ಬೌದ್ಧಧರ್ಮ, ಜೈನಧರ್ಮ, ವೈಷ್ಣವಧರ್ಮ, ಶೈವಧರ್ಮಗಳು ರಾಜರಿಂದ ಮನ್ನಣೆ ಪಡೆದಿದ್ದವು.

ಈ ನಾಡಿನಲ್ಲಿಯ ಧಾರ್ಮಿಕ ಸಮನ್ವಯತೆ ಹಾಗೂ ಅಂದಿನ ಧಾರ್ಮಿಕ ಸ್ಥಿತಿಗತಿಯನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಗುರುತಿಸಲು ಇಲ್ಲಿ ದೊರೆತ

ಶಾಸನಗಳು ಸಹಾಯಕವಾಗಿ ನಿಲ್ಲುತ್ತವೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳ ಆಧಾರದ ಮೇಲೆ ಮತ್ತು ಪರೋಕ್ಷವಾದ ಮಾಹಿತಿಗಳನ್ನು ಒದಗಿಸುವ ಶಾಸನೇತರ ಆಕರಗಳ ಆಧಾರಗಳಿಂದ ಅಂದಿನ ಕಾಲದ ಧಾರ್ಮಿಕ ಅಂಶಗಳನ್ನು ಸ್ಪಷ್ಟಪಡಿಸಬಹುದಾಗಿದೆ. ಈ ಆಧಾರದ ಮೇಲೆಯೇ ಜಿಲ್ಲೆಯ ಧಾರ್ಮಿಕ ಸ್ಥಿತಿಗತಿಯನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

**ಬೌದ್ಧಧರ್ಮ:**

ಅತ್ಯಂತ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಧರ್ಮವಾದ ಬೌದ್ಧಧರ್ಮವು ಮೌರ್ಯ ಸಾಮ್ರಾಟನಾದ ಅಶೋಕನ ಕಾಲಕ್ಕೆ ಕರ್ನಾಟಕದಲ್ಲಿ ಒಂದು ಪ್ರಬಲವಾದ ಧರ್ಮವಾಗಿತ್ತು. "ಕ್ರಿ.ಶ.ಪೂರ್ವ 3ನೇ ಶತಮಾನದಲ್ಲಿ ಮೌರ್ಯದೊರೆ ಅಶೋಕನು ಭಿಕ್ಷು ಮಹಾದೇವನನ್ನು ಮಹಿಷ ಮಂಡಲಕ್ಕೂ (ಈಗಿನ ಮೈಸೂರು) ರಕ್ಷಿತನವನ್ನು(ರುಖಿತರಾಜ) ಬನವಾಸಿಗೂ ಕಳಿಸಿದನೆಂಬ ಉಲ್ಲೇಖವೇ ಕರ್ನಾಟಕಕ್ಕೆ ಬೌದ್ಧಧರ್ಮ ಪ್ರವೇಶದ ಪ್ರಥಮ ದಾಖಲೆ. ಕ್ರಿ.ಶ.640ರಲ್ಲಿ ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡಿದ ಚೀನೀ ಪ್ರವಾಸಿ ಹುಯನ್‌ತ್ಸಾಂಗ್‌ನು ಬೌದ್ಧಧರ್ಮದ ಮಹಾಯಾನ ಪಂಥವು ಕರ್ನಾಟಕ ಭಾಗದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತೆಂದು ಬರೆದಿದ್ದಾನೆ."[1] ಬೌದ್ಧಧರ್ಮದ ಅವಶೇಷಗಳು ಕರ್ನಾಟಕದಲ್ಲಿ ಕ್ರಿ.ಪೂರ್ವ 3ನೇ ಶತಮಾನದಿಂದ 16ನೇ ಶತಮಾನದವರೆಗೆ ದೊರೆಯುತ್ತವೆ. ಅದರಲ್ಲಿಯೂ ಈ ಧರ್ಮದ ಹೆಚ್ಚು ಪ್ರಭಾವ ಕಂಡು ಬರುವುದು ಶಾತವಾಹನರ ಕಾಲದಲ್ಲಿ.

ಭಗವಾನ್ ಬುದ್ಧನು ಬೌದ್ಧಧರ್ಮದ ಆದ್ಯ ಪ್ರವರ್ತಕನಾಗಿದ್ದು, ಜೈನಧರ್ಮದ ತೀರ್ಥಂಕರನಾದ ಮಹಾವೀರನ ಸಮಕಾಲೀನನೆನಿಸಿಕೊಂಡಿದ್ದಾನೆ. ಜೈನ ಧರ್ಮವು ತಲೆಯೆತ್ತಿದ ಸುಮಾರು ಒಂದು ಶತಮಾನದ ನಂತರ ಬೌದ್ಧಧರ್ಮ ಪ್ರಾರಂಭವಾದರೂ ಇಂದು ಜಗತ್ತಿನ ಪ್ರಮುಖ ಧರ್ಮಗಳಲ್ಲೊಂದೆನಿಸಿದೆ. ಈ ಧರ್ಮವು ವಿದ್ಯೆಗೆ ಪ್ರೋತ್ಸಾಹ ನೀಡಿದ್ದಲ್ಲದೆ ಇತರ ಜ್ಞಾನ ಶಾಖೆಗಳನ್ನು, ಚೈತ್ಯಾಲಯಗಳನ್ನು, ವಿಹಾರಗಳನ್ನು ನಿರ್ಮಿಸಿ ಭಾರತೀಯ ಸಾಹಿತ್ಯ, ವಿದ್ಯೆ ಕಲೆಗಳಿಗೆ ಅಪಾರವಾದ ಕೊಡುಗೆ ನೀಡಿದೆ.

ಬೌದ್ಧಧರ್ಮದಲ್ಲಿ ಮೂರು ಶಾಖೆಗಳು ಕಂಡು ಬರುತ್ತವೆ. ಅವು ಹೀನಯಾನ, ಮಹಾಯಾನ ಮತ್ತು ವಜ್ರಯಾನಗಳೆಂದೆನಿಸಿವೆ. "ಇವು ಮೂರು ತಮ್ಮ ಪ್ರಾಬಲ್ಯದ ಕಾಲದಲ್ಲಿ ಕರ್ನಾಟಕದಲ್ಲಿ ತಕ್ಕ ಮಟ್ಟಿಗೆ ಪ್ರಚಾರದಲ್ಲಿದ್ದವು. ಕ್ರಿಸ್ತಪೂರ್ವದ ಅಶೋಕನ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ಧರ್ಮವೆಂದರೆ ಬಹುಶಃ ಬೌದ್ಧಧರ್ಮದ 'ಹೀನಯಾನ'.ಕ್ರಿಸ್ತಶಕದ ಆರಂಭದಲ್ಲಿ ಮಹಾಯಾನವು ಪ್ರಚಾರಕ್ಕೆ ಬಂದಿತು. ಬಹುಶಃ ಏಳನೆ ಶತಮಾನದಲ್ಲಿ ನಾಗಾರ್ಜುನನೆಂಬ ಬೌದ್ಧತಾಂತ್ರಿಕನ ಮೂಲಕ ತಾಂತ್ರಿಕ ಬೌದ್ಧಧರ್ಮವು ದಕ್ಷಿಣ ಭಾರತದಲ್ಲಿ ಪ್ರಸಾರವಾಯಿತು. ಈ ವಜ್ರಯಾನದ

ಕುರುಹುಗಳು ಮತ್ತು ತಾಂತ್ರಿಕ ಆಚರಣೆಗಳು ನಮಗೆ ಶಾಸನಗಳಲ್ಲಿ ಸ್ಪಷ್ಟವಾಗಿ ದೊರೆಯದಿದ್ದರೂ, ಬೌದ್ಧದೇವತೆಯಾದ 'ತಾರಾಭಗವತಿ'ಗೆ ಇದ್ದ ಸ್ಥಾನದಿಂದ ಅದನ್ನು ಊಹಿಸಬಹುದಾಗಿದೆ."[2] ಆದರೆ ಬುದ್ಧನ ನಂತರದಲ್ಲಿ ಬಂದ ಬೌದ್ಧ ಪಂಡಿತರು ಬುದ್ಧನ ಉಪದೇಶಗಳನ್ನು ವಿಸ್ತರಿಸಿ ಹೀನಯಾನ ಮತ್ತು ಮಹಾಯಾನ ಎಂಬ ಎರಡು ಶಾಖೆಗಳನ್ನಾಗಿ ವಿಂಗಡಿಸಿದರು.

ಅಂದು ಅಶೋಕ ಚಕ್ರವರ್ತಿಯ ಆಶ್ರಯದೊರೆತ ನಂತರ ಬೌದ್ಧಧರ್ಮ ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಲ್ಲದೆ ಅದು ಅನುಸರಿಸಿದ ಶಾಂತಿ, ಅಹಿಂಸೆ, ಮಾನವ ಪ್ರೀತಿಗಳಿಂದಾಗಿ ಜನಸಾಮಾನ್ಯರ ಧರ್ಮವೆಂಬಂತಾಯಿತ್ತು.

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಹೇಳುವುದಾದರೆ ಈ ಪ್ರದೇಶದಲ್ಲಿ ಮೊದಲಿಗೆ ಅಶೋಕನ ಕಾಲದ (ಕ್ರಿ.ಪೂ.273–233) ಶಾಸನಗಳು ದೊರೆತಿರುವುದರಿಂದ ಆರಂಭದಲ್ಲಿ ಈ ನೆಲದಲ್ಲಿ ಬೌದ್ಧಧರ್ಮವು ನೆಲೆಸಿದ್ದಿರಬೇಕೆಂದು ಸುಲಭವಾಗಿ ಹೇಳಬಹುದು. ದೇವನಾಂಪ್ರಿಯನಾದ ಅಶೋಕನು ಬೌದ್ಧ ಸಂಘಕ್ಕೆ ಸೇರಿದ ಮೇಲೆ ತನ್ನ ರಾಜ್ಯದ ಪ್ರಜೆಗಳು ಸಂಘದ ತತ್ವಗಳನ್ನು ಅನುಸರಿಸಿ ಧರ್ಮಶ್ರವಣವನ್ನು ಮಾಡಲೆಂದು ಈ ಶಾಸನಗಳನ್ನು ಹಾಕಿಸಿದ್ದಾನೆ. ಅಶೋಕ ಚಕ್ರವರ್ತಿಯು ಬ್ರಾಹ್ಮೀ ಲಿಪಿಯ ಪ್ರಾಕೃತ ಭಾಷೆಯಲ್ಲಿರುವ ಕೊಪ್ಪಳದ ಗವಿಮಠದ ಹಿಂಬದಿಯ ಬೆಟ್ಟದಲ್ಲಿ ದೊರೆತ ಈ ಶಾಸನ[3]ದ ಪ್ರಕಾರ ಈ ಪ್ರದೇಶವು ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾಗಿತ್ತು ಎಂಬುದನ್ನು ಸೂಚಿಸುತ್ತದೆ. ಈ ಶಾಸನದಲ್ಲಿ ಅಶೋಕನು ಪಾಲಿಸಿದ ಧರ್ಮದ ಕುರಿತು ಈ ರೀತಿ ಮೂಡಿ ಬಂದಿದೆ. "ನಾನು ಎರಡೂವರೆ ವರ್ಷಗಳಿಗಿಂತ ಹೆಚ್ಚು ಕಾಲ ಪ್ರಕಾಶದಲ್ಲೆ ಶಾಕ್ಯನಾಗಿದ್ದೆ. ಆದರೆ ಅಷ್ಟು ಚೆನ್ನಾಗಿ ಮನಸಿಟ್ಟು ಪ್ರಯತ್ನಿಸಲಿಲ್ಲ. ಆದರೆ ಈಗ ಒಂದು ಸಂವತ್ಸರಕ್ಕಿಂತ ಹೆಚ್ಚು ಕಾಲ ಸಂಘವನ್ನು ಪ್ರವೇಶಿಸಿ ಚೆನ್ನಾಗಿ ಪ್ರಯತ್ನಿಸಿರುವೆ. ಇದು ಪ್ರಯತ್ನದ ಫಲ. ಮಹಾತ್ಮರಿಂದ ಮಾತ್ರ ಇದು ಸಾಧ್ಯವೆಂದು ತಿಳಿಯಬೇಡಿ. ಕ್ಷುದ್ರ ಜನರೂ ಕೂಡ ತಮ್ಮ ಪ್ರಯತ್ನದಿಂದ ಸ್ವರ್ಗವನ್ನು ಪಡೆಯಬಹುದು. ಇದಕ್ಕಾಗಿಯೇ ಈ ಧರ್ಮ ಶ್ರವಣವನ್ನು ಮಾಡಿರುವುದು. ಕ್ಷುದ್ರರೂ, ಮಹಾತ್ಮರೂ ಎಲ್ಲರೂ ಪರಾಕ್ರಮಿಸಲಿ ಎಂದು ನೆರೆಯವರು ಕೂಡ ಇದನ್ನು ತಿಳಿಯಲಿ ಎಂದು ಪರಾಕ್ರಮ ಎಂದರೆ ಇದು. ಚಿರಸ್ಥಾಯಿಯಾಗಿ ನಿಲ್ಲಲಿ ಎಂದು ಇದು ವರ್ಧಿಸುತ್ತದೆ. ವಿಪುಲವಾಗಿ ವರ್ಧಿಸುತ್ತದೆ. ಈಗಿನದಕ್ಕಿಂತ ಒಂದೂವರೆಯಷ್ಟು ವರ್ಧಿಸುತ್ತದೆ." ಅಶೋಕ ಹಾಕಿಸಿದ ಈ ಶಾಸನ ಹಾಗೂ ಅಶೋಕನ ಇತರ ಶಾಸನಗಳು ದೊರೆತಿರುವುದರಿಂದ ಆರಂಭದಲ್ಲಿ ಇದು ಬೌದ್ಧಧರ್ಮದ ನೆಲೆಯಾಗಿತ್ತೆಂದು ಹೇಳಬಹುದಾಗಿದೆ.

ಹಾಗೆಯೇ ಪಾಲ್ಕಿಗುಂಡಿನ ಹತ್ತಿರ ಕಟ್ಟಡದ ಅವಶೇಷಗಳು ದೊರೆಯುತ್ತವೆ. ಮಡಕೆಯ ಚೂರುಗಳು, ಇಟ್ಟಿಗೆಯ ರಚನೆಗಳಂತಹ ಅವಶೇಷಗಳು ಇಲ್ಲಿ ಪ್ರಮುಖವಾಗಿವೆ.

ಆದರೆ ಇಂತಹ ರಚನೆಗಳನ್ನು ಬಿಟ್ಟರೆ ಬೌದ್ಧಧರ್ಮಕ್ಕೆ ಸೇರಿದ ನೇರವಾದ ಯಾವುದೇ ರೀತಿಯ ಅವಶೇಷಗಳು ಅಲ್ಲಿ ದೊರೆತಿರುವುದಿಲ್ಲ. ಪಾಲ್ಕಿಗುಂಡಿನ ಈ ಅಶೋಕನ ಶಾಸನದ ಬಳಿಯಲ್ಲಿ ಕಂಡು ಬರುವ ಪಾದುಕೆಗಳು 10ನೆಯ ಶತಮಾನದಲ್ಲಿನ ಜೈನರ ಜಠಾಸಿಂಗನಂದಿಯ ಹೆಸರಿನಲ್ಲಿ ಕೆತ್ತಿದವುಗಳಾಗಿವೆ. ಆದರೂ ಕೂಡ ಕೆಲವೊಂದು ಆಂತರಿಕ ಆಧಾರಗಳಿಂದ ಕ್ರಿ.ಶ.8–9ನೆಯ ಶತಮಾನದವರೆಗೆ ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಬೌದ್ಧ ಧರ್ಮವು ನೆಲೆಸಿರಬೇಕೆಂದು ಊಹಿಸಬಹುದಾಗಿದೆ. ಜೈನ ಧರ್ಮವು ಇಲ್ಲಿ ಬಂದು ನೆಲೆಸುವ ಮೊದಲು ಬೌದ್ಧಧರ್ಮವು ಅಸ್ತಿತ್ವವನ್ನು ಹೊಂದಿದ್ದಿರ ಬಹುದೆಂದು ಹೇಳಿದರೆ ತಪ್ಪಾಗಲಾರದು. ಪ್ರಸ್ತುತ ಕೊಪ್ಪಳದ ಉತ್ತರ ಭಾಗದಲ್ಲಿ ಸುಮಾರು ನೂರಾರು ಕಿ.ಮೀ.ದೂರದಲ್ಲಿರುವ ಸನ್ನತಿಯೆಂಬ ಗ್ರಾಮ (ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕು) ದಲ್ಲಿ ಮತ್ತು ಅದರ ಸುತ್ತಮುತ್ತಲಿನ ಕೆಲವು ಪ್ರದೇಶಗಳಲ್ಲಿ ಕ್ರಿ.ಶ.1–3ನೆಯ ಶತಮಾನದಲ್ಲಿನ ಬೌದ್ಧ ಶಿಲ್ಪದ ಸ್ಥೂಪಗಳು ಮತ್ತು ಶಾಸನಗಳು ಹೆಚ್ಚಾಗಿ ದೊರೆತಿವೆ. ಹಾಗೆಯೇ ಕೊಪ್ಪಳದ ಪೂರ್ವದಲ್ಲಿರುವ ಐತಿಹಾಸಿಕ ಹಂಪೆಯಲ್ಲಿ ಕ್ರಿ.ಶ.1974ರಿಂದ ಕ್ರಿ.ಶ.1984ರ ವರೆಗೆ ನಡೆಸಿದ ಉತ್ಖನನ ಕಾರ್ಯದಲ್ಲಿ ಬೌದ್ಧ ಶಿಲ್ಪಾವಶೇಷಗಳು ದೊರೆತಿರುವುದನ್ನು ಕಾಣುತ್ತೇವೆ. ಅಲ್ಲದೇ ಕ್ರಿ.ಶ.7ನೆಯ ಶತಮಾನದಲ್ಲಿ ಭಾರತ ಯಾತ್ರೆ ಕೈಗೊಂಡಿದ್ದ ಚೀನೀಯಾತ್ರಿಕ ಹೂಯನ್‌ತ್ಸಾಂಗ್‌ನು ಬನವಾಸಿಗೆ ಹೋಗುವ ಸಮಯದಲ್ಲಿ ಈ ಕೊಪ್ಪಳಕ್ಕೆ ಭೇಟಿ ನೀಡಿರಬಹುದು. ಏಕೆಂದರೆ ಆತನು ತನ್ನ ದಿನಚರಿಯಲ್ಲಿ **'ಕೊಂಕಿನ'** **'ಪುಲೊ'**[4] ಎಂದು ದಾಖಲಿಸಿದ್ದಾನೆಂದು ಕೆಲವು ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಅದುವೇ ಈಗಿನ ಕೊಂಕಣ ಪ್ರದೇಶವೆಂದು ನಂಬಲಾಗಿದೆ.

ಕ್ರಿ.ಶ.1008ರ ಐದನೆಯ ವಿಕ್ರಮಾದಿತ್ಯನ ಕಾಲದ ಶಾಸನ[5]ವೊಂದರಲ್ಲಿ ಬಿಚ್ಚುಕುನ್ದೆ ಗ್ರಾಮದಲ್ಲಿ ಜಿನಾಲಯವೊಂದನ್ನು ಕಟ್ಟಿಸಿದಂತೆ ತಿಳಿದುಬರುತ್ತದೆ. ಈ ಬಿಚ್ಚುಕುನ್ದೆ ಯಾವುದೆಂಬುದರ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. **'ಕುಂದೆ'** ಎಂದರೆ **'ಬೆಟ್ಟ'** ಎಂದರ್ಥ. ಬಿಚ್ಚು ಎಂದರೆ ಬಹುಶಃ ಭಿಕ್ಷು ಎಂಬುದರ ತದ್ಭವರೂಪವೆಂದಿಟ್ಟುಕೊಂಡಲ್ಲಿ ಬೌದ್ಧಭಿಕ್ಷುಗಳ ಬೆಟ್ಟವೆಂದರ್ಥವಾಗುತ್ತದೆ. ಬೌದ್ಧರು ಮುಂದೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡ ಮೇಲೆಯೂ ಬೌದ್ಧ ಭಿಕ್ಷುಗಳ ಸ್ಥಳವೆಂದು ಈ ಪ್ರದೇಶವನ್ನು ಅಲ್ಲಿ ನೆಲೆನಿಂತ ಜೈನರು ಹಾಗೂ ಮೊದಲಾದವರು ಕರೆದಿರಬಹುದು.

### ಜೈನಧರ್ಮ:

ಜೈನಧರ್ಮವು ಕ್ರಿ.ಪೂ.3ನೆಯ ಶತಮಾನದ ಸುಮಾರಿಗೆ ಪ್ರಾಚೀನ ಕರ್ನಾಟಕದಲ್ಲಿ ಒಂದು ಪ್ರಬಲವಾದ ಧರ್ಮವಾಗಿತ್ತು. ಕರ್ನಾಟಕವು ಪ್ರಾಚೀನ ಕಾಲದಿಂದ ಜೈನಧರ್ಮದ ವಾಸಸ್ಥಾನವಾಗಿದ್ದು, ಕರ್ನಾಟಕದ ಪ್ರಸಿದ್ಧ ಅರಸು ಮನೆತನಗಳಾದ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು ಹಾಗೂ

ರಾಷ್ಟ್ರಕೂಟರ ಆಡಳಿತ ಅವಧಿಯಲ್ಲಿ ಜೈನಧರ್ಮವು ಮೇಲ್ಮೆಯನ್ನು ಸಾಧಿಸಿ ಇಲ್ಲಿ ಭದ್ರಬುನಾದಿಯನ್ನು ಹಾಕಿತು. ನಂತರ ಬಂದ ಕಲ್ಯಾಣ ಚಾಳುಕ್ಯ ಅರಸರು ಹಾಗೂ ಹಳೇಬೀಡಿನ ಹೊಯ್ಸಳರೂ ಜೈನಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. 14ನೇ ಶತಮಾನದ ಅವಧಿಯಲ್ಲಿ ಆಡಳಿತ ನಡೆಸಿದ ವಿಜಯನಗರದ ಅರಸರು ಪರಮತ ಸಹಿಷ್ಣುತೆಯನ್ನು ತೋರಿ ಜೈನಧರ್ಮಕ್ಕೆ ಆಶ್ರಯ ನೀಡಿದರು.

ಕ್ರಿ.ಪೂ.3ನೇ ಶತಮಾನದಲ್ಲಿಯೇ ಜೈನಧರ್ಮ ದಕ್ಷಿಣ ಭಾರತದಲ್ಲಿ ಪ್ರವೇಶಮಾಡಿದರೂ ಕರ್ನಾಟಕದಲ್ಲಿ ವರ್ಧಮಾನ ಮಹಾವೀರನ ಕ್ರಿ.ಪೂ.540ರ ಅವಧಿಯ ಸುಮಾರಿಗೆ ಈ ಧರ್ಮ ಶ್ರೀಮಂತವಾಗಿ ಬೆಳೆಯಿತು. ಈ ವರ್ಧಮಾನ ಮಹಾವೀರನೇ ಜೈನಮತದ ಸ್ಥಾಪಕನೆನಿಸಿಕೊಂಡಿದ್ದಾನೆ. 'ಕ್ರಿ.ಪೂ.7ನೇ ಶತಮಾನದಲ್ಲಿ ಆಗಿಹೋದ ಮಹಾವೀರ ತೀರ್ಥಂಕರರು ಐತಿಹಾಸಿಕವಾಗಿ ಜೈನಧರ್ಮದ ಮೂಲ ಪುರುಷರು. ಆದರೆ ಜೈನಧರ್ಮ ಗ್ರಂಥಗಳ ಹಾಗೂ ನಂಬಿಕೆಗಳ ಪ್ರಕಾರ ಮಹಾವೀರರು 24ನೆಯ ಹಾಗೂ ಕೊನೆಯ ತೀರ್ಥಂಕರರು. ಅದಕ್ಕೂ ಮೊದಲು ಆಗಿಹೋದ 23 ತೀರ್ಥಂಕರರು ಜೈನಧರ್ಮವನ್ನು ಪ್ರತಿಪಾದಿಸಿದರೆಂದೂ, 22ನೆಯ ತೀರ್ಥಂಕರರಾದ ನೇಮಿನಾಥರು ಭಾಗವತದ ಶ್ರೀಕೃಷ್ಣನ ಸಮಕಾಲೀನರೆಂದು ಹೇಳಲಾಗುತ್ತದೆ. ರಾಜಪುತ್ರರಾಗಿ ಜನಿಸಿದ ಮಹಾವೀರರು ಆ ವೈಭವಗಳನ್ನೆಲ್ಲಾ ತ್ಯಜಿಸಿ ತೀರ್ಥಂಕರರಾದದ್ದು ಒಂದು ಅದ್ಭುತ ತ್ಯಾಗದ ಕಥೆ.[6] ತೀರ್ಥಂಕರ ಎಂದರೆ ಭವಸಾಗರವನ್ನು ದಾಟಿಸಬಲ್ಲ ಧರ್ಮಗುರು.

ಜೈನಮತದ ಪರಮೋಚ್ಛ ಧ್ಯೇಯ ಆತ್ಮವನ್ನು ಸಂಸಾರದ ಬಂಧನದಿಂದ ಮುಕ್ತಗೊಳಿಸುವುದು. ಕರ್ಮವು ಜನನ ಮರಣದ ಚಕ್ರಕ್ಕೆ ಕಾರಣವಾಗಿದ್ದು, ಕರ್ಮಶೃಂಖಲೆಯನ್ನು ನಾಶಪಡಿಸಲು ತ್ರಿರತ್ನಗಳ ಸಾಧನೆ ಅಗತ್ಯವೆಂದು ಮಹಾವೀರನು ಬೋಧಿಸಿದನು. ಆತ್ಮವು ತನ್ನ ಸಹಜ ಶುದ್ಧತೆಯನ್ನು ಮರಳಿ ಪಡೆದುಕೊಂಡು ಕೇವಲ ಜ್ಞಾನವನ್ನು ಪಡೆಯುವುದೇ ಜೀವನದ ಗುರಿಯಾಗಿತ್ತು. ಇಲ್ಲಿ ಕೇವಲ ಜ್ಞಾನ ಎಂದರೆ ಪರಮೋಚ್ಛ ಆಧ್ಯಾತ್ಮಿಕ ಜ್ಞಾನ ಎಂಬುದಾಗಿತ್ತು. ಈ ಜ್ಞಾನದ ಮೂಲಕವೇ "ಆತ್ಮವು ಆಗ ಎಲ್ಲ ಪೂರ್ಣತೆಯನ್ನು ಹೊಂದಿರುತ್ತದೆ. ಅನಂತ ಜ್ಞಾನ ಮಾತ್ರವಲ್ಲ, ಅನಂತಶಾಲಿ, ಅನಂತ ಶಕ್ತಿಗಳನ್ನು ಹೊಂದಿರುತ್ತದೆ. ಉಪನಿಷತ್ತಿನ ಬೋಧನೆಯ ಹಾಗೆಯೇ ಇಲ್ಲಿಯೂ ಮೋಕ್ಷವೆಂದರೆ ಪುಣ್ಯ–ಪಾಪಗಳೆರಡನ್ನೂ ಮೀರಿ ನಿಲ್ಲುವುದು. ಈ ಸ್ಥಿತಿಯನ್ನು ಪಡೆಯಲು ತ್ರಿಮುಖವಾದ ಸಾಧನೆ ಅವಶ್ಯಕ. ಜೈನತತ್ವದಲ್ಲಿ ನಂಬಿಕೆ (ಸಮ್ಯಗ್ ದರ್ಶನ); ಇದಕ್ಕೆ ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರಗಳು ಪೋಷಕಗಳಾಗಿ ಬಂದಾಗ ಮೋಕ್ಷ ಅಥವಾ ನಿರ್ವಾಣವು ಲಭಿಸುತ್ತದೆ. ಈ ಮೂರನ್ನು 'ತ್ರಿರತ್ನ'ಗಳೆಂದು ಕರೆಯುತ್ತಾರೆ."[7] ಹೀಗೆ ತ್ರಿರತ್ನಗಳ ಸಾಧನೆ ಅಗತ್ಯವೆಂದು ಜೈನಧರ್ಮವು ಬೋಧಿಸುತ್ತದೆ.

ಕಠೋರವಾದ ತಪಶ್ಚರ್ಯದ ಮೂಲಕ ದೇಹದಂಡನೆ ಮಾಡುತ್ತಾ ತಮ್ಮ ಕರ್ಮದ ಕುರಿತು ಯೋಚಿಸಿ ಪಶ್ಚಾತ್ತಾಪ ಪಡುತ್ತಾ ಸಲ್ಲೇಖನ ವ್ರತದ ಮೂಲಕ ಜೀವನವನ್ನು ಕೊನೆಗೊಳಿಸುವುದು ಇವು ಮೋಕ್ಷಸಾಧನೆಯ ಮಾರ್ಗಗಳೆಂದು ಜೈನಧರ್ಮ ಬೋಧಿಸುತ್ತದೆ. ಈ ಕಠೋರವಾದ ವ್ರತವನ್ನು ಮುನಿಗಳಲ್ಲದೆ ಸಂಸಾರಿಗಳಾದ ಪುರುಷರೂ ಸೇರಿದಂತೆ ಸ್ತ್ರೀಯರಿಗೂ ಕೈಗೊಳ್ಳುವ ಹಕ್ಕು ಇರುತ್ತಿತ್ತು. ಇಂತಹ ಕಠಿಣ ವ್ರತಗಳನ್ನು ಬೋಧಿಸಿದ ಮಹಾವೀರನು ಸನ್ಯಾಸನಕ್ಕೆ ಮಾನ್ಯತೆಯನ್ನಿತ್ತನು. ಇದು ಪೂರ್ವಜನ್ಮಗಳಲ್ಲಿ ಸಂಚಿತವಾದ ಕರ್ಮವನ್ನೆಲ್ಲಾ ನಾಶ ಪಡಿಸಿ ಮೋಕ್ಷಪ್ರದವಾಗುವುದೆಂದು ಬೋಧಿಸಿದನು.

ಕರ್ನಾಟಕದ ಪ್ರಾಚೀನ ಮತ್ತು ಮಹತ್ವ ಪೂರ್ಣವಾದ ಧರ್ಮವಾದ ಜೈನಧರ್ಮ ಧಾರ್ಮಿಕ ಕ್ಷೇತ್ರದಲ್ಲಷ್ಟೇ ಅಲ್ಲದೆ ಸಾಹಿತ್ಯಿಕ, ರಾಜಕೀಯ, ನೈತಿಕ ಮತ್ತು ಕಲಾಕ್ಷೇತ್ರಗಳಲ್ಲಿ ಸದಾ ಸ್ಮರಣೀಯ ಪರಿಣಾಮವನ್ನು ಬೀರಿದೆ. ಕರ್ನಾಟಕದಲ್ಲಿ ಜೈನಧರ್ಮ ಎಷ್ಟು ಪ್ರಸಿದ್ಧಿಯನ್ನು ಪಡೆದಿದೆಯೋ ಅಷ್ಟೇ ಪ್ರಸಿದ್ಧಿಯನ್ನು ಪಡೆದ ಮತ್ತೊಂದು ಜೈನ ಕೇಂದ್ರವೆಂದರೆ ಕೊಪ್ಪಳದ ಕೇಂದ್ರವೆಂದು ಹೇಳಬಹುದು. ಕೊಪ್ಪಳ ಜಿಲ್ಲೆಯಲ್ಲಿ ಜೈನಧರ್ಮದ ಕುರಿತು ಅಸಂಖ್ಯಾತ ಶಾಸನಗಳು ದೊರೆತಿದ್ದೆ ಇದಕ್ಕೆ ಸಾಕ್ಷಿಯಾಗಿದೆ. ಈ ಶಾಸನಗಳು ಜೈನಧರ್ಮದ ಕುರಿತು ವಿಶೇಷವಾದ ಮಾಹಿತಿಯನ್ನು ಒದಗಿಸಿವೆ. ಜೈನ ಬಸದಿಯ ನಿರ್ಮಾಣ ಹಾಗೂ ನೆಟ್ಟ ನಿಷಧಿಗಲ್ಲುಗಳು, ಪುರುಷರು ಹಾಗೂ ಸ್ತ್ರೀಯರು ಸ್ವೀಕರಿಸಿದ ಸಲ್ಲೇಖನ ವ್ರತಗಳ ಕುರಿತು ಹಾಗೂ ಬಸದಿ ನಿರ್ಮಾಣ ಕಾರ್ಯದಲ್ಲಿ ಸ್ತ್ರೀಯರು ಪಾಲ್ಗೊಂಡ ರೀತಿ ಇವೆಲ್ಲವುಗಳನ್ನೊಳಗೊಂಡ ವಿಶೇಷವಾದ ಮಾಹಿತಿಯನ್ನು ಇಲ್ಲಿನ ಶಾಸನಗಳಿಂದ ತಿಳಿಯಬಹುದಾಗಿದೆ.

ಕೊಪ್ಪಳವು ಬಹು ಪ್ರಾಚೀನ ಕಾಲದಿಂದಲೂ ಪ್ರಸಿದ್ಧ ಜೈನ ತಾಣವಾಗಿದೆ. "ಕೊಪ್ಪಳವು ತೀರ್ಥಕ್ಷೇತ್ರ, ಆದಿತೀರ್ಥ, ಮಹಾತೀರ್ಥ ಎಂದೆನಿಸಿದಂತೆಯೇ ಬಸದಿಗಳ ಬೀಡು ಎಂದೂ ಹೆಸರುವಾಸಿಯಾಗಿದೆ. ಸ್ಥಳೀಯ ಐತಿಹ್ಯಗಳೂ ಲಭ್ಯಪೂರಕ ಐತಿಹಾಸಿಕ ಆಕರಗಳೂ ಈ ಸಂಗತಿಯ ಸತ್ಯಕ್ಕೆ ಕನ್ನಡಿ ಹಿಡಿದಿವೆ."[8] ಕ್ರಿ.ಶ.9ನೇ ಶತಮಾನದಿಂದಲೇ ಕೊಪ್ಪಳವು ಪ್ರಸಿದ್ಧ ಜೈನ ಕೇಂದ್ರವಾಗಿ ಬೆಳೆಯಿತು. ಕೊಪ್ಪಳ ಜಿಲ್ಲೆಯಲ್ಲಿ ಜೈನಧರ್ಮದ ಉಲ್ಲೇಖ ದೊರೆಯುವುದು ಈ ಶತಮಾನದಿಂದಲೇ. ಮೊದಲನೆಯದಾಗಿ ಕವಿರಾಜ ಮಾರ್ಗದಲ್ಲಿ ಕೊಪ್ಪಳದ ಉಲ್ಲೇಖ ಬಂದರೆ ಎರಡನೆಯದಾಗಿ ಅಜಿತ ಪುರಾಣವು ಅತ್ತಿಮಬ್ಬೆಯ ಧವಲಕೀರ್ತಿ ಕೊಪ್ಪಳದ ಬೆಟ್ಟದಂತೆ ಬೆಳ್ಳಗೆ ಎಂದು ಹೋಲಿಸುವಲ್ಲಿ ಕಂಡು ಬರುತ್ತದೆ. ನಂತರ ರನ್ನ ಕವಿಯ ಸಮಕಾಲೀನನಾದ ಚಾವುಂಡರಾಯನು ತನ್ನ 'ಚಾವುಂಡರಾಯ ಪುರಾಣ'ದಲ್ಲಿ ಕೊಪ್ಪಳದ ಬೆಟ್ಟದ ಕುರಿತಂತೆ ಉಲ್ಲೇಖ ನೀಡಿದ್ದಾನೆ. ಕೊಪ್ಪಳ ಜಿಲ್ಲೆಯ

ಶಾಸನಗಳನ್ನು ಗಮನಿಸಿದಾಗ ಅಲ್ಲಿ ಕಂಡು ಬರುವ ವಿಶೇಷತೆಯೇನೆಂದರೆ ಈ ಪ್ರದೇಶ ಕ್ರಿ.ಶ.14ನೇ ಶತಮಾನದವರೆಗೆ ರಾಜಕೀಯ ಕೇಂದ್ರವಾಗಲಿ, ವ್ಯಾಪಾರಿಕೇಂದ್ರವಾಗಲಿ ಆಗಿರದೆ ಅದೊಂದು ಶುದ್ಧವಾದ ತೀರ್ಥಸ್ಥಾನವಾಗಿ ಮಾತ್ರ ಪ್ರಸಿದ್ಧಿಯನ್ನು ಪಡೆದುಕೊಂಡಿತ್ತು. ಕೊಪ್ಪಳದ ಜೈನಧರ್ಮದ ಬಗ್ಗೆ ಹೇಳುವುದಾದರೆ ಇದು ಜೈನಧರ್ಮದ ಕೇಂದ್ರಸ್ಥಾನವೆಂಬಂತೆ ಶಾಸನಗಳಲ್ಲಿ, ಕಾವ್ಯಗಳಲ್ಲಿ ಚಿತ್ರಿತವಾಗಿದೆ. ಕ್ರಿ.ಶ.10ನೇ ಶತಮಾನದ ಉತ್ತರಾರ್ಧದಿಂದ 11ನೇ ಶತಮಾನದ ಪೂರ್ವಾರ್ಧದವರೆಗಿನ ಶಾಸನಗಳಲ್ಲಿ ಇಲ್ಲಿ ಮುಡಿಪಿ ಪ್ರಾಣವನ್ನು ತೊರೆದ ಸ್ತ್ರೀಯರ ಹಾಗೂ ಮುನಿಗಳ ಕುರಿತು ಮಾಹಿತಿ ದೊರೆಯುತ್ತದೆ. ಹೀಗೆ ಸಾಮಾನ್ಯ ಸ್ತ್ರೀಯರೊಂದಿಗೆ ರಾಜಶ್ರೀ ಪರಿವಾರ, ರಾಜಪೂಜಿತ ಗುರುಗಳು ಸಲ್ಲೇಖನವನ್ನು ಸ್ವೀಕರಿಸಿದುದರಿಂದ ಈ ಸ್ಥಳದ ಹೆಗ್ಗಳಿಕೆ ಹೆಚ್ಚಾಯಿತು. ಮುಂದೆ ಜೈನಧರ್ಮವು ಕ್ರಿ.ಶ.16–17ನೇ ಶತಮಾನದವರೆಗೆ ಈ ನಾಡಿನಲ್ಲಿ ಲೋಕಪ್ರಿಯವೂ ಸುಪ್ರಚಲಿತವೂ ಆಗಿತ್ತೆಂಬುದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ.

ಈ ಜಿಲ್ಲೆಯ ಶಾಸನಗಳಲ್ಲಿ ಅನೇಕ ಜೈನಮುನಿಗಳ ಹೆಸರುಗಳು ಬಳಕೆಯಾಗಿವೆ. ಈ ಜೈನ ಮುನಿಗಳಲ್ಲಿ ಗಣ, ಗಚ್ಛ, ಸಂಘ, ಅನ್ವಯಗಳೆಂಬ ಶಾಖೆಗಳು ಕಂಡುಬರುತ್ತವೆ. ಈ ಜಿಲ್ಲೆಯ ಶಾಸನಗಳಲ್ಲಿ ಎಲ್ಲಾ ಶಾಖೆಗಳ ಮುನಿಗಳ ಕುರಿತು ಮಾಹಿತಿ ದೊರೆತರೂ ಕೊಂಡಕುಂದಾನ್ವಯಕ್ಕೆ ಸೇರಿದ ಮುನಿಗಳ ಕುರಿತು ಹೆಚ್ಚಿನ ಶಾಸನಗಳಲ್ಲಿ ಉಲ್ಲೇಖ ಬಂದಿದೆ. ಕ್ರಿ.ಶ.881ರಲ್ಲಿ ದೊರೆತ ಶಾಸನವು[9] ಕುಣ್ಡಕುನ್ದಾನ್ವಯಕ್ಕೆ ಸೇರಿದ್ದ ಏಕಚಟ್ಟುಗದ ಭಟಾರರ ಶಿಷ್ಯ ಸರ್ವನಂದಿ ಭಟಾರನು ಇಲ್ಲಿದ್ದು ಊರಿನ ತೀರ್ಥಕ್ಕೂ ಉಪಕಾರಿಯಾಗಿ, ಕೆಲವು ಕಾಲ ತಪಸ್ಸನ್ನು ಮಾಡಿ ವ್ರತವನ್ನು ಸ್ವೀಕರಿಸಿ ಮುಡಿಪಿದ. ಈತನು ತನ್ನ ಜೀವಿತದ ಅವಧಿಯಲ್ಲಿ ಸನ್ನಡತೆಯಿಂದ ಬಾಳಿ, ಯಾವಾಗಲೂ ಶಾಸ್ತ್ರದಾನವನ್ನು ಮಾಡುತ್ತಾ ಭೂಮಿಯ ಪಾಪಗಳ ತೊಳೆದ ಆ ಸರ್ವನಂದಿಮುನಿಗೆ ಮಂಗಳವಾಗಲಿ ಎಂದು ಉಲ್ಲೇಖಿಸಿದೆ. ಕ್ರಿ.ಶ.930[10]ರಲ್ಲಿ ಕೊಣ್ಡಕುನ್ದಾನ್ವಯದ ಪದ್ಮನಂದಿಸಿದ್ಧಾಂತ ಭಟಾರರ ಶಿಷ್ಯ ನಯನಂದಿಪಂಡಿತ ಭಟಾರನ ನಿಷಧಿಯನ್ನು ಮಾಡಿದಂತೆ ಕಂಡು ಬಂದಿದೆ. ಕ್ರಿ.ಶ.997ರಲ್ಲಿ[11] ಕೊಣ್ಡಕುನ್ದಾನ್ವಯದ ಪುಸ್ತಕ ಸನ್ತಲೆಯ ಕೀರ್ತಿಸೂರಿಯ ಶಿಷ್ಯ ಅವರಸ್ತೀವಾಸಿ ಗೊಲ್ಲಾಚಾರ್ಯ. ಈ ಗೊಲ್ಲಾಚಾರ್ಯನ ಶಿಷ್ಯ ತ್ರಿಕಾಲಯೋಗಿಯು ತನ್ನ ಅಂತ್ಯಕಾಲದ ಸಮಯದಲ್ಲಿ ಕೊಪಣದ ಜಿನಪಾದಗಳ ಬಳಿ ಕುಳಿತು ತಪಸ್ಸು ಮಾಡಿ ಮುಕ್ತಿಯನ್ನು ಸಾಧಿಸುತ್ತಾನೆ. ಜೈನಧರ್ಮದ ಬಗೆಗಿನ ಭಕ್ತಿಯ ಕುರಿತು ಈತನು ಸಾಧಿಸಿದ ಮಾಹಿತಿ ಈ ರೀತಿ ಬಂದಿದೆ. ಈತನಿಗೆ ಗಣಧರರು, ಶ್ರೇಷ್ಠಉಪಾಸಕರಾದ ಮುನಿಗಳ ಗುಂಪು ಸಮನಾಗಬಹುದೇ ಹೊರತು ಬೇರೆಯವರನ್ನು ಹೋಲಿಸಲು ಬರುವುದಿಲ್ಲ. ಇವನು ಆತಪನ, ತರುಮೂಲ ಮತ್ತು ಶಿಖರವಾಸ ಎಂಬ ಮೂರು ಬಗೆಯ ಯೋಗದಲ್ಲಿ ಸಿದ್ಧಿಪಡೆದಿದ್ದ. ಇವನ ತಪಸ್ಸಿನ ಸ್ಥಿರತೆಯನ್ನು ಕದಲಿಸಲು ಮೋಡಗಳು ಆರ್ಭಟಿಸಿದವು,

ಮಿಂಚು ಸಿಡಿಲುಗಳು ಹೆದರಿಸಿದವು. ಒಂದೇ ಸಮನೆ ಮಳೆ ಸುರಿಯಿತು, ಆದರೂ ಈ ಮುನಿ ಮರದ ಬುಡವನ್ನು ಬಿಟ್ಟು ಕದಲಲಿಲ್ಲ. ಹೀಗೆ ಮೋಕ್ಷವನ್ನು ಸಾಧಿಸಿದ ಗೊಲ್ಲಾಚಾರ್ಯನ ಶಿಷ್ಯ ತ್ರಿಕಾಲಯೋಗಿಯೂ ವರ್ಣಿತನಾಗಿದ್ದಾನೆ. ಕೊಪ್ಪಳದಲ್ಲಿ ದೊರೆತ ಕ್ರಿ.ಶ.1000ದ ಅವಧಿಯ ಶಾಸನ[12] ತ್ರಿಭುವನಚಂದ್ರ ಮುನೀಂದ್ರನು ಮುಕ್ತಿಯನ್ನು ಸಾಧಿಸಿದಂತೆ ತಿಳಿಸುತ್ತದೆ. ಇದರ ಜೊತೆಗೆ ಕೊಂಡಕುನ್ದಾನ್ವಯದ ರವಿಚಂದ್ರ, ಶ್ರುತಸಾಗರ ಮತ್ತು ಗಂಡವಿಮುಕ್ತದೇವನನ್ನು ಹೆಸರಿಸುತ್ತದೆ. ಕ್ರಿ.ಶ.1031ರಲ್ಲಿ[13] ಕೊಂಡ ಕುನ್ದಾನ್ವಯಕ್ಕೆ ಸೇರಿದ ಮೇಘಚಂದ್ರಮುನಿಯು ರತ್ನತ್ರಯವನ್ನು ಸಾಧಿಸಿ ಮುಡಿಪಿದಂತೆ ತಿಳಿದುಬರುತ್ತದೆ. ಜೈನ ಮುನಿಗಳ ಅನ್ವಯ ಶಾಖೆಯಲ್ಲಿ ಬರುವ ಕೊಂಡಕುನ್ದಾನ್ವಯದ ಕುರಿತು ಬಹಳಷ್ಟು ಶಾಸನಗಳು ಮಾಹಿತಿ ನೀಡಿದಂತೆ ಗಣ ಶಾಖೆಯಲ್ಲಿ ಬರುವ ಮುನಿಗಳ ಕುರಿತು ಕೆಲವೊಂದು ಶಾಸನಗಳು ಉಲ್ಲೇಖ ನೀಡಿವೆ.

ಕ್ರಿ.ಶ.1022ರಲ್ಲಿ ದೊರೆತ ಶಾಸನದಲ್ಲಿ[14] ಸೇನಗಣಕ್ಕೆ ಸೇರಿದ ಅಜಿತ ಸೇನಾಚಾರ್ಯನನ್ನು ಈ ರೀತಿ ವರ್ಣಿಸಿದೆ. ಇವನಿಂದ ಭೂಮಿಯ ಮೇಲೆ ಪೆರ್ಮಳೆಗಳು ಸುರಿದವಂತೆ, ಹಸಿವು, ನೀರಡಿಕೆಗಳಿಲ್ಲವಾದುವೆಂದೂ ತನಗೆ ಗೌರವ ನೀಡಿದವರನ್ನು, ನಿಂದಿಸಿದವರನ್ನು ಸಮಾನವಾಗಿ ಕಾಣುತ್ತಿದ್ದನೆಂದು ಶಾಸನ ವರ್ಣಿಸಿದೆ. ಕ್ರಿ.ಶ.1019ರ ಶಾಸನವು[15] ದೇಸಿಗಣದ ರವಿಚಂದ್ರಸೂರಿ ಇವನ ಶಿಷ್ಯ ತ್ರಿಭುವಚಂದ್ರಮುನೀಂದ್ರ. ಈತನ ಶಿಷ್ಯ ಮೋನಿಭಟಾರಕನು ನಿಷದಿಗೆಯನ್ನು ನಿಲ್ಲಿಸಿದಂತೆ ತಿಳಿಸುತ್ತದೆ. ಕ್ರಿ.ಶ.977ರಲ್ಲಿ[16] ದೇಸಿಗಗಣದ ದಿವಾಕರಣನ್ದಿಪಂಡಿತರ ಶಿಷ್ಯೆ ಅಣುಗಬ್ಬೆಯು ಸನ್ಯಾಸನವನ್ನು ಸ್ವೀಕರಿಸಿ ಮುಡಿಪಿದಂತೆ ತಿಳಿದುಬರುತ್ತದೆ. ಇದೇ ದೇಸಿಗಣದ ಶ್ರೀಧರವಿಮುಕ್ತಭಟಾರರ ಶಿಷ್ಯರಾದ ಮಲ್ಲಧಾರಿ ಮುನಿಯು ಜಿನಪದವನ್ನು ನೆನೆಯುತ್ತಾ ಮುಡಿಪನ್ನು ಹೊಂದುತ್ತಾನೆ. ಈತನನ್ನು ಪಾಪವೆಂಬ ಕಂಬವನ್ನು ಮುರಿದು, ಇಂದ್ರಿಯಗಳನ್ನು ಗೆದ್ದು, ಹಗಲು ಇರುಳು ತಪಸ್ಸು ಮಾಡಿ ಸುಚಿತ್ತದಿಂದ ಸುಗತಿಯನ್ನು ಪಡೆದನೆಂದಿದೆ. ಈತನ ತಪಸ್ಸಿನಿಂದ ಮನ್ಮಥ ದೂರ ಉಳಿದ. ಬಾಯಾರಿಕೆ ಇಂಗಿಹೋಯಿತು. ಕರ್ಮ ನಾಶವಾಯಿತು. ಘೋರ ತಪಸ್ಸನ್ನಾಚರಿಸಿ ಜ್ಞಾನವನ್ನು ಪಡೆದು ಪ್ರಾಣವನ್ನು ದೇಹದಿಂದ ಬೇರೆ ಮಾಡಿ ಸುಗತಿಯನ್ನು ಸಾಧಿಸಿದಂತೆ ಶಾಸನವು[17] ತಿಳಿಸುತ್ತದೆ. ಕ್ರಿ.ಶ.1032ರಲ್ಲಿ[18] ದೇಸಿಗಗಣದ ನಯನಂದಿಭಟ್ಟಾರಕರ ಶಿಷ್ಯನಾದ ಗುಣದಬೆಡಂಗನೆಂಬುವವನು ತನ್ನ ಗುರುವಿನ ಸನ್ನಿಧಿಯಲ್ಲಿ ಸನ್ಯಸನವಿಧಿಯಿಂದ ಮುಡಿಪನ್ನು ಹೊಂದುತ್ತಾನೆ. ದೇಸಿಗಣದ ಮಲಧಾರಿ ಭಟ್ಟಾರಕನ ಶಿಷ್ಯನಾಗಿ ನಯನಂದಿ ದೇವನಿರುತ್ತಾನೆ. ಕುಪಣತೀರ್ಥದಲ್ಲಿ ಈತನು ಶರೀರವನ್ನು ತೊರೆಯುತ್ತಾನೆ. ಕೀರ್ತಿವಂತ, ಭುವನಶಾಂತಿಕರ, ಕುಸುಮಾಸ್ತ್ರಭೀಕರನೆಂದು, ಕಾಷಾಯರಹಿತನೆಂದು ಈತನನ್ನು ಶಾಸನದಲ್ಲಿ[19] ವರ್ಣಿಸಿದೆ.

ಮುಂದೆ ಗಚ್ಛಶಾಖೆಯ ಮುನಿಗಳ ಕುರಿತು ಶಾಸನಗಳಲ್ಲಿ ಉಲ್ಲೇಖ ದೊರೆತಿದೆ. ಕೊಪ್ಪಳದಲ್ಲಿ ದೊರೆತ ಶಾಸನವೊಂದರಲ್ಲಿ[20] ಪುಸ್ತಕಗಚ್ಛದ ದೇವೇಂದ್ರಮುನೀಂದ್ರನನ್ನು ಹೆಸರಿಸಿದ್ದು ಇನ್ನೊಂದು ಭಾಗದಲ್ಲಿ ದಾಮನಂದಿ, ತ್ರಿಕಾಳಯೋಗಿ, ಅರ್ಹದ್ದೇವ, ಶ್ರೀಧರದೇವ, ಚನ್ದ್ರನಂದಿ ಮೊದಲಾದವರ ಹೆಸರನ್ನು ಉಲ್ಲೇಖಿಸಿದೆ. ಕ್ರಿ.ಶ.1002ರಲ್ಲಿ ದೊರೆತ ಕೊಪ್ಪಳದ ಶಾಸನವು[21] ಪುಸ್ತಕಗಚ್ಛದ ರವಿಚನ್ದ್ರ, ಇವನ ಶಿಷ್ಯ ದಾಮನಂದಿ, ಇವನ ಶಿಷ್ಯ ಶ್ರೀಧರದೇವನನ್ನು ಹೊಗಳಿದಂತೆ ತಿಳಿಸುತ್ತದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ದೊರೆತ ಶಾಸನವು[22] ಮೂಲ ಸಂಘದ ಮಾದಣದಂಡನಾಯಕ ಕಟ್ಟಿಸಿದ ಬಸದಿಗೆ ರಾಯರಾಜಗುರು ಮಂಡಳಾಚಾರ್ಯ ಶ್ರೀಮತ್ ಮಾಘನಂದಿಸಿದ್ಧಾನ್ತ ಚಕ್ರವರ್ತಿಯ ಪ್ರಿಯಶಿಷ್ಯ ಕೊಪಣತೀರ್ಥರ ಎಮ್ಮೆಯರ ಪ್ರಿಥಿಗೌಡ ಮತ್ತು ಅವನ ಹೆಂಡತಿ ಮಾತಾವೆಯ ಮಗ ಬೋಪಣ್ಣನು ತಮ್ಮ ನೋಂಪಿ ನಿಮಿತ್ತ ಚೌವೀಸ ತೀರ್ಥಂಕರ ಬಿಂಬ ಮೂಡಿಸಿದ ಉಲ್ಲೇಖವನ್ನು ನೀಡಿದೆ. ಇದೇ ತಾಲೂಕಿನ ಯಲಬುರ್ಗಾದಲ್ಲಿ ದೊರೆತ ಶಾಸನದಲ್ಲಿ[23] ಮೂಲಸಂಘ ದೇಸೀಯಗಣದ ಪುಸ್ತಕಗಚ್ಛದ ಯಿಂಗಳೇಶ್ವರ ಬಳಿಯ ಮಾಧವಚಂದ್ರ ಭಟ್ಟಾರಕನ ಶಿಷ್ಯ ರಾಜಧಾನಿ ಎರಂಬರಗೆಯ ಕುಳಾಗ್ರಿ ಸೇನಭೋವ ಆಚಣ್ಣನ ಮಗ ದೇವಣನು ಸಿದ್ಧಚಕ್ರದ ನೋಂಪಿ ಕ್ರುತಪಂಚಮಿ ನೋಂಪಿಗಾಗಿ ಪಂಚಪರಮೇಷ್ಟಿಗಳ ಪ್ರತಿಮೆ ಮಾಡಿಸಿದಂತೆ ತಿಳಿದುಬರುತ್ತದೆ. ಕ್ರಿ.ಶ.13ನೆಯ ಶತಮಾನದಲ್ಲಿ ದೊರೆತ ಶಾಸನವೊಂದರಲ್ಲಿ[24] ಮೂಲಸಂಘದ ದೇಸೀಯಗಣದ ಪುಸ್ತಕಗಚ್ಛದ ಕುಂದ ಕುಂದಾನ್ವಯದ ರೋಣಸಂಬಂಧದ ಎರಂಬರಿಗೆಯ ನಗರ ಜಿನಾಲಯಕ್ಕೆ ಮಿಂಡಗುದಲಿಯ ಕೇತಿಸೆಟ್ಟಿಯ ಮಗ ಮಲ್ಲಿಸೆಟ್ಟಿಯು ಪಾರ್ಶ್ವನಾಥದೇವರ ವಿಗ್ರಹವನ್ನು ಮಾಡಿಸಿದಂತೆ ಮಾಹಿತಿ ನೀಡಿದೆ.

ಹೀಗೆ ಇಲ್ಲಿ ದೊರೆತ ಶಾಸನಗಳಲ್ಲಿ ಅನೇಕ ಜೈನ ಮುನಿಗಳ ವಿವರ ಬಂದಿದ್ದು ಇವರೆಲ್ಲ ಬೇರೆ ಬೇರೆ ಗಣ, ಗಚ್ಛ, ಸಂಘ, ಅನ್ವಯಗಳಿಗೆ ಸೇರಿದವರಾದರೂ ಕೊಂಡಕುಂದ ಅನ್ವಯಕ್ಕೆ ಸೇರಿದವರ ಕುರಿತು ಹೆಚ್ಚಿನ ಮಾಹಿತಿ ದೊರೆತಿರುತ್ತದೆ. ಜೈನಧರ್ಮಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರೋತ್ಸಾಹ ನೀಡುತ್ತಾ ಬಂದವರು ಗಂಗರು. ಸುಮಾರು 10ನೆಯ ಶತಮಾನದ ಅವಧಿಯಿಂದಲೇ ಗಂಗರಲ್ಲಿ ಅನೇಕರು ಜೈನ ಧರ್ಮದ ಅನುಯಾಯಿಗಳಾಗುತ್ತಾ ಬಂದಿದ್ದಾರೆ. ಗಂಗರಾಜ ಭೂತುಗನಿಗೆ ಅನೇಕ ರಾಣಿಯರಿದ್ದರು. ರೇವಕನಿಮ್ಮಡಿ, ಪದ್ಮಬ್ಬರಸಿ, ಬಿಜ್ಜರಸಿ ಹೀಗೆ ಇತ್ಯಾದಿ. ರೇವಕನಿಮ್ಮಡಿ ರಾಷ್ಟ್ರಕೂಟ ಮೂರನೆಯ ಕೃಷ್ಣನ ತಂಗಿ, ಗಂಗರಾಜ ಭೂತುಗ ಈಕೆಯನ್ನು ಮದುವೆಯಾದ ನಂತರ ಮೂರನೆ ಕೃಷ್ಣನು ಬೂತುಗನಿಗೆ ಬೆಳ್ವಲ-300, ಮಾಸವಾಡಿ-140, ಕುಕ್ಕನೂರು-30, ಕೆಳವಾಡಿ-300ನ್ನು ದಾನ ನೀಡಿದಂತೆ ಇಟಗಿಯ ಶಾಸನದಿಂದ[25] ತಿಳಿದು ಬರುತ್ತದೆ. ಹೀಗೆ ಗಂಗರಿಗೆ ಕೊಪ್ಪಳವು ರಾಜಕೀಯವಾಗಿ

ಸಂಬಂಧಿಸಿದಂತೆ ಧಾರ್ಮಿಕವಾಗಿಯೂ ನಿಕಟವಾಗಿ ಸಂಬಂಧಿಸಿದ್ದಿತು. ರಾಷ್ಟ್ರಕೂಟರ ಮಾಂಡಳಿಕರಾಗಿ ಆಡಳಿತ ನಡೆಸುತ್ತಿದ್ದ ಗಂಗರು ಬೂತುಗನ ಮರಣದ ನಂತರ ಪ್ರಾಬಲ್ಯಕ್ಕೆ ಒಳಪಟ್ಟಿತು. ಬೂತುಗನ ಅವಸಾನದಿಂದ ಗಂಗರ ರಾಣಿವಾಸದ ಸ್ತ್ರೀಯರು ತಮ್ಮ ಅಂತ್ಯಕಾಲವನ್ನು ತಲಕಾಡಿನಲ್ಲಿ ಕಳೆಯುವ ಬದಲು ತೀರ್ಥಕ್ಷೇತ್ರವಾದ ಕೊಪ್ಪಳದಲ್ಲಿ ಬಂದು ಕಳೆಯುತ್ತಾರೆ.

ಕ್ರಿ.ಶ.973ರಲ್ಲಿ ದೊರೆತ ಕೊಪ್ಪಳ ಶಾಸನವು[26] ಬೂತುಗನ ಪತ್ನಿ ಪದ್ಮಬ್ಬೆಯು ಎಲ್ಲವನ್ನು ತ್ಯಜಿಸಿ ಕುಪಣಕ್ಕೆ ಬಂದು ದೀಕ್ಷೆಯನ್ನು ಪಡೆದಿದ್ದನ್ನು ತಿಳಿಸುತ್ತದೆ. ಕ್ರಿ.ಶ.976ರಲ್ಲಿ ಪೊಲೆಯಬ್ಬೆಯ ಮಗಳು ಎರೆಯಬ್ಬೆಯ ಸಮಾಧಿಯೋಗದಿಂದ ಸುರಲೋಕಕ್ಕೆ ಸಂದಿರುತ್ತಾಳೆ.[27] ಮಾಂಡಳಿಕ ಮಕುಟ ಚೂಡಾಮಣಿಯ ತಂಗಿಯಾದ ಚಂದಿಬ್ಬರಸಿಯು (ಕ್ರಿ.ಶ.975ರಲ್ಲಿ) ಮುಡಿಪನ್ನು ಹೊಂದುತ್ತಾಳೆ.[28] ಕ್ರಿ.ಶ.1022ರಲ್ಲಿ ದೊರೆತ ಶಾಸನವೊಂದು[29] ಗಂಗಮಂಡಳದ ರಾಜಮಲ್ಲನ ಪತ್ನಿಯಾದ ಕಂಚಿಯಬ್ಬರಸಿ ತನ್ನ ಪತಿಯ ಮರಣದ ನಂತರ ಅಜಿತಸೇನಾಚಾರ್ಯರ ಬಳಿ ದೀಕ್ಷೆ ಪಡೆದು ಕುಪಣತೀರ್ಥದಲ್ಲಿ ಸಮಾದಿ, ವಿಧಿಯಿಂದ ಮುಡಿಪನ್ನು ಹೊಂದಿದಂತೆ ತಿಳಿಸುತ್ತದೆ. ಕ್ರಿ.ಶ.987ರ ಅವಧಿಯಲ್ಲಿ ಕುಂದಣಸಾಯಿ ಹಾಗೂ ಚಂಗಲದೇವಿಯರಿಬ್ಬರೂ ಮುಡಿಪನ್ನು ಹೊಂದುತ್ತಾರೆ.[30] ಗೊನಂಬೆಕಂತಿಯು ಕ್ರಿ.ಶ.992ರಲ್ಲಿ ಮುಡಿಪುತ್ತಾಳೆ. ಈತನ ತಂದೆ ಗಂಗವಂಶದ ಎರೆಯಂಗ,[31] ಕ್ರಿ.ಶ.998ರ ಶಾಸನವು[32] ಬೂತುಗನ ಮಗಳಾದ ಮಾರಸಿಂಗನ ತಂಗಿಯಾದ ಹರಿಗನ ಪತ್ನಿಯಾದ ಜೆಜ್ಜಾಂಬಿಕೆ ಅಥವಾ ಜೆಜ್ಜಬ್ಬರಸಿಯು ಮುಡಿಪವನ್ನು ಹೊಂದಿದಂತೆ ತಿಳಿಸುತ್ತದೆ. ಬೂತುಗನ ಪತ್ನಿ ರೇವಕನಿಮ್ಮಡಿ ಸನ್ಯಸನವಿಧಾನದಿಂದ ರತ್ನತ್ರಯಗಳನ್ನು ಸಾಧಿಸಿದ್ದಂತೆ ಕ್ರಿ.ಶ.1030ರ ಶಾಸನ[33]ದಿಂದ ತಿಳಿದು ಬರುತ್ತದೆ. ಗಂಗ ವಂಶದ ರಾಣಿಯರು ಕೊಪ್ಪಳದಲ್ಲಿ ಬಂದು ಧಾರ್ಮಿಕ ಮರಣವನ್ನು ಹೊಂದಿದರು.

ಕೊಪ್ಪಳದಲ್ಲಿ ದೊರೆತ ಕ್ರಿ.ಶ.984ರ ಶಾಸನವು[34] ಸೋಮದೇವ ಪಂಡಿತನು ಸ್ವರ್ಗವನ್ನೇರಿದಂತೆ ತಿಳಿಸುತ್ತದೆ. ಅಭಯನನ್ದಿಮುನಿಯು ಕುಪಣಕ್ಕೆ ಬಂದು ಸನ್ಯಸವನ್ನು ಸ್ವೀಕರಿಸಿ ಮುಡಿಪನ್ನು (ಕ್ರಿ.ಶ.1005) ಹೊಂದುತ್ತಾನೆ.[35] ಕ್ರಿ.ಶ.975ರಲ್ಲಿ ಸಾಧುಸೇನಪಂಡಿತನು ಕೆಲವು ಕಾಲ ಕುಪಣದಲ್ಲಿದ್ದು, ರಾಜಪೂಜಿತನಾಗಿ ತನ್ನ ಅವಸಾನ ಕಾಲದಲ್ಲಿ ಮಾನ್ಯಖೇಟದ ಏಕಚಟ್ಟುಗದ ಬಸದಿಯಲ್ಲಿ ಸನ್ಯಾಸ ಸ್ವೀಕರಿಸಿ ಮೋಕ್ಷ ಹೊಂದುತ್ತಾನೆ.[36] ದಾಮನಂದಿಯ ಶಿಷ್ಯನಾದ ಸಕಳ ಚಂದ್ರಭಟ್ಟಾರಕನು ಕ್ರಿ.ಶ.11ನೆಯ ಶತಮಾನದಲ್ಲಿ[37] ಮುಡಿಪನ್ನು ಹೊಂದುತ್ತಾನೆ. ಅನೇಕ ವಿಶೇಷ ಗುಣಗಳನ್ನು ಹೊಂದಿದ್ದ ಗಂಡವಿಮುಕ್ತಿದೇವನು ಬಳಗಾರ ಗಣದವನೆಂದೂ, ಸಕಲಾಗಮಜ್ಞನೆಂದೂ ಅನೇಕ ಮಂಡಳಿಕರು ಇವನಿಗೆ ಗೌರವ ನೀಡುತ್ತಿದ್ದರೆಂದು ನಾನಾ ರೀತಿಯಲ್ಲಿ ಹೊಗಳಿದೆ. ಈತ ಮುಡಿಪನ್ನು ಹೊಂದಿದಾಗ

ತ್ರಿಭುವನಚಂದ್ರಸ್ವಾಮಿಯ ಶಿಷ್ಯೆ ಪಿಟ್ಟಬ್ಬೆ ತನ್ನ ಗುರುವಿನ ನೆನಪಿಗಾಗಿ ಕಲ್ಲನ್ನು ನಿಲ್ಲಿಸಿದಂತೆ ಕ್ರಿ.ಶ.977ರ ಶಾಸನ[38] ತಿಳಿಸುತ್ತದೆ. ಕ್ರಿ.ಶ.1031ರಲ್ಲಿ[39] ಮೇಘಚಂದ್ರಮುನಿಯು ರತ್ನತ್ರಯವನ್ನು ಸಾಧಿಸಿ ಮುಡಿಪನ್ನು ಹೊಂದಿದಾಗ ಈತನ ಶಿಷ್ಯ ಇರಷನಂದಿಭಟ್ಟಾರಕನು ನಿಷಧಿಯನ್ನು ನಿಲ್ಲಿಸುತ್ತಾನೆ. ಕೊಪ್ಪಳದಲ್ಲಿ ದೊರೆತ ಶಾಸನವೊಂದರಲ್ಲಿ[40] (ಕಾಲದ ಉಲ್ಲೇಖವಿಲ್ಲ) ಮಳಧಾರಿದೇವನ ಶಿಷ್ಯ ಮಾಘನಂದಿಭಟಾರನು ಸ್ವರ್ಗಕ್ಕೆ ಹೋದ ವಿಷಯವಿದೆ. ಕ್ರಿ.ಶ.11–12ನೆಯ ಶತಮಾನದಲ್ಲಿ ಕುಣಿಕೆನಾಯಕನು ಕುಪಣದಲ್ಲಿದ್ದು ಕೆಲವು ಕಾಲ ತೀರ್ಥೋಪಕಾರಿಯಾಗಿ ಜೀವಿಸಿ ಕುಪಣತೀರ್ಥದಲ್ಲಿ ಚಂದ್ರನಾಥಾಲಯವನ್ನು ಮಾಡಿಸಿದಂತೆ ತಿಳಿದುಬರುತ್ತದೆ.[41]

ಕ್ರಿ.ಶ.1346ರಲ್ಲಿ ದೊರೆತ ಶಾಸನವು[42] ಅನಂತಕೀರ್ತಿಯ ಪ್ರಿಯ ಶಿಷ್ಯನಾದ ಸಿಂಹನಂದ್ಯಾಚಾರ್ಯನ ನಿಸದಿಯನ್ನು ಹರಿಹರ ಮಹಾರಾಜ ಮತ್ತು ಅಲ್ಲಿಯ ಜನರು ಮಾಡಿಸಿದಂತೆ ಮಾಹಿತಿಯನ್ನು ನೀಡಿದೆ. ಕ್ರಿ.ಶ.883ರಲ್ಲಿ ರಾಷ್ಟ್ರಕೂಟ ರಾಜ ಇಂದ್ರನು ಆಳುತ್ತಿದ್ದಾಗ ಅವನ ದಂಡನಾಯಕನಾದ ಮಾಮರಸನು ಸಿದ್ಧಕುಪಣಕ್ಕೆ ತೀರ್ಥವಂದನಾರ್ಥವಾಗಿ ಬಂದಿದ್ದ ಸಮಯದಲ್ಲಿ ಕದಂಬರ ಪೇರ್ಮದೇವ ಮತ್ತು ದಡಿಯರಸರು ಬಸದಿಯನ್ನು ಕಟ್ಟಿಸುತ್ತಾರೆ.[43] ಕ್ರಿ.ಶ.990ರಲ್ಲಿ ಕುಪಣತೀರ್ಥದಲ್ಲಿ ಸನ್ಯಸವನ್ನು ಸ್ವೀಕರಿಸಿ ಮುಡಿಪಿದಳು. ಇವಳು ಜಿನಬಸದಿ, ಜಿನಬಿಂಬ, ಜಿನಾಭಿಷೇಕ ಮೊದಲಾದವನ್ನು ಮಾಡಿಸಿದ್ದಳೆಂದು ಅವಳನ್ನು ಶಾಸನದಲ್ಲಿ ವರ್ಣಿಸಿದೆ.[44] 13ನೇ ಶತಮಾನದಲ್ಲಿ ಕೊಪಣದ ಚಂದ್ರಸೇನ ದೇವರ ಶಿಷ್ಯ ಚಂದ್ರಪ್ಪನು ನಿಷಧಿಯಾಗಿದ್ದಂತೆ ತಿಳಿದು ಬರುತ್ತದೆ.[45] ಕ್ರಿ.ಶ.975ರ ಶಾಸನವು[46] ಸಾಧುಸೇನ ಪಂಡಿತನ ಕುಪಣದಲ್ಲಿ ಸನ್ಯಾಸ ಸ್ವೀಕರಿಸಿ ಮುಡಿಪಿದ ಸಂದರ್ಭದಲ್ಲಿ ಆತನ ಶಿಷ್ಯ ಸಿದ್ದಸೇನಭಟ್ಟಾರಕನು ತನ್ನ ಗುರುವಿನ ನೆನಪಿನಲ್ಲಿ ನಿಷಿಧಿಯನ್ನು ಮಾಡಿಸಿದ್ದಂತೆ ಮಾಹಿತಿ ನೀಡಿದೆ. ಕ್ರಿ.ಶ.990ರ ಅವಧಿಯಲ್ಲಿ ನೇಮಿಚಂದ್ರ ಭಟ್ಟಾರನ ಶಿಷ್ಯೆ ಜಕ್ಕಿಯಬ್ಬೆಯು ಮುಡಿಪನ್ನು ಹೊಂದಿದಾಗ ಈಕೆಯ ಮಗಳಾದ ರೇವಕಬ್ಬೆಯು ತನ್ನ ತಾಯಿಯ ನೆನಪಿಗಾಗಿ ನಿಷಧಿಕಲ್ಲನ್ನು ನಿಲ್ಲಿಸುತ್ತಾಳೆ.[47] ಕ್ರಿ.ಶ.986ರ ಶಾಸನದಲ್ಲಿ[48] ಪಲ್ಲವ ವಂಶದ ರಾಮನ ಪತ್ನಿಯಾದ ರೇವಕಯ್ಯೆ ಸ್ವರ್ಗವನ್ನೇರಿದಳು. ಕ್ರಿ.ಶ.976ರಲ್ಲಿ ಪೊಲಬ್ಬೆಯ ಮಗಳು ಎರೆಯಬ್ಬೆ ಸಮಾಧಿಯೋಗದಿಂದ ಕಂತಿಯು ಸುಗತಿಯನ್ನು ಸಾಧಿಸಿದಳು.[49] ಕ್ರಿ.ಶ.998ರಲ್ಲಿ ಬಯ್ಯಸುರದ ಮಾಕಾಳಯ್ಯನು ಸುಗತಿಯನ್ನು ಸಾಧಿಸಿದಾಗ ಆತನ ತಾಯಿ ಪಿಟ್ಟಕಬ್ಬೆಯು ನಿಸಿದಿಯನ್ನು ಸ್ಥಾಪಿಸಿದಳೆಂದಿದೆ.[50]

ಕೊಪ್ಪಳದಲ್ಲಿ ದೊರೆತ ಕ್ರಿ.ಶ.1008ರ ಶಾಸನದಲ್ಲಿ[51] ಸಿಂಹನಂದಿ ತಮ್ಮಡಿಗಳು ಇಂಗಿಣೀ ಮರಣವನ್ನು ಹೊಂದಿದ್ದನ್ನು ತಿಳಿಸುತ್ತದೆ. ಇವನ ಜೊತೆಗೆ ಸಿಂಹನಂದಿ ಅಣ್ಣ, ಮತಿಸಾಗರ ಅಣ್ಣ, ನಾರಲೋಕ ಮಿತ್ರ, ಬ್ರಹ್ಮಚಾರಿ ಅಣ್ಣ ಎಂಬ ನಾಲ್ವರು ಶಿಷ್ಯರಿದ್ದರು. ಸಾವಿಕುಮಾರ ಎಂಬುವವನು ಬಿಚ್ಚುಕುನ್ದೆ ಗ್ರಾಮದಲ್ಲಿ ನಾಗದೇವನ

ಹೆಸರಿನಲ್ಲಿ ಬಸದಿಯನ್ನು ಕಟ್ಟಿಸಿ ಶಾಂತಿನಾಥನ ಪ್ರತಿಷ್ಠೆಯನ್ನು ಮಾಡಿಸಿದ್ದಂತೆ ತಿಳಿದು ಬರುತ್ತದೆ. ಯಲಬುರ್ಗಾದಲ್ಲಿ ದೊರೆತ ಶಾಸನವು[52] ಮಹಾಮಂಡಳೇಶ್ವರ ವಿಕ್ರಮಾದಿತ್ಯ ದೇವನ ಮಹಾಪ್ರಧಾನ ತಂತ್ರಾಧಿಷ್ಠಾಯಕ ದೇವಣಾರ್ಯನಾಯಕನಿಗೆ ಸಂಬಂಧಿಸಿದ ಸ್ತ್ರೀಯೋರ್ವಳು ಪಾರ್ಶ್ವನಾಥ ಬಸದಿಯನ್ನು ಮಾಡಿಸಿದಂತೆ ತಿಳಿಸುತ್ತದೆ. ಕ್ರಿ.ಶ.13ನೇ ಶತಮಾನದಲ್ಲಿ ದೊರೆತ ಶಾಸನವು[53] ಗೌರಾದೇವಿಯರ ಹಡಪದ ಲಖಾರ್ಯನು ಸಾತಲದೇವಿಯ ಬಸದಿಗೆ ಭೂಮಿಯನ್ನು ದಾನ ನೀಡಿದ. ಹೀಗೆ ದಾನ ನೀಡುವಾಗ ಕೊಪ್ಪಳದಲ್ಲಿದ್ದ ಇತರೆ ಬಸದಿಗಳಾದ ಅರಸಿಯ ಬಸದಿ, ತೀರ್ಥದ ಬಸದಿ, ತಿಂಮ್ಮಬ್ಬರಸಿ ಬಸದಿಯನ್ನು ಹೆಸರಿಸುತ್ತಾನೆ.

ಕ್ರಿ.ಶ.1366ರಲ್ಲಿ ನರೇಂದ್ರಸೇನನ ಪ್ರಿಯಶಿಷ್ಯ ಹಾನಿಯ ಲಖ್ಖಿಸೆಟ್ಟಿಯ ಮಗ ಗೋಪಿಸೆಟ್ಟಿ ನಿಸಿದಿಯಾದಂತೆ ತಿಳಿದು ಬರುತ್ತದೆ.[54] 1371ರ ಅವಧಿಯಲ್ಲಿ ಬಲತ್ಕಾರಗಣದ ಧರ್ಮಭೂಷಣಭಟಾರಕರ ಪ್ರಿಯಶಿಷ್ಯ ಬೂಚಣನು ನಿಷಿದಿಯಾಗಿದ್ದಂತೆ ಗಂಗಾವತಿಯ ಒಂದು ಶಾಸನವು[55] ಉಲ್ಲೇಖಿಸಿದೆ. ಕ್ರಿ.ಶ.1325ರಲ್ಲಿ ಆನೆಗೊಂದಿಯಲ್ಲಿ ಹುಂಗದ ಸೋವಿಸೆಟ್ಟಿಯ ಸೊಸೆ ಸೋವಿಯಕ್ಕ ಮುಡಿಪುತ್ತಾಳೆ. ಈಕೆ ರಾಯರಾಜಗುರು ಮಂಡಳಾಚಾರ್ಯ ಲಲಿತಕೀರ್ತಿ ಭಟ್ಟಾರಕನ ಶಿಷ್ಯೆಯಾಗಿರುತ್ತಾಳೆ.[56] ಕ್ರಿ.ಶ.1342ರಲ್ಲಿ ಬುಕ್ಕರಾಯನ ಮಗ ಹರಿಹರನ ದಂಡನಾಯಕನಾದ ಬೈಚದಂಡನಾಯಕನ ಮಗ ಇರುಗಪನು ಆನೆಗೊಂದಿಯಲ್ಲಿ ಕಲ್ಲಿನಲ್ಲಿ ಬಸದಿಯನ್ನು ನಿರ್ಮಿಸುತ್ತಾನೆ.[57]

ಜೈನ ಧರ್ಮವು ಕೊಪ್ಪಳದಲ್ಲಿ ಪಡೆದಿದ್ದ ಭದ್ರವಾದ ಸ್ಥಾನವನ್ನು ಇಲ್ಲಿಯ ಶಾಸನಗಳ ಮೂಲಕ ತಿಳಿಯಬಹುದಾಗಿದೆ. ಅತ್ಯಂತ ಪ್ರಾಚೀನ ಕಾಲದಿಂದಲೇ ಜೈದಧರ್ಮದ ಬೀಡಾಗಿದ್ದ ಕೊಪ್ಪಳವು ವಿವಿಧ ಅರಸು ಮನೆತನಗಳ ಪ್ರಭಾವಕ್ಕೊಳಪಟ್ಟಿತ್ತು. ಪ್ರಮುಖ ಅರಸುಮನೆತನಗಳ ಪ್ರೋತ್ಸಾಹದಿಂದ ಇಲ್ಲಿ ಜೈನಧರ್ಮ ಬಹು ಕಾಲದವರೆಗೆ ಪ್ರಚಲಿತವಿದ್ದು ಇಲ್ಲಿ 770 ಬಸದಿಗಳಿದ್ದವೆಂಬುದನ್ನು ನೋಡಿದರೆ ಇಲ್ಲಿ ಜೈನಧರ್ಮದ ಸ್ಥಿತಿಯ ಮನವರಿಕೆಯಾಗುತ್ತದೆ. ಚಂದ್ರವಳ್ಳಿಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ 'ಕುಪಣ' 7–8ನೆಯ ಶತಮಾನದಲ್ಲಿ ಸಾಹಿತ್ಯಕ್ಷೇತ್ರದಲ್ಲಿ ಪ್ರಬುದ್ಧಾವಸ್ಥೆಯನ್ನು ತಲುಪಿದ 'ವಿದಿತ ಮಹಾಕೊಪಣನಗರ'ವು ಮೊದಲಿನಿಂದಲೂ ಸರ್ವಧರ್ಮಗಳಲ್ಲಿ ಸಮಾನತೆಯನ್ನು ಸಾಧಿಸಿಕೊಂಡು ಬಂದಿದ್ದು ಭಾವೈಕ್ಯತೆಯ ತವರೂರು ಆಗಿದ್ದನ್ನು ಕಾಣುತ್ತೇವೆ.

# ಜೈನಧರ್ಮದ ಯತಿಗಳ ಪಟ್ಟಿ

| ಕ್ರ.ಸಂ. | ಕ್ರಿ. ಶ. | ಮುನಿಯ ಹೆಸರು | ಅನ್ವಯ/ಗಣ/ಗಚ್ಛ | ಶಿಷ್ಯ ಪರಂಪರೆ | ಊರು |
|---|---|---|---|---|---|
| ೧. | ೮೮೧ | ಏಕಚಟ್ಟು ಗದಭಟಾರ | ಕೊಂಡಕುಂದ | ಸರ್ವನಂದಿ | ಕೊಪ್ಪಳ |
| ೨. | ೯೧೭ | .................... | ಕಾಣೂರು ಗಣ | .................... | .................... |
| ೩. | ೯೩೧ | ಪದ್ಮನಂದಿಸಿದ್ಧಾಂತ | ಕೊಂಡುಕಂದ | .......ಭದ್ರಪಂಡಿತ | ಕುಪಣ |
| ೪. | ೯೬೪ | ನಂದಿಭಟಾರ | ಸಾರಸ್ವಗಣ | ವಿನಯನಂದಿಭಟಾರ | ಕುಪಣ |
| | | ವಿನಯನಂದಿ | .........”......... | ನಾಗನಂದಿಪಂಡಿತ | – |
| ೫. | ೯೭೧ | ಮಹೇಂದ್ರದೇವ | ................... | ವಾಧೀಭಸಿಂಹ | ಕುಪಣ |
| ೬. | ೯೭೪ | ಶ್ರೀಧರವಿಮುಕ್ತಭಟಾರ | ಕೊಂಡಕುಂದ ದೇಸಿಗಗಣ | ಮಲಧಾರಿಮುನೀಶ್ವರ | ಕುಪಣ/ಅಣ್ಣಿಗೆರೆ |
| ೭. | ೯೭೪ | ಬುದ್ಧಸೇನಪಂಡಿತ | ಸೇನಗಣ | ಸಾಧುಸೇನಪಂಡಿತ | ಮಳಖೇಡ |
| | | ಸಾಧುಸೇನಪಂಡಿತ | .........”......... | ಸಿದ್ಧಸೇನಪಂಡಿತ | |
| ೮. | ೯೭೭ | ದಿವಾಕರಣಂದಿಪಂಡಿತ | ಕೊಂಡಕುಂದ | | ಕೊಪ್ಪಳ |
| ೯. | ೯೭೭ | ಗಂಡವಿಮುಕ್ತದೇವ | ಬಳಗಾಅಗಣ | ತ್ರಿಭುವನಚಂದ್ರ | ಕೊಪ್ಪಳ |
| ೧೦. | ೯೮೩ | ಸೋಮಪಂಡಿತ (ಸೋಮದೇವಸೂರಿ) | .................. | ................. | ಕೊಪ್ಪಳ |
| ೧೧. | ೯೮೭ | ಮಲಧಾರಿದೇವ | .................. | ................. | ಕೊಪ್ಪಳ |
| ೧೨. | ೯೮೭ | ಶ್ರೀಚಂದ್ರಭಟ್ಟಾಕರ | .................. | ................. | ಕೊಪ್ಪಳ |
| ೧೩. | ೯೯೧ | ನೇಮಿಚಂದ್ರಭಟ್ಟಾರಕ | ಕೊಂಡಕುಂದ ಬೆಳ್ಗುಂಡುಗಣ | ................. | ಕೊಪ್ಪಳ |
| ೧೪. | ೯೯೭ | ಮಳಧಾರಿದೇವ | .................. | ಶ್ರೀಧರಭಟ್ಟಾರಕ | ಕೊಪ್ಪಳ |
| ೧೫. | | ಕೀರ್ತಿಸೂರಿ | ಕೊಂಡಕುಂದ ಪುಸ್ತಕ ಸಂತತಿ | ಬೀರಣಂದ್ಯಾಚಾರ್ಯ | |

| ಕ್ರ.ಸಂ. | ಕ್ರಿ. ಶ. | ಮುನಿಯ ಹೆಸರು | ಅನ್ವಯ/ಗಣ/ಗಚ್ಛ | ಶಿಷ್ಯ ಪರಂಪರೆ | ಊರು |
|---|---|---|---|---|---|
| | | ಬೀರಣಂದ್ಯಾಚಾರ್ಯ | ........"......... | ಗೊಲ್ಲಾಚಾರ್ಯ | ಕೊಪ್ಪಳ |
| | ೯೯೭ | ಗೊಲ್ಲಾಚಾರ್ಯ | ........"......... | ತ್ರಿಕಾಳಯೋಗಿ | ಕೊಪ್ಪಳ |
| ೧೬. | ೧೦ನೇ ಶ | ಜಟಾಸಿಂಗನದಿ | ........"......... | .................... | ............... |
| ೧೭. | ೧೦ನೇ ಶ | ಪೂರ್ಣಚಂದ್ರಯೋಗಿ | .................... | ಅಭಿನಂದಯ್ಯ | ಕೊಪ್ಪಳ |
| ೧೮. | ೧೦ನೇ ಶ | ಮೋನಿದೇವ | .................... | .................... | ಕೊಪ್ಪಳ |
| ೧೯. | | ಜಯನಂದಿಸಿದ್ಧಾಂತ | ಬಳಗಾಅಗಣ | ಮಾಣಿಕ್ಯನಂದಿ | ............... |
| | | ಮಾಣಿಕ್ಯನಂದಿ | ಬಳಗಾಅಗಣ | ಅಭಯನಂದಿ | ............... |
| | ೧೦೦೪ | ಅಭಯನಂದಿ | ಬಳಗಾಅಗಣ | ಜಿನಚಂದ್ರಮುನಿ | ಕೊಪ್ಪಳ |
| ೨೦. | ೧೦೦೮ | ಸಿಂಹನಂದಿ | ........"......... | ಕಲ್ಯಾಣಕೀರ್ತಿ | ಕೊಪ್ಪಳ |
| ೨೧. | | ಮಾಗನಂದಿ | ........"......... | .................... | ................ |
| ೨೨. | | ನಂದಿಮುನೀಂದ್ರ | .................... | .................... | ............... |
| ೨೩. | ೧೦೧೦ | ನೇಮಿದೇವ | .................... | ಚಂದ್ರಪ್ರಭದೇವ? | ಕೊಪ್ಪಳ |
| ೨೪. | | ರವಿಚಂದ್ರ | ಕೊಂಡಕುಂದೆ ಪುಸ್ತಕಗಚ್ಛ | ಪೂರ್ಣಚಂದ್ರ | ............... |
| | | ಪೂರ್ಣಚಂದ್ರ | ........"......... | ದಾಮನಂದಿ | |
| | | ದಾಮನಂದಿ | ........"......... | ಶ್ರೀಧರದೇವ | ಕೊಪ್ಪಳ |
| | ೧೦೧೩ | ಶ್ರೀಧರದೇವ | ........"......... | .................... | ಕೊಪ್ಪಳ |
| ೨೫. | ೧೦೨೩ | ನೇಮಿಚಂದ್ರ | ........"......... | ಅಭಯನಂದಿಪಂಡಿತ | ಕೊಪ್ಪಳ |
| | | ಅಭಯನಂದಿಪಂಡಿತ | ........"......... | ನೇಮಿಚಂದ್ರಸಿದ್ಧಾಂತಿ | ಕೊಪ್ಪಳ |
| | | ನೇಮಿಚಂದ್ರಸಿದ್ಧಾಂತಿ | ........"......... | .................... | ಕೊಪ್ಪಳ |
| ೨೬. | ೧೦೨೩ | ಅಜಿತಸೇನಾಚಾರ್ಯ | ಸೇನಗಣ | ನರೇಂದ್ರಸೇನಪಂಡಿತ | ಕೊಪ್ಪಳ |

| ಕ್ರ.ಸಂ. | ಕ್ರಿ. ಶ. | ಮುನಿಯ ಹೆಸರು | ಅನ್ವಯ/ಗಣ/ಗಚ್ಛ | ಶಿಷ್ಯ ಪರಂಪರೆ | ಊರು |
|---|---|---|---|---|---|
| | | ನರೇಂದ್ರಸೇನಪಂಡಿತ | ಸೇನಗಣ | ನರೇಂದ್ರಸೇನಪಂಡಿತ | ಕೊಪ್ಪಳ |
| ೨೭. | | ಗೊಲ್ಲಾಚಾರ್ಯ | ಕೊಂದಕುಂದೆ<br>ದೇಸಿಗಗಣ | ಪದ್ಮನಂದಿಸಿದ್ಧಾಂತಿ | ಕೊಪ್ಪಳ |
| | ೧೦೨೮ | ಪದ್ಮನಂದಿಸಿದ್ಧಾಂತಿ | ........"......... | ಇಂದ್ರನಂದಿಸಿದ್ಧಾಂತಿ | ಕೊಪ್ಪಳ |
| ೨೮. | ೧೦೩೦ | ಮೇಘಚಂದ್ರಮುನೀಂದ್ರ | .................. | ತಿರುಷನಂದಿ | ಕೊಪ್ಪಳ |
| ೨೯. | ೧೦೩೦ | ಶ್ರೀಧರದೇವ | .................. | ................ | ಕೊಪ್ಪಳ |
| ೩೦. | | ನಯಕೀರ್ತಿ | ಕೊಂಡಕುಂದ<br>ದೇಸಿಗಗಣ | (೧) ಅಣ್ಣಿಗೆರೆಯ<br>ಮಲಧಾರಿದೇವ<br>(೨)ಅರಸಿಬೀಡಿನ<br>ನೇಮಿಚಂದ್ರಸಿದ್ಧಾಂತಿ<br>(೩)ಮೇಘಚಂದ್ರಸಿದ್ಧಾಂತಿ<br>(೪)ಶ್ರುತಕೀರ್ತಿದೇವ | ಅಣ್ಣಿಗೆರೆ<br><br><br>...................<br>................... |
| ೩೧. | ೧೦೩೩ | ಇಂದ್ರನಂದಿ | ಕೊಂಡಕುಂದ | ................... | ................... |
| ೩೨. | ೧೦೩೭ | ಚಂದ್ರಕೀರ್ತಿಭಟಾರ | ........"......... | ................... | ................... |
| | | ಮಳಧಾರಿಮುನಿ | ........"......... | ವರ್ಧಮಾನಸಿದ್ಧಾಂತಿ | ................... |
| | | ವರ್ಧಮಾನಸಿದ್ಧಾಂತಿ | ........"......... | ಸಕಳಚಂದ್ರಸಿದ್ಧಾಂತಿ | ................... |
| | | ಸಕಳಚಂದ್ರ | ........"......... | ? | |
| ೩೩. | | ರವಿಚಂದ್ರಸೂರಿ | ಕೊಂಡಕುಂದಾನ್ವಯ<br>ನಂದಿಗಣದ ದೇಸಿಗಣ | ತ್ರಿಭುವನಚಂದ್ರಮುನಿ | ................... |
| | | ತ್ರಿಭುವನಚಂದ್ರಮುನಿ | ........"......... | ಮೋನಿದೇವ | ಕೊಪ್ಪಳ |

| ಕ್ರ.ಸಂ. | ಕ್ರಿ. ಶ. | ಮುನಿಯ ಹೆಸರು | ಅನ್ವಯ/ಗಣ/ಗಚ್ಛ | ಶಿಷ್ಯ ಪರಂಪರೆ | ಊರು |
|---|---|---|---|---|---|
| | ೧೦೫೯ | ಮೋನಿದೇವ | ........"......... | ................ | ಕೊಪ್ಪಳ |
| ೩೪. | ೧೧ನೇ ಶ | ದಾಮನಂದಿ | ಕೊಂಡಕುಂದ<br>ದೇಶಿಕಗಣ ಪುಸ್ತಕಗಚ್ಛ | ತ್ರಿಕಾಳಯೋಗಿ | ಕೊಪ್ಪಳ |
| | | ತ್ರಿಕಾಳಯೋಗಿ | ........"......... | ಶ್ರೀಧರದೇವ | ಕೊಪ್ಪಳ |
| | | ಶ್ರೀಧರದೇವ | ........"......... | ಚಂದ್ರಣಂದಿ | ಕೊಪ್ಪಳ |
| | | ಚಂದ್ರಣಂದಿ? | ........"......... | ದೇವೇಂದ್ರಮುನಿ | ಕೊಪ್ಪಳ |
| ೩೫. | ೧೧ನೇ ಶ | ಚಂದ್ರನಂದಿಸಿದ್ಧಾಂತಿ | .................. | ಸಕಳಚಂದ್ರಮುನಿ | ಕೊಪ್ಪಳ |
| | | ಸಕಳಚಂದ್ರ | .................. | ದಾಮನಂದಿ | |
| ೩೬. | ೧೧ನೇ ಶ | ಮಳಧಾರಿದೇವ | .................. | ಮಾಘನಂದಿಭಟಾರ | ಕೊಪ್ಪಳ |
| ೩೭. | ೧೧ನೇ ಶ | ಮಲಧಾರಿದೇವ | ಕೊಂಡಕುಂದೆ<br>ದೇಸಿಗಗಣ | ನಯನಂದಿದೇವ | ಕೊಪ್ಪಳ |
| ೩೮. | ೧೧ನೇ ಶ | ಸಾಗರಣಂದಿ | ? | ........... | ............ |
| ೩೯. | ೧೧ನೇ ಶ | ರವಿಚಂದ್ರದೇವ | ಕೊಂಡಕುಂದ | ಗಂಡವಿಮುಕ್ತದೇವ | ............ |
| | | ಗಂಡವಿಮುಕ್ತದೇವ | ........."........ | ತ್ರಿಭುವನಚಂದ್ರ | ಕೊಪ್ಪಳ |
| ೪೦. | ೧೧ನೇ ಶ | ಮಾಘನಂದಿ | .................. | .................. | ಕೊಪ್ಪಳ |
| ೪೧. | ೧೧ನೇ ಶ | ಮೇಘನಂದಿಭಟಾರ | .................. | .................. | ಕೊಪ್ಪಳ |
| ೪೨. | ೧೩ನೇ ಶ | ಮಾಘನಂದಿಸಿದ್ಧಾಂತದೇವ | ಮೂಲಸಂಘ ದೇಸಿಗಣ | .................. | ಯಲಬುರ್ಗ |
| ೪೩. | ೧೩ನೇ ಶ | ಮಾಧವಚಂದ್ರಭಟ್ಟಾರಕ | ಮೂಲಸಂಘ ದೇಸಿಗಣ<br>ಪುಸ್ತಕಗಚ್ಛ<br>ಯಿಂಗಳೇಶ್ವರದ ಬಳಿ | .................. | ಯಲಬುರ್ಗ |

| ಕ್ರ.ಸಂ. | ಕ್ರಿ. ಶ. | ಮುನಿಯ ಹೆಸರು | ಅನ್ವಯ/ಗಣ/ಗಚ್ಛ | ಶಿಷ್ಯ ಪರಂಪರೆ | ಊರು |
|---|---|---|---|---|---|
| ೪೪. | ೧೩ನೇ ಶ | ರಾಯಚಾರ್ಯ | ಮೂಲಸಂಘ ಕೊಂಡಕುಂದ ದೇಸಿಕಾಗಣ ಪುಸ್ತಕಗಚ್ಛ | .................. | ಯಲಬುರ್ಗ |
| ೪೫. | ೧೩ನೇ ಶ | ಶ್ರೀಪಾಳತ್ರೈವಿದ್ಯದೇವ | .................. | .................. | ಕೊಪ್ಪಳ |
| ೪೬. | ೧೩ನೇ ಶ | ಚಂದ್ರಸೇನದೇವ | .................. | .................. | ಕೊಪ್ಪಳ |
| ೪೭. | ೧೩ನೇ ಶ | ಪೂಜ್ಯಪಾದಸ್ವಾಮಿ | .................. | ................. | ಕೊಪ್ಪಳ |
| ೪೮. | ೧೩೪೩ | ಸಿಂಗನಂದ್ಯಾಚಾರ್ಯ | ಕೊಂಡಕುಂದ ದೇಸಿಗಗಣ | ................ | ಕೊಪ್ಪಳ |
| | ೧೩೪೩ | ಸಿಂಹನಂದ್ಯಾರ್ಯ್ಯ | ........”......... | ಧರ್ಮಭೂಷಣ | ಆನೆಗೊಂದಿ |
| | | ಧರ್ಮಭೂಷಣ | ........”......... | ................. | ಆನೆಗೊಂದಿ |
| ೪೯ | ೧೩೪೬ | ಅನಂತಕೀರ್ತಿ | ಮೂಲಸಂಘ ಬಲತ್ಕಾರಗಣ ಸರಸ್ವತಿಗಚ್ಛ | ಸಿಂಹನಂದ್ಯಾಚಾರ್ಯ | ಕೊಪ್ಪಳ |
| ೫೦. | ೧೩೫೨ | ಲಲಿತಕೀರ್ತಿ | .................. | ....................... | ಆನೆಗೊಂದಿ |
| ೫೧. | ೧೩೫೭ | ಬಾಲಚಂದ್ರಯೋಗಿ | .................. | ...................... | ಆನೆಗೊಂದಿ |
| ೫೨. | ೧೩೬೬ | ನರೇಂದ್ರದೇವ | ಮೂಲಸಂಘ ದೇಸಿಗಗಣಾಗ್ರ | ...................... | ಆನೆಗೊಂದಿ |
| ೫೩. | ೧೩೭೧ | ಧರ್ಮಭೂಷಣಭಟ್ಟಾರಕ | ಬಲಾತ್ಕಾರಗಣ | ....................... | ಆನೆಗೊಂದಿ |
| ೫೪. | ೧೩೭೫ | ಮದನಕೀರ್ತಿ ರವುಳ | ...........”.......... | ...................... | ಆನೆಗೊಂದಿ |
| ೫೫. | ೧೪ನೇ ಶ | ......ದೇವಭಟ್ಟ | ಮೂಲಸಂಘ ಸೇನಗಣ | ...................... | ಕೊಪ್ಪಳ |
| ೫೬. | ೧೪ನೇ ಶ | ದೇವೇಂದ್ರಕೀರ್ತಿ ಭಟ್ಟಾರಕ | ....................... | ..................... | ಕೊಪ್ಪಳ |
| ೫೭. | | ಗುಣಭೂಷಣ | ಕೊಂ.ಕುಂ.ನಂದಿಸಂಘ | ಅಮರಕೀರ್ತಿ | ಆನೆಗೊಂದಿ |
| | | ಅಮರಕೀರ್ತಿ | ......”...... | ಸಿಂಹನಂದಿ | ಆನೆಗೊಂದಿ |

ಆಧಾರ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨ ಕೊಪ್ಪಳ ಜಿಲ್ಲೆ

**ವೈಷ್ಣವಧರ್ಮ:**

ಕರ್ನಾಟಕದ ದಕ್ಷಿಣ ಭಾಗದಲ್ಲಿ ರಾಮಾನುಜರ ಆಗಮನದಿಂದ ಹಾಗೂ ಅವರ ಬೆಂಬಲದಿಂದ ಶ್ರೀವೈಷ್ಣವ ಧರ್ಮ ಕ್ರಮೇಣ ವೃದ್ಧಿಸುತ್ತಾ ಬಂದಿತು. "ಜೈನ ಹಾಗೂ ಶೈವರ ಒತ್ತಡದಿಂದ ಒಂದೊಮ್ಮೆ ಹಿಂದಕ್ಕೆ ನೂಕಲ್ಪಟ್ಟರೂ 12–13ನೆಯ ಶತಮಾನದ ಸುಮಾರಿಗೆ ಅದು ತನ್ನ ಸ್ಥಾನವನ್ನು ಮರಳಿ ಗಳಿಸಿಕೊಂಡು, ಅತ್ಯಂತ ಜನಪ್ರಿಯ ಧರ್ಮಗಳೆರಡರಲ್ಲೊಂದಾಗಿತ್ತು. ಹನ್ನೆರಡನೆಯ ಶತಮಾನದಲ್ಲಿ ರಾಮಾನುಜರು ಕರ್ನಾಟಕಕ್ಕೆ ಬಂದಾಗ ಮತ್ತು ಹದಿಮೂರನೆಯ ಶತಮಾನದಲ್ಲಿ ಮಧ್ವಾಚಾರ್ಯರು ತಮ್ಮ ಮತ ಪ್ರಚಾರ ಕೈಗೊಂಡನಂತರ ವೈಷ್ಣವ ಮತದ ಶಾಖೆಗಳು ಸಾಕಷ್ಟು ಪ್ರಭಾವ ಬೀರಿ ಕನ್ನಡ ನಾಡಿನ ಸಮಾಜ, ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಯ ಮೇಲೆ ಕ್ರಮೇಣ ತಮ್ಮ ಮುದ್ರೆಯನ್ನೊತ್ತಿದ್ದವು."[58]

ತಮಿಳುನಾಡಿನಿಂದ ರಾಮಾನುಜಾಚಾರ್ಯರು 12ನೇ ಶತಮಾನದಲ್ಲಿ ಕರ್ನಾಟಕಕ್ಕೆ ಬಂದ ಮೇಲೆ ವೈಷ್ಣವಧರ್ಮದ ಬ್ರಾಹ್ಮಣರು ಅಗ್ರಹಾರದ ಮಹಾಜನರೆನಿಸಿ ಅಲ್ಲಿನ ಆಡಳಿತ ನೋಡಿಕೊಳ್ಳುವುದರೊಂದಿಗೆ ಯಜನ, ಯಾಜನ, ದಾನ, ಅಧ್ಯಯನ, ಅಧ್ಯಾಪನ, ಪರಿಗ್ರಹ ಮೊದಲಾದ ಷಟ್ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು. ಇಂತಹ ಮಹಾಜನರ ಕುರಿತು ಇಲ್ಲಿಯ ಶಾಸನಗಳಲ್ಲಿ ಉಲ್ಲೇಖ ಮೂಡಿಬಂದಿದೆ.

ಮಹಾಜನರು ಅಗ್ರಹಾರಗಳಲ್ಲಿ ನೆಲೆಸುತ್ತಿದ್ದು ವ್ಯಾಕರಣ, ಸ್ಮೃತಿ, ಕಾವ್ಯ, ವಾತ್ಸಾಯನ, ವೇದಾಧ್ಯಯನ ಮುಂತಾದ ವಿಷಯಗಳಲ್ಲಿ ಪರಿಣಿತರಾದ ಇವರು ಇತರರಿಗೂ ವಿದ್ಯೆಯನ್ನು ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಕ್ರಿ.ಶ.1157ರಲ್ಲಿ ದೊರೆತ ಕೊಪ್ಪಳ ಶಾಸನದಲ್ಲಿ[59] ಅಲ್ಲಿದ್ದ ಮಹಾಜನರ ಸಂಖ್ಯೆ 400 ಎಂದು ಉಲ್ಲೇಖಗೊಂಡಿದೆ. ಇವರು ಸ್ಮೃತಿ, ಪುರಾಣ, ತರ್ಕ, ನಾಟಕ ಮುಂತಾದವುಗಳ ಬಗ್ಗೆ ತಿಳಿದವರಾಗಿದ್ದರು. ಇದೇ ತಾಲೂಕಿನಲ್ಲಿ ದೊರೆತ ಕ್ರಿ.ಶ.1182ರ ಶಾಸನವು[60] ಅಳವಂಡಿಯಲ್ಲಿ 400 ಮಹಾಜನರು ನೆಲೆಸಿದ್ದಂತೆ ತಿಳಿಸುತ್ತದೆ. ಇಲ್ಲಿಯ ಮಹಾಜನರು 14 ಗದ್ಯಾಣ ಹಾಗೂ 2 ಮನೆಗಳನ್ನು ಮಲ್ಲಿಕಾರ್ಜುನ ಬೋವನಿಗೆ ದಾನಬಿಟ್ಟಂತೆ ತಿಳಿದು ಬರುತ್ತದೆ. ಕೊಪ್ಪಳ ಜಿಲ್ಲೆಯ ಮುಧೋಳದಲ್ಲಿ ದೊರೆತ ಶಾಸನವು[61] ಅಲ್ಲಿಯ ಮಹಾಜನರನ್ನು ವಿಶೇಷವಾಗಿ ವರ್ಣಿಸಿದೆ. ಇಲ್ಲಿಯ ಮಹಾಜನರು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಜಪಸಮಾಧಿ, ಪರಾಯಣ, ಮೌನಾನುಷ್ಠಾನ ಮುಂತಾದವುಗಳಲ್ಲಿ ಕುಶಲರೆನಿಸಿದ್ದರು. ಆದ್ದರಿಂದ ಇವರನ್ನು ಷಟ್ಕರ್ಮನಿರತರಾಗಿದ್ದರೆಂದು ಶಾಸನ ಬಣ್ಣಿಸಿದೆ. ಅಲ್ಲದೆ ಇವರನ್ನು ಶ್ರೀಸ್ವಯಂಭು ಜಡೆಯಶಂಕರದೇವರ ಪಾದಾರಾಧಕರು ಎಂದು ಕರೆದಿದೆ.

ಯಲಬುರ್ಗಾ ತಾಲೂಕಿನ ಕುಕನೂರಿನ ಶಾಸನವೊಂದು[62] ಅತ್ಯಂತ

ಪ್ರಮುಖವೆನಿಸಿದ್ದು ಇಲ್ಲಿಯ ಮಹಾಜನರ ಸಂಖ್ಯೆ ಸಾವಿರ ಎಂದು ಗುರುತಿಸುತ್ತದೆ. ಇವರೆಲ್ಲರೂ ವೇದಪ್ರತಿಭಾವಂತರೆನಿಸಿಕೊಂಡಿದ್ದು ಸಕಳ ಶಾಸ್ತ್ರಗಳಲ್ಲಿ ನಿಪುಣರೆನಿಸಿದ್ದರು. ವೇದ, ಸ್ಮೃತಿ, ತರ್ಕ, ವ್ಯಾಕರಣ, ಪುರಾಣ, ಕಾವ್ಯ, ನಾಟಕ ಈ ಮುಂತಾದ ವಿಷಯಗಳಲ್ಲಿ ಪಾಂಡಿತ್ಯರೆನಿಸಿಕೊಂಡಿದ್ದರು. ಕೊಪ್ಪಳ ತಾಲೂಕಿನ ಮಾದಿನೂರಿನಲ್ಲಿ ದೊರೆತ ಕ್ರಿ.ಶ.1190ರ ಶಾಸನದಲ್ಲಿ[63] ನೂರ್ಮಡಿತೇಜ ಆಹವಮಲ್ಲನು ಬ್ರಹ್ಮಾಂಡಕ್ರತುವನ್ನು ಮಾಡಿಸಿದ ಸಮಯದಲ್ಲಿ ಬ್ರಾಹ್ಮಣರಿಗೆ ಮೊದೆಯನೂರನ್ನು ದಾನವಾಗಿ ಕೊಡುತ್ತಾನೆ. ಈ ದಾನವನ್ನು ದ್ವೇದಿಚಟ್ಟೋಪಾಧ್ಯಾಯನು ಪಡೆದು ಆ ಊರಿನ 20 ಮಹಾಜನರ ಕಾಲನ್ನು ತೊಳೆದು ಅವರನ್ನು ಗೌರವಿಸಿದ್ದನ್ನು ತಿಳಿಸುತ್ತದೆ. ಬಳಿಗೆರಿಯಲ್ಲಿ ದೊರೆತ ಶಾಸನವು[64] ಬಳಂಗೆರೆಯಲ್ಲಿ ನೆಲೆಸಿದ ಮುನ್ನೂರು ಮಹಾಜನರನ್ನು ಕುರಿತು ವಿವರಿಸಿದೆ. ಇವರು ಸಕಲವೇದ ಪಾರಂಗತರಾಗಿದ್ದರೆಂದು ಶಾಸನ ಹೊಗಳಿದೆ. ಹೀಗೆ ವೈದಿಕಧರ್ಮವು ಮಹಾಜನ ಸಂಸ್ಥೆಯನ್ನು ರೂಪಿಸುವುದರ ಮೂಲಕ ಕರ್ನಾಟಕದಲ್ಲಿ ಅತ್ಯಂತ ಹೆಚ್ಚಿನ ಪ್ರಭಾವ ಬೀರಿತ್ತೆಂದು ಹೇಳಬಹುದಾಗಿದೆ.

ಈ ಧರ್ಮ ರಾಜರಿಂದ ಹಾಗೂ ಅಧಿಕಾರ ವರ್ಗದವರಿಂದಲೂ ಪ್ರೋತ್ಸಾಹ ಪಡೆದಿದ್ದನ್ನು ಕಾಣುತ್ತೇವೆ. ಕ್ರಿ.ಶ.1097ರಲ್ಲಿ ದೊರೆತ ಶಾಸನದಲ್ಲಿ[65] ಸೋಮಯಾಜಿ ಎಂಬುವವನು ಆಹವಮಲ್ಲನ ಕಾಲದಲ್ಲಿ ವಿಷ್ಣು ದೇವಾಲಯವನ್ನು ಕಟ್ಟಿಸುತ್ತಾನೆ. ಮುಂದುವರೆದ ಸಾಲುಗಳು ಶಾನ್ತಿಕಬ್ಬೆ ಎಂಬುವವಳು ಕೇಶವದೇವರನ್ನು ಪ್ರತಿಷ್ಠೆ ಮಾಡಿ ಆ ದೇವರಿಗೆ ಕೆಲವು ದಾನಗಳನ್ನು ನೀಡಿದಂತೆ ತಿಳಿದುಬರುತ್ತದೆ. ಕವಲೂರಿನ ಶಾಸನವೊಂದು[66] ಏಚಿರಾಜ ಎಂಬ ವ್ಯಕ್ತಿಯು ಹರಿಹರ ದೇವಾಲಯ ನಿರ್ಮಿಸಿದ್ದಂತೆ ತಿಳಿಸುತ್ತದೆ. ಈ ದೇವಾಲಯದ ಅಂಗಭೋಗ, ರಂಗಭೋಗಕ್ಕಾಗಿ ಹಾಗೂ ಇತರ ಜೀರ್ಣೋದ್ಧಾರಕ್ಕೆಂದು 500 ಅಶೇಷ ಮಹಾಜನರು ಸೇರಿ ಎಡೆಹಳ್ಳಿಯನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸಿದೆ. ಕ್ರಿ.ಶ.1515ರಲ್ಲಿಯ ಶಾಸನದಲ್ಲಿ[67] ಕೃಷ್ಣರಾಯ ಮಹಾರಾಯನು ಬಾಲಕೃಷ್ಣದೇವರ ಪ್ರತಿಷ್ಠಾ ಕಾಲದಲ್ಲಿ ದೇವರ ಅಮೃತಪಡಿ, ನಿತ್ಯನೈಮಿತ್ಯಕ, ದೀಪೋತ್ಸವಕ್ಕೆಂದು ಹುಲಿಗೆಯ ಮಾಗಾಣೆಯಲ್ಲಿನ ಅತ್ತಿವಟ್ಟಿ ಎನ್ನುವ ಗ್ರಾಮವನ್ನು ನೀಡಿದ್ದಂತೆ ವಿವರಣೆ ನೀಡಿದೆ. ಗಂಗಾವತಿಯ ಹಿರೇಜಂತಗಲ್‌ನಲ್ಲಿ ದೊರೆತ ಶಾಸನವು[68] ಕೇಶವದೇವರನ್ನು ಉಲ್ಲೇಖಿಸಿದರೆ ಸಿಂಗನಾಳ ಶಾಸನವು[69] ರಘುನಾಥದೇವರನ್ನು ಉಲ್ಲೇಖಿಸಿದೆ. ಈ ಎಲ್ಲಾ ಶಾಸನಗಳ ಜೊತೆಗೆ ಇಲ್ಲಿ ಅನೇಕ ಅಗ್ರಹಾರಗಳು, ಬ್ರಹ್ಮಪುರಿಗಳು ಮತ್ತು ಘಟಿಕಾಲಯಗಳ ನಿದರ್ಶನಗಳು ದೊರೆಯುವುದರಿಂದ ವೈಷ್ಣವ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎನ್ನಬಹುದು. ಜಿಲ್ಲೆಯಲ್ಲಿ ಬರುವ ಅಗ್ರಹಾರಗಳಲ್ಲಿ ಸಾವಿರ ಸಾವಿರ ಮಹಾಜನರು, ಪಂಡಿತರು, ಸಕಲವೇದ, ಸ್ಮೃತಿ, ವ್ಯಾಕರಣ, ಪುರಾಣ, ಕಾವ್ಯ, ನಾಟಕಗಳಲ್ಲಿ ಪ್ರವೀಣರಾಗಿದ್ದರು.

ಇವರು ವೈಷ್ಣವ ಧರ್ಮದ ಅನುಯಾಯಿಗಳಾಗಿದ್ದರು. ಹೀಗೆ ವೈಷ್ಣವ ಧರ್ಮವು ಈ ಪ್ರದೇಶದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿತ್ತೆನ್ನಬಹುದು.

**ಶೈವಧರ್ಮ:**

ಅತಿ ಪುರಾತನ ಐತಿಹಾಸಿಕ ಪರಂಪರೆ ಶೈವಧರ್ಮಕ್ಕಿದೆ. ಶೈವಧರ್ಮ ಕರ್ನಾಟಕದ ಇನ್ನೊಂದು ಪ್ರಮುಖ ಧರ್ಮವಾಗಿದೆ. ಕರ್ನಾಟಕದ ಅರಸು ಮನೆತನಗಳಲ್ಲಿ ಹೊಯ್ಸಳ, ರಾಷ್ಟ್ರಕೂಟ, ಚಾಳುಕ್ಯ ದೊರೆಗಳು ಈ ಮತಕ್ಕೆ ರಾಜಾಶ್ರಯ ನೀಡಿದ್ದುಂಟು.

"ಶೈವ ಸಿದ್ಧಾಂತವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮೊಟ್ಟಮೊದಲು ಪ್ರತಿಪಾದಿಸಿದವರು ಯಾರು? ಮತ್ತು ಎಂದು ಎಂಬುದನ್ನು ನಿಷ್ಕೃಷ್ಟವಾಗಿ ಹೇಳುವಂತಿಲ್ಲ. ಮಹಾಭಾರತದ ಕಾಲಕ್ಕಾಗಲೇ ಶಿವನ ಉಪಾಸನೆಯು ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದ್ದುದಲ್ಲದೆ 'ಪಾಶುಪತ' ಎಂಬ ಹೆಸರಿನ ಒಂದು ಶೈವ ಸಿದ್ಧಾಂತದ ಶಾಖೆಯು ಪ್ರಸಿದ್ಧವಾಗಿತ್ತು."[70] ಪ್ರಮುಖವಾಗಿ ಶೈವಧರ್ಮದಲ್ಲಿ ನಾಲ್ಕು ಪ್ರಮುಖ ವಿಭಾಗಗಳನ್ನು ಮಾಡಲಾಗಿತ್ತು. ಪಾಶುಪತ, ಕಾಪಾಲಿಕ, ಕಾಳಾಮುಖ ಮತ್ತು ಶೈವ ಧರ್ಮಗಳೆಂದು. "ಅನಂತರ ಬಂದ ಆಚಾರ್ಯರುಗಳು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಶೈವಧರ್ಮದ ವಿಭಾಗಗಳನ್ನು ಹೆಸರಿಸಿದ್ದಾರೆ. ಶೈವ ಪಾಶುಪತ, ಕಾರುಣಿಕ ಸಿದ್ಧಾಂತ, ಕಾಪಾಲಿಕ ಎಂದು ವಾಚಸ್ಪತಿಮಿಶ್ರರೂ, ಕಾಪಾಲಿಕ, ಕಾಳಾಮುಖ, ಪಾಶುಪತ, ಶೈವ ಎಂದು ರಾಮಾನುಜಾಚಾರ್ಯರು ಹೇಳಿದ್ದಾರೆ. ಸುಪ್ರಭೇದಾಗಮದಲ್ಲಿ ಶೈವ, ಪಾಶುಪತ, ಸೋಮ, ಲಾಕುಳ ಎಂಬ ವಿಭಾಗ ಬರುತ್ತದೆ. ಕಾಪಾಲಿಕ ಎನ್ನುವ ಹೆಸರಿಗೆ ಬದಲಾಗಿ 'ಸೋಮ' ಎಂದು ಈ ಆಗಮ ಕರೆದಿದೆ. ಇವರಿಗೆ ಮಹಾವ್ರತಧಾರಿಗಳೆಂದು ಕರೆದಿರುವುದನ್ನು ಕಾಣುತ್ತೇವೆ. ಹಾಗೆಯೇ 'ಕಾಳಾಮುಖ' ಎಂಬ ಹೆಸರೂ 'ಕಾಲದಮನ', 'ಕಾರುಣಿಕ', 'ಲಾಕುಳ' ಈ ಮುಂತಾದ ಬೇರೆ ಬೇರೆ ಹೆಸರುಗಳನ್ನು ಬೇರೆ ಬೇರೆ ಗ್ರಂಥಕರ್ತರ ಕೈಯಲ್ಲಿ ಪಡೆದಿರುವುದು ಕಾಣುತ್ತೇವೆ."[71]

ಕರ್ನಾಟಕದಲ್ಲಿ ಜೈನಧರ್ಮ ಅತ್ಯಂತ ಪ್ರಬಲವಾಗಿದ್ದ ಅವಧಿಯಲ್ಲಿಯೇ ಶೈವ ಧರ್ಮದ ಭದ್ರವಾದ ಬುನಾದಿ ಸ್ಥಾಪಿತವಾಯಿತು. ಕರ್ನಾಟಕದ ಶೈವ ಇತಿಹಾಸದಲ್ಲಿ ಕಾಪಾಲಿಕ ಸಂಖ್ಯೆ ಇಲ್ಲ ಎನ್ನುವಷ್ಟು ಕಡಿಮೆ. ಪಾಶುಪತ ಕಾಳಾಮುಖರು ಸಾಕಷ್ಟು ಮತ್ತು ಪ್ರಮುಖರು. ಹೀಗೆ ಸಾಕಷ್ಟು ಪ್ರಮುಖ ಹಾಗೂ ಗಮನಾರ್ಹ ಸಂಖ್ಯೆಯಲ್ಲಿರುವ ಪಾಶುಪತ ಕಾಳಾಮುಖರು ಇಲ್ಲಿಯವರೇ ಅಥವಾ ಹೊರಗಿನವರೇ ಆಗಿದ್ದರೆ, ಕರ್ನಾಟಕಕ್ಕೆ ಯಾವಾಗ ಬಂದರು ಎನ್ನುವುದು ಇನ್ನೂ ಸ್ಪಷ್ಟವಾಗಬೇಕಾಗಿದೆ. ಒಟ್ಟಿನಲ್ಲಿ ಕಾಳಾಮುಖರು ಸಮಾಜದಲ್ಲಿ ಸ್ಥಾನ ಪಡೆದು ಸಮಾಜ ಹಾಗೂ ಧರ್ಮಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಕೊಪ್ಪಳ ನಾಡಿನ ಶೈವ ದೇವಾಲಯಗಳ ಕುರಿತು ಶಾಸನಗಳಲ್ಲಿ ಮಾಹಿತಿ ಮೂಡಿ ಬಂದಿದೆ. ಇಲ್ಲಿಯ ಶೈವ ದೇವಾಲಯಗಳ ಉಸ್ತುವಾರಿಕೆ ಅಲ್ಲಿಯ ಸ್ಥಾನಿಕರದಾಗಿತ್ತು. ದೇವಾಲಯಗಳ ಮತ್ತು ಮಠಗಳ ಕಾರ್ಯಚಟುವಟಿಕೆಗಳ ನಿರ್ವಹಣೆ ಮತ್ತು ವಿದ್ಯಾದಾನ ನೀಡುವುದು ಇವರ ಕರ್ತವ್ಯವಾಗಿತ್ತು. ಇಲ್ಲಿ ದೊರೆತ ಶಾಸನಗಳ ಮೂಲಕ ಶೈವಧರ್ಮದ ಕುರಿತು ಉಲ್ಲೇಖಿಸಲಾಗಿದೆ.

ಜಿಲ್ಲೆಯ ಯಲಬುರ್ಗಾ ತಾಲೂಕಿನ ಬಳಗೇರಿ ಶಾಸನವು[72] ಸೋಭನೇಶ್ವರ ದೇವಾಲಯದ ಕುರಿತು ಮಾಹಿತಿ ನೀಡಿದೆ. ಈ ದೇವಾಲಯದ ಆಚಾರ್ಯನಾಗಿ ಚತುಸ್ಸಮಯ ವ್ಯಾಖ್ಯಾನಕಾರನಾದ ಜಗದಿನ್ದಪಂಡಿತನ ಶಿಷ್ಯನೊಬ್ಬನಿದ್ದಂತೆ ತಿಳಿಸುತ್ತದೆ. ಕ್ರಿ.ಶ1005ರ ಶಾಸನವು[73] ಹೊಸ ಮಠದ ಚೋಳ ಸೋಮೇಶ್ವರಪಂಡಿತನ ಶಿಷ್ಯನ (ಹೆಸರಿನ ಉಲ್ಲೇಖವಿಲ್ಲ) ಕಾಲುತೊಳೆದು ಯೀಶ್ವರಸೆಟ್ಟಿ ಎಂಬುವವನು ದೇವರ ಅಂಗಭೋಗಕ್ಕೆಂದು 100 ಗದ್ಯಾಣ ದಾನ ನೀಡಿದ್ದಂತೆ ಮಾಹಿತಿ ನೀಡಿದೆ. ಯಲಬುರ್ಗಾದ ಕುಕನೂರಿನಲ್ಲಿ ದೊರೆತ ಶಾಸನವು[74] ಸಿಂಧರ ರಾಜಧಾನಿಯಾಗಿದ್ದ ಯರಂಬರವಿಯ ಮೂಲಸ್ಥಾನ ಸಿಂಗೇಶ್ವರ, ರಾಜೇಶ್ವರ, ಔಡೇಶ್ವರ, ವಿಕ್ರಮೇಶ್ವರ ದೇವಾಲಯಗಳ ಮಠದ ಆಚಾರ್ಯ ಪಟ್ಟವನ್ನು ಪಡೆದಿದ್ದಲ್ಲದೆ ಸೋಮೇಶ್ವರದೇವರ ನವಮಠದ ಜವಾಬ್ದಾರಿಯನ್ನು ಕಳೇಶ್ವರಯತಿಯು ಪಡೆದಿದ್ದಂತೆ ತಿಳಿದು ಬರುತ್ತದೆ. ಈ ಕಳೇಶ್ವರ ಯತಿಯು ಸೂಂಡಿಯ ನಗರೇಶ್ವರ ಕಾಳಾಮುಖಾನ್ವಯಕ್ಕೆ ಸೇರಿದ್ದನು. ಈತನ ಗುರು ಯೋಗೀಶ್ವರನೆಂದು ತಿಳಿದು ಬರುತ್ತದೆ. ಈ ಕಳೇಶ್ವರನು ಶಾಂತ ಮೂರ್ತಿಯಾಗಿದ್ದು ಶೈವ ಸಿದ್ಧಾಂತವನ್ನು ಒಪ್ಪಿಕೊಂಡಿದ್ದನೆಂದು ಶಾಸನವು ತಿಳಿಸುತ್ತದೆ. ಕ್ರಿ.ಶ.1185ರಲ್ಲಿ ದೊರೆತ ಕಲ್ಲೂರಿನ ಶಾಸನದಲ್ಲಿ[75] ನರೆಯಂಗಲ್ಲ ಬಳಿಯ ಕಲ್ಲೂರ ಸ್ವಯಂಭೂ ಕಲಿದೇವಸ್ವಾಮಿಯ ಮಠದ ಆಚಾರ್ಯನಾಗಿ ಸೋಮೇಶ್ವರ ಪಂಡಿತನಿರುತ್ತಾನೆ. ಈ ದೇವಾಲಯದ ಅಂಗಭೋಗ, ಖಂಡಸ್ಪುಟಿತ ಜೀರ್ಣೋದ್ಧಾರ, ತಪೋಧನರ ಆಹಾರದಾನಕ್ಕೆಂದು ಸೋಮೇಶ್ವರ ಪಂಡಿತನ ಕಾಲನ್ನು ತೊಳೆದು 24 ಮತ್ತರು ಭೂಮಿಯನ್ನು ಸಣ್ಣಗೇತಯ ಮಹಾಪಸಾಯಿತ ನಾಯಕನು ದಾನ ನೀಡಿದ್ದಂತೆ ತಿಳಿದು ಬರುತ್ತದೆ.

ಯಲಬುರ್ಗಾದ ಕ್ರಿ.ಶ.991ರ ಶಾಸನದಲ್ಲಿ[76] ತಳಕಲ್ಲಿನ ನಾಗಲೇಶ್ವರ ದೇವಾಲಯದ ಸಿದ್ದೇಶ್ವರದ ಸಂಕರಾಶಿಭಟಾರನ ಶಿಷ್ಯನಾಗಿ ಅಮೃತರಾಶಿ ಮುನೀಶ್ವರನಿದ್ದಂತೆ ತಿಳಿದು ಬರುತ್ತದೆ. ಸೋಭನರಸ ಎಂಬ ವ್ಯಕ್ತಿಯು ಈ ದೇವಾಲಯಕ್ಕೆ 400 ಮತ್ತರು ಭೂಮಿಯನ್ನು ದಾನ ನೀಡಿದ್ದಂತೆ ಕಂಡು ಬಂದಿದೆ. ಗಂಗಾವತಿಯಲ್ಲಿ ದೊರೆತ (ಕ್ರಿ.ಶ.1059) ಶಾಸನವು[77] ಚಾಲುಕ್ಯ ತ್ರೈಲೋಕ್ಯಮಲ್ಲನು ಬೆಣ್ಣೆಕಲ್ಲ ನೆಲೆವೀಡಿನಲ್ಲಿದ್ದಾಗ ವಿಪ್ರದ ಶಿವದೇವಾಲಯಕ್ಕೆ ದಾನ ನೀಡಿದ್ದಂತೆ ತಿಳಿಸುತ್ತದೆ. ಈ ದೇವಾಲಯವು ಅನೇಕ ಯತಿಗಳ ವಾಸಸ್ಥಾನವಾಗಿದ್ದಂತೆ ತಿಳಿದು

ಬರುತ್ತದೆ. ಮುಂದೆ ಕ್ರಿ.ಶ.1087ರಲ್ಲಿ ಈತನ ಮಾಂಡಳಿಕನಾದ ತ್ರಿಭುವನ ಮಲ್ಲಪಾಂಡ್ಯ ವೀರನೊಳಂಬ ಪಲ್ಲವ ಪೆರ್ಮಾನಡಿಯು ಮಲಯಾಳಿ ಪಂಡಿತ ದೇವರಿಗೆ ಬಲ್ಲಕುಂದೆ ಮುನ್ನೂರರ ಕಂಪಣದ ಬಳಿಯ ಬಾಡವಾದ ಇಕುಪರವನ್ನು ಕಂಪಿಲೆಯ ಗವರೇಶ್ವರದ ಸಿದ್ದೇಶ್ವರದೇವರಿಗಾಗಿ ಸರ್ವನಮಸ್ಯವಾಗಿ ಬಿಡುತ್ತಾನೆ.[78] ಕುಷ್ಟಗಿಯ ಕ್ರಿ.ಶ.1123ರ ಶಾಸನವು[79] ಜಯಂತಿಪುರದ ಮಲ್ಲೇಶ್ವರ ದೇವರ ಧೂಪದೀಪಕ್ಕಾಗಿ, ನೈವೇದ್ಯಕ್ಕೆಂದು ಮೂಡಕೇರಿಯ ಬೊಮ್ಮಗಾವುಂಡನ ಎರೆಯ ಹೊಲದಲ್ಲಿ ಮೂರು ಮತ್ತರನ್ನು ಉಚ್ಚಂಗಿಯ ಮಾಚಗಾವುಂಡನು ಕ್ರಯಕ್ಕೆ ಪಡೆದು ಈ ದಾನವನ್ನು ಸಂಕರಾಶಿ ಪಂಡಿತರ ಕೈಗೆ ನೀಡಿದ್ದಂತೆ ತಿಳಿಸುತ್ತದೆ. ಕುಷ್ಟಗಿಯಲ್ಲಿ ದೊರೆತ ಮರ ಶಾಸನವು[80] ಶ್ರೀಗವರೇಶ್ವರದೇವರ ಅಂಗಭೋಗ, ರಂಗಭೋಗ, ಪಾತ್ರಪಾವುಳ, ಚೈತ್ರಪವಿತ್ರ, ಪಂಚಪರ್ಬ್ಬ, ಮಹಾನೈವೇದ್ಯ, ಭೋಜನ ಮತ್ತು ಅತಿಥಿ ಬ್ರಾಹ್ಮಣ, ತಪೋಧನರ ನಿತ್ಯ ಆಹಾರದಾನಕ್ಕೆ, ಖಂಡಸ್ಫುಟಿತ ಜೀರ್ಣೋದ್ಧಾರ ಹಾಗೂ ಮುಂತಾದವಕ್ಕೆಂದು ಆ ಊರಿನ ಸಮಸ್ತ ನಾನಾ ದೇಸಿ ಮುಂಮರಿದಂಡಗಳು, ಇವರ ಜೊತೆಗೆ ಶ್ರೀಬಾಚಿದೇವರಸ, ಸೆಳೆಯಜ್ಜರಸ, ಕಂಪಲಿ ಹೆಂಮ್ಮರಸ, ಅಣ್ಣಲದೇವ ಮುಂತಾದವರೆಲ್ಲ ಸೇರಿ ಹಿರಿಕೋಲಲ್ಲಿ ಒಂದು ಮತ್ತರು ನೀಡುತ್ತಾರೆ. ಈ ದಾನವು ಸದಾಕಾಲ ನಡೆಯುವಂತಾಗಲು ಉಮ್ಮಲಗುರುಕೆ ಎಂಬ ಗ್ರಾಮವನ್ನು ತ್ರಿಭೋಗಾಭ್ಯಂತರವಾಗಿ ಅಷ್ಟಭೋಗ, ತೇಜ, ಸಾಮ್ಯ ಸಹಿತ ಸರ್ವನಮಸ್ಯವಾಗಿ ಶ್ರೀಗವರೇಶ್ವರ ದೇವರಿಗೆ ದೇವರಾಸಿಪಂಡಿತರ ಕೈಯಲ್ಲಿ ಧಾರಾಪೂರ್ವಕವಾಗಿ ಧಾರೆಯೆರೆದು ಕೊಟ್ಟಿದ್ದಂತೆ ಮಾಹಿತಿ ನೀಡಿದೆ. ಕೊಪ್ಪಳದ ಹುಲಗಿ ಶಾಸನವು[81] ಸೋಮನಾಥ ಮತ್ತು ಆತನ ಪತ್ನಿ ಮಂಚಿಕಬ್ಬೆ ತಾವು ಪ್ರತಿಷ್ಠೆ ಮಾಡಿಸಿದ ಸೋಮೇಶ್ವರ ದೇವರಿಗೆ ಊರಿನ ಪೂರ್ವಕ್ಕೆ ಗಯ್ಯಲತೋಟ, ಪರಿನೀರ ತೋಟವನ್ನು ಚತುಸ್ಸೀಮಾ ಸಮೇತವಾಗಿ ನೀಡಿದ್ದಂತೆ ತಿಳಿಸುತ್ತದೆ. ಕ್ರಿ.ಶ.1132ರ ಕಲ್ಲೂರ ಶಾಸನದಲ್ಲಿ[82] ಕುಕ್ಕನೂರು–30 ರೊಳಗಿನ ಕಲ್ಲೂರ ಸ್ವಯಂಭು ಕಲಿದೇವರಿಗೆ ಸುಂಕವೆಗ್ಗಡೆ ಮಹೇಶ್ವರಯ್ಯನು ದಾನ ನೀಡಿದಂತೆ ಹೇಳಿದೆ. ಕ್ರಿ.ಶ.1098ರ ಅವಧಿಯಲ್ಲಿ ಚಾವುಂಡರಸನು ಇದೇ ಸ್ವಯಂಭು ಕಲಿದೇವರ ಅಂಗಭೋಗ, ತಪೋಧನರ ಆಹಾರ ದಾನಕ್ಕೆಂದು ಬೆನತೂರ ಸೀಮೆಯ ದಕ್ಷಿಣಕ್ಕೆ 50 ಮತ್ತರು ಭೂಮಿಯನ್ನು ಎರಬರವಿಯ ದಕ್ಷಿಣಕ್ಕೆ 50 ಮತ್ತರನ್ನೂ ಹೀಗೆ ಬೇರೆ ಬೇರೆಡೆಯಲ್ಲಿ ಒಟ್ಟು 120 ಮತ್ತರು ಭೂಮಿಯನ್ನು ಮತ್ತು ಒಂದು ಗಾಣವನ್ನು ಅಲ್ಲಿಯ ಕಾಳಾಮುಖ ಯತಿ ಶಿವಶಕ್ತಿಪಣ್ಡಿತರ ಕಾಲನ್ನು ತೊಳೆದು ದಾನ ನೀಡಿರುತ್ತಾನೆ.[83] ಕ್ರಿ.ಶ.1149ರ ಅವಧಿಯ ಕುಕನೂರಿನ ಶಾಸನವು[84] ಕುಕ್ಕನೂರಿನಲ್ಲಿಯ ಮಲ್ಲಿಕಾರ್ಜುನದೇವರ ನೈವೇದ್ಯಕ್ಕೆಂದು ಮೇದಿ ರಾಜದಣ್ಣನಾಯಕನು ಇಂತಿಷ್ಟು ಹೊನ್ನನ್ನು ದಾನ ಬಿಟ್ಟಂತೆ ಉಲ್ಲೇಖಿಸಿದೆ. ಕುಕ್ಕನೂರಿನ ಮತ್ತೊಂದು (ಕ್ರಿ.ಶ.1170) ಶಾಸನದಲ್ಲಿ[85] ಮಹಾಪ್ರಚಂಡ ದಂಡನಾಯಕ ತೇಜಿರಾಜನು ಕುಕ್ಕನೂರು ಅಗ್ರಹಾರಕ್ಕೆ

ಬಂದಾಗ ಸ್ವಯಂಭೂ ಪ್ರಸನ್ನಮಲ್ಲಿಕಾರ್ಜುನದೇವರಿಗೆ ಲಕ್ಷಗಡುಗೆ ಪೂಜೆ ಮಾಡಿಸಿ ರಾಯಮುರಾರಿ ಸೋವಿದೇವನಿಗೆ ಬಿನ್ನಪವನ್ನು ಮಾಡಿಕೊಂಡು ಕುಕ್ಕನೂರು–30ರಲ್ಲಿದ್ದ ಹಾಡಲ ಗೆರೆಯನ್ನು ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ಯಲಬುರ್ಗಾ ತಾಲೂಕಿನಲ್ಲಿನ ಇಟಗಿಯ (ಕ್ರಿ.ಶ.1108) ಶಾಸನವು[86] ಮಹಾಪ್ರಧಾನನಿಂದ ಮಹಾ ದೇವದಂಡನಾಥನು ಇಟ್ಟಿಗೆಯಲ್ಲಿ ಈಶ್ವರದೇವಾಲಯವನ್ನು ಕಟ್ಟಿಸಿದ. ಈ ದೇವಾಲಯದ ಅಂಗಭೋಗ, ಪಾತ್ರಪಾವುಳ, ನೈವೇದ್ಯ, ಅನ್ನದಾನ ಭಟ್ಟವೃತ್ತಿ ಮುಂತಾದವುಗಳು ನಡೆಯುವಂತೆ 500 ಮತ್ತರು ಹೊಲವನ್ನು ದಾನ ನೀಡಿದಂತೆ ಹೇಳಿದೆ. ಇದೇ ದೇವಾಲಯಕ್ಕೆ ತ್ರಿಭುವನಮಲ್ಲನು ದೇವರ ಪೂಜಾಕಾರ್ಯಗಳಿಗಾಗಿ ಕುಕ್ಕನೂರು–30ರ ಬೆಣ್ಣೆಕಲ್ಲು ಗ್ರಾಮವನ್ನು ದಾನ ನೀಡಿದಂತೆ ತಿಳಿದು ಬರುತ್ತದೆ. ಈ ಶಾಸನದಲ್ಲಿ ಮಹಾದೇವ ದೇವಾಲಯವನ್ನು 'ದೇವಾಲಯಗಳ ಚಕ್ರವರ್ತಿ' ಎಂದು ಕರೆದಿದೆ. ಅಲ್ಲದೆ ಈ ರೀತಿಯ ದೇವಾಲಯವನ್ನು ಹೋಲುವ ಗುಡಿಯು ಎಲ್ಲೂ ಇಲ್ಲ ಎಂದು ಅತಿಶಯವಾಗಿ ಬಣ್ಣಿಸಿದ್ದನ್ನು ಕಾಣುತ್ತೇವೆ. ಕ್ರಿ.ಶ.1082ರಲ್ಲಿ ದೊರೆತ ಅಂಟೂರುತಾಣ ಶಾಸನವು[87] ಮಹಾಮಂಡಳೇಶ್ವರ ಜಗದೇಕಮಲ್ಲ ಪೆರ್ಮಾಡಿದೇವರಸನು ಹತ್ತರತಾಣದ ಶ್ರೀಸ್ವಯಂಭುದೇವರ ಅಂಗಭೋಗ, ನೈವೇದ್ಯಕ್ಕೆಂದು ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ದಾನ ನೀಡಿದ್ದಂತೆ ಕಂಡು ಬಂದಿದೆ.

ಈ ಜಿಲ್ಲೆಯಲ್ಲಿ ದೊರೆತ ಶಾಸನಗಳ ಮೂಲಕ ಇಲ್ಲಿ ಶೈವ ಧರ್ಮವು ತನ್ನದೇ ಆದ ಒಂದು ನೆಲೆಯನ್ನು ಹೊಂದಿದ್ದು, ಇದು ಕೊಪ್ಪಳ ಪ್ರದೇಶದಲ್ಲಿ ಬಹು ಸಂಖ್ಯಾತರ ಧರ್ಮವಾಗಿತ್ತೆಂಬುದು ನಿರ್ವಿವಾದವಾದ ಸಂಗತಿಯಾಗಿದೆ.

**ವೀರಶೈವ ಧರ್ಮ:**

"ವೀರಶೈವ ಎಂಬ ಮಾತು ಈ ಧರ್ಮವು ಶೈವಧರ್ಮದ ಒಂದು ಶಾಖೆ ಎಂಬುದನ್ನು ಸೂಚಿಸಿದರೂ 'ವೀರ' ಎಂಬ ಪ್ರತ್ಯಯದಲ್ಲಿ ಬರುವ 'ವೀ' ಮತ್ತು 'ರ' ಎಂಬ ಅಕ್ಷರಗಳನ್ನು ಪಾಂಡಿತ್ಯಪೂರ್ಣವಾಗಿ ವ್ಯಾಖ್ಯಾನಿಸುತ್ತ 'ವೀ' ಎಂದರೆ ಶಿವಜೀವೈಕ್ಯ ಬೋಧಕವಾದ ವಿದ್ಯೆಯಲ್ಲಿ 'ರ' ಎಂದರೆ 'ರಮಿಸುವವನು' ಎಂದು ಅರ್ಥೈಸಲಾಗಿದೆ."[88] ವೀರಶೈವ ಸಿದ್ಧಾಂತ ಇದಕ್ಕಿಂತ ಹೆಚ್ಚು ವ್ಯಾಪಕವಾದ ದೈವತ್ವದ ತತ್ವಗಳನ್ನು ಒಳಗೊಂಡಿದೆ.

ಹನ್ನೆರಡನೆ ಶತಮಾನದಲ್ಲಿ ಶರಣರು ಪ್ರತಿಪಾದಿಸಿದ ಧರ್ಮವನ್ನು ವೀರಶೈವ ಸಿದ್ಧಾಂತ ಎಂದು ಕರೆಯಲಾಗಿದೆ. ವೀರಶೈವ ಧರ್ಮವು ತನ್ನ ವಿಶ್ವಮಾನ್ಯ ಮೌಲ್ಯಗಳಿಂದ ಒಂದು ಹೊಸ ದಿಗಂತವನ್ನೇ ತೆರೆದು ತೋರಿಸಿತು. ವೀರಶೈವ ಧರ್ಮದ ಸ್ಥಾಪನೆ ಯಾರಿಂದ ಆಯಿತು ಭಕ್ತಿ ಭಂಡಾರಿ ಬಸವಣ್ಣನವರೋ ಅಥವಾ ಇನ್ಯಾರೋ ಎಂಬ ಅನೇಕ ಗೊಂದಲಗಳಿವೆ.

ವೀರಶೈವ ಧರ್ಮವು ವ್ಯಾಪಕವಾದ ರೀತಿಯಲ್ಲಿ ತನ್ನದೇ ಆದ ನಿರ್ದಿಷ್ಟ ಸಿದ್ಧಾಂತವನ್ನು ಪಡೆದುಕೊಂಡಿದೆ. ಬಸವಣ್ಣನವರೇ ವೀರಶೈವ ಧರ್ಮದ ಸ್ಥಾಪಕರೋ ಅಥವಾ ಇನ್ಯಾರೋ ಅದು ಬೇರೆ ವಿಷಯ. ಆದರೆ ಈ ಮೊದಲೇ ಅದು ಅಸ್ತಿತ್ವದಲ್ಲಿದ್ದರೂ ಅದಕ್ಕೆ ಒಂದು ನಿರ್ದಿಷ್ಟ ಸ್ವರೂಪ ನೀಡಿ ಪ್ರಚುರಗೊಳಿಸಿದವರು ವೀರಶೈವ ಧರ್ಮಕ್ಕೆ ಒಂದು ಅರ್ಥವನ್ನು ಕೊಟ್ಟವರೇ ಬಸವಣ್ಣನವರು. ಹನ್ನೆರಡನೆ ಶತಮಾನದಲ್ಲಿ ಒಂದು ಧಾರ್ಮಿಕ ಕ್ರಾಂತಿಯನ್ನೇ ಎಬ್ಬಿಸಿದ ವೀರಶೈವ ಧರ್ಮವು ಬಸವಣ್ಣನವರ ನೇತೃತ್ವದಲ್ಲಿ ಉಜ್ವಲಗೊಂಡ ಪ್ರವರ್ಧಮಾನ ಸ್ಥಿತಿಯನ್ನು ತಲುಪಿತು.

ಈ ಧರ್ಮವು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಬಹು ಮುಖ್ಯ ಪಾತ್ರ ವಹಿಸಿತು. ಧಾರ್ಮಿಕ ಚರ್ಚೆ ಹಾಗೂ ವೈಚಾರಿಕ ಕ್ರಾಂತಿಯಿಂದಾಗಿ ಸರ್ವ ಸಮಾನತೆಯ ತತ್ವವನ್ನು ತೋರಿಸಿಕೊಟ್ಟರು. ಇಂತಹ ಒಂದು ಧರ್ಮವು ಕೊಪ್ಪಳ ಜಿಲ್ಲೆಯಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿದ್ದನ್ನು ಇಲ್ಲಿ ನೋಡಬಹುದಾಗಿದೆ. ಈ ಶಾಸನಗಳು ಇಲ್ಲಿ ವೀರಶೈವ ಧರ್ಮದ ಕುರಿತು ಸ್ಪಷ್ಟವಾಗಿ ಸೂಚಿಸಿಲ್ಲದಿದ್ದರೂ ಶಾಸನಗಳಲ್ಲಿ ಬಂದಿರುವ ವಿಷಯ ಹಾಗೂ ಬದಲಾದ ಹೆಸರುಗಳ ಆಧಾರದಿಂದ ವೀರಶೈವವೆಂದು ಹೇಳಬಹುದಾದ ಕೆಲವು ಶಾಸನಗಳು ಇಲ್ಲಿ ದೊರೆತಿದ್ದನ್ನು ಕಾಣುತ್ತೇವೆ.

ಕ್ರಿ.ಶ.1154ರ ಕೊಪ್ಪಳ ತಾಲೂಕಿನ ಶಾಸನವು[89] ಮೊಲ್ಲೆಯ ಬಮ್ಮಯ್ಯನನ್ನು ಉಲ್ಲೇಖಿಸಿದೆ. ಈ ಅವಧಿಯಲ್ಲಿಯೆ ಚವುಂಡರಸನ ಪತ್ನಿಯು ಮೊಲ್ಲೆಯ ಬಂಮಯ್ಯನಿಗೆ ಆರು ಮತ್ತರು ಭೂಮಿಯನ್ನು ಸರ್ವಮಾನ್ಯವಾಗಿ ನೀಡಿದಂತೆ ಕಂಡು ಬಂದಿದೆ. ಮುಂದೆ ಕ್ರಿ.ಶ.1186ರ ಅವಧಿಯಲ್ಲಿ ಚಾವುಂಡರಸನ ಮಗ ವೀರಬಿಜ್ಜಲದೇವರಸನು ಕಲ್ಲೂರ ಕಲಿದೇವಸ್ವಾಮಿಯ ಭಕ್ತನಾದ ಮೊಲ್ಲೆಯ ಬಮ್ಮಯ್ಯನಿಗೆ ಪ್ರಥಮ ವೃತ್ತಿಯಾಗಿ ಗಣಮತಕ್ಕೆ 200 ಮತ್ತರು ಭೂಮಿಯನ್ನು ದಾನ ನೀಡಿರುತ್ತಾನೆ.[90] ಗಂಗಾವತಿಯ ತಾಲೂಕಿನಲ್ಲಿ ದೊರೆತ ಆನೆಗೊಂದಿ ಶಾಸನವು[91] ಮಹಾಲಿಂಗವೊಡೆಯನನ್ನು ಕುರಿತು ವಿವರಣೆಯನ್ನು ನೀಡಿದ್ದು ಅಲ್ಲಿದ್ದ 14 ಜನ ಬೋವರು ಹಾಗೂ 300 ಜನ ಅಂಬಿಗರು ಮಹಾಲಿಂಗವೊಡೆಯರಿಗೆ ತಾವು ಹೊಳೆಯಲ್ಲಿ ಬಿಡುವ ಚಿಕ್ಕಹರಿಗೋಲು, ದೊಡ್ಡಹರಿಗೋಲುಗಳ ಮೇಲಿನ ಹಣವನ್ನು ನೀಡುವುದಾಗಿ ತಿಳಿದಿದ್ದಂತೆ ಕಂಡು ಬಂದಿದೆ. ಕುಷ್ಟಗಿಯಲ್ಲಿ ದೊರೆತ ಪುರ ಶಾಸನವು[92] ಸೌರಾಷ್ಟ್ರ ಸೋಮನಾಥನನ್ನು ಉಲ್ಲೇಖಿಸಿದೆ. ಈ ಸೌರಾಷ್ಟ್ರ ಸೋಮನಾಥದೇವರು ಓಹಿಲನ ಕನಸಿನಲ್ಲಿ ಹೋಗಿ ದೇಗುಲವ ಮಾಡುವುದು ಮತ್ತು ಸರಿಗೆಯ ಹೆಕ್ಕಿ ಕೆರೆಯನ್ನು ಕಟ್ಟಿಸಬೇಕೆಂದು ತಿಳಿಸುತ್ತಾನೆ.

ಈ ಮೇಲೆ ದೊರೆತ ಕೆಲವೊಂದು ಶಾಸನಗಳ ಮೂಲಕ ಈ ಜಿಲ್ಲೆಯಲ್ಲಿ

ವೀರಶೈವ ಧರ್ಮವು ತನ್ನದೇ ಆದ ಪ್ರಭಾವ ಬೀರಿದ್ದನ್ನು ಕಾಣುತ್ತೇವೆ.

**ಇಸ್ಲಾಂಧರ್ಮ:**

ಇಸ್ಲಾಂಧರ್ಮವು ಸಾವಿರಾರು ವರ್ಷಗಳ ಸುದೀರ್ಘ ಧಾರ್ಮಿಕ ಪರಂಪರೆಯನ್ನು ಹೊಂದಿದೆ. "ಭಾರತಕ್ಕೆ ಇಸ್ಲಾಂಧರ್ಮ ಯಾವಾಗ ಪ್ರವೇಶ ಮಾಡಿತು ಎಂದು ಖಚಿತವಾಗಿ ಹೇಳುವುದು ಕಠಿಣವೇ. ಏಕೆಂದರೆ ಭಾರತಕ್ಕೂ ಪಶ್ಚಿಮ ಏಷ್ಯಾಕ್ಕೂ ಚರಿತ್ರಪೂರ್ವಕಾಲದಲ್ಲಿಯೇ ವಾಣಿಜ್ಯ ಸಂಬಂಧ ಬೆಳೆದಿದ್ದಿತು."[93]

ಇಸ್ಲಾಂ ಧರ್ಮದ ವ್ಯಾಪಕವಾದ ಅರ್ಥವನ್ನು ಈ ರೀತಿ ವಿವರಿಸಲಾಗಿದೆ. ಅರಬ್ಬೀ ಭಾಷೆಯ ಶಬ್ದವಾದ 'ಇಸ್ಲಾಂ' ಎಂಬ ಪದಕ್ಕೆ ಅನುಸರಣೆ (Submission) ಆತ್ಮ ಸಮರ್ಪಣೆ (Surrender) ಮತ್ತು ಆಜ್ಞಾನುವರ್ತನೆ (Obedience) ಎಂಬ ಅರ್ಥಗಳಿವೆ. ಇಸ್ಲಾಂ ಧರ್ಮದ ಹೆಸರು 'ಇಸ್ಲಾಮ್' ಆಗಲು ಕಾರಣವೇನೆಂದರೆ ಇದರಲ್ಲಿರುವುದು ಭಗವಂತನ ಆದೇಶಗಳ ಅನುವರ್ತನೆ ಮತ್ತು ಆತನ ಆಜ್ಞಾಪಾಲನೆ ಮಾತ್ರ.[94]

ಇಸ್ಲಾಂ ಧರ್ಮದ ಸ್ಥಾಪಕ ಮಹಮ್ಮದ್ ಪೈಗಂಬರ್ ಹುಟ್ಟಿದ್ದು ಅರಬ್ ಸ್ಥಾನದಲ್ಲಿ ಏಳನೆಯ ಶತಮಾನದಲ್ಲಿ. ಅಲ್ಲಿ ರೂಢಿಯಲ್ಲಿದ್ದ ಕಾಡು ಪದ್ಧತಿಗಳನ್ನು ವಿವಿಧ ಪಂಗಡಗಳನ್ನು ಒಟ್ಟುಗೂಡಿಸಿ ಮಹಮ್ಮದ್ ಪೈಗಂಬರರು ಹೊಸ ಧರ್ಮಾಚರಣೆಯನ್ನು ನೀಡಿದರು. ಇಲ್ಲಿಂದ ಮುಂದೆ ಅರೇಬಿಯಾ ದೇಶದಿಂದ ಕ್ರಿ.ಶ.14ನೇ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕದಲ್ಲಿ ಇಸ್ಲಾಂಧರ್ಮ ಉದಯಿಸಿದ್ದನ್ನು ಕಾಣುತ್ತೇವೆ.

ಕೊಪ್ಪಳ ಜಿಲ್ಲೆಯಲ್ಲಿ ಈ ಧರ್ಮದ ಕುರಿತಂತೆ ಹೆಚ್ಚಿನ ಶಾಸನಗಳು ದೊರೆತಿರುವುದಿಲ್ಲ. ಆದರೂ ಸಹ ಕೊಪ್ಪಳ ಜಿಲ್ಲೆಯಲ್ಲಿ ಕೆಲವೆಡೆ ಕಂಡುಬರುವ ಮಸೀದಿಗಳಂತಹ ಅವಶೇಷಗಳ ಆಧಾರಗಳ ಮೇಲೆ ಇಲ್ಲಿ ಇಸ್ಲಾಂ ಧರ್ಮವು ತನ್ನ ಅಸ್ತಿತ್ವದಲ್ಲಿತ್ತೆಂದು ಹೇಳಬಹುದಾಗಿದೆ.

ಕೊಪ್ಪಳದಲ್ಲಿ ದೊರೆತ ಕ್ರಿ.ಶ.1609ರ ಶಾಸನ[95]ದಲ್ಲಿ ಇಬ್ರಾಹಿಂ ಆದಿಲ್‌ಷಾನ ಅವಧಿಯಲ್ಲಿ ಈತನ ನೆಚ್ಚಿನ ಗುಲಾಮರಾದ ಯಕ್ಕೂತ್‌ಖಾನ್ ಮತ್ತು ಫಾಜೀಖಾನ್ ಇಬ್ಬರೂ ಕೊಪ್ಪಳದ ಕೋಟೆ ಅಧಿಕಾರಿಗಳಾಗಿದ್ದು ಮಸೀದಿಯನ್ನು ನಿರ್ಮಿಸಿದ್ದನ್ನು ತಿಳಿಸುತ್ತದೆ.

ಇಲ್ಲಿ ದೊರೆತ ಈ ಶಾಸನದ ಮೂಲಕ ಕೊಪ್ಪಳ ಜಿಲ್ಲೆಯಲ್ಲಿ ಪ್ರಚಾರದಲ್ಲಿದ್ದ ಇಸ್ಲಾಂ ಧರ್ಮದ ಚಾರಿತ್ರಿಕ ಹಿನ್ನೆಲೆಗೆ ಸಾಕ್ಷಿಯಾಗಿದೆ.

**ಅಡಿಟಿಪ್ಪಣಿಗಳು :**

1. ಅವಲೋಕನ: ಕರ್ನಾಟಕದ ಪರಂಪರೆಯ ಸಮೀಕ್ಷೆ, ಸಂ.ಎಚ್ಚೆಸ್ಕೆ, ಪುಟ:154.
2. ಕನ್ನಡ ಸಾಹಿತ್ಯ ಚರಿತ್ರೆ: (ಪ್ರ.ಸಂ.ಹಾ.ಮಾ.ನಾಯಕ), ಸಂಪುಟ.1, (ಉದೃತ), ಪುಟ:516.
3. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಪುಟ:37.
4. ಪಿ.ಬಿ.ದೇಸಾಯಿ: ಪ್ರಾಚೀನ ಕೊಪಣ ಕ್ಷೇತ್ರ:ಗವಿದೀಪ್ತಿ, ಪುಟ:219.
5. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಪುಟ:56.
6. ಅವಲೋಕನ: ಕರ್ನಾಟಕದ ಪರಂಪರೆಯ ಸಮೀಕ್ಷೆ, ಸಂ.ಎಚ್ಚೆಸ್ಕೆ, ಪುಟ:154.
7. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:73.
8. ಹಂಪಾ ನಾಗರಾಜಯ್ಯ: ಕೊಪ್ಪಳ ಶಾಸನಗಳು, ಪುಟ:7.
9. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–45, ಪುಟ:46.
10. ಅದೇ, ಕೊ–89, ಪುಟ:75.
11. ಅದೇ, ಕೊ–90, ಪುಟ:76.
12. ಅದೇ, ಕೊ–119, ಪುಟ:114.
13. ಅದೇ, ಕೊ–121, ಪುಟ:118.
14. ಅದೇ, ಕೊ–94, ಪುಟ:80.
15. ಅದೇ, ಕೊ–96, ಪುಟ:84.
16. ಅದೇ, ಕೊ–103, ಪುಟ:94.
17. ಅದೇ, ಕೊ–105, ಪುಟ.97.
18. ಅದೇ, ಕೊ–106, ಪುಟ:99.
19. ಅದೇ, ಕೊ–107, ಪುಟ:101.
20. ಅದೇ, ಕೊ–91, ಪುಟ:78.
21. ಅದೇ, ಕೊ–79, ಪುಟ:62.
22. ಅದೇ, ಯ–4, ಪುಟ:161.
23. ಅದೇ, ಯ–5, ಪುಟ:162.
24. ಅದೇ, ಯ–6, ಪುಟ:163.
25. ಅದೇ, ಯ–65, ಪುಟ:257.
26. ಅದೇ, ಕೊ–118, ಪುಟ:113.
27. ಅದೇ, ಕೊ–98, ಪುಟ:87.
28. ಅದೇ, ಕೊ–101, ಪುಟ:90.
29. ಅದೇ, ಕೊ–94, ಪುಟ:81.
30. ಅದೇ, ಕೊ–83, ಪುಟ:68.
31. ಅದೇ, ಕೊ–113, ಪುಟ:109.

32. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–99, ಪುಟ:88.
33. ಅದೇ, ಕೊ–125, ಪುಟ:122.
34. ಅದೇ, ಕೊ–95, ಪುಟ:82.
35. ಅದೇ, ಕೊ–80, ಪುಟ:65.
36. ಅದೇ, ಕೊ–86, ಪುಟ:72.
37. ಅದೇ, ಕೊ–108, ಪುಟ:102.
38. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–111, ಪುಟ:106.
39. ಅದೇ, ಕೊ–121, ಪುಟ:118.
40. ಅದೇ, ಕೊ–114, ಪುಟ:110.
41. ಅದೇ, ಕೊ–52, ಪುಟ:50.
42. ಅದೇ, ಕೊ–31, ಪುಟ:39.
43. ಅದೇ, ಕೊ–34, ಪುಟ:40.
44. ಅದೇ, ಕೊ–82, ಪುಟ:67.
45. ಅದೇ, ಕೊ–41, ಪುಟ:44.
46. ಅದೇ, ಕೊ–86, ಪುಟ:72.
47. ಅದೇ, ಕೊ–93, ಪುಟ:80.
48. ಅದೇ, ಕೊ–112, ಪುಟ:108.
49. ಅದೇ, ಕೊ–98, ಪುಟ:87.
50. ಅದೇ, ಕೊ–100, ಪುಟ:89.
51. ಅದೇ, ಕೊ–62, ಪುಟ:56.
52. ಅದೇ, ಯ–1, ಪುಟ:160.
53. ಅದೇ, ಕೊ–54, ಪುಟ:52.
54. ಅದೇ, ಗಂ–49, ಪುಟ:352.
55. ಅದೇ, ಗಂ–45, ಪುಟ:350.
56. ಅದೇ, ಗಂ–58, ಪುಟ:357.
57. ಅದೇ, ಗಂ–21, ಪುಟ:335.
58. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ: ಸಂ–3, ಪ್ರಸಾರಾಂಗ ಜ್ಞಾನಭಾರತಿ, ಬೆಂ.ವಿ.ವಿ. ಬೆಂ, ಪುಟ : 26.
59. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–8, ಪುಟ:17.
60. ಅದೇ, ಕೊ–9, ಪುಟ:20.
61. ಅದೇ, ಯ–29, ಪುಟ:186.
62. ಅದೇ, ಯ–51, ಪುಟ:224.
63. ಅದೇ, ಕೊ–26, ಪುಟ:31.
64. ಅದೇ, ಯ–36, ಪುಟ:194.
65, ಅದೇ, ಕೊ–1, ಪುಟ:1.

66. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–3, ಪುಟ:4.
67. ಅದೇ, ಕೊ–161, ಪುಟ:155.
68. ಅದೇ, ಗಂ–3, ಪುಟ:316.
69. ಅದೇ, ಗಂ–98, ಪುಟ:383.
70. ಎಚ್.ತಿಪ್ಪೇರುದ್ರಸ್ವಾಮಿ: ಶರಣರ ಅನುಭಾವ ಸಾಹಿತ್ಯ (ಉದ್ಧೃತ), ಪುಟ:10.
71. ಎಚ್.ತಿಪ್ಪೇರುದ್ರಸ್ವಾಮಿ: ಶರಣರ ಅನುಭಾವ ಸಾಹಿತ್ಯ (ಉದ್ಧೃತ), ಪುಟ:11.
72. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಯ–36, ಪುಟ:194.
73. ಅದೇ, ಯ–51, ಪುಟ:224.
74. ಅದೇ, ಯ–52, ಪುಟ:229.
75. ಅದೇ, ಯ–13, ಪುಟ:168.
76. ಅದೇ, ಯ–59, ಪುಟ:253.
77. ಅದೇ, ಗಂ–2, ಪುಟ:315.
78. ಅದೇ, ಗಂ–1, ಪುಟ:313.
79. ಅದೇ, ಕು–1, ಪುಟ:276.
80. ಅದೇ, ಕು–13, ಪುಟ:289.
81. ಅದೇ, ಕೊ–148, ಪುಟ:146.
82. ಅದೇ, ಯ–16, ಪುಟ:173.
83. ಅದೇ, ಯ–17, ಪುಟ:175.
84. ಅದೇ, ಯ–39, ಪುಟ:203.
85. ಅದೇ, ಯ–41, ಪುಟ:209.
86. ಅದೇ, ಯ–67, ಪುಟ:259.
87. ಅದೇ, ಕು–27, ಪುಟ:306.
88. ಎ.ಎಲ್.ಶಿವರುದ್ರಪ್ಪ: ಶರಣಧರ್ಮದಲ್ಲಿ ವಿಶ್ವತತ್ತ್ವದ ಮೌಲ್ಯಗಳು, ಪುಟ:45.
89. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಯ–17, ಪುಟ:175.
90. ಅದೇ, ಯ–12, ಪುಟ:167.
91. ಅದೇ, ಗಂ–37, ಪುಟ:345.
92. ಅದೇ, ಕುಷ್ಟಗಿ–14, ಪುಟ:291.
93. ನಿಜಗುಣ: (ಸಂ) ಎಚ್.ಎಂ.ಮರುಳಸಿದ್ಧಯ್ಯ ಷಣ್ಮುಖಯ್ಯ ಅಕ್ಕೂರ ಮಠ, ಪುಟ:254.
94. ಸ್ಮರಣ ಸಂಪುಟ ಸಮಿತಿ: (ಸಂ) ಹಂಪನಾಗರಾಜಯ್ಯ, ಪುಟ:76.
95. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–128, ಪುಟ:128.

ಅಧ್ಯಾಯ–7

# ಶೈಕ್ಷಣಿಕ ವ್ಯವಸ್ಥೆ

ಭಾರತದ ಅತ್ಯಂತ ಪ್ರಾಚೀನ ಇತಿಹಾಸವನ್ನು ನಾವು ಅವಲೋಕಿಸಿದಾಗ ಅಲ್ಲಿ ನಾವು ಮುಖ್ಯವಾಗಿ ಗುರುತಿಸುವುದು ವಿದ್ಯೆಗಿದ್ದ ಮಹತ್ವವನ್ನು. ಹಿಂದೂ ಸಮಾಜವು ವಿದ್ಯೆಗೆ ಅತ್ಯಂತ ಉನ್ನತವಾದ ಸ್ಥಾನವನ್ನು ನೀಡಿದೆ. ವಾಸ್ತವವಾಗಿ ಅದು ಸಮಾಜಕ್ಕೆ ಆಧಾರವಾಗಿದ್ದ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿತ್ತು. ಏಕೆಂದರೆ ವಿದ್ಯೆ ಸಾರ್ವಕಾಲಿಕವೂ ಶ್ರೇಷ್ಠತ್ವದ ಕೊಡುಗೆಯನ್ನೇ ನೀಡುವ ಉದ್ದೇಶವನ್ನು ಹೊಂದಿರುತ್ತದೆ. ವಿದ್ಯೆ ಮಾನವನ ಸಂಸ್ಕೃತಿಯ ಪ್ರತೀಕವಾಗಿದ್ದು ಒಂದು ದೇಶದ ಪದೋನ್ನತಿಗೆ ಆಧಾರವಾಗಿ ನಿಂತಿದೆ. ಆದ್ದರಿಂದ ಹಿಂದೂ ಸಮಾಜವು ಶಿಕ್ಷಣವನ್ನು ಒದಗಿಸುವುದು ತನ್ನ ಪ್ರಮುಖ ಕರ್ತವ್ಯಗಳಲ್ಲೊಂದೆಂದು ಪರಿಗಣಿಸಿತ್ತು. ಹೀಗೆ ದೇವಾಲಯಗಳಷ್ಟೇ ಮಹತ್ವದ ಪಾತ್ರವನ್ನು ವಹಿಸಿದ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ ಸೇವೆ ಅಪಾರವಾಗಿದೆ. ಇವುಗಳ ಬೆಳವಣಿಗೆಗೆ ಅಂದಿನ ಅರಸರು ಅನೇಕ ದಾನಗಳನ್ನು ನೀಡುವುದರ ಮೂಲಕ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

ಅಂದಿನ ಕಾಲದಲ್ಲಿ ಶಿಕ್ಷಣ ವ್ಯವಸ್ಥೆಯು ಭಾರತದ ಇನ್ನಿತರ ಕಡೆಗಳಲ್ಲಿ ಇದ್ದಂತೆ ವೈದಿಕ ಜ್ಞಾನವನ್ನು ಪಡೆಯುವುದಾಗಿತ್ತು. ಬಾಯಿಪಾಠದ ಮೂಲಕ ವಿದ್ಯಾರ್ಥಿಗಳು ವೇದವನ್ನು ಕಲಿತು ನೆನಪಿನಲ್ಲಿಟ್ಟುಕೊಂಡು ಅವುಗಳನ್ನು ಭವಿಷ್ಯದ ಜನಾಂಗಕ್ಕೆ ಕೊಂಡೊಯ್ಯುತ್ತಿದ್ದರು. "ಗುರುಕುಲ ಎಂದು ಕರೆಯಲ್ಪಡುತ್ತಿದ್ದ ಆಶ್ರಮ ಶಾಲೆಗಳು ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿದ್ದ ವಿದ್ಯಾ ಸಂಸ್ಥೆಗಳು; ವಿದ್ಯಾರ್ಥಿಗಳು ಗುರುಗಳ ಮನೆಗೆ ಅವರ ಕುಟುಂಬದ ಸದಸ್ಯರಂತೆ ವಾಸಿಸಲು ಬರುತ್ತಿದ್ದರು. ಉಪನಯನವೆಂಬ ಸಂಸ್ಕಾರದ ಅನಂತರ ಗುರುಕುಲಕ್ಕೆ ಪ್ರವೇಶ ಮಾಡಲಾಗುತ್ತಿತ್ತು. ವಿದ್ಯಾರ್ಥಿಯು ತನ್ನ ಸ್ವಂತ ತಂದೆ ತಾಯಿಗಳ ಮನೆಯನ್ನು ಬಿಟ್ಟು ಗುರುಗಳ ಮನೆಯನ್ನು ಸೇರುತ್ತಿದ್ದ. ಈ ಹೊಸ ಗೃಹದಲ್ಲಿ ಅವನಿಗೆ ಎರಡನೆಯ ಜನ್ಮವೊದಗಿದಂತಿದ್ದು, ಅವನು ದ್ವಿಜ ಎನಿಸಿಕೊಳ್ಳುತ್ತಿದ್ದ"[1] ಶಿಕ್ಷಣ ಪಡೆಯುವ ಹಕ್ಕು ಎಲ್ಲರಿಗೂ ಇರಲಿಲ್ಲ. ವೇದ, ಆಗಮ ಒಟ್ಟಾಗಿ ಸಂಸ್ಕೃತ ಭಾಷೆಯನ್ನು ಕಲಿಯುವುದೇ ಶಿಕ್ಷಣ ಎಂದೆನಿಸಿತ್ತು. ಧಾರ್ಮಿಕ ವ್ಯವಸ್ಥೆ ಈ ಶಿಕ್ಷಣ ಕ್ರಮವನ್ನು ನಿಯಂತ್ರಿಸುತ್ತಿತ್ತು. ಶಿಕ್ಷಣದ ಉದ್ದೇಶ, ಆಶಯಗಳು ಇಂದಿನಂತಿರಲಿಲ್ಲ. ವರ್ಣಾಶ್ರಮ ಧರ್ಮದ ನೆರಳಿನಲ್ಲಿ ವಿದ್ಯೆ ಕೆಲವೇ ಜನರ ಸ್ವತ್ತಾಗಿತ್ತು. ಸಾಮೂಹಿಕ ಶಿಕ್ಷಣಕ್ಕೆ ಅಲ್ಲಿ ಅಷ್ಟಾಗಿ ಅವಕಾಶವಿರಲಿಲ್ಲ. ಈ ಪದ್ಧತಿ ಉನ್ನತ ವರ್ಗದವರಿಗಷ್ಟೇ ಮೀಸಲಿತ್ತು. ಅಲ್ಲಿ ಗುರುಗಳ ಆಗ್ರಹಕ್ಕನುಸಾರವಾಗಿ ಅತ್ಯಂತ ಕಟ್ಟುನಿಟ್ಟಾದ ವಿದ್ಯೆಯನ್ನು ಕಲಿಸಲಾಗುತ್ತಿತ್ತು.

ಅಂದಿನ ಕಾಲದಲ್ಲಿ ವಿದ್ಯೆ ಕಲಿಯುವುದು ಸ್ತ್ರೀಯರ ಪಾಲಿಗಂತೂ ಕತ್ತಲೆಯ

ಯುಗದಂತಿತ್ತು. ಧಾರ್ಮಿಕ ಸಂಸ್ಕಾರದ ಆಚರಣೆ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಆಕೆಗೆ ಯಾವ ಹಕ್ಕು ಇರಲಿಲ್ಲ. ಶತಶತಮಾನಗಳವರೆಗೆ ಈ ಪರಿಸರ ಸ್ತ್ರೀಯರ ಪಾಲಿಗೆ ಎಸಗಲಾರದ ಸಾಮಾಜಿಕ ಅನ್ಯಾಯವಾಗಿತ್ತು. ಈ ಒಂದು ಪದ್ಧತಿ ಒಂದು ಹಂತದವರೆಗೆ ಮುಂದುವರೆದುಕೊಂಡು ಕಾಲಾನಂತರ ಬದಲಾವಣೆಯ ರೂಪವನ್ನು ಪಡೆಯಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ವಿದ್ಯೆ ಕಲಿಯುವುದು ಅವರ ಜನ್ಮಸಿದ್ಧ ಅಧಿಕಾರವಾಗಿತ್ತು. ಆದರೆ ಅಧಿಕ ಸಂಖ್ಯೆಯಲ್ಲಿದ್ದ ಶೂದ್ರರಿಗೆ ಶಿಕ್ಷಣ ಗಗನ ಕುಸುಮವಾಗಿತ್ತು. ಈ ಅಸಮತೋಲನವನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಇವರು ತಮ್ಮ ತಮ್ಮ ಜಾತಿಗನುಗುಣ ವೃತ್ತಿಯನ್ನು ಮಾಡಬೇಕಾಗಿತ್ತು. ಬ್ರಾಹ್ಮಣರ ಶಿಕ್ಷಣ ಆಧ್ಯಾತ್ಮಿಕ ಶಿಕ್ಷಣವಾಗಿದ್ದು ವೇದದ ವಿವಿಧ ಭಾಗಗಳನ್ನು ಅಧ್ಯಯನ ಮಾಡುತ್ತಿದ್ದರು. ಕ್ಷತ್ರಿಯರ ಶಿಕ್ಷಣ ವೃತ್ತಿದಾಯಕವಾಗಿದ್ದು ಸೈನಿಕ ಶಿಕ್ಷಣ ವಾಗಿತ್ತು. ವೈಶ್ಯರ ಶಿಕ್ಷಣ ಸಾಂಸ್ಥೀಕರಣಕ್ಕಿಂತ ಹೆಚ್ಚಾಗಿ ಗೃಹಕೃತ್ಯವಾಗಿತ್ತು. ಇಂತಹ ಶಿಕ್ಷಣವನ್ನು ಪ್ರಾಚೀನ ಕರ್ನಾಟಕದಲ್ಲಿ ಅಗ್ರಹಾರಗಳು, ಮಠಗಳು, ಘಟಿಕಾಸ್ಥಾನಗಳೆಂಬ ವಿದ್ಯಾಸಂಸ್ಥೆಗಳು ಕೊಡುತ್ತಿದ್ದವು. ಊರೂರುಗಳಲ್ಲಿ ಇಂತಹ ವಿದ್ಯಾಸಂಸ್ಥೆಗಳು ವಿದ್ಯೆಯನ್ನು ಸಾಧ್ಯವಾದಷ್ಟು ವ್ಯಾಪಕವನ್ನಾಗಿ ಮಾಡುವ ಪ್ರಬಲವಾದ ಉದ್ದೇಶವನ್ನು ಹೊಂದಿದ್ದವು. ರಾಜರು, ಸಾಮಂತರು, ಶ್ರೀಮಂತರು ಹೀಗೆ ಅನೇಕರು ಇಂತಹ ಸಂಸ್ಥೆಗಳಿಗೆ ದಾನ-ದತ್ತಿಗಳನ್ನು ನೀಡುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಇದು ಅವರು ವಿದ್ಯೆಗೆ ಕೊಡುತ್ತಿದ್ದ ಪ್ರೋತ್ಸಾಹಕ್ಕೆ ನಿದರ್ಶನವಾಗಿದೆ.

ಒಂದು ನಾಡು ತುಂಬಾ ಸುಸಂಸ್ಕೃತವಾಗಿದೆ ಎಂಬುದನ್ನು ತಿಳಿಯ ಬೇಕಾದರೆ ಅಲ್ಲಿರುವ ವಿದ್ಯಾಕೇಂದ್ರಗಳನ್ನು ಅವಲೋಕಿಸ ಬೇಕಾಗುತ್ತದೆ. ಭಾರತೀಯರು ಪ್ರಾಚೀನ ಕಾಲದಿಂದಲೂ ವಿದ್ಯೆಗೆ ಅಪಾರ ಗೌರವವನ್ನು ನೀಡುತ್ತಾ ಬಂದಿದ್ದಾರೆ. "ವಿದ್ಯೆಯ ವಿಷಯದಲ್ಲಿ ಪ್ರಾಚೀನ ಭಾರತವು ಇಟ್ಟುಕೊಂಡಿದ್ದ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು. ವಿದ್ಯೆಗಿಂತ ಶ್ರೇಷ್ಠವಾದುದು ಮತ್ತೊಂದಿಲ್ಲ. ಸರ್ವದ್ರವ್ಯಗಳಲ್ಲಿ ವಿದ್ಯೆಯೇ ನಿಜವಾದ ಧನ. ಏಕೆಂದರೆ ಅದನ್ನು ಯಾರೂ ಅಪಹರಿಸಲಾರರು, ಅದು ಅನರ್ಘ್ಯವಾದುದು ಮತ್ತು ಅಕ್ಷಯವಾದುದು."[2] ಆದ್ದರಿಂದ ವಿದ್ಯೆಯ ಪರಮ ಪ್ರಯೋಜನವು ಆತ್ಮಸಿದ್ಧಿ ಮತ್ತು ಆತ್ಮಜ್ಞಾನಗಳೇ ಆಗಿದ್ದವು. ದೇವಾಲಯಗಳಿಗೆ ದಾನ ದತ್ತಿಗಳನ್ನು ಬಿಡುವಾಗ ವಿದ್ಯಾಭ್ಯಾಸಕ್ಕೂ ಇಂತಿಷ್ಟೆಂಬಂತೆ ಮೀಸಲಾಗಿರಿಸುತ್ತಿದ್ದರು.

ಅಗ್ರಹಾರಗಳು ಮನುಷ್ಯನ ವ್ಯಕ್ತಿತ್ವ ವಿಕಸನದ ಬೆಳಗಣಿಗೆಯೊಂದಿಗೆ ಆ ನಾಡಿನ ವಿಕಾಸದ ಬೆಳವಣಿಗೆಯನ್ನು ಗುರುತಿಸಿಕೊಂಡಿದ್ದವು. ಅಂದಿನ ಕಾಲದಲ್ಲಿ ವಿದ್ವಾಂಸರಿಂದ ಕೂಡಿದ್ದ ಅಗ್ರಹಾರಗಳು ತಮ್ಮ ಪ್ರಾಮುಖ್ಯತೆ ಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದನ್ನು ಕಾಣುತ್ತೇವೆ. ಅದಕ್ಕೆಂದೇ ಅಗ್ರಹಾರಗಳು ವಿದ್ಯಾಭ್ಯಾಸದ ದೃಷ್ಟಿಯಿಂದ ಮಹತ್ವದ ಸ್ಥಾನವನ್ನು ಪಡೆದಿವೆ. ಕೊಪ್ಪಳ ಜಿಲ್ಲೆಯೂ ಇದಕ್ಕೆ

ಹೊರತಾಗಿಲ್ಲ. ಇಂತಹ ಅಗ್ರಹಾರಗಳು ಈ ಜಿಲ್ಲೆಗೆ ನೀಡಿದ ಕೊಡುಗೆಯನ್ನು ಇಲ್ಲಿ ವಿವರಿಸಲಾಗಿದೆ.

**ಅಗ್ರಹಾರಗಳು :**

ಅಗ್ರಹಾರವೆಂದರೆ ವಿದ್ಯಾವಂತ ಬ್ರಾಹ್ಮಣರ ನಿವಾಸಕ್ಕಾಗಿ ಕೆಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾರ್ಪಡಿಸಿ ಅವರಿಗೆ ದಾನವಾಗಿ ಬಿಟ್ಟುಕೊಡುತ್ತಿದ್ದರು. "ಪ್ರಾಚೀನ ಕಾಲದಲ್ಲಿ ರಾಜ್ಯವು ವಿದ್ಯಾಭ್ಯಾಸದ ಹೊಣೆಯನ್ನು ಪ್ರತ್ಯಕ್ಷವಾಗಿ ವಹಿಸಿದ್ದರೂ, ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ಪರೋಕ್ಷವಾಗಿ ಸಹಾಯ ಮಾಡಿದೆ ಎನ್ನಬಹುದು. ಹೊಟ್ಟೆ ಬಟ್ಟೆಗಳ ಚಿಂತೆಯನ್ನು ರಾಜ್ಯವು ಹೋಗಲಾಡಿಸಿದುದರಿಂದ ಅಗ್ರಹಾರಗಳ ಬ್ರಾಹ್ಮಣರು ತಮ್ಮ ಗಮನವನ್ನು ವಿದ್ಯಾದಾನದ ಕಡೆಗೆ ಕೊಡಲು ಸಾಧ್ಯವಾಯಿತು."[3] ಅಲ್ಲದೆ ಆ ಊರಿನ ಸಂಪೂರ್ಣ ಆದಾಯವು ರಾಜ ಬೊಕ್ಕಸಕ್ಕೆ ಸಲ್ಲದೆ ಆ ಐಶ್ವರ್ಯವನ್ನು ಬ್ರಾಹ್ಮಣರು ಅನುಭವಿಸುತ್ತಿದ್ದರು. "ವಿದ್ಯಾದಾನವು ಪವಿತ್ರ ಕಾರ್ಯವಾದುದರಿಂದ, ಇದಕ್ಕೋಸ್ಕರ ಈ ಅಗ್ರಹಾರಗಳನ್ನು ದಾನವಾಗಿ ಕೊಡುತ್ತಿದ್ದರು. ಹೀಗಾಗಿ ನಮ್ಮ ನಾಡಿನಲ್ಲಿ ಅನೇಕಾನೇಕ ಅಗ್ರಹಾರಗಳು ಉಪಸ್ಥಿತವಿದ್ದವು."[4] ಇಂಥ ಅಗ್ರಹಾರಗಳು ಬ್ರಾಹ್ಮಣರ ವಶಕ್ಕೆ ಒಳಪಟ್ಟಿರಲಿಲ್ಲ. ಬೇರೆ ಜನಾಂಗಗಳವರು ಇಲ್ಲಿ ಇರಬಹುದಾಗಿತ್ತು. ಆದರೆ ಬ್ರಾಹ್ಮಣರಿಗೆ ಮಾತ್ರ ಅಲ್ಲಿಯ ಉತ್ಪತ್ತಿಯೆಲ್ಲವೂ ಸಲ್ಲುತ್ತಿತ್ತು. "ಇದರ ಮೂಲರೂಪ "ಅಗ್ರಹಾರ "ಎಂದಿರಬೇಕೆಂದೂ, ಅದು ಅಗ್ರ+ಆಹಾರ ಎಂಬ ಎರಡು ಪದಗಳ ಸಮಾಸವೆಂದೂ ಪ್ರೊ.ಡಿ.ಎಲ್. ನರಸಿಂಹಾಚಾರ್ಯರ ಅಭಿಪ್ರಾಯ. 'ಅಗ್ರ' ಎಂದರೆ ಶ್ರೇಷ್ಠ, ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ."[5] ಅಗ್ರಹಾರಗಳಲ್ಲಿ ಇಂತಹ ವಿದ್ವಾಂಸರ ಅಥವಾ ಮಹಾಜನರ ಸಂಖ್ಯೆ ಸುಮಾರು ನೂರರಿಂದ ಸಾವಿರದವರೆಗೂ ಇದ್ದುದು ಶಾಸನಗಳಿಂದ ತಿಳಿದು ಬರುತ್ತದೆಂದು ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಅಗ್ರಹಾರವನ್ನು ಬ್ರಾಹ್ಮಣರಿಗೆ ಮಾತ್ರ ದಾನ ಕೊಡುತ್ತಿದ್ದರೆ; ಭತ್ತ ಗ್ರಾಮವನ್ನು ಇತರರಿಗೂ ದಾನ ಕೊಡುತ್ತಿದ್ದರು. ಪ್ರಾಚೀನ ಭಾರತದಲ್ಲಿದ್ದಂತೆ ಕೊಪ್ಪಳ ಜಿಲ್ಲೆಯಲ್ಲಿಯೂ ಸಹ ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಅವುಗಳ ಕುರಿತಾದ ಉಕ್ತ ಮಾಹಿತಿಯನ್ನು ಸಂಗ್ರಹಿಸಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

**ಕೌರೂರು(ಕೌಲೂರು) :**

ಕೌರೂರು ಕೊಪ್ಪಳ ತಾಲೂಕಿಗೆ ಸೇರಿದ ಐತಿಹಾಸಿಕ ಮಹತ್ವ ಪಡೆದ ಗ್ರಾಮವಾಗಿದೆ. ಹಿಂದೆ ಇದು ಅಗ್ರಹಾರವಾಗಿದ್ದು ಕೌರವಪುರ, ಕೌರೂರು, ಕೌಲೂರು, ಕವಲೂರು ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದಿತ್ತು. ಈ ಪಟ್ಟಣ

ಮಾಸವಾಡಿನಾಡಿಗೆ ಸೇರಿದ ಒಂದು ಭಾಗವಾಗಿತ್ತು. ತೆಂಕಣ ಅಯ್ಯಾಣವೊಳೆ[6] ಎಂದು ಹೆಸರುಗೊಂಡಿದ್ದ ಈ ಅಗ್ರಹಾರದಲ್ಲಿ ವಾಸವಾಗಿದ್ದ ಮಹಾಜನಗಳ ಸಂಖ್ಯೆ ಐದುನೂರು. ಈ ಮದಿಜನರು ಅತ್ಯಂತ ವಿವೇಕಶಾಲಿ ಗಳಾಗಿದ್ದರೆಂದು ಇಲ್ಲಿ ದೊರೆತ ಶಾಸನದಿಂದ ತಿಳಿದು ಬರುತ್ತದೆ. ಬನ್ನಿಕೊಪ್ಪದಿಂದ 5ಕಿ.ಮೀ.ದೂರದಲ್ಲಿರುವ ನಾಡಾದ ಕವಲೂರು ಕ್ರಿ.ಶ.1177 ರಿಂದ ಕ್ರಿ.ಶ.1188ರ ಅವಧಿಗೆ ಸೇರಿದ ಕಳಚೂರಿ ಚಕ್ರವರ್ತಿ ಸಂಕಮದೇವ ಭೂವಲ್ಲಭನ ಶಾಸನ ಈ ಗ್ರಾಮವನ್ನು 'ಶ್ರೀಮದನಾದಿಯಗ್ರಹಾರ ಕೌರೂರ' ಎಂದು ಉಲ್ಲೇಖಿಸುತ್ತದೆ.[7]

ಕೊಪ್ಪಳ ತಾಲೂಕಿನ ಕವಲೂರಿನ ಹರಿಹರೇಶ್ವರ ದೇವಾಲಯದ ಮುಂದೆ ದೊರೆತ ಶಾಸನವು[8] ಇಲ್ಲಿಯ ಮಹಾರಾಜರು ವ್ಯಾಕರಣ, ಸ್ಮೃತಿ, ಪುರಾಣ, ನ್ಯಾಯ, ಕಾವ್ಯ, ನಾಟಕ, ವಾತ್ಸಾಯನ ಮುಂತಾದ ವಿಷಯಗಳಲ್ಲಿ ಪರಿಣಿತರಾಗಿದ್ದರೆಂದು ತಿಳಿಸುತ್ತದೆ. ಮುಂದುವರೆದ ಸಾಲುಗಳು ಬಳ್ಳಾಲದೇವನ ಹಿರಿಯರಾಣಿ ರೆಮ್ಮಲದೇವಿಯು ತನ್ನ ತಾಯಿ ಕೋರಿಕೆಯಂತೆ ಮಾಸವಾಡಿ ನಾಡಿನ ಅಗ್ರಹಾರ ಕೌರೂರಿನಲ್ಲಿ ಪಡೆವಳದ ಯೋಚಿಮಯ್ಯ ನಾಯಕನು ಮಾಡಿಸಿದ ಹರಿಹರದೇವಾಲಯಕ್ಕೆ ಬಳ್ಳಾಲದೇವನು ದೇವರ ಚೈತ್ರಪವಿತ್ರಕ್ಕೆ, ಬ್ರಹ್ಮಯತಿಗೆ, ಯೆಡೆಹಳ್ಳಿಗೇರಿಯಲ್ಲಿ ನಾಲ್ಕು ಕಡೆಯ ಗುಡ್ಡೆ ಮೇರೆಯಾಗಿ ಹೊಲವನ್ನು ದಾನ ಬಿಡುತ್ತಾನೆ. ಹಾಗೂ ಹಂಪರಸ ಮತ್ತು ಹೊಲ್ಲರಸ, ಯೋಚಿಮಯ್ಯ ನಾಯಕನು ಸೇರಿ ಯೆಡೆಹಳ್ಳಿಗೇರಿಯ ಮೇಲಾಳಿಕೆಯನ್ನು ಹರಿಹರದೇವರ ಭೋಗಕ್ಕೆ ನೀಡಿದಂತೆ ಉಲ್ಲೇಖ ಮೂಡಿಬಂದಿದೆ. ಕ್ರಿ.ಶ.1097ರಲ್ಲಿ ಕೊಪ್ಪಳ ಜಿಲ್ಲೆಯ ಕವಲೂರಿನ ಗವಿಮಠದ ಮುಂಭಾಗದಲ್ಲಿ ದೊರೆತ ಶಾಸನದಲ್ಲಿ[9] ಅಗ್ರಹಾರದ ಉಲ್ಲೇಖ ಬಂದಿದ್ದು ಈ ಕವಲೂರಿನಲ್ಲಿ 300 ಜನ ಮಹಾಜನರಿದ್ದಂತೆ ತಿಳಿದು ಬರುತ್ತದೆ. ಇವರ ಕುರಿತು ಹೆಚ್ಚಿನ ಮಾಹಿತಿ ಈ ಶಾಸನದಲ್ಲಿ ದೊರೆತಿರುವುದಿಲ್ಲ.

**ಅಳವಿಂಡಿ(ಅಳವಂಡಿ) :**

ಇಂದಿನ ಕೊಪ್ಪಳ ತಾಲೂಕಿಗೆ ಸೇರಿದ ಈ ಅಗ್ರಹಾರವು ಕುಕ್ಕನೂರು ಅಗ್ರಹಾರದ ನಂತರ ಅತ್ಯಂತ ಪ್ರಮುಖವಾದ ಅಗ್ರಹಾರವೆಂದು ಪ್ರಾಮುಖ್ಯ ತೆಯನ್ನು ಪಡೆದಿದೆ. "ಹಿಂದಿನ ದಿನಗಳಲ್ಲಿ 'ಅಳವಿಂಡಿ' ಎಂಬ ಹೆಸರಿನಲ್ಲಿ ಒಂದು ಸುಪ್ರಸಿದ್ಧ ಅಗ್ರಹಾರವಾಗಿದ್ದಿತು."[10] ಕ್ರಿ.ಶ.1157ರಲ್ಲಿ ದೊರೆತ ಅಳವಂಡಿಯ ಶಾಸನದಲ್ಲಿ[11] 'ಮಹಾಗ್ರಹಾರಮಳವಂಡಿ' ಎಂದು ಕರೆಯಲಾಗಿದೆ. ಮುಂದುವರೆದ ಈ ಶಾಸನದಲ್ಲಿ ಅಲ್ಲಿನ ಅಗ್ರಹಾರದಲ್ಲಿದ್ದ ಮಹಾಜನರ ಪ್ರಸ್ತಾಪ ಬಂದಿರುತ್ತದೆ. ಈ ಅಗ್ರಹಾರಗಳಲ್ಲಿ 400 ಮಹಾಜನಗಳ ಉಲ್ಲೇಖ ಬಂದಿದ್ದು ಅವರು ವ್ಯಾಕರಣ, ಸ್ಮೃತಿ, ಪುರಾಣ, ತರ್ಕ, ನಾಟಕ, ಕಾವ್ಯಗಳ ಬಗ್ಗೆ ತಿಳಿದವರಾಗಿದ್ದರು. ಭೀಮ ಮತ್ತು ಅವನ ಪತ್ನಿ ದುಗ್ಗಿಯಕ್ಕನ ಮಗ ಚಾವರಾಜನು ಅಳವಂಡಿಯಲ್ಲಿ ಕೇಶವದೇವಾಲಯ, ಅರವಟಿಗೆ,

ಅಗ್ನಿಷ್ಠೆಕೆಯನ್ನು ಮಾಡಿಸಿದ್ದಂತೆ ತಿಳಿದು ಬರುತ್ತದೆ. ಈ ಅಳವಂಡಿಪುರದ ಮನೆಮನೆಯಲ್ಲಿಯೂ ಶಂಕರ, ಅಚ್ಯುತ, ಬುಧಜನರ, ಅತಿಥಿಗಳ ಪೂಜೆ ನಡೆಯುತ್ತಿತ್ತು. ಈ ಸಮಯದಲ್ಲಿ ವೇದಾಧ್ಯಯನದ ಜೊತೆಗೆ ಅಗ್ನಿಹೋತ್ರಗಳು ನಡೆಯುತ್ತಿದ್ದವು. ಕೊಪ್ಪಳ ತಾಲೂಕಿನ ಅಳವಂಡಿಯ ಬಾವಾಜಿ ಹೊಲದಲ್ಲಿ ದೊರೆತ ಮತ್ತೊಂದು ಶಾಸನದಲ್ಲಿ[12] 400 ಮಹಾಜನಗಳಿದ್ದಂತೆ ತಿಳಿದು ಬರುತ್ತದೆ. ಇಲ್ಲಿಯ ಮಹಾ ಜನರು 14 ಗದ್ಯಾಣ ಹಾಗೂ 2 ಮನೆಗಳನ್ನು ಮಲ್ಲಿಕಾರ್ಜುನ ಬೋವನಿಗೆ ದಾನಬಿಟ್ಟಂತೆ ತಿಳಿದು ಬರುತ್ತದೆ. ಈ ಅಂಶಗಳು ಅಲ್ಲಿಯ ಮಹಾಜನರು ಅನೇಕ ವಿಷಯಗಳಲ್ಲಿ ಪರಿಣತಿಯನ್ನು ಪಡೆದು ಉದ್ದಾಮ ಪಂಡಿತರೆನಿಸಿ ಕೊಂಡಿದ್ದರೆಂದು ತಿಳಿದು ಬರುತ್ತದೆ. ಹೀಗೆ ಅಳವಂಡಿ ಮಹಾಗ್ರಹಾರವು 400 ಅಗ್ನಿಹೋತ್ರದ ವಿಪ್ರರ ನೆಲೆವೀಡಾಗಿ, ವಿದ್ಯಾಕೇಂದ್ರವಾಗಿ ಪ್ರಸಿದ್ಧಿಯಾಯಿತು.

**ಮುದೆನೂರು(ಮಾದಿನೂರು) :**

ಮುದೆನೂರು ಕೊಪ್ಪಳ ತಾಲೂಕಿಗೆ ಸೇರಿದ ಅಗ್ರಹಾರವಾಗಿದೆ. ಈ ಗ್ರಾಮವನ್ನು ಶಾಸನವು[13] ಮೋದಿತಗ್ರಾಮ, ಮಾದಿನೂರು, ಮೂದೆನೂರು, ಮುದೆಗನೂರು, ಮಾದನೂರು ಮುಂತಾದ ಹೆಸರಿನಿಂದ ಸಂಬೋಧಿಸಿದೆ. ಈ ಗ್ರಾಮದಲ್ಲಿ ದೊರೆತ ಶಾಸನದಲ್ಲಿ[14] ನೂರ್ಮಡಿತೇಜ ಆಹವಮಲ್ಲ ದೇವನನ್ನು ಮತ್ತು ಮುದೆನೂರ ಅಗ್ರಹಾರವನ್ನು ವರ್ಣಿಸಿದೆ. ಶಾಸನದಲ್ಲಿ ಈ ನಾಡನ್ನು 'ಎಡೆದೊರೆಯಿಚಾಸಿರದ ಬಳಿಯ [ಕೆಳವಾಡಿ ಮೂನೂಱಕ್ಕಂ ತಿಳಿಕದ]ಪ್ಪಂತಿರಿಪ್ಪಗ್ಗದಗ್ರಹಾರಂ' ಎಂದು ಬಣ್ಣಿಸಿದ್ದು ಈ ಪ್ರಾಂತಕ್ಕೆ ಮೂದೆನೂರು ತಿಲಕಪ್ರಾಯವಾಗಿತ್ತೆಂದು ಹೊಗಳಿದೆ. ಚಾಲುಕ್ಯ ಅಹವಮಲ್ಲನು ತನ್ನ ಆಳಿಕೆಯ ಅವಧಿಯಲ್ಲಿ ಬ್ರಹ್ಮಾಂಡಕ್ರತುವನ್ನು ಮಾಡಿ ಪೂರ್ಣಗೊಳಿಸಿದ ಸಮಯದಲ್ಲಿ ರೈಕೆಯ ದ್ವೇದಿಚಟ್ಟೋಪಾಧ್ಯಾಯ ಸೋಮಯಾಜಿಗೆ ಮುದೆನೂರನ್ನು ದಾನವಾಗಿ ಕೊಡುತ್ತಾನೆ. ನಂತರದ ಸಾಲುಗಳಲ್ಲಿ ಅರಸ ಅಹವಮಲ್ಲ ತ್ರೈಪುರುಷ ದೇವಾಲಯವನ್ನು ನಿರ್ಮಿಸಿ ಆ ದೇವಾಲಯದ ಪೂಜೆ, ಪುನಸ್ಕಾರ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ, ನಂದಾದೀವಿಗೆಗೆ, ಹಾಗೂ ಅಲ್ಲಿದ್ದ ಪೂಜಾರಿಯ ಜೀವಿತಕ್ಕೆ ಮೂರು ಗದ್ಯಾಣವನ್ನು ದಾನ ಬಿಟ್ಟಂತೆ ಕಂಡು ಬಂದಿದೆ. ಈ ಶಾಸನವು ಮೂರು ಕಾಲಗಳಲ್ಲಿ ರಚಿತ ಗೊಂಡಿದ್ದು ಮುಂದಿನ ಸಾಲುಗಳು ಭೂಲೋಕಮಲ್ಲನ ಅವಧಿಯದ್ದಾಗಿದೆ. ಕ್ರಿ.ಶ.1190ರ ಶಾಸನದಲ್ಲಿ[15] ಭೂಲೋಕಮಲ್ಲನ ಆಳಿಕೆಯ ಸಮಯದಲ್ಲಿ ಅಲ್ಲಿಯ ದೇವಾಲಯ (ದೇವಾಲಯದ ಹೆಸರಿನ ಉಲ್ಲೇಖವಿಲ್ಲ) ಜೀರ್ಣೋದ್ಧಾರಕ್ಕಾಗಿ ಊರಿನ ಮಹಾಜನರು ಕೆಲವು ದಾನಗಳನ್ನು ನೀಡುತ್ತಾರೆ. ಹಾಗೂ ಅಗಸ್ತ್ಯಗೋತ್ರದ ಜಾತರ ಷಣಂಗಿಯ ಮಗನು 750 ಕಮ್ಮ ತೋಟ ಹಾಗೂ 250 ಕಮ್ಮ ಗದ್ದೆಯನ್ನು ಬಿಡುತ್ತಾನೆ. ಹಾಗೆಯೇ ಆತ್ರೇಯಗೋತ್ರದ

ದೇವದಾಸಿ ಕ್ರಮಿತರ ಮಗ ಮಹಾದೇವ, ತ್ರಿಭುವನಮಲ್ಲದೇವನ ಅರಸಿ ರೆಬ್ಬಲದೇವಿ, ಪನ್ನಾಯದ ಸೋಮರಸನ ತಮ್ಮ ರೇವರಸ ಮುಂತಾದವರೆಲ್ಲರೂ ದೇವಾಲಯಕ್ಕೆ ದಾನ ಬಿಟ್ಟ ಉಲ್ಲೇಖ ಶಾಸನದಲ್ಲಿ ಮೂಡಿ ಬಂದಿದೆ. ಈ ಅಗ್ರಹಾರವನ್ನು ಸರ್ವನಮಸ್ಯೆ ಅಗ್ರಹಾರವೆಂದು ಕರೆದಿದ್ದಂತೆ ತಿಳಿದು ಬರುತ್ತದೆ. ಇವರು ಸಕಲ ವಿದ್ಯಾಪಾರಂಗತರಾಗಿದ್ದು ಸಾಕ್ಷಾತ್ ಸರಸ್ವತಿಯ ಪ್ರತಿರೂಪದಂತಿದ್ದರೆಂದು ಶಾಸನ ಇವರನ್ನು ಹೊಗಳಿದೆ. ಯಜನ, ಯಾಜನ, ಅಧ್ಯಯನ, ಅಧ್ಯಾಪನ ಈ ಮುಂತಾದ ಪ್ರಮುಖ ಕರ್ತವ್ಯಗಳಲ್ಲಿ ಅವರು ನಿರತರಾಗಿದ್ದರೆಂದು ಇಲ್ಲಿಯ ಶಾಸನ ಉಲ್ಲೇಖಿಸಿದೆ. ಸಾಮಾನ್ಯ ನಾಡಾಗಿದ್ದ ಈ ನಾಡನ್ನು ಚಾಲುಕ್ಯ ಅರಸನಾದ ನೂರ್ಮಡಿತೇಜ ಆಹವಮಲ್ಲದೇವನು ಅಗ್ರಹಾರವನ್ನಾಗಿ ಮಾರ್ಪಡಿಸಿದ್ದು ಇಲ್ಲಿ ಅತ್ಯಂತ ಮಹತ್ವದ ಅಂಶವಾಗಿದೆ. ಈ ಮೇಲಿನ ಮಹಾಜನಗಳ ವಿದ್ವತ್ ಪರಂಪರೆಯೇ ಕೆಳವಾಡಿಯ ಭಾಗವಾಗಿದ್ದ ಅಗ್ರಹಾರ ಮುದೆನೂರು ಆ ನಾಡಿಗೆ ಕೀರ್ತಿಯನ್ನು ತಂದುಕೊಟ್ಟಿತ್ತು ಎಂದು ಹೇಳಿರುವಲ್ಲಿ ಸಂಶಯವಿಲ್ಲವೆಂದು ಹೇಳಬಹುದಾಗಿದೆ.

**ಮುಧೋಳು :**

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿಗೆ ಸೇರಿದ ಗ್ರಾಮ ಮುಧೋಳ. ಈ ಗ್ರಾಮವನ್ನು ಹಿಂದೆ 'ಮುದವೊಳಲು'[16] ಎಂಬ ಹೆಸರಿನಿಂದಲೂ ಗುರುತಿಸುತ್ತಿದ್ದರು. ಈ ಗ್ರಾಮವು ಹಿಂದೆ ಅತ್ಯಂತ ದೊಡ್ಡ ಅಗ್ರಹಾರ ವಾಗಿತ್ತೆಂಬುದು ಶಾಸನೋಕ್ತ 'ಶ್ರೀಮನ್ಮಹಾಗ್ರಹಾರಂ'[17] ಎಂಬ ವಾಕ್ಯದಿಂದ ತಿಳಿದುಬರುತ್ತದೆ. ಇಲ್ಲಿ ವಾಸಿಸಿದ್ದ ಮಹಾಜನಗಳ ಸಂಖ್ಯೆ ಒಂದು ಸಾವಿರ. ಇಲ್ಲಿ ನೆಲೆಸಿದ್ದ ಮಹಾಜನರನ್ನು ಶಾಸನವು ಹೀಗೆ ವರ್ಣಿಸಿದೆ. ಕ್ರಿ.ಶ.1154ರ ಮುಧೋಳ ಶಾಸನವು[18] ಇಲ್ಲಿಯ ಮಹಾಜನರು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನಾನುಷ್ಠಾನ, ಪರಾಯಣ, ಜಪಸಮಾದಿ ಮುಂತಾದವುಗಳಲ್ಲಿ ಕುಶಲರೆನಿಸಿದ್ದರೆಂದು ತಿಳಿಸುತ್ತದೆ. ಹೀಗೆ ಇವರು ಷಟ್ಕರ್ಮನಿರತರಾಗಿದ್ದರೆಂದು ಶಾಸನ ಬಣ್ಣಿಸಿದೆ. ಹಾಗೂ ಇವರನ್ನು ಶ್ರೀ ಸ್ವಯಂಭೂ ಜಡೆಯ ಶಂಕರದೇವರ ಪಾದಾರಾಧಕರು ಎಂದು ಕರೆದಿದೆ. ಮುಧೋಳ ನಾಡಿನ ಗವರೇಶ್ವರ ದೇವರ ಅಂಗಭೋಗ, ಜೀರ್ಣೋದ್ಧಾರಕ್ಕೆ, ಸುಣ್ಣ ಬಳಿಯಲು, ಗಂಧ-ಕುಂಕುಮ, ಕರ್ಪೂರ ಮುಂತಾದವಕ್ಕೆ ಅಲ್ಲಿಯ ನಾನಾದೇಶಿಗಳು ತಾವು ಮಾರಿದ ದ್ರವ್ಯದಲ್ಲಿ ಬಂದ ಲಾಭದಲ್ಲಿ ಚಿನ್ನದ ಕಾಣಿ ಎರಡು, ಸೀರೆಯ ದಿಂಡಿನ ಬಂಡಿಯೊಂದಕ್ಕೆ ಒಂದು ಪಣ, ಎತ್ತಿನ ಮೇಲಿನ ಮಳವೆಗೆ ಐದು ವೀಸವನ್ನು ದಾನ ವಿಟ್ಟಂತೆ ಕಂಡು ಬರುತ್ತದೆ. ಇವರಲ್ಲದೆ ವೊಕ್ಕಲುಗಳು ಒಂದು ಹಾಗವನ್ನೂ, ಹಾಗಲಕೆರೆ ಊರ ಜನರು ವೈಯಕ್ತಿಕವಾಗಿ ಭೂದಾನ ನೀಡಿದಂತೆ ತಿಳಿದು ಬರುತ್ತದೆ. ಈ ಮಹಾಗ್ರಹಾರದ ಮಹಾಜನಗಳ ಸಂಖ್ಯೆ ಇತರ ಅಗ್ರಹಾರಗಳಾಗಿದ್ದ ಅಳವಂಡಿ, ಕವಲೂರು, ಇಟ್ಟಗೆಗಳಿಗಿಂತ ಹೆಚ್ಚಾಗಿದ್ದುದು ಕುಕನೂರು ಅಗ್ರಹಾರಕ್ಕೆ

ಸಮನಾಗಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ.[19] ಇಲ್ಲಿ ನೆಲೆಸಿದ್ದ ಒಂದು ಸಾವಿರ ಮಹಾಜನರ ಸಂಖ್ಯೆಯೇ ಈ ಅಗ್ರಹಾರಕ್ಕಿದ್ದ ಮಹತ್ವವನ್ನು ತಿಳಿಸುತ್ತದೆ. ಅತ್ಯಂತ ವಿಶಾಲವಾದ ಈ ಅಗ್ರಹಾರದಲ್ಲಿ ಅಧ್ಯಯನದ ಜೊತೆಗೆ ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದನ್ನು ಕಾಣುತ್ತೇವೆ.

**ಕುಕನೂರು :**

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಅತ್ಯಂತ ಪ್ರಸಿದ್ಧವಾದ ಹಾಗೂ ಅಪಾರವಾದ ಐತಿಹಾಸಿಕ ಪರಂಪರೆಯನ್ನು ಹೊಂದಿದ ಪಟ್ಟಣವಾಗಿದೆ. ಯಲಬುರ್ಗಾ ತಾಲೂಕಿನಲ್ಲಿ ದೊರೆತ ಕುಕನೂರಿನ ಹೆಚ್ಚಿನ ಶಾಸನಗಳು ಇಲ್ಲಿಯ ಅಗ್ರಹಾರಗಳ ಕುರಿತಾಗಿಯೇ ವಿಶೇಷವಾದ ಮಾಹಿತಿಯನ್ನು ನೀಡಿವೆ. ಈ ಪಟ್ಟಣ ಅಗ್ರಹಾರವೆಂದು ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೋ ಅಷ್ಟೇ ಪ್ರಾಮುಖ್ಯತೆಯನ್ನು ವಾಸ್ತುಶಿಲ್ಪದ ದೃಷ್ಟಿಯಿಂದಲೂ ಇದು ಹೆಸರನ್ನು ಪಡೆದಿದೆ. ಅತ್ಯಂತ ಪ್ರಾಚೀನ ಕಾಲದ ದೇವಾಲಯಗಳೂ ಇಲ್ಲಿವೆ. ನವಲಿಂಗೇಶ್ವರ ಮತ್ತು ಮೂಲಸ್ಥಾನ ಕಲ್ಲೇಶ್ವರನ ದೇವಾಲಯಗಳು ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವದ ರಚನೆಗಳಾಗಿವೆ. ಹಿಂದೆ ಶೈಕ್ಷಣಿಕವಾಗಿ ರಾಜಕೀಯವಾಗಿ ಧಾರ್ಮಿಕವಾಗಿ ಹಾಗೂ ವಾಸ್ತುಶಿಲ್ಪದ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದ ನೆಲೆಯಾಗಿ ಮಹಾದಗ್ರಹಾರವಾಗಿ ಮಹತ್ವದ ಪಾತ್ರವನ್ನು ವಹಿಸಿತ್ತೆಂದು ಹೇಳಬಹುದು.

'ಚಂದ್ರಹಾಸಪುರ' 'ಕುಂತಲಪುರ'ವೆಂದು ದಂತಕತೆಗಳಲ್ಲಿ ಕರೆಯಿಸಿ ಕೊಂಡ ಈ ಅಗ್ರಹಾರಕ್ಕೆ 'ಶ್ರೀಮನ್ಮಹಾಗ್ರಹಾರ ಕುಕ್ಕನೂರು' 'ಕುಕ್ಕನೂರು ಮೂವತ್ತು' 'ತ್ರಿಂಶದ್ಗ್ರಾಮಾಧಿಪತಿ' ಮುಂತಾದ ಬೇರೆ ಬೇರೆ ಹೆಸರುಗಳೂ ಕೂಡ ಇದ್ದವೆಂದು ಇಲ್ಲಿರುವ ಶಿಲಾಶಾಸನಗಳಿಂದ ತಿಳಿದು ಬರುತ್ತದೆ.[20] ಕುಕ್ಕನೂರು ಕುಂತಳ ದೇಶದ ಬೆಳ್ವಲ ಎಂಬ ನಾಡಿನ ಒಂದು ಭಾಗವಾಗಿತ್ತು[21] ಈ ನಾಡನ್ನು ಶಾಸನಗಳು ಕುಕ್ಕನೂರು–30[22] ಎಂದು ಕರೆದಿವೆ. ಈ ಕುಕನೂರು 30 ಗ್ರಾಮಗಳನ್ನೊಳಗೊಂಡ ಒಂದು ಆಡಳಿತ ಘಟಕವಾಗಿತ್ತೆಂದು ಹೇಳಬಹುದು. 'ಕುಕ್ಕನೂರು ಅಗ್ರಹಾರವಾಗಿ ಪರಿವರ್ತನೆ ಗೊಂಡ ಕಾಲದ ಬಗೆ ಖಚಿತವಾಗಿ ಹೇಳಲು ಬರುವುದಿಲ್ಲವಾದರೂ ಸುಮಾರು 11ನೆಯ ಶತಮಾನದ ಹೊತ್ತಿಗೆ ಇದು ಅಗ್ರಹಾರವಾಗಿದ್ದಿರ ಬಹುದೆನ್ನಬಹುದು. ಏಕೆಂದರೆ ಕ್ರಿ.ಶ.1253ರ ಹೊತ್ತಿಗೆ ಸೇವುಣ ಕನ್ನರದೇವನ ಪ್ರಧಾನಿಯಾಗಿದ್ದ ಚಾವುಂಡರಾಯ ಎಂಬುವನು ಈ ಅಗ್ರಹಾರವನ್ನು ಮತ್ತೆ ಅಗ್ರಹಾರವನ್ನಾಗಿ ಮಾಡಿ ಅದನ್ನು ಅಲ್ಲಿಯ ಪ್ರತಿಷ್ಠಿತರಾದ ಬ್ರಾಹ್ಮಣರಿಗೆ ಸರ್ವಬಾಧಾಪರಿಹಾರವಾಗಿ ಕೊಟ್ಟ ವಿಚಾರವು ಒಂದು ಶಾಸನದಿಂದ ತಿಳಿಯುತ್ತದೆ. ಶಾಸನಗಳಲ್ಲಿ ಬರುವ ಇದರ ಪರಿಪರಿಯ ವರ್ಣನೆಯಿಂದ ಇದು ಹೆಸರಾಂತ ವಿದ್ಯಾಕೇಂದ್ರ ಮತ್ತು ಧಾರ್ಮಿಕ ಕ್ಷೇತ್ರವಾಗಿತ್ತೆಂದು ವಿವರಗೊಳ್ಳುತ್ತದೆ.[23]

ಕ್ರಿ.ಶ.1143ರ (ಕುಕನೂರು) ಶಾಸನವು[24] ಅಗ್ರಹಾರ ಕುಕನೂರಿನಲ್ಲಿ ಸಾವಿರ ಜನ ಮಹಾಜನರಿದ್ದುದನ್ನು ತಿಳಿಸುತ್ತದೆ. ತೋಟಿಗೇಶ್ವರ ದೇವರಿಗೆ ಇಲ್ಲಿಯ ಮಹಾಜನರು ಒಂದು ಹಾಗವನ್ನು ದಾನ ಬಿಟ್ಟಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.1379ರಲ್ಲಿ ದೊರೆತ ಶಾಸನದಲ್ಲಿ[25] ಅಗ್ರಹಾರವಾದ ಈ ನಾಡಿನಲ್ಲಿ ಚತುರ್ವೇದಾಧ್ಯಯನ ನಡೆಯುತ್ತಿದ್ದಂತೆ ಉಲ್ಲೇಖ ನೀಡಿದೆ. ಇಲ್ಲಿಯ ಅಗ್ರಹಾರವು ನಷ್ಟವಾಗಿ (ಬಿದ್ದು) ಹೋಗಿರಲು ಹಾಗೂ ಅಲ್ಲಿದ್ದ ಮಹಾಮಾಯಾ ದೇವಾಲಯದ ಜೀರ್ಣೋದ್ಧಾರ ಮತ್ತು ಅಂಗಭೋಗ, ರಂಗಭೋಗ, ಮಹಾನೈವೇದ್ಯ, ನಂದಾದೀಪ, ಚೈತ್ರ ಪವಿತ್ರಕ್ಕಾಗಿ 400 ಖಂಡುಗದ ಬೀಜವರಿ ಭೂಮಿಯನ್ನು ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ಕ್ರಿ.ಶ.1107ರ ಶಾಸನವು[26] ಗಂಗಾಧರಯ್ಯ ನಾಯಕನ ಮಗ, ಈಶ್ವರಯ್ಯ ನಾಯಕನ ತಮ್ಮ ಶ್ರೀಪತಿನಾಯಕನು ಅಗ್ರಹಾರ ಕುಕನೂರ ಸಾಸಿರ್ವರ ಕೈಯಲಿ ಸರ್ವನಮಸ್ಯವಾಗಿ ಪಡೆದು ಅಲ್ಲಿದ್ದ ಮೂಲಸ್ಥಾನ ದೇವರ ಶ್ರೀಖಣ್ಡಕ್ಕೆ 18 ಮತ್ತರು 450 ಕಮ್ಮ ಭೂಮಿಯನ್ನು ಶ್ರೀ ಸರಸ್ವತಿ ದೇವರ ಅಂಗಭೋಗಕ್ಕೆ, ನೈವೇದ್ಯಕ್ಕೆ 7 ಮತ್ತರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ.1178ರ ಕುಕನೂರಿನ ಮಹಾಮಾಯಾ ದೇವಾಲಯದ ಮುಖಮಂಟಪ ದಲ್ಲಿರಿಸಿರುವ ಶಾಸನದಲ್ಲಿ[27] ಧಂನುಗಿ ದಂಡನಾಯಕ ಮತ್ತು ಆತನ ತಾಯಿ ಚಂಡಬಾಯಿ, ಅಕ್ಕ ಲಳಿಯಾದೇವಿಯರು ಸೇರಿ ಮಹಾಗ್ರಹಾರ ಕುಕ್ಕನೂರಿ ನಲ್ಲಿರುವ ಕಾಳಿಕಾಜೇಷ್ಠೆಗೆ ಮಹಾಪೂಜೆಮಾಡಿ ಬೆನತೂರನ್ನು ಹೊಲಮೇರೆ ಸಹಿತ ದಾನ ಬಿಟ್ಟಿದ್ದಂತೆ ಉಲ್ಲೇಖಿಸಿದ್ದನ್ನು ಕಾಣುತ್ತೇವೆ.

ಪ್ರಾಚೀನ ಕಾಲದಲ್ಲಿ ಕುಕ್ಕನೂರು ಅತ್ಯಂತ ಪ್ರಸಿದ್ಧವಾದ ಅಗ್ರಹಾರ ವಾಗಿದ್ದು ದೇವಾಲಯಗಳಿಂದ ಕೂಡಿದ ವೇದಪಾಠಗಳಿಂದ ಪ್ರತಿಭಾವಂತ ರೆನ್ನಿಸಿಕೊಂಡ, ಸಕಲಶಾಸ್ತ್ರಗಳಲ್ಲಿ ನಿಪುಣರಾಗಿದ್ದ ವಿಬುಧ ಜನರಿಂದ ಕೂಡಿತ್ತೆಂದು ಇಲ್ಲಿಯ ಶಾಸನಗಳು ಅವರನ್ನು ಅನೇಕ ವಿಧವಾಗಿ ಹೊಗಳಿದ್ದನ್ನು ಇಲ್ಲಿ ನೋಡಬಹುದಾಗಿದೆ.

> ಚತುರ್ವ್ವೇದರ್ಸ್ಸಕಳ ಶಬ್ದವಿದ್ಯಾನಿಪುಣರ್ನ್ನಿರ್ಬ್ಬಾಧಿತ ತರ್ಕರ್ಸ್ಸಾಸಿರ್ವ್ವರ್ಸ್ಸಲೆ
> ಕುಕ್ಕನೂರೊಳಸದಳದೆಸೆದರು॥ ಸಕಳಕಳಾಪಸ್ಮೃತಿವಿದರಕಳಂಕೋದಾ
> ತ್ತಚಿತ್ತರಗ್ನಿಷ್ಟೋಮಾದಿಕ ನಿಖಿಳಯಾಗ ಸಂಪಾದಕರೆನಿಪರು ಕುಕ್ಕನೂರ
> ವಿಬುಧಜನಂಗಳು॥ ಆ ಮಹಾಗ್ರಹಾರದೊಳು॥ಶಿವಾಯ ನಮಃ॥
> ಸ್ವಸ್ತಿ ಯಮನಿಯಮ ಸ್ವಾಧ್ಯಾಯಧ್ಯಾನ ಧಾರಣ ಸಮಾಧಿ ಜಪ
> ಷಡಂಗೋಪಹಾರಾದಿ ಸಂಪನ್ನರ್ ಅಖಿಳ ಪ್ರಾಣಿ ಪ್ರಸಂನರ್ ಅನೇಕ
> ತರ್ಕ್ಕ ವ್ಯಾಕರಣ ಪುರಾಣ ಕಾವ್ಯ ನಾಟಕ ಭರತ ವಾತ್ಸ್ಯಾಯನಾದಿ
> ವಿದ್ಯಾಸಾರಾಸಾರ ವಿಚಾರ ಚತುರಾನನರ್॥28

ಇಲ್ಲಿ ನೆಲೆಸಿದ್ದ ಮಹಾಜನಗಳ ಸಂಖ್ಯೆ ಸಾವಿರ. ಇವರೆಲ್ಲರೂ ಸಕಳ ವೇದ, ಸ್ಮೃತಿ, ತರ್ಕ, ವ್ಯಾಕರಣ, ಪುರಾಣ, ಕಾವ್ಯ, ನಾಟಕ ಈ ಮುಂತಾದ ವಿಷಯಗಳಲ್ಲಿ

ಪಾಂಡಿತ್ಯ ಪ್ರವೀಣರೆನಿಸಿಕೊಂಡಿದ್ದು ಅಲ್ಲಿಯ ವಿದ್ಯಾರ್ಥಿಗಳಿಗೂ ಈ ಎಲ್ಲ ವಿಷಯಗಳನ್ನು ಕಲಿಸುತ್ತಿದ್ದರು. ಒಟ್ಟಿನಲ್ಲಿ ಇದೊಂದು ಮಹಾಗ್ರಹಾರವಾಗಿತ್ತೆಂದು ಹೇಳಬಹುದಾಗಿದೆ.

**ತಳಕಲ್ :**

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿಗೆ ಸೇರಿದ ಈ ಗ್ರಾಮವು ಅಗ್ರಹಾರವಾಗಿತ್ತು ಎಂಬ ಉಲ್ಲೇಖ ಕ್ರಿ.ಶ.991ರ ಚಾಳುಕ್ಯ ಆಹವಮಲ್ಲನ ಕಾಲದ ಶಾಸನದಲ್ಲಿ[29]ದೆ. ಈ ಕಾಲದಲ್ಲಿ ಈತನ ಸಾಮಂತ ಸೋಭನರಸನು ಎರಡಾರುನೂರು, ಬನವಾಸಿ–12000ವನ್ನು ಆಳುತ್ತಿದ್ದ. ಈತನ ಕೈಕೆಳಗಿನ ಅಧಿಕಾರಿ ಸಾವಿಯಣ್ಣನು ಕುಕ್ಕನೂರು–30ನ್ನು ಆಳುತ್ತಿದ್ದನು. ಈ ಸೋಭರಸನು ಬಂಕಾಪುರದ ನೆಲೆವೀಡಿನಲ್ಲಿದ್ದಾಗ ಕಾಳದಾಲೂರಿನ ಸಿದ್ಧೇಶ್ವರದ ಸಂತರಾಶಿ ಭಟ್ಟಾರನ ಶಿಷ್ಯನಾದ ಅಮೃತರಾಶಿ ಮುನೀಶ್ವರನ ಕಾಲನ್ನು ತೊಳೆದು ಅಗ್ರಹಾರ ತಳಕಲ್ಲಿನ ನಾಗೇಶ್ವರ ದೇವಾಲಯಕ್ಕೆ 400 ಮತ್ತರು ಭೂಮಿಯನ್ನು ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ಅಗ್ರಹಾರದ ಕುರಿತು ಹೆಚ್ಚಿನ ಉಲ್ಲೇಖ ಬಂದಿರುವುದಿಲ್ಲವಾದರೂ ಇದೊಂದು ಅಗ್ರಹಾರವಾಗಿತ್ತೆಂಬುದನ್ನು ಮಾತ್ರ ಖಚಿತವಾಗಿ ಹೇಳಬಹುದು.

**ಇಟ್ಟಗಿ (ಇಟಗಿ) :**

ಇಟ್ಟಗೆ ಇದು ಯಲಬುರ್ಗಾ ತಾಲೂಕಿಗೆ ಸೇರಿದ ಒಂದು ಚಿಕ್ಕ ಗ್ರಾಮ. ಹಿಂದೆ "ಬಹುಧರ್ಮ್ಮಧೇನು ನಿಹವಕ್ಕಾಡುಂಬೊಲಂ" ಆಗಿದ್ದ ಬೆಳವಲ ನಾಡಿನ "ನೆರೆಯಂಗಲ್ಪನ್ನೆರಡು" ವಿಭಾಗಕ್ಕೆ ಸೇರಿದ್ದ ಒಂದು ಪ್ರಮುಖವಾದ ಅಗ್ರಹಾರ[30] ಕಲ್ಯಾಣ ಚಾಳುಕ್ಯರ ಆಳ್ವಿಕೆಯ ಕಾಲದಲ್ಲಿ ಇಟ್ಟಗೆಯೂ ಒಂದು ಮಹಾಗ್ರಹಾರವಾಗಿ ಪರಿಗಣಿಸಿತ್ತು. ಇಟ್ಟಗೆ ಎನ್ನುವ ಈ ಗ್ರಾಮದ ಹೆಸರೇ ಹಿಂದೆ ಇದೊಂದು ಅಗ್ರಹಾರವಾಗಿದ್ದಿತ್ತೆಂಬ ಅಂಶವನ್ನು ಸೂಚಿಸುತ್ತದೆ. ಸಂಸ್ಕೃತದಲ್ಲಿ ಇಷ್ಟಿ, ಇಷ್ಟಿಕಾ ಎಂಬ ಪದಗಳು ಅಗ್ನಿಯನ್ನು ಪ್ರತಿನಿಧಿಸುತ್ತವೆ. ಅಲ್ಲದೇ ಯಜ್ಞಕುಂಡಗಳನ್ನು ಇಟ್ಟಗೆಗಳಿಂದ ನಿರ್ಮಿಸುವ ಧಾರ್ಮಿಕ ಪರಂಪರೆಯಿದೆ. ಇಟ್ಟಗೆಯ ಶಾಸನದಲ್ಲಿ ಹೋಮಧೂಮದ ವರ್ಣನೆ ಬರುವುದರಿಂದ ಈ ಹೋಮ ಕುಂಡಗಳಿಂದಾಗಿಯೇ 'ಇಷ್ಟಿಕಾ' ಎಂಬ ಹೆಸರು ಈ ಗ್ರಾಮಕ್ಕೆ ಬಂದಿರಬೇಕು. ಕಾಲಕ್ರಮೇಣ ಇಟ್ಟಿಗೆ ಇಟಗಿ ಎಂದು ರೂಪಾಂತರ ಹೊಂದಿರಬೇಕು.[31] ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ದೊರೆತ ಕ್ರಿ.ಶ.1113ರ ಶಾಸನವು[32] ಇಟ್ಟಿಗೆಯನ್ನು "ಕನಾಕಾದ್ರಿಯಂತೆ ವಿಬುಧಾಶ್ರಯ"ವಾಗಿತ್ತು ಎಂದು ಅಲ್ಲಿಯ ಸೌಂದರ್ಯವನ್ನು ಕುರಿತು ಪ್ರಶಂಸಿಸಿದೆ. ಮುಂದುವರೆದ ಶಾಸನದಲ್ಲಿ ಇಲ್ಲಿ 400 ಜನ ಬ್ರಾಹ್ಮಣರು ವಾಸಿಸಿದ್ದಂತೆ ತಿಳಿಸಿದೆ. ಇವರು ಸಕಲ ವೇದ ಸಾಹಿತ್ಯಗಳಲ್ಲಿ ಪರಿಣಿತರಾಗಿ ದ್ದರೆಂದು ಶಾಸನವು ಅತಿಶಯವಾಗಿ ಬಣ್ಣಿಸಿದೆ.

ವಿನೂತ ವಿಪ್ರವರರಿಂದೆಸೆದಿರ್ಪ್ಪುದದೆತ್ತ ನೋರ್ಪ್ಪಡಂ॥
ಅವರಿಂದಂ ವೇದವಿದ್ಯಾಲತಿಕೆ ನಿಯಿದುರ್ದ್ದಾ ಬ್ರಾಹ್ಮಣ ಜ್ಯೇಷ್ಠರಿಂ
ಭೂಭುವನಂ ವೇದೋಕ್ತಮಾರ್ಗ್ಗಾನುಗಮೆನಿಸಿದುದಾ
ಭೂಮಿದೇವರ್ಕ್ಕಳೊಲ್ದಿಕ್ಕುವ ನಾನಾಹವ್ಯಸಂದೋಹಮನೆ ಸುರಗಣಂ
ಪಾರ್ದ್ದುಕೊಂಡಿರ್ಪ್ಪುದಾ ವಿಪ್ರವರರ್ಪ್ಪೆಚ್ಚಲ್ಕೆ ಪೆರ್ಚ್ಚುತ್ತಿವಿದಿತ
ಪರಬ್ರಹ್ಮಾಮಾ ಬ್ರಹ್ಮವಂಶ॥ ಸಕಳ ವ್ಯಾಕರಣಂಗಳುಂ ವಿವಿಧ
ವೇದಾರ್ತ್ಥಂಗಳುಂ ಮೂರ್ತಿಗೊಂಡು ಕಳಶಾಸ್ತ್ರ ಸಮೇತಮೋಲಗಿಸೆ
ತಮ್ಮಂ ಬ್ರಹ್ಮವಿದ್ಯಾವಿಶೇಷಕರಮ್ಲಾನಚರಿತ್ರ ಪಾತ್ರರಮಳ
ಜ್ಞಾನರ್ದ್ಧಿಸಂಪನ್ನರೀ ಸಕಳಕ್ಷೋಣಿಗೆ ಪೂಜ್ಯರಿಟ್ಟಿಗೆಯ
ನಾಲ್ನೂರ್ವ್ವರ್ದ್ವಿಜನ್ಮೋತ್ತಮರು॥[33]

ಹೀಗೆ ಇವರು ವೇದಾಂತ, ಬ್ರಹ್ಮವಿದ್ಯೆಗಳಲ್ಲಿ ಬಲ್ಲಿದವರಾಗಿಯೂ, ಪರಿಶುದ್ಧ ಚರಿತ್ರವುಳ್ಳವರೂ ಆಗಿದ್ದರು. ಇಲ್ಲಿ ಹೋಮ ಹವನಗಳು ನಿರಂತರವಾಗಿ ನಡೆಯುತ್ತಿದ್ದವು. ಇಲ್ಲಿದ್ದ ನಾಲ್ಕುನೂರು ವಿಪ್ರರು "ಸಕಳ ಕ್ಷೋಣಿಗೆ ಪೂಜ್ಯ"ರಾಗಿದ್ದರು. ವೇದ–ವೇದಾಧ್ಯಯನಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದರೆಂದು ಈ ಮೇಲಿನ ಶಾಸನ ಉಲ್ಲೇಖಿಸಿದೆ. ಇಂತಹ ಪಾಂಡಿತ್ಯವುಳ್ಳ ವಿಪ್ರರಿಂದ ಕೂಡಿದ ಅಗ್ರಹಾರದಲ್ಲಿ ಇವರು ತಿಲಕಪ್ರಾಯದಂತಿದ್ದರು ಎಂದು ಹೇಳಬಹುದಾಗಿದೆ.

ಈ ಪಟ್ಟಣ ಶೈಕ್ಷಣಿಕವಾಗಿ ಪ್ರಖ್ಯಾತಿಯನ್ನು ಪಡೆದಿದ್ದಂತೆ ವಾಸ್ತುಶಿಲ್ಪ ದೃಷ್ಟಿಯಿಂದಲೂ ಪ್ರಸಿದ್ದಿಯನ್ನು ಪಡೆದಿತ್ತು. 6ನೆಯ ವಿಕ್ರಮಾದಿತ್ಯನ ದಂಡನಾಯಕನಾದ ಮಹಾದೇವನು ಮಹಾದೇವ ದೇವಾಲಯವನ್ನು ನಿರ್ಮಿಸಿದ್ದು, ಇದು ವಾಸ್ತುಶಿಲ್ಪದಲ್ಲಿ ಅತ್ಯಂತ ಪ್ರಸಿದ್ದಿಯನ್ನು ಪಡೆದ ದೇವಾಲಯವಾಗಿದೆ. ಈ ದೇವಾಲಯವನ್ನು ಶಾಸನದಲ್ಲಿ–

ಉದಧಿವ್ಯಾವೃತ ಧಾತ್ರಿಯೊಳ್ಪಡಿಯಿಡಲು ದೇವಾಲಯಂ ಮುನ್ನೆ
ಮಾಡಿದವಿಮ್ಮಾಡುವವೀಗ ಮಾಡಿಸುವವಾವುಂ ಪೋಲ್ವುವೇ
ಪೋಲವಿಂತಿದು ದೇವಾಲಯ ಚಕ್ರವರ್ತ್ತಿಯೆನಿಸಲು
ಸಾಲ್ದಿರ್ಪ್ಪುದಂ ಮುಂಮ್ಮನೋಮುದದಿಂ ಮಾಡಿಸಿ ಮಾಣದೊಪ್ಪುವ
ಮಹಾದೇವೇಶ್ವರಾ(ರೋ) ಪಾಂತದೊಳು॥[34]

ಎಂದು ಹೊಗಳಿದ್ದು ಎಲ್ಲಾ ದೇವಾಲಯಗಳಿಗೂ ಮಿಗಿಲಾದ ಸೌಂದರ್ಯವನ್ನು ಇದು ಹೊಂದಿತ್ತೆಂದು ಈ ಶಾಸನ ಉಲ್ಲೇಖಿಸಿದೆ.

ಈ ಶಾಸನದ ಮುಂದಿನ ಭಾಗವು ಮಹಾದೇವದಂಡನಾಯಕನು ತಾನು ಕಟ್ಟಿಸಿದ ಮಹಾದೇವ ದೇವಾಲಯದ ದೇವರ ಅಂಗಭೋಗ, ಪಾತ್ರಪಾವುಳ, ನೈವೇದ್ಯ, ಅನ್ನದಾದ ಭಟ್ಟವೃತ್ತಿ, ಘಳಿಯಾರ ಮುಂತಾದ ವುಗಳಿಗಾಗಿ 500 ಮತ್ತರು

ಹೊಲವನ್ನು ದಾನ ನೀಡುತ್ತಾನೆ. ಹಾಗೂ ಋಗ್ವೇದದ ಬಾಲಶಿಕ್ಷೆ, ಯಜುರ್ವೇದದ ಬಾಲಶಿಕ್ಷೆ ಮುಂತಾದವುಗಳಿಗೆ ಬೇರೆ ಬೇರೆ ದಾನ ನೀಡುತ್ತಾನೆ. ಇದಲ್ಲದೆ ಇನ್ನೂ ಮುಂದುವರೆದ ಸಾಲುಗಳಲ್ಲಿ ಇದೇ ಮಹಾದೇವದಂಡನಾಯಕನು ಇಟ್ಟಿಗೆಯಲ್ಲಿ ತನ್ನ ಹೆಸರಿನಲ್ಲಿ ಈಶ್ವರದೇವಾಲಯವನ್ನು ಕಟ್ಟಿಸಿದ್ದಲ್ಲದೆ, ತಂದೆಯ ಹೆಸರಿನಲ್ಲಿ ನಾರಾಯಣ ದೇವಾಲಯ, ತಾಯಿಯ ಹೆಸರಿನಲ್ಲಿ ಚಂದ್ರಲೇಶ್ವರ ದೇವಾಲಯವನ್ನು ಕಟ್ಟಿಸಿ ಈ ದೇವಾಲಯಗಳ ಪೂಜಾಕಾರ್ಯಗಳಿಗಾಗಿ ಕುಕ್ಕನೂರು-30ರ ಬೆಣ್ಣಿಕಲ್ಲು ಗ್ರಾಮವನ್ನು ದಾನ ನೀಡಿದಂತೆ ತಿಳಿಸಿದೆ.

ಹೀಗೆ ಇಲ್ಲಿಯೂ ಇತರ ಅಗ್ರಹಾರಗಳಂತೆಯೇ ವಿದ್ವತ್‌ಪೂರ್ಣವಾದ ಜ್ಞಾನವನ್ನು ಹೊಂದಿದ ಬ್ರಾಹ್ಮಣರಿದ್ದರು. ಸಕಲವೇದಶಾಸ್ತ್ರ, ಬ್ರಹ್ಮವಿದ್ಯೆಗಳಲ್ಲಿ ಪಾರಂಗತರಾಗಿದ್ದ ಇವರು ಅನೇಕ ಹೋಮ ಹವನಗಳನ್ನು ನಡೆಸುವ ಮೂಲಕ ಧಾರ್ಮಿಕ ಮನೋಭಾವನೆಯನ್ನು ಬೆಳೆಸುವ ಪುರಾಣ, ಸ್ಮೃತಿ ಮುಂತಾದ ವಿಷಯಗಳನ್ನು ಹೆಚ್ಚಿನ ರೀತಿಯಲ್ಲಿ ಕಲಿಸಿಕೊಡುತ್ತಿದ್ದರೆಂದು ಶಾಸನಗಳ ಮೂಲಕ ತಿಳಿದು ಬರುತ್ತದೆ.

**ಗೊಂಡಬಾಳ :**

ಕೊಪ್ಪಳ ತಾಲೂಕಿಗೆ ಸೇರಿದ ಗೊಂಡಬಾಳು ಇದೊಂದು ಅಗ್ರಹಾರ ವಾಗಿತ್ತೆಂದು ಕ್ರಿ.ಶ.1512ರಲ್ಲಿ ದೊರೆತ ಕೊಪ್ಪಳದ ಶಾಸನದಿಂದ[35] ತಿಳಿದು ಬರುತ್ತದೆ. ಈ ಕಾಲದಲ್ಲಿ ಕೃಷ್ಣದೇವರಾಯನು ಗೊಂಡಬಾಳು ಅಗ್ರಹಾರವನ್ನು ಪ್ರಭಾಕರ ಎಂಬುವನಿಗೆ ದಾನ ನೀಡಿದ್ದಂತೆ ತಿಳಿದು ಬರುತ್ತದೆ.

ಕೊಪ್ಪಳ ತಾಲೂಕಿನಲ್ಲಿ ದೊರೆತ ಗೊಂಡಬಾಳು ಅಗ್ರಹಾರದ ಕುರಿತು ಕೇವಲ ಒಂದೇ ಒಂದು ಶಾಸನ ದೊರೆತಿದ್ದು ಈ ಅಗ್ರಹಾರದ ಹೆಚ್ಚಿನ ಮಾಹಿತಿ ದೊರೆತಿರುವುದಿಲ್ಲ. ಇದನ್ನು ಶಾಸನ ಅಗ್ರಹಾರ ಎಂದು ಗುರುತಿಸಿರುವುದರಿಂದ ಇಲ್ಲಿಯೂ ಅನೇಕ ಪಂಡಿತರಿದ್ದು ವಿದ್ಯಾದಾನವನ್ನು ನೀಡಿದ್ದರೆಂದು ನಾವು ಈ ಮೂಲಕವಾಗಿ ಊಹಿಸಬಹುದಾಗಿದೆ.

**ಬೆಳೆನೆಗೆಯೂರು (ಬಳಗೇರಿ) :**

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿಗೆ ಸೇರಿದ ಈ ನಾಡು ಅಂದಿನ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ಕ್ರಿ.ಶ.1018ರಲ್ಲಿ ದೊರೆತ ಈ ಶಾಸನದಲ್ಲಿ[36] ಜಗದೇಕಮಲ್ಲನ ದಂಡನಾಯಕ ಕೆಳವಾಡಿ-300ನ್ನು ಆಳುತ್ತಿರುತ್ತಾನೆ. ಆಗ ಅಗ್ರಹಾರ ಬೈಳೆನೆಗೆಯೂರಿನ ಮುಖ್ಯಸ್ಥನಾಗಿ ಕೊಣ್ಬಯವಾರಿ ಅಯ್ಯಣಯ್ಯನಿರುತ್ತಾನೆ. ಜಗದೇಕಮಲ್ಲನ ದಂಡನಾಯಕ ಈತನಿಗೆ ಪಂಪಾತೀರ್ಥ ವಿರೂಪಾಕ್ಷದೇವರ ಸನ್ನಿಧಿಯಲ್ಲಿ 5 ಮತ್ತರು ಗದ್ದೆಯನ್ನು ದಾನವಾಗಿ ನೀಡಿದ್ದಂತೆ ವಿವರಣೆ ನೀಡಿದೆ.

ಬೆಳೆನೆಗೆಯೂರು ಅಂದಿನ ಕಾಲದಲ್ಲಿ ಅಗ್ರಹಾರವಾಗಿತ್ತಾದರೂ ಈ ಅಗ್ರಹಾರದ ಕುರಿತು ಹೆಚ್ಚಿನ ಮಾಹಿತಿ ದೊರೆತಿರುವುದಿಲ್ಲ. ಶಾಸನದಲ್ಲಿ ದೊರೆತ ಆಧಾರದಿಂದ ಇದೊಂದು ಅಗ್ರಹಾರವಾಗಿತ್ತೆಂದು ನಾವು ಇಲ್ಲಿ ಗುರುತಿಸಬಹುದಾಗಿದೆ.

**ಸಿಂಧನೂರು :**

ಕೇವಲ ಒಂದು ಶಾಸನದಲ್ಲಿ ಮಾತ್ರ ಸಿಂಧನೂರನ್ನು ಅಗ್ರಹಾರವೆಂದು ಉಲ್ಲೇಖಿಸಿದೆ. ಆದರೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿರುವುದಿಲ್ಲ. ಕ್ರಿ.ಶ.12ನೇ ಶತಮಾನದ ಪುರದಲ್ಲಿ ದೊರೆತ ಶಾಸನದಲ್ಲಿ[37] ಅಗ್ರಹಾರ ಸಿಂಧನೂರು ಎಂದು ಉಲ್ಲೇಖಿಸಿದ್ದು ಪ್ರಾಚೀನ ಕಾಲದಲ್ಲಿ ಇದೊಂದು ಅಗ್ರಹಾರವಾಗಿತ್ತೆಂದು ಖಚಿತವಾಗಿ ಹೇಳಬಹುದಾಗಿದೆ. ಇಂದು ಈ ಸಿಂಧನೂರು ರಾಯಚೂರು ಜಿಲ್ಲೆಯ ವ್ಯಾಪ್ತಿಗೆ ಸೇರಿದ ತಾಲೂಕು ಕೇಂದ್ರವಾಗಿದೆ. ಅದೇನೇ ಇದ್ದರೂ ಹಿಂದೆ ಸಿಂಧನೂರು ಗ್ರಾಮ ಅಗ್ರಹಾರವಾಗಿತ್ತೆಂದು ಹೇಳಬಹುದಾಗಿದೆ.

**ನವಿಲೆ :**

ನವಿಲೆ ಇದೊಂದು ಅಗ್ರಹಾರವಾಗಿದ್ದು ಈಗಿನ ಗಂಗಾವತಿ ತಾಲೂಕಿಗೆ ಸೇರಿದ ಒಂದು ಗ್ರಾಮವಾಗಿದೆ. ಕ್ರಿ.ಶ.12ನೆಯ ಶತಮಾನದ ಕುಷ್ಟಗಿ ತಾಲೂಕಿಗೆ ಸೇರಿದ ಪುರ ಶಾಸನದಲ್ಲಿ[38] ಇದರ ಉಲ್ಲೇಖ ಬಂದಿದೆ. ಆದರೆ ಈ ಅಗ್ರಹಾರದ ವಿವರ ಕುರಿತು ಹೆಚ್ಚಿನ ಮಾಹಿತಿ ದೊರೆತಿರುವುದಿಲ್ಲ. ನವಿಲೆ ಈ ಗ್ರಾಮವು ಒಂದು ಅಗ್ರಹಾರವಾಗಿತ್ತಾದರೂ ಇಲ್ಲಿ ಕಲಿಸುತ್ತಿದ್ದ ವಿದ್ಯೆಯ ಕುರಿತು ಹಾಗೂ ಅಲ್ಲಿ ನೆಲೆಸಿದ ಮಹಾಜನಗಳ ಕುರಿತು ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಒಟ್ಟಿನಲ್ಲಿ ಇದೊಂದು ಅಗ್ರಹಾರ ವಾಗಿದ್ದು ಹಿಂದೆ ಇಲ್ಲಿಯೂ ವಿದ್ಯಾಭ್ಯಾಸ ಕಲಿಸಿಕೊಡಲಾಗುತಿತ್ತೆಂದು ಊಹಿಸಬಹುದಾಗಿದೆ.

**ನಿಡುಗೊಳ :**

ಕ್ರಿ.ಶ.12 ನೇ ಶತಮಾನದ ಕುಷ್ಟಗಿ ತಾಲೂಕಿನ ಪುರದ ಈಶ್ವರ ದೇವಾಲಯದ ಬಳಿ ದೊರೆತ ಶಾಸನದಲ್ಲಿ[39] ಅಗ್ರಹಾರ ನಿಡುಗೊಳದ ಉಲ್ಲೇಖ ಬಂದಿದೆ. ಯಲಬುರ್ಗಾ ತಾಲೂಕಿಗೆ ಸೇರಿದ ನಿಡುಗೊಳ ಪ್ರಾಚೀನ ಕಾಲದಲ್ಲಿ ಅಗ್ರಹಾರವಾಗಿತ್ತೆಂದು ಈ ಶಾಸನದಿಂದ ತಿಳಿದು ಬರುತ್ತದೆ.

ಈ ಮೇಲಿನ ಶಾಸನಗಳಲ್ಲದೆ ಕೊಪ್ಪಳ ಜಿಲ್ಲೆಯಲ್ಲಿ ಇನ್ನೂ ಕೆಲವು ಅಗ್ರಹಾರಗಳ ಮಾಹಿತಿ ಇರುವ ಶಾಸನಗಳು ದೊರಕಿವೆ. ಅವುಗಳೆಂದರೆ ಕ್ರಿ.ಶ.1547ರ ಪುರ ಶಾಸನ[40], ಕ್ರಿ.ಶ.1129ರ ಕುಕನೂರು ಶಾಸನ[41], ಕ್ರಿ.ಶ.1098ರ ಕಲ್ಲೂರು ಶಾಸನ[42] ಹಾಗೂ ಯಲಬುರ್ಗಾ ತಾಲೂಕಿನ ಹಳ್ಳಿಗುಡಿಯ ಕ್ರಿ.ಶ.1094 ಶಾಸನದಲ್ಲಿ[43] ಅಗ್ರಹಾರಗಳ ಉಲ್ಲೇಖವಿದೆ. ಇಲ್ಲಿ ಅಗ್ರಹಾರಗಳ ಉಲ್ಲೇಖ ಮಾತ್ರವಿದ್ದು ಹೆಚ್ಚಿನ

ವಿಷಯ ದೊರೆತಿರುವುದಿಲ್ಲ.

ಇಲ್ಲಿ ದೊರೆತ ಅಗ್ರಹಾರಗಳು ಸಂಖ್ಯೆಯ ದೃಷ್ಟಿಯಿಂದ ಅಧಿಕವಾಗಿದ್ದು ವಿದ್ಯೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದವು. ಕರ್ನಾಟಕವು ಶೈಕ್ಷಣಿಕವಾಗಿ ಸಾಧಿಸಿದ ಹಿರಿಮೆಯನ್ನು ಈ ಅಗ್ರಹಾರಗಳು ಸಾರಿ ಹೇಳುವ ಕುರುಹುಗಳಾಗಿವೆ. ಪ್ರಾಚೀನ ಕಾಲದಲ್ಲಿದ್ದಂತೆ ಇಲ್ಲಿಯೂ ಅಗ್ರಹಾರಗಳು ಆತ್ಮೋದ್ಧಾರದ ಉನ್ನತಿಯನ್ನು ಸಾಧಿಸಿ ಸಮಾಜ ವ್ಯವಸ್ಥೆಯ ಮುಖ್ಯ ಕೇಂದ್ರಗಳಾಗಿ ನಿರಂತರ ಕಾರ್ಯ ನಿರ್ವಹಿಸುತ್ತಿದ್ದವು. ಈ ಜಿಲ್ಲೆಯ ಶಾಸನಗಳಲ್ಲಿ ಅಗ್ರಹಾರಗಳ ಕುರಿತು ಅಲ್ಲಿ ನಡೆಯುತ್ತಿದ್ದ ಅಧ್ಯಯನದ ಕುರಿತು ಇವುಗಳಿಗೆ ದಾನ ದತ್ತಿಗಳನ್ನು ಬಿಟ್ಟಿದ್ದರ ಕುರಿತ ಮಾಹಿತಿ ದೊರೆಯುತ್ತದೆ. ಈ ಅಗ್ರಹಾರಗಳಲ್ಲಿ ನೆಲೆಸಿದ ಬ್ರಾಹ್ಮಣರನ್ನು ಮಹಾಜನರೆಂದೇ ಕರೆಯಲಾಗುತ್ತಿತ್ತು. ಈ ಅಗ್ರಹಾರಗಳು ಮಹಾಜನರ ಪ್ರಭುತ್ವದಲ್ಲಿದ್ದುದರಿಂದ ಅವರೇ ಅಗ್ರಹಾರದ ಒಡೆಯರಾಗಿರುತ್ತಿದ್ದರು. "ಆದರೆ ಕನ್ನಡ ನಾಡಿನ ಅಗ್ರಹಾರಗಳಲ್ಲಿ ಮಹಾಜನರು ಹೀಗೆ ಸಮಿತಿಗಳನ್ನು ರಚಿಸುತ್ತಿರಲಿಲ್ಲ. ಬಹುಶಃ ತಾವೇ ಸಾಮೂಹಿಕವಾಗಿ ಊರ ಒಳ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದರು."[44] ಏಕೆಂದರೆ ಅಗ್ರಹಾರಗಳಲ್ಲಿ ನೆಲೆಸಿದ ಮಹಾಜನರ ಸಂಖ್ಯೆ ನೋಡಿದರೆ ಈ ಮೇಲಿನ ಭಾವನೆ ಬರುತ್ತದೆ. ಅದೇ ರೀತಿಯಾಗಿ ಈ ಜಿಲ್ಲೆಯಲ್ಲಿಯೂ ನಾಲ್ಕುನೂರು[45] ಸಾವಿರ[46] ಮುಂತಾದ ಸಂಖ್ಯೆಯಲ್ಲಿ ಮಹಾಜನರಿರುತ್ತಿದ್ದರೆಂದು ಇಲ್ಲಿಯ ಶಾಸನಗಳಿಂದ ತಿಳಿದು ಬರುತ್ತದೆ.

ಈ ಮೇಲೆ ವಿವರಿಸಿದ ಕೊಪ್ಪಳ ಜಿಲ್ಲೆಯ ಅಗ್ರಹಾರಗಳು ಮಹಾಜನರು ವಿದ್ಯೆ ಕಲಿಸುವುದಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದರು ಎಂದು ತಿಳಿಸುತ್ತವೆ. ಇಲ್ಲಿಯ ಶಾಸನಗಳು ಇವರ ವಿದ್ವತ್ ಪರಂಪರೆಯ ಕುರಿತು ಅತ್ಯಂತ ವಿಶೇಷವಾಗಿ ಬಣ್ಣಿಸಿವೆ. ಇವರು ಸಕಲವೇದ, ಶಾಸ್ತ್ರ, ವ್ಯಾಕರಣ, ಸ್ಮೃತಿ, ಪುರಾಣ, ನ್ಯಾಯ, ಕಾವ್ಯ, ನಾಟಕ, ವಾತ್ಸಾಯನ, ಧ್ಯಾನ, ಧಾರಣ, ಮೌನಾನುಷ್ಠಾನ ಈ ಮುಂತಾದ ಪಾಠಗಳನ್ನು ಬೋಧಿಸುತ್ತಿದ್ದುದ್ದನ್ನು ನೋಡಿದರೆ ಇವರಿಗಿದ್ದ ಅಪರಿಮಿತ ಜ್ಞಾನ ಎಷ್ಟಿತ್ತೆಂಬುದು ಇದರಿಂದ ತಿಳಿದು ಬರುತ್ತದೆ. ಇಲ್ಲಿಯ ಮಹಾಜನಗಳು ವಿದ್ವಜ್ಜನಗಳು, ವಿಪ್ರಚೂಡಾಮಣಿಗಳು, ವಿದ್ವನ್ಮಣಿಗಳು, ಸಕಲಶಾಸ್ತ್ರವಿಶಾರದರೂ ಆಗಿದ್ದರು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಅವರು ಷಟ್ಕರ್ಮನಿರತರು ಎಂದು ಶಾಸನಗಳು ಬಣ್ಣಿಸಿವೆ. ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪರಿಗ್ರಹ–ಇವೇ ಆ ಆರು ಕರ್ಮಗಳು. "ಇವು ಪ್ರತಿಯೊಬ್ಬ ಬ್ರಾಹ್ಮಣನೂ ಮಾಡಲೇಬೇಕಾದ ವಿಧಿಗಳು. ಇವುಗಳಲ್ಲಿ ಅಧ್ಯಯನ ಎನ್ನುವುದು ಜ್ಞಾನಾರ್ಜನೆಯನ್ನು, ಅಧ್ಯಾಪನ ಎನ್ನುವುದು ಜ್ಞಾನದಾನವನ್ನು ಸೂಚಿಸುತ್ತದೆ. ವೈದಿಕರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಕಲಿತಷ್ಟಕ್ಕೇ ತೃಪ್ತರಾಗದೆ, ಗೃಹಸ್ಥರಾದ ಮೇಲೂ ತಮ್ಮ ಅಭ್ಯಾಸವನ್ನು ಮುಂದುವರೆಸಬೇಕಿತ್ತು ಇದೇ ಅಧ್ಯಯನ. ಅಧ್ಯಾಪನ ಎಂದರೆ ಪಾಠವನ್ನು ಬೋಧಿಸುವುದು ಎಂದರ್ಥ."[47]

ಯಲಬುರ್ಗಾ ತಾಲೂಕಿನ ಮುಧೋಳ ಶಾಸನವು[48] ಇಲ್ಲಿಯ ಮಹಾಜನರು ಷಟ್ಕರ್ಮನಿರತ ರಾಗಿದ್ದರೆಂದು ಉಲ್ಲೇಖಿಸಿದೆ. ಅಲ್ಲದೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪರಿಗ್ರಹ ಈ ಆರು ಕರ್ಮಗಳ ವಿಧಿಯೂ ಈ ಜಿಲ್ಲೆಯಲ್ಲಿಯೂ ನಡೆಯುತ್ತಿದ್ದಂತೆ ಮಾದಿನೂರು ಶಾಸನದಿಂದ[49] ತಿಳಿದು ಬರುತ್ತದೆ. ಈ ಅಗ್ರಹಾರಗಳಲ್ಲಿಯ ಮಹಾಜನರು ವಿದ್ಯೆ ಕಲಿಸುವ ದ್ವೇದಿಭಟ್ಟೋಪಾಧ್ಯಾಯ[50], ಮಹಾದೇವಭಟ್ಟೋಪಾಧ್ಯಾಯ,[51] ನಾರಾಯಣ ಭಟ್ಟೋಪಾಧ್ಯಾಯ,[52] ಸೋಮಯಾಜಿಭಟ್ಟೋಪಾಧ್ಯಾಯ,[53] ಚೌಂಡಭಟ್ಟೋ ಪಾಧ್ಯಾಯ,[54] ನಾರಸಿಂಹ ಭಟ್ಟೋಪಾಧ್ಯಾಯ,[55] ಕೇಶವಭಟ್ಟೋಪಾಧ್ಯಾಯ,[56] ಯೋಗೇಶ್ವರ ಭಟ್ಟೋಪಾಧ್ಯಾಯ,[57] ಸೋಮೇಶ್ವರ ಭಟ್ಟೋಪಾಧ್ಯಾಯ[58] ಈ ಮುಂತಾದವರು ಆಗಿದ್ದರು ಎಂಬ ಬಗ್ಗೆ ಉಲ್ಲೇಖಗಳು ಶಾಸನದಲ್ಲಿ ಕಂಡು ಬರುತ್ತವೆ. ಈ ಮಹಾಜನಗಳು ತಾವು ಕಲಿತ ಜ್ಞಾನವನ್ನು ಬೋಧಿಸಲು ಮಠ ದೇವಾಲಯ ಗಳನ್ನು ಆಶ್ರಯಿಸಿ ಅಲ್ಲಿ ಬಂದ ವಿದ್ಯಾರ್ಥಿಗಳಿಗೆ ಅಧ್ಯಯನವನ್ನು ಹೇಳಿಕೊಡುತ್ತಿದ್ದರು.

ಅರಸು ಮನೆತನದವರು ಅಗ್ರಹಾರಗಳನ್ನು ನಿರ್ಮಿಸಿ ಇವರಿಗೆ ದಾನ ನೀಡುತ್ತಿದ್ದ ವಿಷಯ ಶಾಸನಗಳಿಂದ ತಿಳಿದು ಬರುತ್ತದೆ. ಇವರೊಂದಿಗೆ ಕೆಲವು ವೇಳೆ ಅಧಿಕಾರಿಗಳು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ಅಗ್ರಹಾರಗಳಿಗೆ ದಾನ ದತ್ತಿಗಳನ್ನು ನೀಡುತ್ತಿದ್ದುದರ ಜೊತೆಗೆ ಅಲ್ಲಿ ನೆಲೆಸಿದ್ದ ಮಹಾಜನಗಳಿಗೂ ದಾನ ದತ್ತಿಗಳನ್ನು ನೀಡುವ ಮೂಲಕ ಶಿಕ್ಷಣ ವ್ಯವಸ್ಥೆಗೆ ಆರ್ಥಿಕವಾಗಿ ಪ್ರಬಲತೆಯನ್ನು ಒದಗಿಸುವ ಉದ್ದೇಶ ಅವರದಾಗಿತ್ತು. ಇಂಥ ಅಗ್ರಹಾರಗಳು ಮಹಾಜನಗಳ ವಶಕ್ಕೊಳ ಪಟ್ಟಿರುತ್ತಿದ್ದವು. ಇಲ್ಲಿ ಯಾರೇ ಭೂಮಿಯನ್ನು ದಾನ ಮಾಡಬೇಕಾದರೆ ಇವರ ಅನುಮತಿಯನ್ನು ಕೇಳಬೇಕಾಗುತ್ತಿತ್ತು. ಇವರು ಅಗ್ರಹಾರಗಳ ಒಡೆಯರಾಗಿದ್ದು ಅಗ್ರಹಾರಗಳ ಒಡೆತನ ಅವರಿಗೆ ಸಂಬಂಧಿಸಿರುತ್ತಿತ್ತು.

ಶಿಕ್ಷಣದ ಜವಾಬ್ದಾರಿಯ ಜೊತೆ ಜೊತೆಗೆ ಇವರು ಧಾರ್ಮಿಕ ಚಟುವಟಿಕೆಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದರು. ಮಧ್ಯಕಾಲೀನ ಇತಿಹಾಸದಲ್ಲಿ ಪ್ರತಿಷ್ಠಾಪಿತವಾದ ಅಗ್ರಹಾರಗಳು ಈ ನಾಡಿನ ಸಮಾಜ ವ್ಯವಸ್ಥೆಯ ಮೇಲೆ ಗಮನಾರ್ಹವಾದ ಪರಿಣಾಮವನ್ನು ಬೀರಿವೆ. ಮಹಾಜನರು ಕೇವಲ ವೇದ, ಆಗಮ, ವ್ಯಾಕರಣ, ಪುರಾಣ ಶಾಸ್ತ್ರಗಳಲ್ಲಿ ಪರಿಣಿತರಷ್ಟೇ ಆಗಿರದೆ ಧರ್ಮ, ಕಲೆ ಈ ಮುಂತಾದವುಗಳಲ್ಲಿಯೂ ಪಾರಂಗತರಾಗಿದ್ದರು. ಅಗ್ರಹಾರಗಳ ಎಲ್ಲಾ ಚಟುವಟಿಕೆಗಳು ಮಹಾಜನರ ಸಮ್ಮುಖದಲ್ಲಿ ನಡೆಯುತ್ತಿದ್ದುದರಿಂದ ಅದೊಂದು ಸ್ವಯಂಪೂರ್ಣ ಸ್ವಾಯತ್ತತೆಯುಳ್ಳ ಸಂಸ್ಥೆಯಾಗಿತ್ತು. "ಅಗ್ರಹಾರಗಳು ಒಂದು ದೃಷ್ಟಿಯಿಂದ ವೈದಿಕ ಧರ್ಮದ ಬೀಡುಗಳೂ ಆಗಿದ್ದವು."[59]

ಒಟ್ಟಿನಲ್ಲಿ ಅಗ್ರಹಾರಗಳು ಮಧ್ಯಕಾಲೀನ ಇತಿಹಾಸದಲ್ಲಿ ಹೆಚ್ಚು

ವ್ಯಾಪಕವಾದವುಗಳಾಗಿದ್ದವು. ಈ ಅಗ್ರಹಾರಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುವಲ್ಲಿ ಮಹಾಜನರು ಸಲ್ಲಿಸಿದ ಸೇವೆಯೂ ಅಮೂಲ್ಯವಾದುದು. ಅರಸು ಮನೆತನಗಳ ಅವಧಿಯಲ್ಲಿ ಅತಿ ಹೆಚ್ಚು ವಿಸ್ತಾರವಾಗಿ ಬೆಳೆದ ಅಗ್ರಹಾರಗಳು ದೇವಾಲಯಗಳನ್ನೂ, ವಿದ್ಯಾಸಂಸ್ಥೆಗಳನ್ನೂ ನಡೆಸುತ್ತಿದ್ದವು. ಈ ಮೂಲಕ ಅಂದಿನ ಶೈಕ್ಷಣಿಕ ಕ್ಷೇತ್ರದಲ್ಲಿ ವಿದ್ಯಾಸಂಸ್ಥೆಗಳನ್ನು ನಡೆಸುವ ದೃಷ್ಟಿಯಲ್ಲಿ ಬಹುಮುಖ ಬೆಳವಣಿಗೆಗೆ ಈ ಅಗ್ರಹಾರಗಳು ಮುಖ್ಯ ಕಾರಣಗಳಾಗಿದ್ದವು. ದೇವಾಲಯ, ಮಠಗಳಲ್ಲಿದ್ದ ಪುರೋಹಿತರು ಅಂದಿನ ವಿದ್ಯಾರ್ಥಿಗಳಿಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಶಿಕ್ಷಣವನ್ನು ನೀಡುತ್ತಿದ್ದುದರ ಜೊತೆಗೆ ಧಾರ್ಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದರು.

ಅಗ್ರಹಾರಗಳು ಅಂದಿನ ಕಾಲದಲ್ಲಿ ಆಧಾರಸ್ತಂಭಗಳಂತಿದ್ದು ಅಲ್ಲಿ ವಾಸಿಸುತ್ತಿದ್ದ ಮಹಾಜನರ ಜೀವನೋಪಾಯದ ವಿದ್ಯಾಕ್ಷೇತ್ರಗಳೆನಿಸಿದ್ದವು. ಸರಕಾರ ವಿದ್ಯಾಭ್ಯಾಸದಲ್ಲಿ ನೇರವಾಗಿ ಕೈ ಹಾಕದಿದ್ದರೂ ವಿದ್ಯಾಸಂಸ್ಥೆಗಳ ನಿರ್ವಹಣೆಗಾಗಿ ಉದಾರವಾದ ದಾನವನ್ನು ಕೊಡುತ್ತಿತ್ತು. "ಹೀಗೆ ಕೆಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾಡಿ ಅವುಗಳನ್ನು ಬ್ರಾಹ್ಮಣರಿಗೆ ದಾನ ಕೊಡುತ್ತಿದ್ದರು. ಅಂತಹ ಅಗ್ರಹಾರಗಳಲ್ಲಿ ಸಹಜವಾಗಿಯೇ ವಿದ್ಯಾಭ್ಯಾಸಕ್ಕೆ ಸೌಲಭ್ಯಗಳಿರುತ್ತಿದ್ದವು. ಕೆಲವು ಅಗ್ರಹಾರಗಳಂತೂ ಹೆಸರಾಂತ ವಿದ್ಯಾಕೇಂದ್ರ ಗಳಾಗಿ ಪರಿಣಮಿಸಿದ್ದವು,"[60] ಹೀಗೆ ರಾಜರಿಂದ ಹಿಡಿದು ಮಂತ್ರಿಗಳು ಹಾಗೂ ಇತರ ಅಧಿಕಾರಿಗಳು ದಾನ ದತ್ತಿಗಳನ್ನು ನೀಡುತ್ತಿದ್ದರು. ಅಲ್ಲದೆ ಆ ಸ್ಥಳವನ್ನು ಯಾವುದೇ ದಾಳಿ, ತೆರಿಗೆ ಇತ್ಯಾದಿ ಹಿಂಸೆಗಳಿಲ್ಲದೆ ನೆಲೆಗೊಳಿಸುವ ಪರಂಪರೆ ಇದ್ದುದರಿಂದ ಅಗ್ರಹಾರಗಳ ಆಧಾರವೆಲ್ಲವೂ ಬ್ರಾಹ್ಮಣರಿಗೆ ಸಲ್ಲುತ್ತಿತ್ತು. ಹೀಗಾಗಿ ಅಲ್ಲಿ ನೆಲೆಸಿದ ಬ್ರಾಹ್ಮಣರಿಗೆ ಜೀವನೋಪಾಯಕ್ಕೆ ಚಿಂತೆ ಇರಲಿಲ್ಲ. ಇದರಿಂದ ಶಿಕ್ಷಣದ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಅಂದಿನ ಕಾಲದಲ್ಲಿ ವಿದ್ಯೆ ಎನ್ನುವುದು ಒಂದು ತಪಸ್ಸಿನ ಫಲ ಎಂದೇ ಭಾವಿಸಲಾಗುತ್ತಿತ್ತು. ಮಹಾಜನರಾಗಲಿ ಅಥವಾ ಪುರೋಹಿತವರ್ಗದವರು ತಾವು ಕಲಿತ ವಿದ್ಯೆಯಿಂದಲೇ ಮಹಾನ್ ಮೇಧಾವಿಗಳೆನಿಸಿದ್ದು ವೇದ, ಉಪನಿಷತ್ತು, ಸ್ಮೃತಿ, ಆಗಮಗಳ ತಿರುಳನ್ನು ಬಲ್ಲವರಾಗಿದ್ದರು. ವಿದ್ಯಾರ್ಥಿ ಗಳಿಗೂ ವೇದ, ಶಾಸ್ತ್ರ, ತರ್ಕಗಳಂತಹ ಉನ್ನತ ಮಟ್ಟದ ವಿದ್ಯೆಯನ್ನೇ ಹೇಳಿಕೊಡುತ್ತಿದ್ದು ವಿದ್ಯಾರ್ಥಿಗಳ ಉತ್ತಮ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಕಾರಣೀಭೂತರಾಗಿದ್ದರು. ಹೀಗೆ ಅವರು ನೀಡುತ್ತಿದ್ದ ವಿದ್ಯೆ ಮುಂದಿನ ಉನ್ನತ ಸಮಾಜದ ನಿರ್ಮಾಣಕ್ಕೆ ಕಾರಣವಾಗುತ್ತಿತ್ತು. ಹೀಗಾಗಿ ಅಗ್ರಹಾರಗಳು ಅಂದು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದ್ದವು.

## ಶಾಸನೋಕ್ತ ಅಗ್ರಹಾರಗಳು

| ಕ್ರ.ಸಂ | ಅಗ್ರಹಾರದ ಹೆಸರು | ಕಾಲ | ಉಲ್ಲೇಖಿತ ಶಾಸನ ಸ್ಥಳ |
|---|---|---|---|
| 1. | ಕೌರೂರು | – | ಕವಲೂರು |
| 2. | ಅಳವಂಡಿ | ಕ್ರಿ.ಶ.1268 | ಅಳವಂಡಿ |
| 3. | ಮುದೆನೂರು | – | ಮಾದೆನೂರು |
| 4. | ಗೊಂಡಬಾಳ | ಕ್ರಿ.ಶ.1512 | ಗೊಂಡಬಾಳ |
| 5. | ಬಳನೆಗೆಯೂರು | – | ಪುರ |
| 6. | ಮುದವೊಳಲು | ಕ್ರಿ.ಶ.1154 | ಮುದೋಳು |
| 7. | ಕುಕ್ಕನೂರು | ಕ್ರಿ.ಶ.1163 | ಕುಕ್ಕನೂರು |
| 8. | ಕುಕ್ಕನೂರು | ಕ್ರಿ.ಶ.1143 | ಕುಕ್ಕನೂರು |
| 9. | ಕುಕ್ಕನೂರು | ಕ್ರಿ.ಶ.1379 | ಕುಕ್ಕನೂರು |
| 10. | ಕುಕ್ಕನೂರು | ಕ್ರಿ.ಶ.1005 | ಕುಕ್ಕನೂರು |
| 11. | ಕುಕ್ಕನೂರು | ಕ್ರಿ.ಶ.1178 | ಕುಕ್ಕನೂರು |
| 12. | ಕುಕ್ಕನೂರು | ಕ್ರಿ.ಶ.1094 | ಹಳ್ಳಿಗುಡಿ |
| 13. | ತಳಕಲ್ಲು | ಕ್ರಿ.ಶ.997 | ತಳಕಲ್ಲು |
| 14. | ಇಟಗಿ | – | ಇಟಗಿ |
| 15. | ಸಿಂಧನೂರು | 12ನೇಶತಮಾನ | ಪುರ |
| 16. | ಬಾದಾಮಿ | ಕ್ರಿ.ಶ.1125 | ಕಲ್ಲೂರು |

**ಬ್ರಹ್ಮಪುರಿ :**

"ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ ಬ್ರಹ್ಮಪುರಿ"[61] ಬ್ರಹ್ಮಪುರಿಗಳೆಂದರೆ ಹೆಚ್ಚಾಗಿ ನಗರಗಳಿಗೆ ಸೇರಿದ ವಿದ್ಯಾಸಂಸ್ಥೆಗಳೆಂದು ಹೇಳಬಹುದಾಗಿದೆ. ಅಗ್ರಹಾರಗಳಿಗಿಂತ ಬ್ರಹ್ಮಪುರಿಗಳ ಸಂಖ್ಯೆ ಕಡಿಮೆ[62] ಅಗ್ರಹಾರಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ಅಲ್ಲಿಯ ಆಡಳಿತದ ಒಡೆತನ ಅವರಿಗೆ ಸೇರಿರುತ್ತದೆ. ಬ್ರಾಹ್ಮಣರೇ ಆ ಊರುಗಳ ಒಡೆಯರು. ಆದರೆ ಇಲ್ಲಿ ಬ್ರಹ್ಮಪುರಿಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ಅಲ್ಲಿಯ ಒಡೆತನದ ಹಕ್ಕು ಇರಲಿಲ್ಲ. ಹಾಗೂ ಅಲ್ಲಿಯ ಆದಾಯವನ್ನು ಇವರು ಅನುಭವಿಸು ವಂತಿರಲಿಲ್ಲ. ಏಕೆಂದರೆ ವಿದ್ಯಾಭ್ಯಾಸದ ವಿಷಯದಲ್ಲಿ ಬ್ರಹ್ಮಪುರಿಗಳು ಯಾವ ವಿಶೇಷತೆಯನ್ನು ತೋರಿರುವುದಿಲ್ಲ. ಬ್ರಹ್ಮಪುರಿಗಳನ್ನು ಕುರಿತು ಈ ಜಿಲ್ಲೆಯಲ್ಲಿ ಕೆಲ ಶಾಸನಗಳಲ್ಲಿ ಮಾತ್ರ ಉಲ್ಲೇಖ ಬಂದಿದೆ.

ಅಗ್ರಹಾರಗಳಲ್ಲಿ ಕೇವಲ ವಿದ್ಯಾವಂತ ಬ್ರಾಹ್ಮಣರ ವಿದ್ಯಾಭ್ಯಾಸದ ಸೌಲಭ್ಯವಿರುತ್ತಿತ್ತು. ಅಂತಹ ಅಗ್ರಹಾರಗಳಲ್ಲಿ ಬ್ರಾಹ್ಮಣರ ಒಂದು ನಗರ ಬೇರೆ ಇರುತ್ತಿತ್ತು. ಅಂತಹವುಗಳಿಗೆ ಬ್ರಹ್ಮಪುರಿಗಳೆಂದು ಕರೆಯುತ್ತಿದ್ದರು.

**ಬಳಗೇರಿ :**

ಯಲಬುರ್ಗಾ ತಾಲೂಕಿನ ಬಳೇಶ್ವರ ದೇವಾಲಯದ ಬಳಿ ದೊರೆತ ಬಳಗೇರಿ ಶಾಸನದಲ್ಲಿ[63] ಬ್ರಹ್ಮಪುರಿ ಬಳಗೇರಿಯ ಉಲ್ಲೇಖ ಬಂದಿದೆ. ಶಾಸನದಲ್ಲಿ ಬಳಂಗೇರಿ ಎಂದು ಕರೆಯಲಾಗಿದೆ. ಈ ಬ್ರಹ್ಮಪುರಿಯಲ್ಲಿ ಮುನ್ನೂರು ಮಹಾಜನರಿದ್ದಂತೆಯೂ ತಿಳಿದು ಬರುತ್ತದೆ. ಇವರನ್ನು ಶಾಸನವು ವಿಶೇಷವಾಗಿ ಬಣ್ಣಿಸಿದೆ.

ಇನ್ತೆನಿಪ ಬಳಂಗೆರಿಯ ಮಹಾಜನಮಿಮ್ಮಿರ್ವ್ವರುಯಮನಿಯ
ಸಮಾಧಿ ಸಂಪನ್ನರುಂ ಷಟ್ಕರ್ಮನಿರತರು ಸಪ್ತಸೋಮ
ಸಂಸ್ಥಾವಗಾಹನ ಪವೀತ್ರೀಕೃತ ಶರೀರರುಂ ಸಕಳಶಾಸ್ತ್ರ.....
ಪರಾಯಣರುಂ ಯಜ್ಞ ದೀಕ್ಷಿತರುಮಾಗಿ ಸ್ವಧರ್ಮದೊಳೆನಡೆವುತ್ತಮಿರೆ64

ಇವರು ಸಕಳಶಾಸ್ತ್ರ ಪರಿಣಿತರೂ, ಯಮ ನಿಯಮಗಳಲ್ಲಿ ಪರಿಣಿತರಾಗಿದ್ದರಲ್ಲದೆ ಷಟ್ಕರ್ಮನಿರತರಾಗಿದ್ದರೆಂದು ಉಲ್ಲೇಖಿಸಿದೆ.

ಅಗ್ರಹಾರದ ಬ್ರಾಹ್ಮಣರಿಗೆ ದಾನ ನೀಡಿದಂತೆ ಬ್ರಹ್ಮಪುರಿಯ ಬ್ರಾಹ್ಮಣರಿಗೂ ದಾನ ಕೊಡುವ ಪದ್ಧತಿಯು ಇತ್ತು. ಯಲಬುರ್ಗಾ ತಾಲೂಕಿನ ಕುಕನೂರು ಶಾಸನವು[65] ಮಹಾಪ್ರಧಾನ ದಂಡನಾಯಕ ಬಲದೇವಯ್ಯ ಮತ್ತು ಆತನ ಕರಣಗಳು, ಮಹಾಪ್ರಧಾನಿ, ಸೇನಾಪತಿ ಹಾಗೂ ಬೆಳ್ವೊಲನಾಡ ಆಧಿಕಾರಿಯಾದ ಅಮ್ಮಣಯ್ಯ ಮತ್ತವನ ಕರಣಗಳು ಕುಕ್ಕನೂರು–30ರ ಭಾಗವಾದ ಎಡೆಹಳ್ಳಿಯನ್ನು ಹಂಪೆಯ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಪುನರ್ದತ್ತಿಯಾಗಿ ಪಡೆದು ಅದರಲ್ಲಿ ದೇವರಿಗೆ ಮತ್ತು ಆ ಊರಿನ 15 ಬ್ರಾಹ್ಮಣರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಯಲಬುರ್ಗಾದಲ್ಲಿ ದೊರೆತ ಕ್ರಿ.ಶ.1018ರ ಪುರ ಶಾಸನವು[66] ಬೈಳೆನೆಗೆಯೂರಿನ ಮುಖ್ಯಸ್ಥನಾದ ಕೊಣ್ಡಯವಾರಿಯು ಅಲ್ಲಿ ನೆಲೆಸಿದ 12 ಜನ ಬ್ರಾಹ್ಮಣರಿಗೆ 150 ಮತ್ತರು ಗದ್ದೆಯನ್ನು ದಾನ ಬಿಟ್ಟಿದ್ದಂತೆ ತಿಳಿಸುತ್ತದೆ. ಯಲಬುರ್ಗಾದಲ್ಲಿ ದೊರೆತ ಕ್ರಿ.ಶ.12ನೆಯ ಶತಮಾನದ ಮತ್ತೊಂದು (ಪುರ) ಶಾಸನವು[67] ಬ್ರಹ್ಮಪುರಿಯಲ್ಲಿ ನೆಲೆಸಿದ ಬ್ರಾಹ್ಮಣರ ವೇತನಕ್ಕೆ ಹಿರಿಯಕೋಲಲ್ಲಿ ಒಂದು ಮತ್ತರು ದಾನ ಬಿಟ್ಟಂತೆ ಉಲ್ಲೇಖ ನೀಡಿದೆ. ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಕವಲೂರು ಶಾಸನದಲ್ಲಿ[68] ಬ್ರಹ್ಮಪುರಿಯಲ್ಲಿ ನೆಲೆಸಿದ ಐದನೂರು ಆಶೇಷ ಮಹಾಜನರು ಸೇರಿ ಹರಿಹರದೇವನಿಗೆ ಎಡೆಯಹಳ್ಳಿಯನ್ನು ದಾನವಾಗಿ ಬಿಟ್ಟ ಮಾಹಿತಿಯ ವಿವರ ಮೂಡಿ ಬಂದಿದೆ. ಕುಷ್ಟಗಿಯ ಪುರ ಶಾಸನದಲ್ಲಿ[69] ಬ್ರಹ್ಮಪುರಿಯ ಉಲ್ಲೇಖ ಬಂದಿದ್ದು ಈ ಶಾಸನದಲ್ಲಿ ಹೆಚ್ಚಿನ ಮಾಹಿತಿಯನ್ನು ಉಲ್ಲೇಖಿಸಿರುವುದಿಲ್ಲ.

### ಶಾಸನೋಕ್ತ ಬ್ರಹ್ಮಪುರಿಗಳು

| ಕ್ರ.ಸಂ | ಅಗ್ರಹಾರದ ಹೆಸರು | ಕಾಲ | ಉಲ್ಲೇಖಿತ ಶಾಸನ ಸ್ಥಳ |
|---|---|---|---|
| 1. | ಬ್ರಹ್ಮಪುರಿ | – | ಕವಲೂರು |
| 2. | ಬ್ರಹ್ಮಾಪುರಿ | 12ನೇ ಶತಮಾನ | ಪುರ |
| 3. | ಬೆಳಂಗೆರೆಯ | ಬ್ರಹ್ಮಪುರಿ | ಬಳಗೇರಿ |
| 4. | ಬ್ರಹ್ಮಪುರಿ | ಕ್ರಿ.ಶ.1163 | ಕುಕನೂರು |
| 5. | ಬ್ರಹ್ಮಪುರಿ | ಕ್ರಿ.ಶ.1018 | ಪುರ |

**ಘಟಿಕಾಲಯ :**

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳಾಗಿ ಅಗ್ರಹಾರ ಬ್ರಹ್ಮಪುರಿ, ಭತ್ತಗ್ರಾಮಗಳಂತೆ ಘಟಿಕಾಸ್ಥಾನಗಳು ವಿದ್ಯಾಭ್ಯಾಸದ ಕೇಂದ್ರಗಳಾಗಿ ಪ್ರಮುಖ ಪಾತ್ರವಹಿಸಿವೆ. ಪ್ರೊ.ಎಸ್.ವಿ.ವೆಂಕಟೇಶ್ವರ ಅವರು ಘಟಿಕಾಸ್ಥಾನವನ್ನು ಹೀಗೆ ವಿವರಿಸುತ್ತಾರೆ. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕೂಡಿ ಚರ್ಚೆ ನಡೆಯಿಸುತ್ತಿದ್ದ ಮತ್ತು ಮಹಾವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ಸಾಹಿತ್ಯದಲ್ಲಿ ಅತ್ಯುತ್ತಮ ಜ್ಞಾನವನ್ನು (ಪವಚನಂ ನಿಖಿಲಂ) ಪಡೆಯಲು ಸಾಧ್ಯವಾಗಿದ್ದ ಶ್ರೇಷ್ಠತಮ ಸಂಸ್ಥೆಯೇ ಘಟಿಕಾಸ್ಥಾನ'[70] ಎಂದಿದ್ದಾರೆ. ಇಲ್ಲಿ ವಿದ್ಯೆಯ ಜೊತೆಗೆ ಧಾರ್ಮಿಕ ವ್ಯವಸ್ಥೆಯ ಅಧ್ಯಯನಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಇದೇ ಅಭಿಪ್ರಾಯವನ್ನು ರೈಸ್ ಅವರು ಹೀಗೆ ವಿವರಿಸಿದ್ದಾರೆ. "ಬ್ರಾಹ್ಮಣರು ಒಂದೆಡೆ ಸೇರುತ್ತಿದ್ದ ಸಾರ್ವಜನಿಕ ಮಂದಿರವಹುದು"[71] ಎಂದು ಘಟಿಕಾಸ್ಥಾನವನ್ನು ಕುರಿತು ವಿವರಿಸಿದ್ದಾರೆ.

ಕರ್ನಾಟಕದ ಅತ್ಯಂತ ಪ್ರಮುಖವಾದ ಘಟಿಕಾಲಯಗಳು ನಾಗಾವಿ, ಹಂಚೇರು, ಕಡಿಯೂರು ಮುಂತಾದವು ಇಂತಹ ಘಟಿಕಾಸ್ಥಾನಗಳಲ್ಲಿ ಗ್ರಂಥ ಪಾಲಕರು, (ಸರಸ್ವತಿ ಭಂಡಾರಕರು) ಘಟಿಕಾ ಪ್ರಹಾರಿಗಳು, (ಕೆಲಸಗಾರರು, ಬರು–ಹೋಗುವವರ ಲೆಕ್ಕ ಇಡುವವರು) ಪಂಡಿತರು ಮತ್ತು ವಿದ್ಯೆ ಕಲಿಯುವ ವಿದ್ಯಾರ್ಥಿಗಳಿರುತ್ತಿದ್ದರು. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಘಟಿಕಾಸ್ಥಾನದ ಕುರಿತು ದೊರೆತ ಶಾಸನಗಳಲ್ಲಿ ಹೆಚ್ಚಿನ ಮಾಹಿತಿ ಲಭಿಸದಿದ್ದರೂ ಈ ಜಿಲ್ಲೆಯೂ ಘಟಿಕಾಲಯಕ್ಕೆ ಪ್ರಸಿದ್ಧಿಯನ್ನು ಪಡೆದಿತ್ತು ಎಂದು ಇಲ್ಲಿ ದೊರೆತ ಶಾಸನದ ಆಧಾರದಿಂದ ಹೇಳಬಹುದಾಗಿದೆ.

**ಹನುಮನಾಳ :**

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮನಾಳದಲ್ಲಿ ದೊರೆತ ಶಾಸನದಲ್ಲಿ[72] ಘಟಿಕಾಲಯದ ಉಲ್ಲೇಖ ಬಂದಿದೆ. ಈ ನಾಡಿನಲ್ಲಿ ಒಟ್ಟು 64 ಘಟಿಕಾಸ್ಥಾನಗಳಿದ್ದವೆಂದು ಈ ರೀತಿ ಇಲ್ಲಿ ಉಲ್ಲೇಖಿಸಲಾಗಿದೆ.

ಶ್ರೀಮದಯ್ಯಾವ್ವರ್ಸ್ವಾಮಿಗಳು ಅಷ್ಟಾದಸಪಟ್ಟಣಮುಂ
ದ್ವಾತ್ರಿಂ ಸವೇಳಾವುರಮುಂ ಅರವತ್ತನಾಲ್ಕು ಘಟಿಕಾಸ್ಥಾನಮುಂ
ಚತುಷಷ್ಟಿ ಯೋಗಪೀಠಮುಂ[73]

ಎಂಬ ಸಾಲುಗಳು 64 ಘಟಿಕಾಸ್ಥಾನಗಳಿದ್ದವೆಂದು ಹೇಳುವಲ್ಲಿ ಆಧಾರ ಒದಗಿಸಿದೆ. ಆದರೆ ಅವುಗಳು ಯಾವುವು? ಎಲ್ಲೆಲ್ಲಿ ಇದ್ದವೆಂಬುದರ ಕುರಿತು ಮಾಹಿತಿ ದೊರೆತಿರುವುದಿಲ್ಲ. ಈ ಮೇಲಿನ ಆಧಾರದಿಂದ ಇಲ್ಲಿದ್ದ ಘಟಿಕಾಲಯಗಳು ವಿದ್ಯಾಭ್ಯಾಸಕ್ಕೆ ನೀಡಿದ ಪ್ರೋತ್ಸಾಹ ಹಾಗೂ ಅದಕ್ಕಿರುವ ಮಹತ್ವತೆಯನ್ನು ಅರಿತು ವಿಶೇಷ ಆಸಕ್ತಿ ವಹಿಸಿದ್ದಂತೆ ತಿಳಿದು ಬರುತ್ತದೆ. ಅಗ್ರಹಾರ ಹಾಗೂ ಬ್ರಹ್ಮಪುರಿಗಳು ವಿದ್ಯೆ ಕಲಿಸುವುದಕ್ಕೆ ನೀಡಿದ ಹೆಚ್ಚಿನ ಮಹತ್ವವನ್ನೇ ಈ ಘಟಿಕಾಲಯಗಳು ಕೂಡ ನೀಡಿದ್ದವೆಂದು ಇದರಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.

"ಘಟಿಕಾಸ್ಥಾನವು ಸಹ ಅಗ್ರಹಾರ, ದೇವಾಲಯಗಳಲ್ಲಿ ಒಂದು ಅಂಗವಾಗಿತ್ತು. ವಿದ್ವಾಂಸರು ಗಮನಿಸಿದಂತೆ ಘಟಿಕಾಸ್ಥಾನಗಳು ಉಚ್ಚ ಶಿಕ್ಷಣದ ವಿದ್ಯಾಭ್ಯಾಸದ ಕೇಂದ್ರವಾಗಿದ್ದವು. ಇಲ್ಲಿ ವಿದ್ವಾಂಸರು ಚರ್ಚೆ, ವಾದ-ವಿವಾದಗಳಲ್ಲಿ ತೊಡಗಿರುತ್ತಿದ್ದರು."[74] ಈ ಘಟಿಕಾಲಯಗಳಲ್ಲಿ ಉಪಾಧ್ಯಾಯರು, ವಿದ್ವಾಂಸರು ಹಾಗೂ ವಿದ್ಯಾರ್ಥಿಗಳು ಒಂದೆಡೆ ಸೇರಿ ಧಾರ್ಮಿಕ ವಿಷಯದಲ್ಲಿ ಹೆಚ್ಚಿನ ಜ್ಞಾನವನ್ನು ಪಡೆಯುತ್ತಿದ್ದರು. ಈ ಚರ್ಚೆಯಲ್ಲಿ ತೊಡಗಿದವರನ್ನು ಶಾಸನಗಳಲ್ಲಿ 'ಘಟಿಕಾಸ್ಥಾನದಲ್ಲಿ ಮನ್ನಣೆ ಪಡೆದವನು ವಿದ್ವತ್ತಿನ ಶಿಖರವನ್ನು ಮುಟ್ಟಿದವನು ಎಂದು ಜನರು ಭಾವಿಸುತ್ತಿದ್ದಿರಬೇಕು. 'ಘಟಿಕಾಸಾಹಸಿ' ಎಂಬುದು ಮುಂದೆ 'ಘಳಿಸಾಸ' ಎಂದಾಗಿ 'ಫೈಸಾಸ', 'ಫೈಸ' ಆಗಿರಬೇಕು'[75] ಎಂಬುದು ಚಿದಾನಂದಮೂರ್ತಿಯವರ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಪ್ರಾಚೀನ ಕಾಲದ ಘಟಿಕಾಲಯಗಳು ಆಧುನಿಕ ಕಾಲದ ವಿಶ್ವವಿದ್ಯಾಲಯಗಳಂತೆ ಕಾರ್ಯನಿರ್ವಹಿಸುತ್ತಿದ್ದವು ಎಂದು ಹೇಳಬಹುದು.

ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಇಂತಹ ವಿದ್ವಾಂಸರ ಉಲ್ಲೇಖ ಬಂದಿದ್ದು ಅವರನ್ನು ಚತುರ್ವೇದಿಭಟ್ಟಲೆಪ್ಪೆಯ ಫೈಸಾಸ,[76] ವಿಷ್ಣು ಫೈಸಾಸ,[77] ಆದಿತ್ಯಫೈಸಾಸ,[78] ನಾರಾಯಣಫೈಸಾಸ,[79] ಈಶ್ವರಿಫೈಸಾಸ,[80] ಕೇಶವಘಳಿಸಾಸರ್ಗ್ಗೆ,[81] ಮಂಚ್ಚಣಘಳಿಸಾಸರ್ಗೆ,[82] ರುದ್ರಾದಿತ್ಯಫೈಸಾಸ,[83] ಎಂಬ ಹೆಸರುಗಳನ್ನು ಉಲ್ಲೇಖಿಸಿದೆ. ಕ್ರಿ.ಶ.1127ರ ಶಾಸನದಲ್ಲಿ[84] ಚತುರ್ವೇದಿಭಟ್ಟ ಹಾಗೂ ಆತನ ಅಳಿಯ ಶಂಕರ ವಿಕ್ರಯನು ಸೇರಿ ಮೂಲಸ್ಥಾನದೇವರ ನೈವೇದ್ಯಕ್ಕೆ 500 ಕಮ್ಮ ಗದ್ದೆಯನ್ನು ದಾನ ಬಿಟ್ಟಿದ್ದಂತೆ ತಿಳಿದು ಬರುತ್ತದೆ. ಹೀಗೆ ಶಾಸನದಲ್ಲಿ ಉಲ್ಲೇಖ ಬರುವ (ಘಳಿಸಾಸರು) ಫೈಸಾಸರು ಮತ್ತು ಅವರ ಹಿಂದಿನ ಹೆಸರುಗಳು ಅವರು ಪಡೆದ ವಿದ್ವತ್ತಿನ ಪದವಿ ಬಿರುದುಗಳಿಗಾಗಿ ಘಳಿಸಾಸರ್ಗೆರೆಯ, ಘಳಿಸರ್ಗೆರೆಯ (ಕೇರಿ) ಅಥವಾ ಓಣಿ ಅವರು ವಾಸಿಸುವ ಸ್ಥಳವಾಗಿರಬೇಕು. ಅಷ್ಟೊಂದು ವಿದ್ವಾಂಸರ ಗುಂಪು ಇಲ್ಲಿತ್ತೆಂದು ತಿಳಿಯುತ್ತದೆ.[85]

ಹೀಗೆ ಕೊಪ್ಪಳ ಜಿಲ್ಲೆಯಲ್ಲಿಯೂ ಅನೇಕ ಘಟಿಕಾಲಯಗಳಿದ್ದು ಈ ಘಟಿಕಾಲಯಗಳು ಬಹಳಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದನ್ನು ಶಾಸನಗಳಲ್ಲಿ ಕಾಣುತ್ತೇವೆ. ಇದರಿಂದ ಈ ಪ್ರದೇಶವು ಶಿಕ್ಷಣಕ್ಕೆ ತನ್ನದೇ ಆದ ಒಂದು ಕೊಡುಗೆಯನ್ನು ನೀಡಿದಂತೆ ತಿಳಿದು ಬರುತ್ತದೆ.

**ದೇವಾಲಯ–ಮಠ :**

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ದೇವಾಲಯಗಳು ಅಂದಿನ ಜನತೆಯ ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳೆನಿಸಿದ್ದವು. ದೇವಾಲಯವು ಭಾರತೀಯ ಸಂಸ್ಕೃತಿಯ ಸಂಪೂರ್ಣ ಆವಿಷ್ಕಾರ. ಮನುಷ್ಯನ ಮೇಲೆ ಅತಿ ಹೆಚ್ಚಿನ ಪ್ರಭಾವ ಬೀರಿದ್ದು ಈ ದೇವಾಲಯಗಳೇ. ಏಕೆಂದರೆ ದೇವಾಲಯಗಳು ಪ್ರಬಲ ಸಾಮಾಜಿಕ ಸಂಸ್ಥೆಯಾಗಿ ಜನಜೀವನವನ್ನು ನಿಯಂತ್ರಿಸುತ್ತಿದ್ದವು. ದೇವಾಲಯಗಳು ಕಲೆಗಳ ಬಹು ಪ್ರಾಚೀನ ನಿದರ್ಶನಗಳಾಗಿವೆ. ದೇವಾಲಯಗಳ ಕಾರ್ಯ ಕ್ಷೇತ್ರವು ವ್ಯಾಪಕವಾಗಿದ್ದು ಜನರ ಬಾಳಿನಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿವೆ. ಇವುಗಳು ಸಾಂಸ್ಕೃತಿಕ, ಧಾರ್ಮಿಕತೆಯ ಪ್ರತೀಕಗಳೆನಿಸದೆ ಆಯಾ ಅರಸು ಮನೆತನಗಳ ಕಾಲದ ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಸಮಾಜಕ್ಕೆ ಸಲ್ಲಿಸಿದ ಕೊಡುಗೆ ಅಪಾರವಾಗಿದೆ. ದೇವಾಲಯದ ನಿರ್ಮಾಣ ಉದಾತ್ತ ಸಂಸ್ಕೃತಿಯ ಸಾಧನೆಗೆ ಹಿನ್ನೆಲೆಯಾಗಿತ್ತು. ದೇವಾಲಯಗಳಲ್ಲಿ ಅನ್ನ ಸತ್ರಾದಿಗಳನ್ನು ನಡೆಸುವುದು, ಬಡಬಗ್ಗರಿಗೆ ಸಹಾಯ ಮಾಡುವುದು ಧರ್ಮದ ಮುಖ್ಯ ಕಾರ್ಯವಾಗಿತ್ತು. ಇಂತಹ ಮಹೋದ್ದೋದ್ದೇಶವನ್ನು ಹೊಂದಿದ ದೇವಾಲಯಗಳು ಓದುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿಯೂ ಅನುಕೂಲ ಕಲ್ಪಿಸಿಕೊಟ್ಟಿತ್ತು. ಸಮಾಜದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ದೇವಸ್ಥಾನವು ವಹಿಸಿದ ಪಾತ್ರ ವಿಶಿಷ್ಟವಾದುದು.

ದೇವಾಲಯಗಳು ಅಂದಿನ ಕಾಲದ ಶೈವಯತಿಗಳ ವಾಸಸ್ಥಾನ ಗಳಾಗಿದ್ದವು. ಇವರು ಮಹಾವಿದ್ವಾಂಸರಾಗಿದ್ದುದರಿಂದ ವೈಯಕ್ತಿಕವಾದ ತಪೋಕರ್ಮದ ಜೊತೆಯಲ್ಲಿಯೇ ವಿದ್ಯಾದಾನವನ್ನು ಕೈಗೊಂಡರು. ದೇವಾಲಯಗಳಿಗೆ ದಾನ ದತ್ತಿಗಳನ್ನು ಬಿಟ್ಟುಕೊಡುವಾಗ ಭಕ್ತರು ವಿದ್ಯಾಭ್ಯಾಸಕ್ಕಾಗಿಯೇ ದತ್ತಿಗಳನ್ನು ಕೊಡಲಾರಂಭಿಸಿದರು. ದಾನವಾಗಿ ಬಂದ ಈ ಹಣ ಇಂತಹ ಮುಖ್ಯವಾದ ಕಾರ್ಯಗಳಿಗೆ ಉಪಯೋಗವಾಗುತ್ತಿತ್ತು. "ಹೀಗೆ ದೇವಸ್ಥಾನವು ವಿದ್ಯಾಕೇಂದ್ರವಾಗಿ ಪರಿಣಮಿಸಿದ್ದು ಬಹುಶ: ಎಂಟು ಅಥವಾ ಒಂಭತ್ತನೆಯ ಶತಮಾನಗಳ ಬಳಿಕ."[86] ಆದ್ದರಿಂದ ದೇವಾಲಯಗಳಿಗೆ ದಾನ–ದತ್ತಿಗಳನ್ನು ಬಿಡುವ ಸಮಯದಲ್ಲಿ ವಿದ್ಯಾಭ್ಯಾಸಕ್ಕೆಂದು ಇಂತಿಷ್ಟೆಂಬಂತೆ ದಾನ ದತ್ತಿಗಳನ್ನು ಬಿಡುತ್ತಿದ್ದರು. ಈ ಮೂಲಕವಾಗಿ ದೇವಾಲಯಗಳಲ್ಲಿ ನೆಲೆಸಿದ ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ರೂಪಿಸುವಲ್ಲಿ ವಿಶೇಷವಾದ ಪಾತ್ರವನ್ನು ವಹಿಸಿವೆ.

ಇಟಗಿ ಶಾಸನವು[87] ಇಟಗಿಯಲ್ಲಿದ್ದ ಮಹಾದೇವ ದೇವಾಲಯದ ಅಂಗಭೋಗ, ಪಾತ್ರಪಾವುಳ, ನೈವೇದ್ಯ ಹಾಗೂ ಇದರೊಂದಿಗೆ ಅಲ್ಲಿ ನೆಲೆಸಿದ್ದ ಭಟ್ಟರಿಗೆ ಅನ್ನದಾನ ಭಟ್ಟವೃತ್ತಿ ಹಾಗೂ ಘಳಿಯಾರ ಮುಂತಾದವುಗಳು ನಡೆಯುವಂತೆ 500 ಮತ್ತರು ಹೊಲವನ್ನು ದಾನ ನೀಡುತ್ತಾನೆ. ಹಾಗೂ ರುಗ್ವೇದದ ಬಾಲಶಿಕ್ಷೆ, ಯಜುರ್ವೇದದ ಬಾಲಶಿಕ್ಷೆ ಮುಂತಾದವುಗಳಿಗೆ ಬೇರೆ ಬೇರೆ ದಾನ ನೀಡಿದಂತೆ ತಿಳಿದು ಬರುತ್ತದೆ.

ಅಗ್ರಹಾರಗಳು, ದೇವಾಲಯಗಳು ಶೈಕ್ಷಣಿಕ ರಂಗಗಳ ಬೆಳವಣಿಗೆಗೆ ಒಂದು ತಳಹದಿಯನ್ನು ಒದಗಿಸಿಕೊಟ್ಟಂತೆ ಮಠಗಳೂ ಈ ನಾಡಿನ ವಿದ್ಯಾಭ್ಯಾಸದ ಔನ್ನತ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅಂದಿನ ಕಾಲದಿಂದಲೂ ಇಂತಹ ಮಠಗಳು ವಿಪುಲವಾಗಿ ಬೆಳೆದದ್ದನ್ನು ಕಾಣುತ್ತೇವೆ. "ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡು ಬರುವ ಒಂದು ಪ್ರಮುಖವಾದ ಅಂಶವೆಂದರೆ ಊರೂರುಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಅಗ್ರಹಾರಗಳೂ ಮಠಗಳೂ ಘಟಿಕಾಸ್ಥಾನಗಳೂ ನಿರ್ಮಾಣವಾಗಿ ವಿದ್ಯೆಯನ್ನು ಸಾಧ್ಯವಾದಷ್ಟು ವ್ಯಾಪಕವನ್ನಾಗಿ ಮಾಡುವ ಪ್ರಯತ್ನ"[88] ನಡೆಯಿತು. ಈ ರೀತಿಯಾಗಿ ವಿದ್ಯೆಗಿದ್ದ ಪ್ರಾಮುಖ್ಯತೆಯನ್ನು ತಿಳಿಸಲು ಅನೇಕ ಶಾಸನಗಳಲ್ಲಿ ಮಾಹಿತಿ ದೊರಕುತ್ತದೆ. ಮಠಗಳು ವಿದ್ಯಾಕೇಂದ್ರಗಳಾಗಿದ್ದು ಜ್ಞಾನ ಪ್ರಸಾರದಲ್ಲಿ ನಿರತವಾಗಿದ್ದವು ಎಂಬುದನ್ನು ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಕೆಲವು ಶಾಸನಗಳು ಪರೋಕ್ಷವಾಗಿ ಸೂಚಿಸಿವೆ. ಯಲಬುರ್ಗಾ ತಾಲೂಕಿನಲ್ಲಿ ದೊರೆತ ಕ್ರಿ.ಶ.1005ರ ಕುಕನೂರು ಶಾಸನವು[89] ಬೆಳ್ವಲನಾಡಿನ ಕುಕನೂರು–30ರ ಮಠದ ತಪೋಧನರ ಆಹಾರದಾನಕ್ಕೆ ಭೂದಾನ ನೀಡಿದ ಉಲ್ಲೇಖವಿದೆ. ಮುಂದುವರೆದ ಶಾಸನದ ಭಾಗದಲ್ಲಿ ಅಲ್ಲಿದ್ದ ಇನ್ನೊಂದು ಹೊಸ ಮಠದ ಚೋಳಸೋಮೇಶ್ವರ ಪಂಡಿತನ ಶಿಷ್ಯನ (ಹೆಸರಿನ ಉಲ್ಲೇಖವಿಲ್ಲ) ಕಾಲನ್ನು ತೊಳೆದ ಉಲ್ಲೇಖವಿದೆ. ಮಠದಲ್ಲಿ ನೆಲೆಸಿದ ತಪೋಧನರು ಇಲ್ಲಿ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಕಲಿಸುತ್ತಿದ್ದಂತೆ ತಿಳಿದು ಬರುತ್ತದೆ. ಅವರಿಗಾಗಿ ಭೂದಾನ ನೀಡಿದ್ದರ ಕುರಿತು ಈ ಶಾಸನವು ಮಾಹಿತಿಯನ್ನು ಒದಗಿಸಿದೆ. ಕ್ರಿ.ಶ.1061ರ ಕೊಪ್ಪಳದ ಅಳವಂಡಿಯ ಶಾಸನದಲ್ಲಿ[90] ಆ ಊರಿನಲ್ಲಿರುವ ಮಠಕ್ಕೆ ಐದು ಎರೆಮತ್ತರನ್ನು ಕರುವಗುಲ್ಲಿಮಯ್ಯನು ದಾನ ನೀಡಿದ್ದಂತೆ ಕಂಡು ಬಂದಿದೆ. ಕೊಪ್ಪಳದಲ್ಲಿ ದೊರೆತ (ಕ್ರಿ.ಶ.1268) ಮತ್ತೊಂದು ಅಳವಂಡಿ ಶಾಸನವು[91] ಆ ನಾಡಿನಲ್ಲಿದ್ದ ಮಠದ ಕುರಿತು ಉಲ್ಲೇಖ ನೀಡಿದೆ.

ಯಲಬುರ್ಗಾ ತಾಲೂಕಿನ ಕಲ್ಲೂರಿನ (ಕ್ರಿ.ಶ.1186) ಶಾಸನವು[92] ಕಲ್ಲೂರ ಕಲಿದೇವರ ಸ್ವಾಮಿಯ ಭಕ್ತನಾದ ಮೊಲ್ಲೆಯ ಬಮ್ಮಯ್ಯನಿಗೆ ಪ್ರಥಮ ವೃತ್ತಿಯಾಗಿ ಗಣಮಠಕ್ಕೆ 200 ಮತ್ತರು ಭೂಮಿಯನ್ನು ದಾನ ನೀಡಿದ ಮಾಹಿತಿಯನ್ನು ಒದಗಿಸಿದೆ. ಯಲಬುರ್ಗಾದಲ್ಲಿ ದೊರೆತ ಕ್ರಿ.ಶ.1185ರ ಕಲ್ಲೂರು ಶಾಸನವು[93]

ಎರಂಬರವಿಯ ನೆಲೆವೀಡಿನಲ್ಲಿದ್ದ ಮಠದ ಆಚಾರ್ಯರಾದ ಸೋಮೇಶ್ವರ ಪಂಡಿತರ ಕಾಲನ್ನು ತೊಳೆದು 24 ಮತ್ತರು ಭೂಮಿಯನ್ನು ಸರ್ವನಮಸ್ಯವಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ.1005ರ ಕುಕನೂರು (ಯಲಬುರ್ಗಾ) ಶಾಸನವು[94] ಈಶ್ವರಸೆಟ್ಟಿಯ ಹೊಸಮಠದ ಚೋಳಪಂಡಿತ ಶಿಷ್ಯನಾದ ಅಗಸ್ತಜೀಯನ ಕಾಲನ್ನು ತೊಳೆದು ಆ ಮಠಕ್ಕೆ ಕಳಶವನ್ನಿಡಿಸಿ ಮುಖಸಾಲೆ ಕಟ್ಟಿಸಿ, ಮಂಟಪದ ಪರಿಸೂತ್ರದ ನಿರ್ವಹಣೆಗಾಗಿ 100 ಗದ್ಯಾಣವನ್ನು ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಗಂಗಾವತಿ ತಾಲೂಕಿನಲ್ಲಿ ದೊರೆತ ಹಿರೇಬೆಣಕಲ್ಲು (ಕ್ರಿ.ಶ.17ನೇ.ಶ) ಶಾಸನದಲ್ಲಿ[95] ದೇವರ ಮಠಕ್ಕೆ ಬೆಣಕಲ್ಲಿನಲ್ಲಿ ಒಂದು ಕೊಳಗ, ಯಿಕುಪಲ್ಲಿಯಲ್ಲಿ ಒಂದು ಕೊಳಗ ಗದ್ದೆ ಬಿಟ್ಟಂತೆ ತಿಳಿದು ಬರುತ್ತದೆ. ಕ್ರಿ.ಶ.1538ರ ಹಳೇಅಯೋಧ್ಯಾ (ಗಂಗಾವತಿ) ದಲ್ಲಿ ದೊರೆತ ಶಾಸನವು[96] ಜೆಂತಗಲ್ಲಮಾಗಣಿಯ ಅಪಂಣನು ಚೆನ್ನಮಲ್ಲಿಕಾರ್ಜುನ ವೊಡೆಯರಿಗೆ ನಿರಾಸಿಮಠದ ಮಾನ್ಯವಾಗಿ ಭೂಮಿಯನ್ನು ದಾನ ನೀಡಿದ್ದಂತೆ ತಿಳಿಸುತ್ತದೆ.

ಗಂಗಾವತಿಯಲ್ಲಿ ದೊರೆತ ಆನೆಗೊಂದಿಯ (ಕ್ರಿ.ಶ.1551) ಶಾಸನವು[97] ರಾಜಾರಾಜ ತಿರುಮಲರಾಜನು ಜಂಗಮಯ್ಯನ ಮಠಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ. ಇವುಗಳಲ್ಲದೆ ಗಿಣಿಗೇರಿಯಲ್ಲಿ ದೊರೆತ ಕ್ರಿ.ಶ.1520ರ ಶಾಸನದಲ್ಲಿ ಆನೆಗೊಂದಿ ಸಂಸ್ಥಾನದ ರೂಡಾಚಾರ್ಯರ ಮಠ,[98] ಯಲಬುರ್ಗಾದ ಕುಕನೂರಿನ (ಕ್ರಿ.ಶ.1178) ಶಾಸನದ ನವಮಠ,[99] ಗಂಗಾವತಿಯ ವಿಪ್ರ (ಕ್ರಿ.ಶ.1094) ಶಾಸನದ ಓದಿನಮಠ,[100] ಹಾಗೂ ಗಂಗಾವತಿಯ ಹಿರೇಜಂತಕಲ್ (ಕ್ರಿ.ಶ.1544) ಶಾಸನದ ನಿರಾಸಿಮಠ[101]ಗಳನ್ನು ಕುರಿತು ಶಾಸನಗಳು ಉಲ್ಲೇಖ ನೀಡಿವೆ. ದೇವಾಲಯಗಳಲ್ಲಿ ಈಶ್ವರ,[102] ಚಂದ್ರೇಶ್ವರ,[103] ಮಹದೇವ,[104] ಸಿದ್ದೇಶ್ವರ,[105] ಮಲ್ಲಿಕಾರ್ಜುನ,[106] ಕೇಶವ,[107] ವಿಷ್ಣು,[108] ನಾರಾಯಣ[109] ಈ ಮುಂತಾದ ದೇವಾಲಯಗಳಿದ್ದು ಇವುಗಳಲ್ಲಿ ವಿದ್ಯಾದಾನದ ಕುರಿತು ಹೆಚ್ಚಿನ ಮಾಹಿತಿ ದೊರೆತಿಲ್ಲದಿದ್ದರೂ ಶೈಕ್ಷಣಿಕ ವ್ಯವಸ್ಥೆಯ ಕೇಂದ್ರಗಳಾಗಿದ್ದುಕೊಂಡು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದವೆಂದು ಊಹಿಸಬಹುದಾಗಿದೆ.

## ಶಾಸನೋಕ್ತ ಮಠಗಳು

| ಕ್ರ.ಸಂ. | ಮಠಗಳ ಹೆಸರು | ಕಾಲ | ಉಲ್ಲೇಖಿತಶಾಸನ ಸ್ಥಳ |
|---|---|---|---|
| 1. | ಮಠ | ಕ್ರಿ.ಶ.1061 | ಅಳವಂಡಿ |
| 2. | ಮಠ | – | ಅಳವಂಡಿ |
| 3. | ಆನೆಗೊಂದಿಮಠ | ಕ್ರಿ.ಶ.1520 | ಗಿಣಿಗೇರಿ |
| 4. | ರೂಢಾಚಾರ್ಯರಮಠ | ಕ್ರಿ.ಶ.1520 | ಗಿಣಿಗೇರಿ |
| 5. | ನಿರಾಸಿನ ಮಠ | ಕ್ರಿ.ಶ.1544 | ಹಿರೇಜಂತಕಲ್ |
| 6. | ಜಂಗಮಯ್ಯನ ಮಠ | ಕ್ರಿ.ಶ.1551 | ಆನೆಗೊಂದಿ |
| 7. | ನಿರಾಸಿ ಮಠ | ಕ್ರಿ.ಶ.1538 | ಹಳೇಅಯೋಧ್ಯ |
| 8. | ಜಾದಿನ ಮಠ | ಕ್ರಿ.ಶ.1059 | ವಿಪ್ರ |
| 9. | ದೇವರ ಮಠ | 17ನೇಶತಮಾನ | ಹಿರೇಬೆಣಕಲ್ |
| 10. | ಗಣಮಠ | ಕ್ರಿ.ಶ.1186 | ಕಲ್ಲೂರು |
| 11. | ದೇವರ ಮಠ | ಕ್ರಿ.ಶ.1185 | ಕಲ್ಲೂರು |
| 12. | ಹೊಸ ಮಠ | ಕ್ರಿ.ಶ.1005 | ಕುಕನೂರು |
| 13. | ಮಠ | ಕ್ರಿ.ಶ.1005 | ಕುಕನೂರು |
| 14. | ಮಠ | ಕ್ರಿ.ಶ.1178 | ಕುಕನೂರು |

**ಅಡಿಟಿಪ್ಪಣಿಗಳು :**

1. ಭಾರತದ ಗ್ಯಾಸೆಟಯರ್ ಭಾರತದ ದೇಶಕೋಶ ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ಪುಟ:192.
2. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:226.
3. ಅದೇ, ಪುಟ:238.
4. ಗವಿದೀಪ್ತಿ: (ಸಂ:ಎಸ್.ಎಂ.ವೃಷಭೇಂದ್ರಸ್ವಾಮಿ, ವ್ಹಿ.ಎಸ್.ಮುಧೋಳ, ಪಂಚಾಕ್ಷರಿ ಹಿರೇಮಠ, ದೇವೇಂದ್ರ ಕುಮಾರ ಹಕಾರಿ, ಎಂ.ಎಲ್.ಹಿರೇಮಠ) ಪುಟ:143.
5. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:230.
6. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–3, ಪುಟ:11.

7. ತಿರುಳ್ಗನ್ನಡ : (ಸಂ:ಎಚ್.ಎಸ್.ಪಾಟೀಲ, ಅಲ್ಲಮಪ್ರಭು ಬೆಟ್ಟದೂರು) ಪುಟ:35.
8. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–3, ಪುಟ:6.
9. ಅದೇ, ಪುಟ:3.
10. ತಿರುಳ್ಗನ್ನಡ : (ಸಂ:ಎಚ್.ಎಸ್.ಪಾಟೀಲ, ಅಲ್ಲಮಪ್ರಭು ಬೆಟ್ಟದೂರು) ಪುಟ:34.
11. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–8, ಪುಟ:17.
12. ಅದೇ, ಕೊ–9, ಪುಟ:20.
13. ಅದೇ, ಕೊ–26, ಪುಟ:32.
14. ಅದೇ, ಪುಟ:34.
15. ಅದೇ. ಪುಟ.34
16. ಅದೇ, ಯ–29, ಪುಟ:186.
17. ಅದೇ. ಪುಟ.186
18. ಅದೇ, ಯ–29, ಪುಟ:186.
19. ತಿರುಳ್ಗನ್ನಡ : (ಸಂ:ಎಚ್.ಎಸ್.ಪಾಟೀಲ, ಅಲ್ಲಮಪ್ರಭು ಬೆಟ್ಟದೂರು) ಪುಟ:34.
20. ಅದೇ, ಪುಟ:32.
21. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–51, ಪುಟ:224–225.
22. ಅದೇ. 225
23. ಗವಿದೀಪ್ತಿ: (ಸಂ:ಎಸ್.ಎಂ.ವೃಷಭೇಂದ್ರಸ್ವಾಮಿ, ವ್ಹಿ.ಎಸ್.ಮುಧೋಳ, ಪಂಚಾಕ್ಷರಿ ಹಿರೇಮಠ, ದೇವೇಂದ್ರ ಕುಮಾರ ಹಕಾರಿ, ಎಂ.ಎಲ್.ಹಿರೇಮಠ) ಪುಟ:149.
24. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–47, ಪುಟ:218.
25. ಅದೇ, ಪುಟ:219.
26. ಅದೇ, ಯ–38, ಪುಟ:199.
27. ಅದೇ, ಯ–52, ಪುಟ:229.

28. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–51, ಪುಟ:227.
29. ಅದೇ, ಯ–59, ಪುಟ:253.
30. ತಿರುಳ್ಗನ್ನಡ : (ಸಂ:ಎಚ್.ಎಸ್.ಪಾಟೀಲ, ಅಲ್ಲಮಪ್ರಭು ಬೆಟ್ಟದೂರು) ಪುಟ:33.
31. ಅದೇ, ಪುಟ:34.
32. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–67, ಪುಟ:259.
33. ಅದೇ, ಪುಟ:264.
34. ಅದೇ, ಯ–67, ಪುಟ:266.
35. ಅದೇ, ಕೊ–135, ಪುಟ:132.
36. ಅದೇ,ಕು–18, ಪುಟ:296.
37. ಅದೇ, ಕು–13, ಪುಟ:289.
38. ಅದೇ, ಕು–13, ಪುಟ:289.
39. ಅದೇ, ಕು–13, ಪುಟ:289.
40. ಅದೇ, ಕು–17, ಪುಟ:294.
41. ಅದೇ, ಯ–53, ಪುಟ:236.
42. ಅದೇ, ಯ–17, ಪುಟ:175.
43. ಅದೇ, ಯ–57, ಪುಟ:251.
44. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:233.
45. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–8, ಪುಟ:17.
46. ಅದೇ, ಯ–47, ಪುಟ:218.
47. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:236.
48. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–29, ಪುಟ:184.
49. ಅದೇ, ಕೊ–24, ಪುಟ:35.

50. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–26, ಪುಟ:32.
51. ಅದೇ, ಯ–41, ಪುಟ:214.
52. ಅದೇ. ಯ–41, ಪುಟ:214.
53. ಅದೇ. ಯ–41, ಪುಟ:214.
54. ಅದೇ. ಯ–41, ಪುಟ:214.
55. ಅದೇ. ಯ–41, ಪುಟ:214.
56. ಅದೇ. ಯ–41, ಪುಟ:214.
57. ಅದೇ. ಯ–41, ಪುಟ:214.
58. ಅದೇ. ಯ–41, ಪುಟ:214.
59. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಪುಟ:136
60. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ:278.
61. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:238.
62. ಅದೇ. ಪುಟ.238
63. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–36, ಪುಟ:194.
64. ಅದೇ, ಪುಟ:195.
65. ಅದೇ, ಯ–40, ಪುಟ:205.
66. ಅದೇ, ಕು–18, ಪುಟ:296.
67. ಅದೇ, ಕು–13, ಪುಟ:288.
68. ಅದೇ, ಕೊ–3, ಪುಟ:4.
69. ಅದೇ, ಕು–16, ಪುಟ:293.
70. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:247.
71. ಅದೇ.
72. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕು–22, ಪುಟ:302.

73. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕು–23, ಪುಟ:303.

74. ಇತಿಹಾಸ ದರ್ಶನ ಸಂಪುಟ–17, ಪುಟ:100. 7 5 . ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:248.

76. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–38, ಪುಟ:201.

77. ಅದೇ, ಯ–67, ಪುಟ:267.

78. ಅದೇ, ಯ–40, ಪುಟ:209.

79. ಅದೇ, ಕು–21, ಪುಟ:301.

80. ಅದೇ. ಕು–21, ಪುಟ:301.

81. ಅದೇ. ಕು–21, ಪುಟ:301.

82. ಅದೇ. ಕು–21, ಪುಟ:301.

83. ಅದೇ, ಯ–38, ಪುಟ:201.

84. ಅದೇ. ಪುಟ.201

85. ಇತಿಹಾಸ ದರ್ಶನ ಸಂಪುಟ–17, ಪುಟ:102.

86. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:223.

87. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–1, ಪುಟ:160.

88. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ:218.

89. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–51, ಪುಟ:225.

90. ಅದೇ, ಕೊ–6, ಪುಟ:13.

91. ಅದೇ, ಕೊ–8, ಪುಟ:16.

92. ಅದೇ, ಯ–12, ಪುಟ:167.

93. ಅದೇ, ಯ–13, ಪುಟ:167.

94. ಅದೇ, ಯ–50, ಪುಟ:223.

95. ಅದೇ, ಗಂ–70, ಪುಟ:363.

96. ಅದೇ, ಗಂ–104, ಪುಟ:386.

97. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಗಂ–60, ಪುಟ:358.

98. ಅದೇ, ಕೊ–139, ಪುಟ:136.

99. ಅದೇ. ಯ–52, ಪುಟ:228.

100. ಅದೇ, ಗಂ–2, ಪುಟ:313.

101. ಅದೇ, ಗಂ–3, ಪುಟ:316.

102. ಅದೇ, ಯ–67, ಪುಟ:259.

103. ಅದೇ. ಯ–67, ಪುಟ:259.

104. ಅದೇ. ಯ–67, ಪುಟ:259.

105. ಅದೇ, ಗಂ–1, ಪುಟ:313.

106. ಅದೇ, ಯ–39, ಪುಟ:202.

107. ಅದೇ, ಗಂ–3, ಪುಟ:316.

108. ಅದೇ, ಕೊ–1, ಪುಟ:108.

109. ಅದೇ, ಯ–67, ಪುಟ:259.

ಅಧ್ಯಾಯ–8

# ದೇವಾಲಯಗಳು

ಭಾರತದ ಪ್ರಾಚೀನ ನಾಗರೀಕತೆಯಾದ ಸಿಂಧೂ ಬಯಲಿನ ಸಂಸ್ಕೃತಿಯಲ್ಲಿ ಜನರು ಪ್ರಕೃತಿಯ ಆರಾಧಕರಾಗಿದ್ದು, ಪಶುಪತಿ ಮೊದಲಾದ ವಿಗ್ರಹಗಳನ್ನು ಪೂಜಿಸುತ್ತಿದ್ದದ್ದು ಬೆಳಕಿಗೆ ಬಂದಿರುವ ಸಂಗತಿಯಾಗಿದೆ. ಈ ಅವಧಿಯಲ್ಲಿ ವಿಗ್ರಹಗಳಿಗೆಂದು ದೇಗುಲ ಕಟ್ಟುವ, ವಾಸ್ತುಶೈಲಿಯ ವಿನ್ಯಾಸ ಇದ್ಯಾವುದೂ ಅವರಿಗೆ ತಿಳಿದಿರಲಿಲ್ಲ. ಹಾಗಿದ್ದೂ ಈ ಸಂಸ್ಕೃತಿಯಿಂದ ಒಂದಂಶ ಸ್ಪಷ್ಟವಾಗುತ್ತದೆ. ದೇಗುಲ ವಾಸ್ತು ರಚನೆಗೆ ಪೂರ್ವದಲ್ಲಿ ಮೂರ್ತಿ ಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂಬುದು ವೇದ, ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ದೇಗುಲಗಳಿದ್ದ ಬಗ್ಗೆ ಉಲ್ಲೇಖಗಳಿವೆ. ಭಾರತದ ಚರಿತ್ರೆಯಲ್ಲಿ ದೇಗುಲದ ವಾಸ್ತುರೂಪಗಳು ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದ ನಂತರ. ಮನುಷ್ಯ ತನ್ನ ರಕ್ಷಣೆಗೆಂದು ಕಟ್ಟಿಕೊಂಡ ಕಟ್ಟಡವು ಗೃಹ ವಾಸ್ತುಶಿಲ್ಪವಾದರೆ, ತನ್ನ ಹಿರಿಯರು ದೇವರು ಹಾಗೂ ಇತರ ಶಕ್ತಿಗಳೆಂದು ನಿರ್ಮಿಸಿದ ಕಟ್ಟಡವನ್ನು ದೇವಾಲಯ ಅಥವಾ ಧಾರ್ಮಿಕ ವಾಸ್ತುವೆಂದು ಕರೆಯಬಹುದಾಗಿದೆ.

"ದೇವಾಲಯವು ದೇವರ ಆಲಯವಾಗಿದ್ದರೂ, ಇದು ಸಮಾಧಿಯ ಕಲ್ಪನೆಗೆ ಬಹು ಹತ್ತಿರವಾಗಿದೆ. ಆದಕಾರಣ ದೇವಾಲಯದ ವಿವಿಧ ಭಾಗಗಳನ್ನು ದೇಹಕ್ಕೆ ಹೋಲಿಸಿರುವುದು. ಅಂತೆಯೇ ದೇಗುಲದ ಕಲ್ಪನೆಯು ಮುಂದೆ ಕಲೆಯ ಪ್ರತಿರೂಪವಾಗಿ ಮೂಡಿತು. ದೇವರು ಶಾಶ್ವತವೆಂಬ ಕಲ್ಪನೆ ಇದ್ದುದರಿಂದ ದೇವರಿಗಾಗಿ ಕಟ್ಟುವ ಕಟ್ಟಡ ಕೂಡ ಶಾಶ್ವತವಾಗಿರಬೇಕೆಂದು ಹಿಂದಿನಿಂದ ಬೆಳೆದು ಬಂದ ನಂಬಿಕೆಯಾಗಿದೆ. ಈ ಹಿನ್ನೆಲೆಯಲ್ಲಿಯೇ ದೇವಾಲಯಗಳನ್ನು ಬಹುಕಾಲ ತಾಳಿಕೆ ಬರುವ ಶಿಲೆಯನ್ನು ಬಳಸಿ ಕಟ್ಟುತ್ತಿದ್ದರು. ದೇವಾಲಯ ಶಾಶ್ವತವಾಗಿ ಉಳಿಯಬೇಕೆನ್ನುವುದು ಒಂದೆಡೆಯಾದರೆ ಅದನ್ನು ಕಲಾತ್ಮಕವಾಗಿ ನಿರ್ಮಿಸುವುದು ಕೂಡ ಮಹತ್ವದ ಅಂಶವಾಗಿದೆ."[1]

ರಾಜರು ತಮ್ಮ ಪ್ರತಿಷ್ಠೆಗೋಸ್ಕರ ದೇವಸ್ಥಾನ, ಬಸದಿ, ವಿಹಾರಗಳ ನಿರ್ಮಾಣ ಮಾಡುತ್ತಿದ್ದರು. ದೇವಾಲಯಗಳು ಆ ಕಾಲದ ಧಾರ್ಮಿಕ ಜೀವನದ ಸಂಕೇತಗಳು ಮಾತ್ರ ಆಗಿರದೆ ಆ ಕಾಲದ ಜನಜೀವನದ ಸಾಂಸ್ಕೃತಿಕ ಪ್ರತೀಕಗಳೆನಿಸಿದ್ದವು. ಧಾರ್ಮಿಕ ಮನೋಭಾವದ ಈ ದೇಶದ ಜನರಿಗೆ ಭಗವಂತನೆಂದರೆ ಒಂದು ದೃಢವಾದ ನಂಬಿಕೆಯಿತ್ತು. ನಮ್ಮೆಲ್ಲಾ ದಿನನಿತ್ಯದ ಆಗು ಹೋಗುಗಳಿಗೆಲ್ಲ ಆ ದೇವರೆ ಕಾರಣ. ಅವನಿಲ್ಲದೆ ನಾವು, ಈ ಪ್ರಕೃತಿಯೂ ಬಾಳಲು ಸಾಧ್ಯವಿಲ್ಲ ಎಂಬ ನಂಬಿಕೆ

ಅವರದಾಗಿತ್ತು. ಅದಕ್ಕಾಗಿ ದೇವರನ್ನು ಒಲಿಸಿಕೊಂಡು ಜೀವನ ನಡೆಸಬೇಕೆಂದು ಪೂಜೆ–ಪುನಸ್ಕಾರ, ಹೋಮಗಳಂತಹ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು.

ದೇವಾಲಯಗಳ ಕಟ್ಟಡ ರೂಪದಲ್ಲಿ ಆರಂಭವಾದದ್ದು ಗುಪ್ತರ ಕಾಲದಲ್ಲಿ. ಈ ಅವಧಿಯಲ್ಲಿ ನಿರ್ಮಾಣವಾದ ಸಾಂಚಿಯ ಹದಿನೇಳನೆಯ ಸಂಖ್ಯೆಯ ದೇವಾಲಯ ಭಾರತದ ಅತಿ ಪ್ರಾಚೀನ ದೇವಾಲಯವೆಂದು ಗುರುತಿಸಲಾಗಿದೆ. ದೇವಾಲಯಗಳನ್ನು ಇಟ್ಟಿಗೆ, ಮಣ್ಣು, ಮರಗಳನ್ನು ಬಳಸಿ ನಿರ್ಮಾಣ ಮಾಡಿದ್ದಾರೆ. ಗುಪ್ತರ ಕಾಲದಲ್ಲಿ ಇಟ್ಟಿಗೆ ಬಳಸಿ ಕಟ್ಟಿರುವ ಪ್ರಥಮ ದೇವಾಲಯವನ್ನು ಬೀತರ್‌ಗಾಂವ್‌ನಲ್ಲಿ ಸಂಶೋಧಕರು ಪತ್ತೆ ಹಚ್ಚಿರುವುದು ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಈ ಬಗೆಯ ದೇವಾಲಯಗಳನ್ನು ನಿರ್ಮಿಸಿದವರು ಶಾತವಾಹನರು. ಚಂದ್ರವಳ್ಳಿ, ಬನವಾಸಿ, ಬ್ರಹ್ಮಗಿರಿ, ಐಹೊಳೆ, ಪಟ್ಟದಕಲ್ಲು ಹಾಗೂ ಇತ್ತೀಚೆಗೆ ಸಂಶೋಧಿಸಿದ ಸನ್ನತಿಗಳಲ್ಲಿಯೂ ಕಂಡು ಬಂದಿವೆ. ದೇವಾಲಯಗಳ ವಾಸ್ತುಶಿಲ್ಪಕ್ಕೆ ವಿಶೇಷ ಪ್ರೋತ್ಸಾಹ ಮತ್ತು ಆದ್ಯತೆ ನೀಡಿದವರಲ್ಲಿ ಗುಪ್ತರು ಮೊದಲಿಗರಾಗಿದ್ದಾರೆ. ಮುಂದೆ ಕದಂಬರು, ಪಲ್ಲವರು, ಚಾಲುಕ್ಯರು ಮತ್ತು ಹೊಯ್ಸಳರು ದೇವಾಲಯಗಳ ನಿರ್ಮಾಣಕ್ಕೆ ವಿಶೇಷವಾದ ಪ್ರೋತ್ಸಾಹ ನೀಡಿ ಕಲೆಯನ್ನು ಬೆಳಸಿದ್ದಾರೆ.

ದೇವಸ್ಥಾನಗಳ ಬಗೆಗಿರುವ ನಂಬಿಕೆ ಭಕ್ತಿ ವಿಶೇಷವಾಗಿದೆ. ಪ್ರಾಚೀನ ಕಾಲದಲ್ಲಿ ಅವುಗಳ ಕ್ಷೇತ್ರವು ಬಹು ವ್ಯಾಪಕವಾಗಿದ್ದವು. ಅವು ಕರ್ನಾಟಕದ ಕಲೆಗಳ ಬಹು ಪ್ರಾಚೀನ ನಿದರ್ಶನಗಳಾಗಿದ್ದು, ಮುಂದೆ ವಿವಿಧ ಅರಸು ಮನೆತನಗಳು ಅಧಿಕಾರಕ್ಕೆ ಬಂದಾಗ ಅನೇಕ ದೇವಾಲಯಗಳು ನಿರ್ಮಾಣ ಗೊಂಡಿರುವುದನ್ನು ನೋಡುತ್ತೇವೆ. "ಪೂಜೆಗಾಗಿ, ಪ್ರಾರ್ಥನೆಗಾಗಿ, ದೇವರ ಮೂರ್ತಿಗಳನ್ನು ಇತರ ಆರಾಧ್ಯ ವಸ್ತುಗಳನ್ನು ಸ್ಥಾಪಿಸಿ ರಕ್ಷಿಸಲಿಕ್ಕಾಗಿ ನಿರ್ಮಿಸಿರುವ ವಿಶಿಷ್ಟವಾದ ಕಟ್ಟಡವೇ ದೇವಾಲಯ. ದೇವಾಲಯಗಳಿಂದಲೇ ಇಂದಿಗೂ ಕೆಲವು ಸ್ಥಳಗಳು ಪ್ರಸಿದ್ಧವಾಗಿವೆ. ದೇವಾಲಯಗಳು ಬದುಕಿನ ಹಲವು ಮುಖಗಳನ್ನು ಸಾಮುದಾಯಿಕವಾಗಿ ನಿಯಂತ್ರಿಸುತ್ತಿದ್ದು ಸಾಂಸ್ಕೃತಿಕ ಚಟುವಟಿಕೆಗಳ ನೆಲೆವೀಡಾಗಿದ್ದವು. ನಾಡಿನ ಜನತೆಯ ಜೀವಂತ ನಾಡಿಗಳಾಗಿದ್ದವು."[2]

"ದೇವಾಲಯಗಳನ್ನು ಅರಸರಿಂದ ಹಿಡಿದು ಜನಸಾಮಾನ್ಯರವರೆಗೂ ದೇವಾಲಯಗಳನ್ನು ನಿರ್ಮಾಣಮಾಡಿದರು. ದೇವಾಲಯಗಳ ನಿರ್ಮಾಣ ಉದಾತ್ತವಾದ ಸಂಸ್ಕೃತಿಯ ಸಾಧನೆಗೆ ಹಿನ್ನೆಲೆ ಎಂಬ ಅಂಶದಿಂದಲೇ ಅಧಿಕ ಆಶಯದಿಂದಲೇ ಅಧಿಕ ಸಂಖ್ಯೆಯಲ್ಲಿ ಆಲಯಗಳನ್ನು ಕಟ್ಟಿಸಿದರು."[3] ಬಾದಾಮಿ ಚಾಲುಕ್ಯರ ಕಾಲದಲ್ಲಿ ಕರ್ನಾಟಕದ ವಿವಿಧೆಡೆ ಅಸ್ತಿತ್ವದಲ್ಲಿದ್ದ ಮೂರು ಮುಖ್ಯ ಶೈಲಿಗಳಾದ ನಾಗರ, ದ್ರಾವಿಡ ಮತ್ತು ವೇಸರ ಶೈಲಿಗಳ ದೇವಾಲಯಗಳನ್ನು ಕಟ್ಟಿಸಿ ಪ್ರಯೋಗ ಮಾಡಿರುವುದನ್ನು ಕಾಣುತ್ತೇವೆ. ಅಂತೆಯೇ ಐಹೊಳೆ ಮತ್ತು

ಪಟ್ಟದಕಲ್ಲುಗಳನ್ನು ದೇವಾಲಯಗಳ ವಾಸ್ತುಶಿಲ್ಪಿಯ ಪ್ರಯೋಗಶಾಲೆ ಎಂದು ಕರೆದಿದ್ದಾರೆ.[4]

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇಟಗಿಯ ಮಹಾದೇವ ದೇವಾಲಯ, ಲಕ್ಕುಂಡಿಯ ಕಾಶಿವಿಶ್ವನಾಥ, ಕುಕನೂರಿನ ನವಲಿಂಗೇಶ್ವರ, ಕಲ್ಲೇಶ್ವರ, ಗದುಗಿನ ತ್ರಿಕೂಟೇಶ್ವರ, ಸರಸ್ವತಿ ಮತ್ತು ಸೋಮೇಶ್ವರ ದೇವಾಲಯ'ಗಳು ನಿರ್ಮಾಣಗೊಂಡವು.[5] ಮುಂದೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ವಿವಿಧ ಶೈಲಿಗಳನ್ನುಳ್ಳ ದೇವಾಲಯಗಳನ್ನು ಕಾಣುತ್ತೇವೆ.

ಹೊಯ್ಸಳರ ಕಾಲದಲ್ಲಿ ದೇವಾಲಯಗಳು ಕಲಾವಾಸ್ತು ಶಿಲ್ಪಕ್ಕೆ ವಿಶ್ವಪ್ರಸಿದ್ಧಿ ಪಡೆದಿವೆ. ದೇವಾಲಯಗಳು ಅತ್ಯಂತ ವೈವಿಧ್ಯಮಯವೂ ಅಪೂರ್ವ ವಿನ್ಯಾಸಯುತವೂ ಆಗಿದ್ದವು. "ಹೊಯ್ಸಳ ದೇವಾಲಯಗಳು ಅಡಿಯಿಂದ ಮುಡಿಯವರೆಗೆ ಪ್ರತಿ ಭಾಗವು ಅಲಂಕೃತಗೊಂಡಿವೆ. ವಿಜಯನಗರ ಸಾಮ್ರಾಜ್ಯದ ದೇವಾಲಯಗಳು ಅತ್ಯಂತ ಒರಟಾದ ಕಣಶಿಲೆಯನ್ನು ಬಳಸಿದ್ದರೂ ಮರದಂತೆ ಕಡೆದು ಅಲಂಕೃತಗೊಳಿಸಿದ್ದಾರೆ. ಹೆಚ್ಚು ಭಾರವನ್ನು ತಡೆಯಬಲ್ಲ ಕಣಶಿಲೆ ಹಾಗೂ ಅದರಿಂದ ಕಡೆದ ಕಂಬಗಳ ನೆರವಿನಿಂದ ವಿಸ್ತಾರದೇವಾಲಯ ಮತ್ತು ವಿಶಾಲವಾದ ಮಂಟಪಗಳನ್ನು ನಿರ್ಮಾಣ ಮಾಡಿದ್ದಾರೆ. ದೇವಾಲಯಗಳು ಅಲ್ಲದೆ ಗೋಪುರ, ಪ್ರಾಕಾರ ವಿವಿಧ ಮಂಟಪ, ಉಪದೇಗುಲಗಳು–ಈ ಅವಧಿಯಲ್ಲಿ ದೇವಾಲಯದ ಆವರಣದಲ್ಲಿ ನಿರ್ಮಾಣಗೊಂಡವು."[6]

ಸಮಾಜದಲ್ಲಿಯ ಎಲ್ಲಾ ವರ್ಗದ ಜನತೆಯೂ ದೇವಾಲಯಗಳೊಡನೆ ಸಂಬಂಧವಿರಿಸಿಕೊಂಡಿದ್ದು ಶಾಸನಗಳಿಂದ ತಿಳಿದು ಬರುತ್ತದೆ. ರಾಜರು, ರಾಣಿಯರು, ಮಾಂಡಳೀಕರು, ಅಮಾತ್ಯರು, ದಂಡನಾಯಕರು, ವಣಿಕರೂ, ಸಾಮಾನ್ಯ ಜನತೆ ಎಲ್ಲರೂ ಒಂದೇ ರೀತಿಯ ನಿಷ್ಠೆ, ಶ್ರದ್ಧೆ ಮತ್ತು ನಂಬಿಕೆಗಳನ್ನು ಹೊಂದಿದ್ದರು. ಜನರ ಮನಸ್ಸಿನ ಬದುಕು ದೇವಾಲಯಗಳಿಗೆ ಸ್ಪಂದಿಸಿದ ರೀತಿ, ದೇವಾಲಯಗಳು ಜನತೆಯ ಅಂತರಂಗವನ್ನು ವಿಕಸಿಸಿದ ರೀತಿಯನ್ನು ಆಯಾ ಶಾಸನಗಳು ಹಾಗೂ ಸಾಹಿತ್ಯಕ ಕೃತಿಗಳ ಮೂಲಕ ಕಾಣಬಹುದಾಗಿದೆ. "ದೇವಸ್ಥಾನವು ಜನರ ದೈವ ಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಆಗಿದ್ದಿತು. ಲಲಿತ ಕಲೆಗಳು ದೇವಾಲಯದಲ್ಲಿ ವರ್ಧಿಸಿದವು. ದೇವಾಲಯವು ಜನರ ನ್ಯಾಯಾಲಯವೂ ಆಗಿದ್ದವು."[7] ಶ್ರೀಮಂತರ ಐಶ್ವರ್ಯ ಹೊರಗೆ ಹರಿದು ಬರಲು ದೇವಾಲಯಗಳೇ ಕಾರಣವಾಗಿದ್ದವು. ಹೀಗೆ ಬಹುಮುಖ ಚಟುವಟಿಕೆಗಳಿಗೆ ಊರಿನಲ್ಲಿರುವ ದೇವಸ್ಥಾನಗಳು ಅತ್ಯಂತ ಪ್ರಮುಖ ಪಾತ್ರ ನಿರ್ವಹಿಸಿವೆ.

ಕೊಪ್ಪಳ ಜಿಲ್ಲೆಗೆ ಸೇರಿದ ಅನೇಕ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದನ್ನು ನಾವು ಕಾಣುತ್ತೇವೆ. ಉದಾ: ಹಿರೇಬೆಣಕಲ್ಲಿನ ಬೆಟ್ಟದ ಲಿಂಗೇಶ್ವರ

ದೇವಾಲಯ, ಆನೆಗೊಂದಿಯ ರಘುನಾಥದೇವಾಲಯ, ನವಲಿಂಗ ಎಲಿಬಸವಣ್ಣ ದೇವಾಲಯ, ಕುಕನೂರಿನ ಮಲ್ಲಿಕಾರ್ಜುನ ದೇವಾಲಯ ಇನ್ನೂ ಮುಂತಾದ ದೇವಾಲಯಗಳನ್ನು ಶಾಸನದ ಮೂಲಕ ತಿಳಿಯ ಬಹುದಾಗಿದೆ. ಊರಿಗೊಂದು ಧಾರ್ಮಿಕ ಕೇಂದ್ರ, ಹೆಜ್ಜೆಗೊಂದು ದೇವಾಲಯಗಳ ಸ್ಮಾರಕಗಳಿರುವಂತೆ ಈ ಜಿಲ್ಲೆಯಲ್ಲಿ ಬಹು ಚಟುವಟಿಕೆಗಳಿಗೆ ಆಗರವಾದ ದೇವಾಲಯಗಳ ನಿರ್ಮಾಣ ಕಾರ್ಯ ದೊಡ್ಡ ಪ್ರಮಾಣದಲ್ಲಿ ಅಧಿಕವಾಗಿರುವುದನ್ನು ಶಾಸನಗಳ ಮೂಲಕ ಮುಂದಿನ ಕೋಷ್ಟಕದಿಂದ ತಿಳಿಯಬಹುದಾಗಿದೆ. ಈ ಪಟ್ಟಿಯಲ್ಲಿ ಶೈವ, ವೈಷ್ಣವ, ಜೈನ ದೇವಾಲಯ ಗಳೆಂದು ಗುರುತಿಸಿ ಹಾಗೂ ಮಠಗಳು, ಬಸದಿಗಳು, ಹೆಣ್ಣು ದೇವಾಲಯಗಳು ಎಂದು ವಿಂಗಡಣೆ ಮಾಡಲಾಗಿದೆ. ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಅನುಗುಣವಾಗಿ ಕೊಪ್ಪಳ ಜಿಲ್ಲೆಯಲ್ಲಿಯೂ ಹಲವು ಮತ ಧರ್ಮಗಳ ದೇವಾಲಯಗಳ ನಿರ್ಮಾಣ ಮಾಡಿರುವುದನ್ನು ನೋಡುತ್ತೇವೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ದೇವಾಲಯಗಳ ನಿರ್ಮಿತಿಯ ಸುವರ್ಣಕಾಲವೆಂದು ಕರೆದಿದ್ದಾರೆ. ಈ ಕಾಲದಲ್ಲಿ ನಿರ್ಮಾಣಗೊಂಡಷ್ಟು ದೇವಾಲಯಗಳು ಕರ್ನಾಟಕದ ಯಾವ ಅರಸು ಮನೆತನದ ಅವಧಿಯಲ್ಲೂ ರಚನೆಯಾಗಿಲ್ಲ. ಕೊಪ್ಪಳ ಜಿಲ್ಲೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅನೇಕ ದೇವಾಲಯಗಳು ಕಂಡು ಬಂದಿದ್ದು, ಅವುಗಳಲ್ಲಿ ಕುಕನೂರಿನ ಚಳ್ಳೇಶ್ವರ, ಪುರ್ತಗೇರಿಯ ತ್ರಿಕೂಟೇಶ್ವರ, ಅಂಟೂರಠಾಣದ ಮೌನೇಶ್ವರ, ಮುಧೋಳದ ತ್ರಿಲಿಂಗೇಶ್ವರ ಕವಲೂರಿನ ಯತೀಶ್ವರ, ನವಲಿಯ ಈಶ್ವರ ಇನ್ನೂ ಮುಂತಾದವುಗಳು. ಕಲ್ಯಾಣ ಚಾಲುಕ್ಯರ ತ್ರಿಕೂಟದೇವಾಲಯ ಗಳಾಗಿವೆ. ಇವು ಮೂರು ಗರ್ಭಗೃಹ, ಮೂರು ಅಂತರಾಳ ಹಾಗೂ ಒಂದು ಸಭಾಮಂಟಪವನ್ನು ಹೊಂದಿದ್ದು ಮೂರು ಗರ್ಭಗೃಹಗಳು ಹಾಳಾಗಿದ್ದು ಒಂದೆರಡು ಮಾತ್ರ ಉಳಿದಿವೆ.

ಕಲ್ಯಾಣ ಚಾಲುಕ್ಯರು ದೇವಾಲಯಗಳನ್ನು ಕಟ್ಟಿಸಿ ದಾನ ದತ್ತಿಗಳನ್ನು ನೀಡಿದ ಅನೇಕ ದೇವಾಲಯಗಳು ಕೊಪ್ಪಳ ಜಿಲ್ಲೆಯಲ್ಲಿ ಸಿಗುತ್ತವೆ. ಇವರ ಆಳ್ವಿಕೆಯಲ್ಲಿ "ಕೊಪ್ಪಳ ಪ್ರದೇಶದಲ್ಲಿ ಸೂಚಿಸುವ ಮೊದಲ ಶಾಸನ ಕ್ರಿ.ಶ.973ರ ಮಾದಿನೂರಿನದು. ಇದರಲ್ಲಿ ಮಾದಿನೂರನ್ನು ಬ್ರಾಹ್ಮಣದೇವಿ ಚಟ್ಟೋಪಾಧ್ಯಾಯನು ದಾನವಾಗಿ ಪಡೆದು ಶಿವ, ವಿಷ್ಣು ಮತ್ತು ಸೂರ್ಯನನ್ನು ಒಳಗೊಂಡ ತ್ರೈಪುರುಷ ದೇವಾಲಯವನ್ನು ಕಟ್ಟಿಸಿದನೆಂದು ಹೇಳಿದೆ. ಮಾದಿನೂರು ಒಂದು ಪ್ರಸಿದ್ಧ ಅಗ್ರಹಾರ ಕೂಡ ಆಗಿತ್ತು. ಹಾಗೂ ತ್ರೈಪುರುಷ ದೇವಾಲಯವು ಈಗ ಉಳಿದಿಲ್ಲ ಆ ಕಾಲದ ಕೆಲವು ಅವಶೇಷಗಳನ್ನು ಮಾತ್ರ ಗುರುತಿಸಬಹುದು."[8]

ಕ್ರಿ.ಶ.1007ರ ಕಲ್ಲೂರು ಮತ್ತು ಬಳಗೇರಿ ಶಾಸನಗಳು ಚಾಲುಕ್ಯದೊರೆ ಸತ್ಯಾಶ್ರಯನ ಕಾಲಕ್ಕೆ ಸೇರಿವೆ. ಸತ್ಯಾಶ್ರಯನ ಸಾಮಂತನಾದ ಸೋಬರಸನು

ಸೋಬನೇಶ್ವರ ದೇವರ ಅಂಗಭೋಗಕ್ಕೆ ಕೋಳಿವಾಡ ಗ್ರಾಮವನ್ನು ದಾನ ನೀಡಿದನು.[9] ಹಾಗೆಯೇ ಕುಕನೂರಿನ ಶಾಸನವೊಂದರಲ್ಲಿ ಈಶ್ವರ ಸೆಟ್ಟಿಯು ಎರಡು ದೇವಾಲಯಗಳಿಗೆ ಕಳಸಗಳನ್ನಿಟ್ಟು ಮುಖ ಶಾಲೆ ಕಟ್ಟಿಸಿ ಮಂಟಪದ ಪರಿಸೂತ್ರ ನಿರ್ವಹಣೆಗಾಗಿ ನೂರು ಗದ್ಯಾಣವನ್ನು ನೀಡಿ ನವಲಿಂಗೇಶ್ವರ ದೇವಾಲಯದ ಶಿಖರಗಳಿಗೆ ಕಳಸಾರೋಹಣ ಮಾಡಿಸಿದ್ದನ್ನು ದೃಢಪಡಿಸ ಬಹುದಾಗಿದೆ.

ಕುಕನೂರಿನಲ್ಲಿ ಒಂಭತ್ತು ಶಿವಲಿಂಗಗಳು ಅಂಬಿಕೆ, ಚಾಮುಂಡೇಶ್ವರಿ, ಶಕ್ತಿ ಪೀಠಗಳು, ಮಹಾಮಾಯಾ, ವಸಂತದೇವಿ, ಪುರಾಣಿದೇವಿಯರು ನೆಲೆಗೊಂಡಿದ್ದವು. ಜೊತೆಗೆ ಗಣೇಶ್ವರ ಮೂಲೇಶ್ವರ, ಮಲ್ಲಿಕಾರ್ಜುನ ಜೇಷ್ಠಾದೇವಿಯರ ದೇವಾಲಯಗಳಿದ್ದುದು ಕಂಡುಬರುತ್ತದೆ. ಇದರಿಂದ ಕುಕನೂರು ಎಷ್ಟೊಂದು ಮಹತ್ವ ಹೊಂದಿದ ಸ್ಥಳವಾಗಿತ್ತು ಎಂಬುದನ್ನು ಶಾಸನಗಳ ಮೂಲಕ ತಿಳಿಯಬಹುದು. ಕುಕನೂರಿನ ಶಾಸನಗಳಿಂದ ಯಲಬುರ್ಗಾದಲ್ಲೂ ಸಿಂಗೇಶ್ವರ, ರಾಜೇಶ್ವರ, ಚೌಡೇಶ್ವರ, ವಿಕ್ರಮೇಶ್ವರ ದೇವಾಲಯಗಳಿದ್ದುದು ತಿಳಿದು ಬರುತ್ತದೆ.

ಕೊಪ್ಪಳದ ಪಾಲ್ಕಿಗುಂಡಿಯ ಕ್ರಿ.ಶ.1008ರ ಶಾಸನವು ಬಿಚ್ಚಕುನ್ದೆ ಗ್ರಾಮದಲ್ಲಿ ಸಾಮಿಕುಮಾರ ಎಂಬುವನು ನಾಗದೇವ ಬಸದಿಯನ್ನು ಕಟ್ಟಿಸಿದುದಾಗಿ ತಿಳಿಸುತ್ತದೆ.[10] ನಾಗದೇವನು ಅತ್ತಿಮಬ್ಬೆಯ ಪತಿಯಾಗಿದ್ದು, ಅವರ ಹೆಸರಿನಲ್ಲಿ ಈ ಬಸದಿಯನ್ನು ಕಟ್ಟಲಾಯಿತೆಂಬುದನ್ನು ಈ ಶಾಸನದ ಮೂಲಕ ತಿಳಿಯುತ್ತದೆ. ಚಾಲುಕ್ಯ ತ್ರೈಲೋಕ್ಯಮಲ್ಲನು ಚಳ್ಳೇಶ್ವರ ದೇವರಿಗೆ 1059ರಲ್ಲಿ[11] ಮುಸಂದೆ ಗ್ರಾಮವನ್ನು ದತ್ತಿ ಬಿಟ್ಟಿದ್ದನು. ಇಲ್ಲಿನ ಶಾಸನದ ಬಹುಮುಖ್ಯ ಸಂಗತಿಯೆಂದರೆ ಈ ಗ್ರಾಮ 'ಕಿಷ್ಕಿಂದೆ' ಪ್ರದೇಶದಲ್ಲಿರುವುದು ವಿಶೇಷವಾಗಿತ್ತು.

ಕಲ್ಯಾಣದ ಚಾಲುಕ್ಯ ದೊರೆ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅಗಸ್ತ್ಯಗೋತ್ರದ ವಾಜಪೇಯ ಯಾಗವನ್ನು ಮಾಡಿದ ಚಾಡಭಟ್ಟನೆಂಬುವವನಿದ್ದ. ಅವನ ಮಗ ಸೋಮಯಾಜಿಯೆಂಬುವವನು ಸೋಮಯಾಗವನ್ನು ಅಪೂರ್ವವೆಂಬುವಂತೆ ಮಾಡಿದ. ಈತ ವಿಷ್ಣು ದೇವಾಲಯ ಸತ್ರ ಮತ್ತು ಕೆರೆಯನ್ನು ಕಟ್ಟಿಸಿದ. ಮುಂದೆ ಶಾಸ್ತಿಕಬ್ಬೆ ಕೇಶವ ದೇವರನ್ನು ಪ್ರತಿಷ್ಠಾಪನೆ ಮಾಡಿ ಕೆಲವು ದಾನಗಳನ್ನು ನೀಡುತ್ತಾಳೆ.

ಕೊಪ್ಪಳ ಜಿಲ್ಲೆಯ ಕವಲೂರು ಶಾಸನವು[12] ಈ ನಾಣಿಮಯ್ಯ ನಾಯಕನು ಪುತ್ರಕ್ಷಾತ್ರಿ ಸಮೇತನಾಗಿ ಸುಖದಿಂದಿದ್ದಾಗ ಏಚಿರಾಜನು ಹರಿಹರದೇವ ಪ್ರತಿಷ್ಠೆಯನ್ನು ಮಾಡಿಸಿದ. ದೇವಾಲಯದ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಬ್ರಹ್ಮಪುರಿಗೆ ತಕ್ಕ ವೃತ್ತಿಯನ್ನು ನಿರ್ಮಿಸಿ ಸಂಕಮದೇವನ ಮಂತ್ರಿಯಾದ ವಸುಧೈಕ ಭಾಸ್ಕರನಾದ ರೇಚಿದೇವನು ಮತ್ತು ನಾಡಾಧಿಕಾರಿ ಮನ್ನೆಯ ಕುಪ್ಪರಸ, ಆತನ ಮಕ್ಕಳು ಹರಿಹರದೇವ, ಮಲ್ಲಿದೇವ, ಬಳ್ಳಾಳದೇವರು

ಕೌರೂರು ಅಶೇಷಮಹಾಜನರು, ಐದುನೂರ್ವರು ಸೇರಿ ಹರಿಹರ ದೇವರಿಗೆ ಎಡೆಹಳ್ಳಿಯನ್ನು ದಾನವಾಗಿ ನೀಡುತ್ತಾರೆ. ಈ ದೇವಾಲಯಕ್ಕೆ ಇನ್ನೂ ಅನೇಕ ರಾಜರುಗಳಾದ ಹಂಪನು, ಹೊಲ್ಲರಸ, ಬಾಚರಸ, ದೊಡ್ಡರಸ ಮುಂತಾದವರು ಕೆಲವು ದಾನಗಳನ್ನು ಬಿಡುತ್ತಾರೆ. ಕ್ರಿ.ಶ.1061ರ ಶಾಸನವು ತ್ರೈಲೋಕ್ಯಮಲ್ಲದೇವ ಕಲ್ಯಾಣದಿಂದ ಆಳುತ್ತಿದ್ದಾಗ ಅಳವಂಡಿಯಲ್ಲಿ ಕರುವ ಗುಲ್ಲಿಮಯ್ಯನು ತೋಟ, ಕಲ್ಲದೇಗುಲ, ಛತ್ರ, ಬಾವಿ, ಛತ್ರದಮನೆ ಹಾಗೂ ಶ್ರೀ ಬಾಗಿಲನ್ನು ನಿರ್ಮಾಣಮಾಡಿಸುತ್ತಾನೆ. ಅವನು ಕಟ್ಟಿಸಿದ ಕಲ್ಲು ದೇಗುಲಗಳನ್ನು ಗುಹೇಶ್ವರ ದೇವಾಲಯವೆಂದು ಕ್ರಿ.ಶ.1157ರ ಶಾಸನದಲ್ಲಿ ಹೇಳಿದೆ. ಕ್ರಿ.ಶ.1299ರ[13] ಮಾದಿನೂರು ಶಾಸನದಲ್ಲಿ ಇಳಹಾಳ ಜಿದ್ದಿ ಸೆಟ್ಟಿಯ ಮಗ ಸಮಸ್ತನಾಗಿಸೆಟ್ಟಿ ಕುಲುಕುಟಿಗನ ಕೈಲಿ ಮೊದಗನೂರು ಸೋಮನಾಥ ದೇವರ ಶಿವಾಲಯವನ್ನು ಕಲ್ಲು ಸಮೇತ ನಿಲ್ಲಿಸಿ ಜೀರ್ಣೋದ್ಧಾರವನ್ನು ಮಾಡಿಸಿದನೆಂದು ಹೇಳಿದೆ.

ಆರನೆಯ ವಿಕ್ರಮಾದಿತ್ಯನು ಕಲ್ಯಾಣದಿಂದ ಆಳುತ್ತಿದ್ದಾಗ ಕಾಮಕಾಯನ ಗೋತ್ರದ ನಾರಾಯಣ ಭಟ್ಟೋಪಾಧ್ಯಾಯನ ಮಗ ಚೌವೇದಿಭಟ್ಟನು ಹುಲಿಗಿಯೆಂಬ ಪುರವನ್ನು ತ್ರೈಲೋಕ್ಯಮಲ್ಲನಿಂದ ಪಡೆದನು. ಈ ಚೌವೇದಿಭಟ್ಟನ ಪತ್ನಿ ಆಚ್ಚಿಕಬ್ಬೆ ಇವರಿಗೆ ಐದು ಮಕ್ಕಳು ಅವರಲ್ಲಿ ಸೋಮನಾಥನು ರುದ್ರಸದ್ಮ(ಶಿವದೇವಾಲಯ)ವನ್ನು ಮಾಡಿಸಿದ. ಹಾಗೂ ಇವುಗಳ ಮಧ್ಯ ಇರುವ ಸುಂದರ ಪ್ರದೇಶದಲ್ಲಿ ಸೋಮೇಶ್ವರನಿಗೆ ಪುಲಿಗೆಯೂರಿನ ಒಡೆಯನಾದ ಸೋಮನಾಥ ದೇವಾಲಯಗಳನ್ನು ಮಾಡಿಸಿದಂತಿದೆ. ಸೋಮೇಶ್ವರ ದೇವರಿಗೆ ಗುಯ್ಯಲ ತೋಟ, ಪರಿನೀರ ತೋಟ, ಚತುಸ್ಸೀಮಾ ಸಮೇತವಾಗಿ ನೀಡುತ್ತಾರೆ.[14]

ಕ್ರಿ.ಶ.1154ರ ಮುಧೋಳ ಶಾಸನ[15]ದಲ್ಲಿ ಸಾವಿರ ಅಶೇಷ ಮಹಾಜನರನ್ನು ಅನೇಕ ವಿಶೇಷಣಗಳಿಂದ ದೀರ್ಘವಾಗಿ ವರ್ಣಿಸಿದೆ. ಇವರನ್ನು ಶ್ರೀಜಡೆಯ ಶಂಕರದೇವರ ಪಾದಾರಾಧಕರು ಎಂದು ಕರೆದು, ಇವರ ಅನುಮತಿ ಪಡೆದು ಐನೂರು ಜನರು (ವ್ಯಾಪಾರಿಗಳು) ಗವರೇಶ್ವರ ದೇವಾಲಯವನ್ನು ನಿರ್ಮಿಸಿದ್ದಾರೆ. ಅತ್ಯಂತ ಪ್ರಸಿದ್ಧವಾಗಿದ್ದ ಮುದವೊಳಲು ಅಗ್ರಹಾರದ ಗವರೇಶ್ವರ ದೇವರ ಅಂಗಭೋಗಕ್ಕೆ ಮಾಟಕೂಟದ ಜೀರ್ಣೋದ್ಧಾರ, ಸುಣ್ಣ ಬಳಿಯಲು, ಗಂಧ–ಕುಂಕುಮ, ಕರ್ಪೂರ ಮುಂತಾದವು ನಡೆಯುವಂತಾಗಲು ದೇವರಿಗೆ ದಾನ ನೀಡುತ್ತಾರೆ. ತಾವು ಅಳೆಯುವ, ತೂಗುವ, ಎಣಿಸುವ ಸಮಸ್ತ ಧಾನ್ಯವನ್ನು ಮಾರಿದಲ್ಲಿ ಚಿನ್ನದ ಕಾಣಿ ಎರಡು, ಸೀರೆಯ ದಿಂಡಿನ ಬಂಡಿಯೊಂದಕ್ಕೆ ಒಂದು ಪಣ, ಎತ್ತಿನ ಮೇಲಿನ ಮಳವೆಗೆ ಐದು ವೀಸ, ಕತ್ತೆಯ ಮೇಲಿನ ಮಳವೆಗೆ ಎರಡು ವೀಸ, ತಲೆಯ ಮೇಲೆ ತರುವ ಜವಳಿಯ ಸೀರೆಗೆ ಒಂದು ವೀಸವನ್ನು ದೇವರಿಗೆ ನೀಡುತ್ತಾರೆ. ಅಲ್ಲದೆ ವೊಕ್ಕಲುಗಳು ಒಂದು ಹಾಗವನ್ನೂ, ಹಾಗಲಕೆರೆ 200 ಜನರು ಎರಡು ಮನೆಗಳನ್ನು ಬಿಡುತ್ತಾರೆ. ಊರು

ಜನರು ವೈಯಕ್ತಿಕವಾಗಿ ಭೂದಾನ ನೀಡುತ್ತಾರೆ. ಅರಕೆರೆಯ ರಾಯರಸನು ಎಡೆಹಳ್ಳಿಯ ಮನ್ನೆಯವನ್ನು ಮಲ್ಲಿಕಾರ್ಜುನದೇವರ ನಂದಾದೀವಿಗೆಗೆ ಬಿಟ್ಟಂತೆ ಶಾಸನದಲ್ಲಿ ಹೇಳಿದೆ. ಈ ಕುಕನೂರು ಹಲವು ಬಾಡಾಗಳ ಅಧಿಕಾರ ಮಹಾಪ್ರಧಾನ ದಂಡನಾಯಕ ಬಲದೇವಯ್ಯ ಮತ್ತವನ ಕಾರಣಗಳು ಹಾಗೂ ಮಹಾಪ್ರಧಾನಿ, ಸೇನಾಪತಿ, ಬಿಜ್ಜಳ ದೇವನಿಗೆ ಬಿನ್ನಹವನ್ನು ಮಾಡಿಕೊಂಡು ಕುಕನೂರ–30ರ ಶ್ರೀಮಂತ ಗ್ರಾಮವಾದ ಎಡೆಹಳ್ಳಿಯನ್ನು ಸರ್ವಬಾಧಾ ಪರಿಹಾರವಾಗಿ ಹಂಪೆಯ ವಿರುಪಾಕ್ಷ ದೇವರ ಸನ್ನಿಧಿಯಲ್ಲಿ ಪುನರ್ದತ್ತಿಯಾಗಿ ಪಡೆದು ದೇವರಿಗೆ ಮತ್ತು ಊರಿನ 15 ಜನ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ಈ ಶಾಸನ[16]ದ ಮೂಲಕ ತಿಳಿಯ ಬಹುದಾಗಿದೆ. ಮಹಾಪ್ರಚಂಡ ದಂಡನಾಯಕ ತೇಜರಾಜನು ಕುಕ್ಕನೂರು ಅಗ್ರಹಾರಕ್ಕೆ ಬಂದಾಗ ಸ್ವಯಂಭೂ ಪ್ರಸನ್ನ ಮಲ್ಲಿಕಾರ್ಜುನ ದೇವರಿಗೆ ಲಕ್ಷಗಡುಗಿ ಪೂಜೆ ಮಾಡಿಸಿ ರಾಯಮುರಾರಿ ಸೇವಿದೇವನಿಗೆ ಬಿನ್ನಪವನ್ನು ಮಾಡಿಕೊಂಡು ಕುಕ್ಕನೂರು–30ರಲ್ಲಿದ್ದ ಹಾಡಲಗೆರೆಯನ್ನು ದಾನವಾಗಿ ನೀಡುತ್ತಾನೆ.[17]

ಹರಿಹರ ಮಹಾರಾಯನು ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿ ಕುಕ್ಕನೂರು ಶ್ರೀ ಮಹಾಮಯ ದೇವರ ಅಂಗರಂಗ ಭೋಗಕ್ಕೆಂದು ದೇವಾಲಯಗಳ ಜೀರ್ಣೋದ್ಧಾರಕ್ಕೆ, ನಂದಾದೀಪ, ಚೈತ್ರ ಪವಿತ್ರ, ಮಹಾನೈವೇದ್ಯ, ಪರ್ವ, ತಿಥಿಗಳು ಮೊದಲಾದ ನಿತ್ಯ ನೈಮಿತ್ತಿಕ ದಾನವನ್ನು ನೀಡುತ್ತಾನೆ ಎಂದು ಯಲಬುರ್ಗಾ ತಾಲೂಕಿನ ಶಾಸನ[18]ದಲ್ಲಿ ಹೇಳಿದೆ.

ಒಬ್ಬ ವ್ಯಕ್ತಿ ತನ್ನ ಜೀವಮಾನದಲ್ಲಿ ಬೇರೆ ಬೇರೆ ಕಡೆ ಹತ್ತಾರು ದೇವಸ್ಥಾನಗಳನ್ನು ಕಟ್ಟಿಸಿ ಕೀರ್ತಿವಂತನಾದ ನಿದರ್ಶನಗಳು ಕಾಣುತ್ತವೆ. 'ಭಾವನ ಗಂಧ ಮರಣ' ಎಂಬ ಬಿರುದಿನ ಸಾಮಂತನೊಬ್ಬನು ಕಲ್ಯಾಣದಲ್ಲಿ ತುಂಬೇಶ್ವರ ದೇವಸ್ಥಾನ; ಕೊಳ್ಳುಗೆಯಲ್ಲಿ ಶಿವಾಲಯ; ಅಣ್ಣಿಗೆಯಲ್ಲಿ ಚೋಳಂಗೊಂಡ ತ್ರೈಪುರುಷ ಶಾಲೆ, ಬೆಳ್ಗಲಿಯ ಕಪಿಲತೀರ್ಥದಲ್ಲಿ ಕೇತೇಶ್ವರ, ಶ್ರೀನಾಗಲೇಶ್ವರ, ನಂದಾಪುರದಲ್ಲಿ ಕೇತೇಶ್ವರ ಇವೇ ಮೊದಲಾದುವನ್ನು ಕಟ್ಟಿಸಿದನಲ್ಲದೆ ಮಹಾ ಶ್ರೀಮಂತ ಬಸದಿ ಪುರಗೂರಿನ ವೀರ ಜಿನಾಲಯ, ಪೂಳ ಗೂಡದ ತ್ರಿಭುವನ ತಿಲಕ ಜಿನಾಲಯ, ಕುಂದರಗೆಯ ಜಿನಮಂದಿರವನ್ನು[19] ಹೊಸದನ್ನು ಮಾಡಿಸುತ್ತಾನೆ. ಇಷ್ಟು ಸಾಲದೆಂಬಂತೆ ಸಂಗಮದ ಎಂದರೆ ಬಹುಶಃ ಕೂಡಲಸಂಗಮದ ಸಂಗಮೇಶ್ವರ ದೇವರಿಗೆ ದತ್ತಿ ಬಿಡುತ್ತಾನೆ. ಇದು ನಿಜವಾಗಿಯೂ ನಿರೀಕ್ಷೆ ಮೀರಿದ ಸಾಹಸವಾಗಿದೆ.

ದೇವಸ್ಥಾನವನ್ನು ಕಟ್ಟಿಸಿದರೆ ಸಾಲದು. ಅದು ಭಕ್ತ ಜನರಿಂದ ಆಗಾಗ್ಗೆ ಬರಬಹುದಾದ ಕಾಣಿಕೆಗಳನ್ನೇ ಅವಲಂಬಿಸಬಾರದು. ಆದಕಾರಣ ದೇವಸ್ಥಾನವನ್ನು ಕಟ್ಟಿಸಿದ ವ್ಯಕ್ತಿಯೇ ಅದಕ್ಕೆ ಸಮೃದ್ಧವಾಗಿ ದತ್ತಿಗಳನ್ನು ಬಿಡುತ್ತಿದ್ದನು. ಅಷ್ಟೇ ಅಲ್ಲ. ಒಬ್ಬ ವ್ಯಕ್ತಿಯಿಂದ ದೇವಸ್ಥಾನವು ನಿರ್ಮಾಣ ವಾಯಿತೆಂದರೆ ಹತ್ತಾರು ಜನರು

ಒಮ್ಮೊಮ್ಮೆ ಹತ್ತಾರು ಗ್ರಾಮಗಳು, ಹತ್ತಾರು ಶ್ರೇಣಿಗಳನ್ನು[20] ಸೇರಿ ದೇವಾಲಯಕ್ಕೆ ದಾನವನ್ನು ನೀಡುತ್ತಿದ್ದರು.

ಬಳ್ಳಿಗಾವೆಯ ವಡ್ಡ ವ್ಯವಹಾರಿ ಸೋವಿಶೆಟ್ಟಿ ಎಂಬಾತನು ಸೋಮೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಅದಕ್ಕೆ ಬೇಕಾಗಿದ್ದ ಭೂಮಿ, ತೋಟ, ಅಂಗಡಿಗಳನ್ನು ನೀಡುತ್ತಾನೆ. ಅದು ಕಾಲಕ್ರಮೇಣ ಅವನತಿಯತ್ತ ಬಂದಾಗ ಅದರ ಜೀರ್ಣೋದ್ಧಾರದ ವಿಷಯದಲ್ಲಿ ನಗರಕ್ಕೆ ನಗರವೇ ಆಸಕ್ತಿಯನ್ನು ವಹಿಸುತ್ತದೆ. ಅದರಲ್ಲಿಯೂ ಮುಖ್ಯವಾಗಿ ಅಲ್ಲಿಯ ವರ್ತಕರು ಅವರ ನಾಯಕರಾದ ಪಟ್ಟಣ್ಣಸಾವಿ, ಮೇಚಿಸೆಟ್ಟಿ, ಕೀರ್ತಿಸೆಟ್ಟಿ ಸೇರಿ ಅದರ ಜೀರ್ಣೋದ್ಧಾರದ ಕಾರ್ಯವನ್ನು ತಮ್ಮ ಧರ್ಮವೆಂದುಕೊಂಡು[21] ಭಾವಿಸಿ ಜೀರ್ಣೋದ್ಧಾರದ ಬಳಿಕ ಅದಕ್ಕೆ ಗವರೇಶ್ವರ ದೇವರೆಂದು ಮರು ನಾಮಕರಣ ಮಾಡುತ್ತಾರೆ.

ಈ ಶಾಸನದ ಮುಖ್ಯ ಉದ್ದೇಶವೆಂದರೆ ಒಂದು ದೇವಸ್ಥಾನವು ನಿರ್ಮಾಣವಾದಾಗ ಉಳಿದ ಜನರು ತಮ್ಮ ಕೈಯಲ್ಲಿ ದೇವಸ್ಥಾನವನ್ನು ಕಟ್ಟಿಸುವ ಶಕ್ತಿಯಿಲ್ಲದಿದ್ದರೂ, ಆ ಅವಕಾಶವನ್ನು ಉಪಯೋಗಿಸಿಕೊಂಡು ದೇವಸ್ಥಾನಕ್ಕೆ ಕೈಲಾದ ಮಟ್ಟಿಗೆ ದತ್ತಿಗಳನ್ನು ಕೊಟ್ಟ ತಮ್ಮ ಭಕ್ತಿಯನ್ನು ಸಲ್ಲಿಸುತ್ತಿದ್ದುದರ ಸ್ಪಷ್ಟ ಪರಿಚಯ ಈ ಶಾಸನದ ಮೂಲಕ ತಿಳಿಯುತ್ತದೆ. ಹೀಗೆ ದೇವಸ್ಥಾನಕ್ಕೆ ಬಂದ ದತ್ತಿಗಳನ್ನು ರಕ್ಷಿಸಲು ನಾಲ್ಕಾರು ಜನರನ್ನು ಧರ್ಮದರ್ಶಿ ಗಳಾಗುವಂತೆ ಕೇಳಿಕೊಳ್ಳುತ್ತಿದ್ದರು. ಅಥವಾ ಒಬ್ಬ ವ್ಯಕ್ತಿಗೆ ಅದರ ಹೊಣೆಗಾರಿಕೆಯನ್ನು ವಹಿಸುತ್ತಿದ್ದರು. ದೇವಸ್ಥಾನದ ದತ್ತಿಯು ಕೆಲವೊಮ್ಮೆ ಇಡೀ ಊರಿನ ಸಾಮೂಹಿಕವಾದ ಜವಾಬ್ದಾರಿಯೂ ಆಗಿದ್ದಿತು.[22] ಈ ಜವಾಬ್ದಾರಿ ಹಲವು ರೀತಿಯದು. ದೇವರಿಗೆ ಸೇರಿದ ಭೂಮಿಗಳಿಂದ ಬರುವ ಆದಾಯಗಳನ್ನು ನೋಡಿಕೊಳ್ಳಬೇಕು, ಅದರ ಕೋಶದಲ್ಲಿ ಹಣವಿದ್ದರೆ ಅದನ್ನು ಬಡ್ಡಿಗೆ ಸಾಲವಾಗಿ ಕೊಟ್ಟು ಆ ಬಡ್ಡಿಯನ್ನು ಸರಿಯಾಗಿ ವಿನಿಯೋಗಿಸಬೇಕು. ಒಟ್ಟಿನಲ್ಲಿ ದೇವಸ್ಥಾನದ ಆದಾಯ ಅದೇ ದೇವಸ್ಥಾನಕ್ಕೆ ಸರಿಯಾಗಿ ಸಲ್ಲಬೇಕು.

ಶೈವರು ವೈಷ್ಣವ ದೇವಸ್ಥಾನಗಳನ್ನು, ವೈಷ್ಣವರು ಶೈವ ದೇವಾಲಯ ಗಳನ್ನು ಕಟ್ಟಿಸಿದ್ದುದು ಇತಿಹಾಸದಿಂದ ತಿಳಿದು ಬರುತ್ತದೆ. ಬ್ರಹ್ಮ ವಿಷ್ಣು ಮಹೇಶ್ವರರು ಒಂದೇ ಶಕ್ತಿಯ ಮುಖಗಳೆಂಬ ಭಾವನೆಯಿಂದ ಅನೇಕರು ದೇವಾಲಯಗಳನ್ನು ಕಟ್ಟಿಸಿದ್ದುದು ಕಂಡುಬರುತ್ತದೆ. ಅಂದಿನ ರಾಜಮಹಾರಾಜರು ದಂಡಾಧಿಕಾರಿಗಳು ಇನ್ನೂ ಮುಂತಾದವರು ದೇವಾಲಯ ಗಳನ್ನು ಕಟ್ಟಿಸುವುದರ ಜೊತೆಗೆ ಅದರ ನಿರ್ವಹಣೆಗಾಗಿ ಅನೇಕ ರೀತಿಯ ದಾನ ದತ್ತಿಗಳನ್ನು ನೀಡಿದ್ದಾರೆ.

ದಕ್ಷಿಣ ಭಾರತದ ಅರಸು ಮನೆತನಗಳಲ್ಲಿ ವಿಜಯನಗರವೂ ಒಂದು. ಈ ಅವಧಿಯಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ವಿಜಯನಗರದ ಅರಸರು ಅನೇಕ ರೀತಿಯ ಪ್ರೋತ್ಸಾಹ ನೀಡಿದರು. ಅನೇಕ ದೇವಾಲಯ, ಕೋಟೆ ಕೊತ್ತಲಗಳನ್ನು ನಿರ್ಮಾಣ

ಮಾಡಿದರು. ಇವರ ಕಲಾ ಕೌಶಲ್ಯ ಒಂದು ಶಿಲೆಯಲ್ಲಿ ಮೂಡಿಬಂದಿದ್ದು ಈ ಅತ್ಯಮೂಲ್ಯವಾದ ಕಲಾ ಚಾತುರ್ಯವನ್ನು ಅಂದಿನ ಶಿಲ್ಪಿಗಳು ಮೆರೆದಿದ್ದನ್ನು ಹಂಪೆಯ ಆನೆಗೊಂದಿಯಲ್ಲಿ ನೋಡಬಹುದು. ಈ ಅವಧಿಯಲ್ಲಿ ಕೊಪ್ಪಳ, ಆನೆಗೊಂದಿ, ಪುರ, ದೇವಿಘಾಟ, ಕನಕಗಿರಿ, ಹಿರೇಜಂತಕಲ್, ಹೇಮಗುಡ್ಡ ಮುಂತಾದ ಕಡೆ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ವಿಜಯನಗರ ಕಾಲದ ವಾಸ್ತುಶಿಲ್ಪಕ್ಕೆ ಹೆಸರಾದ ಪ್ರಸಿದ್ಧ ದೇವಾಲಯ ಕನಕಗಿರಿ. ಇಲ್ಲಿ ಸುಮಾರು 25ಕ್ಕೂ ಹೆಚ್ಚು ದೇವಾಲಯಗಳಿವೆ. ಕ್ರಿ.ಶ.1675ರಲ್ಲಿ ಗುಜ್ಜಲ ವಂಶದ ವುಡುಚಿ ನಾಯಕನ ಪತ್ನಿ ಚಿನ್ನಮ್ಮ ಕನಕಗಿರಿನಾಥ ಸ್ವಾಮಿಯ ಪೌಳಿಗೆ ಕಲ್ಲಿನ ಹಾಸಿಗೆ ಹಾಕಿಸಿದ್ದಳು. ಅಲ್ಲದೆ 16ನೇ ಶತಮಾನದಲ್ಲಿ ಬಸವಣ್ಣ ದೇವರ ಗುಡಿಯನ್ನು[23] ಕಟ್ಟಿಸಿದಳು. ಆನೆಗೊಂದಿಯಲ್ಲಿ ಹರಿಹರನ ಅಧಿಕಾರಿ ಬೈಚದಂಡ ನಾಯಕನ ಮಗ ಇರುಗಪ್ಪನು ಕ್ರಿ.ಶ.1347ರಲ್ಲಿ ಶಿಲಾ ಚೈತ್ಯಾಲಯವನ್ನು ಕಟ್ಟಿಸಿದ್ದನು.[24] ಪ್ರೌಢದೇವರಾಯ ತನ್ನ ಕಾಲದಲ್ಲಿ ಆನೆಗೊಂದಿ ಭೈರವ ಮತ್ತು ಪುರದ ಸೋಮನಾಥ ಹಾಗೂ ಕನಕಗಿರಿಯ ಲಕ್ಷ್ಮೀ ನರಸಿಂಹ ದೇವಾಲಯಗಳಿಗೆ ದಾನ ದತ್ತಿ ನೀಡಿದನು.

ಕೃಷ್ಣದೇವರಾಯ ಕೆಸರ ಹಟ್ಟಿಯಲ್ಲಿ ಕೃಷ್ಣ ದೇವಾಲಯ[25]ಗಳನ್ನು ಕಟ್ಟಿಸಿದನು. ಅಚ್ಯುತರಾಯ ಕನ್ನೇರುಮಡುವಿನ ಅಮರೇಶ್ವರ ದೇವಾಲಯಕ್ಕೆ ದಾನ–ದತ್ತಿ ನೀಡಿ ಪ್ರೋತ್ಸಾಹಿಸಿದ ವಿವರ ಶಾಸನಗಳಿಂದ ತಿಳಿದು ಬರುತ್ತದೆ. ಸದಾಶಿವರಾಯ ಕೂಡ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾನೆ. ಕ್ರಿ.ಶ.1553ರಲ್ಲಿ ಕಟ್ಟಲಾದ ಹಿರಿಯ ಸೂಳೆಕೆರೆಯ ಮಲ್ಲಿಕಾರ್ಜುನ ದೇವಾಲಯ ಇವನ ಕಾಲದ್ದಾಗಿದೆ. ಸದಾಶಿವರಾಯರು ಅನೇಕ ದಾನ ದತ್ತಿಗಳನ್ನು ನೀಡಿದ್ದನು. ಕ್ರಿ.ಶ.1544ರ ಶಾಸನದಿಂದ ತಿಳಿದುಬರುತ್ತದೆ. ಕೋಟಿಶಂಕರ, ಬಸವ, ಹರಿಹರ, ಕೇಶವ, ವಿರೂಪಾಕ್ಷ, ಹನುಮಂತ, ಕಣಿರಾಮಯ್ಯ, ಮೈಲಾರಲಿಂಗ, ಪುರ ಸೋಮನಾಥ, ಬ್ರಹ್ಮದೇವರಿಗೂ ಭೂಮಿ ದಾನಗಳನ್ನು ನೀಡಿದ್ದಾನೆ.

ಹೀಗೆ ಕೊಪ್ಪಳ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಕಾಲದಿಂದ ಪಾಳೆಯಗಾರರ ವರೆಗಿನ ದೇವಾಲಯಗಳು ಕಂಡು ಬರುತ್ತವೆ. ಈ ದೇವಾಲಯಗಳು ಆಯಾ ಕಾಲದ ಶೈಲಿಯನ್ನು ಪ್ರತಿನಿಧಿಸುತ್ತದೆ. ಈ ಬಗೆಯ ದೇವಾಲಯಗಳು ಧಾರ್ಮಿಕ ಕೇಂದ್ರಗಳಾಗಿದ್ದು, ಸಾಮಾಜಿಕ ಹಾಗೂ ಆರ್ಥಿಕ ನಿಯಂತ್ರಣಗಳನ್ನು ಸಮಾಜದ ಮೇಲೆ ಸಾಧಿಸಿದ್ದವು. ರಾಜ–ರಾಣಿಯಿಂದ ಹಿಡಿದು ಸಾಮಾನ್ಯನ ವರೆಗೆ ನೀಡಿದ ಎಲ್ಲಾ ದಾನ–ದತ್ತಿಗಳಿಂದ ದೇವಾಲಯದ ಆಡಳಿತ ವರ್ಗವು ವ್ಯಾಪಾರಿ ಮತ್ತಿತರಿಗೆ ಬಡ್ಡಿಯಾಗಿ ನೀಡಿ ಅದರಿಂದ ಬಂದ ಹಣ ದೇವಾಲಯದ ಉಪಯೋಗಕ್ಕೆ ಬಳಸುತ್ತಿದ್ದರು. ಆ ಕಾಲದಲ್ಲಿ ಗರ್ಭಗೃಹ, ಅಂತರಾಳ ಪ್ರದಕ್ಷಿಣಪಥ, ನವರಂಗ, ಮಹಾಮಂಟಪಗಳಿಂದ ವಿಸ್ತಾರಗೊಂಡು ಅಮ್ಮನವರಗುಡಿ, ಮಂಟಪ ಉಪದೇಗುಲ

ಮುಂತಾದವುಗಳಿಂದ ಕೂಡಿದ ಪ್ರಕಾರವನ್ನು ದೇವಾಲಯಗಳು ಒಳಗೊಂಡಿರುತ್ತಿದ್ದವು.

**ಬಸದಿಗಳು:**

ಬಸದಿಗಳು ಆಯಾ ಧರ್ಮದ ಸಾಮಾಜಿಕ ಸಂಘಟನೆ ತಾಣಗಳು ಮತ್ತು ಧಾರ್ಮಿಕ ಕೇಂದ್ರಗಳಾಗಿದ್ದವು. ಬಸದಿಗಳು ವಿದ್ಯಾಯನ, ಶಾಸ್ತ್ರದಾನ, ಅಷ್ಟವಿಧಾರ್ಚನೆ, ನರ್ತನ, ಹೋಮ, ಸಲ್ಲೇಖನಗಳ ಕೇಂದ್ರಗಳಾಗಿವೆ.

ಮುತ್ತಿನ ಮಾತವಂತಿರಲಿ ಜೀರ್ನ್ನಜಿನಾಶ್ರಯ ಕೋಟಿಯಂಕ್ರಮಂ
ಚಿತ್ತರೆ ಮುನ್ನಿನಂತರ ನಿತೋರ್ಗ್ಗಳೊಳಂ ನೆರೆ ಮಾಡಿಸುತ್ತಮ
ತ್ಯುತ್ತಮ ಪಾತ್ರದಾನ ದೊದವಿಂ ಮೆರೆವುತ್ತಿರೆ ಗಂಗವಾಡಿ ತೊಂ
ಬತ್ತಾರು ಸಾಸಿರಂ ಕೊಪಣಂ ಮಾದುದು ಗಂಗಣ ದಂಡನಾಥನಿಂ[26]

ಕರ್ನಾಟಕದ ಜೈನ ಕೇಂದ್ರಗಳಲ್ಲಿ ಹೆಚ್ಚು ಪುರಾತನವೂ ಪ್ರಸಿದ್ಧವೂ ಆಗಿದ್ದ ಕೊಪಣ ನಗರದಲ್ಲಿ ಈ ಶಾಸನ ಬಸದಿಯ ಜೀರ್ಣೋದ್ಧಾರದ ಬಗ್ಗೆ ಹೇಳುತ್ತದೆ.

ಕೊಪ್ಪಳ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವಾರು ಬಸದಿಗಳು ಇದ್ದದ್ದನ್ನು ನಾವು ನೋಡುತ್ತೇವೆ. ಕೊಪ್ಪಳದಲ್ಲಿ ಸುಮಾರು 770 ಬಸದಿಗಳಿದ್ದಂತೆ ತಿಳಿದು ಬರುತ್ತದೆ. ಈಗ ಉಳಿದಿರುವುದು ಪಾರ್ಶ್ವನಾಥ ಬಸದಿಯೊಂದೇ. ಶಾಸನಾಧಾರದಿಂದ ತಿಳಿದು ಬರುವ ಶಾಂತಲದೇವಿಯರ ಬಸದಿ, ಅರಸಿಯ ಬಸದಿ, ತೀರ್ಥದ ಬಸದಿ, ತಿಮ್ಮಬ್ಬರಸಿಯ ಬಸದಿ, ನಾಗದೇವನ ಬಸದಿ, ಕುಶ ಜಿನಾಲಯ, ಪುಷ್ಪದಂತ ಜಿನಾಲಯ, ಚಂದ್ರನಾಥ ಜಿನಾಲಯ, ಜಯಧೀರ ಜಿನಾಲಯ ಇವುಗಳೆಲ್ಲವೂ ಗೊಗ್ಗರಸನಿಂದ ನಾಶವಾಗಿರುವಂತಿವೆ.[27]

ಕೊಪ್ಪಳದ ಕ್ರಿ.ಶ.1008ರ ಒಂದು ಶಾಸನ[28]ವು ಬಿಚ್ಚಕುನ್ದೆ ಗ್ರಾಮದಲ್ಲಿ ಸಾವಿಕುಮಾರ ಎಂಬುವನು ನಾಗದೇವ ಬಸದಿಯನ್ನು ಕಟ್ಟಿಸಿದುದಾಗಿ ತಿಳಿಯುತ್ತದೆ. ನಾಗದೇವನು ಅತ್ತಿಮಬ್ಬೆಯ ಪತಿಯಾಗಿದ್ದು ಅವರ ಹೆಸರಿನಲ್ಲಿ ಈ ಬಸದಿಯನ್ನು ಕಟ್ಟಲಾಯಿತೆಂಬುದನ್ನು ಈ ಶಾಸನ ಹೇಳುತ್ತದೆ. ಬಸದಿಗಳು ಜೈನ ಧರ್ಮದ ಸಾಮಾಜಿಕ, ಧಾರ್ಮಿಕ ಹಾಗೂ ಮಾನಸಿಕ ಪರಿಸ್ಥಿತಿಯ ಪ್ರತೀಕಗಳಾಗಿದ್ದನ್ನು ನಾವು ಮನಗಾಣುತ್ತೇವೆ. ದೇವಾಲಯಗಳನ್ನು ನಾಶಗೊಳಿಸುವುದೆಂದರೆ ಆ ಧರ್ಮವನ್ನೇ ನಾಶಮಾಡಿದಂತೆ; ಹಾಗೆ ಬಸದಿಯನ್ನು ನಾಶ ಮಾಡಿದರೆ ವಿದ್ಯೆಯನ್ನು ನಾಶ ಮಾಡಿದಂತೆ. ಸಾವಿರಾರು ಬಸದಿಗಳನ್ನು ಅನೇಕರು ಕೂಡಿ ಹಾಳು ಮಾಡಿದಂತಹ ನಿದರ್ಶನಗಳು ಸಿಗುತ್ತವೆ. ಕ್ರಿ.ಶ.12ನೇ ಶತಮಾನದ ಉತ್ತರಾರ್ಧದಲ್ಲಿ ಧರ್ಮ ವಿಪ್ಲವದಿಂದಾಗಿ ಅವೆಲ್ಲ ನಾಶವಾಗಿವೆ. ಮತ್ತು ವೀರಶೈವ ಪುರಾಣಗಳು ಶಾಸನಾಧಾರಗಳಿಂದಲೂ, ಮಾಹಿತಿಗಳಿಂದಲೂ ತಿಳಿದಿರುವಂತೆ ಸುಮಾರು 1800–2000 ಬಸದಿಗಳನ್ನು ಹಾಳು ಮಾಡಿದ್ದಾರೆ.

ಪ್ರಾಚೀನ ಜೈನಾಗಮಗಳು ಜಿನಬಿಂಬ, ಜಿನಾಲಯಗಳ ಕುರಿತು ಏನೂ ಹೇಳಿರುವುದಿಲ್ಲ. ಆದರೆ ಆಗಮೋತ್ತರ ಕಾಲದಲ್ಲಿಯೇ ಜಿನ ಮೂರ್ತಿಗಳನ್ನು ಮಾಡಿಸುವ ಬಸದಿಗಳನ್ನು ಕಟ್ಟಿಸುವ ಪರಂಪರೆ ಬೆಳೆದು ಬಂದಿರಬೇಕು. ಜೈನ ಸನ್ಯಾಸಿಗಳು ಮಳೆಗಾಲದ ನಾಲ್ಕು ತಿಂಗಳು ಹೊರತು ಉಳಿದ ಕಾಲದಲ್ಲೆಲ್ಲಾ ವಿಹರಿಸುತ್ತಿರಬೇಕೆಂಬ ನಿಯಮವಿದ್ದರೂ, ಕ್ರಮೇಣ ಈ ನಿಯಮ ಸಡಿಲಗೊಂಡು ಮುನಿಗಳು ಬಸದಿಗಳಲ್ಲಿ ವಾಸಿಸಹತ್ತಿದರು. ಜೈನ ದೇವಾಲಯಗಳನ್ನು ಬಸದಿಗಳೆಂದು ಕರೆಯುವುದಕ್ಕೆ ಕಾರಣ ಇದೇ ಇರಬೇಕು. ಈ ದೇವಸ್ಥಾನಗಳನ್ನು 'ಬಸದಿ'[29] 'ಕೊಯಿಲ್ವಸದಿ'[30] 'ಚೈತ್ಯಾಲಯ'[31] (ಚೈತ್ರ) 'ಜಿನಗಾರ' ಎಂದು ಮುಂತಾದ ಹೆಸರುಗಳಿಂದ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಜೈನಾಚಾರ್ಯರು ಏಕಾಂತವಾಸಿಗಳಾಗಿದ್ದು ಹೆಚ್ಚಾಗಿ ಗುಹೆಗಳಲ್ಲಿ ತಪಸ್ಸು ಮಾಡುತ್ತಿದ್ದರು. ಆ ಗುಹೆಗಳೇ ಕಾಲಾಂತರದಲ್ಲಿ ಗುಹಾಂತರ ದೇವಾಲಯಗಳ ರೂಪವನ್ನು ಪಡೆದುಕೊಂಡವು. ಐಹೊಳೆ, ಬಾದಾಮಿ, ಶಿಕಾರಿಪುರ, ಕಳ್ವಪ್ಪು, ಶಿವಮೊಗ್ಗ ಮುಂತಾದ ಪ್ರದೇಶದಲ್ಲೂ ಗವಿ ಬಸದಿಗಳನ್ನು ನೋಡಬಹುದು. ಮುಂದೆ ಗುಹಾಂತರ ದೇವಾಲಯಗಳೇ ಬಸದಿಗಳ ನಿರ್ಮಾಣಕ್ಕೆ ಪ್ರೇರಣೆಯನ್ನು ನೀಡಿದವು.

ತೀರ್ಥಂಕರ ಪೂಜೆಗೆ ನಿರ್ಮಿಸಿಕೊಂಡ ಈ ಸ್ಥಳಗಳು ಸಂಚಾರಿ ಋಷಿಗಳ ವಾಸಸ್ಥಾನವಾಗಿ ಬಳಕೆಯಾದಂತೆ 'ವಸತಿ'ಗಳೆನಿಸಿಕೊಂಡವು. ಸಂಸ್ಕೃತದಲ್ಲಿ ವಸತಿಯು ವಸದಿಯಾಗಿ ರೂಪ ಪಡೆಯಿತು. ಜಿನ ಬಸದಿಗಳನ್ನು ವಂದಿಸುವದರಿಂದ ಅಕ್ಷಯಸುಖ, ಅಜರಾಮರಸುಖ, ಅಷ್ಟೈಶ್ವರ್ಯ ಸಿದ್ಧಿಪ್ರಾಪ್ತಿ, ಕೊನೆಗೆ ಮುಕ್ತಿ ದೊರೆಯುತ್ತದೆ. ದಾನ ಮತ್ತು ಪೂಜೆ ಶ್ರಾವಕದಲ್ಲಿ ಮುಖ್ಯವಾಗಿದ್ದರಿಂದ ಜಿನ ಚೈತ್ಯಾಲಯಗಳ ಜೀರ್ಣೋದ್ಧಾರ, ಜಿನಬಿಂಬ ಸ್ಥಾಪನೆ, ಶಾಸ್ತ್ರಗ್ರಂಥಗಳ ಪ್ರಕಟಣೆ, ಮುನಿ, ಶ್ರಾವಕ, ಶ್ರಾವಕಿ, ಆರ್ಯಿಕಾ ಮುಂತಾಗಿ ಚತುಸ್ಸಂಘಕ್ಕೆ ಮಾಡುತ್ತಾ ಆತ್ಮಕಲ್ಯಾಣದ ಹಾದಿಯಲ್ಲಿ ನಡೆಯಬೇಕು; ಎನ್ನುವ ಆಶಯಗಳು ಬಸದಿಗಳ ನಿರ್ಮಾಣಕ್ಕೂ ಪ್ರೇರಣೆಯಾದವು.

ಕಾಲಾಂತರದಲ್ಲಿ ಬಸದಿಗಳಲ್ಲಿ ತೀರ್ಥಂಕರರು ಮುಖ್ಯ ಆರಾಧ್ಯ ದೈವವಾಗಿದ್ದರೂ ಅನ್ಯ ಮತಗಳ ಪ್ರಭಾವದಿಂದಾಗಿ ನಾಗರ ಮತ್ತು ಯಕ್ಷ ಮುಖ್ಯಸ್ಥರನ್ನು ತೀರ್ಥಂಕರ ಶಾಸನ ದೇವತೆಗಳ ಮುಖ್ಯಸ್ಥರಾಗಿ ಮಾಡಿ ಅವರಿಗೆ ಬಸದಿಗಳಲ್ಲಿ ಸ್ಥಾನವನ್ನು ನೀಡಲಾಯಿತು. ಹಿಂದೂ ಧರ್ಮದ ಪ್ರಭಾವದಿಂದಾಗಿ ಬಸದಿಗಳಲ್ಲಿ ಹೋಮಗಳು, ಅಷ್ಟವಿಧಾರ್ಚನೆ, ನೃತ್ಯ ಮುಂತಾದ ಆಚರಣೆಗಳು ಮುಂದುವರೆದವು. ಹೀಗೆ ಜೈನಾಚಾರ್ಯರು ಬಸದಿಗಳ ನಿರ್ಮಾಣ ಮತ್ತು ಕಾರ್ಯಚಟುವಟಿಕೆಗಳಿಗೆ ಶಾಸ್ತ್ರಬದ್ದ ಚೌಕಟ್ಟನ್ನು, ಧಾರ್ಮಿಕ ಹಿನ್ನೆಲೆಯನ್ನು ಒದಗಿಸಿಕೊಡುವುದರ ಮೂಲಕ ಕರ್ನಾಟಕದ ಬಸದಿಗಳ ನಿರ್ಮಾಣಕ್ಕೆ ಅಡಿಪಾಯ ಹಾಕಿಕೊಟ್ಟರು.

ಪ್ರತಿಯೊಂದು ಬಸದಿಯ ಚರಿತ್ರೆಯಲ್ಲಿಯೂ ಒಬ್ಬ ಜೈನ ತೀರ್ಥಂಕರರು ಇರುತ್ತಾರೆ. ಬಸದಿಗಳಲ್ಲಿ ವಾಸಿಸುವ ಜೈನಾಚಾರ್ಯರು ಅದರ ಒಟ್ಟಾರೆ ಪ್ರಗತಿಗೆ, ಪೋಷಣೆಗೆ ಕಾರಣವಾದರು. ಆದ್ದರಿಂದಲೇ ಜೈನಾಚಾರ್ಯರು ಮತ್ತು ಬಸದಿಗಳು ಒಂದೇ ನಾಣ್ಯದ ಎರಡು ಮುಖಗಳು. ಬಸದಿಗಳಲ್ಲಿಯ ಸಾಂಘಿಕ ಚಟುವಟಿಕೆಗಳ ಮೂಲಕ ಆಚಾರ್ಯರೂ ಬೆಳೆದು ಬಸದಿಗಳನ್ನು ಬೆಳಸಿದರು. "ಬಸದಿಗಳು ಜೈನಧರ್ಮದ ಸಂಘಟನೆಯಲ್ಲಿ ಗಣನೀಯ ಪಾತ್ರ ವಹಿಸಿವೆ. ಜೈನ ಸಮಾಜಕ್ಕೆ ಸಾಂಸ್ಥಿಕ, ಸಾಂಘಿಕ ಸ್ವರೂಪ ಕೊಡುವುದಕ್ಕೂ ಈ ಚೈತ್ಯಾಲಯಗಳು ಕಾರಣವಾದವು. ಸಾಹಿತ್ಯ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಬಿಂದುಗಳು. ಬಸದಿಗಳು ಮತ್ತು ಜೈನಾಚಾರ್ಯರು ಪರಸ್ಪರಾವಲಂಬಿಗಳಾಗಿ ಬಸದಿಗಳು–ಬಸದಿಗಳ ಒಡೆಯರೂ ಪೂರಕ, ಪ್ರೇರಕ, ಪೋಷಕ ಆಗಿದ್ದನ್ನು ಗಂಗರ ಪ್ರಾಚೀನ ಶಾಸನಗಳು ದೃಢಪಡಿಸಿದೆ. ಅವಿನಾಭಾವ ಸಂಬಂಧ ಇರುವ ಕಾರಣಕ್ಕಾಗಿ ಬಸದಿ ಮತ್ತು ಜೈನಾಚಾರ್ಯರನ್ನು ಒಟ್ಟಿಗೆ ಪರಿಗಣಿಸುವ ಪದ್ಧತಿ ರೂಢಿಗೆ ಬಂದಿದೆ. ಪ್ರಸಿದ್ಧ ಆಚಾರ್ಯ ಸಂಘ ಚತುರ್ಮಾಸಕ್ಕಾಗಿ ನಾನಾ ಬಸದಿಗಳಲ್ಲಿ ನೆಲೆ ನಿಂತಾಗಲಂತೂ ಜಿನಾಲಯಗಳು ಚಟುವಟಿಕೆ ಜಿನಾಲಯಗಳಾಗುತ್ತಿದ್ದವು."[32]

"ನಿಜ ವಿಭವೋದಯಂ ಸಫಲಮಾಯ್ತನೆ ಜಿನೇಂದ್ರಗೇಹಗಳನ್ನು ಒಂದಕ್ಕೊಂದು ಮಿಗಿತಿಲಿಸಿ ಲಿಂಗಭೇದ, ವರ್ಗಭೇದ ಮಾಡದೆ ಜೈನ ವರ್ಗದ ಎಲ್ಲಾ ಬಸದಿಗಳ ನಿರ್ಮಾಣಕ್ಕೆ ಕೈ ಹಾಕಿದರು. ಶ್ರೀಮಂತರು, ರಾಜರು, ರಾಣಿಯರು, ವ್ಯಾಪಾರಿಗಳು ಮತ್ತು ಶ್ರೀಮಂತ ಮಹಿಳೆಯ ಕೂಡ ನೂರಾರು ಬಸದಿಗಳನ್ನು ನಿರ್ಮಿಸಿದ್ದನ್ನು ಕುರಿತು ಶಾಸನಗಳು ಉಲ್ಲೇಖಿಸಿ ರುವುದರೊಂದಿಗೆ ಬಸದಿಯ ಚರಿತ್ರೆಯನ್ನು ಹೇಳುತ್ತವೆ. ಒಂದು ಬಸದಿಯ ನಿರ್ಮಣದ ಹಂತದಿಂದ ಹಿಡಿದು ಪ್ರತಿಷ್ಠಾ ಮಹೋತ್ಸವದ ನಂತರ ಅದರಲ್ಲಿ ನೆಲೆ ನಿಂತು ಅದಕ್ಕೆ ಒಂದು ಸಾಂಸ್ಥಿಕ ರೂಪ ಕೊಡುವಲ್ಲಿ ಜೈನಾಚಾರ್ಯರ ಪರಿಶ್ರಮ ಬಹಳ ದೊಡ್ಡದು."[33]

ನೂಲಿನ ದಾರವನ್ನು ಪರಿಗ್ರಹವೆಂದು ಭಾವಿಸುತ್ತಿದ್ದ ಆಚಾರ್ಯರು ಭೂಮಾಲೀಕರಾದರು. ಆಗ ಆಚಾರ್ಯರ ಸಂಪತ್ತಿನ ಶ್ರೀಕರಣೆ ಹೆಚ್ಚುತ್ತಾ, ರಾಜಮಹಾರಾಜರಂತೆ ದೊಡ್ಡ ದೊಡ್ಡ ಪ್ರಮಾಣದ ಯೋಜನೆಗಳನ್ನು ಹಾಕಿಕೊಂಡು ಬಸದಿ, ಕೆರೆನಿರ್ಮಾಣ, ಸ್ಮಾರಕ ಭವನ, ದಾನ ಶಾಲೆಗಳು ಮುಂತಾದ ದಾನಕ್ಕೆ ಸಂಬಂಧಿಸಿದ ಕೆಲಸಗಳನ್ನು ಕಟ್ಟಲಾರಂಭಿಸಿದರು. ಇದ್ದ ಬಸದಿಗಳನ್ನು ಜೀರ್ಣೋದ್ಧಾರ, ಪೂಜಾರಿ ಇತರ ಕಾರ್ಯಗಳಿಗಾಗಿ ದತ್ತಿಗಳನ್ನು ಸಹ ಕೊಟ್ಟರು.

32000ದ ಭಾಗವಾಗಿದ್ದ ನೊಳಂಬವಾಡಿ, ಕೋಗಳಿ–500 ನಾಡಿನಲ್ಲಿ ಮುಖ್ಯ ಪಟ್ಟಣವಾಗಿದ್ದ ಪ್ರಮುಖ ಜೈನ ಕೇಂದ್ರವಾಗಿದ್ದು ಕೋಗಳಿ ತೀರ್ಥವೆಂದು ಕರೆಯುತ್ತಿದ್ದರು. ಈ ಕೋಗಳಿಯಲ್ಲಿ ಗಂಗರ ಪ್ರಮುಖ ರಾಜನಾದ ದುರ್ವಿನೀತನು

(ಕ್ರಿ.ಶ.495–535) ಒಂದು ಬಸದಿಯನ್ನು ಕಟ್ಟಿಸಿದನು.

ಇದು ದುರ್ವಿನೀತ ನಿಂದಂ
ಮೊದಲೊಳ್ ಬಸದಿಯಿದ ನಾಡರುತ್ತರ ಫಳೆಯಂ
ವಿದಿತ ಯಶರಿಂದ್ರ ಕೀರ್ತಿಗ
ಉದಿತೋದಿತ ಮಾಗ ಮಾಡಿದರ್ ಕೋಗಳಿಯೋಳ್

ಮರದಲ್ಲಿ ಕಟ್ಟಿಸಿದ ಈ ಜಿನ ಮಂದಿರವನ್ನು ಕ್ರಿ.ಶ.977ರಲ್ಲಿ ಇಂದ್ರಕೀರ್ತಿಗಳು ಪುನರ್ಭರಣಗೊಳಿಸಿ ಹೊಸದಾಗಿಸಿದರಲ್ಲದೆ ಈ ಬಸದಿಯ ಮಾಣಿಗಳಿಗೆ ವಿದ್ಯಾಭ್ಯಾಸಕ್ಕಾಗಿ ದತ್ತಿಯನ್ನು ಬಿಟ್ಟುಕೊಟ್ಟಿದ್ದಾರೆ. ಕೋಗಳಿನಾಡಿಗೆ ಸೇರಿದ ಇಟಗಿಯ ಶಾಸನದಲ್ಲಿಯೂ ಈ ಇಂದ್ರಕೀರ್ತಿಗಳ ಉಲ್ಲೇಖವಿದೆ.[34] ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿ ಗ್ರಾಮದ ಶಾಸನ[35]ದಲ್ಲಿ ಇಂದ್ರಕೀರ್ತಿಯು ಮೇಲೆ ಉಲ್ಲೇಖಿಸಿದ ಬಸದಿಗಾಗಿ ಇಟಗಿಯಲ್ಲಿ 24 ಮತ್ತರು ಭೂಮಿಯನ್ನು ದಾನ ಮಾಡಿದ್ದಾರೆ. ಇದೇ ಶಾಸನ 'ತೊಲಗದೆ ಜೈನ ಮಾರ್ಗ್ಗದೊಳ್ ನಿಶ್ಚಲರಪ್ಪೊದು' ಎಂದು ಮತಾಂತರದ ಹಾದಿಯಲ್ಲಿದ್ದ ಜೈನರಿಗೆ ಕರೆ ನೀಡುತ್ತದೆ.

ವೇಮುಲವಾಡದ ರಾಜೇಶ್ವರಿ ದೇವಾಲಯದಲ್ಲಿ ಇಟ್ಟಿರುವ ಜಿನಮೂರ್ತಿಯೊಂದರ ಪೀಠದ ಮೇಲೆ ಶಾಸನವೊಂದು ಶುಭಧಾಮ ಜಿನಾಲಯವನ್ನು ಕುರಿತು ಹೇಳುತ್ತದೆ. ವೇಮುಲವಾಡದಲ್ಲಿ ಚಾಲುಕ್ಯ ವಂಶದ ಇಮ್ಮಡಿ ಬುದ್ದವರ್ಷನು ತನ್ನ ರಾಜಧಾನಿಯಾದ ಲೇಮುಪಾಟಕ ಸಂಘದ ಸೋಮದೇವ ಸೂರಿಯಾಗಿ ಈ ಜಿನಾಲಯವನ್ನು ಕಟ್ಟಿಸಿದಂತೆ ಇದರಿಂದ ತಿಳಿದುಬರುತ್ತದೆ. ತಂದೆ ಕಟ್ಟಿಸಿದ ಬಸದಿಗೆ ಮಗನಾಗಿ 4ನೆಯ ಅರಿಕೇಸರಿಯು ಕ್ರಿ.ಶ.966ರಲ್ಲಿ ದತ್ತಿ ಬಿಟ್ಟಿದ್ದಾನೆ. ಸೋಮದೇವ ಸೂರಿಯು ದೇವ ಸಂಘಕ್ಕೆ ಸೇರಿದವನಾಗಿದ್ದನು. ಶುಭದಾಮ ಜಿನಾಲಯದ ದತ್ತಿಯನ್ನು ಸ್ವೀಕರಿಸುವುದನ್ನು ನೋಡಿದರೆ ಬಸದಿಯ ಮೇಲ್ವಿಚಾರಕನೂ ಆಗಿದ್ದಂತೆ ತಿಳಿದುಬರುತ್ತದೆ. ಇದೇ ಜಿನಾಲಯದಲ್ಲಿ ಸೋಮದೇವ ಸೂರಿಯ ಇನ್ನೊಂದು ಕೃತಿ 'ಸ್ವಾದ್ವಾದೋಪನಿಷತ್' ಬರೆಯಲ್ಪಟ್ಟಿತು. ಸೋಮದೇವ ತನ್ನ ಜೀವಿತದ ಕೊನೆಯ ದಿನಗಳಲ್ಲಿ ಕೊಪ್ಪಳಕ್ಕೆ ಬಂದು ಸಲ್ಲೇಖ ವ್ರತವನ್ನು ಸ್ವೀಕರಿಸಿ ಕ್ರಿ.ಶ.984ರಲ್ಲಿ ಮಡಿದಂತೆ ಕೊಪ್ಪಳದ ಶಾಸನ ತಿಳಿಸುತ್ತದೆ.

ಚಾಲುಕ್ಯ ತ್ರೈಲೋಕ್ಯಮಲ್ಲನ ಆಳ್ವಿಕೆಯಲ್ಲಿ ಕ್ರಿ.ಶ.1054ಕ್ಕೆ ಸೇರಿದ ನಂದಿಬೇವೂರಿನ ಶಾಸನ[36]ವೊಂದರಲ್ಲಿ ಅವನ ಮಾಂಡಲಿಕ ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರ್ಮಾಡಿದೇವನು 500–ಕೋಗಳಿ, 1000–ಕಂದಳಿಗೆ, 500–ಬಲ್ಲಕುಂದೆ, 300–ಕಣೆಕಲ್ಲು, 3,200–ನೊಳಂಬವಾಡಿಯನ್ನು ಆಳುತ್ತಿರಲು ಊರೊಡೆಯ ಶಿವಮಯ್ಯ ಮೊದಲಾದ 120 ಜನರು ಸೇರಿ ಇರೆವನೊಳಂಬ

ನಾರಸಿಂಹದೇವರ ಪಂಚನ ಪ್ರಧಾನರ ಅನುಮತಿಯಂತೆ ದೇಶಿ ಗಣದ ಅಷ್ಟೋಪವಾಸಿ ಭಳಾರರ ನೇತೃತ್ವದಲ್ಲಿ ಭೂದಾನವನ್ನು ನೀಡುತ್ತಾರೆ. ಶಾಸನದ ಇನ್ನೊಂದು ಭಾಗದಲ್ಲಿ 'ಬೇಹೂರೊಳ್ ಮುನ್ನಾರಂ ದೇಹಾರಂ ಮಾಡರೆಂದು ತಾಂ ಮಾಡಿಸಿದಂ ಸಾಹಸ ನಳಯಂ' ಎನ್ನುವಂತೆ ಅಷ್ಟೋಪವಾಸಿ ಭಳಾರರು ಜಿನಗೇಹವನ್ನು ಮಾಡಿಸಿದಂತೆ ಶಾಸನ ತಿಳಿಸುತ್ತದೆ. ಇದಕ್ಕೆ ದತ್ತಿಯನ್ನು ನರಸಿಂಹ ದೇವನು ನೀಡುತ್ತಾನೆ.

ರಾಷ್ಟ್ರಕೂಟ ರಾಜ ಇಂದ್ರನು ಆಳುತ್ತಿದ್ದಾಗ ಅವನ ದಂಡನಾಯಕನಾದ ಮಾಮರಸನು ಸಿದ್ಧಕುಪಣಕ್ಕೆ ತೀರ್ಥವಂದನಾರ್ಥವಾಗಿ ಬಂದಿದ್ದ ಸಮಯದಲ್ಲಿ ಕದಂಬರ ಪೆರ್ಮರದೇವ ಮತ್ತು ದಡಿಯಮರಸರು ತಮಗೆ ಪುಣ್ಯವಾಗಲೆಂದು ತಾವೇ ಕಟ್ಟಿಸಿದ್ದ ಬಸದಿಗೆ ಕಳಸಾರೋಹಣ ಮಾಡಿಸಿ ದಾನ ನೀಡಿದ ವಿವರ ಕೊಪ್ಪಳದ ಒಂದು ಶಾಸನ[37]ದಲ್ಲಿದೆ. ಕೊಪ್ಪಳದ ಪಾಲ್ಕಿಗುಂಡಿನ ದಕ್ಷಿಣಕ್ಕಿರುವ ಗುಹೆಯ ಮಾಡಿನಲ್ಲಿರುವ ಕ್ರಿ.ಶ.1008ರ ಶಾಸನ[38] ಸಿಂಹನಂದಿ ಮತ್ತು ಅವನ ಶಿಷ್ಯ ಕಲ್ಯಾಣಕೀರ್ತಿ ಕುರಿತ ವಿವರಗಳ ಉಲ್ಲೇಖವಿದೆ. ಒಂದು ತಿಂಗಳಿನಿಂದ ಸಿಂಹಣಂದಿ ಮುನಿಗಳು ಇಂಗಿತ ಮರಣದೊಳಡಲಂ ತಾವೇನೋನ್ತು ಮುಡುಪಲಾಗಿ ಅವನ ಶಿಷ್ಯನಾದ ಕಲ್ಯಾಣಕೀರ್ತಿ ಸಿಂಹಣನ್ದ್ಯಾಚಾರ್ಯರ್ ಮುದುವೆಡೆ ಬಿಚ್ಚುಕುನ್ದೆಯಲ್ಲಿ ಬಸದಿಯನ್ನು ಕಟ್ಟಿಸಿ ಅತಿಶಯದಿ ಶಾಂತಿನಾಥನ ಪ್ರತಿಷ್ಠೆಯನ್ನು ಮಾಡಿಸಿ ಈ ಮಹೋನ್ನತ ಧರ್ಮಕಾರ್ಯದಿಂದ 'ವಸುದುತಿಯಾಳ್ ಕಲ್ಯಾಣಕೀರ್ತಿ ಮುನಿಪರ್ ನೆಗಳ್ದರ್' ಎಂದು ಪ್ರಶಂಸಿಸುತ್ತದೆ. ಈ ಮೇಲಿನ ಶಾಸನದಲ್ಲಿ ಸ್ವಾಮಿಕುಮಾರ ಎನ್ನುವವನು ಬಿಚ್ಚುಕುನ್ದೆ ಗ್ರಾಮದಲ್ಲಿ ನಾಗದೇವ ಬಸದಿಯನ್ನು ಕಟ್ಟಿಸಿ ಹೊಸ ಜಿನಬಿಂಬವನ್ನು ಪ್ರತಿಷ್ಠಾಪಿಸಿ ಪೂಜೆ ಮಾಡಿ ಕಲ್ಯಾಣ ಕೀರ್ತಿ ಮುನಿಯು ಇದನ್ನು ಕೀರ್ತಿಸುತ್ತಾ ಮುಡುಪಿದನೆನ್ನಲಾಗಿದೆ. ಇಲ್ಲಿ ಹೇಳಲಾದ ನಾಗದೇವನು ಸಿಂಹಣಂದಿ ಆಚಾರ್ಯರ ನಾಲ್ಕುಜನ ಶಿಷ್ಯರಲ್ಲಿ ಒಬ್ಬನಾದ ನಾರಲೋಕ ಮಿತ್ರನೆ ಇರಬಹುದೆಂದು ಊಹಿಸಲಾಗಿದೆ. ಮುನಿಗಳು ಮುಡುಪಿದಡೆ ಭಕ್ತಿಯಿಂದ ಪಾದಗಳನ್ನು ಕೆತ್ತಿಸುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಶ್ರೀ ಪಾಲತ್ರೈವಿದ್ಯ ದೇವರು (ಕ್ರಿ.ಶ.1153) ಮಡಿದಾಗ ಅವರ ಸ್ಮರಣಾರ್ಥ ಶಿಷ್ಯ ವಾದಿರಾಜನು ಕುಂಚಿನಹಳ್ಳಿಯಲ್ಲಿ ಮಲ್ಲಜಿನಾಲಯವನ್ನು ಕಟ್ಟಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಚಾಲುಕ್ಯ ಸೋಮೇಶ್ವರನ ಕಾಲದಲ್ಲಿ (ಕ್ರಿ.ಶ.1075) ಬಂದಳಿಕೆ ಬಸದಿಯ ಆಚಾರ್ಯರಾದ ಕುಳಚಂದ್ರ ದೇವರು ಶಾಂತಿನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಇದೇ ಶಾಂತಿನಾಥ ಬಸದಿಗೆ ಕ್ರಿ.ಶ.1200ರಲ್ಲಿ ಮೂಲ ಸಂಘ, ಕಾಣೂರುಗಣ, ತಿಂತ್ರಣಿ ಗಣಕ್ಕೆ ಸೇರಿದ ಚಾರುಕೀರ್ತಿ ಪಂಡಿತ ದೇವರು ಮಂಡಲಾಚಾರ್ಯರಾಗಿದ್ದರು. ಕವಡೆಯ ಬೊಪ್ಪನು ಬಂದಳಿಕೆಯ ಶಾಂತಿನಾಥ

ಬಸದಿಗೆ ಮಂಟಪವನ್ನು ಕಟ್ಟಿಸಿದ್ದಾನೆ.

ಜೈನ ಸಮಾಜದಲ್ಲಿ ಚೈತ್ಯದರ್ಚನವಿಲ್ಲದ ಸ್ಥಳದಲ್ಲಿ ಉತ್ತಮ ಶ್ರಾವಕ ಇರಕೂಡದೆಂಬ ವಿಚಾರಗಳು ಗಾಢವಾಗುತ್ತಾ ನಡೆದಂತೆಲ್ಲಾ ಜೈನ ಬಸದಿಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕು ಸಾವಿರಾರು ಜಿನ ಮಂದಿರಗಳು ನಿರ್ಮಾಣ ಮಾಡಿದರು. ಜಿನಮಂದಿರಗಳು ಬೆಳೆದಂತೆಲ್ಲಾ ಅದರ ಕಾರ್ಯವ್ಯಾಪ್ತಿಯು ಹೆಚ್ಚುತ್ತಾ ಹೋಯಿತು. "ಜೈನ ಸಮಾಜದ ಅನೇಕ ಶಾಖೆಗಳೊಂದಿಗಿನ ಅದರ ಸಂಬಂಧ ಬೆಳೆಯುತ್ತಾ ಹೋಯಿತು. ಅದರ ಆಡಳಿತ ಕಾರ್ಯವೈಖರಿಯೂ ಒಂದು ಸಂಸ್ಥೆಯಂತೆ ಅದರ ಮುಖ್ಯಸ್ಥರನ್ನು ನೇಮಿಸಿ ಅವನು ನಿರ್ವಹಿಸಬೇಕಾದ ಅನಿವಾರ್ಯತೆ ಬೆಳೆಯಿತು. ಕೆಲವು ಶಾಸನಗಳಲ್ಲಿ ಜಿನ ಮುನಿಗಳನ್ನು ಮಹಾಮಂಡಲಾಚಾರ್ಯ, ಮಂಡಲಾಚಾರ್ಯ ಎಂದು ಕರೆದಿವೆ.[39]

ಬಸದಿಗಳ ನಿರ್ವಹಣೆಗೆಂದು ಕೊಟ್ಟಂತಹ ದಾನ ದತ್ತಿಗಳ ವಿವರಗಳು ಅದರ ವಿನಿಯೋಗ, ಅದರ ಆಯವ್ಯಯ ಎಲ್ಲವನ್ನು ಬಸದಿಯ ಮುಖ್ಯಸ್ಥರು ನಿರ್ವಹಿಸಬೇಕಾಗಿತ್ತು. ಬಸದಿಗಳಿಗೆ ನೀಡಲಾದ ತೆರಿಗೆ, ಸುಂಕ, ಭೂದಾನ ವಿವರಣೆ, ನಿರ್ವಹಣೆ, ಸಂತೆ ಮತ್ತು ಅಂಗಡಿಗಳಿಂದ ಬರುವ ಪ್ರತಿನಿತ್ಯದ ದರ್ಶನಾರ್ಥಿಗಳ ಆದಾಯ...... ಹೀಗೆ ನಾನಾ ಮೂಲೆಗಳಿಂದ ಬಂದ ಆದಾಯವನ್ನು ಬಾವಿ ಕೆರೆಗಳ ನಿರ್ಮಾಣ, ಅನ್ನಛತ್ರ, ಬಸದಿಯ ಜೀರ್ಣೋದ್ಧಾರ ವಿಸ್ತರಣೆ, ಆಹಾರ, ದಾನ, ಹೂದೋಟ, ವಿದ್ಯಾರ್ಥಿಗಳ ಪೋಷಣೆ ಮುಂತಾದ ಕಾರ್ಯಗಳಿಗೆ ವಿನಿಯೋಗ ಮಾಡಬೇಕಿತ್ತು. ಇವುಗಳಲ್ಲದೆ ಬಸದಿಯಲ್ಲಿ ನಿತ್ಯಪೂಜೆ ಮತ್ತು ಇತರ ಉತ್ಸವದ ವೆಚ್ಚವನ್ನು ಕೂಡ ಭರಿಸಬೇಕಾಗುತ್ತಿತ್ತು. ಬಸದಿಗಳ ಬಿಳಿದಿಯ ಶಾಸನದ ವಿವರವು ಆಡಳಿತ ಇತರ ವ್ಯವಹಾರಗಳಿಗೆ ಉತ್ತಮ ಉದಾಹರಣೆಯಾಗಿದೆ. ಬ ಸ ದಿ ಗ ಳ ಜೊತೆಗೆ ಮಠ, ಉಪಾಶ್ರಯಗಳು, ಅನ್ನಛತ್ರಗಳು, ಶಿಕ್ಷಣಕ್ಕಾಗಿ ವಿದ್ಯಾರ್ಥಿ ವಸತಿಗಳು, ಪರಿಚಾರಿಕ ನಿವೇಶನಗಳು, ಗ್ರಂಥ ಭಂಡಾರಗಳು..... ಇತ್ಯಾದಿ ಎಲ್ಲವುಗಳ ಜೊತೆ ಸೇರಿ ಪುರವೆಂಬಂತೆ ಬಸದಿಯ ಸುತ್ತ ನಿರ್ಮಾಣವಾಗುತ್ತಿತ್ತು.

ಬಸದಿಗಳು ಶೃತ ಭಂಡಾರಗಳನ್ನು ಒಳಗೊಂಡಿದ್ದು ಅದರಲ್ಲಿ ತರ್ಕ, ವ್ಯಾಕರಣ ಸಿದ್ಧಾಂತ, ನ್ಯಾಯ, ಛಂದಶಾಸ್ತ್ರ, ನಿಘಂಟು, ಕಾವ್ಯಗಳ ಜೊತೆಗೆ ಅನ್ಯಧರ್ಮದ ಗ್ರಂಥಗಳು ಹೇರಳವಾಗಿದೆಂಬುದಕ್ಕೆ ಅನೇಕ ಆಧಾರಗಳು ಸಿಗುತ್ತವೆ. 14 ಪೆಟ್ಟಿಗೆಗಳ ತುಂಬಾ ಜೈನಾಗಮ ಗ್ರಂಥಗಳು ಮಾನ್ಯಖೇಟದ ಉಪಾಶ್ರಯದಲ್ಲಿ ಇದ್ದವೆಂದು ತಿಳಿದು ಬರುತ್ತದೆ. ತಾಳೆಗರಿಯಲ್ಲಿ ಬರೆಯಲ್ಪಟ್ಟ ಇಂತಹ ಅಮೂಲ್ಯ ಗ್ರಂಥಗಳನ್ನು ರಕ್ಷಿಸುವ, ಲಿಪಿಸುವ ಕೆಲಸವು ಬಸದಿಗಳಲ್ಲಿ ನಡೆಯುತ್ತಿತ್ತು. ಆಚಾರ್ಯರ ಎಲ್ಲಾ ಬರಹಗಳು ಬಹುತೇಕ ಬಸದಿಗಳಲ್ಲಿಯೇ ಜನ್ಮತಾಳಿದವು. ಇಂತಹದಕ್ಕೆ ಸುಲಭವಾಗಿ ಉದಾಹರಣೆ ಗಳನ್ನು ಕೊಡಬಹುದು. ಮುನಿಗಳಿಲ್ಲದೆ ಶ್ರಾವಕರು ಬಸದಿಗಳಲ್ಲಿ

ಕಾವ್ಯಗಳನ್ನು ಶಾಸ್ತ್ರಗಳನ್ನು ಬರೆದುದಕ್ಕೆ ಅನೇಕ ಉದಾಹರಣೆಗಳನ್ನು ಕಾಣಬಹುದು. ಧಾರ್ಮಿಕ ಪ್ರೇರಣೆಯೊಂದಿಗೆ ಬರೆಯಲ್ಪಡುತ್ತಿದ್ದ ಅಂದಿನ ಕಾವ್ಯ ಶಾಸ್ತ್ರಗಳು, ಪುರಾಣಗಳು ಪವಿತ್ರವಾದ ಕ್ಷೇತ್ರಗಳಲ್ಲಿಯೇ ಕುಳಿತು ಬರೆಯಬೇಕೆಂಬುದೇ ಇಲ್ಲಿನ ಮುಖ್ಯ ಉದ್ದೇಶವಾಗಿತ್ತು.

ಪಾಯಣ್ಣವರ್ಣಿ, ಚಂದ್ರಸಾಗರವರ್ಣಿಯಂತಹವರು ಬಸದಿಗಳಲ್ಲಿ ಕುಳಿತು ಕಾವ್ಯಗಳನ್ನು ಲಿಪಿಗೊಳಿಸಿ ಮಠಕೊಪ್ಪಿಸಿದ ಉದಾಹರಣೆಗಳಿವೆ. ಅನೇಕ ಪವಿತ್ರ ಮತ್ತು ಅಮೂಲ್ಯ ಗ್ರಂಥಗಳು ಬಸದಿಗಳ ಹಸ್ತಪ್ರತಿ ಭಂಡಾರಗಳಲ್ಲಿ ರಕ್ಷಿಸಲ್ಪಟ್ಟವು. ಬಸದಿಯ ಸಂರಕ್ಷಣೆಯಲ್ಲಿ ಉಳಿದುಕೊಂಡು ಬಂದಿದ್ದ ಅಮೂಲ್ಯ ರತ್ನಗಳಾದ ಧವಲತಯ್ರಗಳನ್ನು ಅತ್ಯಂತ ಕಾಳಜಿಯಿಂದ ಹೊರತೆಗೆದು ಅದನ್ನು ಮುದ್ರಿಸಿರುವುದನ್ನು ನಾವು ಮರೆಯುವಂತಿಲ್ಲ.

**ಮಠಗಳು :**

ಪುರಾತನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ಹಲವಾರು ಧರ್ಮಗಳು ಹುಟ್ಟಿಕೊಳ್ಳುತ್ತಿವೆ. ಭಾರತದಲ್ಲಿ ಅನೇಕ ಧರ್ಮಗಳು ತಮ್ಮ ಅಸ್ತಿತ್ವವನ್ನು ಉಳಿಸಿ ಕಾಪಾಡಿಕೊಂಡು ಬಂದಿವೆ. ಅದರಲ್ಲಿಯೂ ಅನೇಕ ಶಾಖೆಗಳಿದ್ದು ಪ್ರತಿಯೊಂದು ಶಾಖೆಗೂ ಧರ್ಮಾಧಿಕಾರಿ ಅಥವಾ ಗುರುಗಳು ಇರುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಹಿಂದೆ ಬೌದ್ಧ, ಜೈನ, ವೀರಶೈವ, ಸಿಖ್‌ಧರ್ಮಗಳು ಅಸ್ತಿತ್ವದಲ್ಲಿದ್ದು ತಮ್ಮದೇ ಆದ ತತ್ವಗಳನ್ನು ಹೊಂದಿದ್ದರೂ ಕೆಲ ಸಾಮ್ಯತೆಗಳೊಂದಿಗೆ ಹಿಂದೂ ಧರ್ಮದೊಂದಿಗೆ ಬೆರೆತು ಬೆಳೆದುಕೊಂಡು ಬಂದಿವೆ. ಈ ಎಲ್ಲಾ ಧರ್ಮಗಳು ಕೇಂದ್ರಗಳನ್ನು ಸ್ಥಾಪಿಸಿ ಕೊಂಡು ಧರ್ಮಪ್ರಸಾರದೊಂದಿಗೆ ಬೆಳೆದುಕೊಂಡು ಬಂದಿವೆ. ಧರ್ಮದ ಏಳಿಗೆಗೆ ಹಲವಾರು ಮಠದ ಧರ್ಮಾಧಿಕಾರಿಗಳು ಅನನ್ಯ ಸೇವೆಸಲ್ಲಿಸಿದ್ದಾರೆ ಎಂದರೆ ತಪ್ಪಾಗಲಾರದು.

ಕರ್ನಾಟಕದಲ್ಲಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ವೀರಶೈವ ಮಠಗಳು ಅಪಾರವಾದ ಕೊಡುಗೆಯನ್ನು ನೀಡಿವೆ. ಒಂದು ಕಾಲಕ್ಕೆ ಸಮಾಜದ ಬದುಕನ್ನು ನಿಯಂತ್ರಿಸಬಲ್ಲ, ರೂಪಿಸಬಲ್ಲ ಮಠಗಳ ಪಾತ್ರ ಅನನ್ಯವಾಗಿತ್ತು. ಧಾರ್ಮಿಕ ಸಾಂಸ್ಕೃತಿಕ ಸಂಸ್ಥೆಗಳಾದ ಮಠಮಾನ್ಯಗಳಿಗೂ ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಸಾಂಸ್ಕೃತಿಕವಾಗಿ ಪರಿಚಾರಕರಂತೆ ಕೆಲಸ ಮಾಡಿದ ಸಾವಿರಾರು ಮಠಗಳು ದಾಖಲೆಗೆ ಸೇರ್ಪಡೆಗೊಂಡಿವೆ. ಇಂದು ಊರಿಗೊಂದು, ಓಣಿಗೊಂದು, ಮಠಗಳು ಸ್ಥಾಪನೆಗೊಳ್ಳುತ್ತಿವೆ. ಇದರ ಜೊತೆಗೆ ಜನಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಅವಿತರವಾಗಿ ಶ್ರಮಿಸಿದ ಅದೆಷ್ಟೋ ಮಠಗಳು ತಮ್ಮ ಮೂಲ ಅಸ್ತಿತ್ವವನ್ನು ಕಳೆದುಕೊಂಡು ಹೆಸರಿಗಷ್ಟೇ ಉಳಿದುಕೊಂಡಿವೆ. ಇದು ಎಷ್ಟರ ಮಟ್ಟಿಗೆ

ಮುಂದುವರೆದಿದೆ ಎಂದರೆ ಕೇವಲ ಮಠಗಳ ಹೆಸರು, ಒಬ್ಬ ವ್ಯಕ್ತಿಯ ಹೆಸರು ಒಂದು ಮನೆತನದ ಹೆಸರಾಗಿಯೇ ಉಳಿದುಕೊಂಡಿದೆ.

ವ್ರತಿಗಳಿರುವುದು ಮಠ–ಮುನಿಗಳಿರುವುದು ಆಶ್ರಮ ಎಂದು ನಿಘಂಟು ಹೇಳುತ್ತದೆ. ವ್ರತಿಗಳು ಗ್ರಾಮದ ಮಠದಲ್ಲಿ ತಪೋಮಗ್ನರಾಗಿರುತ್ತಾರೆ. ಮುನಿಗಳು ಆತ್ಮೋದ್ಧಾರಕ್ಕಾಗಿ ಅರಣ್ಯದ ಆಶ್ರಯದಲ್ಲಿ ತಪೋಮಗ್ನರಾಗಿ ರುತ್ತಾರೆ. ವೈದಿಕ ಧರ್ಮದಲ್ಲಿ ಸನ್ಯಾಸಿ, ವೀರಶೈವ ಧರ್ಮದಲ್ಲಿ ಜಂಗಮ ಎಂದು ಕರೆಯುತ್ತಾರೆ. ಸನ್ಯಾಸಿ ಸಂಸ್ಕೃತಿಗಿಂತ ಜಂಗಮಸಂಸ್ಕೃತಿ ತುಂಬಾ ಭಿನ್ನವಾಗಿದೆ. ಜಂಗಮನು ಸನ್ಯಾಸಿಯ ಆತ್ಮೋದ್ಧಾರದೊಂದಿಗೆ ಹೆಚ್ಚಿನದಾಗಿ ವರ್ಣಭೇದ, ಲಿಂಗಭೇದ, ವರ್ಗಭೇದವಿಲ್ಲದೆ ಸಮಾಜ ಸೇವೆಯನ್ನು ಮಾಡುತ್ತಾ ಇರುತ್ತಾರೆ. ತನ್ನ ಈ ದೀಕ್ಷೆಯನ್ನು ಸಾಮಾಜಿಕರ ಆತ್ಮಶುದ್ದಿಯ ಜೊತೆಗೆ, ಅನ್ನ–ಔಷದ, ನ್ಯಾಯದಾನ, ಶಿಕ್ಷಣ–ಸಾಹಿತ್ಯ ಸೃಷ್ಟಿ ಇತ್ಯಾದಿ ಕ್ಷೇತ್ರಗಳಿಗೆ ವಿಸ್ತರಿಸಿ ಸಮಾಜಾಭಿವೃದ್ಧಿಗೂ ಕಾರಣನಾಗುತ್ತಾನೆ.[40]

ಮಠಗಳನ್ನು ಹಲವಾರು ಹೆಸರುಗಳಿಂದ ಕರೆಯುವುದನ್ನು ನಾವು ಕಾಣುತ್ತೇವೆ. ಮಠಗಳು ಸಮಾಜಕ್ಕೆ ನೀಡುವ ಕೊಡುಗೆ ಅಪಾರವಾದದ್ದು. ಮಠಗಳ ಹಲವಾರು ಅಡ್ಡ ಹೆಸರುಗಳಾದ ಹಿರೇಮಠ, ಗುರು ಪರಂಪರೆಯ ವಿರಕ್ತಮಠ ಹೆಸರುಗಳು ಜಂಗಮ ಪರಂಪರೆಯ ಸಮೂಹ ಸಂಸ್ಕೃತಿಯನ್ನು ಹೇಳುತ್ತದೆ. ಕುತೂಹಲದ ವಿಷಯವೆಂದರೆ ಇವುಗಳ ಜೊತೆಗೆ ಇದರ ಶಾಖೆಯನ್ನು ಸೂಚಿಸುವ ಮುರುಘಾಮಠ, ಉಜ್ಜಯಿನಿಮಠ, ಹೆಸರುಗಳಿಗೆ ಕಲ್ಮಠ, ಗಚ್ಚಿನಮಠ, ಹೊಸಮಠ, ಹಳೆಯಮಠ, ಚಿಕ್ಕಮಠ, ಗವಿಮಠ ಇತ್ಯಾದಿಗಳು ಆಯಾ ಮಠಗಳ ಸ್ವರೂಪ ಮತ್ತು ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತದೆ. ಮೇಗಲ್ಮಠ, ಗುಡ್ಡದಮಠ, ಮೂಡಲಮಠ, ಪಡುವಲಮಠ, ಹಳ್ಳದಮಠ, ತಿಪ್ಪಿಮಠ ಹೆಸರುಗಳು ಅವುಗಳ ಸ್ಥಾನವನ್ನು ಹೇಳುತ್ತವೆ. ಸಾಹಿತ್ಯ ಚರಿತ್ರೆಯಲ್ಲಿ ಸ್ಥಿರ ಪಟ್ಟಾಧ್ಯಕ್ಷರಮಠ, ಪಂಚವಣ್ಣಿಗೆಮಠ, ಶೀಲಸಂಪಾದನೆಮಠ, ಕಬ್ಬಿಣಕಂಥಮಠ, ಮಕ್ಕಳದೇವರಮಠ, ಚರಪಟ್ಟಾಧ್ಯಕ್ಷರಮಠ ಇತ್ಯಾದಿಯಾಗಿ ಸಾಮಾಜೋಧಾರ್ಮಿಕ ಚರಿತ್ರೆಯ ದಳವಾಯಿಮಠ ಹಿಂದೆ ಇದ್ದವು ಎನ್ನುವುದನ್ನು ಇತಿಹಾಸ ಹೇಳುತ್ತದೆ. ಹಿಂದಿನ ಕಾಲದಲ್ಲಿ 5706 ಮಠಗಳು ಇದ್ದವು. ಅವುಗಳಲ್ಲಿ 3828 ಮಠಗಳು ಶಾಶ್ವತವಾಗಿ ನಾಶವಾಗಿವೆ. ಇವುಗಳಲ್ಲಿ ಅಸ್ತಿತ್ವದಲ್ಲಿರುವ ಮಠಗಳ ಸಂಖ್ಯೆ 1878 ಇದರಲ್ಲಿ ಉಳಿದವುಗಳು 1089 ಮಾತ್ರ ಎಂದು ಚಂದ್ರಶೇಖರ ನಾರಾಯಣಪುರ ಅಭಿಪ್ರಾಯಪಟ್ಟಿದ್ದಾರೆ. ಇದರಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಸುಮಾರು–68 ಮಠಗಳು ಇರುವುದರ ಮಾಹಿತಿ ದೊರೆತಿದೆ. ಈಗ ಅದರಲ್ಲಿ 36 ಮಠಗಳು ಇವೆ. ಕೊಪ್ಪಳದಲ್ಲಿ ಪ್ರಸಿದ್ಧಿ ಪಡೆದ ಮಠಗಳು ಸಮಾಜಕ್ಕೆ ಮಹತ್ವದಾದ ಕೊಡುಗೆಯನ್ನು ನೀಡಿವೆ. ಜಿಲ್ಲೆಯ ಶಾಸನಗಳಲ್ಲಿ ಉಕ್ತವಾದ

ಮಠಗಳೆಂದರೆ– ಆನೆಗೊಂದಿಮಠ, ರೂಢಾಚಾರ್ಯರಮಠ, ನಿರಾಸಿನಮಠ, ಹೊಸಮಠ, ಗಣಮಠ, ಅಳವಂಡಿಮಠ, ಜಂಗಮಯ್ಯಮಠಗಳು.

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ವಿಶಿಷ್ಟಸ್ಥಾನ ಪಡೆದಿರುವ ಮಠಗಳ ಅರ್ಥದ ಬಗ್ಗೆ ಹಲವಾರು ವಿದ್ವಾಂಸರು ವ್ಯಾಖ್ಯಾನ ನೀಡಿದ್ದಾರೆ. ಮಠ ಎಂದರೆ ಸನ್ಯಾಸಿಗಳು ವಾಸಿಸುವ ಒಂದು ಸ್ಥಳ ಎಂದು, ಅಮರಕೋಶದಲ್ಲಿ 'ಛಾತ್ರಾನಿಲಯ' ಎಂದು ಅರ್ಥವಿದ್ದೂ, ಇಲ್ಲಿ ಗುರುಶಿಷ್ಯರು, ಸನ್ಯಾಸಿಗಳು ವಾಸಿಸುವ ಯೋಗ್ಯಸ್ಥಳವಾಗಿತ್ತೆಂದು ಉಲ್ಲೇಖವಿದೆ. ವೀರಶೈವ ಮಠಗಳ ಮಟ್ಟಿಗೆ ಹೇಳಬಹುದಾದರೆ ಧಾರ್ಮಿಕ ಹಿನ್ನೆಲೆಯಲ್ಲಿ ಆತ್ಮೋದ್ಧಾರ ಮತ್ತು ಸಮಾಜೋದ್ಧರ್ಮದ ಕೆಲಸವನ್ನು ನಡೆಸುವ ಕೇಂದ್ರಗಳೇ ಮಠಗಳಾಗಿವೆ.

ಶಾಸನಗಳಲ್ಲಿ ಉಕ್ತವಾದ ಮಠಗಳು ಹೀಗೆ ಕಾರ್ಯನಿರ್ವಹಿಸುತ್ತಿದ್ದರೆ ಅದರ ಕಾರ್ಯಗಳು ಏನಾಗಿದ್ದವು ಎನ್ನುವುದನ್ನು ಕೆಲವು ಶಾಸನಗಳು ತಿಳಿಸುತ್ತವೆ. ತ್ರೈಲೋಕ್ಯಮಲ್ಲದೇವನು ಕಲ್ಯಾಣದಿಂದ ಆಳ್ವಿಕೆ ನಡೆಸುತ್ತಿದ್ದಾಗ ಅಳವಂಡಿಯ ಒಂದು ಮಠಕ್ಕೆ ಎರೆಮತ್ತರು ದಾನವನ್ನು ನೀಡಿದ್ದನ್ನು ಕೊಪ್ಪಳದ ಅಳವಂಡಿ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[41] ಅಳವಂಡಿಯು ವೇದ ಮಂತ್ರಗಳಿಂದ, ಮಠ, ಸತ್ರಗಳಿಂದ ಶೋಭಿಸುತ್ತಿತ್ತು. ಅಲ್ಲಿ ವ್ಯಾಕರಣ, ಸ್ಮೃತಿ, ಪುರಾಣ, ಆಗಮಗಳ ಬಗ್ಗೆ ಅಭ್ಯಾಸ ನಡೆಯುತ್ತಿತ್ತೆಂದು ಶಾಸನ[42]ದಲ್ಲಿ ವರ್ಣಿಸಿದೆ.

ಕ್ರಿ.ಶ.ಸುಮಾರು 1520 ಆನೆಗೊಂದಿ ಸಂಸ್ಥಾನದಲ್ಲಿ ರೂಢಾಚಾರ್ಯರ ಮಠವಿತ್ತು. ಮಠದ ಬಗ್ಗೆ ನಡೆದ ವಾದವನ್ನು ಕೊಪ್ಪಳ ಜಿಲ್ಲೆಯ ಒಂದು ಶಾಸನ ಹೀಗೆ ಹೇಳುತ್ತದೆ. ಒಂದು ಸಾರೆ ವಿರೂಪಾಕ್ಷ ರಥೋತ್ಸವಕ್ಕೆ ಅಂತರವಳ್ಳಿಯ ನಿರಂಜನಯ್ಯ, ಮೂರುರುಘಾವದಯ್ಯ ಎಂಬುವವರು ಬಂದು ಆನೆಗೊಂದಿ ಪೀಠ ತಮ್ಮದೆಂದು ವಾದಮಾಡುತ್ತಾರೆ. ಈ ಬಗ್ಗೆ ಸಂಬಂಧಿಸಿದ ದಾಖಲೆಗಳು ಇವೆಯೆಂದು ಒಂದು ವೇಳೆ ಇದನ್ನು ತೋರಿಸದೇ ಹೋದಲ್ಲಿ ಸರ್ಕಾರಕ್ಕೆ 300 ಗದ್ಯಾಣ ಜುಲ್ಮಾನೆ ಕೊಡುತ್ತೇವೆಂದು ಹೇಳುತ್ತಾರೆ. ಮುಂದೆ ಕೆಲವು ಪತ್ರಗಳನ್ನು ಅಂತರವಳ್ಳಿಯವರು ತೋರಿಸುತ್ತಾರೆ. ಆದರೆ ಆ ಪತ್ರಗಳನ್ನು ಸಭಾಸದರು ಒಪ್ಪುವುದಿಲ್ಲ. ಹೀಗಾಗಿ ಸಭಾಸದರು ಹೀಗೆ ಸರಿಯಾದ ಪತ್ರಗಳಿಲ್ಲದೆ ವ್ಯಾಜ್ಯವನ್ನು ಮಾಡಿದ್ದು, ಏಕೆ? ಎಂದು ಪ್ರಶ್ನಿಸಿದಾಗ ತಿಳಿಯದೆ ಹಾಗೆಯೇ ಮಾಡಿದೆವೆಂದು ಅವರು ಕೊಡುತ್ತಿದ್ದರೆಂದು ಒಪ್ಪಿಕೊಳ್ಳುತ್ತಾರೆ. ಸಭೆಯಲ್ಲಿ ಕಾಗದ ಪತ್ರಗಳನ್ನು ಒಪ್ಪಿಸಲು ವಿಫಲವಾಗಿದ್ದರಿಂದ ಸದ್ಯೋಜಿತ ಸ್ವಾಮಿಗಳಿಗೆ ಅಂತರವಳ್ಳಿಯ ನಿರಂಜಯ್ಯ ಹಾಗೂ ಮೂರುರುಘಾವದಯ್ಯನು ಜಯಪತ್ರ ಬರೆದು ಕೊಡಬೇಕೆಂದು, ಆನೆಗೊಂದಿ ಮಠವನ್ನು ಮೂಲ ಪೀಠವೆಂದು ಒಪ್ಪಿಕೊಳ್ಳ ಬೇಕೆಂದು ಆದೇಶಿಸುತ್ತಾರೆ. ಆ ರೂಢಾಚಾರ್ಯರೇ ಮೂಲ ಪೀಠಸ್ಥರು ಹಾಗೂ ಅವರ ವಂಶಸ್ಥರೇ ಆಹಾರ,

ವ್ಯವಹಾರ, ಪಾಪ ಪ್ರಾಯಶ್ಚಿತ್ತವನ್ನು ಮಾಡುವುದಕ್ಕೆ ಅರ್ಹರು ಎಂಬುದಾಗಿ ತಿಳಿಸುತ್ತಾ ಸರ್ಕಾರಕ್ಕೆ 300 ಗದ್ಯಾಣವನ್ನು ಅಂತರವಳ್ಳಿಯವರು ನೀಡುತ್ತಾರೆ.

ಗಂಗಾವತಿ ತಾಲೂಕಿನ ಹಿರೇಜಂತಕಲ್ ಗ್ರಾಮದಲ್ಲಿ ನಿರಾಸಿಮಠ ಇತ್ತು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಆಗ ಸದಾಶಿವರಾಯನು ಆಳುತ್ತಿದ್ದನು. ದೇವಾಲಯಗಳಿಗೆ ಹಲವಾರು ದಾನಗಳನ್ನು ನೀಡುತ್ತಾ ಇಲ್ಲಿ ನಿರಾಸಿಮಠ, ಸಾರಮಯ, ವಿಪ್ರದ ಮೂವತ್ಮೂರು ಕೋಟಿ ದೇವತೆಗಳು ಇದ್ದವು ಎನ್ನುವುದನ್ನು ಹಿರೇಜಂತಕಲ್ ಶಾಸನ[43] ಹೇಳುತ್ತದೆ. ಜಂತಕಲ್ ಮಾಗಣಿಯ ಅಪಂಣನು ಚಂದಮಲ್ಲಿಕಾರ್ಜುನ ವೊಡೆಯನಿಗೆ ನಿರಾಸಿಮಠದ ಮಾನ್ಯವಾಗಿ ಭೂಮಿಯನ್ನು ನೀಡಿ, ಮಠದ ಉದ್ಧಾರಕ್ಕಾಗಿ ಭೂಮಿಯಲ್ಲಿ ಬಾಳೆ, ಬದನೆ, ಹಲಸು, ತೆಂಗು ಬೆಳೆದುಕೊಂಡು ಶಿವಪೂಜೆ ಮಾಡಿಕೊಂಡು ಅನುಭವಿಸಿಕೊಂಡಿರಬೇಕೆಂದು ಹೇಳುತ್ತಾನೆ.[44] ಹಾಗೆಯೇ ಕ್ರಿ.ಶ.ಸುಮಾರು 1551 ರಾಜರಾಜ ತಿರುಮಲರಾಜನು ಜಂಗಮಯ್ಯನ ಮಠಕ್ಕೆ ದಾನ ನೀಡಿದ ಉಲ್ಲೇಖವಿದೆ.[45]

ಈ ರೀತಿಯಾಗಿ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಮಠಗಳ ಕುರಿತ ವಿಷಯಗಳು ಉಲ್ಲೇಖಗೊಂಡಿವೆ. ಮಠಗಳು ಯಾವ ರೀತಿ ಇದ್ದವು, ಅವುಗಳ ಕಾರ್ಯಗಳು ಏನಾಗಿದ್ದವು, ಅವು ಸಮಾಜಕ್ಕೆ ಏನಾದರೂ ಕೊಡುಗೆ ನೀಡಿವೆಯೋ ಎನ್ನುವುದರ ಬಗ್ಗೆಯಾಗಲಿ, ಧಾರ್ಮಿಕ ಕಾರ್ಯಗಳ ಬಗ್ಗೆಯಾಗಲಿ ಯಾವುದರ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಕೇವಲ ಮಠಗಳಿಗೆ ದಾನ ನೀಡಿದ ಬಗ್ಗೆ ಮಾತ್ರ ಮಾಹಿತಿ ದೊರೆಯುತ್ತವೆ.

**ಗ್ರಾಮ ದೇವತೆಗಳು (ಹೆಣ್ಣು ದೇವರ ದೇವಾಲಯಗಳು) :**

ಭಾರತೀಯ ಇತಿಹಾಸ ಪರಂಪರೆಯಲ್ಲಿ ದೇವಾಲಯಗಳ ಪಾತ್ರ ಅತ್ಯಂತ ಮುಖ್ಯವಾಗಿದ್ದು, ಕ್ರಿ.ಪೂ.ಶತಮಾನದಲ್ಲಿ ಸಿಂಧೂ ಬಯಲಿನ ನಾಗರೀಕತೆಯಲ್ಲಿ ದೇವಾನು ದೇವತೆಗಳನ್ನು ಪೂಜಿಸುತ್ತಿದ್ದರೆಂದು ದೊರೆತ ಪಳೆಯುಳಿಕೆಯಿಂದ ತಿಳಿದು ಬರುತ್ತದೆ. ಅಲ್ಲಿಯ ಜನರು ವಾಯು, ಸೂರ್ಯ, ಅಗ್ನಿ ಮುಂತಾದ ದೇವತೆಗಳೆಂದು ನಂಬಿ ಯಜ್ಞ-ಯಾಗಾದಿಗಳನ್ನು ಮಾಡಿ ಪೂಜಿಸುತ್ತಿದ್ದರು. ಇದಾದ ನಂತರ ಆರ್ಯರು ಕೂಡ ಹಸು, ಸೂರ್ಯ, ಭೂಮಿ, ಮುಂತಾದ ದೇವತೆಗಳನ್ನು ಪೂಜಿಸುತ್ತಿದ್ದರು. ಮುಂದೆ ಜೈನರ ಕಾಲದಲ್ಲಿ ಜೈನ ತೀರ್ಥಂಕರನ್ನು ಪೂಜಿಸುತ್ತಾ ಬಂದಿದ್ದಾರೆ. ಮೌರ್ಯರ ಕಾಲದಲ್ಲಿ ಗುಡಿಗಳನ್ನು ಕಟ್ಟಿ ದೇವತೆಗಳನ್ನು ಪೂಜಿಸಹತ್ತಿದರು. ಹೀಗೆ ದೇವಾಲಯಗಳ ನಿರ್ಮಾಣ ಮಾಡುತ್ತಾ ದೇವಾನುದೇವತೆಗಳನ್ನು ಪೂಜಿಸಹತ್ತಿದರು. ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರು ಊರಿನ ಉದ್ಧಾರಕ್ಕಾಗಿ ದೇವಾಲಯಗಳ ನಿರ್ಮಾಣ ಮಾಡಿದರು. ಶಾತವಾಹನರ ಕಾಲದಲ್ಲಿ ಅನೇಕ ಗುಹಾಂತರ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಕದಂಬ ಕಾಲದ ಅರಸರು ಅನೇಕ

ದೇವಾಲಯಗಳನ್ನು ಕಟ್ಟಿಸಿದರು. ತಾಳಗುಂದದ ಶಿವದೇವಾಲಯ ಕದಂಬ ಶೈಲಿಯ ಪ್ರತೀಕವಾಗಿದೆ. ಪಲ್ಲವರ ಕಾಲದಲ್ಲಿ ದೇವಾಲಯಗಳನ್ನು ದ್ರಾವಿಡ ಶೈಲಿಯಲ್ಲಿ ಕಟ್ಟಿಸಿದರು. ಶಿವ, ವಿಷ್ಣು, ಕಪಿಲೇಶ್ವರ, ಮಹಾಲಿಂಗೇಶ್ವರ, ಕೋಲಾರಮ್ಮನ ದೇವಾಲಯಗಳನ್ನು ನಿರ್ಮಿಸಿದರು. ಬಾದಾಮಿ ಚಾಳುಕ್ಯರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಚಿರಸ್ಮರಣೀಯವಾಗಿದೆ. ಈ ಕಾಲದಲ್ಲಿ ದೇವಾಲಯಗಳನ್ನು ಅಧಿಕ ಸಂಖ್ಯೆಯಲ್ಲಿ ನಿರ್ಮಿಸಿದ್ದಾರೆ. ಇವರು ನಾಗರಶೈಲಿ, ವೇಸರಶೈಲಿ, ದ್ರಾವಿಡಶೈಲಿ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಹೀಗೆ ನಂತರ ಬಂದ ರಾಜವಂಶಸ್ಥರು ಅನೇಕ ದೇವಾಲಯಗಳನ್ನು ನಿರ್ಮಾಣ ಮಾಡುತ್ತಾ ಬಂದಿದ್ದಾರೆ. ದೇವಾಲಯಗಳಿಗೆ ದಾನ, ಧರ್ಮ, ದತ್ತಿ, ಉದ್ಧಾರ ಮಾಡುತ್ತಾ ಬಂದಿದ್ದಾರೆ.

ಕ್ರಿ.ಪೂ.ದಲ್ಲಿ ಪ್ರಾರಂಭವಾದ ದೇವಾಲಯಗಳ ನಿರ್ಮಾಣ ಕಾರ್ಯ ಬ್ರಹ್ಮ, ಶಿವ, ವಿಷ್ಣು, ಮಹೇಶ್ವರ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಇದರ ಜೊತೆಗೆ ಹೆಣ್ಣು ದೇವಾಲಯಗಳೂ ಕೂಡ ಅಷ್ಟೇ ಪ್ರಾಮುಖ್ಯತೆಯಿಂದ ನಿರ್ಮಾಣಗೊಂಡವುಗಳಾಗಿವೆ. ಯಾಕೆಂದರೆ ದೇವತೆಯರನ್ನು ಆದಿಶಕ್ತಿ, ಪರಾಶಕ್ತಿ, ಮುಂತಾದ ಪರ್ಯಾಯ ನಾಮಗಳಿಂದ ಕರೆಯುತ್ತಾರೆ. ಆದ್ದರಿಂದ ಬ್ರಹ್ಮ, ವಿಷ್ಣು, ಶಿವ ಇವರುಗಳ ಜೊತೆಗೆ ದೇವತೆಗಳ ದೇವಾಲಯಗಳನ್ನು ನಿರ್ಮಾಣ ಮಾಡಿದ್ದನ್ನು ಶಾಸನಗಳಿಂದ ಹಾಗೂ ಇನ್ನೂ ಅಳಿದು ಉಳಿದ ದೇವತೆಗಳ ದೇವಾಲಯಗಳ ಕುರುಹುಗಳ ಮೂಲಕ ಕಾಣಬಹುದಾಗಿದೆ. ಗಂಡಿನ ಜೊತೆಗೆ ಹೇಗೆ ಒಂದು ಹೆಣ್ಣು ಇರುತ್ತಾಳೋ ಹಾಗೇ ದೇವಾಲಯಗಳ ನಿರ್ಮಾಣದಲ್ಲಿ ಶಿವನ ಜೊತೆ ಪಾರ್ವತಿ ಇರುತ್ತಾಳೆ. ಆದ್ದರಿಂದ ಹೆಣ್ಣು ದೇವಾಲಯಗಳನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ.

ದೇವತೆಗಳನ್ನು ಪ್ರತಿಷ್ಠಾಪಿಸಿ ಪೂಜಿಸುವುದರಿಂದ ಬರುವ ಪುಣ್ಯ ಫಲವನ್ನು ತಮ್ಮ ಬಂಧು ಬಾಂಧವರಿಗೆ ಹಂಚುವುದು ಅಂದಿನ ಕಾಲದಲ್ಲಿ ಪ್ರಚಲಿತವಿತ್ತು. ರಾಜರ ಹೆಂಡತಿಯರು ಹಲವಾರು ಹೆಣ್ಣು ದೇವರ ದೇವಾಲಯಗಳನ್ನು ನಿರ್ಮಾಣ ಮಾಡಿದ್ದನ್ನು ಶಾಸನಗಳಿಂದ ತಿಳಿಯ ಬಹುದಾಗಿದೆ. ಹೆಣ್ಣುದೇವತೆ ತುಂಬಾ ಪ್ರಭಾವಶಾಲಿಯೆಂದು ಇಂದಿಗೂ ಜನರು ನಂಬುತ್ತಾರೆ. ಗಂಡು ದೇವರ ದೇವಾಲಯಗಳನ್ನು ನಿರ್ಮಾಣ ಮಾಡಿದ ನಂತರ ಅದರ ಪಕ್ಕದಲ್ಲಿ ಹೆಣ್ಣು ದೇವರ ದೇವಾಲಯ ನಿರ್ಮಿಸುತ್ತಿದ್ದರು ಇದಕ್ಕೆ 'ಅಮ್ಮವರ ಗುಡಿ' ಎಂದು ಕರೆಯುತ್ತಾರೆ. ಈ ಪದ್ಧತಿಯನ್ನು ಒಂದು ಪರಂಪರೆಯನ್ನಾಗಿ ಮಾಡಿಕೊಂಡು ಹೆಣ್ಣು ದೇವಾಲಯ ನಿರ್ಮಿಸಿದ್ದನ್ನು ಕಾಣಬಹುದಾಗಿದೆ.

ದೇವತೆಯ ದೇವಾಲಯಗಳನ್ನು ಕರ್ನಾಟಕದ ನಾನಾ ಭಾಗಗಳಲ್ಲಿ ನಿರ್ಮಾಣ

ಮಾಡಿದ್ದನ್ನು ನಾವು ಕಾಣುತ್ತೇವೆ. ಅದರಂತೆ ಕೊಪ್ಪಳ ಜಿಲ್ಲೆಯಲ್ಲಿಯೂ ಕೂಡ ದೇವತೆಗಳ ದೇವಾಲಯಗಳನ್ನು ಕಟ್ಟಿಸಿದ ಬಗ್ಗೆ ಶಾಸನಗಳಲ್ಲಿ ಹಲವಾರು ಮಾಹಿತಿಗಳು ಸಿಗುತ್ತವೆ. ಕೊಪ್ಪಳ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಕಲ್ಯಾಣ ಚಾಲುಕ್ಯರು, ಕಲಚೂರಿಗಳು ಹಾಗೂ ವಿಜಯನಗರ ಸಾಮ್ರಾಜ್ಯ ಕಾಲದಲ್ಲಿಹೆಣ್ಣು ದೇವಾಲಯ ನಿರ್ಮಿಸಿದ ಬಗ್ಗೆ ಶಾಸನಗಳಲ್ಲಿ ಮತ್ತು ಈಗ ಉಳಿದಿರುವ ದೇವಾಲಯಗಳಿಂದ ತಿಳಿಯಬಹುದಾಗಿದೆ. ಆಗಿನ ರಾಜರು ದೇವಿಯ ಉಪಾಸಕರು ಆಗಿದ್ದರು ಎಂಬುದನ್ನು ಶಾಸನಗಳಲ್ಲಿನ ಉಲ್ಲೇಖಿತ ಮಾಹಿತಿಯಿಂದ ಸ್ಪಷ್ಟವಾಗುತ್ತದೆ.

ಕೊಪ್ಪಳ ಜಿಲ್ಲೆಯ ದೇವಿಯ ಉಪಾಸನಾ ಕೇಂದ್ರಗಳು ಈಗ ಹಲವಾರಿದ್ದರೂ, ಹಿಂದೆ ಶಾಸನೋಕ್ತವಾಗಿ ಸಂಕನೂರಿನ ಸಂಕಲಾದೇವಿ, ಕುಕ್ಕನೂರಿನ ಮಹಾಮಾಯೆ ಜೇಷ್ಠಾದೇವಿ, ಹೊಸೂರಿನ ಮಹಾಮಾಯೆ ದೇವಾಲಯಗಳು ಪ್ರಸಿದ್ಧವಾಗಿದ್ದವು. ಕುಕ್ಕನೂರಿನ ಜೇಷ್ಠಾದೇವಿಯನ್ನು ಕುರಿತು ಕ್ರಿ.ಶ.1178ರ ಶಾಸನ[46]ವು ವಿಸ್ತಾರವಾದ ಮಾಹಿತಿಕೊಡುತ್ತದೆ. ಕಳಚೂರಿ ಸಂಕಮದೇವನು ಮಾದೇಗನೂರಿನಲ್ಲಿದ್ದಾಗ ಅವನ ಸೇನಾಪತಿಯಾದ ಧನ್ಯಚಮೂಪ, ಅವನ ತಾಯಿ ಚಂಡಾಬಾಯಿ, ಅಕ್ಕ ಲಳಿಯಾದೇವಿ ಮತ್ತು ಅವನ ಐದು ಕರಣಗಳು ಬಂದು ಜೇಷ್ಠಾದೇವಿಗೆ ಪೂಜೆಮಾಡಿ ದೇವರ ಪೂಜೋಪಕಾರ್ಯಗಳಿಗೆ ಬೆನತೂರನ್ನು ದಾನ ನೀಡಿರುತ್ತಾನೆ. ಈ ಕ್ಷೇತ್ರವು ಶಕ್ತಿಪೀಠ ಎಂದು ಕರೆದಿದ್ದಾರೆ.

"ಹೊಸ ಊರ ಶ್ರೀ ಮಹಂಮಾಯಿಗೆ ಅಮ್ಮ
ತಪಡಿ ನಯಿವೇದ್ಯಕ್ಕೆ ಸಮರ್ಪಿಸಿ ದಾರಾಮೃತ"[47]

ಗೆದ್ದೆಯೇಶ್ವರ ನಾರಸಿಂಹನ ಮಗನಾದ ಕೃಷ್ಣದೇವ ಮಹಾರಾಯನು ಹೊಸವೂರ ಮಹಾಮಾಯೆಯ ಅಮೃತಪಡಿ ನೈವೇದ್ಯಕ್ಕೆ ಪಡೆದ ನಾಡೊಳಗಣ ಕೊಪಣ ವೇಂಠೆಯಕೆ ಸೇರಿದ ಕಿಡಿದಾಳ ಗ್ರಾಮವನ್ನು ದಾನ ನೀಡಿರುವ ಉಲ್ಲೇಖ ಶಾಸನದಲ್ಲಿದೆ.

ಕ್ರಿ.ಶ. 1238ರ ಶಾಸನ[48]ವು ಯಾದವ ನಾರಾಯಣ ಭುಜಭಳ ಚಕ್ರವರ್ತಿ ಸಿಂಗಣದೇವನ 45ನೆಯ ವರ್ಷದಂದು ಅವನ ಮಹಾಪ್ರಧಾನ ಬಾಹತ್ತರನಿ ಯೋಗಾಧಿಪತಿ ಸರ್ವಾಧಿಕಾರಿ ಮಾಸುದೇವನ ಶ್ರೀಕರಣದ ವಾಮನ ದೇವನಾಯ್ಕನು ತನ್ನ ಪುತ್ರೋತ್ಸವದ ಸಂದರ್ಭದಲ್ಲಿ ಕಿಸುಕಾಡು-70ಕ್ಕೆ ಸೇರಿದ್ದ ಸಂಕಲೂರ ಸಂಕಲಾದೇವಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನಿಂದ ದೇವಗಿರಿ ಯಾದವರ ಸಿಂಘಣನವರೆಗೆ ಕ್ರಿ.ಶ.1107-1132 ಬೇರೆ ಬೇರೆ ಕಾಲದಲ್ಲಿ ಸರಸ್ವತಿ ದೇವರಿಗೆ ಗಂಗಾಧರಯ್ಯ ನಾಯಕನ ಮಗ ಈಶ್ವರಯ್ಯನಾಯಕ, ಇವನ ತಮ್ಮ ಶ್ರೀಪತಿನಾಯಕನು ಅಗ್ರಹಾರ ಕುಕ್ಕನೂರ ಸಾಸಿರ್ವ್ವರ ಕೈಯಲಿ ಸರ್ವನಮಸ್ಯವಾಗಿ

ಪಡೆದು ಮೂಲಸ್ಥಾನ ದೇವರ ಶ್ರೀಖಣ್ಡಕ್ಕೆ 18 ಮತ್ತರು 450 ಕಮ್ಮ ಭೂಮಿಯನ್ನು ಶ್ರೀಸರಸ್ವತಿ ದೇವರ ಅಂಗಭೋಗಕ್ಕೆ, ನಿವೇದ್ಯಕ್ಕೆ 7 ಮತ್ತರು ಭೂಮಿಯನ್ನು ದಾನ ಮಾಡಿದ್ದಾನೆ ಎಂದು ಕುಕನೂರಿನ ಒಂದು ಶಾಸನ[49]ದಲ್ಲಿ ವಿವರಿಸಿದೆ. ಕುಕನೂರಿನ ಅಗ್ರಹಾರವು ನಷ್ಟವಾಗಿ ಹೋಗಿತ್ತು. ಅದರ ಜೀರ್ಣೋದ್ಧಾರ ಮಾಡಿ ಕುಕನೂರ ಅತ್ಯಂತ ಪ್ರಸಿದ್ಧ ಗ್ರಾಮದೇವತೆಯಾದ ಮಹಾಮಾಯೆ ಅಂಗ-ರಂಗಭೋಗಕ್ಕೆಂದು ದೇವಾಲಯಗಳ ಜೀರ್ಣೋದ್ಧಾರಕ್ಕೆ ಮಹಾನೈವೇದ್ಯ, ನಂದಾದೀಪ, ಚೈತ್ರ, ಪವಿತ್ರ, ಪರ್ವ, ತಿಥಿಗಳು ಮೊದಲಾದ ನಿತ್ಯ ನೈಮಿತ್ತಿಕ ಚತುರ್ವೇದದ ಅಧ್ಯಯನಕ್ಕಾಗಿ ಕುಕನೂರನ್ನು ಸಮರ್ಪಿಸುತ್ತಾನೆ.[50]

ಕ್ರಿ.ಶ.1561ರಲ್ಲಿ ಶ್ರೀ ಆದ್ಯ ಶಕ್ತಿಯಾದ ಶ್ರೀಜೇಷ್ಠಾಮಹಾಲಕ್ಷ್ಮಿದೇವರ ದೇವಾಲಯದ ಬಾಗಿಲನ್ನು ಮುಸಲ್ಮಾನರು ಸುಟ್ಟು ನಾಶ ಮಾಡುತ್ತಾರೆ. ಈ ಬಾಗಿಲನ್ನು ದೇವಸ್ಥಾನದ ಆಚಾರ್ಯ ಕುಕನೂರಗೌಡ ಭಟ್ಟಾಚಾರ್ಯನ ಮೊಮ್ಮಕ್ಕಳು ಭಟ್ಟಪ್ಪಗೌಡ, ಮಹಾದೇವಗೌಡ, ಅವನ ಮಕ್ಕಳು ಬೆನಕರಸಗೌಡ, ಅವನ ತಮ್ಮ ದೇವರಸಗೌಡನ ಮಕ್ಕಳು ಕುಕ್ಕನೂರ ಸೀಮೆಯ ದೇಸಾಯಿ ಗೌಡನು ನಾಡಗೌಡಿಕೆಯನ್ನು ಮಾಡುತ್ತಿದ್ದಾಗ ಜೀರ್ಣೋದ್ಧಾರ ಮಾಡಿಸುತ್ತಾರೆ. ಈ ಕಾರ್ಯವನ್ನು ಮಾಡಿದವನು ಸಂಗನಾಳಿನ ಬಡಗಿ ಬಸವೋಜನ ಮಗ ಗಣೋಜನು[51] ಎಂದು ಶಾಸನದಲ್ಲಿ ಉಲ್ಲೇಖಿಸಿದೆ.

ಕುಕನೂರು ಕಲ್ಯಾಣ ಚಾಲುಕ್ಯರ ಪ್ರಮುಖ ಕೇಂದ್ರವಾಗಿದ್ದು, ಕುಕನೂರಿನ ಮಹಾಮಾಯೆ ದೇವಾಲಯದ ಹತ್ತಿರ ಇರುವ ಶಾಸನ[52]ವು ಕಾವ್ಯಮಯವಾಗಿದ್ದು, ಈ ಶಾಸನದಲ್ಲಿ ಹಲವಾರು ದೇವತೆಗಳನ್ನು ಹೆಸರಿಸಿದ್ದು, ಒಂಬತ್ತು ಶಿವಲಿಂಗಗಳು ಶಕ್ತಿಪೀಠ ಇವೆಲ್ಲಾ ಸೇರಿ ಅಂಬಿಕೆ, ಪುರಾಣಿದೇವಿ, ಚಾಮುಂಡಿದೇವಿ, ಮಹಾಮಾಯೆ, ತಡಗಾದಂಬಿಕೆ, ವಸಂತಾದೇವಿ, ಶಾಂತಿ, ಕಾಲ್ಯಂಬೆ, ಗುಪ್ತಚಾಮುಂಡಿ ಈ ದೇವಿಯರು ಇಲ್ಲಿ ನೆಲೆಗೊಂಡಿದ್ದರು. ಇವರಲ್ಲಿ ಅತ್ಯಂತ ದೊಡ್ಡ ದೇವತೆಯಾದ ಜೇಷ್ಠಾದೇವಿಯೂ (ಮಹಾಮಾಯೆ) ಕೂಡ ಇಲ್ಲಿ ನೆಲೆಸಿದ್ದಳು. ಪೂರ್ವಕ್ಕೆ ಬ್ರಹ್ಮೇಶ್ವರ, ದಕ್ಷಿಣಕ್ಕೆ ಗಣೇಶ್ವರ, ಪಶ್ಚಿಮಕ್ಕೆ ಮೂಲೇಶ್ವರ, ಉತ್ತರಕ್ಕೆ ಮಲ್ಲಿಕಾರ್ಜುನ ಇವರ ಮಧ್ಯದಲ್ಲಿ ಜೇಷ್ಠಾದೇವಿ ನೆಲೆಗೊಂಡಿದ್ದಾಳೆ. ಯಾವ ಯಾವ ದೇವತೆಗಳು ಯಾವ ದಿಕ್ಕಿಗೆ ಏಕೆ ನೆಲೆಗೊಂಡಿದ್ದಾರೆಂಬುದನ್ನು ಜೇಷ್ಠಾದೇವಿಯ ಮಹಿಮೆಯನ್ನು ವಿವರಿಸಿದ್ದಾರೆ. ಶಾಸನವು ಮುಂದೆ ಒಂಬತ್ತು ಜೇಷ್ಠಾದೇವಿಯರನ್ನು ಹೆಸರಿಸಿ ಅವರು ಮಾಡಿದ ಕಾರ್ಯವನ್ನು ತಿಳಿಸಿದೆ.

ಈ ಜೇಷ್ಠಾದೇವಿಯ ಸ್ಥಾನಾಚಾರ್ಯನಾಗಿ ನವಲಿಂಗದ ಸೋಮೇಶ್ವರದೇವರ ನವ ಮಠದ ಜವಾಬ್ದಾರಿಯನ್ನಲ್ಲದೆ ಇನ್ನೂ ಅನೇಕ ದೇವಾಲಯಗಳ ಕೆಲಸವನ್ನು ಸ್ಥಾನಾಚಾರ್ಯರು ವಹಿಸಿಕೊಂಡಿದ್ದರು. ಕಳೇಶ್ವರ ಯತಿಯು ಮಹಾಮಂಡಳೇಶ್ವರ

ಸಿಂಧರಾಜ ಪೆರ್ಮಾಡಿಗೂ ಅವನ ಮಂಡಳೇಶ್ವರ ಚಾವುಂಡನಿಗೂ ಗುರುವಾಗಿದ್ದ. ಇವನು ಸೂಂಡಿಯ ನಗರೇಶ್ವರ ಕಾಳಾಮುಖಾನ್ವಯಕ್ಕೆ ಸೇರಿದ್ದ. ಇವನ ಗುರು ಯೋಗೀಶ್ವರ, ಇವನ ಗುರು ಸೋಮೇಶ್ವರನಾಗಿದ್ದ. ಈ 'ಕಳೇಶ್ವರನು ಶಾಂತ ಮೂರ್ತಿಯಾಗಿದ್ದು ಶೈವಸಿದ್ಧಾಂತವನ್ನು ಸ್ವೀಕರಿಸಿದನಂತೆ. ಅನೇಕ ಸಿದ್ಧಾಂತಗಳಲ್ಲಿ ಈತ ಪರಿಣಿತನಾಗಿದ್ದರಿಂದ ಇವನಿಗೆ 'ಸಿದ್ದಾಂತ ಕಳೇಶ್ವರ' ಎಂಬ ಹೆಸರಿತ್ತು. ಈತ ಮಂತ್ರ, ತಂತ್ರಗಳಲ್ಲಿಯೂ ಪ್ರವೀಣನಾಗಿದ್ದ. ಈ ಯತಿಯು ಕಾಳಿಕಾ ಜೇಷ್ಠಾದೇವಿಯ ಆರಾಧಕನಾಗಿದ್ದ.'[53] ಜೇಷ್ಠಾದೇವಿಗೆ ದಾನವನ್ನು 'ರಾಜಗುರು ಸಿದ್ಧಾಂತಿ ಕಳೇಶ್ವರ ದೇವಾಚಾರ್ಯನ ಪಾದವನ್ನು ತೊಳೆದು ಜೇಷ್ಠಾದೇವಿಯ ಮತ್ತು ನವಲಿಂಗಾಧೀಶ್ವರ ಸೋಮೇಶ್ವರ ದೇವರ ನಿತ್ಯ ನೈಮಿತ್ತಿಕ ಪೂಜೆ, ತಪೋಧನ, ಆಹಾರ, ಅಲ್ಲಿಯ ದೇವಾಲಯಗಳ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ದಾನವನ್ನು ಕೊಡುತ್ತಾನೆ.'[54]

ಕ್ರಿ.ಶ.1183ರ ತಾಮ್ರಶಾಸನ[55]ವೊಂದು 'ಸಿಂಘಣದೇವನು ದೈವ ಭೀರುಗಾಗಿದ್ದು ಕುಕ್ಕನೂರಿನ ಜೇಷ್ಠಾದೇವಿಗೆ ಬೆಳ್ವೊಲ–300ರಲ್ಲಿದ್ದ ಕುಕ್ಕನೂರನ್ನು ಎಲ್ಲಾ ರೀತಿಯ ತೆರಿಗೆಗಳಿಂದ ಮುಕ್ತಗೊಳಿಸಿ ರಾಜನಾಗಲಿ, ಅಧಿಕಾರಿಯಾಗಲಿ ಪ್ರವೇಶಿಸದಂತೆ ಊರಿನ ಸಾವಿರ ಮಹಾಜನರ ಕೈಲಿ ಅಧಿಕಾರವನ್ನು ನೀಡುತ್ತಾನೆ. ದೇವಾಲಯಕ್ಕೆ 5 ಮತ್ತರು ಭೂಮಿಯನ್ನು ಮತ್ತು ಒಂದು ಮನೆಯನ್ನು' ದಿವಾಕರ ದಂಡನಾಯಕನು ನೀಡುತ್ತಾನೆ.

ಕ್ರಿ.ಶ.1172ರಲ್ಲಿ[56] ಕಳಚೂರಿ ಚಕ್ರವರ್ತಿ 'ರಾಯಮುರಾರಿ ಸೋವಿದೇವನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಕೈಕೆಳಗೆ ದಾಸಿಗ ಮಂಡಳೇಶ್ವರನು ಕಿಸುಕಾಡು–70ನ್ನು ಆಳುತ್ತಿದ್ದ. ಮುಂದೆ ಇವನ ವಂಶಸ್ಥರಾದ ಬಮ್ಮಭೂಪನು ಆಳಿದ. ಇವನ ಮಗ ಚಮುಂಡ, ಇವನ ಪತ್ನಿ ಸತ್ತಿಯಾದೇವಿ, ಇವರ ಮಗನಾಗಿ ಸಿಂಧಗೋವಿಂದ ಉದಯಿಸಿದ. ಕಿಸುಕಾಡುನಾಡಿನಲ್ಲಿ ಬೂಚದಂಡನಾಥ. ಇವನ ಪತ್ನಿ ಸಿರಿಯಾದೇವಿ ಈ ಬೂಚನ ತಮ್ಮ ಮಾಚಣ ದಂಡನಾಯಕ. ಬೂಚಮದಂಡನಾಯಕನು ಕೆಲ್ಲಿಂಗೆರೆಯಲ್ಲಿ ಲಕ್ಷ್ಮಿನಾರಾಯಣ ದೇವಾಲಯ' ವನ್ನು ಕಟ್ಟಿಸುತ್ತಾನೆ. ಈ ದೇವಾಲಯಕ್ಕೆ ಲಕ್ಷ್ಮೀದೇವ ದಂಡನಾಯಕನ ಅನುಮತಿ ಪಡೆದು ಭೂಮಿಯನ್ನು ಕ್ರಮವಾಗಿ ಪಡೆದು ದೇವಾಲಯಕ್ಕೆ ದಾನ ನೀಡುತ್ತಾನೆ.

'ತೆಲುಗು ಶಾಸನ[57]ದಲ್ಲಿ ಕ್ರಿ.ಶ.1879ನ್ನು ನಂದ್ಯಾಲ ಲಕ್ಷ್ಮೀದೇವಮ್ಮನನ್ನು ಹೆಸರಿಸುತ್ತದೆ. ಹನುಮನಹಳ್ಳಿ ಎಂಬ ಗ್ರಾಮದಲ್ಲಿ ಕ್ರಿ.ಶ.16ನೇ ಶತಮಾನ[58]ದಲ್ಲಿ 'ಅಂಜನಾದೇವಿ ಎಂಬ ಗ್ರಾಮದೇವತೆ ಇದ್ದು ಆ ದೇವತೆಗೆ ರಾಮಪುರದಲ್ಲಿ ಹೊಲ ಮತ್ತು ಗದ್ದೆಯನ್ನು ಆನೆಗೊಂದಿಯ ಹನಿಯ ನಾಗಣ್ಣನು' ದಾನವನ್ನು ನೀಡುತ್ತಾನೆ.

ಕನಕಗಿರಿಯಲ್ಲಿ ಕನಕಾಚಲ ದೇವಾಲಯದ ಎಡಭಾಗದಲ್ಲಿ "ಶ್ರೀ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯವಿದ್ದು ಈ ದೇವಾಲಯಕ್ಕೆ ಹಲವಾರು ರೀತಿಯಲ್ಲಿ ದಾನ

ನೀಡಿದ್ದನ್ನು ಕನಕಗಿರಿಯ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರದಲ್ಲಿರುವ ಶಾಸನ ತಿಳಿಸುತ್ತದೆ."[59]

ಹೀಗೆ ಶಾಸನಗಳಲ್ಲಿ ಉಕ್ತವಾದ ಹೆಣ್ಣುದೇವಾಲಯಗಳು ಅಥವಾ ಗ್ರಾಮದೇವತೆಗಳು ಗ್ರಾಮದ ಉದ್ಧಾರಕ್ಕಾಗಿ ಮತ್ತು ದೇವಾಲಯದ ಉದ್ಧಾರಕ್ಕಾಗಿ ಹಲವಾರು ಬಗೆಯ ದಾನ ನೀಡಿರುವುದನ್ನು ನಾವು ಕಾಣಬಹುದಾಗಿದೆ. ಕೆಲವು ಗ್ರಾಮದೇವತೆಗಳು ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿವೆ. ಒಟ್ಟಾರೆಯಾಗಿ ಜಿಲ್ಲೆಯ ದೇವಾಲಯಗಳ ಸಂಸ್ಕೃತಿ ಮೇರು ಪರ್ವತ ಲ್ಲಿದಂತಿದ್ದು. ಧಾರ್ಮಿಕ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡಿವೆ.

**ಅಡಿಟಿಪ್ಪಣಿಗಳು** :

1. ಕರ್ನಾಟಕ ದೇವಾಲಯಗಳು, ಕೊಪ್ಪಳ ಜಿಲ್ಲೆ: ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಪುಟ:15.
2. ಸಿ.ನಾಗಭೂಷಣ: ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪುಟ:115.
3. ಅದೇ, ಪುಟ:116.
4. ಕರ್ನಾಟಕ ದೇವಾಲಯಗಳ ಕೋಶ ಕೊಪ್ಪಳ ಜಿಲ್ಲೆ: ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಪುಟ:16.
5. ಅದೇ, ಪುಟ:18.
6. ಅದೇ, ಪುಟ:18.
7. ಸಿ.ನಾಗಭೂಷಣ: ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪುಟ:116.
8. ಕರ್ನಾಟಕ ದೇವಾಲಯಗಳ ಕೋಶ ಕೊಪ್ಪಳ ಜಿಲ್ಲೆ: ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಪುಟ:24.
9. ಅದೇ.
10. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–62, ಪುಟ:56.
11. ಅದೇ, ಗಂ–2, ಪುಟ:315
12. ಅದೇ, ಕೊ–3, ಪುಟ:6.
13. ಅದೇ, ಕೊ–24, ಪುಟ:30.
14. ಅದೇ, ಕೊ–148, ಪುಟ:146.
15. ಅದೇ, ಯ–29, ಪುಟ:185.
16. ಅದೇ, ಯ–40, ಪುಟ:205.
17. ಅದೇ, ಯ–41, ಪುಟ:210.

18. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2, ಯ-48, ಪುಟ:219.
19. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:196.
20. ಅದೇ, ಪುಟ:196.
21. ಅದೇ, ಪುಟ:197.
22. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:199.
23. ಕರ್ನಾಟಕ ದೇವಾಲಯಗಳ ಕೋಶ ಕೊಪ್ಪಳ ಜಿಲ್ಲೆ: ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಪುಟ:31.
24. ಅದೇ, ಪುಟ:30
25. ಅದೇ.
26. ಶಾಂತಿನಾಥ ದಿಬ್ಬದ: ಜೈನ ಸಂಸ್ಕೃತಿ ಸಮೀಕ್ಷೆ, ಪುಟ:87.
27. ಅದೇ, ಪುಟ:86.
28. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2, ಕೊಪ್ಪಳ ಜಿಲ್ಲೆ, ಕೊ-62, ಪುಟ:56.
29. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:96.
30. ಅದೇ, ಪುಟ:97.
31. ಅದೇ, ಪುಟ:97.
32. ಚಂದ್ರಕೊಡೆ, ಹಂಪನಾ: ಶಾಸನಗಳಲ್ಲಿ ಗಂಗರ ಪ್ರಾಚೀನ ಬಸದಿಗಳು, ಪುಟ:83.
33. ಕೆ.ಶಾರದಾ: ಕರ್ನಾಟಕದ ಸಂಸ್ಕೃತಿಗೆ ಜೈನಾಚಾರ್ಯರ ಕೊಡುಗೆ (ಅಪ್ರಕಟಿತ ಪಿಹೆಚ್.ಡಿ.ಮಹಾಪ್ರಬಂಧ).
34. South Indian Inscriptions: ಸಂಪುಟ-9-1. ನಂ.117, ಕ್ರಿ.ಶ.977.
35. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-3 (ಭಾಗ-1), ನಂ.15, ಬಳ್ಳಾರಿ ಜಿಲ್ಲೆ, ಪುಟ:267.
36. South Indian Inscriptions: ಸಂಪುಟ-9, ನಂ.107, ನಂ.115.
37. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2, ಕೊಪ್ಪಳ ಜಿಲ್ಲೆ, ಕೊ-34, ಪುಟ:40.
38. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2, ಕೊ-62, ಪುಟ:56.

39. ಕೆ.ಶಾರದಾ: ಕರ್ನಾಟಕ ಸಂಸ್ಕೃತಿಗೆ ಜೈನಾಚಾರ್ಯರ ಕೊಡುಗೆ. (ಅಪ್ರಕಟಿತ ಪಿಹೆಚ್.ಡಿ.ಮಹಾಪ್ರಬಂಧ)
40. ಚಂದ್ರಶೇಖರ್ ನಾರಾಣಾಪುರ: ಕರ್ನಾಟಕದ ವೀರಶೈವ ಮಠಗಳು, ಪುಟ:10
41. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–6, ಪುಟ:13.
42. ಅದೇ, ಕೊ–8, ಪುಟ:17.
43. ಅದೇ, ಗಂ–3, ಪುಟ:316.
44. ಅದೇ, ಗಂ–104, ಪುಟ:386.
45. ಅದೇ, ಗಂ–60, ಪುಟ:358.
46. ಅದೇ, ಯ–52, ಪುಟ:229.
47. ಅದೇ, ಕೊ–138, ಪುಟ:134.
48. ಅದೇ, ಯ–28, ಪುಟ:183.
49. ಅದೇ, ಯ–38, ಪುಟ:199.
50. ಅದೇ, ಯ–48, ಪುಟ:219.
51. ಅದೇ, ಯ–49, ಪುಟ:222.
52. ಅದೇ, ಯ–52, ಪುಟ:229.
53. ಅದೇ, ಯ–52, ಪುಟ:229.
54. ಅದೇ, ಯ–52, ಪುಟ:230.
55. ಅದೇ, ಯ–69, ಪುಟ:269–270.
56. ಅದೇ, ಕು–21, ಪುಟ:298.
57. ಅದೇ, ಗಂ–23, ಪುಟ:337.
58. ಅದೇ, ಗಂ–63, ಪುಟ:359.
59. ಅದೇ, ಗಂ–80, ಪುಟ:370.

**ಅಧ್ಯಾಯ–9**

# ಸಾಮಾಜಿಕ ವ್ಯವಸ್ಥೆ

ಪ್ರತಿಯೊಂದು ಸಮಾಜವೂ ತನ್ನದೇ ಆದ ಒಂದು ಸಂಸ್ಕೃತಿಯನ್ನು ಹೊಂದಿರುತ್ತದೆ. ಸಮಾಜ ಜೀವನವು ಒಂದು ವ್ಯವಸ್ಥೆಯ ನೆಲೆಯಲ್ಲಿಯೇ ಮುಂದುವರೆದಾಗ ಸಮಾಜವು ಮೌಲ್ಯಯುತವಾಗಿರುತ್ತದೆ ಎಂಬ ವಿಶ್ವಾಸ ಹೊಂದಿರುತ್ತದೆ. ಸಾಮಾಜಿಕ ವ್ಯವಸ್ಥೆಯ ಒಂದು ಚೌಕಟ್ಟು ಇದರ ಪ್ರಧಾನ ನೆಲೆ. ಏಕೆಂದರೆ ಸಾಮಾಜಿಕ ಸಂಬಂಧಗಳು ಮಾನವನ ಒಟ್ಟಾರೆ ಜೀವನಕ್ಕೆ ಸಂಬಂಧಿಸಿರುತ್ತವೆ. ಆಚಾರ–ವಿಚಾರಗಳು ಸುಸಂಸ್ಕೃತ ಜೀವನದ ಸಾಮಾಜೀಕರಣ ಸಮಾಜದಲ್ಲಿಯೇ ಸಾಧ್ಯವಾಗುತ್ತದೆ. ಸಮಾಜವು ಮಾನವರೆಲ್ಲರನ್ನು ಒಟ್ಟುಗೂಡಿಸಿ ಸಮತೆಯ ಆಧಾರದ ಮೇಲೆ ನಿಲ್ಲಿಸುವ ನಿರಂತರ ಪ್ರಯತ್ನ ಮಾಡುತ್ತದೆ. "ಪ್ರಾಚೀನ ಕರ್ನಾಟಕದಲ್ಲಿ ಸಾಮಾಜಿಕ ಪ್ರಜ್ಞೆಯು ಎಚ್ಚತ್ತಿದ್ದಿ ತೆಂಬುದನ್ನೂ, ವ್ಯಕ್ತಿಯು ತನ್ನಷ್ಟಕ್ಕೆ ತಾನು ಬಾಳದೆ ಇತರರಿಗಾಗಿಯೂ ಬಾಳಬೇಕೆಂಬ ಅರಿವು ಅವನಿಗೆ ಸಂಪೂರ್ಣವಾಗಿ ಇದ್ದಿತ್ತೆಂಬುದನ್ನು ತೋರಿಸುವುದೇ ಆಗಿದೆ."[1] ಈ ಆದರ್ಶವು ಪ್ರಾಚೀನ ಕರ್ನಾಟಕದಿಂದಲೂ ಮುಂದುವರೆದುಕೊಂಡು ಬಂದಿದೆ. ಭೌತಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪುಗೊಳ್ಳುವ ಸಮಾಜ ಮನುಕುಲದ ಸಾಂಸ್ಕೃತಿಕ ವಿಕಾಸಕ್ಕೆ ಅಗತ್ಯವಾದ ಬುನಾದಿಯನ್ನು ಕಲ್ಪಿಸುತ್ತದೆ.

ಒಂದು ರಾಜ್ಯವು ತನ್ನ ನಿರ್ದಿಷ್ಟ ಎಲ್ಲೆಯಲ್ಲಿ ವಾಸಿಸುವ ಜನರ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿರುತ್ತದೆ. ಮಾನವ ನಿರ್ಮಿತಿ ಸಂಸ್ಥೆಯಾದ ಸಮಾಜದ ವಿಧಿ ವಿಧಾನಗಳು ಮೇಲಿನ ನೋಟಕ್ಕೆ ಸರಳ ಮತ್ತು ಅತ್ಯಂತ ಸಹಜ ಎನಿಸಿದ್ದರೂ ಅದರೊಳಗಿನ ಅಧ್ಯಯನಕ್ಕೆ ಆಳವಾಗಿ ಇಳಿದಂತೆಲ್ಲಾ ಒಂದೊಂದೇ ಪದರಗಳು ತೆರೆದುಕೊಳ್ಳುತ್ತಾ ತನ್ನ ಜಟಿಲವಾದ ಸಂಕೀರ್ಣ ವ್ಯವಸ್ಥೆಯನ್ನು ಬಿಟ್ಟು ಕೊಡುತ್ತದೆ. ಪ್ರತಿಯೊಂದು ಸಮಾಜದಲ್ಲಿ ಹಲವಾರು ಸಂಘ–ಸಂಸ್ಥೆಗಳು ವ್ಯವಸ್ಥಿತವಾಗಿ ರಚಿತವಾಗಿರುತ್ತವೆ. ಇಂತಹ ಸಂಘ–ಸಂಸ್ಥೆಗಳು ವೈವಿಧ್ಯಮಯವಾದ ಸಂಕೀರ್ಣವಾದ ಸಮಾಜವನ್ನು ನಿಯಂತ್ರಿಸುವ ಅಧಿಕಾರವನ್ನು ಪಡೆದಿರುತ್ತವೆ.

ಮಾನವೀಯ ಮೌಲ್ಯಗಳನ್ನು ಅನುಷ್ಠಾನಗೊಳಿಸಿ ಮಾನವ ಮಾನವನನ್ನು ಹತ್ತಿರ ತಂದು ಜನತೆಯನ್ನು ಜೊತೆಗೂಡಿಸುವ ಪ್ರಮುಖ ತಾಣ ಸಮಾಜವೆನಿಸಿದೆ. ತನ್ನೊಳಗಿನ ಸದಸ್ಯರ ಬೇಕು ಬೇಡ ಮುಂತಾದ ಅಗತ್ಯಗಳನ್ನು ಕುಟುಂಬ ನೋಡಿಕೊಳ್ಳುವಂತೆ ಇಂತಹ ಹಲವು ಕುಟುಂಬಗಳ ಅಗತ್ಯಗಳನ್ನು ನಿಯಂತ್ರಿಸುವ ಶಕ್ತಿಯಾಗಿ ಸಮಾಜ ಸ್ಥಾನ ಪಡೆದಿದೆ. ಹೀಗೆ ವ್ಯಕ್ತಿಯು ರೂಪಿಸಿ ನಿರ್ಮಿಸಿ

ಬೆಳೆಸಿಕೊಂಡಿರುವ ಸಾಮಾಜಿಕ ಬಾಂಧವ್ಯಗಳ ರೂಪಗಳು, ವೈವಿಧ್ಯಗಳು, ರೂಢಿ, ಪರಂಪರೆ ಹಾಗೂ ಆಚಾರ–ವಿಚಾರಗಳ ನಡುವಣ ಸಂಬಂಧವನ್ನು ಸಮಾಜ ಹೊಂದಿದೆ. ಈ ರೀತಿಯಾದ ಹಿಂದಿನ ಜನಜೀವನದ ಬಗ್ಗೆ ಬೆಳಕನ್ನು ಬೀರಬಲ್ಲ ಆಧಾರಗಳೆಂದರೆ ಶಾಸನಗಳಾಗಿವೆ. ಈ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ.

**ಜಾತಿ ವ್ಯವಸ್ಥೆ :**

ಪ್ರಾಚೀನ ಹಾಗೂ ಆಧುನಿಕ ಭಾರತೀಯ ಸಮಾಜದಲ್ಲಿ ಜಾತಿ ಪದ್ಧತಿಯು ಕಠಿಣ ರೂಪದಲ್ಲಿ ಜನ್ಮ ತಾಳಿದ್ದು ಸಾಮಾಜಿಕ ಸ್ಥರ ವಿನ್ಯಾಸದ ಒಂದು ವಿಶಿಷ್ಟ ಬಗೆಯಾಗಿದೆ. ಜಾತಿ ವ್ಯವಸ್ಥೆಯು ಸಾಮಾನ್ಯವಾಗಿ ಮಾನವ ಸಮಾಜದಲ್ಲಿ ಆನುವಂಶೀಯವಾಗಿ ಬೆಳೆದು ಬಂದಿದೆ. ಭಾರತೀಯ ಹಿಂದೂ ಸಮಾಜವು ಅಸಂಖ್ಯಾತ ಜಾತಿ–ಉಪಜಾತಿಗಳಿಂದ ವಿಭಾಗಗೊಂಡು ಜೀವನದ ಎಲ್ಲ ರಂಗಗಳಲ್ಲಿಯೂ ಜಾತಿ ಹಾಸುಹೊಕ್ಕಾಗಿ ಪರಿಣಮಿಸುವಂತಾಯಿತು. ಜಾತಿ ವ್ಯವಸ್ಥೆಯಲ್ಲಿ ವ್ಯಕ್ತಿಯ ಸದಸ್ಯತ್ವವು ಹುಟ್ಟಿನಿಂದ ನಿರ್ಧರಿತವಾಗಿರುತ್ತದೆ. ವ್ಯಕ್ತಿಯ ಹುಟ್ಟು ಆತನ ಜಾತಿಯನ್ನು ಜೀವನ ಪರ್ಯಂತವಾಗಿ ನಿಶ್ಚಯಗೊಳಿಸುತ್ತದೆ. ಸಮಾಜದಲ್ಲಿ ಬದುಕುವ ಅನೇಕ ಬಗೆಯ ಜನರನ್ನು ಪ್ರತ್ಯೇಕವಾಗಿ ಗುರುತಿಸುವ ಸಲುವಾಗಿ ಬಹುಮುಖ್ಯವಾಗಿ ಈ ಜಾತಿ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದಿದೆ. ಈ ವ್ಯವಸ್ಥೆಯು ವ್ಯಾಪಕವಾಗಿ ಹರಡಿರುವ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ರೂಪುಗೊಂಡಿರುವ ಒಂದು ಜಟಿಲ ಪದ್ಧತಿಯಾಗಿದ್ದು ಇದು ಭಾರತದಲ್ಲಿ ಪಡೆದಿರುವ ಖಚಿತವಾದ ಮತ್ತು ನಿಖರವಾದ ಸ್ವರೂಪವನ್ನು ಪ್ರಪಂಚದ ಇನ್ನೆಲ್ಲಿಯೂ ಪಡೆದಿಲ್ಲದಿರುವುದು ಗಮನಾರ್ಹವಾಗಿದೆ.

ಜಾತಿ ಪದ್ಧತಿಯು ಕ್ರಮಬದ್ಧವಾದ ಸಾಮಾಜಿಕ ಏಣಿಶ್ರೇಣಿಯಾಗಿದ್ದು ಈ ಜಾತಿ ವ್ಯವಸ್ಥೆಯನ್ನು ಚತುವರ್ಣಗಳಿಂದ ವಿಭಾಗಿಸಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳನ್ನಾಗಿ ವಿಭಾಗಿಸಲಾಗಿತ್ತು. "ಋಗ್ವೇದದ ಪುರುಷಸೂಕ್ತದಲ್ಲಿ (ಋಗ್ವೇದ ಥ 90,12) ಬ್ರಾಹ್ಮಣನು ಪುರುಷನ ಮುಖದಿಂದಲೂ, ಕ್ಷತ್ರಿಯನು ಬಾಹುವಿನಿಂದಲೂ, ವೈಶ್ಯನು ತೊಡೆಯಿಂದಲೂ, ಶೂದ್ರನು ಪಾದಗಳಿಂದಲೂ ಹುಟ್ಟಿದನೆಂದು ಹೇಳಿದೆ."[2] ಈ ಜಾತಿ ಪದ್ಧತಿಯ ಆಧಾರದ ಮೇಲೆಯೇ ಅವರವರ ಸಂಸ್ಕೃತಿ, ಆಚಾರ–ವಿಚಾರಗಳು, ಅಂತಸ್ತು, ಲೋಕರೂಢಿಗಳು ಮತ್ತು ಬಹುಮುಖ್ಯವಾಗಿ ಕಾರ್ಯಗಳು ನಿರ್ಧರಿತವಾಗುತ್ತಿದ್ದವು. ಒಂದು ಜಾತಿಯಲ್ಲಿ ಹುಟ್ಟಿದ ವ್ಯಕ್ತಿ ಅದೇ ಜಾತಿಗೆ ಸಂಬಂಧಪಟ್ಟ ಸಂಸ್ಕೃತಿ, ಅಂತಸ್ತು, ಕಾಯಕಗಳನ್ನು ಮಾಡಬೇಕಾಗುತ್ತಿತ್ತೇ ಹೊರತು ಬೇರೆ ಜಾತಿಗೆ ಸೇರಿದ ಕಾಯಕ, ಸಂಸ್ಕೃತಿಗಳನ್ನು ಆಚರಿಸುವಂತಿರಲಿಲ್ಲ. ಇವೆಲ್ಲವೂ ತಮ್ಮ ತಮ್ಮ ಜಾತಿ ಉಪಜಾತಿಗೆ

ಸಂಬಂಧಿಸಿದವರನ್ನು ಒಟ್ಟು ಗೂಡಿಸುವ ವಿಶೇಷ ಶಕ್ತಿಗಳಾಗಿ ಕೆಲಸ ಮಾಡುತ್ತಿದ್ದವು. ನಿರ್ದಿಷ್ಟ ಜಾತಿ ಉಪಜಾತಿಗೆ ಸಂಬಂಧಿಸಿದ ಕಟ್ಟುಪಾಡುಗಳನ್ನು ಅನುಸರಿಸಿ ವರ್ತಿಸುವವರಿಗೆ ಹೆಚ್ಚಿನ ಸಾಮಾಜಿಕ ಮಾನ್ಯತೆ ಇರುತ್ತಿತ್ತು. ಅದು ತನ್ನದೇ ಆದ ಕುಲಕಸುಬನ್ನು ಹೊಂದಿರುತ್ತಿದ್ದರಿಂದ ಅನ್ಯಜಾತಿಯವರು ಆ ಕಸುಬನ್ನು ಅನುಸರಿಸದಂತೆ ತಡೆಯಲಾಗುತ್ತಿತ್ತು. ಬ್ರಾಹ್ಮಣರು ವೇದಾಧ್ಯಯನ, ಪೌರೋಹಿತ್ಯ ಯಜ್ಞಯಾಗಾದಿಗಳನ್ನು ಮಾಡುವುದು, ಕ್ಷತ್ರಿಯರು ರಕ್ಷಣಾಕಾರ್ಯ ಮತ್ತು ರಾಜ್ಯಾಡಳಿತ ಮಾಡುವುದು, ವೈಶ್ಯರು ಕೃಷಿ, ಪಶುಪಾಲನೆ ಹಾಗೂ ವ್ಯಾಪಾರಮಾಡುವುದು, ಶೂದ್ರರು ಈ ಮೂರು ಮೇಲ್ವರ್ಗದವರ ಸೇವೆಮಾಡುವುದಾಗಿತ್ತು. ಈ ವ್ಯವಸ್ಥೆಯು ವ್ಯಾಪಕವಾಗಿ ಹರಡಿರುವ ಹಾಗೂ ಕ್ಲಿಷ್ಟಕರವಾದ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ರೂಪುಗೊಂಡಿರುವ ಒಂದು ಜಟಿಲ ಪದ್ಧತಿಯಾಗಿತ್ತು. ಆದ್ದರಿಂದ ಜಾತಿಯು ಬಹುಮಟ್ಟಿನ ಜಡ ಸ್ವಭಾವದಿಂದಾಗಿ ಅದು ಎಂದೆಂದಿಗೂ ಬದಲಾಗದ ಒಂದು ಸಂಸ್ಥೆ ಎಂದು ಪರಿಗಣಿಸಲಾಗಿತ್ತು.

ಕೊಪ್ಪಳ ಜಿಲ್ಲೆಯ ಅರಸರ ಆಡಳಿತದ ಅವಧಿಗಾಗಲೇ ಈ ಹಿಂದೆ ಇದ್ದ ವರ್ಣಾಶ್ರಮ ಪದ್ಧತಿ ಸ್ವಲ್ಪ ಮಟ್ಟಿಗೆ ಅಳಿದಿದ್ದಿತೆಂದು ಊಹಿಸ ಬಹುದಾಗಿದೆ. ಈ ವರ್ಣವ್ಯವಸ್ಥೆಯನ್ನು ಪರಿಪಾಲಿಸಿಕೊಂಡು ಬರುವುದು ಕ್ರಮೇಣ ಕಷ್ಟವಾಗುತ್ತಾ ಬಂದಿರಬೇಕು. "ಹೀಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಪದಗಳು ಬಳಕೆಯಾಗಿದ್ದರೂ ಅವು ಹಿಂದಿನ ಅರ್ಥವನ್ನು ಬಹುಮಟ್ಟಿಗೆ ಕಳೆದುಕೊಂಡಿದ್ದವೆಂಬುದು ಇದರಿಂದ ಸೂಚಿತವಾಗುತ್ತದೆ."[3] ಕೊಪ್ಪಳ ನಾಡಿನ ಶಾಸನಗಳಲ್ಲಿ ದೊರೆತ ಆಧಾರಗಳಿಂದ ಬೇರೆ ಬೇರೆ ಜಾತಿಗಳವರು ಊರಿನ ಬೇರೆ ಬೇರೆ ಕೇರಿ–ಬೀದಿಗಳಲ್ಲಿ ವಾಸಿಸುತ್ತಿದ್ದರು ಎಂದು ಹೇಳಬಹುದು. ತಮ್ಮದಾದ ಕಟ್ಟುಪಾಡುಗಳಿಗೆ ಒಳಗಾಗಿ ಆ ಸಮಾಜದ ಒಂದು ಚೌಕಟ್ಟಿನಲ್ಲಿ ಜೀವನ ಸಾಗಿಸುತ್ತಿದ್ದಂತೆ ತಿಳಿದು ಬರುತ್ತದೆ. ಕೊಪ್ಪಳ ಜಿಲ್ಲೆಯ ಶಾಸನಗಳು ಇಂತಹ ಅನೇಕ ಜಾತಿಗಳನ್ನು ಉಲ್ಲೇಖಿಸಿವೆ. ಅವುಗಳನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

**ವರ್ಗ–ವರ್ಣ–ಜಾತಿ :**

"ವರ್ಣ ಪದ್ಧತಿ ರೂಪುಗೊಳ್ಳುವುದಕ್ಕೆ ಮೊದಲು ಸಮಾಜವನ್ನು ವೃತ್ತಿಗನುಗುಣವಾಗಿ ವರ್ಗೀಕರಣ ಮಾಡಲಾಗುತ್ತಿತ್ತು."[4] ಈ ವೃತ್ತಿಗಳಿಗನು ಗುಣವಾಗಿಯೇ ಪ್ರಾಚೀನ ಕಾಲದಲ್ಲಿ ಜಾತಿ ಪದ್ಧತಿ ರೂಪುಗೊಂಡಿತೆಂಬುದು ಹಲವರ ಅಭಿಪ್ರಾಯವಾದರೂ ಇದಕ್ಕೆ ಖಚಿತವಾದ ಆಧಾರಗಳು ದೊರೆತಿಲ್ಲ. ವರ್ಗ ಹಾಗೂ ವೃತ್ತಿಯ ಕುರಿತು ಹೇಳುವುದಾದರೆ "ಬ್ರಾಹ್ಮಣಗಳ ಕಾಲದಲ್ಲಿ ವ್ಯಕ್ತಿಯ ವರ್ಣವನ್ನು ನಿರ್ಣಯಿಸುತ್ತಿದ್ದುದು ಅವನ ಹುಟ್ಟೇ ಹೊರತು ವೃತ್ತಿಯಲ್ಲ. ಬ್ರಾಹ್ಮಣರು ತಮ್ಮ ವರ್ಣದ ವೃತ್ತಿಗಳಾದ ಯಜನ, ಯಾಜನ, ಅಧ್ಯಯನ, ಅಧ್ಯಾಪನಾದಿಗಳನ್ನು

ಮಾಡಿಕೊಂಡಿದ್ದರೂ ಅವರಲ್ಲಿ ಹಲವರು ಕ್ಷತ್ರಿಯರಂತೆ ಕತ್ತಿಯನ್ನು ಹಿಡಿದು ರಾಜ್ಯಗಳನ್ನು ಸ್ಥಾಪಿಸಿದ್ದುಂಟು."[5] ಉದಾಹರಣೆಗೆ "ಕರ್ನಾಟಕದ ಬೇರೆ ಬೇರೆ ಭಾಗಗಳನ್ನಾಳುತ್ತಿದ್ದ ಹಲವು ರಾಜರು ತಮ್ಮನ್ನು ಕ್ಷತ್ರಿಯರೆಂದು ಕರೆದುಕೊಂಡಿದ್ದರೂ ಹಾಗೆ ಕರೆದು ಕೊಳ್ಳುವುದರಲ್ಲಿ ಅಂತಹ ಉತ್ಸಾಹವನ್ನು ತೋರಿಲ್ಲ. ವ್ಯಾಪಾರಿಗಳು ತಮ್ಮನ್ನು ವೈಶ್ಯರೆಂದು ಕರೆದುಕೊಂಡಿದ್ದರೂ, ವ್ಯವಸಾಯವನ್ನೂ ಪಶುಪಾಲನೆಯನ್ನು ಮಾಡುತ್ತಿದ್ದ ಇತರರು ತಮ್ಮನ್ನು ವೈಶ್ಯರೆಂದು ಕರೆದುಕೊಂಡಿಲ್ಲ,"[6] ಇದರಿಂದ ಮುಂದೆ ವಿವಿಧ ವೃತ್ತಿಗಳಲ್ಲಿ ಭೇದ ಉಂಟಾಗಿದ್ದರಿಂದ ಅತ್ಯಂತ ಕ್ಲಿಷ್ಟಕರವಾದ ಚಾತುವರ್ಣ ಪದ್ಧತಿಗೆ ಹಾದಿ ಮಾಡಿಕೊಟ್ಟಿತು. "ಈ ವ್ಯವಸ್ಥೆಯು ಬ್ರಾಹ್ಮಣಗಳ ಕಾಲಕ್ಕೆ ಮತ್ತಷ್ಟು ಬಿಗಿಗೊಂಡು, ವೃತ್ತಿವ್ಯತ್ಯಾಸವು ಹಿಂದುಳಿದ ವ್ಯಕ್ತಿಯ ಹುಟ್ಟು ವರ್ಣವನ್ನು ನಿರ್ಣಯಿಸುವಂತಾಯಿತು."[7] ಒಟ್ಟಿನಲ್ಲಿ ಇದರಿಂದ ಸೂಚಿತವಾಗುವ ಅಂಶವೇನೆಂದರೆ ವರ್ಣಪದ್ಧತಿಯು ಪ್ರಾರಂಭದಲ್ಲಿ ಬಿಗಿಯಾಗಿದ್ದರೂ ಕ್ರಮೇಣವಾಗಿ ಅದರ ಪರಿಪಾಲನೆಯು ಬಹುಮಟ್ಟಿಗೆ ಕುಸಿದು ಹೋಗಿತ್ತು ಎನ್ನಬಹುದು.

**ಪ್ರಭುವರ್ಗ :**

ಕೊಪ್ಪಳ ಜಿಲ್ಲೆಯ ಸಮಾಜ ವ್ಯವಸ್ಥೆಯನ್ನು ಪ್ರಭುವರ್ಗ ಮತ್ತು ಶ್ರಮಿಕ ವರ್ಗಗಳೆಂದು ಸ್ಥೂಲವಾಗಿ ಎರಡು ವಿಭಾಗಗಳಲ್ಲಿ ವಿಂಗಡಿಸ ಬಹುದಾಗಿದೆ. ಪ್ರಭುವರ್ಗವು ಪುರೋಹಿತ, ರಾಜ ಹಾಗೂ ವಿವಿಧ ಅಧಿಕಾರಿಗಳನ್ನು ಒಳಗೊಂಡಿರುತ್ತದೆ. ಶ್ರಮಿಕ ವರ್ಗವು ವಿವಿಧ ವೃತ್ತಿಗಳನ್ನು ಕೈಗೊಂಡ ಜನಸಾಮಾನ್ಯರನ್ನು ಪ್ರತಿನಿಧಿಸುತ್ತದೆ. ವ್ಯಾಪಾರಿಗಳು ಈ ಎರಡು ವರ್ಗಗಳ ಮಧ್ಯದಲ್ಲಿ ಬಂದರೂ ಅವರಿಗಿದ್ದ ಆರ್ಥಿಕ ಸುಸ್ಥಿತಿಯಿಂದಾಗಿ ಪ್ರಭುವರ್ಗವನ್ನೇ ಪ್ರತಿನಿಧಿಸುತ್ತಾರೆ. ಸಾಮಾಜಿಕ ಸ್ತರವಿನ್ಯಾಸದಲ್ಲಿ ವಿವಿಧ ಮತಗಳ ಪುರೋಹಿತರಾಗಿದ್ದು ಅವರು ಧರ್ಮ ಮತ್ತು ರಾಜಧರ್ಮವನ್ನು ನಿಯಂತ್ರಿಸಿದ್ದಾರೆ. ಅವರಲ್ಲಿ ಮಹಾಜನರು, ಸ್ಥಾನಾಚಾರ್ಯರು ಪ್ರಮುಖರಾಗಿದ್ದಾರೆ.

**ಮಹಾಜನರು :**

ಹಿಂದೂ ಸಮಾಜದಲ್ಲಿ ಅಂದಿನ ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಹೆಚ್ಚಿನ ಗೌರವ ಹಾಗೂ ಸಾಮಾಜಿಕ ಸೌಲಭ್ಯಗಳನ್ನು ಅನುಭವಿಸುತ್ತಾ ಇತರ ಜಾತಿಗಳಿಗಿಂತ ಹೆಚ್ಚಿನ ಅಂತಸ್ತಿನವರೆಂದು ಹಾಗೂ ಅಗ್ರಸ್ಥಾನವನ್ನು ಹೊಂದಿದವರೆಂದು ಪರಿಗಣಿಸಲ್ಪಟ್ಟವರೆಂದರೆ ಮಹಾಜನರು. ಆದ್ದರಿಂದ ಇವರ ಅಂತಸ್ತು ಉನ್ನತ ಮಟ್ಟದಲ್ಲಿದ್ದು ಅತ್ಯಂತ ಪ್ರಭಾವಶಾಲಿಗಳೆ ನಿಸಿದ್ದರು. "ಜಾತಿಗಳಲ್ಲೆಲ್ಲಾ ಬ್ರಾಹ್ಮಣ ಜಾತಿಯೇ ಉತ್ತಮವಾದುದು ಎಂಬುದು ಪಂಪನ ಹೇಳಿಕೆ."[8] ಸಾಮಾಜಿಕವಾಗಿ ಮಹಾಜನರು ಅಪರಿಮಿತವಾದ ವಲಯದಲ್ಲಿ ಪ್ರಾಧಾನ್ಯತೆಯನ್ನು ಪಡೆದಿದ್ದರು. ವಿದ್ಯಾಕ್ಷೇತ್ರದಲ್ಲಿ ಮೇಲುಗೈಯನ್ನು ಪಡೆದಿದ್ದರಿಂದ ಸಮಾಜದಲ್ಲಿ ಇವರ ಸ್ಥಾನ

ಅಗ್ರಸ್ಥಾನದಲ್ಲಿದ್ದಿತು. "ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪತಿಗ್ರಹ ಇವು ಅವರ ಬಹು ಮುಖ್ಯ ಕರ್ತವ್ಯಗಳಾಗಿದ್ದವು. ಯಾಗವನ್ನು ಮಾಡುವುದು, ಮಾಡಿಸುವುದು, ಓದುವುದು, ಓದಿಸುವುದು ದಾನ ಮಾಡುವುದು ಮತ್ತು ಸ್ವೀಕರಿಸುವುದು ಇವುಗಳನ್ನು ಷಟ್ಕರ್ಮಗಳೆಂದು ಕರೆಯಲಾಗಿದೆ."[9] "ಬ್ರಾಹ್ಮಣರನ್ನು ಷಟ್ಕರ್ಮನಿರತರು"[10] ಎಂದು ಶಾಸನಗಳು ಬಣ್ಣಿಸುತ್ತವೆ. ಧಾರ್ಮಿಕವಾಗಿ ಯಜ್ಞ-ಯಾಗಾದಿಗಳನ್ನು ಮಾಡುವ ಮತ್ತು ವೇದಾದಿಗಳನ್ನು ಓದುವ ಇವರಿಗೆ ಅಂದಿನ ಕಾಲದಲ್ಲಿ ಅತ್ಯಂತ ಉನ್ನತ ಸ್ಥಾನವನ್ನು ಕಲ್ಪಿಸಿಕೊಡಲಾಗಿತ್ತು.

ಕೊಪ್ಪಳ ಜಿಲ್ಲೆಯ ಶಾಸನಗಳು ಮಹಾಜನರನ್ನು ಅತ್ಯಂತ ಮೇಧಾವಿಗಳೆಂದು ಹಾಗೂ ಸಕಲಶಾಸ್ತ್ರ ವಿಶಾರದರೆಂದು ಉಲ್ಲೇಖಿಸಿವೆ. ಮಹಾಜನರು ದಾನವನ್ನು ನೀಡಿದ್ದು ಹಾಗೂ ಸ್ವೀಕರಿಸಿದ್ದರ ಬಗ್ಗೆ ಶಾಸನಗಳು ಮಾಹಿತಿಯನ್ನು ನೀಡಿವೆ. ಕೊಪ್ಪಳದ ಕವಲೂರು ಗ್ರಾಮದಲ್ಲಿ ದೊರೆತ ಶಾಸನವು[11] (ಕ್ರಿ.ಶ.1179) 500 ಮಹಾಜನರ ಬಗ್ಗೆ ಉಲ್ಲೇಖ ನೀಡಿದೆ. ಈ 500 ಮಹಾಜನರು ಇತರರೊಂದಿಗೆ ಸೇರಿ ಹರಿಹರದೇವನಿಗೆ ಎಡೆಯಹಳ್ಳಿಯನ್ನು ದಾನವಾಗಿ ಬಿಡುತ್ತಾರೆ. ಹಾಗೂ ಈ ಮಹಾಜನಗಳ ಸನ್ನಿಧಾನದಲ್ಲಿಯೇ ಕೌರೂರು (ಕೌಲೂರು) ಊರೊಡೆಯರು ಹರಿಹರದೇವರ ಬ್ರಹ್ಮಪುರಿಗೆ ಅಂಗಭೋಗ, ರಂಗಭೋಗಕ್ಕೆ ಕೆಲವು ದಾನಗಳನ್ನು ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ.1268ರ ಅಳವಂಡಿ ಶಾಸನದಲ್ಲಿ[12] 400 ಮಹಾಜನರ ಉಲ್ಲೇಖವಿದ್ದು ಇವರು ಸಕಲ ವಿದ್ಯಾಪರಿಗಣಿತರಾಗಿದ್ದರೆಂದು ವರ್ಣನೆಯಿದೆ. ಕ್ರಿ.ಶ.1182ರಲ್ಲಿ ದೊರೆತ ಅಳವಂಡಿಯ ಮತ್ತೊಂದು ಶಾಸನವು[13] 400 ಮಹಾಜನರು 14 ಗದ್ಯಾಣ ಹಾಗೂ 2 ಮನೆಗಳನ್ನು ಮಲ್ಲಿಕಾರ್ಜುನ ಬೋವನಿಗೆ ದಾನ ಬಿಟ್ಟಿದ್ದಂತೆ ಉಲ್ಲೇಖ ನೀಡಿದೆ. ಕೊಪ್ಪಳದ ಮಾದಿನೂರಿನಲ್ಲಿ ದೊರೆತ ಕ್ರಿ.ಶ.1190ರ ಶಾಸನವು[14] ಮಹಾಜನರು ತಮ್ಮೂರ ನಡುವೆ ಇದ್ದ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಆ ದೇವಾಲಯಕ್ಕೆ ದಾನವನ್ನು ಬಿಟ್ಟಿದ್ದನ್ನು ತಿಳಿಸುತ್ತದೆ. ಕ್ರಿ.ಶ.1132ರ ಕುಕನೂರು ಶಾಸನದಲ್ಲಿ[15] ಸಾವಿರ ಮಹಾಜನರು ಸೇರಿ ಶ್ರೀ ಮೂಲಸ್ಥಾನ ದೇವರ ನಂದಾದೀಪಕ್ಕೆ ಒಂದು ಮಾನ ಎಣ್ಣೆಯನ್ನು ನೀಡಲು ಮಾನ್ಯದ ಗಾಣವೊಂದನ್ನು ದಾನ ಬಿಟ್ಟ ಮಾಹಿತಿ ದೊರೆತಿದೆ. ಕೊಪ್ಪಳ ತಾಲೂಕಿನ ಹುಲಗಿ ಶಾಸನವು[16] 52 ಮಹಾಜನರು ಸೇರಿ 200 ಕಮ್ಮ ತೋಟ, ನಾಲ್ಕು ಮತ್ತರು ಹೊಲ ಒಂದು ಹೂವಿನ ತೋಟವನ್ನು ದಾನ ಬಿಟ್ಟಿದ್ದಂತೆ ತಿಳಿಸುತ್ತದೆ. ಯಲಬುರ್ಗಾ ತಾಲೂಕಿನ ಶಾಸನಗಳಾದ ಕ್ರಿ.ಶ.1154ರ ಮುಧೋಳ ಶಾಸನ[17], ಬಳಗೇರಿ ಶಾಸನ[18] (ಕಾಲದ ಉಲ್ಲೇಖವಿಲ್ಲ), ಕ್ರಿ.ಶ.1143ರ ಕುಕನೂರು ಶಾಸನ[19] ಹಾಗೂ ಇಟಗಿಯ ಕ್ರಿ.ಶ.1183ರ ಶಾಸನ[20] ಈ ಎಲ್ಲಾ ಶಾಸನಗಳಲ್ಲಿ ಮಹಾಜನರ ಉಲ್ಲೇಖವಿದ್ದು ಅವರ ವಿಶೇಷಣಗಳನ್ನು ವಿವರಿಸಿದೆ. ಆದರೆ ಮಹಾಜನರು ನೀಡಿದ ಅಥವಾ ಅವರ ಸಾನಿಧ್ಯದಲ್ಲಿ ದಾನ ಸ್ವೀಕರಿಸಿದ ಮಾಹಿತಿ ದೊರೆತಿರುವುದಿಲ್ಲ.

ಹೀಗೆ ಮಹಾಜನರು ಕೊಪ್ಪಳದ ಹಲವಾರು ಧಾರ್ಮಿಕ ಆಚರಣೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಹಲವಾರು ದಾನ ದತ್ತಿಗಳನ್ನು ನೀಡಿದ್ದನ್ನು ಕಾಣುತ್ತೇವೆ. ದೇವಾಲಯಗಳಿಗೆ ಇತರರು ದಾನ ದತ್ತಿಗಳನ್ನು ನೀಡುವಾಗ ಮಹಾಜನರು ಅವರಿಗೆ ಧರ್ಮದರ್ಶಿಗಳಾಗಿರುತ್ತಿದ್ದರು. ಆ ಮೂಲಕ ಅವರು ಇತರ ಕ್ಷೇತ್ರಗಳಲ್ಲಿಯೂ ಅಗ್ರಮಾನ್ಯರೆನಿಸಿಕೊಂಡಿದ್ದರೆಂದು ಜಿಲ್ಲೆಯ ಶಾಸನಗಳ ಮುಖಾಂತರ ತಿಳಿಯಬಹುದಾಗಿದೆ.

**ಸ್ಥಾನಾಚಾರ್ಯರು :**

ದೇವಾಲಯದ ಅತ್ಯಂತ ಪ್ರಮುಖ ವ್ಯಕ್ತಿಯೇ ಸ್ಥಾನಾಚಾರ್ಯರೆನಿಸಿ ಕೊಂಡಿದ್ದಾರೆ. ಇವರು ಯಾವುದೇ ಒಂದು ಊರಿನ ದೇವಾಲಯದ ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ದೇವಾಲಯದ ಪರಿಚಾರಿಕೆಯನ್ನು ಪಾಲಿಸಿಕೊಂಡು ಬರುವವರಲ್ಲಿ ಹಿರಿಯನಾದವನು ಸ್ಥಾನಿಕನೆನಿಸಿಕೊಂಡಿದ್ದನು. "ಸನ್ಯಾಸಿಯಾಗಿ, ದೇವಸ್ಥಾನದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಮಠದಲ್ಲಿ ವಾಸಿಸುತ್ತ ಅದರ ಆಡಳಿತದ ಮೇಲ್ವಿಚಾರಕನಾಗಿ, ತಪಸ್ವಿಯಾಗಿ ವಿದ್ಯಾದಾನ ಮಾಡುತ್ತಿದ್ದ ಶೈವ ಸನ್ಯಾಸಿಯನ್ನು ಸ್ಥಾನಿಕ ಎಂದು ಅನೇಕ ಕಡೆಗಳಲ್ಲಿ ಕರೆದಿದೆ."[21] ದೇವಾಲಯಗಳಿಗೆ ದತ್ತಿಗಳನ್ನು ಬಿಡುವ ಸಮಯದಲ್ಲಿ ಇವರ ಒಪ್ಪಿಗೆಯ ಅವಶ್ಯಕತೆಯೂ ಇದ್ದಿತು. ಆದ್ದರಿಂದ "ಆ ದೇವಸ್ಥಾನದ ಆಗುಹೋಗುಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ಹೊತ್ತಿರುವವರು ಸ್ಥಾನಪತಿಗಳು ಅಥವಾ ಸ್ಥಾನಿಕರು'[22] ಎನಿಸಿಕೊಳ್ಳುತ್ತಿದ್ದರು.

ಕೊಪ್ಪಳ ಜಿಲ್ಲೆಯ ಶಾಸನಗಳು ಸ್ಥಾನಾಚಾರ್ಯರನ್ನು ಆಚಾರ್ಯರೆಂದೂ ಕರೆದಿವೆ. ಹಲವರನ್ನು ದೇವಸ್ಥಾನದ ಆಚಾರ್ಯರೆಂದು ಶಾಸನಗಳು ಕರೆದಿರುವುದುಂಟು.[23] ಕೊಪ್ಪಳ ಜಿಲ್ಲೆಯಲ್ಲಿ ದೊರೆತ ದೇವಾಲಯಗಳ ಸಂಖ್ಯೆಗಳು ಅಧಿಕ ಪ್ರಮಾಣದಲ್ಲಿವೆ. ಈ ದೇವಾಲಯ ಹಾಗೂ ಮಠಗಳ ಜವಾಬ್ದಾರಿ ಇವರ ಮೇಲೆ ಇದ್ದುದರಿಂದ ಅವುಗಳನ್ನು ಇವರೇ ನೋಡಿಕೊಳ್ಳುತ್ತಿದ್ದರು. ಕೊಪ್ಪಳದ ಕ್ರಿ.ಶ.1088ರ ಹುಲಿಗಿ ಶಾಸನವು[24] ಶಿವದೇವಾಲಯದ ಆಚಾರ್ಯರಿಗೆ ಅಲ್ಲಿಯ ಮಹಾಜನರು ಸೇರಿ ಆರು ಗದ್ಯಾಣ, ದೇವರ ಪರಿಚಾರಕ ವರ್ಗಕ್ಕೆ ಸಂಬಳವಾಗಿ ಆರು ಗದ್ಯಾಣ ಹಾಗೂ ದೇವರ ನೈವೇದ್ಯಕ್ಕೆ ರಾಜಾನ್ನದ ಅನ್ನ ಒಂದು ಕೊಳಗ, ಒಂದು ಮಾನ ಹೆಸರು, ಒಂದು ಮಾನ ತುಪ್ಪವನ್ನು ಹಾಗೂ ದೇವಾಲಯದ ಜೀರ್ಣೋದ್ಧಾರದ ಕೆಲಸಕ್ಕೂ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ.10ನೆಯ ಶತಮಾನದ ಕೊಪ್ಪಳದ ಶಾಸನವು[25] ಜಟಾಸಿಂಗನಂದಿ ಆಚಾರ್ಯನನ್ನು ಉಲ್ಲೇಖಿಸಿದೆ. ಈತನ ಶಿಷ್ಯರಾದ ಚಾವಯ್ಯ ಎಂಬುವನು ಈ ಆಚಾರ್ಯರ ಪಾದವನ್ನು ಶಿಲೆಯಲ್ಲಿ ಕೆತ್ತಿಸಿದಂತೆ ಮಾಹಿತಿ ನೀಡಿದೆ. ಯಲಬುರ್ಗಾ ತಾಲೂಕಿನ ಕ್ರಿ.ಶ.13ನೇ ಶತಮಾನದ ಶಾಸನವು[26] ರಾಯಾಚಾರ್ಯನು ಎರಂಬರಗೆಯಲ್ಲಿ ಜೈನಧರ್ಮವನ್ನು ಉದ್ಧರಿಸಿದ್ದಂತೆ ಉಲ್ಲೇಖ

ನೀಡಿದೆ. ಬಳಗೇರಿ ಶಾಸನದಲ್ಲಿ[27] (ಕಾಲದ ಉಲ್ಲೇಖವಿಲ್ಲ) ಸೋಭನೇಶ್ವರ ದೇವಾಲಯದ ಆಚಾರ್ಯನಾಗಿ ಚತುಸ್ಸಮಯ ವಾಖ್ಯಾನಕಾರ ಜಗದಿನ್ದಪಂಡಿತನಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.1005ರ ಕುಕನೂರು ಶಾಸನವು[28] ಆ ಊರಿನ ದೇವಾಲಯದ ಆಚಾರ್ಯನಾಗಿ ಸೋಮೇಶ್ವರಾಚಾರ್ಯನಾಗಿದ್ದಂತೆ ತಿಳಿಸುತ್ತದೆ.

ಹೀಗೆ ಸ್ಥಾನಿಕರು ದೇವಾಲಯದ ಪೂಜೆ ಹಾಗೂ ಆ ದೇವಾಲಯದ ಪರಿಚಾರಿಕೆಯ ಹೊಣೆಯನ್ನು ಹೊತ್ತಿರುತ್ತಿದ್ದರು. ಇವರಿಗೆ ಅರಸರು ಹಾಗೂ ರಾಣಿಯರ ಪ್ರೋತ್ಸಾಹದೊಂದಿಗೆ ಜನಸಾಮಾನ್ಯರ ಸಹಕಾರ ದೊರೆಯುತ್ತಿತ್ತು. ಅಲ್ಲದೆ ಅದರ ಜೊತೆಗೆ ಸಾಕಷ್ಟು ದಾನ ದತ್ತಿಗಳನ್ನು ಬಿಡುತ್ತಿದ್ದರು. ಒಟ್ಟಾರೆಯಾಗಿ ಸಮಾಜದಲ್ಲಿ ಈ ಸ್ಥಾನಾಚಾರ್ಯರಿಗೆ ಒಳ್ಳೆಯ ಸ್ಥಾನಮಾನ ವಿದ್ದಿತೆಂದು ಶಾಸನಗಳಲ್ಲಿನ ಉಲ್ಲೇಖಿತ ಅಂಶಗಳಿಂದ ತಿಳಿದುಬರುತ್ತದೆ.

**ಶ್ರಮಿಕವರ್ಗ :**

ಅನೇಕ ವೃತ್ತಿಗಳನ್ನಾಶ್ರಯಿಸಿ ಅದನ್ನೆ ಕುಲಕಸುಬನ್ನಾಗಿಸಿಕೊಂಡ ಕುಶಲಕರ್ಮಿಗಳ ವರ್ಗವು ಶ್ರಮಿಕವರ್ಗಕ್ಕೆ ಸೇರುತ್ತದೆ. "ಅಕ್ಕಸಾಲಿ, ಕಂಚಗಾರ, ಕಮ್ಮಾರ, ಕಲ್ಲುಕುಟಿಗ (ಶಿಲ್ಪಿ), ಬಡಗಿ ಈ ಕುಶಲಕರ್ಮಿಗಳನ್ನು ಪಾಂಚಾಳರೆಂದು ಕರೆಯುತ್ತಿದ್ದರು."[29] ಚಿನ್ನದ ಕೆಲಸವನ್ನು ಮಾಡುವವರು ಅಕ್ಕಸಾಲಿಗರು. ಕುಕನೂರು (ಕ್ರಿ.ಶ.1584) ಶಾಸನದಲ್ಲಿ[30] ಅಕ್ಕಸಾಲಿಗರ ಉಲ್ಲೇಖ ಬಂದಿದೆ. "ಕೆಂಚುಗಾರರು ಕಂಚು ಮುಂತಾದ ಲೋಹಗಳಲ್ಲಿ ಪಾತ್ರೆಗಳನ್ನು ಮಾಡುತ್ತಿದ್ದವರು"[31] ಕಂಚುಗಾರರ ಕುರಿತು ಯಾವುದೇ ಮಾಹಿತಿ ದೊರೆತಿರದಿದ್ದರೂ ಅಂದಿನ ಕಾಲದಲ್ಲಿ ಇಂತಹ ಒಂದು ಶ್ರಮಿಕವರ್ಗವು ಈ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿತ್ತೆಂದು ಊಹಿಸಬಹುದಾಗಿದೆ.

"ಕಬ್ಬಿಣದ ಕೆಲಸಗಳನ್ನು ಮಾಡುತ್ತಿದ್ದವರು ಕಮ್ಮಾರರು."[32] ಕ್ರಿ.ಶ.1082ರ ಅಂಟೂರು ಠಾಣ ಶಾಸನದಲ್ಲಿ[33] ಕಮ್ಮಾರರ ಕುರಿತು ಉಲ್ಲೇಖ ದೊರೆತಿದೆ. ಇವರು ತಮ್ಮ ಒಕ್ಕಲುತನಕ್ಕೆ ಬೇಕಾಗುವ ಸಾಮಗ್ರಿಗಳ ಜೊತೆಗೆ ಶಸ್ತ್ರಾದಿಗಳನ್ನು ತಯಾರಿಸುತ್ತಿದ್ದಂತೆ ತಿಳಿದುಬರುತ್ತದೆ. ಕಂಚುಗಾರರು ಹಾಗೂ ಕಮ್ಮಾರರ ಕುರಿತು ಶಾಸನಗಳಲ್ಲಿ ಹೆಚ್ಚಿನ ಮಾಹಿತಿ ದೊರೆತಿರುವುದಿಲ್ಲ. ಕಲ್ಲುಕುಟಿಕರು ಸಾಮಾನ್ಯವಾಗಿ ದೇವಾಲಯಗಳನ್ನು ನಿರ್ಮಿಸುವವರಾಗಿದ್ದರು. ಇಂತಹವರಲ್ಲಿ ಕೆಲವರು ಶಾಸನಗಳನ್ನು ಕೆತ್ತುತ್ತಿದ್ದಂತೆ ತಿಳಿದು ಬರುತ್ತದೆ. ಕೆಲವು ಸಂದರ್ಭದಲ್ಲಿ ಶಾಸನಗಳನ್ನು ಸಿದ್ಧಗೊಳಿಸುತ್ತಿದ್ದಂತೆ ಕಂಡು ಬಂದಿದೆ. ಕ್ರಿ.ಶ.997ರ ಕೊಪ್ಪಳದ ಶಾಸನವು[34] ಶಾಸನವನ್ನು ಕೆತ್ತಿದವರ ಉಲ್ಲೇಖ ನೀಡಿದೆ. ಇನ್ನು ಮರದ ಕೆಲಸಗಳನ್ನು ಮಾಡುವವನೇ ಬಡಗಿ ಎನಿಸಿಕೊಳ್ಳುತ್ತಿದ್ದನು. 'ದೇವಸ್ಥಾನಕ್ಕೆ ಸಂಬಂಧಿಸಿದ ಮರಕೆಲಸಗಳನ್ನು ಮಾಡಲು, ಮುರಿದುಹೋದ ಸಾಮಾನುಗಳನ್ನು ಸರಿಪಡಿಸಲು ಇವರಿಗೆ ಶಾಶ್ವತವಾದ ದತ್ತಿಗಳನ್ನು

ಬಿಟ್ಟುಕೊಡುತ್ತಿದ್ದರು.'[35] ಯಲಬುರ್ಗಾದಲ್ಲಿ ದೊರೆತ (ಕ್ರಿ.ಶ.1561) ಕುಕನೂರು ಶಾಸನದಲ್ಲಿ[36] ಬಡಗಿ ಬಸವೋಜನ ಮಗ ಗಣೋಜನ ಉಲ್ಲೇಖಬಂದಿದೆ. ಈ ಗಣೋಜನು ಶ್ರೀಜೇಷ್ಠಾ ಮಹಾಲಕ್ಷ್ಮಿದೇವರ ದೇವಾಲಯದ ಬಾಗಿಲನ್ನು ಮಾಡಿರುವ ಕುರಿತು ಮಾಹಿತಿ ದೊರೆತಿದೆ.

ಶ್ರಮಜೀವಿಗಳಾದ ಒಕ್ಕಲಿಗರು ಹಾಗೂ ತೆಲ್ಲಿಗರು(ಗಾಣಿಗರು) ತಮ್ಮದೇ ಆದ ವೃತ್ತಿ ಸಂಘಗಳನ್ನು ಕಟ್ಟಿಕೊಂಡಿರುತ್ತಿದ್ದರು. ಸಾಮಾನ್ಯವಾಗಿ ಒಕ್ಕಲಿಗರೆನಿಸಿಕೊಂಡವರು ಭೂಸಾಗುವಳಿ ಮಾಡಿಕೊಂಡು ನೆಲವನ್ನು ಉತ್ತಿ ಬಿತ್ತಿ ಬೆಳೆಯನ್ನು ತೆಗೆಯುತ್ತಿದ್ದಂತೆ ತಿಳಿದು ಬರುತ್ತದೆ. ಇಂತಹ ಒಕ್ಕಲಿಗರ ಕುರಿತು ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ಇವರು ತಮ್ಮದೇ ಆದ ಸಂಘವನ್ನು ಕಟ್ಟಿಕೊಂಡಿದ್ದು ಸಾಮಾಜಿಕ ನೆಲೆಯಲ್ಲಿ ಭದ್ರತೆಯನ್ನು ಕಾಪಾಡಿಕೊಂಡಿದ್ದರು. ಕುಷ್ಟಗಿಯ ಹೆಸರೂರು ಶಾಸನದಲ್ಲಿ[37] ಒಕ್ಕಲಿಗರ ಉಲ್ಲೇಖವಿದ್ದು ಇವರು ಆದಿತ್ಯ ದೇವರ ಅಂಗಭೋಗಕ್ಕೆ ಹಾಗೂ ಆ ದೇವಾಲಯದ ಜೀರ್ಣೋದ್ಧಾರಕ್ಕೆ ದಾನ ಬಿಟ್ಟಿದ್ದಂತೆ ತಿಳಿದು ಬರುತ್ತದೆ. ಇವರು ಕಟ್ಟಿಕೊಂಡ ಸಂಘವನ್ನು ಶಾಸನಗಳಲ್ಲಿ ಐವತ್ತೊಕ್ಕಲು[38] ಎಂದು ಉಲ್ಲೇಖಿಸಿದೆ.

"ಗಾಣದಿಂದ ಎಣ್ಣೆಯನ್ನು ತೆಗೆಯುತ್ತಿದ್ದವರು ತೈಲಿಗರು ಅಥವಾ ತೆಲ್ಲಿಗರು."[39] ಕುಷ್ಟಗಿ ತಾಲೂಕಿನ ಚಳಗೇರಿ (ಕ್ರಿ.ಶ.1172) ಶಾಸನವು[40] ಆ ಊರಿನ ದೇವಾಲಯದ ನಂದಾದೀಪಕ್ಕಾಗಿ ತೆಲ್ಲಿಗರು ಎಣ್ಣೆಗಾಣವನ್ನು ದಾನ ಬಿಟ್ಟಿದ್ದಂತೆ ತಿಳಿಸುತ್ತದೆ. ಮಾಲಗಾರರು ದೇವರ ಪೂಜೆ ಹಾಗೂ ಇತರ ಕಾರ್ಯಗಳಿಗಾಗಿ ಹೂ ಕಟ್ಟುವವರಾಗಿದ್ದರು. ಕುಕನೂರು (ಕ್ರಿ.ಶ.1107) ಶಾಸನವು[41] ಮೂಲಸ್ಥಾನದೇವರ ಅಂಗಭೋಗಕ್ಕೆ ಹಾಗೂ ಚೈತ್ರಪವಿತ್ರಕ್ಕಾಗಿ ಗದ್ಯಾಣ 100ನ್ನು ಹಾಗೂ ಊರಿನ ಉತ್ತರಕ್ಕೆ ಹೂವಿನ ತೋಟ 2 ಮತ್ತರು ಹಾಗೂ 450 ಕಮ್ಮವನ್ನು ಬಿಟ್ಟುಕೊಟ್ಟರು ಎಂದು ತಿಳಿದುಬರುತ್ತದೆ. ಇವರೆಲ್ಲರೂ ಶ್ರವಿಕವರ್ಗದವರಾಗಿ ಕಂಡುಬರುತ್ತಾರೆ. ಶ್ರಮವಹಿಸಿ ಕೆಲಸಗಳನ್ನು ಮಾಡುವ ಇವರನ್ನು ಆಧುನಿಕ ಕಾರ್ಮಿಕವರ್ಗದೊಂದಿಗೆ ಹೋಲಿಸಬಹುದು.

**ವರ್ಣ ವ್ಯವಸ್ಥೆ :**

ಭಾರತೀಯ ಹಿಂದೂ ಸಮಾಜದ ಮೂಲಕ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಚತುರ್ವರ್ಣ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ಬ್ರಾಹ್ಮಣರು ಒಂದು ಕಡೆ ಧಾರ್ಮಿಕ ರಂಗದಲ್ಲಿ ಪ್ರಬಲರಾಗಿದ್ದಂತೆ; ಕ್ಷತ್ರಿಯರಲ್ಲಿ ರಾಜರು ಮತ್ತು ಅವರ ಪರಿವಾರದವರಿಗೆ ಹೆಚ್ಚಿನ ಪುರಸ್ಕಾರ ದೊರೆತಿತ್ತು. ವರ್ಣದವರಲ್ಲಿ ವೈಶ್ಯರ ಸ್ಥಾನ ಮೇಲಿನ ಎರಡು ವರ್ಣಕ್ಕಿಂತ ಕ್ರಮೇಣ ಕಡಿಮೆಯಾಗುತ್ತಿತ್ತು. ಅತ್ಯಂತ ಕೊನೆಯ ಸ್ಥಾನವೆಂದರೆ ಶೂದ್ರರದಾಗಿತ್ತು. ಸಮಾಜವನ್ನು ವಿಭಜಿಸುವ ವರ್ಣಾಶ್ರಮ ಪದ್ಧತಿಯು ಉಕ್ಕಿನ

ಕೋಟೆಯಂತೆ ಬೆಳೆದು ನಿಂತಿದ್ದರೂ "ಕಾಲಾಂತರದಲ್ಲಿ ಈ ವ್ಯವಸ್ಥೆಯು ಬದಲಾವಣೆ ಹೊಂದುತ್ತಾ ಜಾತಿ ವ್ಯವಸ್ಥೆಯಾಗಿ ಮಾರ್ಪಾಡಾದ ವಿಷಯವು ವೇದೋಪನಿಷತ್ತುಗಳಿಂದ ತಿಳಿದು ಬರುತ್ತದೆ."[42]

**ಬ್ರಾಹ್ಮಣರು :**

ಪ್ರಾಚೀನ ಕಾಲದ ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ ವರ್ಗ ಸಾಮಾಜಿಕ ಸ್ಥರಗಳಲ್ಲಿ ಮೊದಲ ಸ್ಥಾನವನ್ನು ಹೊಂದಿತ್ತು. "ವಿದ್ಯಾಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅಗ್ರಸ್ಥಾನದಲ್ಲಿದ್ದವರು ಅವರು. ಅಶನ–ವ್ಯಸನಾದಿಗಳ ಚಿಂತೆಯಿಲ್ಲದೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿ ಸಲೆಂದು ರಾಜರು ನೂರಾರು ದತ್ತಿಗಳನ್ನು ಬ್ರಾಹ್ಮಣರಿಗೆ ಬಿಟ್ಟು ಕೊಟ್ಟಿದ್ದಾರೆ."[43] ಇದು ಸಮಾಜದಲ್ಲಿ ಅವರಿಗಿದ್ದ ವಿಶಿಷ್ಟ ಸ್ಥಾನವನ್ನು ಗುರುತಿಸುತ್ತದೆ. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಿತರಾದ ಇವರು ಸಮಾಜದಲ್ಲಿ ಇವರಿಗಿದ್ದ ಪ್ರತಿಷ್ಠೆಯನ್ನು ಕುರಿತು ಮಾಹಿತಿಯನ್ನು ನೀಡಿವೆ. ಕೊಪ್ಪಳ ಜಿಲ್ಲೆಯ ಅನೇಕ ಶಾಸನಗಳಲ್ಲಿ ಇವರನ್ನು ಮಹಾಜನರು ಹಾಗೂ ಆಚಾರ್ಯರೆಂದು ಕರೆಯಲಾಗಿದೆ.

ಕೊಪ್ಪಳ ತಾಲೂಕಿನ ಮಾದಿನೂರಿನಲ್ಲಿ ದೊರೆತ ಶಾಸನ[44] (ಕ್ರಿ.ಶ.1190) ವು ಬ್ರಾಹ್ಮಣರನ್ನು ಉಲ್ಲೇಖಿಸಿದ್ದು ಚಾಳುಕ್ಯ ಅರಸನಾದ ನೂರ್ಮಡಿತೇಜ ಅಹವಮಲ್ಲನು ತನ್ನ ಮೊದಲ ರಾಜ್ಯಭಾರದ ವರ್ಷದಲ್ಲಿ ಬ್ರಹ್ಮಾಂಡ ಕ್ರತುವನ್ನು ಮಾಡಿದ ಸಂದರ್ಭದಲ್ಲಿ ಬ್ರಾಹ್ಮಣರಿಗೆ ಮಾದೆಯನೂರ(ಮುದೇನೂರು)ನ್ನು ದಾನವಾಗಿ ಕೊಡುತ್ತಾನೆ. ಕ್ರಿ.ಶ.1163ರ ಕುಕನೂರು ಶಾಸನವು[45] ಕುಕನೂರು ನಾಡಿನ ಮಹಾಪ್ರಧಾನ ದಂಡನಾಯಕ ಬಲದೇವಯ್ಯ ಮತ್ತು ಆತನ ಕರಣಗಳು, ಮಹಾಪ್ರಧಾನಿ, ಸೇನಾಪತಿ, ಬೆಳ್ವೊಲನಾಡ ಅಧಿಕಾರಿಯಾದ ಅಮ್ಮಣಯ್ಯ ಮತ್ತವನ ಕರಣಗಳು ಬಿಜ್ಜಳದೇವನಿಗೆ ಬಿನ್ನಹವನ್ನು ಮಾಡಿಕೊಂಡು ಕುಕ್ಕನೂರ–30ರ ಶ್ರೀಮಂತ ಗ್ರಾಮವಾದ ಎಡೆಯಹಳ್ಳಿಯನ್ನು ಸರ್ವಬಾಧಾಪರಿಹಾರವಾಗಿ ಹಂಪೆಯ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಪುನರ್ದತ್ತಿಯಾಗಿ ಪಡೆದು ಆ ಊರಿನ 15 ಜನ ಬ್ರಾಹ್ಮಣರಿಗೆ ದಾನ ನೀಡಿದ್ದಂತೆ ತಿಳಿಸುತ್ತದೆ. ಕ್ರಿ.ಶ.1129ರ ಕುಕನೂರು ಶಾಸನದಲ್ಲಿ[46] ದೇಮೆಯಷಣಂಗಿಯು ಗಣೇಶ್ವರ ದೇವಾಲಯದಲ್ಲಿ ರುದ್ರಾದಿತ್ಯಘೆಸಾಸನು ಮಾಡಿಸಿದ ಸತ್ರದ ಮನೆಯಲ್ಲಿ ಪ್ರತಿದಿವಸವೂ 6 ಜನ ಬ್ರಾಹ್ಮಣರು ಊಟ ಮಾಡುವಂತೆ ಭೂದಾನವನ್ನು ನೀಡುತ್ತಾನೆ. ಕುಷ್ಟಗಿಯ ಕ್ರಿ.ಶ.12ನೇ ಶತಮಾನದ ಪುರ ಶಾಸನದಲ್ಲಿ[47] ವೀರಹಂಪರಸ, ಕಂಪಲಿ ಹಂಪದೇವ, ಜೋಯಿಹರಸ, ಕಣ್ಣರಸ, ಗೋಯಿಯರಸ, ಸೆಳೆಯಜ್ಜರಸ, ಹಂಪರಸ, ಬೋಗರಸ, ನಿಡವದ ಹೆಮ್ಮರಸ ಮುಂತಾದವರೆಲ್ಲರು ಸೇರಿ ಶ್ರೀ ಗವರೇಶ್ವರದೇವರ ಬ್ರಾಹ್ಮಣರ ನಿತ್ಯ ಆಹಾರದಾನಕ್ಕೆಂದು ಹಾಗೂ ಬ್ರಹ್ಮಪುರಿಯ ಬ್ರಾಹ್ಮಣ ವೇತನಕ್ಕೆ ಹಿರಿಯಕೋಲಲ್ಲಿ

ಒಂದು ಮತ್ತರು ದಾನ ನೀಡಿದ್ದಂತೆ ಕಂಡು ಬಂದಿದೆ. ಯಲಬುರ್ಗಾದಲ್ಲಿ ದೊರೆತ ಬಳಗೇರಿ ಶಾಸನದಲ್ಲಿ[48] (ಕಾಲದ ಉಲ್ಲೇಖವಿಲ್ಲ) ಸೋಭನೇಶ್ವರ ದೇವಾಲಯದ ಆಚಾರ್ಯನಾಗಿ ಚತುಸ್ಸಮಯ ವಾಖ್ಯಾನಕಾರ ಜಗದಿನ್ದಪಂಡಿತನಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.1005ರ ಕುಕನೂರು ಶಾಸನವು[49] ಆ ಊರಿನ ದೇವಾಲಯದ ಆಚಾರ್ಯನಾಗಿ ಸೋಮೇಶ್ವರಾಚಾರ್ಯನಾಗಿದ್ದಂತೆ ತಿಳಿಸುತ್ತದೆ. ಕೊಪ್ಪಳ ತಾಲೂಕಿನ ಅಳವಂಡಿಯ ಬಾವಾಜಿ ಹೊಲದಲ್ಲಿ ದೊರೆತ ಮತ್ತೊಂದು ಶಾಸನದಲ್ಲಿ[50] 400 ಮಹಾಜನಗಳು ಸೇರಿ 14 ಗದ್ಯಾಣ ಹಾಗೂ 2 ಮನೆಗಳನ್ನು ಮಲ್ಲಿಕಾರ್ಜುನ ಬೋವನಿಗೆ ದಾನ ಬಿಟ್ಟಂತೆ ತಿಳಿದು ಬರುತ್ತದೆ. ಮಾದಿನೂರಿನಲ್ಲಿ ದೊರೆತ ಒಂದು ಶಾಸನದಲ್ಲಿ[51] ಭೂಲೋಕಮಲ್ಲನ ಆಳಿಕೆಯ ಸಮಯದಲ್ಲಿ ಅಲ್ಲಿಯ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಊರಿನ ಮಹಾಜನರು ಕೆಲವು ದಾನಗಳನ್ನು ನೀಡುತ್ತಾರೆ.

**ಕ್ಷತ್ರಿಯ :**

ವರ್ಣವ್ಯವಸ್ಥೆಯ ಪದ್ಧತಿಯಲ್ಲಿ ಎರಡನೆ ಸ್ಥಾನ ಪಡೆದವರು ಕ್ಷತ್ರಿಯರು. ರಾಜತ್ವವು ಕ್ಷತ್ರಿಯರ ಭದ್ರವಾದ ತಳಹದಿಯ ಮೇಲೆ ನೆಲೆಗೊಂಡಿತ್ತು. ಇವರ ಪ್ರಮುಖ ಕಾರ್ಯಗಳಲ್ಲಿ ಮೊದಲನೆಯದು ರಾಜ್ಯಾಡಳಿತವಾದರೆ ಎರಡನೆಯದು ಆ ರಾಜ್ಯವನ್ನು ರಕ್ಷಿಸಿಕೊಂಡು ಬರುವುದೇ ರಾಜರುಗಳ ಶ್ರೇಷ್ಠ ಕರ್ತವ್ಯವಾಗಿ ಪರಿಣಮಿಸಿತ್ತು. ರಾಜ್ಯದ ಅಧಿಕಾರವನ್ನು ನೇರವಾಗಿ ನಿರ್ವಹಿಸುತ್ತಿದ್ದ ಕರ್ತವ್ಯದ ಜೊತೆಗೆ ತಮ್ಮ ಸಾಮ್ರಾಜ್ಯದ ಸುಧಾರಣೆ, ವಿಸ್ತರಣೆ, ನ್ಯಾಯ ಪರಿಪಾಲನೆ ಮಾಡುವುದು, ಪ್ರಜೆಗಳನ್ನು ರಕ್ಷಿಸುವುದು ಇವರ ಬಹು ಮುಖ್ಯವಾದ ಕರ್ತವ್ಯಗಳೆನಿಸಿದ್ದವು. ಈ ಕರ್ತವ್ಯಗಳ ಜೊತೆಗೆ "ಧಾರ್ಮಿಕವಾಗಿ ಕ್ಷತ್ರಿಯರಿಗೆ ಯಜ್ಞ-ಯಾಗಾದಿಗಳನ್ನು ಮಾಡುವ ಮತ್ತು ವೇದಗಳನ್ನು ಓದುವ ಅಧಿಕಾರವಿತ್ತು. ಹಿಂದಿನ ರಾಜ್ಯದಲ್ಲಿ ಅನೇಕರು ಯಜ್ಞಗಳನ್ನು ಮಾಡುವುದರಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದರು."[52] ಒಟ್ಟಿನಲ್ಲಿ ಯುದ್ಧ ಇವರ ಅವಿಭಾಜ್ಯ ಅಂಗವಾಗಿದ್ದು ಇವರನ್ನು ಚಕ್ರವರ್ತಿಗಳು, ಪ್ರಭುಗಳು, ವೀರರು, ಶೂರರು, ಕಲಿಗಳು ಎಂದು ಕರೆಯಲಾಗುತ್ತಿತ್ತು.

ಕೊಪ್ಪಳ ಜಿಲ್ಲೆಯನ್ನಾಳಿದ ರಾಜಮನೆತನಗಳಲ್ಲಿ ಆಳ್ವಿಕೆ ನಡೆಸಿದ ಚಕ್ರವರ್ತಿಗಳಲ್ಲಿ ಹೆಚ್ಚಿನವರು ಕ್ಷತ್ರಿಯರಾಗಿದ್ದರು. ಜಿಲ್ಲೆಯ ಯಾವುದೇ ಶಾಸನದಲ್ಲಿ ಈ ಕ್ಷತ್ರಿಯ ವರ್ಣದ ಬಗ್ಗೆ ಅಥವಾ ಇನ್ನಾವುದೇ ವಿಷಯದ ಬಗ್ಗೆ ಉಲ್ಲೇಖಗಳಿಲ್ಲ. ಆದರೆ ಇಲ್ಲಿ ರಾಜ್ಯಾಡಳಿತ ನಡೆಸಿದ ಕ್ಷತ್ರಿಯ ಅರಸರ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ಬಂದಿರುವುದರಿಂದ ಅವುಗಳು ಕ್ಷತ್ರಿಯರಿಗೆ ಸಂಬಂಧಪಟ್ಟ ಶಾಸನಗಳು ಎಂದು ಊಹಿಸಬೇಕಾಗುತ್ತದೆ. ಇಲ್ಲಿ ದೊರೆತ ಶಾಸನಗಳಲ್ಲಿ ಹೆಚ್ಚಿನ ಶಾಸನಗಳು ಅರಸರು ದಾನ ಕೊಟ್ಟ ಇಲ್ಲವೆ ಬೇರೆ ವಿಷಯಕ್ಕೆ ಸಂಬಂಧಪಟ್ಟಂತೆ ಶಾಸನಗಳನ್ನು

ಕೆತ್ತಿರುವುದರಿಂದ ಆ ಎಲ್ಲಾ ಶಾಸನಗಳನ್ನು ಕ್ಷತ್ರಿಯರು ಕೊರೆಸಿದ ಶಾಸನಗಳೆಂದರೆ ತಪ್ಪಾಗಲಾರದು.

**ವೈಶ್ಯರು :**

ಸಾಮಾಜಿಕ ಜಾತಿ ವ್ಯವಸ್ಥೆಯ ಸ್ಥರ ವಿನ್ಯಾಸದಲ್ಲಿ ಮೂರನೇ ವರ್ಣವೇ ವೈಶ್ಯ ವರ್ಣವಾಗಿದೆ. ವ್ಯಾಪಾರ ಮಾಡುವುದೇ ಇವರ ಮುಖ್ಯ ಮತ್ತು ಕುಲಕಸುಬಾಗಿತ್ತು. "ಕಮ್ಮಾರರು, ಅಕ್ಕಸಾಲಿಗರು, ಬಡಗಿಗಳು, ಕಂಚುಕಾರರು ಇದೇ ವಿಶ್ವಕರ್ಮಕ್ಕೆ ಸೇರಿದವರು."[53] ಇವುಗಳಲ್ಲದೆ ಇನ್ನೂ ಅನೇಕ ಉಪಜಾತಿಗಳು ಈ ವೈಶ್ಯ ವರ್ಗಕ್ಕೆ ಸೇರಿದವುಗಳಾಗಿವೆ. ವೈಶ್ಯ ಶಬ್ದಕ್ಕೆ ಸಂವಾದಿಯಾಗಿ **"ಶೆಟ್ಟಿ"** ಇಲ್ಲವೆ **"ಸೆಟ್ಟಿ"** ಎಂಬ ಮುಂತಾದ ಪದಗಳಿಂದ ಸಂಬೋಧಿಸಲಾಗುತ್ತದೆ. ಇವರು ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದರಿಂದ ಇವರನ್ನು ವರ್ತಕರೆಂದು ಕರೆಯಲಾಗುತ್ತದೆ. ಇಂತಹ ವೈಶ್ಯವರ್ಗವಾದ ಸೆಟ್ಟಿಯ ಜನಾಂಗದ ಬಗ್ಗೆ ಕೊಪ್ಪಳ ಜಿಲ್ಲೆಯ ಅನೇಕ ಶಾಸನಗಳಲ್ಲಿ ಉಲ್ಲೇಖ ಮೂಡಿಬಂದಿವೆ. ಕೊಪ್ಪಳದ ಮಾದಿನೂರಿನ ಕ್ರಿ.ಶ.1190ರ ಶಾಸನವು[54] ಯೆಡೆದೊರೆ–2000ಕ್ಕೆ ಸೇರಿದ್ದ ಕೆಳವಾಡಿ–300ರ ನಡುವೆ ಇದ್ದ ಮುದೇನೂರಿನ ತ್ರೈಪುರುಷ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಶೂದ್ರ, ಪಂಚಮರೊಂದಿಗೆ ಜೊತೆಗೂಡಿ ವೈಶ್ಯರು ಮದುವೆಯ ಹಣವನ್ನು ದಾನ ನೀಡಿದ್ದನ್ನು ವಿವರಿಸುತ್ತದೆ. ಕ್ರಿ.ಶ.1584ರ ಕುಕನೂರಿನಲ್ಲಿ ದೊರೆತ ಶಾಸನದಲ್ಲಿ[55] ದೇಸಾಯಿ ರಾಯಗೌಡನೊಂದಿಗೆ ಸೇರಿ ಅಕ್ಕಸಾಲಿಗರು ತಮಗೆ ಸಲ್ಲಬೇಕಾಗಿದ್ದ ಆದಾಯವನ್ನು ನಿಗದಿಪಡಿಸಿದ್ದಂತೆ ತಿಳಿದು ಬರುತ್ತದೆ.

ಕೊಪ್ಪಳದಲ್ಲಿ ದೊರೆತ ಮಾದಿನೂರಿನ ಶಾಸನವು[56] ಇಳಹಾಳ ಜಿದ್ದಿಸೆಟ್ಟಿಯ ಮಗ ಸಮಸ್ತ ನಾಗಿಸೆಟ್ಟಿ ಕಲುಕುಟಿಗನ ಕೈಲಿ ಮೊದೆಗನೂರ ಸೋಮನಾಥದೇವರ ಶಿವಾಲಯವನ್ನು ಕಲ್ಲು ಸಮೇತ ನಿಲ್ಲಿಸಿ ಜೀರ್ಣೋದ್ಧಾರ ಮಾಡಿಸಿದ್ದನ್ನು ತಿಳಿಸುತ್ತದೆ. ಕ್ರಿ..ಶ.1005ರ ಕುಕನೂರು ಶಾಸನದಲ್ಲಿ[57] ಈಶ್ವರಸೆಟ್ಟಿ ಎಂಬುವವನು ಆ ಊರಿನ ದೇವಾಲಯಕ್ಕೆ ಕಳಸವನ್ನಿಡಿಸಿ ಮುಖಸಾಲೆ ಕಟ್ಟಿಸಿ, ಮಂಟಪದ ಪರಿಸೂತ್ರದ ನಿರ್ವಹಣೆಗಾಗಿ 100 ಗದ್ಯಾಣವನ್ನು ನೀಡಿದ್ದಂತೆ ಕಂಡು ಬಂದಿದೆ. ಕ್ರಿ.ಶ.1547ರ ಪುರ ಶಾಸನದಲ್ಲಿ[58] ತಾವರೆಗೆರೆ ಸೀಮೆಯ ಪುರ ಗ್ರಾಮದಲ್ಲಿ ಇದ್ದ ಸೋಮೇಶ್ವರ ಮಹಾಲಿಂಗ ದೇವಸ್ಥಾನಕ್ಕೆ ಸೆಟ್ಟರು ಕಾಣಿಕೆ ನೀಡಿದ್ದಂತೆ ಉಲ್ಲೇಖ ಮೂಡಿ ಬಂದಿದೆ. ಕೊಪ್ಪಳದಲ್ಲಿ ದೊರೆತ ಕ್ರಿ.ಶ.12ನೇ ಶತಮಾನದ ಶಾಸನವು[59] ಬೊಮ್ಮಿಸೆಟ್ಟಿ ಮಗ ಸಾತಿಸೆಟ್ಟಿಯೆಂಬುವವನು ಪುಷ್ಪದಂತ ತೀರ್ಥಂಕರ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿಸಿದ್ದಂತೆ ಮಾಹಿತಿ ನೀಡಿದೆ. ಯಲಬುರ್ಗಾ ತಾಲೂಕಿನಲ್ಲಿ ದೊರೆತ ಶಾಸನವೊಂದರಲ್ಲಿ[60] ಮಿಂಡಗುದಲಿಯ ಕೇತಿಸೆಟ್ಟಿಯ ಮಗ ಮಲ್ಲಿಸೆಟ್ಟಿಯು ಪಾರ್ಶ್ವನಾಥದೇವರ ವಿಗ್ರಹವನ್ನು ಮಾಡಿಸಿ ಎರಂಬರಿಗೆಯ ನಗರಜಿನಾಲಯಕ್ಕೆ

ಕೊಟ್ಟಿದ್ದನ್ನು ತಿಳಿಸುತ್ತದೆ. ಕುಷ್ಟಗಿ ತಾಲೂಕಿನಲ್ಲಿ ದೊರೆತ ಅಂಟೂರುತಾಣ (ಕ್ರಿ.ಶ.1082) ಶಾಸನವು[61] ಶ್ರೀ ಸ್ವಯಂಭು ದೇವರ ಅಂಗಭೋಗ, ನೈವೇದ್ಯಕ್ಕೆ ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ಇತರರೊಡನೆ ಸೇರಿ ಅಕ್ಕಸಾಲಿಗರು ದಾನವನ್ನು ಬಿಟ್ಟಂತೆ ಮಾಹಿತಿ ನೀಡುತ್ತದೆ. ಈ ಜಿಲ್ಲೆಯಲ್ಲಿ ವೈಶ್ಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿ ತಮ್ಮದೇ ಆದ ಸ್ಥಾನವನ್ನು ಹೊಂದಿದ್ದರೆಂದು ಹೇಳಬಹುದು.

**ಶೂದ್ರರು :**

ಸಾಮಾಜಿಕ ಸ್ಥರ ವಿನ್ಯಾಸದಲ್ಲಿ 4ನೆಯ ವರ್ಣವೇ ಶೂದ್ರರದು. ಈ ವರ್ಗಕ್ಕೆ ಸೇರಿದವರು ಕಠಿಣ ಸ್ವರೂಪದ ನಿಯಮಗಳನ್ನು ಅನುಸರಿಸ ಬೇಕಾಗಿದ್ದಿತು. ಮೇಲಿನ ಮೂರು ವರ್ಣದವರ ಸೇವೆ ಮಾಡುವುದೇ ಇವರ ವೃತ್ತಿಯಾಗಿತ್ತು. ತಮ್ಮ ಜೀವನವನ್ನು ಸಾಗಿಸಲು ಇವರು ತಮ್ಮ ಕುಲ ಕಸುಬನ್ನು ಕೈಗೊಂಡು ಶ್ರಮಜೀವಿಗಳೆನಿಸಿದ್ದರು. ಕೃಷಿ, ಪಶುಪಾಲನೆ ಮೊದಲಾದ ಉದ್ಯೋಗಗಳನ್ನು ಕೈಗೊಂಡಿದ್ದರು. ಕೊಪ್ಪಳ ಜಿಲ್ಲೆಯ ಗವಿಮಠದ ಹಿಂಬದಿಯ ಗುಂಡಿನಲ್ಲಿ (ಕಾಲದ ಉಲ್ಲೇಖವಿಲ್ಲ) ದೊರೆತ ಶಾಸನದಲ್ಲಿ[62] ದೇವನಾಂಪ್ರಿಯ ಅಶೋಕನ ಆದೇಶದಂತೆ ಕ್ಷುದ್ರರೂ ಜಂಬೂದ್ವೀಪದ ದೇವರುಗಳೊಂದಿಗೆ ಮಿಶ್ರರಾಗಿ ತಮ್ಮ ಪ್ರಯತ್ನದಿಂದ ಸ್ವರ್ಗವನ್ನು ಪಡೆಯಬಹುದು ಎಂಬ ಉಲ್ಲೇಖವಿರುವ ಮಾಹಿತಿಯು ಮೂಡಿ ಬಂದಿದೆ. ಮಾದಿನೂರಿನಲ್ಲಿ ದೊರೆತ (ಕ್ರಿ.ಶ.1190) ಶಾಸನವು[63] ತಮ್ಮೂರಿನ ನಡುವೆ ಇದ್ದ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಶೂದ್ರರು ಇತರರೊಂದಿಗೆ ಸೇರಿ ಕೆಲವು ದಾನವನ್ನು ಬಿಟ್ಟಿದ್ದಂತೆ ತಿಳಿಸುತ್ತದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಅನುವಂಶೀಯವಾಗಿ ಹುಟ್ಟಿನಿಂದಲೇ ಬಂದ ಸ್ಥಾನಮಾನಗಳನ್ನು ಆಧರಿಸಿ, ಜಾತಿಯ ಆಧಾರದ ಮೇಲೆ ಇವನು ಮೇಲು, ಅವನು ಕೀಳು ಎನ್ನುವ ಸಾಮಾಜಿಕ ರೀತಿನೀತಿಯಲ್ಲಿ ಶೂದ್ರರು ಗ್ರಾಮಗಳ ಹೊರಗೆ ಪ್ರತ್ಯೇಕವಾಗಿಯೇ ವಾಸಿಸಬೇಕಾಗಿತ್ತು. ಸಾಮಾಜಿಕ ಅಂತರ ಕ್ರಿಯೆಯ ಮೇಲೆ ಇಂತಹ ಒಂದು ಕಟ್ಟುಪಾಡುಗಳನ್ನು ಅಂದಿನ ವರ್ಣವ್ಯವಸ್ಥೆ ವಿಧಿಸಿತ್ತು. ಸಾಮಾಜಿಕ ಅಸಮಾನತೆ, ಶ್ರೇಷ್ಠ, ಕನಿಷ್ಠ ಮೊದಲಾದವುಗಳಿಂದ ಕೂಡಿದ್ದ ಅನಿವಾರ್ಯವಾದ ರೀತಿ ನೀತಿಗಳು ಕಾಲಾಂತರದಲ್ಲಿ ಮಾರ್ಪಟ್ಟಿತ್ತೆಂದು ಹೇಳಬಹುದು. "ವರ್ಣವ್ಯವಸ್ಥೆಯನ್ನು ಅದರ ಶುದ್ಧರೂಪದಲ್ಲಿ ಉಳಿಸುವುದು ಕ್ರಮೇಣ ಕಷ್ಟವಾಗುತ್ತ ಬಂದಿರಬೇಕೆಂದು ಎಂ.ಚಿದಾನಂದ ಮೂರ್ತಿಯವರು ಅಭಿಪರಾಯ ಪಟ್ಟಿದ್ದಾರೆ."[64]

**ವೃತ್ತಿ ಆಧಾರಿತ ಜಾತಿಗಳು :**

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ನಾಲ್ಕು ವರ್ಣಗಳೂ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ವರ್ಗಕ್ಕೆ ಸಂಬಂಧಪಟ್ಟ ವೃತ್ತಿಯನ್ನು ಮಾಡಬೇಕಾಗುತ್ತದೆ.

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಒಂದು ನಿರ್ದಿಷ್ಟ ಸ್ಥಾನಮಾನವಿದ್ದು ವೃತ್ತಿಯನ್ನವಲಂಬಿಸಲು ಅವಕಾಶವಿದ್ದಿತು. ಅದನ್ನನು ಸರಿಸಿಯೇ ಅವರು ಕಾರ್ಯೋನ್ಮುಖರಾಗುತ್ತಿದ್ದರು. "ವೃತ್ತಿಗೆ ಮಾನವ ಇತಿಹಾಸದಷ್ಟು ಪ್ರಾಚೀನತೆಯಿದೆ. ವ್ಯಕ್ತಿಯ ಜೀವನಾಧಾರ; ವೃತ್ತಿ. ಹೀಗಾಗಿ ಮನುಕುಲದ ಚರಿತ್ರೆಯ ಆರಂಭದಿಂದಲೂ ಒಂದಿಲ್ಲೊಂದು ವೃತ್ತಿಯನ್ನು ಕೈಗೊಳ್ಳುವುದು ಅವನಿಗೆ ಅನಿವಾರ್ಯ ಅಗತ್ಯವೆನಿಸಿದ್ದಿತು."[65] ವೃತ್ತಿಯೇ ಮನುಷ್ಯನಿಗೆ ಜೀವಸೆಲೆ, ಬದುಕು ಎಲ್ಲವೂ ಆಗಿತ್ತು. ವೃತ್ತಿಯಿಲ್ಲದೆ ಮನುಷ್ಯ ಬಾಳುವುದು ದುಸ್ತರವಾಗುತ್ತದೆ. ಹೀಗಾಗಿ ವೃತ್ತಿಯಿಲ್ಲದೆ ಮನುಷ್ಯನಿಲ್ಲ; ಮನುಷ್ಯನಿಲ್ಲದೆ ವೃತ್ತಿಯಿಲ್ಲ ಎನ್ನುವಷ್ಟರ ಮಟ್ಟಿಗೆ ಒಂದಕ್ಕೊಂದು ಮನುಷ್ಯ ವೃತ್ತಿಗಳ ಸಂಬಂಧಗಳು ಬೆಸೆದುಕೊಂಡಿವೆ. ಇಂತಹ ವೃತ್ತಿಯನ್ನು ಆಧಾರವಾಗಿಟ್ಟುಕೊಂಡೇ ಬದುಕುವ ಅನೇಕ ಜಾತಿಗಳು ಹುಟ್ಟಿಕೊಂಡಿವೆ. ಅಂತಹ ವೃತ್ತಿಯಾಧಾರಿತ ಜಾತಿಗಳ ಉಲ್ಲೇಖಗಳು ಕೊಪ್ಪಳ ಜಿಲ್ಲೆಯ ಅನೇಕ ಶಾಸನಗಳಲ್ಲಿವೆ.

**ಗಾಣಿಗರು :**

ಗಾಣದಿಂದ ಎಣ್ಣೆಯನ್ನು ತೆಗೆದು ಉತ್ಪಾದನೆ ಮಾಡಿದ ಎಣ್ಣೆಯನ್ನು ಮಾರಾಟ ಮಾಡಿ ಜೀವಿಸುವವರನ್ನು ಗಾಣಿಗರು ಎಂದು ಕರೆಯುತ್ತಿದ್ದರು. "ಇವರು ರೈತರ ಎಣ್ಣೆಯ ಬೀಜಗಳನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ಹಿಂಡಿಕೊಂಡು ಜೀವಿಸುತ್ತಿದ್ದರು."[66] ದೇವರ ನೈವೇದ್ಯ ಹಾಗೂ ನಿತ್ಯೋಪಯೋಗಕ್ಕೆ ಅಧಿಕವಾಗಿ ಅತ್ಯಗತ್ಯವಿದ್ದುದರಿಂದ ಪ್ರತಿಯೊಂದು ಊರುಗಳಲ್ಲಿಯೂ ಗಾಣಗಳಿದ್ದವೆಂದು ಹೇಳಬಹುದಾಗಿದೆ. ಅಳವಂಡಿಯಲ್ಲಿ ದೊರೆತ (ಕಾಲದ ಉಲ್ಲೇಖವಿಲ್ಲ) ಶಾಸನವು[67] ಸಿಂಗಣನ ಮಗ ಮಾದಣ ಮಾಳಿಗೆ ಮನೆಯೊಂದನ್ನು ತೆಲ್ಲಿಗರ (ಗಾಣಿಗರ) ಕೇರಿಯಲ್ಲಿ ದೇವರ ನಂದಾದೀಪಕ್ಕಾಗಿ ಸಿಂಗಸೆಟ್ಟಿಯು ಸೊಟಿಗೆ ಎಣ್ಣೆಯನ್ನು ಬಿಟ್ಟ ಮಾಹಿತಿಯನ್ನು ತಿಳಿಸುತ್ತದೆ. ಕ್ರಿ.ಶ.1190ರ ಮಾದಿನೂರು ಶಾಸನವು[68] ತ್ರೈಪುರುಷ ದೇವಾಲಯದ ಪೂಜೆ, ಪುನಸ್ಕಾರ, ಖಂಡಸ್ಫುಟಿತ ಜೀರ್ಣೋದ್ಧರಕ್ಕೆ, ಪೂಜಾರಿಯ ಜೀವಿತಕ್ಕೆ ಮೂರು ಗದ್ಯಾಣ, ಭಟ್ಟವೃತ್ತಿಗೆ 3ಮತ್ತರು ಹಾಗೂ ಆ ದೇವಾಲಯದ ನಂದಾದೀವಿಗೆ ಗಾಣವನ್ನು ದಾನಬಿಟ್ಟ ಉಲ್ಲೇಖವು ಮೂಡಿ ಬಂದಿದೆ. ಕಲ್ಲೂರಿನಲ್ಲಿ ದೊರೆತ ಶಾಸನವು[69] ಬಳ್ಳಿಗೆರೆಯ ಕಲ್ಲೂರು ಸ್ವಯಂಭೂ ಕಲಿದೇವರ ಅಂಗಭೋಗಕ್ಕಾಗಿ ಒಂದು ಗಾಣವನ್ನು ದಾನ ಬಿಟ್ಟ ಮಾಹಿತಿಯನ್ನು ನೀಡಿದೆ. ಕುಕನೂರಿನ (ಕ್ರಿ.ಶ.1149) ಶಾಸನದಲ್ಲಿ[70] ಕುಕನೂರಿನ ಮಲ್ಲಿಕಾರ್ಜುನದೇವರ ನೈವೇದ್ಯಕ್ಕಾಗಿ ಹೊನ್ನಿನ ಜೊತೆಗೆ ಒಂದು ಗಾಣವನ್ನು ಮಂಮರಸ ದಂಡಾನಾಥನು ಬೆಳ್ವಲ-300ನ್ನು ಆಳುತ್ತಿದ್ದಾಗ ಇವನ ಕೈಕೆಳಗಿನ ಅಧಿಕಾರಿ ಮೇದಿರಾಜದಣ್ಣ ನಾಯಕನು ದಾನ ಬಿಟ್ಟ ಮಾಹಿತಿ ಕಂಡು ಬಂದಿದೆ. ಪುರ ಶಾಸನವು[71] ಆ ಊರಿನ ಗವರೇಶ್ವರದೇವರ ಪೂಜೆ ಪುನಸ್ಕಾರ ಹಾಗೂ ನೈವೇದ್ಯಕ್ಕಾಗಿ ಒಂದು ಗಾಣವನ್ನು

ಗಾಣಿಗರು ನಂದಾದೀಪಕ್ಕೆಂದು ಸೊಳಸಿಗೆ ಎಣ್ಣೆಯನ್ನು ದಾನ ಬಿಟ್ಟಿದ್ದನ್ನು ಕುರಿತು ವಿವರಣೆ ನೀಡಿದೆ. ಚಳಗೇರಿಯಲ್ಲಿ ದೊರೆತ ಕ್ರಿ.ಶ.1172ರ ಶಾಸನದಲ್ಲಿ[72] ಬೂಚಮದಂಡನಾಯಕನು ಕೆಲ್ಲಂಗೆರೆಯಲ್ಲಿ ಕಟ್ಟಿಸಿದ್ದ ಲಕ್ಷ್ಮಿನಾರಾಯಣ ದೇವಾಲಯಕ್ಕೆ ನಂದಾದೀವಿವಿಗೆಂದು ಗುಡಿ ಸಮೀಪದ ಗಾಣವೊಂದನ್ನು ತೆಲ್ಲಿಗರು ಹಾಗೂ ಸಮಸ್ತ ಪ್ರಜೆಗಳು ಸೇರಿ ದಾನ ಬಿಟ್ಟಿದ್ದಂತೆ ತಿಳಿದು ಬರುತ್ತದೆ. ಅಂಟೂರುಠಾಣ ಶಾಸನ[73](ಕ್ರಿ.ಶ.1082)ವು ಶ್ರೀಸ್ವಯಂಭೂ ದೇವರ ಅಂಗಭೋಗ, ನೈವೇದ್ಯಕ್ಕೆಂದು ಪ್ರಮುಖರ ಸಮ್ಮುಖದಲ್ಲಿ ಅಲ್ಲಿದ್ದ ಸೆಟ್ಟಿಯರು ಸೇರಿ ಗಾಣದಿಂದ ತೆಗೆದ ಎಣ್ಣೆಯನ್ನು ದಾನ ಬಿಟ್ಟಿದ್ದರ ಕುರಿತು ವಿವರಣೆ ನೀಡಿದೆ.

**ಮಾಲಗಾರರು :**

ತೋಟಗಳಲ್ಲಿ ಹೂವಿನ ಗಿಡಗಳನ್ನು ಬೆಳೆಸಿ ಆ ಹೂಗಳನ್ನು ಆಯ್ದುಕೊಂಡು ಮಾಲೆಗಳನ್ನು ಮಾಡಿ ಸಂತೆ–ಪೇಟೆಗಳಲ್ಲಿ ಮಾರಾಟ ಮಾಡುವವರು ಮಾಲಗಾರರು. ಅಳಿವಂಡಿ ಶಾಸನ[74] (ಕಾಲದ ಉಲ್ಲೇಖವಿಲ್ಲ) ವು ಮಾಲಗಾರ ಮಾರಸಿಂಗಣನು 40 ಗದ್ಯಾಣ ಹಾಗೂ ಒಂದು ಮತ್ತರು ಭೂಮಿಯನ್ನು ದಾನ ಬಿಟ್ಟ ಮಾಹಿತಿ ನೀಡಿದೆ. ಯಾವ ವಿಷಯಕ್ಕಾಗಿ ದಾನವನ್ನು ಬಿಟ್ಟ ಎನ್ನುವುದರ ಕುರಿತು ಉಲ್ಲೇಖ ದೊರೆತಿರುವುದಿಲ್ಲ. ಮತ್ತೊಂದು ಅಳವಂಡಿ ಶಾಸನವು[75] ಅಳವಂಡಿಯ ಭೀಮ ಮತ್ತು ಅವನ ಪತ್ನಿ ದುಗ್ಗಿಯಕ್ಕ, ಇವರ ಮಗ ಚಾವರಾಜನಿದ್ದ ಈ ಚಾವರಾಜನು ಕೇಶವದೇವಾಲಯವನ್ನು ಮಾಡಿಸಿದ್ದು ಆ ದೇವಾಲಯಕ್ಕೆ ಭೂಮಿಯನ್ನು ಬಿಟ್ಟಿದ್ದಲ್ಲದೆ 172 ಗದ್ಯಾಣ ಹೊನ್ನನ್ನು ಬಡ್ಡಿಗಾಗಿ ದಾನ ನೀಡಿರುತ್ತಾನೆ. ಈ ಬಡ್ಡಿಯ ರೂಪದಲ್ಲಿ ಬಂದ ಹಣವನ್ನು ಅಲ್ಲಿದ್ದ ಮಾಲೆಗಾರರಿಗೆ ನೀಡಬೇಕೆಂದು ಉಲ್ಲೇಖ ನೀಡಿದೆ. ಕುಕನೂರು ಶಾಸನವು[76] ಶ್ರೀ ಮೂಲಸ್ಥಾನದೇವರ ನೈವೇದ್ಯಕ್ಕೆ, ಅಂಗಭೋಗಕ್ಕೆ, ಚೈತ್ರಪವಿತ್ರಕ್ಕಾಗಿ ನೀಡಿದ ಊರಮೇಲಿನ ಹಾಗ ವ್ರಿದ್ದಿಯನ್ನು, ಗದ್ಯಾಣ 100ನ್ನು, ಊರಿನ ಉತ್ತರಕ್ಕೆ ಹೂವಿನ ತೋಟ 2 ಮತ್ತರು, 450 ಕಮ್ಮವನ್ನು ನೀಡಿ ಈ ಬಡ್ಡಿಯಿಂದ ಬರುವ ಆದಾಯವನ್ನು ದೇವರ ಹೂದೋಟವನ್ನು ಮಾಡುವ ಮಾಲೆಗಾರರಿಗೆ ನೀಡಬೇಕೆಂದು ಗುರುದೇವ ಎನ್ನುವವನು ಮನವಿ ಮಾಡಿದ್ದನ್ನು ಕುರಿತು ನೀಡಿದೆ.

**ಕಮ್ಮಟಕಾರರು :**

"ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು 'ಕಮ್ಮಟ'ಗಳೆಂದೂ, 'ಅಚ್ಚಿನ ಟಂಕಸಾಲೆ'ಗಳೆಂದೂ ಕರೆಯುತ್ತಿದ್ದರು."[77] ವಿಶ್ವಕರ್ಮರೆಂದು ಕರೆಸಿಕೊಳ್ಳುವ ಇವರು ಚಿನ್ನದ ಕೆಲಸಗಳನ್ನು ಮಾಡುತ್ತಿದ್ದರು. "ರಾಜರು ಇವರನ್ನು ಕಮ್ಮಟಗಳಲ್ಲಿ ನಾಣ್ಯಗಳನ್ನು ತಯಾರಿಸಲು ನೇಮಿಸಿ ಕೊಳ್ಳುತ್ತಿದ್ದರು."[78] ಕ್ರಿ.ಶ.1170ರ ಕುಕನೂರಿನ ಶಾಸನದಲ್ಲಿ[79] 'ಕುಕ್ಕನೂರು ಸಾಸಿರ್ವ್ವರ ವರಪುತ್ರ ನಚ್ಚಿನ ಕಮ್ಮಟದೊಡೆಯಂ

ಚನ್ನೋಜನ ಮಗ ದಾಮೋಜಂ' ಎಂಬುದರ ಕುರಿತು ಮಾತ್ರ ಉಲ್ಲೇಖವಿದೆ. ಆದರೆ ಇವರ ಕುರಿತು ಯಾವುದೇ ಹೆಚ್ಚಿನ ಮಾಹಿತಿ ದೊರೆತಿರುವುದಿಲ್ಲ.

**ಕುಂಬಾರರು :**

ಮಣ್ಣಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುತ್ತ ತಮ್ಮ ಜೀವನವನ್ನು ನಡೆಸುತ್ತಿದ್ದರು. ಅದರಲ್ಲಿಯೂ ಮಣ್ಣಿನ ಮಡಕೆಗಳನ್ನು ಮಾಡಿ ಅವುಗಳನ್ನು ಮಾರಾಟ ಮಾಡಿ ತಮ್ಮ ಆದಾಯವನ್ನು ಸಂಪಾದಿಸುತ್ತಿದ್ದರು. ಕ್ರಿ.ಶ.13ನೇ ಶತಮಾನದಲ್ಲಿ ದೊರೆತ ಆನೆಗೊಂದಿಯ ತಾಮ್ರಶಾಸನವು[80] ಕುಂಬಾರ ಕುಲ ಹುಟ್ಟಿನ ಬಗ್ಗೆ ಶಿವಪಾರ್ವತಿಯರ ವಿವಾಹದ ಜೊತೆ ಸಮೀಕರಿಸಿ ಉಲ್ಲೇಖಿಸ ಲಾಗಿದೆ. ಆ ಕಥೆಯನ್ನು ಶಾಸನದಲ್ಲಿ ಈ ರೀತಿ ನಿರೂಪಿಸಲಾಗಿದೆ. ಗಿರಿರಾಜನ ಮಗಳು ಪಾರ್ವತಿಯು ಕಲ್ಲದೇವರಿಗೆ ಪ್ರಖ್ಯಾತಿ ಬರಬೇಕೆಂಬ ದೃಷ್ಟಿಯಿಂದ ಪರ್ವತದ ಬಳಿಗೆ ಬಂದು ತಪಸ್ಸನ್ನಾಚರಿಸುತ್ತಾಳೆ. ಇತ್ತ ಮಹದೇವನು ಬೇಟೆಯಾಡಬೇಕೆಂಬ ದೃಷ್ಟಿಯಿಂದ ಬೇಡನಾಗಿ ದೇವತೆಗಳೊಡನೆ ಕಾಮದೇವನ ಸಂಗಡ ಗಿರಿರಾಜನ ಮಗಳು ತಪಸ್ಸು ಮಾಡುತ್ತಿದ್ದ ಪ್ರದೇಶಕ್ಕೆ ಬರುತ್ತಾನೆ. ಇದರಿಂದ ಸಂತಸಗೊಂಡ ದೇವತೆಗಳು ಶಿವನನ್ನು ಶೃಂಗಾರ ಮಾಡಿಕೊಂಡು ಪುರದಲ್ಲಿ ಮೆರವಣಿಗೆ ಮಾಡಿ ವಿವಾಹ ಮಂಟಪಕ್ಕೆ ಕರೆತರುತ್ತಾರೆ. ವಿವಾಹ ಮಂಟಪದಲ್ಲಿ ಎಲ್ಲವೂ ಧಾರೆಯ ನೆರೆಯಲು ಕಳಸ, ಜಗಲಿಗೆ, ಹೂಜೆಗಳಿರಲಿಲ್ಲ. ಇವೆಲ್ಲ ಎಲ್ಲಿ ಎಂದು ಗಿರಿರಾಜ ಶಿವನನ್ನು ಕೇಳಿದಾಗ ನಾರಾಯಣನ ಕೈಯಲ್ಲಿನ ಚಕ್ರವೇ ತಿರುಗಿ ಮಾಡಿ, ಬ್ರಹ್ಮನ ವೇದಪೊಸ್ತಕದ ಕಂಬಿಯಂ ಬಾಂಬಕಂಬಿ ಮಾಡುತ್ತಾನೆ. ಹೀಗೆ ಪ್ರತಿಯೊಬ್ಬರಿಂದ ಒಂದೊಂದು ವಸ್ತು ಪಡೆದ ನಂತರ ಯಮನ ಕೋಣನಿಂದ ಮಣ್ಣನ್ನು ಮಿದಿಸಿ, ಹೂಜೆ, ಸೊನ್ನಲಿಗೆ, ಕುಂಭವೇ ಮೊದಲಾದ ವಸ್ತುಗಳನ್ನು ಮಾಡಿ ಸುಟ್ಟು, ಬಣ್ಣವಿಟ್ಟು ಮದುವೆ ಮನೆಗೆ ಕರೆತರುತ್ತಾರೆ. ಮುಂದೆ ಧಾರೆಯನ್ನೆರೆಯುತ್ತಾರೆ. ಆಗ ತನ್ನಮದುವೆ ಧಾರೆಗೆ ಸಹಾಯ ಮಾಡಿದವರನ್ನು 'ಸಾಲೆಸಾಸಿರ್ವ್ವರು' ಎಂಬ ಹೆಸರಿನಿಂದ ಪ್ರಸಿದ್ಧರಾಗಿರೆಮದು ಹೇಳಿ ಅಯ್ಯಾಮಂತನೆಂಬ ಹೆಸರನ್ನು ಕೊಡುತ್ತಾನೆಂದು ಕಥೆಯಲ್ಲಿ ವಿವರವಿದೆ. ಕುಷ್ಟಗಿ ತಾಲೂಕಿನಲ್ಲಿ ಪುರ ಗ್ರಾಮದಲ್ಲಿ (ಕ್ರಿ.ಶ.1547) ದೊರೆತ ಶಾಸನವು[81] ತಾವರೆಗೆರೆ ಸೀಮೆಯ ಪುರ ಗ್ರಾಮದಲ್ಲಿ ಸೋಮೇಶ್ವರಮಹಾಲಿಂಗ ದೇವಾಲಯಕ್ಕೆ ವಿರುಪಣನಾಯಕನು, ಸೆಟ್ಟರು ಸೇರಿ ಕುಂಬಾರ ತರುವ ಹಣದೊಂದಿಗೆ, ಉಪ್ಪಿನಮೋಳೆ ಹಾಗೂ ಮುಂತಾದವನ್ನು ದಾನ ಬಿಟ್ಟಿದ್ದಂತೆ ತಿಳಿದು ಬರುತ್ತದೆ.

**ನಾಯಿಂದರರು :**

ಕ್ಷೌರದ ಕೆಲಸವನ್ನು ಮಾಡುವವನು ನಾವಿದ. ಅಗ್ರಹಾರಗಳಲ್ಲಿ ಬ್ರಾಹ್ಮಣರ ಉಗುರುಗಳನ್ನು ತೆಗೆಯಲು ನಾವಿದನನ್ನು ನೇಮಿಸಿ ಕೊಳ್ಳುತ್ತಿದ್ದರು.[82]

ಶೂದ್ರವರ್ಗದಲ್ಲಿ ಕೂದಲನ್ನು ಕತ್ತರಿಸುವ ಕೆಲಸ ಮಾಡುವ ಒಂದು ವರ್ಗವಿದು. ಈ ವರ್ಗಕ್ಕೆ ಹಡಪದ, ನಾಯಿಂದ, ಕ್ಷೌರಿಕ ಮತ್ತು ಹಜಾಮ ಮುಂತಾದ ಹೆಸರುಗಳಿಂದಲೂ ಸಂಬೋಧಿಸಲಾಗುತ್ತದೆ. ಈ ಜನಾಂಗದ ಕುರಿತು ಜಿಲ್ಲೆಯ ಕೆಲವು ಶಾಸನಗಳು ಮಾಹಿತಿಯನ್ನು ನೀಡಿವೆ. ಕುಕನೂರು (ಕ್ರಿ.ಶ.1584) ಶಾಸನವು[83] ದೇಸಾಯಿ ರಾಯಗೌಡನು ಹಾಗೂ ಮುಂತಾದವರೊಂದಿಗೆ ಸೇರಿ ನಾಯಿಂದರು ತಮಗೆ ಸಲ್ಲಬೇಕಾದ ಆದಾಯವನ್ನು ನಿಗದಿಪಡಿಸಿದಂತೆ ತಿಳಿಸುತ್ತದೆ. ಕ್ರಿ.ಶ.1547ರಲ್ಲಿ ದೊರೆತ ಕುಕನೂರಿನ ಶಾಸನದಲ್ಲಿ[84] ಸದಾಶಿವರಾಯನು ಆಳುತ್ತಿದ್ದಾಗ ಊಳಿಗದ ಕೊಂಡೋಜನ ಬಿನ್ನಹವನ್ನು ಕೇಳಿ ಸದಾಶಿವರಾಯನು ತಾನು ಆಳುವ ರಾಜ್ಯದಲ್ಲಿನ ಬಿಟ್ಟಿ–ಬರಾಡ ಮುಂತಾದ ತೆರಿಗೆಗಳಿಂದ ನಾಯಿಂದರಿಗೆ ವಿನಾಯ್ತಿ ನೀಡಿದ್ದಂತೆ ತಿಳಿದುಬರುತ್ತದೆ. ಕ್ರಿ.ಶ.1547ರ ತಾವರಗೆರೆ ಶಾಸನವು[85] ಸದಾಶಿವರಾಯನ ಆಳಿಕೆಯ ಕಾಲವನ್ನು ಉಲ್ಲೇಖಿಸಿದ್ದು ಈತನ ಕಾರ್ಯಕರ್ತನಾದ ಅಳಿಯ ರಾಮರಾಜದೇವನು ತಾವರಕೆರೆಯ ಸೀಮೆಯ 130 ಗ್ರಾಮಗಳ ಅಂನ್ನು, ಪನ್ನು, ಬಿಟ್ಟಿ, ಬಿಡಾರವನ್ನು ಈ ಸೀಮೆಯ ತಿಂಮೋಜ, ಕೊಂಡೋಜ, ಭದ್ರೋಜರ ಬಿನ್ನಹದ ಮೇರೆಗೆ ಕ್ಷೌರಿಕರಿಗೆ ಮನ್ನಾ ಮಾಡಿಕೊಟ್ಟ ವಿಷಯದ ಪ್ರಸ್ತಾಪವನ್ನು ತಿಳಿಸುತ್ತದೆ.

ಗಂಗಾವತಿ ತಾಲೂಕಿನ ಕನ್ನೇರಮಡುವಿನಲ್ಲಿ ದೊರೆತ ಕ್ರಿ.ಶ.1547 ಮತ್ತೊಂದು ಶಾಸನದಲ್ಲಿಯೂ[86] ಸದಾಶಿವರಾಯನ ಆಳಿಕೆಯ ಪ್ರಸ್ತಾಪವಿದ್ದು ಈತನ ಕಾರ್ಯಕರ್ತನಾದ ಶ್ರೀರಂಗರಾಜು ರಾಮರಾಜದೇವ ಮಹಾ ಅರಸನು ಕ್ಷೌರಿಕರಾದ ತಿಂಮೋಜ, ಭದ್ರೋಜ, ಕೊಂಡೋಜರಿಗೆ ಏನನ್ನೋ ನೀಡಿದ್ದಂತೆ ಕಂಡು ಬಂದಿದೆ. ಕ್ರಿ.ಶ.13ನೇ ಶತಮಾನದಲ್ಲಿ ದೊರೆತ ಕೊಪ್ಪಳ ಶಾಸನವು[87] ಗೌರಾದೇವಿಯರ ಹಡಪದ ಲಖ್ಖಾರ್ಯ ಎಂಬುವವನು ಸಾತಲದೇವಿ ಬಸದಿಗೆ ಶಾಸನ ಸಹಿತ ಭೂಮಿಯನ್ನು ದಾನ ನೀಡಿದ ವಿಷಯವನ್ನು ಉಲ್ಲೇಖಿಸಿದೆ.

**ಜೇಡರು :**

ಬಟ್ಟೆಗಳನ್ನು ನೇಯುತ್ತಿದ್ದವರು ನೇಕಾರರು ಅಥವಾ ಜೇಡರು.[88] ವೃತ್ತಿಯಾಧಾರಿತ ಜಾತಿಗಳಲ್ಲಿ ಈ ವರ್ಗವೂ ಒಂದಾಗಿದ್ದು, ಬಟ್ಟೆಗಳನ್ನು ನೇಯುವ ವೃತ್ತಿಯೇ ಇವರ ಕುಲಕಸುಬಾಗಿತ್ತು. ಇಂತಹ ಜನಾಂಗದ ಕುರಿತು ಕೇವಲ ಒಂದು ಶಾಸನದಲ್ಲಿ ಮಾತ್ರ ಉಲ್ಲೇಖ ದೊರೆತಿರುತ್ತದೆ. ಕುಕನೂರಿನ ಶಾಸನವು[89] ಇತರರೊಂದಿಗೆ ಜೇಡರಿಗೂ ಸಲ್ಲಬೇಕಾದ ಆದಾಯವನ್ನು ನಿಗದಿಪಡಿಸಿದ್ದಂತೆ ಮಾಹಿತಿಯನ್ನು ನೀಡಿದೆ. ಉಳಿದಂತೆ ಈ ಜಾತಿಯ ಯಾವುದೇ ಮಾಹಿತಿಗಳು ಜಿಲ್ಲೆಯ ಶಾಸನಗಳಿಂದ ತಿಳಿದುಬರುವುದಿಲ್ಲ.

**ಬಡಗಿಗಳು :**

ವೃತ್ತಿಯಾಧಾರಿತ ಜಾತಿಗಳಲ್ಲಿ ಈ ಬಡಗಿ ಜಾತಿಯೂ ಒಂದು. ಮರದ

ಕೆಲಸಗಳನ್ನು ಮಾಡುವವನು ಬಡಗಿ.[90] ಕಮ್ಮಾರರು, ಅಕ್ಕಸಾಲಿಗಳು, ಕಂಚುಗಾರರು ಸೇರುವ ಇದೇ ವಿಶ್ವಕರ್ಮಕುಲಕ್ಕೆ ಸೇರಿದವರು ಬಡಗಿಗಳು. "ದೇವಸ್ಥಾನಕ್ಕೆ ಸಂಬಂಧಿಸಿದ ಮರಗೆಲಸಗಳನ್ನು ಮಾಡಲು, ಮುರಿದು ಹೋದ ಸಾಮಾನುಗಳನ್ನು ಸರಿಪಡಿಸಲು ಇವರಿಗೆ ಶಾಶ್ವತವಾದ ದತ್ತಿಗಳನ್ನು ಬಿಟ್ಟುಕೊಡುತ್ತಿದ್ದರು."[91] ಕ್ರಿ.ಶ.1561ರಲ್ಲಿ ದೊರೆತ ಕುಕನೂರಿನ ಶಾಸನ[92]ದಲ್ಲಿ ಶ್ರೀ ಜೇಷ್ಠಮಹಾಲಕ್ಷ್ಮಿದೇವರ ದೇವಾಲಯದ ಬಾಗಿಲಿನ ಜೀರ್ಣೋದ್ಧಾರವನ್ನು ದೇವಸ್ಥಾನದ ಆಚಾರ್ಯ, ಕುಕನೂರ ಗೌಡ ಭಟ್ಟಾಚಾರ್ಯನ ಮೊಮ್ಮಕ್ಕಳೊಡನೆ ಕುಕನೂರು ಸೀಮೆಯ ದೇಸಾಯಿ, ಗೌಡನು ಇವರು ಮಾಡಿಸುತ್ತಾರೆ. ಈ ಕಾರ್ಯವನ್ನು ಸಂಗನಾಳಿನ ಬಡಗಿ ಬಸವೋಜನ ಮಗ ಗಣೋಜನು ಮಾಡಿದ್ದಂತೆ ಉಲ್ಲೇಖವಿದೆ. ಪುರದಲ್ಲಿ ದೊರೆತ ಶಾಸನ[93] (ಕ್ರಿ.ಶ.12ನೇ ಶತಮಾನ)ವು ಶ್ರೀಗವರೇಶ್ವರದೇವರಿಗೆ ದತ್ತಿಯಾಗಿ ಕೆಲವು ಸೆಟ್ಟರು ದಾನಗಳನ್ನು ನೀಡುತ್ತಾರೆ. ಇದೇ ಸಂದರ್ಭದಲ್ಲಿ ದೇವರ ಅರಮನೆಯ ಬಡಗಿ ಕಾಳೋಜನಿಗೆ ಒಂದು ಮತ್ತರು, ಇನ್ನೊಬ್ಬ ಬಡಗಿ ಕಲ್ಲೋಜನಿಗೆ ಅರೆಮತ್ತರು 5ಮತ್ತರು ಭೂಮಿಯನ್ನು ದಾನ ಬಿಟ್ಟಿದಂತೆ ತಿಳಿದು ಬರುತ್ತದೆ.

**ಬಜಂತ್ರಿ :**

ದೇವಾಲಯಗಳ ಮುಂದೆ ಇಲ್ಲವೆ ಶುಭಕಾರ್ಯಗಳಲ್ಲಿ ಬಾಜ–ಬಜಂತ್ರಿ ಮುಂತಾದ ಸಲಕರಣೆಗಳಿಂದ ಮಂಗಳ ವಾದ್ಯಗಳನ್ನು ಬಾರಿಸುವವರೇ ಬಜಂತ್ರಿಗಳು. ಇವರು ಸಹ ಶೂದ್ರ ವರ್ಗಕ್ಕೆ ಸೇರಿದವರು. ದೇವಾಲಯಗಳಲ್ಲಿ ಪೂಜೆ–ಜಾತ್ರೆ–ಮಹೋತ್ಸವ ಮುಂತಾದ ಸಂದರ್ಭಗಳಲ್ಲಿ ಮಂಗಳ ವಾದ್ಯಗಳನ್ನು ಬಾರಿಸುತ್ತಿದ್ದರು. ಇಂತಹ ವರ್ಗದ ಬಗ್ಗೆ ಜಿಲ್ಲೆಯ ಒಂದು ಶಾಸನದಲ್ಲಿ ಉಲ್ಲೇಖ ಬಂದಿದೆ. ಕ್ರಿ.ಶ.1178ರ ಕುಕನೂರು ಶಾಸನದಲ್ಲಿ[94] ದಂಡನಾಯಕ ಲಖ್ಮಿದೇವನು ಜೇಷ್ಠಾದೇವಿಯ ಮತ್ತು ನವಲಿಂಗಾಧೀಶ್ವರ ಸೋಮೇಶ್ವರ ದೇವಾಲಯದ ನಿತ್ಯನೈಮಿತ್ತಿಕ ಪೂಜೆ, ಹಾಗೂ ಅಲ್ಲಿನ ದೇವಾಲಯಗಳ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ದಾನ ನೀಡುತ್ತಾನೆ. ಇದರೊಂದಿಗೆ ಬಸವಣ್ಣನಿಗೆ ಮೂರು ಹೊತ್ತು ಬಜಂತ್ರಿ ಸೇವೆ ಮಾಡಲು ಹನ್ನೆರಡು ಮತ್ತರು ಭೂಮಿಯನ್ನು ನೀಡಿದ್ದಂತೆ ತಿಳಿದು ಬರುತ್ತದೆ.

**ಅಂಬಿಗರು :**

ನದಿ ಹೊಳೆಗಳಲ್ಲಿ ಹರಿಗೋಲನ್ನು (ದೋಣಿ) ಹಾಕಿ ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಕರೆದುಕೊಂಡು ಹೋಗುವ ಜನಾಂಗವೇ ಅಂಬಿಗ ಜನಾಂಗ ಎಂದು ಗುರುತಿಸಿಕೊಳ್ಳುತ್ತದೆ. 'ಅಂಬು' ಎಂದರೆ ನೀರು. ನದಿ ಅಥವಾ ಹೊಳೆಗಳ ಮೂಲಕವೇ ಇವರು ಕಾಯಕ ಮಾಡುತ್ತಿರು ವುದರಿಂದ ಬಹುಶಃ ಈ ವರ್ಗಕ್ಕೆ 'ಅಂಬಿಗರು' ಎಂದು ಕರೆಯುತ್ತಿರಬೇಕು ಎಂದೆನಿಸುತ್ತದೆ. ಕೊಪ್ಪಳ ಜಿಲ್ಲೆಯ ಕೆಲವು ಶಾಸನಗಳು ಇವರ ಜನಾಂಗದ ಕುರಿತು ಮಾಹಿತಿಯನ್ನು ಒದಗಿಸಿವೆ.

ಅರಸರು ಹಾಗೂ ಮಾಂಡಲಿಕರು ಈ ಜನಾಂಗಕ್ಕೆ ಬಿಟ್ಟ ದಾನದ ಕುರಿತು ವಿವರಗಳು ಇಲ್ಲಿ ದೊರೆಯುತ್ತವೆ. ಕ್ರಿ.ಶ.1554ರಲ್ಲಿ ದೊರೆತ ಗಂಗಾವತಿಯ ಆನೆಗೊಂದಿ ಶಾಸನದಲ್ಲಿ[95] ಸದಾಶಿವರಾಯನು ಆನೆಗೊಂದಿಯ ಅಂಬಿಗರ ನಾಗಜೋಗಿ ಮತ್ತು ಬಸವಜೋಗಿಯವರಿಗಗೆ ಪಾಲಿಸಿದ ಉಲ್ಲೇಖ ಈ ರೀತಿ ಇದೆ. ತುಂಗಭದ್ರಾ ನದಿಯ ಆನೆಗೊಂದಿ ತಳವಾರ ಕಟ್ಟೆಯಲ್ಲಿ 10 ಹರಿಗೋಲು, 10 ಮಂದಿ ಅಂಬಿಗರು ನಿರಂತರವಾಗಿ ಸರಕಾರದ ಸೀಮೆಯಲ್ಲಿ ಕಾರ್ಯನಿರತರಾಗಿದ್ದವರು ರಾಜನಲ್ಲಿ ವಿಜ್ಞಾಪನೆ ಮಾಡಿಕೊಂಡಾಗ ರಾಜನು ಇವರಿಗೆ ಆನೆಗೊಂದಿಯಲ್ಲಿ 15 ಕೊಳಗ ನೀರು ಭೂಮಿ, ತಳವಾರ ಕೋಟೆಯಲ್ಲಿ 15 ಕೊಳಗ ಒಟ್ಟು 30 ಕೊಳಗ ನೀರು ಭೂಮಿಯನ್ನು ನೀಡಿ, ಇದರ ಆದಾಯವನ್ನು ಇವರು ಅನುಭವಿಸುತ್ತಿರುವುದರ ಜೊತೆಗೆ ಬ್ರಾಹ್ಮಣ, ಸಾಧು, ಸಂತರ ಸೇವೆ ಮಾಡಿಕೊಂಡಿರಬೇಕೆಂದು ಆಜ್ಞೆ ವಿಧಿಸಿದ್ದರ ಕುರಿತಂತೆ ದೀರ್ಘವಾದ ಉಲ್ಲೇಖವು ಇಲ್ಲಿ ಕಂಡುಬಂದಿದೆ. ಆನೆಗೊಂದಿಯ ಮತ್ತೊಂದು (ಕಾಲದ ಉಲ್ಲೇಖವಿಲ್ಲ) ಶಾಸನದಲ್ಲಿ[96] ತಿಮರಾಜೆಯನ ಕಾಲದಲ್ಲಿ ರಾಮಾಪುರದಲ್ಲಿ ಒಂದು ಖಂಡುಗ ಗದ್ದೆಯನ್ನು ಆನೆಗೊಂದಿಯ ಅಂಬಿಗರಿಗೆ ನೀಡಿರುತ್ತಾರೆ. ಇದನ್ನು ಶ್ರೀರಂಗರಾಜರಾಯನು ಮುಂದುವರಿಸಿರುವ ಮಾಹಿತಿ ಇಲ್ಲಿ ಮೂಡಿ ಬಂದಿದೆ. ಕ್ರಿ.ಶ.1721ರ ಇದೆ ಆನೆಗೊಂದಿಯ ಮತ್ತೊಂದು ಶಾಸನವು[97] ಆನೆಗೊಂದಿಯ ಸಂಸ್ಥಾನದವರು ಅಂಬಿಗರ ಬರಮ ಮತ್ತು ಬಸವ ಎಂಬುವವರಿಗೆ ನೀಡಿದ ಸನ್ನದುವಿನಲ್ಲಿ ಇವರ ಕಾರ್ಯವನ್ನು ದಕ್ಷತೆಯಿಂದ ಮಾಡುತ್ತಿರುವುದರಿಂದ ಇವರಿಗೆ ತುಂಗಭದ್ರಾನದಿಯಲ್ಲಿ ಐದು ಹುಟ್ಟುಗಳನ್ನು (ಹರಿಗೋಲು) ಹಾಗೂ ಎರಡು ಹುಟ್ಟುಗಳನ್ನು ಇನಾಂನ ರೂಪದಲ್ಲಿ ನೀಡಿದ್ದರ ಕುರಿತಂತೆ ತಿಳಿದು ಬರುತ್ತದೆ. ಕ್ರಿ.ಶ.1556ರ ಆನೆಗೊಂದಿಯ ಶಾಸನವು[98] ಸದಾಶಿವರಾಯನ ಕಾಲದಲ್ಲಿ ಆನೆಗೊಂದಿ ಹೊಳೆಯ 300 ಮಂದಿ ಅಂಬಿಗರು ಅಂಬಲಿಯ ಮಹಾಲಿಂಗವೊಡೆಯರಿಗೆ ತಾವು ಹೊಳೆಯಲ್ಲಿ ಬಿಡುವ ಚಿಕ್ಕ ಹರಿಗೋಲು, ದೊಡ್ಡ ಹರಿಗೋಲುಗಳ ಮೇಲಿನ ಹಣವನ್ನು ನೀಡುವುದಾಗಿ ಹೇಳಿದಂತೆ ಕಂಡು ಬರುತ್ತದೆ. ಒಟ್ಟಾರೆಯಾಗಿ ಈ ಅಂಬಿಗರು ಜಿಲ್ಲೆಯಲ್ಲಿ ಒಂದು ಸ್ಥಾನ ಹೊಂದಿದ ಜಾತಿಯಾಗಿತ್ತು ಎನ್ನುವ ಅಂಶ ಶಾಸನಗಳಿಂದ ತಿಳಿದುಬರುತ್ತದೆ.

**ಕಮ್ಮಾರರು :**

'ಕಬ್ಬಿಣದ ಕೆಲಸಗಳನ್ನು ಮಾಡುತ್ತಿದ್ದವರು ಕಮ್ಮಾರರು.'[99] ಇವರು ವಿಶ್ವಕರ್ಮ ಕುಲಕ್ಕೆ ಸೇರಿದವರಾಗಿದ್ದರು. ಇವರ ಕುರಿತು ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ಮಾಹಿತಿ ಲಭಿಸದಿದ್ದರೂ ಒಂದು ಶಾಸನದಲ್ಲಿ ಮಾತ್ರ ಕಮ್ಮಾರರ ಉಲ್ಲೇಖವಿರುವುದು ಕಂಡು ಬಂದಿದೆ. ಅಂಟೂರುತಾಣದ ಕ್ರಿ.ಶ.1095ರ ಶಾಸನದಲ್ಲಿ[100] ಶ್ರೀಸ್ವಯಂಭೂದೇವರ ಅಂಗಭೋಗ, ನೈವೇದ್ಯಕ್ಕಾಗಿ ಗ್ರಾಮದ ಪ್ರಮುಖರ ಜೊತೆಯಲ್ಲಿ ಕಮ್ಮಾರರು ಕೂಡ

ದಾನ ನೀಡಿದ್ದಂತೆ ತಿಳಿದು ಬರುತ್ತದೆ.

**ಸಮಗಾರ :**

ಮೆಟ್ಟುಗಳನ್ನು (ಚಪ್ಪಲಿ) ಹೊಲಿಯುವವರೇ ಈ ಸಮಗಾರರು. ಶೂದ್ರ ಜನಾಂಗಕ್ಕೆ ಸೇರಿದ ಈ ವರ್ಗಕ್ಕೆ ಸಮಗಾರ, ಚರ್ಮಗಾರ, ಮಾದಿಗ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವರು ಹೆಚ್ಚಾಗಿ ಚರ್ಮಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಾರೆ. ಈ ಸಮಗಾರರ ಕುರಿತು ಒಂದು ಶಾಸನದಲ್ಲಿ ಮಾತ್ರ ಉಲ್ಲೇಖ ದೊರೆತಿರುತ್ತದೆ. ಮುಧೋಳುದಲ್ಲಿ ದೊರೆತ ಶಾಸನದಲ್ಲಿ[101] ಸನ್ತಯನೆಂಬುವವನು ಮುಧುವೋಳಲನ್ನು ಮುತ್ತಿದಾಗ ಆ ಊರಿನಲ್ಲಿರುವ ಸಮಗಾರರ ಚಂದನೆಂಬುವವನು ಹೋರಾಡಿ ಮರಣಿಸಿದ ಮಾಹಿತಿ ದೊರೆಯುತ್ತದೆ. ಅಂದರೆ ಯಾವುದೇ ಕನಿಷ್ಟ ಜಾತಿಯವನು ರಕ್ಷಣಾ ಕಾರ್ಯ ಬಂದಾಗ ವೀರತ್ವದಿಂದ ಹೋರಾಡುತ್ತಿದ್ದುದು ಶಾಸನಗಳಲ್ಲಿ ಉಕ್ತವಾಗಿದೆ.

ಹೀಗೆ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಬೇರೆ ಬೇರೆ ಜಾತಿಯ ಜನರು ವಾಸಿಸುತ್ತಿದ್ದು ತಮ್ಮ ತಮ್ಮ ವೃತ್ತಿಗನುಗುಣವಾಗಿ ಜೀವಿಸುತ್ತಿದ್ದಂತೆ ತಿಳಿದು ಬರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಜಾತಿಗನುಗುಣವಾಗಿ ಶ್ರಮವಿಭಜನೆಯನ್ನು ಮಾಡಿಕೊಂಡು ಆಯಾ ವೃತ್ತಿಯನ್ನನುಸರಿಸಿ ಆದಾಯವನ್ನು ಗಳಿಸುತ್ತಿದ್ದರು. ಅವರವರ ಸ್ಥಾನಮಾನಗಳು ಆಯಾ ಜಾತಿಯನ್ನವಲಂಬಿಸಿ ರುತ್ತಿದ್ದವು. ಅತ್ಯಂತ ಉನ್ನತ ವರ್ಗದಲ್ಲಿ ಬ್ರಾಹ್ಮಣರು ಇದ್ದರೆ, ಸಾಮಾನ್ಯ ಜನರಂತೆ ಜೀವಿಸುತ್ತಿದ್ದವರು ಅಂತ್ಯಜರೆನಿಸಿಕೊಂಡಿದ್ದರು.

**ಸ್ತ್ರೀಯರ ಸ್ಥಾನಮಾನ :**

ಪ್ರಾಚೀನ ಭಾರತದಲ್ಲಿ ಮನುಸ್ಮೃತಿಯಿಂದಾಗಿ ಸ್ತ್ರೀಯರು ಸ್ವಾತಂತ್ರಕ್ಕೆ ಅರ್ಹಳಲ್ಲ ಎಂಬ ಉಕ್ತಿಯು ಒಂದು ಕಡೆ ಕಂಡು ಬರುತ್ತದೆ. ಸ್ತ್ರೀಗೆ ಅಂದಿನ ಪ್ರಾಚೀನ ಕಾಲವು ಕತ್ತಲಯುಗದಂತಿದ್ದು ಇದು ಅವಳ ಪಾಲಿಗೆ ಸಮಾಜವು ಎಸಗಿದ ಅನ್ಯಾಯವಾಗಿತ್ತು. ಸ್ವಾತಂತ್ರ್ಯ, ಸಮಾನತೆ, ಧಾರ್ಮಿಕ ಸಂಸ್ಕಾರ ಹಾಗೂ ಶಿಕ್ಷಣದಲ್ಲಿ ಆಕೆಗೆ ಯಾವ ಹಕ್ಕು ಇರಲಿಲ್ಲ. ಆದರೆ ಕಾಲಕಾಲಕ್ಕೆ ಬದಲಾಗುತ್ತಿರುವ ಮೌಲ್ಯಗಳಿಂದಾಗಿ ಆ ಒಂದು ಚೌಕಟ್ಟನ್ನು ಮೀರಿ ಆಕೆ ವಿವಿಧ ಕ್ಷೇತ್ರಗಳಲ್ಲಿ ಭಾಗಿಯಾಗಿ ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆದಳು. "ವೈದಿಕಯುಗದಲ್ಲಿ ಸ್ತ್ರೀಯರಿಗೆ ಅತ್ಯಂತ ಗೌರವದ ಸ್ಥಾನವಿದ್ದಂತೆ ತಿಳಿದು ಬರುತ್ತದೆ. ಪುರುಷರಂತೆಯೇ ಅವರೂ ವಿದ್ಯಾಭ್ಯಾಸಕ್ಕೆ ಅರ್ಹರಾಗಿದ್ದರು. ಋಗ್ವೇದದ ಮಂತ್ರದ್ರಷ್ಟಾರರ ಪಟ್ಟಿಯಲ್ಲಿ ಹಲವು ಮಂದಿ ಸ್ತ್ರೀ ದ್ರಷ್ಟಾರರ ಹೆಸರುಗಳೂ ಕಂಡು ಬರುತ್ತವೆ."[102] ಹೀಗೆ ಸ್ತ್ರೀಯು ಒಂದು ಬಲವಾದ ಕಾಲಕ್ಕನುಗುಣವಾಗಿ ಸಾಮಾಜಿಕ ವ್ಯವಸ್ಥೆಯ ಹಲವಾರು ಕಾರ್ಯಗಳಲ್ಲಿ

ಭಾಗಿಯಾಗಿ ತನ್ನತನವನ್ನು ಮೆರೆದಿದ್ದಾಳೆ. ರಾಜಕೀಯ, ಧಾರ್ಮಿಕ, ವಿವಾಹ, ದಾನ, ಧರ್ಮಗಳಲ್ಲಿ ಪುರುಷರ ಸರಿಸಮಾನವಾಗಿ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಂತೆ ತಿಳಿದು ಬರುತ್ತದೆ. ವೇದಗಳ ಕಾಲದಲ್ಲಿ ಸ್ತ್ರೀಯರು ಹಲವಾರು ರೀತಿಯ ಸ್ಥಾನಮಾನಗಳ ಪ್ರತೀಕರೆನಿಸಿದ್ದರು. ಶಾಸನಗಳಲ್ಲಿ ದೊರೆತ ಆಧಾರಗಳು ಇದಕ್ಕೆ ಸಾಕ್ಷಿಯೆನಿಸಿವೆ. ಹೀಗೆ ಕೊಪ್ಪಳ ಜಿಲ್ಲೆಯ ಶಾಸನಗಳು ಸ್ತ್ರೀಗಿದ್ದ ಸ್ಥಾನಮಾನಗಳನ್ನು ಗುರುತಿಸಿ ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಇಲ್ಲಿ ಅನೇಕ ರಾಜರು, ಮಾಂಡಳಿಕರು, ಸಾಮಂತರು ತಮ್ಮ ತಮ್ಮ ರಾಣಿಯರಿಗೆ ಹಲವಾರು ರೀತಿಯ ಸ್ವಾತಂತ್ರ್ಯ ನೀಡಿದ್ದು ತಿಳಿದು ಬರುತ್ತದೆ. ಸಾಮಾನ್ಯ ಸ್ತ್ರೀಯರೂ ಇದಕ್ಕೆ ಹೊರತಾಗಿರಲಿಲ್ಲ. ಹೀಗೆ ಸ್ತ್ರೀಯು ತನ್ನ ಮಾನವೀಯ ಮೌಲ್ಯದಿಂದಾಗಿ ಅನೇಕ ಶಾಸನಗಳಲ್ಲಿ ಗೌರವ ಆಧಾರಕ್ಕೆ ಪಾತ್ರರಾಗಿದ್ದಂತೆ ಕಂಡು ಬಂದಿದೆ.

ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ಕೊಪ್ಪಳ ಶಾಸನವು[103] ಎರೆಯಬ್ಬೆ ಎಂಬುವವಳು ಅತಿಶಯವಾದ ದಾನ ಗುಣವನ್ನು ಹೊಂದಿದ್ದಳೆಂದು ಹೇಳುತ್ತಾ ಈ ಎರೆಯಬ್ಬೆಯು ಜೈನ ಮಂದಿರಗಳನ್ನು ನಿರ್ಮಿಸಿದಳೆಂದು ತಿಳಿಸುತ್ತದೆ. ಕೊಪ್ಪಳದ ಕ್ರಿ.ಶ.997ರ ಶಾಸನದಲ್ಲಿ[104] ಗೊಲ್ಲಾಚಾರ್ಯನ ಶಿಷ್ಯನಾದ ತ್ರಿಕಾಲಯೋಗಿ ಕೊಪಣದ ಜಿನಪಾದಗಳ ಬಳಿ ಕುಳಿತು ಕಠಿಣ ತಪಸ್ಸು ಮಾಡಿ ಮುಕ್ತಿಯನ್ನು ಗಳಿಸುತ್ತಾನೆ. ಹೀಗೆ ಮೋಕ್ಷವನ್ನು ಸಾಧಿಸಿದ ಈ ಮುನಿಯ ನಿಷಧಿಯನ್ನು ತೇಜಿಕಬ್ಬೆಕಂತಿಯು ಮಾಡಿಸಿದ್ದಂತೆ ಕಂಡು ಬಂದಿದೆ.

ಕೊಪ್ಪಳದ ಶಾಸನವೊಂದು[105] ಕೊಂಡಕುಂದಾನ್ವಯದ ಬೆಳ್ಗಂಡುಗಣದ ನೇಮಿಚಂದ್ರಭಟ್ಟಾರನ ಶಿಷ್ಯೆಯು ಜಕ್ಕಿಯಬ್ಬೆಯೆಂಬುವಳು ಕನ್ತಿಯ ಸನ್ಯಾಸದಿಂದ ಮುಡಿಪಿದಳೆಂದಿದೆ. ನಿಜಬ್ಬೆಕಂತಿಯ ಮಗಳು ಈ ಜಕ್ಕಿಯಬ್ಬೆ, ಈ ಜಕ್ಕಿಯಬ್ಬೆ ಮಗಳು ರೇವಕಬ್ಬೆ. ಈ ರೇವಕಬ್ಬೆಯು ಮುಗುಳಿಯ ಗಾಮುಂಡಿಯಾಗಿದ್ದು ತನ್ನ ತಾಯಿಗೆ ನಿಷಧಿಕಲ್ಲನ್ನು ನಿಲ್ಲಿಸಿದಂತೆ ಮಾಹಿತಿಯನ್ನು ನೀಡುತ್ತದೆ. ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿಸಿದ್ದ ಕ್ರಿ.ಶ.1028ರ ಶಾಸನವು[106] ಸನ್ಯಾಸನವನ್ನು ಸ್ವೀಕರಿಸಿ ರತ್ನತ್ರಯಗಳನ್ನು ಸಾಧಿಸಿದ ಪದ್ಮನಂದಿಸಿದ್ಧಾನ್ತದೇವನ ನೆನಪಿಗಾಗಿ ಮಾಚಬ್ಬೆಕಂತಿಯು ನಿಷಧಿಯನ್ನು ನಿಲ್ಲಿಸಿದಂತೆ ತಿಳಿಸುತ್ತದೆ. ಕೊಪ್ಪಳದ(ಕ್ರಿ.ಶ.976) ಮತ್ತೊಂದು ಶಾಸನ[107] ಪೊತಿಯಬ್ಬೆ ಎಂಬುವವಳ ಮಗಳು ಎರೆಯಬ್ಬೆಯು ತನ್ನ ಸಮಾಧಿಯೋಗದಿಂದ ಸುರಲೋಕಕ್ಕೆ ಸಂದಳು ಎಂಬ ವಿಷಯದ ಪ್ರಸ್ತಾವನೆಯನ್ನು ಮಾಡಿದೆ. ಹೀಗೆ ಕೊಪ್ಪಳದ ಅನೇಕ ಶಾಸನಗಳಲ್ಲಿ ಈ ರೀತಿಯ ಸ್ತ್ರೀಯ ಉಲ್ಲೇಖಗಳು ದೊರೆತಿದ್ದು ಅವುಗಳನ್ನು ಇಲ್ಲಿ ವಿವರಿಸ ಬಹುದಾಗಿದೆ. ಕ್ರಿ.ಶ.998ರ ಕೊಪ್ಪಳದ ಶಾಸನದಲ್ಲಿ[108] ಮಾಕಾಳಯ್ಯನ ತಾಯಿ ಪಿಟ್ಟಕಬ್ಬೆ ನಿಷಧಿಯನ್ನು ಸ್ಥಾಪಿಸಿದ್ದಂತೆ ದಾಖಲಿಸಿದೆ. ಕ್ರಿ.ಶ.977ರ ಕೊಪ್ಪಳದ ಶಾಸನ[109]ವು ಕೊಂಡಕುಂದಾನ್ವಯದ ದೇಸಿಗಗಣದ ದಿವಾಕರಣನ್ದಿ ಪಂಡಿತರ ಶಿಷ್ಯೆ ಅಣುಗಬ್ಬೆಯು ಸನ್ಯಾಸವನ್ನು ಸ್ವೀಕರಿಸಿ ಮುಡಿಪಿದಂತೆ ತಿಳಿಸುತ್ತದೆ. ಕೊಪ್ಪಳದ

(ಕ್ರಿ.ಶ.971) ಮತ್ತೊಂದು ಶಾಸನದಲ್ಲಿ[110] ಮಲಧಾರಿಮುನಿ ಸುಗತಿಯನ್ನು ಸಾಧಿಸಿದಾಗ ಈತನ ಶಿಷ್ಯೆ ಪೊಲಯಬ್ಬೆ ನಿಷಧಿಯನ್ನು ಮಾಡಿಸಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.11ನೇ ಶತಮಾನದ ಕೊಪ್ಪಳ ಶಾಸನವು[111] ಸಕಳಚಂದ್ರ ಭಟ್ಟಾರಕನು ಮುಡಿಪುಗೊಂಡ ಸಮಯದಲ್ಲಿ ಮಿರಿಜಾಪುರದ ಪದ್ಮಾವತಿದೇವಿಯು ಈ ಮುನಿಯ ಹಿರಿಮೆಯನ್ನು ಜನಗಳ ಮುಂದೆ ಹೊಗಳುತ್ತಿದ್ದಂತೆ ಮಾಹಿತಿಯನ್ನು ನೀಡಿದೆ. ಕೊಪ್ಪಳದ ಕ್ರಿ.ಶ.977ರ ಮತ್ತೊಂದು ಶಾಸನವು[112] ಭಟ್ಟಾರಕನಾದ ಗಂಡವಿಮುಕ್ತಿಭಟ್ಟಾರಕನು ಮುಡಿಪಿದ ಸಮಯದಲ್ಲಿ ತ್ರಿಭುವನಚಂದ್ರ ಸ್ವಾಮಿಯ ಶಿಷ್ಯೆ ಪಿಟ್ಟಬೆಯು ಈತನ ನೆನಪಿಗಾಗಿ ಕಲ್ಲನ್ನು ನಿಲ್ಲಿಸಿದಂತೆ ಉಲ್ಲೇಖ ಒದಗಿಸಿದೆ. ಆಗ್ನೇಯ ದಿಕ್ಕಿನ ಕೋಟೆಗೆ ಸೇರಿಸಿದ ಕೊಪ್ಪಳ ಕ್ರಿ.ಶ.1001ರ ಶಾಸನವು[113] ಶ್ರೀಧರದೇವನ ಶಿಷ್ಯೆಯಾದ ಕೋಗಳಿಯ ಪದ್ಮಬ್ಬೆಕಂತಿಯು ಮುಡಿಪಿದ ಸಮಯದಲ್ಲಿ ಈಕೆಯ ಮಗಳು ಜಕ್ಕಿಯಬ್ಬೆ ನಿಷಧಿಗಲ್ಲನ್ನು ಮಾಡಿಸಿದಂತೆ ಮಾಹಿತಿ ನೀಡುತ್ತದೆ. ಕೊಪ್ಪಳದ ಅದೇ ಆಗ್ನೇಯ ದಿಕ್ಕಿಗೆ ಸೇರಿದ ಕ್ರಿ.ಶ.1000ದ ಶಾಸನವು[114] ತ್ರಿಭುವನಚಂದ್ರ ಮುನೀಂದ್ರನು ಮುಕ್ತಿಯನ್ನು ಸಾಧಿಸಿದ ಸಂದರ್ಭದಲ್ಲಿ ಶಿಷ್ಯೆಯಾದ ಪಿಟ್ಟಕಬ್ಬೆಯು ತನ್ನ ಗುರುವಿನ ನೆನಪಿನಲ್ಲಿ ನಿಷದಿಕಲ್ಲನ್ನು ನಿಲ್ಲಿಸಿದಂತೆ ಹೇಳಿದೆ. ಕ್ರಿ.ಶ.1030ಕ್ಕೆ ದೊರೆತ ಕೊಪ್ಪಳ ಶಾಸನದಲ್ಲಿ ರೇವಕನಿಮ್ಮಡಿಗೆಯ ಉಲ್ಲೇಖ ಬಂದಿದ್ದು, ಈಕೆಯನ್ನು ಕುರಿತು ಶಾಸನ ವಿಶೇಷವಾಗಿ ಹೊಗಳಿದೆ. ರಾಜನಾದ ಭೂತುಗಮ ಸಂಕರಗಂಡ, ಮಾರಸಿಂಹ, ಮರುಳ, ಚಾವುಂಡರಾಯ, ಗುಣದಂಕಕಾರ್ತಿ ಇವರೆಲ್ಲಾ ತೀರಿದ ಮೇಲೆ ಜಿನಧರ್ಮಕ್ಕೆ ಈಕೆ ಆಶ್ರಯವನ್ನೀಯುತ್ತಾಳೆ. ಅಲ್ಲದೆ ಈಕೆಯು ತನ್ನ ಸನ್ಯಾಸವಿಧಾನದಿಂದ ರತ್ನತ್ರಯಗಳನ್ನು ಸಾಧಿಸಿದಂತೆ ಶಾಸನ ತಿಳಿಸುತ್ತದೆ. ಇಂತಹ ಮಹೋನ್ನತ ಕಾರ್ಯವನ್ನು ಸಾಧಿಸಿದ್ದಕ್ಕಾಗಿ ಈಕೆಯನ್ನು ಅಳಿಯ ಚಕ್ರೇಶ್ವರ ಜಯಸಿಂಹ, ಗುರುಶ್ರೀಧರದೇವ, ಮಗಳು ಬೊಂಥಾದೇವಿ ಇವರೆಲ್ಲರೂ 'ಚಲದಂಕಕಾರ್ತಿ' ಎಂದು ಬಣ್ಣಿಸಿ ಹೊಗಳಿದ್ದಾರೆ. ಕೊಪ್ಪಳದಲ್ಲಿ ದೊರೆತ ಶಾಸನ (ಕ್ರಿ.ಶ.1051)ವೊಂದು[115] ವೀರನಂದಿಮುನಿಯ ಶಿಷ್ಯೆಯಾದ ಮಾಳಿಯಬ್ಬೆ ಎಂಬುವವಳು ಶಾಸನವನ್ನು ಹಾಕಿಸಿದಂತೆ ತಿಳಿಸುತ್ತದೆ.

ಯಲಬುರ್ಗಾದಲ್ಲಿ ದೊರೆತ ಕಾಲದ ಉಲ್ಲೇಖವಿಲ್ಲದ ಶಾಸನದಲ್ಲಿ[116] ಸ್ತ್ರೀಯೋರ್ವಳು ಪಾರ್ಶ್ವನಾಥ ಬಸದಿಯನ್ನು ಮಾಡಿಸಿದಂತೆ ತಿಳಿದು ಬರುತ್ತದೆ. ಕಲ್ಲೂರಿನಲ್ಲಿ ದೊರೆತ ಕ್ರಿ.ಶ.1098ರ ಶಾಸನವು[117] ಚಾವುಂಡರಸನ ಪತ್ನಿಯು ಸ್ವಾಮಿಯ ಪಾದಾರಾಧಕನಾಗಿದ್ದ ಮೊಲ್ಲೆಯ ಬಂಮಯ್ಯನಿಗೆ ಆರು ಮತ್ತರು ಭೂಮಿಯನ್ನು ಸರ್ವಮಾನ್ಯವಾಗಿ ನೀಡಿದ ಕುರಿತು ಮಾಹಿತಿ ಲಭಿಸುತ್ತದೆ. ಕ್ರಿ.ಶ.1107ರ ಕುಕನೂರಿನ ಶಾಸನವು[118] ಗಂಗಾಧರಯ್ಯ ನಾಯಕನ ಮಗಳು ಕಾಮಿಯಕ್ಕನು ಹೆಗ್ಗರೆಯ ಎರೆ ಭೂಮಿಯಲ್ಲಿ 2 ಮತ್ತರು ಎರೆಭೂಮಿಯನ್ನು ಸತ್ರಕ್ಕಾಗಿ ದಾನ ಬಿಡುತ್ತಾಳೆ. ಅಲ್ಲದೆ ಈಕೆಯ ಅಣ್ಣನ ಶ್ರೀಪತಿನಾಯಕನ ಪತ್ನಿ

ಚಾಮಿಕವ್ವೆಯು ಸಾಸಿರ್ವರ ಕಯ್ಯಲ್ಲಿ ಸರ್ವನಮಸ್ಯವಾಗಿ ಪಡೆದು ಶ್ರೀಮೂಲಸ್ಥಾನದೇವರ ನಿತ್ಯನಿವೇದ್ಯಕ್ಕೆ ತಮ್ಮ ಸ್ಥಳವಾದ ಹೆಗ್ಗರೆಯಲ್ಲಿ ಕಾಮಿಯಕ್ಕನ ಭಾಗದ ಒಂದು ಮತ್ತರು 450 ಕಮ್ಮ ಭೂಮಿಯನ್ನು ಬಿಟ್ಟ ಮಾಹಿತಿಯನ್ನು ನೀಡುತ್ತದೆ. ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಕುಕನೂರು ಶಾಸನದಲ್ಲಿ[119] ಕುಕ್ಕನೂರಿನ ಉತ್ತರಕ್ಕೆ ನೆಲೆಸಿದ್ದ ಶ್ರೀಮಲ್ಲಿಕಾರ್ಜುನ ದೇವಾಲಯಕ್ಕೆ ಅಲ್ಲಿ ನೆಲೆಸಿದ್ದ ಶ್ರೀ ಬಡವರಬೇಲಿಯ ಸೊಸೆ ಗಂಗಿಯಕ್ಕ ಒಂದು ಮನೆಯನ್ನು ಬಿಟ್ಟಿದ್ದಂತೆ ಕಂಡು ಬಂದಿದೆ. ಯಲಬುರ್ಗಾ ತಾಲೂಕಿನ ಕುಕನೂರಿನಲ್ಲಿ ದೊರೆತ ಮತ್ತೊಂದು ಶಾಸನವು[120] ಗಂಗರ ಕೊಂಗುಣಿವರ್ಮ ರಾಜಮಲ್ಲನ ತಮ್ಮ ಬೂತುಗನ ಮಗಳಾದ ಕುಂದಣಸಾಮಿಯು ಕುಕ್ಕನೂರಿನ ಉತ್ತರಕ್ಕಿದ್ದ ಅಡ್ಡವುರಗೆ ಗ್ರಾಮವನ್ನು ದಾನವಾಗಿ ನೀಡುತ್ತಾಳೆ. ಇದು ಧವಳ ವಿಷಯ (ಬೆಳ್ವೊಲ)ದಲ್ಲಿತ್ತು. ಈ ದಾನವನ್ನು ತನ್ನ ತಮ್ಮ ಗಂಗ ಮಾರಸಿಂಹನಿಂದ ಪಡೆದು ನೀಡಿದ್ದಂತೆ ಉಲ್ಲೇಖ ನೀಡುತ್ತದೆ. ಕ್ರಿ.ಶ.1371ರ ಆನೆಗೊಂದಿ ಶಾಸನವು[121] ಹೊನ್ನ ಹಟ್ಟಿಯ ಸಯಿತಿಯ ಮಗಳು ಸೊಯಿಸೆಟ್ಟಿಯು ನಿಷಧಿಹೊಂದಿದ್ದಂತೆ ಮಾಹಿತಿ ನೀಡುತ್ತದೆ. ಕ್ರಿ.ಶ.1325ರಲ್ಲಿ ದೊರೆತ ಆನೆಗೊಂದಿ ಶಾಸನದಲ್ಲಿ[122] ಗೋವಿಸೆಟ್ಟಿಯ ಸೊಸೆ ಸೋವಿಯಕ್ಕ ನಿಷಧಿ ಹೊಂದಿದ್ದಂತೆ ಕಂಡು ಬಂದಿದೆ. ಕನಕಗಿರಿಯಲ್ಲಿ (ಕ್ರಿ.ಶ.1660) ದೊರೆತ ಶಾಸನವು[123] ಗುಜ್ಜಲ ಇಮ್ಮಡಿ ವುಡಸಿನಾಯಕನ ಪತ್ನಿ ಚಿಣ್ಣಮ್ಮನು ಕನಕರಾಯನ ಕೆರೆಯನ್ನು ಕಟ್ಟಿಸಿದ್ದಂತೆ ತಿಳಿಸುತ್ತದೆ. ಕೊಪ್ಪಳದಲ್ಲಿ ದೊರೆತ ಕ್ರಿ.ಶ.1051ರ ಶಾಸನವು[124] ವೀರನಂದಿಮುನೀಂದ್ರನ ಶಿಷ್ಯೆ ಮಾಳಿಯಬ್ಬೆಯು ಜಿನ ಶಾಸನವನ್ನು ಹಾಕಿಸಿದ್ದನ್ನು ತಿಳಿಸುತ್ತದೆ. ಕೊಪ್ಪಳದಲ್ಲಿ ದೊರೆತ ಕ್ರಿ.ಶ.1030ರ ಅತ್ಯಂತ ಮಹತ್ವದ ಶಾಸನವೊಂದರಲ್ಲಿ[125] ರೇವಕನಿಮ್ಮಡಿಯ ಉಲ್ಲೇಖ ನೀಡಿದೆ. ಈಕೆಯು ತನ್ನ ಸನ್ಯಸನ ವಿಧಾನದಿಂದ ರತ್ನತ್ರಯಗಳನ್ನು ಸಾಧಿಸಿದಂತೆ ಶಾಸನ ತಿಳಿಸುತ್ತದೆ. ಅಲ್ಲದೆ ರಾಜನಾದ ಬೂತುಗ, ಸಂಕರಗಂಡ, ಮಾರಸಿಂಹ, ಮರುಳ, ಚಾವುಂಡರಾಯ, ಗುಣದಂಕಕಾರ್ತಿ (ಅತ್ತಿಮಬ್ಬೆ) ಇವರೆಲ್ಲಾ ತೀರಿದ ಮೇಲೆ ಜಿನಧರ್ಮಕ್ಕೆ ಈಕೆ ಆಶ್ರಯವನ್ನೀಯುತ್ತಾಳೆ. ಇಂತಹ ಒಂದು ಜಿನಧರ್ಮದ ಪೋಷಣೆಗಾಗಿ ಆಶ್ರಯವಾಗಿ ನಿಂತ ಈಕೆಯನ್ನು ಶಾಸನದಲ್ಲಿ ಚಲದಂಕಕಾರ್ತಿ ಎಂದು ಕರೆದಿದೆ. ಇದು ಅತ್ಯಂತ ಮಹತ್ವದ ಶಾಸನವಾಗಿದ್ದು ಇಲ್ಲಿ ಸ್ತ್ರೀಯೊಬ್ಬಳು ರತ್ನತ್ರಯಗಳನ್ನು ಸಾಧಿಸಿದ್ದಂತೆ ಕಂಡು ಬಂದಿದೆ. ಈ ತ್ರಿಮುಖ ಸಾಧನೆಯ ಒಟ್ಟಿನ ಆಶಯವೆಂದರೆ 'ಜೈನತತ್ವದಲ್ಲಿ ನಂಬಿಕೆ (ಸಮ್ಯಗ್‌ದರ್ಶನ); ಇದಕ್ಕೆ ಸಮ್ಯಗ್‌ಜ್ಞಾನ, ಸಮ್ಯಗ್ ಚಾರಿತ್ರಗಳು ಪೋಷಕಗಳಾಗಿ ಬಂದಾಗ ಮೋಕ್ಷ ಅಥವಾ ನಿರ್ವಾಣವು ಲಭಿಸುತ್ತದೆ. ಈ ಮೂರನ್ನು 'ತ್ರಿರತ್ನ'ಗಳೆಂದು ಕರೆಯುತ್ತಾರೆ.'[126] ಇಲ್ಲಿ ಸ್ತ್ರೀಯೊಬ್ಬಳು ಮೋಕ್ಷವನ್ನು ಸಾಧಿಸಿದ್ದಳು ಎಂದರೆ ಇದು ಅಂದಿನ ಕಾಲದಲ್ಲಿ (ಕೊಪ್ಪಳದ ಅರಸು ಮನೆತನಗಳ ಆಳಿಕೆಯ ಅವಧಿಯಲ್ಲಿ) ಸ್ತ್ರೀಗೆ ಇದ್ದ ಧಾರ್ಮಿಕ ಸ್ವಾತಂತ್ರದ ಕುರಿತು ವಿಶೇಷವಾದ ಮಾಹಿತಿ ಒದಗಿಸುತ್ತದೆ. ಅಲ್ಲದೆ ಮೇಲಿನ

ಶಾಸನದಲ್ಲಿ ಉಲ್ಲೇಖಗೊಂಡ ರೇವಕನಿಮ್ಮಡಿಯು ರತ್ನತ್ರಯವನ್ನು ಸಾಧಿಸಿದ್ದಲ್ಲದೆ ಈಕೆಗೆ ಚಲದಂಕಕಾರ್ತಿ ಎಂಬ ಬಿರುದಿದ್ದು ಇದು ಕೂಡ ಸ್ತ್ರೀಯೋರ್ವಳಿಗೆ ಲಭಿಸಿದ ಅತ್ಯಂತ ಮಹೋನ್ನತದ ಸ್ಥಾನವನ್ನು ಗುರುತಿಸಿಕೊಡುತ್ತದೆ. ಅದೇ ರೀತಿಯಾಗಿ ಡೋತಿಯಬ್ಬೆಯ ಮಗಳು ಎಲೆಯಬ್ಬೆ ಸಮಾಧಿಯೋಗದಿಂದ ಸುರಲೋಕಕ್ಕೆ ಹೋದಳು ಎಂದು ಕೊಪ್ಪಳದ ಒಂದು ಶಾಸನದಿಂದ ತಿಳಿದು ಬರುತ್ತದೆ. ಒಟ್ಟಿನಲ್ಲಿ ಇದು ಸಮಾಜದಲ್ಲಿ ಸ್ತ್ರೀಗೆ ಇದ್ದ ವಿಶೇಷ ಸ್ಥಾನಮಾನದ ಕುರಿತು ಮಾಹಿತಿ ನೀಡುತ್ತದೆ. ಹೀಗೆ ಕೊಪ್ಪಳ ಜಿಲ್ಲೆಯ ಅನೇಕ ಶಾಸನಗಳ ಉಲ್ಲೇಖದಿಂದ ಸ್ತ್ರೀಯು ಅಂದಿನ ಕಾಲದಲ್ಲಿ ಯಾವುದೇ ಬಂಧದಲ್ಲಿ ಸಿಲುಕಿರದೆ ಆಕೆಗೆ ಸಂಪೂರ್ಣ ಸಾಮಾಜಿಕ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಈ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀಯರ ಕುರಿತ ಉಲ್ಲೇಖವಿರುವ ಅನೇಕ ಶಾಸನಗಳು ದೊರೆತಿದ್ದರೂ ಇವುಗಳಲ್ಲಿ ಹೆಚ್ಚಿನ ಶಾಸನಗಳು ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿವೆ. ಕೆಲ ಶಾಸನಗಳು ಸ್ತ್ರೀಯರು ದಾನ ನೀಡಿದ್ದನ್ನು ಹಾಗೂ ದೇವಾಲಯಗಳನ್ನು ನಿರ್ಮಿಸಿದ್ದರ ಕುರಿತು ಮಾಹಿತಿಯನ್ನು ಒದಗಿಸಿವೆ. ಹೀಗೆ ಇವರು "ಧಾರ್ಮಿಕ ಸಾಮಾಜಿಕ ಆಗುಹೋಗುಗಳನ್ನು ಕಾಯ್ದುಕೊಳ್ಳುವ, ದಾನದತ್ತಿಗಳನ್ನು ಕೊಡುವ, ಪಡೆವ ಕಾರ್ಯಕಲಾಪಗಳಲ್ಲಿಯೂ ಇವರು ತೊಡಗಿರುವುದುಂಟು."[127] ಪ್ರಾಚೀನ ಕರ್ನಾಟಕದಲ್ಲಿ ವಿದ್ಯಾಭ್ಯಾಸದ ಹೊರತಾಗಿ ಧಾರ್ಮಿಕ ಕ್ರಿಯೆಗಳಲ್ಲಿಯೂ ಅವಳು ಪಾಲ್ಗೊಳ್ಳುವಂತಿರಲಿಲ್ಲ. ಆದರೆ ರಾಜಮನೆತನಗಳ ಆಳಿಕೆಯ ಅವಧಿಯಲ್ಲಿ ಸ್ತ್ರೀಗೆ ವಿದ್ಯಾಭ್ಯಾಸದ ಜೊತೆಗೆ ಧಾರ್ಮಿಕ ಕ್ರಿಯೆಗಳಲ್ಲಿಯೂ ಅವಳು ಪಾಲ್ಗೊಳ್ಳಲು ಅವಕಾಶ ದೊರೆಯಿತು. "ಇನ್ನು ಕೆಲವು ಸಲ ಈ ಸನ್ಯಾಸಿನಿಯರೂ ಸಮಾಜಕ್ಕೆ ಉಪಯೋಗವಾಗುವ ಕಾರ್ಯಗಳನ್ನು ಕೈಗೊಂಡಿರುವುದುಂಟು. ಈ ಕಾರ್ಯಗಳು ಜೈನಸಮಾಜದ ಮೇಲೆ ಹೆಚ್ಚಿನ ಪರಿಣಾಮ ಬೀರಿರುವ ಸಾಧ್ಯತೆಯಿದೆ."[128] ಕೊಪ್ಪಳ ಜಿಲ್ಲೆ ಪ್ರಾಚೀನ ಕಾಲದಲ್ಲಿ ಜೈನಧರ್ಮಕ್ಕೆ ಪ್ರಸಿದ್ಧಿ ಹೊಂದಿದ್ದರಿಂದ ದೊರೆತ ಶಾಸನಗಳಲ್ಲಿ ಅದರಲ್ಲೂ ಸ್ತ್ರೀಯರ ಕುರಿತು ದೊರೆತ ಶಾಸನಗಳು ಜೈನಧರ್ಮಕ್ಕೆ ಅವರು ನೀಡಿದ ಕೊಡುಗೆಯನ್ನು ಬಹಳಷ್ಟು ಪ್ರಮಾಣದಲ್ಲಿ ವಿವರಿಸಿದೆ. ಕೆಲವೊಮ್ಮೆ ಉನ್ನತವರ್ಗದ ಮಹಿಳೆಯರು ಕೈಗೊಂಡ ಕಾರ್ಯಗಳಿಂದ ಪ್ರೇರಣೆಗೊಂಡ ಸಾಮಾನ್ಯ ಮಹಿಳೆಯರು ಬಸದಿನಿರ್ಮಾಣ ದಂತಹ ಬಹುಮೊತ್ತದ ಕಾರ್ಯಗಳನ್ನು ಕೈಗೊಂಡ ನಿದರ್ಶನಗಳು ಇಲ್ಲಿ ಮೂಡಿಬಂದಿವೆ. "ಒಟ್ಟಿನಲ್ಲಿ ಜೈನಧರ್ಮ ಸ್ತ್ರೀ ಸಮಾಜಕ್ಕೆ ಧರ್ಮದಲ್ಲಿ ಸ್ವಾತಂತ್ರ್ಯ ಕಲ್ಪಿಸಿ ಕೊಟ್ಟಿದ್ದು ಈ ವರ್ಗಕ್ಕೆ ಸಂಬಂಧಿಸಿದ ಕಂತಿಯರ ಧಾರ್ಮಿಕಜ್ಞಾನ, ಕ್ರಿಯೆ, ವಿದ್ವತ್ತುಗಳು ಜೈನಧರ್ಮದ ಪ್ರಸಾರದಲ್ಲಿ ಪರಿಮಿತದಲ್ಲಿಯಾದರೂ ಪ್ರಭಾವ ಬೀರಿದವೆಂದೇ ಹೇಳಬೇಕು."[129]

**ವೇಶ್ಯೆಯರು :**

ಭಾರತದಲ್ಲಿ ವೇಶ್ಯಾಪದ್ಧತಿ ಅತ್ಯಂತ ಪುರಾತನ ಕಾಲದಲ್ಲಿಯೇ ಜಾರಿಯಲ್ಲಿದ್ದಿತು. ಋಗ್ವೇದದ ಕಾಲದಿಂದಲೇ ಇದರ ಕುರಿತು ಸಾಕಷ್ಟು ಮಾಹಿತಿ ದೊರೆಯುತ್ತದೆ. "ಋಗ್ವೇದದಲ್ಲಿ ಗಣಿಕೆಯರೆಂದು ಉಲ್ಲೇಖಗೊಂಡ ವೇಶ್ಯೆಯರ ಧರ್ಮವನ್ನು ಕುರಿತು ಗೌತಮ, ಮನು, ನಾರದ, ಮತ್ಸ್ಯಪುರಾಣ ಮುಂತಾದ ಪ್ರಾಚೀನ ಕೃತಿ–ಕೃತಿಕಾರರು ಪ್ರಸ್ತಾಪಿಸಿದ್ದಾರೆ"[130] ಸೂಳೆ ಪದದ ಪರ್ಯಾಯ ಶಬ್ದಗಳಾಗಿ ಪೊಡ್ಡಿ, ಪೇಟೆ, ಬೊಡ್ಡಿಗಳು ಬಳಕೆಯಾಗಿವೆ. "ದೇವದಾಸಿಯರೆಲ್ಲರೂ ವೇಶ್ಯೆಯರೇ ಆಗಿದ್ದರೂ ವೇಶ್ಯೆಯರೆಲ್ಲರೂ ದೇವದಾಸಿಯರಲ್ಲ. ದೇವಸ್ಥಾನದ ದತ್ತಿಗಳಲ್ಲಿ 'ಸೂಳೆ' ಎಂಬ ಮಾತು ಬಂದರೆ ಅದು ದೇವದಾಸಿಯನ್ನು ಸೂಚಿಸುತ್ತದೆ"[131] ವಿವಾಹಿತ ಇಲ್ಲವೆ ಅವಿವಾಹಿತ ಪುರುಷರು ಇಟ್ಟುಕೊಂಡ ಮಹಿಳೆಯರಿವರು. ಪ್ರಾಚೀನ ಕಾಲದ ಎಲ್ಲ ದರ್ಜೆಯ ಪುರುಷರು ಈ ಸೂಳೆ ವ್ಯವಸ್ಥೆಯನ್ನು ಪೋಷಿಸಿದ ಸಾಧ್ಯತೆಯೇ ಹೆಚ್ಚು. "ದೇವದಾಸಿಯರ ವಿಷಯದಲ್ಲೂ, ವೇಶ್ಯೆಯರ ವಿಷಯದಲ್ಲೂ ಶಾಸನಗಳಲ್ಲಿ ಸಾಕಷ್ಟು ಗೌರವಭಾವನೆಯೇ ಇದೆ. ಈಗ ಅವರಿಬ್ಬರಿಗಿರುವ ನಿಕೃಷ್ಟಸ್ಥಾನಾಗಿ ಇದ್ದಿರಲಾರದು. ದೇವದಾಸಿಯರ ಕುಲ, ಅವರು ದೇವದಾಸಿಯರಾಗಲು ನಿರ್ಧರಿಸಿದ್ದಕ್ಕೆ ಕಾರಣ, ದೇವದಾಸಿಯಾಗುವಾಗ ನಡೆಯುತ್ತಿದ್ದ ವಿಧಿಗಳು–ಇತ್ಯಾದಿ ವಿಷಯಗಳ ಮೇಲೆ ಶಾಸನಗಳು ಸಾಕಷ್ಟು ಬೆಳಕು ಚೆಲ್ಲಿವೆ."[132] ಕೊಪ್ಪಳ ಜಿಲ್ಲೆಯ ಕೆಲವೊಂದು ಶಾಸನಗಳಲ್ಲಿ ಇವರ ಕುರಿತು ಕೆಲವೊಂದು ಮಾಹಿತಿಗಳು ಲಭಿಸುತ್ತವೆ. ಕ್ರಿ.ಶ.1174ರ ಕವಲೂರಿನ ಶಾಸನವು[133] ಸಿಂಗಟಾಲೂರ ಬಾಚಿದೇವನು ಆತನ ಕುಮಾರ ಚಿಡುಗಿದೇವನು ಮತ್ತು ಕೌರೂರ 500 ಮಹಾಜನರು ಹರಿಹರ ದೇವರ ಸನ್ನಿಧಾನದಲ್ಲಿ ಸಂಕಮದೇವನ 5ನೆಯ ವರ್ಷದಲ್ಲಿ ಹರಿಹರದೇವರ ಸೂಳೆಗೇರಿಗೆ ಯೆಡೆಹಳ್ಳಿಗೇರಿಯ ಹೊಲಮನ್ನೆಯವನ್ನು ತಮ್ಮ ಸಂತಾನಾಭಿವೃದ್ಧಿಗೆ ಬಯಸಿಕೊಟ್ಟರು ಎಂಬ ಉಲ್ಲೇಖ ನೀಡಿದೆ. ಇಲ್ಲಿ ಬರುವ 'ಕೇರಿ' (ಗೇರಿ) ಎಂಬ ಪದವನ್ನು ನೋಡಿದರೆ ದೇವದಾಸಿಯರು ವಾಸಿಸುವ ಬೀದಿಯನ್ನು ವರ್ಣಿಸುತ್ತಿದ್ದಂತೆ ಭಾಸವಾಗುತ್ತದೆ ಎಂದು ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ಇವರು ತಮ್ಮದೇ ಆದ ಒಂದು ಕೇರಿಯಲ್ಲಿ ವಾಸಿಸುತ್ತಿದ್ದಂತೆ ಈ ಮೂಲಕ ತಿಳಿಯಬಹುದಾಗಿದೆ. ಕನ್ನೇರುಮಡುವಿನಲ್ಲಿ ದೊರೆತ (ಕ್ರಿ.ಶ.1530) ಶಾಸನವು[134] ಸಾಳುವ ದೇವರಾಯನು ಅಚ್ಯುತದೇವರಾಯನಿಗೆ ಪುಣ್ಯವಾಗಬೇಕೆಂದು ಕನ್ನೇರಮಡುವಿನ ಅಮರೇಶ್ವರದೇವರಿಗೆ ಯಲಬರಿಗೆಯ ಸೀಮೆಗೆ ಸೇರುವ ಸೂಳೆಯಕೆರೆಯ ಇಕ್ಕುಳಗದ್ದೆಯನ್ನು ಸೇನಬೋವ ಮಾಳಯ್ಯನು ದೇವರ ಅಂಗರಂಗಭೋಗ ಅಮೃತಪಡಿ ನಿವೇದ್ಯಕ್ಕೆ ಸಮರ್ಪಿಸಿದ್ದನು ಎಂಬುದನ್ನು ತಿಳಿಸುತ್ತದೆ. ಇಲ್ಲಿ ಅಂಗಭೋಗ ಎಂದರೆ ದೇವಸ್ಥಾನದ "ವಿಗ್ರಹದ ದೇಹಕ್ಕೆ ಸಲ್ಲುವ

ಭೋಗ, ಎಂದರೆ ಸ್ನಾನ ಗಂಧಲೇಪನ, ಧೂಪ, ದೀಪ, ಪುಷ್ಪ ಇತ್ಯಾದಿಗಳು ಅಂಗಭೋಗಗಳು"'[135]

ಭಾರತದ ದೇವಸ್ಥಾನಗಳಲ್ಲಿ ಭಗವಂತನನ್ನು ಜೀವಂತ ವ್ಯಕ್ತಿಯೆಂದು ಭಾವಿಸಿ ಅಲ್ಲಿ ಸಕಲ ಸೌಲಭ್ಯವನ್ನು ವಹಿಸಿಕೊಡುತ್ತಿದ್ದರು. "ವೈಭವದಲ್ಲಿ ಬಾಳುವ ಒಬ್ಬ ವ್ಯಕ್ತಿಯ ಎಲ್ಲ ಭೋಗಗಳನ್ನು ಭಗವಂತನಿಗೂ ಅರ್ಪಿಸುವುದು ರೂಢಿಯಲ್ಲಿದೆ. ದೇವದಾಸಿ ಸಂಪ್ರದಾಯದ ಮೂಲ ಇಲ್ಲಿರಬಹುದು."[136] ಆದಕಾರಣ ಗರ್ಭಗೃಹದಲ್ಲಿ ಅಂಗಭೋಗದ ಸೂಳೆಗೆ ಮಾತ್ರ ಪ್ರವೇಶವಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.1543ರ ಹಿರೇಸೂಳಿಕೇರಿ ಶಾಸನದಲ್ಲಿ[137] ಗುಜಲ ಮುಂಮಡಿ ಮೇದಿನಿರಾಯನು ಸೂಳೆಯಕೆರೆಯ ಗಡಿಯಲ್ಲಿ ಶಾಂತಮಲ್ಲಿಕಾರ್ಜುನದೇವರ ಪ್ರತಿಷ್ಠೆ ಮಾಡಿ, ಆ ದೇವರ ಅಮೃತಪಡಿ ಸೇವೆಗಾಗಿ ಯಿಕುಳದ ಭೂಮಿ ನೀಡುತ್ತಾನೆ ಎಂಬ ಮಾಹಿತಿ ಕಂಡು ಬಂದಿದೆ. ವಿಪ್ರ (ಕ್ರಿ.ಶ.1059) ಶಾಸನದಲ್ಲಿ[138] ವೇಶ್ಯವಾಟ ಎಂಬ ಶಬ್ದದ ಉಲ್ಲೇಖ ಮಾತ್ರ ಬಂದಿದ್ದು ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ. ಹೀಗೆ ವೇಶ್ಯೆಯರು ಅಥವಾ ಸೂಳೆಯರು ರಾಜನ ಭೋಗವಸ್ತುಗಳ ಪಟ್ಟಿಯಲ್ಲಿ ಅದ್ವಿತೀಯರೆನಿಸಿದ್ದು ರಾಜನ ಜೀವನದ ಒಂದು ಅವಿಭಾಜ್ಯ ಅಂಗವೆಂಬಂತೆ ಬಾಳಿದ ಇವರಿಗೆ ರಾಣಿ ವಾಸದ ಮಹಿಳೆಯರಿಗೆ ಇದ್ದ ಎಲ್ಲ ಸವಲತ್ತುಗಳಲ್ಲಿ ಕೆಲವಾದರೂ ಸಲ್ಲುತ್ತಿದ್ದಂತೆ ತಿಳಿದು ಬರುತ್ತದೆ. "ಒಟ್ಟಿನಲ್ಲಿ ಸೂಳೆಗೇರಿಗಳು ರಮ್ಯವಾಗಿದ್ದು ಅಲ್ಲಿ ಚೆಲುವೆಯರು ವಾಸಿಸುತ್ತಿದ್ದರೆಂದು ಶಾಸನಗಳು ಹೇಳುತ್ತವೆ."[139]

**ಸಂಪ್ರದಾಯ–ನಂಬಿಕೆಗಳು:**

ಪ್ರತಿಯೊಂದು ಸಮಾಜವು ತನ್ನದೇ ಆದ ಒಂದು ಸಂಪ್ರದಾಯ, ನಂಬಿಕೆಗಳ ಮೇಲೆ ನಿಂತಿರುತ್ತದೆ. ಬಹು ಮಟ್ಟಿಗೆ ಸಮಾಜ ಸ್ಥಾಪಿತ ಕಟ್ಟುಪಾಡಿಗಳಿಗನುಗುಣವಾಗಿ ನಿರ್ವಹಿಸಬೇಕಾಗುತ್ತದೆ. ಜೀವನ ಆದರ್ಶಗಳು, ಮೌಲ್ಯಗಳು, ಲೋಕರೂಢಿಗಳು, ಧರ್ಮ, ಕಲೆ ಮುಂತಾದವುಗಳ ಮೇಲೆ ಸಮಾಜ ಜೀವನವು ಸುಭದ್ರವಾಗಿ ನಿಂತಿರುತ್ತದೆ. ಕೊಪ್ಪಳ ಜಿಲ್ಲೆಯ ಜನರಲ್ಲಿದ್ದ ಕೆಲವು ಪ್ರಮುಖ ಸಂಪ್ರದಾಯಗಳು ಶಾಸನಗಳಲ್ಲಿ ಉಕ್ತವಾಗಿವೆ.

**ಪಾಪ–ಪುಣ್ಯಗಳ ಕಲ್ಪನೆ:**

ಪ್ರತಿಯೊಂದು ಸಮಾಜದಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ಅಂಶಗಳು ಇದ್ದೇ ಇರುತ್ತವೆ. ನಮ್ಮ ಸುತ್ತಮುತ್ತಲಿನ ಸಮಾಜದತ್ತ ಗಮನಹರಿಸಿದಾಗ ಇಂತಹ ಸಾಮಾಜಿಕ ಪ್ರಕ್ರಿಯೆಗಳ ಅನುಭವವಾಗುತ್ತದೆ. ಹೀಗಾಗಿ ಪಾಪ ಮತ್ತು ಪುಣ್ಯಗಳ ಕಲ್ಪನೆಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಕೆಟ್ಟ ಉದ್ದೇಶಗಳಿಂದ ನಿಯಂತ್ರಣ ಹೊಂದಬೇಕೆನ್ನುವ ದೃಷ್ಟಿಯಿಂದ ಪಾಪ–ಪುಣ್ಯ ಮೊದಲಾದವುಗಳು ಉದ್ಭವವಾದವು ಎಂದು ಹೇಳಬಹುದು. ಕಾಲಾಂತರದಲ್ಲಿ ಇವು ಜನತೆಯಲ್ಲಿ

ಬಲವಾದ ನಂಬಿಕೆಯಾಗಿ ಮೂಢನಂಬಿಕೆಗಳಾಗಿ ಪಂಚಮಹಾಪಾತಕಗಳೆಂದು ಗುರುತಿಸಲ್ಪಟ್ಟವು. "ಪಂಚಮಹಾಪಾತಕ ಗಳೆಂದರೆ ಸ್ತ್ರೀವಧೆ, ಗೋವಧೆ, ಬ್ರಾಹ್ಮಣವಧೆ, ಶಿಶುವಧೆ ಮತ್ತು ಋಷಿವಧೆಗಳೆಂದು ಅಭಿಪ್ರಾಯ ಪಡಲಾಗಿದೆ."[140] ದಾನವನ್ನು ನೀಡುವ ಮುಖ್ಯ ಉದ್ದೇಶ ತಮಗಾಗಲಿ ಅಥವಾ ತಮ್ಮ ಪೂರ್ವಜರಿಗೆ ಪುಣ್ಯಲಭಿಸಲಿ ಎಂಬುವುದಾಗಿತ್ತು. ದಾನಕ್ಕೆ ಸಂಬಂಧಿಸಿದಂತೆ ಈ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಾಸನಗಳ ದೊರೆತಿವೆ. ವಿಪ್ರ (ಕ್ರಿ.ಶ.1094) ಶಾಸನವು[141] ವೀರನೊಳಂಬ ಪಲ್ಲವಪೆರ್ಮಾಡಿಯು ಮಲಯಾಳ ಪಂಡಿತದೇವರಿ ಬಲ್ಲಕುಂದೆ ಮುನ್ನೂರರ ಕಂಪಣದ ಬಳಿಯ ಬಾಡವಾದ ಇಕುಪರುವನ್ನು ಕಂಪಿಲೆಯ ಗವರೇಶ್ವರದ ಸಿದ್ದೇಶ್ವರದೇವರಿಗಾಗಿ ಸರ್ವ್ವ ನಮಸ್ಯವಾಗಿ ದಾನ ಬಿಟ್ಟಿರುತ್ತಾನೆ. ಈ ದಾನವನ್ನು ರಕ್ಷಿಸಿದವರಿಗೆ ವಾರಣಾಸಿಯಲ್ಲಿ ಸಾವಿರ ಕವಿಲೆಯ ಬ್ರಾಹ್ಮಣರಿಗೆ, ತಪೋದರನರಿಗೆ ದಾನನೀಡಿದ್ದಷ್ಟು ಪುಣ್ಯ ಲಭಿಸುತ್ತದೆ ಎಂದು ಉಲ್ಲೇಖಿಸಿದೆ. ಕ್ರಿ.ಶ.1521ರ ಕೊಪ್ಪಳದ ಶಾಸನವು[142] ಕೃಷ್ಣರಾಯಮಹಾರಾಯನು ರಾಜ್ಯಭಾರಮಾಡುತ್ತಿದ್ದ ಸಮಯದಲ್ಲಿ ತಿಮ್ಮಪ್ಪಯ್ಯನು ಕೊಪ್ಪಳದ ಚೆನ್ನಕೇಶವ ದೇವರಿಗೆ ಹಿರೇಸಿಂದೋಗಿ ಗ್ರಾಮವನ್ನು ಸಮರ್ಪಿಸುತ್ತಾನೆ. ಈ ಗ್ರಾಮದ ಆದಾಯವನ್ನು ದೇವರ ಅಮೃತಪಡಿ, ಅಂಗರಂಗವೈಭವ, ಮಾಸೋತ್ಸವ ಮುಂತಾದವುಗಳಿಗೆ ವ್ಯಯಿಸಬೇಕೆಂದಿದೆ. ಇದನ್ನು ತಪ್ಪಿದವರು ತಮ್ಮ ತಂದೆ ತಾಯಿಯರನ್ನು ವಾರಣಾಸಿಯಲ್ಲಿ ವಧೆ ಮಾಡಿದ ಪಾಪಕ್ಕೆ ಹೋಗುವರು ಎಂದಿದೆ. ಹೀಗೆ ಪಾಪ–ಪುಣ್ಯಗಳ ನಂಬಿಕೆ ಆಚರಣೆಗಳು ಕೊಪ್ಪಳ ಜಿಲ್ಲೆಯಲ್ಲಿ ರೂಢಿಯಲ್ಲಿದ್ದವೆಂದು ಹೇಳಬಹುದು. ಒಟ್ಟಾರೆಯಾಗಿ ಈ ಪಾಪ–ಪುಣ್ಯಗಳ ಕಲ್ಪನೆ ತನ್ನ ಶಾಸನವನ್ನು ಆಳು ಮಾಡದಿರಲಿ ಎಂಬ ಉದ್ದೇಶದಿಂದ ಈ ರೀತಿಯಾಗಿ ಶಾಸನಗಳ ಕೊನೆಯಲ್ಲಿ ಬರೆಸುತ್ತಿದ್ದರು.

**ಹಬ್ಬಗಳು :**

ಪ್ರತಿಯೊಂದು ಸಮಾಜದ ಆಚರಣೆಗಳಲ್ಲಿ 'ಹಬ್ಬ' ಒಂದು ಪ್ರಮುಖ ಅಂಗವಾಗಿದೆ. ಹಬ್ಬದ ಸಂದರ್ಭದಲ್ಲಿ ನಡೆಯುವ ಪೂಜಾವಿಧಾನಗಳು ಜನತೆಯನ್ನು ಒಗ್ಗೂಡಿಸುವಲ್ಲಿ ಯಶಸ್ವಿ ಪಾತ್ರ ವಹಿಸುತ್ತವೆ. ಎಂ.ಚಿದಾನಂದ ಮೂರ್ತಿಯವರು "ಅಂದು ದೇವಾಲಯಗಳಲ್ಲಿ ನಡೆಯುತ್ತಿದ್ದ ಎರಡು ಪೂಜಾ ಉತ್ಸವಗಳಾದ ಚೈತ್ರ ಮತ್ತು ಪವಿತ್ರಗಳನ್ನು ಹೆಸರಿಸುತ್ತಾ ಮಂತ್ರಪುಷ್ಪದವ ನಾರೋಪಣ ಫಲಪೂಜೆ ಕಾರ್ತಿಕ ಕೃತ್ತಿಕಾ ದೀಪಪೂಜೆ ವಸಂತೋತ್ಸವಗಳನ್ನು ಸೇರಿಸಿಕೊಂಡರೆ ಐದು ಹಬ್ಬಗಳಾಗುತ್ತವೆ"[143] ಎಂದಿದ್ದಾರೆ.

ಕೊಪ್ಪಳ ಜಿಲ್ಲೆಯ ಎರಡು ಶಾಸನಗಳಲ್ಲಿ ಮಾತ್ರ ಹಬ್ಬದ ಕುರಿತಂತೆ ಮಾಹಿತಿಯಿದೆ. ಕ್ರಿ.ಶ.1513ರ ಬಂಡಿಹರ್ಲಾಪುರ ಶಾಸನವು[144] ಕೃಷ್ಣರಾಯ ಮಹಾರಾಯನು ಶ್ರೀವಿಠಲ ದೇವರ ಅಮೃತಪಡಿ, ನೈವೇದ್ಯ, ಅಂಗರಂಗ ವೈಭೋಗ,

ಫಾಲ್ಗುಣಮಾಸ, ನಿತ್ಯ, ಪಕ್ಷ, ಮಾಸ ಮತ್ತು ಸಂವತ್ಸರ ಉತ್ಸವಗಳಿಗೆ ನಿತ್ಯನೈಮಿತ್ತಕ ದೀಪಾರಾಧನೆ ಮುಂತಾದ ಪುಣ್ಯತಿಥಿಗಳಲ್ಲಿ ಮಾಡುವ ಮಹಾಪೂಜೆ, ಮಹಾನೈವೇದ್ಯಕ್ಕೆಂದು ಹುಲಿಗೆಯ ಮಾಗಣಿಗೆ ಸಲ್ಲುವ ಹರಿಹರಪುರವನ್ನು ಸಮರ್ಪಿಸುತ್ತಾನೆ. ಕ್ರಿ.ಶ.1515ರ ಹತ್ತೋಟಿ ಶಾಸನವು[145] ಕೃಷ್ಣದೇವರಾಯನು ಬಾಲಕೃಷ್ಣದೇವರ ಪ್ರತಿಷ್ಠಾ ಕಾಲದಲ್ಲಿ ದೇವರ ಅಮೃತಪಡಿ ಅಂಗರಂಗಭೋಗ, ಚೈತ್ರಮಾಸದ ರಥೋತ್ಸವ, ನಿತ್ಯನೈಮಿತ್ಯಕ, ದೀಪೋತ್ಸವ ಪುಣ್ಯದಿನಗಳು, ದಿನ, ಪಕ್ಷ, ಮಾಸಗಳಲ್ಲಿ ನಡೆಯುವ ಉತ್ಸವಗಳ ವೆಚ್ಚಕ್ಕಾಗಿ ಹುಲಿಗೆಯ ಮಾಗಣಿಯಲ್ಲಿನ ಅತ್ತಿವಟ್ಟಿ ಎನ್ನುವ ಗ್ರಾಮವನ್ನು ಸಮರ್ಪಿಸುತ್ತಾನೆ. ಕೊಪ್ಪಳ ಜಿಲ್ಲೆಯ ಶಾಸನಗಳು ನೇರವಾಗಿ ಹಬ್ಬದ ಬಗ್ಗೆ ಉಲ್ಲೇಖಿಸದಿದ್ದರೂ ಅರಸರು ಹಾಗೂ ಹಲವು ಅಧಿಕಾರಿಗಳು ಶಾಸನಗಳನ್ನು ಬರೆಸುವಾಗ ಪಾಲ್ಗುಣ,[146] ವೈಶಾಖ,[147] ಸಂಕ್ರಮಣ,[148] ಶ್ರಾವಣ,[149] ಆಶ್ವಿಜ,[150] ಪಂಚಮಿ,[151] ಕಾರ್ತಿಕಮಾಸ,[152] ಕಾರ್ತಿಕಮಾಸ[153] ಹೀಗೆ ಇಲ್ಲಿ ಕೆಲವೊಂದು ಹಬ್ಬಗಳ ಆಚರಣೆಯ ಮಾಸಗಳ ಹೆಸರನ್ನು ಉಲ್ಲೇಖ ಗೊಂಡಿರುವುದರಿಂದ ಈ ದಿನಗಳು ವಿಶೇಷ (ಹಬ್ಬದ) ದಿನಗಳಾಗಿದ್ದವು.

**ದಾನ ನೀಡಿಕೆ :**

ಪ್ರಾಚೀನ ಕಾಲದಿಂದಲೂ ಭಾರತದ ಸಮಾಜವು ದಾನ ಧರ್ಮಕ್ಕೆ ವಿಶೇಷವಾದ ಮನ್ನಣೆಯನ್ನು ನೀಡುತ್ತಾ ಬಂದಿದೆ. ವ್ಯಕ್ತಿಯು ತನ್ನ ಮನಸ್ಸಿನ ನೆಮ್ಮದಿಗಾಗಿ ಹಾಗೂ ಇತರರ ಹಿತಕ್ಕಾಗಿ ಈ ದಾನವನ್ನು ಕೊಡುತ್ತಾ ಬಂದಿದ್ದಾನೆ. ಆದರೂ ಈ ದಾನದ ಮುಖ್ಯ ಉದ್ದೇಶ ಪುಣ್ಯವನ್ನು ಸಂಪಾದಿಸುವುದಾಗಿತ್ತು. ರಾಜರು, ಸಾಮಂತರುಗಳು, ವಿವಿಧ ಅಧಿಕಾರಿಗಳು, ದಂಡನಾಯಕರು ಅಲ್ಲದೆ ಉನ್ನತ ವರ್ಗದವರಿಂದ ಹಿಡಿದು ಸಾಮಾನ್ಯ ವರ್ಗದವರೆಗಿನ ಜನರು ದಾನ ದತ್ತಿಗಳನ್ನು ಕೊಟ್ಟಿರುವ ಕುರಿತು ಶಾಸನಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಹೀಗೆ ದಾನ ಹಲವಾರು ವಿಧಗಳಲ್ಲಿ ಕಂಡು ಬರುತ್ತದೆ. ಒಂದು ಕಡೆ ಪರರ ಹಿತಕ್ಕಾಗಿ ಬಯಸಿದ ಪ್ರತೀಕವಾದರೆ ಇನ್ನೊಂದೆಡೆ ಸಾರ್ವಜನಿಕ ಕೆಲಸಗಳಿಗೆ ಮಹತ್ವವನ್ನು ಕಲ್ಪಿಸುತ್ತದೆ. ಅನ್ನದಾನ, ಕನ್ಯಾದಾನ, ವಸ್ತ್ರದಾನ, ಭೂದಾನ ಇವುಗಳು ದಾನದ ರೂಪದಲ್ಲಿ ಬಂದರೆ, ಕೆರೆ, ಬಾವಿ ಮತ್ತು ದೇವಾಲಯಗಳ ನಿರ್ಮಾಣ ಕಾರ್ಯಗಳು ಇನ್ನೊಂದು ರೀತಿಯ ದಾನಗಳೆನಿಸಿಕೊಂಡಿದ್ದವು. ಇತರ ಶಾಸನ ಪ್ರಕಾರಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ದಾನ ಶಾಸನಗಳದೇ ಮೇಲುಗೈ. ವ್ಯಕ್ತಿ ಇಲ್ಲವೆ ಸಂಸ್ಥೆಗೆ ಭೂಮಿ ರೂಪದಲ್ಲಿ, ಹಣದ ರೂಪದಲ್ಲಿ, ಅಗತ್ಯ ವಸ್ತುಗಳ ಪೂರೈಕೆಯನ್ನು ಒದಗಿಸುವ ರೂಪದಲ್ಲಿ ದಾನದ ಕ್ರಿಯೆ ನಡೆಯುತ್ತಿರುತ್ತದೆ. ದಾನ ಸಾಮಾನ್ಯವಾಗಿ ಒಂದು ಮಠದಲ್ಲಿ ನಡೆಯುವ ವಿದ್ಯಾಕೇಂದ್ರಗಳಿಗೂ, ದೇವಾಲಯದಲ್ಲಿ ನಡೆಯುವ ಪೂಜೆ–ಪುನಸ್ಕಾರಕ್ಕೂ, ನರ್ತಿಸುವ ನರ್ತಕಿಯರಿಗೂ, ವಾದ್ಯಗಾರರಿಗೂ, ಲೋಕೋಪಕಾರ

ಉದ್ದೇಶದಿಂದ ನಿರ್ಮಿಸಲಾಗುತ್ತಿದ್ದ ಅಗ್ಗಿಷ್ಟಿಕೆ–ಅರವಟ್ಟಿಗೆ–ಅನ್ನಸತ್ರ ಮುಂತಾದವುಗಳನ್ನಲ್ಲದೆ ವ್ಯಕ್ತಿಯೊಬ್ಬನ ಸೇವಾ ಮನೋಭಾವವನ್ನು ಲಕ್ಷಿಸಿ ನೀಡಿದ ದಾನವಾಗಿರುತ್ತದೆ.''[154]

ತಾವು ಕೊಟ್ಟ ದಾನವು ಶಾಶ್ವತವಾಗಿ ಸದುಪಯೋಗವಾಗಿ ಮುಂದುವರಿಯಬೇಕೆಂಬ ಉದ್ದೇಶದಿಂದ ಈ ರೀತಿಯ ದಾನಗಳನ್ನು ಕೊಡುತ್ತಿದ್ದರು. ದಾನ ಮಾಡುವುದು ಧರ್ಮಕಾರ್ಯಗಳಲ್ಲಿ ಪ್ರಮುಖವಾದದ್ದು. ``ಧರ್ಮವೆಂದರೆ ಶೈವ, ಜೈನ, ವೈಷ್ಣವ ಧರ್ಮಗಳಲ್ಲ. ಎಲ್ಲರಿಗೂ ಸಮಾನವಾದ ಎಲ್ಲ ಧರ್ಮಗಳೂ ಒಪ್ಪಿ ಹೇಳುವ ದಾನ, ಕೆರೆಯನ್ನು ಕಟ್ಟಿಸುವುದು ದೇವಸ್ಥಾನ ನಿರ್ಮಾಣ ಇತ್ಯಾದಿ ಕಾರ್ಯಗಳಾಗಿವೆ''[155] ಇಂತಹ ಉದ್ದೇಶವನ್ನುಳ್ಳ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆಕಿವೆ.

ಅಳವಂಡಿಯಲ್ಲಿ ದೊರೆತ ಶಾಸನವು[156] ಮಾರಸಿಂಗಣನು 40 ಗದ್ಯಾಣ ಹಾಗೂ ಒಂದು ಮತ್ತರು ಭೂಮಿ ನೀಡಿದ ಉಲ್ಲೇಖವಿದೆ. ಸಿಂಗಣನ ಮಗ ಮಾದಣ ಮಾಳಿಗೆ ಮನೆಯೊಂದನ್ನೂ, ತೆಲ್ಲಿಗರ ಕೇರಿಯಲ್ಲಿ ದೇವರ ನಂದಾದೀಪಕ್ಕಾಗಿ ಸಿಂಗಸೆಟ್ಟಿಯು ಸೊಟಿಗೆ ಎಣ್ಣೆಯನ್ನು ಬಿಟ್ಟಿದ್ದರ ಕುರಿತು ಉಲ್ಲೇಖವಿದೆ. ಕ್ರಿ.ಶ.1174ರ ಕವಲೂರು ಶಾಸನದಲ್ಲಿ[157] ಏಚಿರಾಜನು ಕಟ್ಟಿಸಿದ ಹರಿಹರ ದೇವಾಲಯಕ್ಕೆ ಅದರ ಅಂಗಭೋಗ ರಂಗಭೋಗ–ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ರೇಚಿದೇವನು ಮತ್ತು ನಾಡಾಧಿಕಾರಿ, ಮನ್ನೆಯ ಕುಪ್ಪರಸ ಆತನ ಮಕ್ಕಳು ಹರಿಹರದೇವ, ಮಲ್ಲಿದೇವ ಬಳ್ಳಾಳದೇವರು, ಕೌರೂರ ಅಶೇಷ ಮಹಾಜನರು (500ರ್ವರು) ಸೇರಿ ಎಡೆಹಳ್ಳಿಯನ್ನು ದಾನವಾಗಿ ನೀಡಿದಂತೆ ತಿಳಿದು ಬರುತ್ತದೆ.

ಅಳವಂಡಿಯ ನಾನೂರು ಮಹಾಜನರ ಸನ್ನಿಧಿಯಲ್ಲಿ ಕರುವ ಗುಲ್ಲಿಮಯ್ಯ ಎಂಬುವವನು ಬಾವಿ, ಕಲ್ಲದೇಗುಲ, ಸತ್ರ, ಸತ್ರದ ಮನೆಯನ್ನು ಮಾಡಿಸಿರುತ್ತಾನೆ. ಈ ರಚನೆಗಳಿಗೆ ಗುಲ್ಲಿಮಯ್ಯನ ಮಗ ಬರ್ಮಯ್ಯನು ವಸತಿ ಸತ್ರಕ್ಕೆ 18 ಮತ್ತರು, ದೇವರಿಗೆ 5 ಮತ್ತರು, ಮಠಕ್ಕೆ ಎರೆಮತ್ತರು ದಾನವನ್ನು ನೀಡಿದ್ದನ್ನು ಅವವಿಂಡಿ ಶಾಸನ[158] ಉಲ್ಲೇಖಿಸಿದೆ. ಕ್ರಿ.ಶ.1028ರ ಹಲಗೇರಿ ಶಾಸನವು[159] ಚಾಳುಕ್ಯ ಜಗದೇಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಪೆಲ್ಗೆರೆಯ ಮೂಡಣ ಆದಿತ್ಯ ದೇವರಿಗೆ ದಾನ ನೀಡಿದಂತೆ ತಿಳಿಸುತ್ತದೆ. ಕ್ರಿ.ಶ.1018ರ ಶಾಸನದಲ್ಲಿ[160] ಬೆಣ್ಣೆಕಲ್ಲು ಸೀಮೆಯ ಕಾಳಗದಲ್ಲಿ ತಳಾರನಾಯಕ ಎರೆಯಮ್ಮನೆಂಬುವವನು ಸತ್ತಾಗ ಅವನ ಕುಟುಂಬಕ್ಕೆ ಪಲ್ಗೆರೆಯ ಊರೊಡೆಯ ಮತ್ತು ಮಹಾಜನರು ಸೇರಿ ಭೂದಾನ ಬಿಟ್ಟ ವಿಷಯವನ್ನು ಹೇಳಿದೆ. ಚಾಳುಕ್ಯಾಭರಣನಾದ ನೂರ್ಮಡಿತೇಜ ಅಹವಮಲ್ಲನು ತನ್ನ ಮೊದಲ ರಾಜ್ಯಭಾರದ ವರ್ಷದಲ್ಲಿ ಬ್ರಹ್ಮಾಂಡಕ್ರತುವನ್ನು ಮಾಡಿದ. ಈ ಸಮಯದಲ್ಲಿ

ಬ್ರಾಹ್ಮಣರಿಗೆ ಮೊದೆಯನೂರನ್ನು ದಾನವಾಗಿ ಕೊಟ್ಟ ಮಾಹಿತಿಯನ್ನು ಮಾದಿನೂರು ಶಾಸನ[161] ಉಲ್ಲೇಖಿಸಿದೆ. ಕೊಪ್ಪಳದಲ್ಲಿ ದೊರೆತ ಶಾಸನವೊಂದರಲ್ಲಿ[162] ರಾಷ್ಟ್ರಕೂಟ ರಾಜ ಇಂದ್ರನು ಆಳುತ್ತಿದ್ದ ಸಮಯದಲ್ಲಿ ಈತನ ದಂಡನಾಯಕ ಮಾಮರಸನು ಸಿದ್ಧಕುಪಣದ ಬಸದಿಗೆ ಕಳಸಾರೋಹಣಕ್ಕಾಗಿ ದಾನ ಬಿಟ್ಟಿದ್ದಂತೆ ಕಂಡು ಬಂದಿದೆ. ಕ್ರಿ.ಶ.1521ರ ಶಾಸನವು[163] ಕೊಪಣದ ಚೆನ್ನಕೇಶವ ದೇವರಿಗೆ ಹಿರೇಸಿಂದೋಗಿ ಗ್ರಾಮವನ್ನು ಭಂಡಾರದ ಅಪ್ಪರಸಯ್ಯನ ಮಗ ತಿಮ್ಮಪ್ಪಯ್ಯನು ದಾನ ಬಿಟ್ಟಿದ್ದಂತೆ ತಿಳಿಸುತ್ತದೆ. ಕ್ರಿ.ಶ.13ನೇ ಶತಮಾನದ ಶಾಸನದಲ್ಲಿ[164] ಗೌರಾದೇವಿಯರ ಹಡಪದ ಲಖ್ಖಾರ್ಯ ಎಂಬುವವನು ಸಾತಲದೇವಿ ಬಸದಿಗೆ ಶಾಸನ ಸಹಿತ ಭೂಮಿಯನ್ನು ದಾನನೀಡಿದಂತೆ ವಿವರಿಸಿದೆ. ಕಿಡಿದಾಳದಲ್ಲಿ ದೊರೆತ ಕ್ರಿ.ಶ.1514ರ ಶಾಸನದಲ್ಲಿ[165] ಕೃಷ್ಣದೇವರಾಯನು ಹೊಸವೂರ ಮಹಾಮಾಯಿಯ ಅಮೃತಪಡಿ ನೈವೇದ್ಯಕ್ಕೆಂದು ಅಂಗ, ವಂಗ, ಕಳಿಂಗ, ಗುರ್ಜ್ಜರ, ಮಗದ, ಲಾಟ, ಕರ್ನಾಟ, ಗೌಳ, ಮಾಳವ, ರೇವಣ, ಕೊಂಕಣ, ಬಡಗಣ, ಮೂಡಲ, ಪಾಂಚಾಳ, ಕೇರಳ, ಹಮ್ಮೀರ, ಸಿಂಹಳ ಈ ದೇಶಗಳಲ್ಲದೆ ಗಿರಿದುರ್ಗ, ವನದುರ್ಗ, ಜಲದುರ್ಗಗಳನ್ನು ಹಾಗೂ ಪಡವ ನಾಡೊಳಗಣ ಕೊಪಣ ವೇಂಠೆಯಕೆ ಸೇರಿದ ಕಿಡಿದಾಳ ಗ್ರಾಮವನ್ನು ದಾನ ನೀಡಿದಂತೆ ಮಾಹಿತಿ ನೀಡಿದೆ. ಗುಜ್ಜಲ ಮುಂಮಡಿ ರಾಯಣನಾಯಕ ಎಂಬುವನು ಸಂಣವಡೆಯರಿಗೆ ಗಂಗನಹಾಳಿನ ಕೆರೆಯ ಕೆಳಗೆ ಗದ್ದೆಯನ್ನು ದತ್ತಿ ಬಿಟ್ಟ ವಿಷಯದ ಕುರಿತು ಗಂಗನಹಾಳು ಶಾಸನ[166] ಉಲ್ಲೇಖ ನೀಡಿದೆ.

ಶಿವಪುರದಲ್ಲಿ ದೊರೆತ ಶಾಸನ[167] ಸೋಮೇಶ್ವರ ದೇವನ ದೀಪಾರಾಧನೆಗೆ ದವಸ, ಹಸುರುವಾಣಿ ಮುಂತಾದ ಹೇರುಗಳಿಗೆ 10 ಹೇರಿಗೆ 5 ಕಾಸಿನ ಲೆಕ್ಕದಲ್ಲಿ ಮಹಾನಾಡ ಸೆಟ್ಟಿ ಪಟ್ಟಣಸ್ವಾಮಿಗಳು ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ.1513ರ ಬಂಡಿಹರ್ಲಾಪುರ ಶಾಸನ ವೊಂದರಲ್ಲಿ[168] ಶ್ರೀ ವಿಠಲದೇವರ ಅಮೃತಪಡಿ, ನೈವೇದ್ಯ, ಅಂಗರಂಗ ವೈಭೋಗ, ಫಾಲ್ಗುಣಮಾಸ, ವೈಶಾಖದ ರಥೋತ್ಸವ ಹಾಗೂ ಮುಂತಾದ ಉತ್ಸವಗಳಿಗೆಂದು ಹುಲಿಗೆಯ ಮಾಗಣಿಗೆಯಲ್ಲಿನ ಹರಿಹರಪುರವನ್ನು ದಾನವಾಗಿ ಸಮರ್ಪಿಸುತ್ತಾನೆ. ವಿರೂಪಾಕ್ಷ ಮಹಾರಾಯನು ಅಗೋಲೆಯ ರಾಮೇನಾಯಕನ ಹರಿವಾಣದ ಪ್ರಸಾದಕ್ಕೆಂದು ಹಂಪಾದೇವಿ ಹಳ್ಳಿಯ ಕೆರೆಯನ್ನು ನೀಡಿದಂತೆ ಅಚಲಾಪುರ ಶಾಸನ[169] ವಿವರಿಸಿದೆ. ಕ್ರಿ.ಶ.1061ರ ಅಳವಂಡಿ ಶಾಸನವು[170] ಕರುವ ಗುಲ್ಗಿಮಯ್ಯ ಎಂಬುವವನು ಕನ್ಯಾದಾನ, ಕವಿಲೆದಾನ, ಪಾದರಕ್ಷೆ ದಾನಗಳನ್ನು ಮಾಡಿದ್ದಲ್ಲದೆ ಅನೇಕ ತೀರ್ಥಸ್ಥಳ ಗಳಲ್ಲಿಯೂ ಕೆಲವೊಂದನ್ನು ದಾನ ನೀಡಿದನ್ನು ತಿಳಿಸಿದೆ. ಸೋಮನಾಥ ಮತ್ತು ಮಂಚಿಕಬ್ಬೆ ಎಂಬ ದಂಪತಿಗಳಿಬ್ಬರೂ ಕೂಡಿ ಪ್ರತಿಷ್ಠೆ ಮಾಡಿಸಿದ ಸೋಮೇಶ್ವರದೇವರಿಗೆ ಊರಿನ ಪೂರ್ವಕ್ಕೆ ಗುಯ್ಯಲ ತೋಟ, ಪರಿನೀರ ತೋಟವನ್ನು ಚತುಸ್ಸೀಮಾ ಸಮೇತವಾಗಿ ದಾನ ನೀಡಿರುತ್ತಾರೆ. ಅಲ್ಲದೆ ಈ ದೇವಾಲಯಕ್ಕೆ ಊರಿನ 53 ಮಹಾಜನರು 200 ಕಮ್ಮ ತೋಟ, ನಾಲ್ಕು

ಮತ್ತರು ಹೊಲ ಹಾಗೂ ಹೂವಿನ ತೋಟವನ್ನು ದಾನ ನೀಡಿದಂತೆ ಹುಲಿಗಿ ಶಾಸನ[171]ದಿಂದ ತಿಳಿದು ಬರುತ್ತದೆ. ಕಲ್ಲೂರಿನಲ್ಲಿ ದೊರೆತ ಶಾಸನವೊಂದರಲ್ಲಿ[172] ಶ್ರೀಸೋಬನೇಶ್ವರದೇವರ ಅಂಗಭೋಗಕ್ಕೆ ಮುಂತಾದುವಕ್ಕೆ ಸಾಮಂತ ಸೋಬನರಸನು ದಾನ ನೀಡಿದಂತೆ ತಿಳಿದು ಬಂದಿದೆ. ಕಲ್ಲೂರಿನಲ್ಲಿ ದೊರೆತ ಮತ್ತೊಂದು ಶಾಸನದಲ್ಲಿ[173] ಕಡಂವರ ಕೇತಗೋಡ ಮೊದಲಾದವರು ಸೇರಿ 52 ಮತ್ತರು ಭೂಮಿಯನ್ನು ದೇವಾಲಯವೊಂದಕ್ಕೆ ದಾನ ನೀಡಿದ ಮಾಹಿತಿ ದೊರೆತಿದೆ. ಕ್ರಿ.ಶ.1186ರ ಕಲ್ಲೂರು ಶಾಸನ[174] ಚಾವುಂಡರಸನ ಮಗ ವೀರಬಿಜ್ಜಳದೇವರಸನು ಕಲ್ಲೂರ ಕಲಿದೇವಸ್ವಾಮಿಯ ಭಕ್ತನಾದ ಮೊಲ್ಲೆಯ ಬಮ್ಮಯ್ಯನಿಗೆ ಪ್ರಥಮ ವೃತ್ತಿಯಾಗಿ ಗಣಮತಕ್ಕೆ 200 ಮತ್ತರು ಭೂಮಿಯನ್ನು ದಾನ ನೀಡಿದಂತೆ ತಿಳಿಸಿದೆ.

ಕಲ್ಲೂರಿನ (ಕ್ರಿ.ಶ.1185) ಶಾಸನವೊಂದರಲ್ಲಿ[175] ಸಣಗೇತಯ ನಾಯಕನು ನರೆಯಂಗಲ ಬಳಿಯ ಕಲ್ಲೂರ ಸ್ವಯಂಭೂ ಕಲಿದೇವಸ್ವಾಮಿಯ ಅಂಗಭೋಗ, ಖಂಡಸ್ಫುಟಿತ, ಜೀರ್ಣೋದ್ಧಾರ, ತಪೋಧನರ ಆಹಾರದಾನಕ್ಕೆಂದು 24 ಮತ್ತರು ಭೂಮಿಯನ್ನು ಸರ್ವನಮಸ್ಯವಾಗಿ ದಾನ ಬಿಟ್ಟಿದ್ದಂತೆ ಕಂಡು ಬಂದಿದೆ. ಕಾಶಿಯ ವಿಶ್ವನಾಥನಿಗೆ ಸಮವೆಂದು ಭಾವಿಸಲ್ಪಟ್ಟ ಕಲ್ಲೂರ ಕಲಿನಾಥದೇವರಿಗೆ ಗುಜಲ ಹನುಮಂತನಾಯಕನ ಮಗ ಯಿಂಮಡಿ ಹನುಮಂತನಾಯಕ ಮತ್ತು ಕುಷ್ಟಗೆಯ ಗುಜ್ಜಲ ಯಿಂಮಡಿ ಮರನದಿನಾಯಕನ ಮಗ ಮುಂಮಡಿ ಮಂಗಪನಾಯಕರು ದಾನ ನೀಡಿರುವ ಮಾಹಿತಿಯನ್ನು ಕಲೂರಿನ ಶಾಸನವು[176] ಉಲ್ಲೇಖಿಸಿದೆ. ಕ್ರಿ.ಶ.1129ರಲ್ಲಿ ದೊರೆತ ಮತ್ತೊಂದು ಕಲ್ಲೂರಿನ ಶಾಸನ[177] ಕಲ್ಲೂರಿನ ದೇವಾಲಯ ವೊಂದಕ್ಕೆ ಚಾವಣ್ಣ ಎಂಬುವನು ಖಂಡಸ್ಫುಟಿತ ಜೀರ್ಣೋದ್ಧಾರ, ದೇವತಾಪೂಜೆ, ಅತಿಥಿಯರ ಆಹಾರ ದಾನಕ್ಕೆಂದು ಭೂಮಿಯನ್ನು ಕ್ರಯಗೊಂಡು ಹನ್ನೆರಡು ಮತ್ತರು ಭೂಮಿಯನ್ನು ದಾನ ಬಿಟ್ಟಿದ್ದರ ಮೇಲೆ ಬೆಳಕು ಚೆಲ್ಲಿದೆ. ಬಂಡಿಹಾಳ ಶಾಸನವು[178] ಗುಜ್ಜಲ ಯಿಂಮಡಿ ಯರಪನಾಯಕನ ಮಗ ಮುಂಮಡಿ ಯರಪನಾಯಕನು ಮತ್ತು ಗುಜ್ಜಲ ಚಿಕ್ಕ ಹನುಮಂತನಾಯಕನ ಮಗ ಯಿಂಮಡಿ ಹನುಮಂತನಾಯಕರು ಸೇರಿ ಮಲ್ಲಿಕಾರ್ಜುನ ದೇವರಿಗೆ ದಾನ ಬಿಟ್ಟಿದ್ದಂತೆ ಮಾಹಿತಿ ನೀಡಿದೆ. ಕ್ರಿ.ಶ.1238ರ ಸಂಕನೂರು ಶಾಸನದಲ್ಲಿ[179] ಬಾಹತ್ತರನಿಯೋಗಾಧಿಪತಿ ಸರ್ವಾಧಿಕಾರಿ ವಾಸುದೇವನ ಶ್ರೀಕರಣದ ವಾಮನದೇವನಾಯ್ಕನು ತನ್ನ ಪುತ್ರೋತ್ಸವದ ಸಂದರ್ಭದಲ್ಲಿ ಕಿಸುಕಾಡು 70ಕ್ಕೆ ಸೇರಿದ್ದ ಸಂಕಲೂರ ಸಂಕಲಾದೇವಿಗೆ ದಾನ ನೀಡಿದ್ದಂತೆ ವಿವರಣೆ ನೀಡಿದೆ. ಕ್ರಿ.ಶ.1132 ಕಲ್ಲೂರು ಶಾಸನ[180] ಆಚರಸನ ಮಗ ರಾಯಸಾಧಾರ ಪೆರ್ಮಡಿದೇವನು ಆಳುತ್ತಿದ್ದಾಗ ಕುಕ್ಕನೂರು-30ರೊಳಗಿನ ಕಲ್ಲೂರು ಸ್ವಯಂಭು ಕಲಿದೇವರಿಗೆ ಸುಂಕವೆಗ್ಗಡೆ ಮಹೇಶ್ವರಯ್ಯನು ದಾನ ನೀಡಿದ್ದನ್ನು ಉಲ್ಲೇಖಿಸಿದೆ. ಮುಧೋಳು (ಕ್ರಿ.ಶ.1154) ಶಾಸನದಲ್ಲಿ[181] ಮುಧೋಳಲ ಅಗ್ರಹಾರದಲ್ಲಿದ್ದ ಗವರೇಶ್ವರದೇವರ ಅಂಭೋಗ, ಮಾಟಕೂಟದ ಜೀರ್ಣೋದ್ಧಾರ, ಸುಣ್ಣ ಬಳೆಯಲು, ಗಂಧ-ಕುಂಕುಮ, ಕರ್ಪೂರ

ಮುಂತಾದವುಗಳು ನಡೆಯುವಂ ತಾಗಲು ಅಲ್ಲಿ ನೆಲೆಸಿದ್ದ ಅಯ್ಯಾವೊಳೆ ಐನೂರ್ವರು, ಎಂಟುನಾಡ ಹದಿನಾರು, ಸಮಸ್ತ ಮುಮ್ಮರಿದಂಡಗಳು ಹಾಗೂ ನಾನಾ ದೇಶಿಗಳು ಸೇರಿ ದಾನ ನೀಡಿದ್ದಂತೆ ಮಾಹಿತಿ ದೊರೆಯುತ್ತದೆ. ಕ್ರಿ.ಶ.1098ರ ಕಲ್ಲೂರ ಶಾಸನವು[182] ಚಾವುಂಡರಸನು ಕಲ್ಲೂರ ಸ್ವಯಂಭೂ ಕಲಿದೇವರ ಅಂಗಭೋಗ, ತಪೋಧನರ ಆಹಾರದಾನಕ್ಕೆಂದು ಬೆನತೂರ ಸೀಮೆಯ ದಕ್ಷಿಣಕ್ಕೆ 50ಮತ್ತರು ಭೂಮಿಯನ್ನು ಹಾಗೂ ಎರಬರವಿಯ ದಕ್ಷಿಣಕ್ಕೆ 50ಮತ್ತರನ್ನು ಹೀಗೆ ಬೇರೆ ಬೇರೆಡೆಯಲ್ಲಿ ಒಟ್ಟು 120ಮತ್ತರು ಭೂಮಿಯನ್ನು ದಾನ ನೀಡುತ್ತಾನೆ.

ಅರಕೇರಿಯಲ್ಲಿ ದೊರೆತ ಶಾಸನವು[183] ಚಾವುಂಡರಾಯನ ಮಾನ್ಯದಲ್ಲಿ ಪೆಗ್ಗಡೆ ಚಾವುಣ್ಡಯ್ಯನು 450 ಕಮ್ಮ ಗದ್ದೆಯನ್ನು ಖರೀದಿಸಿ ಸಿದ್ದೇಶ್ವರದೇವರ ನೈವೇದ್ಯಕ್ಕೆ ದಾನ ಬಿಟ್ಟಂತೆ ತಿಳಿಸುತ್ತದೆ. ಕ್ರಿ.ಶ.879ರ ಅರಕೇರಿಯ ಶಾಸನವು[184] ಕನ್ನರದೇವನು ಆಳುತ್ತಿದ್ದಾಗ ಗಂಗರ ಬಿರುದು ಗಳನ್ನುಳ್ಳ ಪೆರ್ಮಾಡಿಯ ಗಂಗವಾಡಿ 96000 ಮುಂತಾದ ಪ್ರಾಂತ್ಯಗಳನ್ನು ಆಳುತ್ತಿದ್ದಾಗ ಯಾವುದೋ ಕಾರ್ಯಕ್ಕೆ ದಾನ ನೀಡಿದ ಮಾಹಿತಿ ನೀಡಿದೆ. ಬೆಳಗೆರೆಯ ಶೋಭನೇಶ್ವರ ದೇವರಿಗೆ ಶೋಭನರಸ ಎಂಬುವವನು ತೋಟವನ್ನು ಭೂದಾನವಾಗಿ ನೀಡಿದ್ದಲ್ಲದೆ 5 ಗದ್ಯಾಣವನ್ನು ದತ್ತಿಯಾಗಿ ನೀಡಿದ್ದಂತೆ ಬಳಗೇರಿ ಶಾಸನ[185]ದಿಂದ ತಿಳಿದುಬರುತ್ತದೆ. ಯಲಬುರ್ಗಾದ ಕುಕನೂರಿನಲ್ಲಿ ದೊರೆತ ದೀರ್ಘ ಶಾಸನವೊಂದರಲ್ಲಿ[186] ಗಂಗಾಧರಯ್ಯ ನಾಯಕನ ಮಗ ಈಶ್ವರಯ್ಯನಾಯಕ ಇವನ ತಮ್ಮ ಶ್ರೀಪತಿನಾಯಕನು ಅಗ್ರಹಾರ ಕುಕನೂರು ಸಾಸಿರ್ವ್ವರ ಕೈಯಲಿ ಸರ್ವಮಾನ್ಯವಾಗಿ ಪಡೆದು ಮೂಲಸ್ಥಾನದೇವರ ಶ್ರೀಖಣ್ಡಕ್ಕೆ 18 ಮತ್ತರು, 450 ಕಮ್ಮ ಭೂಮಿಯನ್ನು ಶ್ರೀ ಸರಸ್ವತೀ ದೇವರ ಅಂಗಭೋಗಕ್ಕೆ, ನಿವೇದ್ಯಕ್ಕೆ 7 ಮತ್ತರು ಭೂಮಿಯನ್ನು ದಾನ ನೀಡುತ್ತಾನೆ. ಅದೇ ರೀತಿಯಾಗಿ ದೇವರ ಹೂದೋಟವನ್ನು ಮಾಡುವ ಮಾಲೆಗಾರರು, ಹರೆಕಾರರು, ಹಾಡುವವರು ಇವರ ಜೀವನವು ಶ್ರೀಮೂಲಸ್ಥಾನ ದೇವರ ಆದಾಯದ ಬಡ್ಡಿಯಿಂದ ನಡೆಯಲು ಇವರಿಗೆ ಗುರುದೇವನು ಊರ ಮೇಲೆ ಹಾಗ ವ್ರಿದ್ಧಿಯನ್ನು, ಗದ್ಯಾಣ 100ನ್ನು, ಊರಿನ ಉತ್ತರಕ್ಕೆ ಹೂವಿನ ತೋಟ 2 ಮತ್ತರು ಹಾಗೂ 450 ಕಮ್ಮವನ್ನು ದಾನ ನೀಡಿದ್ದಂತೆ ತಿಳಿಸಿದೆ. ಇದೇ ಶಾಸನದ ಮುಂದುವರೆದ ಭಾಗದಲ್ಲಿ ಶ್ರೀಪತಿ ನಾಯಕನು ಕುಕ್ಕನೂರು ಅಗ್ರಹಾರದ ಸಾವಿರ ಮಹಾಜನರ ಕೈಯಲ್ಲಿ ಸರ್ವನಮಸ್ಯವಾಗಿ ಪಡೆದು ಶ್ರೀಮೂಲಸ್ಥಾನದೇವರ ಬ್ರಾಹ್ಮಣರ ಭೋಜನಕ್ಕಾಗಿ ಹಾಗೂ ಅಲ್ಲಿನ ಸತ್ರಕ್ಕೆ ತಮ್ಮ ಭಾಗದ 5 ಮತ್ತರನ್ನು ದಾನವಾಗಿ ಬಿಡುತ್ತಾರೆ. ಅದೇರೀತಿಯಾಗಿ ಶ್ರೀಪತಿನಾಯಕನ ಪತ್ನಿ ಚಾಯಿಕವ್ವೆಯು ಸಾಸಿರ್ವ್ವರ ಕಯ್ಯಲ್ಲಿ ಸರ್ವನಮಸ್ಯವಾಗಿ ಪಡೆದು ಶ್ರೀಮೂಲಸ್ಥಾನ ದೇವರ ನಿವೇದ್ಯಕ್ಕೆ ತಮ್ಮ ಸ್ಥಳವಾದ ಹೆಗ್ಗೆರೆಯಲ್ಲಿ ಕಾಮಿಯಕ್ಕನ ಭಾಗದ 1 ಮತ್ತರು 450 ಕಮ್ಮ ಭೂಮಿಯನ್ನು ಬಿಡುತ್ತಾಳೆ. ಮುಂದುವರೆದ ಭಾಗದಲ್ಲಿಯೂ ದಾನದ ಕುರಿತು ವಿವರಣೆ ದೊರೆಯುತ್ತದೆ. ಸಕ್ಕಲಾಳ್ಗರ (ಕ್ರಿ.ಶ.1132) ರುದ್ರಾದಿತ್ಯಭ್ಯೈಸಾಸನು

ಶ್ರೀಮೂಲಸ್ಥಾನದೇವರ ನೈವೇದ್ಯಕ್ಕೆ ಗದ್ದೆ ಒಂದು ಮತ್ತರು 100 ಕಮ್ಮ ಭೂಮಿ ಬಿಟ್ಟಿರುತ್ತಾನೆ. ಅಲ್ಲದೆ ಈ ದೇವಾಲಯಕ್ಕೆ ಅಲ್ಲಿದ್ದ ಮಹಾಜನರು ಸೇರಿ ಶ್ರೀಮೂಲಸ್ಥಾನ ದೇವರ ನನ್ದಾದೀಪಕ್ಕೆ ಒಂದು ಮಾನ ಎಣ್ಣೆಯನ್ನು ನೀಡಲು ಮಾನ್ಯದ ಗಾಣವೊಂದನ್ನು ದಾನವಾಗಿ ಬಿಡುತ್ತಾರೆ. ಇವರೊಂದಿಗೆ ಲಕ್ಕರಸ ಎಂಬುವವನು (ಕ್ರಿ.ಶ.1157) ಇದೇ ಮೂಲಸ್ಥಾನದೇವರ ಅಗ್ರಾಸನ ಭೋಜನದಲ್ಲಿ ನಿತ್ಯವೂ ನಾಲ್ವರು ಬ್ರಾಹ್ಮಣರು ಊಟಮಾಡುವಂತೆ ಹೆಗ್ಗರೆಯಲ್ಲಿ 6 ಮತ್ತರು ಹಾಗೂ 450 ಕಮ್ಮ ಭೂಮಿಯನ್ನು ದಾನ ಬಿಟ್ಟಿದ್ದಂತೆ ಮಾಹಿತಿ ನೀಡುತ್ತದೆ. ಕ್ರಿ.ಶ.1163ರಲ್ಲಿ ದೊರೆತ ಕುಕನೂರು ಶಾಸನವು[187] ಅಮ್ಮಣಯ್ಯ ಮತ್ತವನ ಕರಣಗಳು ಬಿಜ್ಜಳದೇವನಿಗೆ ಬಿನ್ನಹವನ್ನು ಮಾಡಿಕೊಂಡು ಕುಕ್ಕನೂರು–30ರ ಶ್ರೀಮಂತಗ್ರಾಮವಾದ ಎಡೆಹಳ್ಳಿಯನ್ನು ಸರ್ವಬಾಧಾಪರಿಹಾರವಾಗಿ ಹಂಪೆಯ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಪುನರ್ದತ್ತಿಯಾಗಿ ಪಡೆದು ದೇವರಿಗೆ ಮತ್ತು ಊರಿನ 15 ಜನ ಬ್ರಾಹ್ಮಣರಿಗೆ ದಾನ ನೀಡಿದ್ದಂತೆ ಉಲ್ಲೇಖಿಸಿದೆ. ಕುಕ್ಕನೂರಿನ ಮತ್ತೊಂದು ಶಾಸನವು[188] (ಕ್ರಿ.ಶ.1092) ದಂಡನಾಯಕ ಕೇಶಿರಾಜನು ಕುಕ್ಕನೂರು ಅಗ್ರಹಾರಕ್ಕೆ ಬಂದಾಗ ಸ್ವಯಂಭೂ ಪ್ರಸನ್ನಮಲ್ಲಿಕಾರ್ಜುನ ದೇವರಿಗೆ ಲಕ್ಷಗಡುಗೆ ಪೂಜೆ ಮಾಡಿಸಿ ರಾಯಮುರಾರಿ ಸೋಚಿದೇವನಿಗೆ ಬಿನ್ನಪವನ್ನು ಮಾಡಿಕೊಂಡು ಕುಕ್ಕನೂರು–30ರಲ್ಲಿದ್ದ ಹಾಡಲಗೆರೆಯನ್ನು ದಾನವಾಗಿ ಬಿಟ್ಟಿದ್ದಂತೆ ಮಾಹಿತಿ ನೀಡಿದೆ. ಕ್ರಿ.ಶ.1005ರ ಶಾಸನ[189] ಕುಕನೂರು ಈಶ್ವರ ಸೆಟ್ಟಿಯ ಹೊಸಮಠದ ಚೋಳಪಂಡೀತನ ಶಿಷ್ಯನಾದ ಅಗಸ್ತಜೀಯನ ಕಾಲನ್ನು ತೊಳೆದು ಎರಡು ದೇವಾಲಯಗಳಿಗೆ ಕಳಸವನ್ನಿಡಿಸಿ, ಮುಖಸಾಲೆ ಕಟ್ಟಿಸಿ, ಮಂಟಪದ ಪರಿಸೂತ್ರದ ನಿರ್ವಹಣೆಗಾಗಿ 100 ಗದ್ಯಾಣವನ್ನು ಬಿಟ್ಟಿದ್ದಂತೆ ವಿವರಣೆ ನೀಡಿದೆ.

ಯಲಬುರ್ಗಾ ತಾಲೂಕಿನ ರಾಜೂರಿನಲ್ಲಿ ದೊರೆತ ಶಾಸನ[190]ದಲ್ಲಿ ಶ್ರೀಧರದಂಡನಾಥನ ಮಗ ಮಾಳಪರಸನು ಕಟ್ಟಿಸಿದ ಬಸದಿಯ ಜೀರ್ಣೋದ್ಧಾರ, ದೇವರ ರಂಗಭೋಗಕ್ಕೆ ಎಂದು ತನ್ನ ಊರಿನ ಪಶ್ಚಿಮಕ್ಕೆ 10 ಮತ್ತರು ಎರೆಹೊಲವನ್ನು ದಾನನೀಡಿದ್ದಂತೆ ಕಂಡು ಬಂದಿದೆ. ಹೆಸರೂರು ಶಾಸನವು[191] ಚಾಳುಕ್ಯರಾಯನ ಕುಲದೈವದ ಒಕ್ಕಲುಗಳು, ಮಣ್ಣಕೆರೆಯ 500 ತಂತ್ರರು, ಊರೊಡೆಯ ಪನ್ನಿರ್ವರು ಇವರೆಲ್ಲರೂ ಸೇರಿ ಆದಿತ್ಯದೇವರ ಹಾಗೂ ಜೀರ್ಣೋದ್ಧಾರಕ್ಕೆಂದು ಚಾವೋಜನ ಮಗ ಬೊಪ್ಪಣ್ಣನಿಗೆ ಹೆಗ್ಗೆರೆಯ ಪೂರ್ವಕ್ಕೆ ನಾಲ್ಕು ಮತ್ತರನ್ನು ನೀಡಿದಂತೆ ಕಂಡು ಬರುತ್ತದೆ. ಗೋತಗಿ ಶಾಸನವು[192] ಜಗದೇಕಮಲ್ಲನ ರಾಣಿ ಪದ್ಮಲದೇವಿಯು ಕರಡಿರಲ್ಲ–300ರ ಬಳಿಯ ಗೋವಂತಿಗೆಯ ಸ್ವಯಂಭು ಕಲಿದೇವಸ್ವಾಮಿಗೆ ಕರಿಯನೆಲ 54 ಮತ್ತರು 450 ಕಮ್ಮ ಭೂಮಿಯನ್ನು, 450 ಕಮ್ಮ ತೋಟವನ್ನು ಒಟ್ಟು 55 ಮತ್ತರು ಭೂಮಿಯನ್ನು ದಾನ ಬಿಟ್ಟಿದ್ದಂತೆ ತಿಳಿಸಿದೆ. ಚಾಳುಕ್ಯ ಅರಸ ತ್ರೈಲೋಕ್ಯಮಲ್ಲನು ಮೊರಗನೂರ

ಬೀಡಿನಲ್ಲಿದ್ದಾಗ ಎಡದೊರೆ–2000ದ ಕಂಪಣ ಕರಡಿಕಲ್ಲು–300ರ ಬಳಿಯ ಗೋವನ್ತಿಗೆಯಲ್ಲಿ ಚಾಮುಣ್ಡಭಟ್ಟೋ ಪಾಧ್ಯಾಯನಿಗೆ ಧಾರಾಪೂರ್ವಕವಾಗಿ 300 ಮತ್ತರು ಕರಿಯ ಭೂಮಿಯನ್ನು ದಾನ ಬಿಟ್ಟಿದ್ದಂತೆ ಕ್ರಿ.ಶ.1045ರ ಗೋತಗಿ ಶಾಸನ[193]ದಿಂದ ತಿಳಿದು ಬರುತ್ತದೆ. ಹಿರೇಮನ್ನಾಪುರ ಶಾಸನವು[194] ಬನವಾಸಿಪುರವರಾಧೀಶ್ವರ ಮುಂತಾದ ವಿಶೇಷಣಗಳನ್ನುಳ್ಳ ಅಜವರ್ಮರಸನು ಕೆಳವಾಡಿಯನ್ನು ಆಳುತ್ತಿದ್ದಾಗ ಕಿರುದೆರೆ, ಕಿರುಕುಳಾಯ ಮೊದಲಾದವನ್ನು ಸರ್ವಭಾದಾ ಪರಿಹಾರವಾಗಿ ದಾನ ಬಿಟ್ಟಿದ್ದಂತೆ ಮಾಹಿತಿ ನೀಡಿದೆ. ಪುರದಲ್ಲಿ ದೊರೆತ ಶಾಸನದಲ್ಲಿ[195] ಶ್ರೀಗವರೇಶ್ವರದೇವರ ಅಂಗಭೋಗ, ರಂಗಭೋಗ, ಪಾತ್ರಪಾವುಳ, ಚೈತ್ರಪವಿತ್ರ, ಪಂಚಪರ್ಬ್ಬ, ಮಹಾನೈವೇದ್ಯ, ಭೋಜನ ಮತ್ತು ಅತಿಥಿ ಬ್ರಾಹ್ಮಣರ ತಪೋಧನರ ನಿತ್ಯ ಆಹಾರದಾನಕ್ಕೆಂದು, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ದೇವರ ಬ್ರಹ್ಮಪುರಿಯ ಬ್ರಾಹ್ಮಣ ವೇತನಕ್ಕೆಂದು ಕೆಳವಾಡಿ ಮನ್ನೆಯ ಶೆಟ್ಟರು, ಮನಾಮಾಡಿಯ ಬಾಚರಸ ಮುಂತಾದವರಲ್ಲದೆ ಕಂಪಲಿ ಹಂಪದೇವ, ಜೋಯಿಹರಸ, ಕಣ್ಣರಸ, ಸೆಳೆಯಜ್ಜರಸ, ಹಂಪರಸ, ಬೋಗರಸ, ಬಾಗದೇವಿಯ ಹರಿಹರ ಹಿಂಡಿಯ ಬೀವರಸ ಹೀಗೆ ಎಲ್ಲರೂ ಸೇರಿ ಹೀರಿಯಕೋಲಲ್ಲಿ ಒಂದು ಮತ್ತರು ದಾನ ನೀಡುತ್ತಾರೆ. ಗವರೇಶ್ವರದೇವರ ಪೂಜೆ ಪುನಸ್ಕಾರಕ್ಕೆ ಹಾಗೂ ನೈವೇದ್ಯಕ್ಕೆಂದು 1 ಗಾಣವನ್ನೂ ಗಾಣಿಗರು ನಂದಾದೀಪಕ್ಕೆಂದು ಸೊಳಸಿಗೆ ಎಣ್ಣೆಯನ್ನೂ, ದವಸ, ಅಡಿಕೆ, ಅರಿಶಿನ, ಮೆಣಸಿನ ಮೇಲಿನ ತೆರಿಗೆಯನ್ನೂ ಕೊಟ್ಟಿದ್ದಂತೆ ಪುರ ಶಾಸನ[196]ದಿಂದ ತಿಳಿದು ಬಂದಿದೆ. ಕ್ರಿ.ಶ.1547ರಲ್ಲಿ ದೊರೆತ ಶಾಸನದಲ್ಲಿ[197] ತಾವರಗೆರೆ ಸೀಮೆಯ ಪುರ ಗ್ರಾಮದಲ್ಲಿದ್ದ ಸೋಮೇಶ್ವರ ಮಹಾಲಿಂಗಕ್ಕೆ ಊರಿನ ಪಶ್ಚಿಮಕ್ಕೆ ಮಡೆಹೊಲ, ಗದ್ದೆ, ಹುಣಸೆಮರಗಳು, ಸೆಟರ ಕಾಣಿಕೆ, ನಾಡ ತಳವಾರಿಕೆ, ಗವುಡಮಾನ್ಯದ ಹಣ, ಅಂಗಡಿ, ಗಾಣ, ಮಗ್ಗ, ಸಿದ್ದಾಯ, ಕಡ್ಡಾಯ, ವೋಜರು ತರುವ ಹಣ, ಕುಂಬಾರ ತರುವ ಹಣ, ಉಪ್ಪಿನಮೋಳೆ ಮುಂತಾದ ಸಕಲ ಸುವರ್ಣಾದಾಯವನ್ನು ವಿರುಪಣನಾಯಕ ಎಂಬುವವನು ದತ್ತಿಯಾಗಿ ಬಿಟ್ಟಿದ್ದಂತೆ ಕಂಡು ಬಂದಿದೆ. ಜಗದೇಕಮಲ್ಲನ ಮಹಾಮಂಡಳೇಶ್ವರ ಪೆಮ್ಮಾಡಿದೇವರಸನು ಹತ್ತರತಾಣದ ಶ್ರೀಸ್ವಯಂಭೂದೇವರ ಅಂಗಭೋಗ, ನೈವೇದ್ಯಕ್ಕೆ ಗ್ರಾಮದ ಪ್ರಮುಖರ ಸಮ್ಮುಖದಲ್ಲಿ ದಾನ ಕೊಟ್ಟಿದ್ದನ್ನು ಅಂಟೂರುತಾಣ ಶಾಸನ[198] ವಿವರಿಸಿದೆ.

ಗಂಗಾವತಿ ತಾಲೂಕಿನ ವಿಪ್ರ ಶಾಸನ[199] ವೀರನೊಳಂಬ ಪಲ್ಲವಪೆರ್ಮಾಡಿಯು ಮಲಯಾಳಪಂಡಿತದೇವರಿಗೆ ಬಲ್ಲಕುಂದೆ ಮುನ್ನೂರರ ಕಂಪಣದ ಬಳಿಯ ಬಾಡವಾದ ಇಕುಪರವನ್ನು ಕಂಪಿಲೆಯ ಗವರೇಶ್ವರದ ಸಿದ್ದೇಶ್ವರದೇವರಿಗಾಗಿ ಸರ್ವನಮಸ್ಯವಾಗಿ ಬಿಟ್ಟಿದ್ದಂತೆ ಮಾಹಿತಿ ಒದಗಿಸಿದೆ. ಆನೆಗೊಂದಿ ಶಾಸನ[200] ಆನೆಗೊಂದಿ ಮಾಗುಣಿಯ ತಿಮ್ಮರಸಯ್ಯನು ಅಚ್ಯುತರಾಯನಿಗೆ ಪುಣ್ಯವಾಗಬೇಕೆಂದು

ಮಹೇಸನಗುಡಿಗೆ ನೈವೇದ್ಯಕ್ಕೆ ದಾನ ನೀಡಿದ್ದನ್ನು ಹೇಳಿದೆ. ಅಚ್ಯುತದೇವರಾಯನ ಆಳ್ವಿಕೆಯಲ್ಲಿ ಆನೆಗೊಂದಿಯ ಉತ್ತರದ ಬಾಗಿಲ ಬಳಿ ಪ್ರತಿಷ್ಠಾಪಿಸಲಾದ ಬಸವರಾಜದೇವರಿಗೆ ಚವರದ ಕೋನಪ್ಪನಾಯಕನ ಮಗ ಮಾದೈಯ, ಪೆನಗೊಂಡೆಯ ನಾಗೈಯನು ದೇವರ ನಿತ್ಯನೈವೇದ್ಯಕ್ಕಾಗಿ ದಾನ ನೀಡಿ ಅರವಟಿಗೆಯನ್ನು ನಿರ್ಮಿಸಿದ್ದಂತೆ ಕ್ರಿ.ಶ.1531ರ ಆನೆಗೊಂದಿ ಶಾಸನ[201] ವಿವರಿಸಿದೆ. ಹನುಮನಹಳ್ಳಿ ಶಾಸನವೊಂದರಲ್ಲಿ[202] ಅಂಜನಾದೇವಿಯ ಮತ್ತು ಹನುಮಂತದೇವರ ಅಮೃತಪಡಿಗೆ ಭಟಮಾನ್ಯವಾಗಿ ರಾಮಾಪುರದಲ್ಲಿ ಹೊಲ ಮತ್ತು ಗದ್ದೆಯನ್ನು ಆನೆಗೊಂದಿಯ ಹನಿಯ ನಾಗಣ್ಣನು ದಾನ ಬಿಟ್ಟಿದ್ದಂತೆ ಮಾಹಿತಿಯು ದೊರೆಯುತ್ತದೆ. ಕೆಸರಟ್ಟಿ ಶಾಸನವು[203] ಜೆಟಯನ ಮಗ ತಿಂಮಯ್ಯ, ಗೌತಮಗೋತ್ರದ ಕೋಕತಿಜಟೆಯ ಮಗ ಹಜಪಯ್ಯ ಇವರಿಬ್ಬರು ಕೃಷ್ಣದೇವರ ಅಮೃತಪಡಿಗೆ ಇಕ್ಕುಳದ ಹೊಲ, ನಾಗುಳದ ಗದ್ದೆ ಹಾಗೂ ತೋಟವೊಂದನ್ನು ದಾನನೀಡಿದ್ದಂತೆ ನಿರೂಪಿಸಿದೆ. ಕನಕಗಿರಿಯಲ್ಲಿ ದೊರೆತ ಕ್ರಿ.ಶ.1436ರ ಶಾಸನವು[204] ಕೃಷ್ಣದೇವ ಮಹಾರಾಯನು ರಾಜ್ಯಭಾರ ಮಾಡುತ್ತಿದ್ದಾಗ ಕನಕಗಿರಿನಾಥದೇವರ ಅಮೃತಪಡಿಗೆ ಕನಕಗಿರಿಪೇಟೆಯ ಸ್ಥಳದ ಸುಂಕ, ತಳವಾರಿಕೆ ಸುಂಕ, ಚನ್ನಪುರ, ತೊರಗಲ್ಲುಸೀಮೆಯ ಯಡಿಗಲ್ಲ ಕಳಸಗ್ರಾಮ ನವಿಲೆಯ ಸೀಮೆಯಲ್ಲಿನ ಬಾರಾಪುರದ ಒಟ್ಟು ಮೂರು ಗ್ರಾಮಗಳನ್ನು ದಾನ ನೀಡಿದ್ದಂತೆ ಮಾಹಿತಿ ಒದಗಿಸಿದೆ. ಗಂಗಾವತಿಯ ಕ್ರಿ.ಶ.1530ರ ಗುಂಡೂರು ಶಾಸನವೊಂದರಲ್ಲಿ[205] ಮಹಾಮಂಡಳೇಶ್ವರ ಕಂನೆಪವೊಡೆಯ ಬೆಂಬಲಕೋಟೆಯ ನಾಗನಾಥ ದೇವರಿಗೆ ಗುಂಡೂರಲ್ಲಿ ಹೊಸದಾಗಿ ಐಗುಳದ ಭೂಮಿಯನ್ನು ದಾನವಾಗಿ ನೀಡಿದ್ದಂತೆ ಕಂಡು ಬಂದಿದೆ. ಬರಗೂರು ಶಾಸನ[206] ಇದೇ ಊರಿನ ಗೌಡ ಮತ್ತು ಶಾನಭೋಗರು ಪಂಡಿತಾರಾಧ್ಯ ಶಿವಪ್ಪದೇವನಿಗೆ ಮಾನ್ಯವಾಗಿ ಭೂಮಿಯನ್ನು ದಾನ ನೀಡಿದ್ದಂತೆ ವಿವರಿಸಿದೆ. ಹೀಗೆ ಕೊಪ್ಪಳ ಜಿಲ್ಲೆಯಲ್ಲಿ ದೊರೆತ ದಾನ ಶಾಸನಗಳ ಸಂಖ್ಯೆ ಅಧಿಕ ಪ್ರಮಾಣದಲ್ಲಿವೆ. ಪ್ರಾಚೀನ ಕಾಲದಲ್ಲಿ ದಾನ ನೀಡುವುದು ಪುಣ್ಯದ ಕಾರ್ಯವೆನಿಸಿತ್ತು. ಹೀಗೆ ಅವರು ಕೊಟ್ಟ ದಾನದ ಕುರಿತು ಯಾವ ಕಾರಣಕ್ಕಾಗಿ ನೀಡುತ್ತಿದ್ದೇವೆಂಬುದನ್ನು ಶಾಸನಗಳಲ್ಲಿ ಬರೆಸುತ್ತಿದ್ದರು. 'ದಾನವು ಸಂಸ್ಥೆಗೆ ಕೊಡಲ್ಪಟ್ಟಿದ್ದರೆ ಸಮಾಜಕ್ಕೆ ಸಂಸ್ಥೆ ಸಲ್ಲಿಸುವ ಸೇವೆಯ ವಿವರ ಬರುತ್ತದೆ. ದೇವಾಲಯಗಳಿಗೆ ದಾನ ಕೊಟ್ಟಿದ್ದರೆ ಆ ದೇವಾಲಯಗಳಲ್ಲಿ ನಡೆಯುವ ವಿಶೇಷ ಪೂಜೆ ವಿಧಾನಗಳು ಅವುಗಳ ಆಚರಣೆಯ ಆಚಾರ ವಿಚಾರಗಳು ಒಂದು ವೇಳೆ ಅದು ವಿದ್ಯಾಕೇಂದ್ರವೂ ಆಗಿದ್ದರೆ ಅದರ ವಿವರ ಇತ್ಯಾದಿಗಳಿರುತ್ತವೆ. ಅಗ್ರಹಾರಗಳಿಗೆ ಕೊಟ್ಟ ದಾನವಾಗಿದ್ದರೆ ಅಗ್ರಹಾರದ ಮಹಾಜನಗಳ ವರ್ಣನೆ ಅವರ ಅಧ್ಯಯನದ ವಿಚಾರಗಳು ಬರುತ್ತವೆ.'[207] ತಾವು ಕೊಟ್ಟ ದಾನ-ದತ್ತಿಗಳು ಶಾಶ್ವತವಾಗಿ ಸದುಪಯೋಗವಾಗುವ ದೃಷ್ಟಿಯಿಂದ ಈ ಶಾಸನಗಳನ್ನು ಬರೆಸತೊಡಗಿದರು.

ಇಂತಹ ಹಲವಾರು ದಾನಗಳು ಧಾರ್ಮಿಕ ಕಾರ್ಯದ ಜೀರ್ಣೋದ್ಧಾರದ

ಪ್ರತೀಕಗಳೆನಿಸಿದ್ದವು. ಇವು ಸಾಮಾಜಿಕವಾಗಿ ಮತ್ತು ಆಡಳಿತಾತ್ಮಕವಾಗಿ ಸಮಾಜದ ಸುವ್ಯವಸ್ಥೆಗೆ ಭದ್ರ ಬುನಾದಿಯನ್ನು ಹಾಕಿದ್ದವು. ಇಂತಹ ದಾನಗಳನ್ನು ನೀಡುವ ಸಂದರ್ಭದಲ್ಲಿ "ಹಬ್ಬ–ಹರಿದಿನ, ಸೂರ್ಯಗ್ರಹಣ, ಚಂದ್ರಗ್ರಹಣ, ಸಂಕ್ರಾಂತಿಯ ದಿನಗಳು ಪ್ರಶಸ್ತವೆನ್ನುವ ನಂಬಿಕೆಯಿತ್ತು."[208] ದಾನ ನೀಡಿದವ ಮಾಹಿತಿಯಷ್ಟೇ ಅಲ್ಲದೆ ತಮ್ಮ ಮನೆತನದ ಹಿಂದಿನ ಪೀಳಿಗೆಯವರ ವಿವರವನ್ನು ಕೆಲವೊಮ್ಮೆ ಶಾಸನಗಳಲ್ಲಿ ಬರೆಸಿದ್ದುಂಟು.

"ಒಟ್ಟಿನಲ್ಲಿ ದಾನ ಶಾಸನಗಳಿಂದ ನಾಡಿನ ಅತ್ಯಂತ ಹಿರಿಯ ಸಂಸ್ಕೃತಿ ವ್ಯಕ್ತವಾಗುತ್ತದೆ. ಜನಜೀವನದ ವಿವಿಧ ಮಟ್ಟಗಳಲ್ಲಿ ಧರ್ಮ ಹಾಸುಹೊಕ್ಕಾಗಿ ಸೇರಿ ಜೀವನವನ್ನು ರೂಪುಗೊಳಿಸುತ್ತಿರುವ ಶಕ್ತಿಯಾಗಿ ಕಂಗೊಳಿಸುತ್ತದೆ. ಧರ್ಮದ ಸಾರ್ಥಕತೆ ತ್ಯಾಗದಲ್ಲಿ; ತ್ಯಾಗಕ್ಕೆ ಸಾಕ್ಷಿ ದೊರೆಯುವುದು ದಾನದಲ್ಲಿ. ಅಂತಹ ದಾನಗಳನ್ನು ಒಳಗೊಂಡ ಶಾಸನಗಳು ನಾಡಿನ ಸಂಸ್ಕೃತಿಯ ಪ್ರತೀಕಗಳು. ಸಾವಿರಾರು ದಾನ ಶಾಸನಗಳು ಕನ್ನಡಿಗರ ಉದಾರತೆಯನ್ನು ದಾನಶೂರತೆಯನ್ನು ಸಾರುತ್ತಿವೆ. ಈ ದಾನಶಾಸನಗಳಲ್ಲಿ ಪ್ರಾಸಂಗಿಕವಾಗಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಸ್ವರೂಪಗಳು ವ್ಯಕ್ತವಾಗಿವೆ."[209]

ಹೀಗೆ ದಾನ ಕೊಟ್ಟ ವ್ಯಕ್ತಿಯು ತಾನು ಕೊಟ್ಟಿದ್ದು ಶಾಶ್ವತವಾಗಿ ಉಳಿಯಬೇಕು, ಬೆಳೆಯಬೇಕು ಎಂಬ ಮಹದಾಸೆಯನ್ನು ಹೊಂದಿರುತ್ತಿದ್ದನು. ಅರಸರಿಂದ ಹಿಡಿದು ಸಾಮಾನ್ಯ ಜನರವರೆಗೆ ಎಲ್ಲ ವರ್ಗದ ಜನರು ಈ ರೀತಿಯಾಗಿ ದಾನ ಮಾಡಿ ಅಂದಿನ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಕೊನೆಯದಾಗಿ ದಾನವನ್ನು ಕಾಪಾಡಿದವರಿಗೆ ದೊರಕುವ ಶ್ರೇಯಸ್ಸು ದಾನವನ್ನು ಅಪಹರಿಸಿದವರಿಗೆ ಒದಗುವ ಪಾಪಗಳನ್ನು ಹೇಳುವ ಶ್ಲೋಕಗಳೂ ಇರುತ್ತವೆ.

**ವಿವಾಹ :**

ಸಮಾಜವು ಹಲವಾರು ಬಾಂಧವ್ಯಗಳಿಂದ ಒಗ್ಗೂಡಿದೆ. ಈ ಬಾಂಧವ್ಯಗಳು ಅಥವಾ ಸಂಬಂಧಗಳು ಮಾನವನ ಒಟ್ಟಾರೆ ಜೀವನಕ್ಕೆ ಸಂಬಂಧಿಸಿರುತ್ತವೆ. ಇಂತಹ ಸಮಾಜವು ಲೋಕರೂಢಿಗಳು, ಸಂಪ್ರದಾಯಗಳು, ನೀತಿ–ನಿಯಮಗಳು, ಧರ್ಮಮೊದಲಾದವುಗಳನ್ನು ಒಳಗೊಂಡಿರುತ್ತದೆ. ಈ ರೀತಿಯಾದ ಸಂಪ್ರದಾಯ ಬದ್ಧ ಸಮಾಜದಲ್ಲಿ ವಿವಾಹವು ತನ್ನದೇ ಆದ ಒಂದು ಚೌಕಟ್ಟನ್ನೊಳಗೊಂಡಿದೆ. ಕುಟುಂಬದ ಬಂಧನಕ್ಕೆ ಮದುವೆ ಬಹಳ ಮುಖ್ಯವಾದ ಸಾಮಾಜಿಕ ವಿಧಿಯಾಗಿತ್ತು. ಹಿಂದೂಗಳಲ್ಲಿ ಮದುವೆಯು ಧಾರ್ಮಿಕ ವಿಧಿಯನ್ನವಲಂಬಿಸಿದ್ದು ಸಮಾಜವು ಇದಕ್ಕೆ ಅಷ್ಟೇ ಮನ್ನಣೆಯನ್ನಿತ್ತಿದೆ. "ಪ್ರಾಚೀನ ಕಾಲದ ಬ್ರಹ್ಮ, ದೈವ, ಆರ್ಷ, ಪ್ರಜಾಪ್ರತ್ಯ, ಅಸುರ, ಗಂಧರ್ವ, ರಾಕ್ಷಸ ಮತ್ತು ಪೈಶಾಚ ಎಂಬ ಎಂಟು ಪದ್ಧತಿಯ ವಿವಾಹಗಳಲ್ಲಿ ಕರ್ನಾಟಕದಲ್ಲಿ ಕೆಲವು ಪದ್ಧತಿಗಳು ಬಳಕೆಯಲ್ಲಿದ್ದವು"[210] ಆದರೆ

ಕರ್ನಾಟಕದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಕನ್ಯಾದಾನ ಪದ್ಧತಿಯೇ ಹೆಚ್ಚಾಗಿ ಪ್ರಚಲಿತವಾಗಿತ್ತು. ಇದರ ಜೊತೆಗೆ ವರದಕ್ಷಿಣೆ ಪದ್ಧತಿ ಅಂದಿನಿಂದಲೂ ನಡೆದುಕೊಂಡು ಬಂದಿದ್ದು ವಧುವಿನ ತಂದೆ ತಾಯಿಗಳು ವರನಿಗೆ ನೀಡುವ ಹಣರೂಪದ ಅಥವಾ ಇನ್ನಾವುದೇ ರೂಪದಲ್ಲಿ ನೀಡುವ ದಕ್ಷಿಣೆಯಾಗಿತ್ತು.

ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಬಾಲ್ಯವಿವಾಹ ಪದ್ಧತಿಯೂ ಜಾರಿಯಲ್ಲಿದ್ದಿತು. ಬಹುಶಃ ಪ್ರಾಚೀನ ಕರ್ನಾಟಕಕ್ಕೂ ಈ ವಿಷಯವು ಅನ್ವಯಿಸುತ್ತದೆಂಬುದನ್ನು ಶಾಸನಾಧಾರಗಳಿಂದ ಸಮರ್ಥಿಸಬಹುದೆಂದು ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. "ಕರ್ನಾಟಕಕ್ಕೆ ಬಂದ ವಿದೇಶಿ ಪ್ರವಾಸಿ ಅಲ್ಬೆರೂನಿ ಇಲ್ಲಿ ಬಾಲ್ಯವಿವಾಹ ಜಾರಿಯಲ್ಲಿದ್ದ ಬಗೆಗೆ ತಿಳಿಸಿರುವನು"[211] ಆದರೆ ಪ್ರಾಚೀನ ಕಾಲದಲ್ಲಿ ಅಂತರ್ ಜಾತಿಯ ವಿವಾಹಕ್ಕೆ ಪ್ರೋತ್ಸಾಹ ವಿರಲಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ತಮ್ಮ ಜಾತಿಯಲ್ಲಿಯೇ ನೋಡಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತಿತ್ತು. ಅನ್ಯಜಾತಿ ಅಥವಾ ಉಪಜಾತಿಯವರನ್ನು ವಿವಾಹವಾಗುವುದು ಜಾತಿ ನಿಯಮಕ್ಕೆ ವಿರುದ್ಧವಾಗಿತ್ತು. "ಆಯಾ ಜಾತಿಗಳವರು ತಮ್ಮ ಜಾತಿಯ, ತಮ್ಮ ವೃತ್ತಿಯ ಬಹುಶಃ ತಮ್ಮ ಸಮಾಜದ ಮನೆಗಳಲ್ಲಿ ಮದುವೆಯಾಗುತ್ತಿದ್ದರು."[212]

ರಾಜಮನೆತನಗಳ ಆಳ್ವಿಕೆಯ ಅವಧಿಯಲ್ಲಿ ಬಹುಪತ್ನಿತ್ವ ಪದ್ಧತಿಯು ಜಾರಿಯಲ್ಲಿದ್ದಿತು. "ಬಹು ಪತ್ನಿತ್ವಕ್ಕೆ ಪ್ರಾಚೀನ ಕಾಲದಲ್ಲಿ ಸಾಮಾಜಿಕ ಮನ್ನಣೆಯಿದ್ದಿತು. ಇದು ಅರಸರಲ್ಲಿ ಅಧಿಕಾರಿಗಳಲ್ಲಿ ಅಧಿಕ ಪ್ರಮಾಣದಲ್ಲಿ ಸಾಮಾನ್ಯರಲ್ಲಿ ವಿರಳವಾಗಿ ಕಂಡು ಬರುತ್ತದೆ."[213] ಅಂದು ಬಹುಪತ್ನಿತ್ವವನ್ನು ಹೊಂದಿರುವುದು ಸಾಮಾಜಿಕವಾಗಿ ಅಪರಾಧವಾಗಿರಲಿಲ್ಲ, ಏಕೆಂದರೆ ರಾಜರಂತೂ ಯಾವಾಗಲೂ 'ಬಹುವಲ್ಲಭ'[214]ರು ಎಂಬ ಬಿರುದನ್ನೇ ಹೊಂದಿರುವುದು ಇದಕ್ಕೆ ಸಾಕ್ಷಿಯೆನಿಸಿದೆ. ಚಿಕ್ಕಜಂತಗಲ್ಲು ಶಾಸನ[215] ಮದುವೆ ಕುರಿತು ಪ್ರಸ್ತಾವನೆಯನ್ನು ಮಾಡಿದೆ. ಮಲ್ಲಜಗಲಿಯ ಮಗ ಹನುಮಜಗಲಿಗೆ ಮತ್ತು ಮತ್ತೊಬ್ಬನಿಗೆ ಹಿರಿಯ ಜಂತೆಗಲ್ಲ ಮಾದಿಗವುಡ ಪಜಗಲಿ, ತಂತಜಗಲಿಯ ಮಗ ಉಡುಸ ಮತ್ತು ಲಖಜಗಲಿಯ ಮಗ ಕಂಪ ಮೂವರು ಸೇರಿ ತಮ್ಮ ತಂಗಿಯರಾದ ಲಖಾಯ ಮತ್ತು ಗದಾಯ ಎಂಬುವವರನ್ನು ಮೇಲೆ ಉಲ್ಲೇಖಿಸಿದ ಮಲ್ಲಜಗಲಿಯ ಇಬ್ಬರು ಮಕ್ಕಳಿಗೆ ಮದುವೆ ಮಾಡಿ, ಚಿಕ್ಕಜಂತೆಗಲ್ಲಿನಲ್ಲಿ ಕೆಲವು ಪಾಲುಗಳನ್ನು ನೀಡಿದ್ದರ ಕುರಿತು ಉಲ್ಲೇಖ ಮೂಡಿ ಬಂದಿದೆ. ಆನೆಗೊಂದಿಯಲ್ಲಿ ದೊರೆತ ತಾಮ್ರ ಶಾಸನವು[216] ಶಿವಪಾರ್ವತಿಯರ ವಿವಾಹ ಕುರಿತು ಐತಿಹಾಸಿಕ ಹಿನ್ನೆಲೆಯ ನ್ನೊಳಗೊಂಡ ಕಥೆಯನ್ನು ಚಿತ್ರಿಸಿದೆ. ಈ ಒಂದು ವಿವಾಹವು ದೇವತೆಗಳ ವಿವಾಹವಾದರೂ ಆ ಸಮಾಜದ ಒಂದು ಸಂಪ್ರದಾಯಬದ್ಧ ಆಚರಣೆಯ ಹಿನ್ನಲೆಯನ್ನು ಇಲ್ಲಿ ನೋಡಬಹುದಾಗಿದೆ.

ಗಿರಿರಾಜನ ಮಗಳು ಪಾರ್ವತಿ ಒಂದು ಪರ್ವತದ ಬಳಿ ತಪಸ್ಸು ಮಾಡುತ್ತಿದ್ದ ಸಮಯದಲ್ಲಿ ಅಲ್ಲಿ ಶಿವನು ಆಕೆಯನ್ನು ಕಂಡು ಮದುವೆಯಾಗಬಯಸುತ್ತಾನೆ. ಇತ್ತ ಸುದ್ದಿ ತಿಳಿದ ಕೂಡಲೇ ದೇವತೆಗಳು ಶಿವನನ್ನು ಶೃಂಗಾರ ಮಾಡಿಕೊಂಡು ಪುರದಲ್ಲಿ ಮೆರವಣಿಗೆ ಮಾಡಿ ವಿವಾಹ ಮಂಟಪಕ್ಕೆ ಕರೆತರುತ್ತಾರೆ. ವಿವಾಹ ಮಂಟಪದಲ್ಲಿ ಎಲ್ಲವೂ ಇದ್ದರೂ ಧಾರೆಯನೆರೆಯಲು ಕಳಸ, ಜಗಲಿಗೆ, ಹೂಜೆಗಳಿರಲಿಲ್ಲ. ಇವೆಲ್ಲಿ ಎಂದು ಗಿರಿರಾಜ (ಪಾರ್ವತಿಯ ತಂದೆ) ಶಿವನನ್ನು ಕೇಳಿದಾಗ, ಅಲ್ಲಿದ್ದ ದೇವ ಸಮೂಹವೇ ಶಿವನ ಸಹಾಯಕ್ಕೆ ಬರುತ್ತದೆ. ಆಗ ನಾರಾಯಣನ ಕೈಯಲ್ಲಿನ ಚಕ್ರವೇ ತಿಗುರಿ ಮಾಡಿ, ಬ್ರಹ್ಮನ ವೇದಪೊಸ್ತಕದ ಕಂಬಿಯಂ ಬಾಂಬಕಂಬಿ ಮಾಡಿ, ಮಹಾದೇವನ ಕೈಯಲ್ಲಿನ ಲಾಕುಳವೇ ಬಾಂಬಕೋಲನ್ನಾಗಿಸಿ, ದೇವರ ಕಚ್ಚುಟವನ್ನು ಬನ್ನಸಿಲೆಯನ್ನಾಗಿಸಿ, ಬ್ರಹ್ಮನ ಕೃಷ್ಣಾಜಿನವನ್ನು ಮರ್ಮ್ಮಾ ಮಾಡಿ, ಯಜ್ಞೋಪವೀತವನ್ನು ಕೊರೆದಾರ ಮಾಡಿ, ತ್ರಿಪುರವನ್ನು ಸುಟ್ಟುಕೊಂಡ ಪೆಸರಕಕೋಟೆಯನ್ನು ಕರೋಟಿಮಾಡಿ, ತ್ರಿಪುರ ರಾಕ್ಷಸರ ಕನ್ನಡಿಯಲಬನ್ನು ಸಣಹು ಮಾಡಿ, ಗುಂಡಿಗಳನ್ನು ಗುಂಡಮಾಡಿ, ಸೂರ್ಯನಿಂದ ಪಡೆದ ಗಾಲಿಯಿಂದ ಹೊಳೆಯನ್ನು ಸೃಷ್ಟಿಸಿ, ಯಮನ ಕೋಣನಿಂದ ಮಣ್ಣನ್ನು ಮಿದಿಸಿ, ಹೂಜೆ, ಸೊನ್ನಲಿಗೆ, ಕುಂಭವೇ ಮೊದಲಾದ ವಸ್ತುಗಳನ್ನು ಮಾಡಿ ಸುಟ್ಟು, ಬಣ್ಣವಿಟ್ಟು ಮದುವೆ ಮನೆಗೆ ತರುತ್ತಾರೆ. ನಂತರ ಕನ್ಯೆಯನ್ನು ಧಾರೆಯರೆಯುವ ಕಾರ್ಯಕ್ರಮ ಜರುಗುತ್ತದೆ. ದೇವರ ಬಲದ ದೆಸೆಯಲ್ಲಿ ದೇವಿಯು ಕುಳಿತಿರಲು ಇವರ ಮುಂದೆ ವಿಶ್ವಾಮಿತ್ರ, ವಸಿಷ್ಟರು ಸ್ವಾಹಾಮಂತ್ರಗಳಿಂದ ಹೋಮವನ್ನು ಮಾಡಿ ಬಲದೆಸೆಯಲ್ಲಿದ್ದ ದೇವಿಯನ್ನು ಎಡದೆಸೆಗೆ ತಂದು ಮದುವೆ ಮುಗಿಸುತ್ತಾರೆ. ಈ ಒಂದು ಪೌರಾಣಿಕ ಹಿನ್ನೆಲೆಯ ಕಥೆಯಿಂದ ಅಂದಿನ ಒಂದು ಸಮಾಜದ ಸಂಪ್ರದಾಯಬದ್ಧ ಆಚರಣೆಯ ವಿವಾಹ ಪದ್ಧತಿಯ ಚಿತ್ರಣವನ್ನು ಕಾಣಬಹುದಾಗಿದೆ.

**ದೇವಾಲಯ–ಮಠಗಳು :**

ಭಾರತೀಯ ಸಂಸ್ಕೃತಿಯ ಒಂದು ಭಾಗವಾಗಿ ನೆಲಸಿದ ದೇವಾಲಯಗಳು ಮಾನವನ ಧಾರ್ಮಿಕ ಭಕ್ತಿ, ನಂಬಿಕೆಗಳ ಪ್ರತೀಕಗಳಾಗಿ ಬೆಳೆದು ಬಂದವು. ಮನುಷ್ಯ ಪ್ರಾರಂಭದಿಂದಲೂ ಒಂದು ಅಗೋಚರವಾದ ಶಕ್ತಿ ನಮ್ಮನ್ನು ಕಾಪಾಡುತ್ತದೆ. ಆ ಅಗೋಚರ ಶಕ್ತಿಯೇ ನಮ್ಮ ಇರುವಿಕೆಗೆ ಮೂಲ ಕಾರಣ ಎಂದು ಭಾವಿಸಿದ್ದರು. ತಾವು ಸಾಧಿಸಿದ ಪ್ರತಿಯೊಂದು ಕಾರ್ಯದ ಹಿಂದೆ ಆ ಶಕ್ತಿಯೇ ರಕ್ಷಣೆಯನ್ನು ಒದಗಿಸುತ್ತದೆ ಎಂದು ಬಲವಾಗಿ ನಂಬಿದ್ದವರು. ಸೂರ್ಯ, ಚಂದ್ರ ಹಾಗೂ ಪ್ರಕೃತಿಯನ್ನು ಒಂದು ದೈವಿಕವಾದ ಶಕ್ತಿ ಎಂದೇ ನಂಬಿ ಅವುಗಳನ್ನು ಪೂಜಿಸುತ್ತಾ ಬಂದರು. ಕಾಲಕ್ರಮೇಣ ಭಗವಂತನ ಒಂದು ಸ್ವರೂಪವನ್ನು ಮೂರ್ತಿಯ ರೂಪದಲ್ಲಿ ನಿರ್ಮಿಸಿ ಆ ಮೂರ್ತಿಯಲ್ಲಿಯೇ ಭಗವಂತನನ್ನು ಕಾಣತೊಡಗಿದರು.

ತಮ್ಮನ್ನು ಕಾಪಾಡುವ ಆ ಭಗವಂತನಿಗಾಗಿ ತಮ್ಮ ಭಕ್ತಿಯ ಕಾಣಿಕೆಯನ್ನು ಸಲ್ಲಿಸಲು ಕ್ರಮೇಣವಾಗಿ ಆಲಯಗಳನ್ನು ನಿರ್ಮಿಸತೊಡಗಿದರು. "ಪೂಜೆಗಾಗಿ, ಪ್ರಾರ್ಥನೆಗಾಗಿ ದೇವರ ಮೂರ್ತಿಗಳನ್ನು, ಇತರ ಆರಾಧ್ಯ ವಸ್ತುಗಳನ್ನು ಸ್ಥಾಪಿಸಿ ರಕ್ಷಿಸಲಿಕ್ಕಾಗಿ ನಿರ್ಮಿಸಿರುವ ವಿಶಿಷ್ಟವಾದ ಕಟ್ಟಡವೇ ದೇವಾಲಯ. ದೇವಾಲಯಗಳು ಸಮಾಜದ ಅವಿಭಾಜ್ಯ ಅಂಗವಾಗಿದೆ. ದೇವಾಲಯಗಳಿಂದಲೇ ಇಂದಿಗೂ ಕೆಲವು ಸ್ಥಳಗಳು ಪ್ರಸಿದ್ಧವಾಗಿವೆ."[217] ಹೀಗೆ ಪ್ರಾಚೀನ, ಮಧ್ಯಕಾಲೀನ ಕಾಲದಲ್ಲಿ ದೇವಾಲಯಗಳು ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳೆನಿಸಿದ್ದವು.

ಪ್ರಾಚೀನ ಹಾಗೂ ಮಧ್ಯಕಾಲೀನ ಯುಗದಲ್ಲಿ ದೇವಸ್ಥಾನಗಳ ನಿರ್ಮಾಣಕ್ಕೆ ಹಲವಾರು ವ್ಯಕ್ತಿಗಳು ಕಾರಣೀಭೂತರಾಗಿದ್ದಾರೆ. ವಿವಿಧ ಅರಸುಮನೆತನಗಳ ಆಳ್ವಿಕೆಗೆ ಅನುಗುಣವಾಗಿ ದೇವಾಲಯಗಳ ರಚನೆಯ ಉತ್ತಮ ಪರಂಪರೆಯೇ ನಿರ್ಮಿತವಾಗಿದೆ. ರಾಜರು, ಸ್ತ್ರೀಯರು, ಸಾಮಾನ್ಯ ವರ್ಗದವರು ದೇವಸ್ಥಾನ ನಿರ್ಮಾಣದ ಕಾರ್ಯಕ್ಕೆ ಹೆಚ್ಚಿನ ಮಹತ್ವವನ್ನು ಕಲ್ಪಿಸಿದ್ದರು. "ರಾಜರು ವಿಜಯೋತ್ಸವದ ಹೆಗ್ಗುರುತಾಗಿ ದೇವಾಲಯಗಳನ್ನು ನಿರ್ಮಿಸಿದ್ದಂತೆ ಸಾಮಾನ್ಯರು ವೀರವ್ರತವನ್ನು ಮಾಡಿ ಅವುಗಳನ್ನು ಕಟ್ಟಿಸಿದ ನಿದರ್ಶನಗಳಿವೆ. ಅಲ್ಲಿ ಪೂಜೆ ಕಾರ್ಯಗಳು ನಿರಂತರವಾಗಿ ನಡೆಯುವಂತೆ ಮತ್ತು ಶಿಥಿಲಗೊಂಡಾಗ ಪುನರುಜ್ಜೀವನಗೊಳ್ಳುವಂತೆ ಮಾಡಲು ಸಾಕಷ್ಟು ದತ್ತಿಗಳನ್ನು ಬಿಡುತ್ತಿದ್ದರು."[218]

ದೇವಾಲಯಗಳು ಧಾರ್ಮಿಕ ಕೇಂದ್ರಗಳಾಗಿರುವುದರ ಜೊತೆಗೆ ಶಿಕ್ಷಣ, ಕಲೆ, ಆರ್ಥಿಕ ವಿಕಾಸಕ್ಕೆ ಕಾರಣೀಭೂತವಾಗಿ ಸಂಸ್ಕೃತಿಯನ್ನು ಪುಷ್ಟಿಗೊಳಿಸಿವೆ. ದೇವಾಲಯಗಳು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶ ನೀಡುವುದರ ಜೊತೆಗೆ ನೃತ್ಯ ಮತ್ತು ಸಂಗೀತದಂತಹ ಕಲೆಗಳಿಗೂ ಪ್ರೋತ್ಸಾಹ ನೀಡಿದವು. "ಅನೇಕ ದೇವಾಲಯಗಳು ಶಾಲೆಗಳನ್ನು, ಪ್ರೌಢವಿದ್ಯಾಸಂಸ್ಥೆಗಳನ್ನು ನಡೆಸುತ್ತಾ ಜನಜೀವನವನ್ನು ರೂಪಿಸುವ ಜೀವಂತ ಶಕ್ತಿಗಳಾಗಿದ್ದವು. ದೇವಾಲಯಗಳಿಗೆ ದಾನವಾಗಿ ಬಂದ ಹಣ ಈ ಸತ್ಕಾರ್ಯಗಳಿಗೆ ವಿನಿಯೋಗವಾಗುತ್ತಿತ್ತು. ದಾನವನ್ನು ಕೊಡುವಾಗಲೇ ಇಂತಹ ಕಾರ್ಯಕ್ಕಾಗಿಯೇ ಅದನ್ನು ವಿನಿಯೋಗಿಸ ಬೇಕೆಂಬ ನಿರ್ದೇಶನವೂ ಕಂಡು ಬರುತ್ತದೆ."[219] ಹೀಗೆ ದೇವಾಲಯವು ಒಂದು ಸಾಮಾಜಿಕ ಸಂಸ್ಥೆಯಾಗಿದ್ದುಕೊಂಡು ಶಿಕ್ಷಣ ಸಂಸ್ಥೆಗಳು, ಕುಶಲ ಕಲೆಗಳು ಇತ್ಯಾದಿಗಳು ಅವುಗಳ ಆಶ್ರಯದಲ್ಲಿ ವರ್ಧಿಸಿದವು. ವಿದ್ಯಾರ್ಥಿಗಳಿಗಾಗಿ ಹಾಗೂ ಅವರ ವಿದ್ಯಾಭ್ಯಾಸಕ್ಕಾಗಿ ದೇವಸ್ಥಾನಗಳಿಗೆ ಅನೇಕ ದಾನ ದತ್ತಿಗಳನ್ನು ಬಿಟ್ಟುಕೊಡುತ್ತಿದ್ದರು. "ದೇವಸ್ಥಾನವು ಜನರ ದೈವಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಆಗಿದ್ದಿತು. ಲಲಿತಕಲೆಗಳು ದೇವಾಲಯದಲ್ಲಿ ವರ್ಧಿಸಿದವು. ದೇವಾಲಯವು ಜನರ ನ್ಯಾಯಾಲಯವೂ ಆಗಿದ್ದಿತು. ಅನಾಥರಿಗೆ ವಿಶ್ರಾಂತಿ ತಾಣವಾಗಿತ್ತು. ಶ್ರೀಮಂತರ ಐಶ್ವರ್ಯ ಹೊರಗೆ ಹರಿದು ಬರಲು

ಕಾರಣವಾಗಿದ್ದಿತು. ಹೀಗೆ ಬಹುಮುಖ ಚಟುವಟಿಕೆಗಳಿಗೆ ಆಗರವಾಗಿ ಊರಿನ ಜೀವನವನ್ನು ದೇವಸ್ಥಾನಗಳು ಬಹು ಮಟ್ಟಿಗೆ ನಿಯಂತ್ರಿಸುತ್ತಿದ್ದವು."[220] ದೇವಾಲಯಗಳು ಜನ ಜೀವನದ ಭಾಗವಾಗಿದ್ದು ಅವರನ್ನು ತಿದ್ದುವ, ಬೆಳೆಸುವ ಶಕ್ತಿಗಳಾಗಿರಬೇಕೆಂಬುದು ದೇವಾಲಯಗಳ ಸ್ಥಾಪನೆಯ ಉದ್ದೇಶವಾಗಿತ್ತು.

ದೇವಸ್ಥಾನಕ್ಕೆ ಹೊಂದಿಕೊಂಡಂತೆ ಮಠವಿದ್ದುದರಿಂದ ದೇವಾಲಯದ ಅಧೀನದಲ್ಲಿ ಮಠವಿರುತ್ತಿತ್ತೆಂದು ಹೇಳಬಹುದು. ಕೊಪ್ಪಳ ಜಿಲ್ಲೆಯಲ್ಲಿ ದೊರೆತ ಶಾಸನಗಳು ಇಲ್ಲಿಯ ಮಠಗಳು ಹಾಗೂ ದೇವಾಲಯಗಳು ಶಿಕ್ಷಣ ವ್ಯವಸ್ಥೆಗೆ ನೀಡಿದ ಕೊಡುಗೆಯ ಕುರಿತು ಹೆಚ್ಚಿನ ಮಾಹಿತಿ ನೀಡದಿದ್ದರೂ ದೊರೆತ ಕೆಲವೊಂದು ಶಾಸನಗಳು ಮಠಗಳಲ್ಲಿ ಹಾಗೂ ದೇವಾಲಯಗಳಲ್ಲಿ ವಾಸಿಸುತ್ತಿದ್ದ ವಿದ್ಯಾರ್ಥಿಗಳಿಗೆ ನೀಡಿದ ದಾನದ ಕುರಿತು ಹಾಗೂ ಸಂಗೀತ, ನೃತ್ಯದಂತಹ ಕಲೆಗಳಿಗೆ ನೀಡಿದ ದಾನದ ಕುರಿತು ಕೆಲ ಶಾಸನಗಳು ಮಾಹಿತಿ ನೀಡಿವೆ.

ಕವಲೂರು ಶಾಸನವು[221] (ಕ್ರಿ.ಶ.1174) ಏಚಿರಾಜನು ಕಟ್ಟಿಸಿದ ಹರಿಹರ ದೇವಾಲಯದ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ಸಂಕಮದೇವನ ಮಂತ್ರಿಯಾದ ವಸುದೈಕ ಭಾಸ್ಕರನಾದ ರೇಚಿದೇವ ಮತ್ತು ನಾಡಾಧಿಕಾರಿ, ಮಲ್ಲಿದೇವ ಬಳ್ಳಾಳದೇವರು ಸೇರಿ ದಾನವನ್ನು ಬಿಟ್ಟಂತೆ ತಿಳಿಸುತ್ತದೆ. ಕ್ರಿ.ಶ.1521ರ ಕೊಪ್ಪಳದ ಶಾಸನವು[222] ಕೊಪಣದ ಚೆನ್ನಕೇಶವ ದೇವರಿಗೆ ಭಂಡಾರದ ಅಪ್ಪರಸಯ್ಯನ ಮಗ ಭಂಡಾರದ ತಿಮ್ಮಪ್ಪಯ್ಯನು ಹಿರೆಸಿಂದೋಗಿ ಗ್ರಾಮವನ್ನು ದಾನ ಬಿಟ್ಟಿದ್ದಂತೆ ತಿಳಿಸುತ್ತದೆ. ಹುಲಗಿ ಶಾಸನವು[223] ಸೋಮನಾಥ ಹಾಗೂ ಈತನ ಪತ್ನಿಗಳಿಬ್ಬರೂ ಸೇರಿ ಪ್ರತಿಷ್ಠೆ ಮಾಡಿಸಿದ ಸೋಮೇಶ್ವರದೇವರಿಗೆ ಊರಿನ ಪೂರ್ವಕ್ಕೆ ಗುಯ್ಯಲತೋಟ, ಪರಿನೀರ ತೋಟವನ್ನು ಚತುಸ್ಸೀಮಾ ಸಮೇತವಾಗಿ ದಾನ ನೀಡಿದ್ದು ತಿಳಿದು ಬಂದಿದೆ. ಹತೋಟಿ ಶಾಸನ[224] ಬಾಲಕೃಷ್ಣದೇವರ ಅಮೃತಪಡಿ, ಅಂಗರಂಗಭೋಗ, ನಿತ್ಯನೈಮಿತ್ಯಕ, ದೀಪೋತ್ಸವ ಇವೆಲ್ಲವುಗಳಿಗಾಗಿ ಕೃಷ್ಣರಾಯಮಹಾರಾಯನು ದಾನ ನೀಡಿದ ಉಲ್ಲೇಖ ನೀಡಿದೆ. ಶಿವಪುರದಲ್ಲಿ ದೊರೆತ ಶಾಸನವು[225] ಸೋಮೇಶ್ವರದೇವರ ದೀಪಾರಾಧನೆಗೆಂದು ದವಸ, ಹಸುರುವಾಣಿ ಮುಂತಾದ ಹೇರುಗಳಿಗೆ 10 ಹೇರಿಗೆ ಐದು ಕಾಸಿನ ಲೆಕ್ಕದಲ್ಲಿ ಮಹಾನಾಡ ಪಟ್ಟಣಸ್ವಾಮಿಗಳು ಬಿಟ್ಟು ಕೊಟ್ಟಿದ್ದಂತೆ ಮಾಹಿತಿ ನೀಡುತ್ತದೆ.

ಕಲ್ಲೂರ ಶಾಸನವು[226] ಗುಜ್ಜಲ ಯಿಮ್ಮಡಿ ಮರನದಿನಾಯಕನ ಮಗ ಮುಮ್ಮಡಿ ಮಂಗಪನಾಯಕ ಹಾಗೂ ಗುಜ್ಜಲ ಹನುಮಂತನಾಯಕನ ಮಗ ಯಿಮ್ಮಡಿ ಹನುಮಂತನಾಯಕರು ಸೇರಿ ಕಲ್ಲೂರ ಕಲ್ಲಿನಾಥದೇವರಿಗೆ ದಾನವನ್ನು (ದಾನದ ವಿವರಣೆಯಿಲ್ಲ) ನೀಡಿದಂತೆ ವಿವರಿಸಿದೆ. ಕ್ರಿ.ಶ.1129ರ ಶಾಸನದಂತೆ[227] ಚಾವಣ್ಣ ಎಂಬುವವನು ಕಲ್ಲೂರ ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರ,

ದೇವತಾಪೂಜೆ, ಅತಿಥಿಯರ ಆಹಾರದಾನಕ್ಕೆಂದು ಭೂಮಿಯನ್ನು ಕ್ರಯಗೊಂಡು ಹನ್ನೆರಡು ಮತ್ತರು ಭೂಮಿಯನ್ನು ದಾನ ನೀಡಿದ್ದಂತೆ ತಿಳಿಸುತ್ತದೆ. ಕ್ರಿ.ಶ.1132ರ ಕಲ್ಲೂರು ಶಾಸನದಲ್ಲಿ[228] ಭೂಲೋಕಮಲ್ಲನ ಸಾಮಂತನಾದ ಆಚರಸನ ಮಗ ರಾಯಸಾಧಾರ ಪೆರ್ಮಾಡಿದೇವನ ಆಳ್ವಿಕೆಯ ಸಮಯದಲ್ಲಿ ಕುಕ್ಕನೂರು–30ರೊಳಗಿನ ಕಲ್ಲೂರ ಸ್ವಯಂಭು ಕಲಿದೇವರಿಗೆ ಸುಂಕವೆಗ್ಗಡೆ ಮಹೇಶ್ವರಯ್ಯನು ದಾನ ನೀಡಿದಂತೆ ಕಂಡು ಬಂದಿದೆ. ಕಲ್ಲೂರಿನ ಶಾಸನವೊಂದರಲ್ಲಿ[229] (ಕ್ರಿ.ಶ.1098) ಬಾದಾಮಿಯ ಬಮ್ಮದೇವಯ್ಯನಾಯಕನು ಕಲ್ಲೂರಿನ ಕಲ್ಲೇಶ್ವರದೇವರ ಚೈತ್ರಪವಿತ್ರಕ್ಕೆಂದು ಅಡಕೆ, ಮೆಣಸು, ಅರಿಸಿನ ಮಳವೆ ಮುಂತಾದವುಗಳ ಮೇಲಿನ ಕರದಲ್ಲಿ ಹತ್ತಕ್ಕೆ ಒಂದು ದಸವಂದವಾಗಿ ದಾನ ನೀಡಬೇಕೆಂದು ವ್ಯಾಪಾರಿಗಳ ಮೇಲೆ ನಿರ್ಬಂಧ ವಿಧಿಸುತ್ತಾನೆ. ಅಲ್ಲದೆ ಬಮ್ಮದೇವ ಮತ್ತು ಸುಂಕದ ಅಧಿಕಾರಿ ಜಕ್ಕರಾಜನು ದೇವರ ನಂದಾದೀಪಕ್ಕೆಂದು ಮೂರು ಪಣವನ್ನು ದಾನ ನೀಡುತ್ತಾರೆ. ಬಂಡಿಹಾಳ ಶಾಸನ[230] ಗುಜ್ಜಲ ಯಿಮ್ಮಡಿ ಯರಪನಾಯಕನ ಮಗ ಮುಮ್ಮಡಿ ಯರಪನಾಯಕನು ಮತ್ತು ಗುಜ್ಜಲ ಚಿಕ್ಕಹನುಮಂತನಾಯಕನ ಮಗ ಯಿಮ್ಮಡಿ ಹನುಮಂತನಾಯಕರು ಸೇರಿ ಮಲ್ಲಿಕಾರ್ಜುನದೇವರಿಗೆ ದಾನ (ದಾನದ ವಿವರಣೆ ಇಲ್ಲ) ನೀಡುತ್ತಾರೆ. ಕುಕನೂರಿನಲ್ಲಿ ದೊರೆತ ಕ್ರಿ.ಶ.1107ರ ಶಾಸನವು[231] ಗಂಗಾಧರಯ್ಯನಾಯಕನ ಮಗ ಈಶ್ವರಯ್ಯನಾಯಕ ಹಾಗೂ ಈತನ ತಮ್ಮ ಶ್ರೀಪತಿನಾಯಕನು ಅಗ್ರಹಾರ ಕುಕ್ಕನೂರ ಸಾಸಿರ್ವರ ಕೈಯಲಿ ಸರ್ವನಮಸ್ಯವಾಗಿ ಪಡೆದು ಮೂಲಸ್ಥಾನದೇವರ ಶ್ರೀಖಣ್ಡಕ್ಕೆ 18 ಮತ್ತರು 450 ಕಮ್ಮ ಭೂಮಿಯನ್ನು ಶ್ರೀಸರಸ್ವತಿದೇವರ ಅಂಗಭೋಗ, ನಿವೇದ್ಯಕ್ಕೆ 7 ಮತ್ತರು ಭೂಮಿಯನ್ನು ದಾನ ನೀಡಿದಂತೆ ತಿಳಿಸುತ್ತದೆ. ಕ್ರಿ.ಶ.1061ರ ಅಳವಂಡಿ ಶಾಸನವು[232] ಗುಲ್ಗಿಮಯ್ಯನ ಮಗ ಬರ್ಮಯ್ಯ ಎಂಬುವವನು ಅಳವಂಡಿಯ ಮಠಕ್ಕೆಂದು ಎರೆಮತ್ತರು ಐದು ಹೀಗೆ ದಾನಗಳನ್ನು ನೀಡಿದ್ದಂತೆ ಉಲ್ಲೇಖಿಸಿದೆ. ಕ್ರಿ.ಶ.1551ರ ಆನೆಗೊಂದಿ ಶಾಸನ[233] ರಾಜರಾಜ ತಿರುಮಲರಾಜನು ಜಂಗಮಯ್ಯನ ಮಠಕ್ಕೆ ದಾನ ನೀಡಿದಂತೆ ಮಾಹಿತಿ ನೀಡಿದೆ.

ಹಳೆಅಯೋಧ್ಯಾದಲ್ಲಿ ದೊರೆತ ಶಾಸನದಲ್ಲಿ[234] ಜೆಂತಗಲ್ಲಮಾಗಣಿಯ ಅಪಂಣನು ನಿರಾಸಿಮಠದ ಮಾನ್ಯವಾಗಿ ಭೂಮಿಯನ್ನು ದಾನ ನೀಡಿದ ವಿವರಣೆಯು ಮೂಡಿ ಬಂದಿದೆ. ಕಲ್ಲೂರು ಶಾಸನ[235] ಸೋಮೇಶ್ವರನ ಮಹಾಮಂಡಲೇಶ್ವರನಾದ ಚಾವುಂಡರಸನ ಮಗ ವೀರ ಬಿಜ್ಜಲದೇವರಸನು ಕಲ್ಲೂರ ಕಲಿದೇವ ಸ್ವಾಮಿಯ ಭಕ್ತನಾದ ಮೊಲ್ಲೆಯ ಬಮ್ಮಯ್ಯನಿಗೆ ಪ್ರಮಥವೃತ್ತಿಯಾಗಿ ಗಣಮಠಕ್ಕೆ 200 ಮತ್ತರು ಭೂಮಿಯನ್ನು ದಾನ ನೀಡಿದ್ದಂತೆ ಉಲ್ಲೇಖಿಸಿದೆ. ಕೆಲವೊಂದು ಶಾಸನಗಳಲ್ಲಿ ದೇವರ ಪ್ರತಿಷ್ಠೆ ಮಾಡಿಸಿ ಆ ದೇವಾಲಯಕ್ಕೆ ತಾವೇ

ದಾನ ಬಿಟ್ಟ ಮಾಹಿತಿಯನ್ನು ನೀಡಿದೆ. ಮಾದಿನೂರು ಶಾಸನವು[236] ಇಳಹಾಳ ಜಿದ್ದಿಸೆಟ್ಟಿಯ ಮಗ ಸಮಸ್ತನಾಗಿಶೆಟ್ಟಿ ಕಲ್ಲುಕುಟಿಗನ ಕೈಲಿ ಮೊದೆಗನೂರು ಸೋಮನಾಥ ದೇವರ ಶಿವಾಲಯವನ್ನು ಕಲ್ಲು ಸಮೇತ ನಿಲ್ಲಿಸಿ ಜೀರ್ಣೋದ್ಧಾರವನ್ನು ಮಾಡಿಸಿದಂತೆ ತಿಳಿದು ಬರುತ್ತದೆ. ಕ್ರಿ.ಶ1088ರ ಹುಲಿಗಿ ಶಾಸನದಲ್ಲಿ[237] ಚೌವೇದಿಭಟ್ಟ ಹಾಗೂ ಆಚಿಕಬ್ಬೆಯ ಮಗ ಸೋಮನಾಥನು ಹುಲಿಗಿಯೆಂಬ ಊರಿನ ಪೂರ್ವದ ರಿಷ್ಯಾಮೂಕಾಚಲ, ದಕ್ಷಿಣಕ್ಕೆ ಗಂಧಮಾದನ, ಪಶ್ಚಿಮಕ್ಕೆ ಶ್ರೀಕೂಟ, ಉತ್ತರಕ್ಕೆ ಕಿಷ್ಕಿಂಧ ಪರ್ವತಗಳಿದ್ದು ಇವುಗಳ ಮಧ್ಯದಲ್ಲಿ ಶಿವ ದೇವಾಲಯವನ್ನು ಮಾಡಿಸುತ್ತಾನೆ. ತಾನು ಪ್ರತಿಷ್ಠೆ ಮಾಡಿಸಿದ ದೇವಾಲಯಕ್ಕೆ ಊರಿನ ಪೂರ್ವಕ್ಕೆ ಗೈಯಲತೋಟ, ಪರಿನೀರ ತೋಟವನ್ನು ಚತಸ್ಸೀಮಾ ಸಮೇತವಾಗಿ ದಾನ ನೀಡಿದಂತೆ ಮಾಹಿತಿ ನೀಡಿದೆ. ಮಾದಿನೂರು ಶಾಸನವು[238] ನೂರ್ವಡಿತೇಜ ಅಹವಮಲ್ಲನು ತನ್ನ ಮೊದಲ ರಾಜ್ಯಭಾರದ ವರ್ಷದ ಅವಧಿಯಲ್ಲಿ ಬ್ರಹ್ಮಾಂಡಕ್ರತು ಮಾಡಿಸಿದ ಸಮಯದಲ್ಲಿ ಬ್ರಾಹ್ಮಣರಿಗೆ ಮೊದೆಯನೂರನ್ನು ದಾನವಾಗಿ ಕೊಡುತ್ತಾನೆ. ಈ ದಾನವನ್ನು ದ್ವೇದಿಭಟ್ಟೋಪಾಧ್ಯಾಯನು ಪಡೆದು ತ್ರೈಪುರುಷ ದೇವಾಲಯವನ್ನು ನಿರ್ಮಿಸುತ್ತಾನೆ. ಈ ದೇವಾಲಯದ ಪೂಜೆ, ಪುನಸ್ಕಾರ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು, ನಂದಾದೀವಿಗೆಗೆ, ಪೂಜಾರಿಯ ಜೀವಿತಕ್ಕೆಂದು ದಾನವನ್ನು ನೀಡಿದಂತೆ ತಿಳಿಸುತ್ತದೆ. ಹೀಗೆ ದೇವಾಲಯಗಳ ನಿರ್ಮಾಣದಂತಹ ದೊಡ್ಡ ಮೊತ್ತದ ಕಾರ್ಯವನ್ನು ರಾಜರಿಂದ ಹಿಡಿದು ಸಾಮಾನ್ಯ ಜನರೂ ಕೈಗೊಂಡಿದ್ದಂತೆ ತಿಳಿದು ಬರುತ್ತದೆ. ದೇವಸ್ಥಾನವನ್ನು ಕಟ್ಟಿಸಿದರೆ ಸಾಲದು. ಅದು ಸಾರೋದ್ಧಾರವಾಗಿ ನಡೆಯುತ್ತಾ ಊರ್ಜಿತ ವಾಗಬೇಕಾಗುತ್ತದೆ. ಅದು ಭಕ್ತಜನರಿಂದ ಆಗಾಗ್ಗೆ ಬರಬಹುದಾದ ಕಾಣಿಕೆಗಳನ್ನೇ ಅವಲಂಬಿಸಿ ಕುಳಿತುಕೊಳ್ಳಲಾರದು. ಆದ ಕಾರಣ ದೇವಸ್ಥಾನವನ್ನು ಕಟ್ಟಿಸಿದ ವ್ಯಕ್ತಿಯೇ ಅದಕ್ಕೆ ಸಮೃದ್ಧವಾಗಿ ದತ್ತಿಗಳನ್ನು ಬಿಡುತ್ತಿದ್ದನು. ಅಷ್ಟೇ ಅಲ್ಲ ಒಬ್ಬ ವ್ಯಕ್ತಿಯಿಂದ ದೇವಸ್ಥಾನವು ನಿರ್ಮಾಣ ವಾಯಿತೆಂದರೆ ಹತ್ತಾರು ಜನರು, ಹತ್ತಾರು ಶ್ರೇಣಿಗಳು ಒಮ್ಮೊಮ್ಮೆ ಹತ್ತಾರು ಗ್ರಾಮಗಳು ಸೇರಿ ಅದಕ್ಕೆ ದತ್ತಿಯನ್ನು ಬಿಟ್ಟುಕೊಡುತ್ತಿದ್ದರು.[239] ಹೀಗೆ ದೇವಾಲಯಗಳನ್ನು ಕಟ್ಟಿಸಿದ ವ್ಯಕ್ತಿಗಳೂ ಅದರ ಜೀರ್ಣೋದ್ಧಾರಕ್ಕಾಗಿ ದಾನಗಳನ್ನು ಬಿಡುತ್ತಿದ್ದರು.

ದೇವಾಲಯಗಳು ಇತರ ಸಾಮಾಜಿಕ ಚಟುವಟಿಕೆಗಳಿಗೆ ಸಹಾಯಹಸ್ತ ನೀಡುವುದರ ಜೊತೆಗೆ ಶಿಕ್ಷಣ ಸಂಸ್ಥೆಗಳಿಗೂ ನೀಡಿದ ಕೊಡುಗೆ ಅಪಾರವಾಗಿದೆ. ದೇವಾಲಯಗಳಲ್ಲಿ ನೆಲೆಸಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹೊಣೆಯನ್ನು ಅವುಗಳು ಹೊತ್ತಿದ್ದವು. ಇಂತಹ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆಂದು ದಾನ–ದತ್ತಿಗಳನ್ನು ನೀಡಿದ್ದರ ಕುರಿತು ಶಾಸನಗಳು ಮಾಹಿತಿ ನೀಡಿವೆ. ಕಲ್ಲೂರಿನಲ್ಲಿ ದೊರೆತ ಶಾಸನವು[240] ಮಹಾಪಸಾಯಿತ ಸಣ್ಣಗೇತಯ ನಾಯಕನು ನೆರೆಯಂಗಲ್ಲ ಬಳಿಯ ಕಲ್ಲೂರ ಸ್ವಯಂಭೂಕಲಿದೇವಸ್ವಾಮಿಯ ದೇವಾಲಯದಲ್ಲಿ ನೆಲೆಸಿದ ತಪೋಧನರ

(ವಿದ್ಯಾರ್ಥಿಗಳ) ಆಹಾರ ದಾನಕ್ಕೆಂದು 24 ಮತ್ತರು ಭೂಮಿಯನ್ನು ಸರ್ವನಮಸ್ಯವಾಗಿ ದಾನ ನೀಡಿದಂತೆ ಮಾಹಿತಿ ನೀಡುತ್ತದೆ. ಕಲ್ಲೂರಿನಲ್ಲಿ ದೊರೆತ ಮತ್ತೊಂದು ಶಾಸನವು[241] ಬಳ್ಳಿಗೆರೆಯ ಪ್ರಭುತ್ವವನ್ನು ಮಾಡುತ್ತಿದ್ದ ಚಾವುಂಡರಾಯನು ಕಲ್ಲೂರ ಸ್ವಯಂಭೂಕಲಿದೇವರ ಅಂಗಭೋಗಕ್ಕಾಗಿ ಹಾಗೂ ಅಲ್ಲಿ ನೆಲೆಸಿದ ತಪೋಧನರ ಆಹಾರದಾನಕ್ಕೆಂದು ಬೆನತೂರ ಸೀಮೆಯ ದಕ್ಷಿಣಕ್ಕೆ 20 ಮತ್ತರು ಭೂಮಿಯನ್ನು ದಾನನೀಡಿದಂತೆ ತಿಳಿಸುತ್ತದೆ. ಕ್ರಿ.ಶ.1005ರ ಕುಕನೂರು ಶಾಸನ[242]ವು ಬೆಳ್ವಲ ನಾಡಿನ ಸೋಮೇಶ್ವರಾಚಾರ್ಯನು ಅಲ್ಲಿಯ ದೇವಾಲಯವೊಂದರಲ್ಲಿ ನೆಲೆಸಿದ ತಪೋಧನರ ಆಹಾರದಾನಕ್ಕೆಂದು ಭೂದಾನ ನೀಡಿದ ಮಾಹಿತಿಯನ್ನು ನೀಡಿದೆ. ದೇವಾಲಯಗಳಲ್ಲಿ ವಿದ್ಯೆಯ ಜೊತೆಗೆ ಸಂಗೀತ, ನೃತ್ಯಕಲೆಗಳು ಪಡೆದಿದ್ದ ಸ್ಥಾನವನ್ನು ತಿಳಿಸುತ್ತವೆ. ದೇವಾಲಯದ ಜೀರ್ಣೋದ್ಧಾರದ ಜೊತೆಗೆ ಅಂಗಭೋಗ ಹಾಗೂ ರಂಗಭೋಗಕ್ಕೆ ಬಿಡುತ್ತಿದ್ದ ದಾನಗಳೇ ಇತರ ಕಲೆಗಳಿಗೆ ಮೀಸಲಾಗುತ್ತಿದ್ದವು. ದೇವಾಲಯದ ರಂಗಭೋಗದ ಸಂದರ್ಭದಲ್ಲಿ ಸಂಗೀತಗಾರರಿಂದ ಸಂಗೀತ ಸೇವೆಯೂ, ನೃತ್ಯಗಾರ್ತಿಯರಿಂದ ನೃತ್ಯಸೇವೆಯೂ ಆಗುತ್ತಿತ್ತು. ಬಂಡಿಹರ್ಲಾಪುರ ಶಾಸನದಲ್ಲಿ[243] ಕೃಷ್ಣರಾಯ ಮಹಾರಾಯನು ವಿಠಲದೇವರ ಅಂಗಭೋಗ ವೈಭೋಗಕ್ಕೆಂದು ಹುಲಿಗೆಯ ಮಾಗಣಿಗೆ ಸಲ್ಲುವ ಹರಿಹರಪುರವನ್ನು ಸಮರ್ಪಿಸುತ್ತಾನೆ. ಕ್ರಿ.ಶ.1515ರ ಹತೋಟಿ ಶಾಸನ[244] ಬಾಲಕೃಷ್ಣದೇವರ ಅಮೃತಪಡಿ ಹಾಗೂ ಅಂಗರಂಗ ಭೋಗಕ್ಕೆಂದು ಕೃಷ್ಣರಾಯಮಹಾರಾಯನು ಹುಲಿಗೆಯ ಮಾಗಣೆಯಲ್ಲಿನ ಅತ್ತಿಮಟ್ಟಿ ಎನ್ನುವ ಗ್ರಾಮವನ್ನು ಸಮರ್ಪಿಸಿದ್ದನ್ನು ತಿಳಿಸುತ್ತದೆ. ಯಲಬುರ್ಗಾದ ಕುಕನೂರು ಶಾಸನ[245]ದಲ್ಲಿ ಸ್ವಯಂಭೂಮಲ್ಲಿಕಾರ್ಜುನ ದೇವರ ಅಂಗಭೋಗ, ರಂಗಭೋಗಕ್ಕಾಗಿ ಹಾಡಲಗೇರಿಯ ಗಡಿಯನ್ನು ತೇಜಿರಾಜನು ದಾನ ಬಿಟ್ಟಿದ್ದಂತೆ ಕಂಡು ಬಂದಿದೆ.

ಪುರ ಶಾಸನವು[246] ಮನಾವಾಡಿಯ ಬಾಚರಸ, ಉಮ್ಮಕನೂರ ಬಾಚರಸ, ನರೆಯಂಗಲ್ಲ ವಿರುಪರಸ ಮುಂತಾದವರು ಸೇರಿ ಶ್ರೀಗವರೇಶ್ವರದೇವರ ಅಂಗಭೋಗ, ರಂಗಭೋಗಕ್ಕಾಗಿ ಕೆಲವು ದಾನಗಳ ಜೊತೆಗೆ ಇವುಗಳಿಗೂ ಹಿರಿಯ ಕೋಲಲ್ಲಿ ಒಂದು ಮತ್ತರು ದಾನ ನೀಡಿದ್ದಂತೆ ಮಾಹಿತಿ ನೀಡುತ್ತದೆ. ಹೀಗೆ ಶಾಸನಗಳು ದೇವಾಲಯಗಳಲ್ಲಿ ವಿದ್ಯೆಯ ಜೊತೆಗೆ ಇತರ ಕಲೆಗಳಾದ ಸಂಗೀತ, ನೃತ್ಯಕಲೆಗಳೂ ಪಡೆದಿದ್ದ ಸ್ಥಾನವನ್ನು ತಿಳಿಸುತ್ತವೆ. ದೇವಾಲಯಗಳು ಸಮಾಜದ ಅವಿಭಾಜ್ಯ ಅಂಗಗಳಾಗಿದ್ದು ಶಿಕ್ಷಣ, ಕಲೆಗಳೊಂದಿಗೆ ಆರ್ಥಿಕ ವಿಕಾಸಕ್ಕೆ ಕಾರಣೀಭೂತವಾಗಿ ಸಂಸ್ಕೃತಿಯನ್ನು ಪುಷ್ಠಿಗೊಳಿಸಿವೆ. ಹೀಗೆ "ಪ್ರಾಚೀನ ಕರ್ನಾಟಕದ ಊರಿಗೆ ದೇವಸ್ಥಾನವೇ ಕೇಂದ್ರಬಿಂದು, ಅದರ ಸುತ್ತ ಆ ಊರಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವು ರೂಪುಗೊಳ್ಳುತ್ತಿದ್ದಿತು. ದೇವಸ್ಥಾನವು ಜನ

ದೈವಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಆಗಿದ್ದಿತು. ಶಿಲ್ಪ, ಚಿತ್ರ, ಸಂಗೀತ, ನರ್ತನಾದಿ ಕುಶಲ ಕಲೆಗಳು ದೇವಸ್ಥಾನದ ಆಶ್ರಯದಲ್ಲಿ ವರ್ಧಿಸಿದವು"[247] ಎಂದು ಹೇಳಬಹುದಾಗಿದೆ.

ದೇವಾಲಯ ಹಾಗೂ ಮಠಗಳು ಧಾರ್ಮಿಕತೆಗೆ ಎಷ್ಟು ಪ್ರಾಮುಖ್ಯತೆಯನ್ನು ನೀಡಿದ್ದವೋ ಇತರ ಸಾಮಾಜಿಕ ದೃಷ್ಟಿಯಿಂದಲೂ ಅವುಗಳು ನೀಡಿದ ಸೇವೆ ಅನನ್ಯವಾದುದು. ದೇವಸ್ಥಾನ ಹಾಗೂ ಮಠಗಳ ಉದ್ದೇಶ ಒಂದೇ ಆದರೂ ಮಠಗಳು ವಿದ್ಯೆಗೆ ಹಾಗೂ ಇತರ ಸಾಮಾಜಿಕ ಕಾರ್ಯಗಳಿಗೂ ತಮ್ಮ ಸೇವೆಯನ್ನು ಸಲ್ಲಿಸಿದರೆ ದೇವಸ್ಥಾನಗಳು ಇವೆರಡರ ಜೊತೆ ಇತರ ಕಲೆಗಳಾದ ಸಂಗೀತ, ನೃತ್ಯ, ಶಿಲ್ಪಕಲೆಗಳನ್ನು ಬೆಳೆಸಿಕೊಂಡು ಬಂದಿತೆನ್ನಬಹುದು.

**ವೀರಗಲ್ಲು :**

ಕರ್ನಾಟಕದ ಶಾಸನಗಳನ್ನು ಗಮನಿಸಿದಾಗ ದಾನ ಶಾಸನಗಳಂತೆಯೇ ವೀರಶಾಸನಗಳು ಅಧಿಕ ಸಂಖ್ಯೆಯಲ್ಲಿ ಲಭಿಸಿವೆ. ಅರಸನ ಋಣಕ್ಕಾಗಿ, ಗ್ರಾಮರಕ್ಷಣೆಗಾಗಿ, ದೇಶರಕ್ಷಣೆಯ ಸಲುವಾಗಿ ಮಡಿದರೆ ವೀರಮರಣ ಪ್ರಾಪ್ತವಾಗುವುದೆಂಬ ಧ್ಯೇಯ ಅವರದಾಗಿತ್ತು. ಹೀಗೆ ಯುದ್ಧದಲ್ಲಿ ಹೋರಾಡಿ ಮಡಿದರೆ ಮೋಕ್ಷ ಪ್ರಾಪ್ತಿಯಾಗುವುದೆಂಬ ನಂಬಿಕೆಯನ್ನು ಹೊಂದಿದ್ದರು. ಶೌರ್ಯ ಮತ್ತು ಧೈರ್ಯಗಳಿಗೆ ಸಾಕ್ಷಿಯಾಗಿ ಇಂತಹ ವೀರಗಲ್ಲುಗಳನ್ನು ಕಾಣುತ್ತೇವೆ. "ಪ್ರಾಚೀನ ಕನ್ನಡಿಗ ಯೋಧರ ಮನಸ್ಸಿನಲ್ಲಿ ತುಂಬಿಕೊಂಡಿದ್ದ ಭಾವನೆ ಇದು. ಯುದ್ಧದಲ್ಲಿ ಮಡಿದರೆ ಲಕ್ಷ್ಮಿ ದೊರಕುವಳು, ಸತ್ತರೆ (ಸ್ವರ್ಗದಲ್ಲಿ) ಸುರಾಂಗನೆಯರು ದೊರಕುವರು; ದೇಹವು ಕ್ಷಣದಲ್ಲಿ ವಿಧ್ವಂಸವಾಗುವ ವಸ್ತುವಾದ್ದರಿಂದ ಉತ್ತೇಜನಗೊಂಡ ಅವರು ಧೈರ್ಯದಿಂದ ರಣರಂಗದಲ್ಲಿ ಮುನ್ನುಗ್ಗಿ ದೇಹವನ್ನು ಹುಲ್ಲಿಗಿಂತ ಕಡೆಯಾಗಿ ಎಣಿಸಿ ಹೋರಾಡಿ, ಗೆದ್ದು ಹಿಂದಕ್ಕೆ ಬರುತ್ತಿದ್ದರು. ಅಥವಾ ಸೋತು ಯುದ್ಧದಲ್ಲಿ ಒರಗುತ್ತಿದ್ದರು."[248] ಇದು ಅರಸನ ಅನ್ನದ ಋಣಕ್ಕಾಗಿ ಹೋರಾಡಿ ಮಡಿದವರ ವೀರತನಕ್ಕೆ ಸಾಕ್ಷಿಯಾಗಿರುತ್ತಿತ್ತು. ಹೀಗೆ ತನ್ನ ರಾಜನ ಹಿತಕ್ಕಾಗಿ ಅಥವಾ ಊರಿನ ಹಿತಕ್ಕಾಗಿ ಆತ್ಮಬಲಿ ದಾನವನ್ನು ಮಾಡಿದ ವೀರನ ನೆನಪಿಗಾಗಿ ನಿಲ್ಲಿಸುವ ಶಿಲಾಫಲಕಗಳನ್ನು ವೀರಗಲ್ಲುಗಳೆಂದು ಕರೆಯುತ್ತಾರೆ.

ಪ್ರಾಚೀನ ಕರ್ನಾಟಕದ ಜೀವನ ಮೌಲ್ಯಗಳಲ್ಲಿ ಬಹಳ ಮುಖ್ಯವಾದ ಇಂತಹ ವೀರಗಲ್ಲುಗಳ ಕುರಿತು ಕೊಪ್ಪಳ ಜಿಲ್ಲೆಯಲ್ಲಿ ಕೆಲವೊಂದು ಪ್ರಮುಖ ಶಾಸನಗಳು ಲಭಿಸಿವೆ. ವೀರಗಲ್ಲುಗಳ ಶಿಲ್ಪಗಳು ಕಲಾತ್ಮಕವಾಗಿ ನೈಜ ಚಿತ್ರಣವನ್ನು ನೀಡುತ್ತವೆ. ಎಲ್ಲಾ ವೀರಗಲ್ಲುಗಳ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಶಿಲ್ಪಗಳನ್ನು ಹಾಗೂ ಕೆಲವೊಂದು ವೀರಗಲ್ಲುಗಳಲ್ಲಿ ಇವೆರಡರ ಜೊತೆ ಕಮಲದ ಚಿತ್ರಗಳನ್ನುಳ್ಳ ಶಿಲ್ಪಗಳನ್ನು ಕೆತ್ತಲಾಗಿದೆ.

ದೊರೆತ ಹಲಗೇರಿ ಶಾಸನ[249] ಪಲ್ಗಿರಿಯ ಬ್ರಾಹ್ಮಣನಾದ ಸಾವಿರ್ಪಿ ಎಂಬುವವನು ಯುದ್ಧದಲ್ಲಿ ಹೋರಾಡಿ ಸತ್ತಂತೆ ಮಾಹಿತಿ ನೀಡುತ್ತದೆ. ಹಲಗೇರಿ ಗ್ರಾಮದ ಕೆರೆ ಬಳಿಯ ಕಟ್ಟೆಯ ಹತ್ತಿರ ನೆಟ್ಟ ಮತ್ತೊಂದು ಕ್ರಿ.ಶ.1018ರ ಶಾಸನವು[250] ಬೆಣ್ಣೆಕಲ್ಲು ಸೀಮೆಯ ಕಾಳಗದಲ್ಲಿ ತಳಾರನಾಯಕ ಎರೆಯಮ್ಮನೆಂಬುವವನು ವೀರಮರಣವನ್ನಪ್ಪಿದ್ದನ್ನು ತಿಳಿಸುತ್ತದೆ. ಈತನು ಮಡಿದಾಗ ಈತನ ಕುಟುಂಬಕ್ಕೆ ಪಲ್ಗೆರೆಯ ಊರೊಡೆಯ ಮತ್ತು ಮಹಾಜನರು ಸೇರಿ ಭೂದಾನ ನೀಡಿದ್ದಂತೆ ಕಂಡು ಬಂದಿದೆ. ಕೊಪ್ಪಳದ ಕ್ರಿ.ಶ.14ನೇ ಶತಮಾನದಲ್ಲಿ ದೊರೆತ ಶಾಸನವು ನಾಯಕಾಚಾರ್ಯ ಕಂಪಿಲದೇವನು ಸುರತ್ರಾಣನ (ಸುಲ್ತಾನ) ಮೇಲೆ ಯುದ್ಧಮಾಡಿದಾಗ ಗಡೆಸಿಂಗ ಎಂಬುವವನು ಈ ರಣರಂಗದಲ್ಲಿ ಹೋರಾಡಿ ಸತ್ತಿದ್ದಂತೆ ತಿಳಿದು ಬರುತ್ತದೆ. ಮುದೋಳದಲ್ಲಿ ದೊರೆತ ಶಾಸನವು[251] ಶ್ರೀಮನ್ತಾಂ ಎಂಬುವವನು ಶ್ರೀಶುಭತುಂಗದೇವರ ದಯೆಯಿಂದ ಬೆಳ್ವೊಲ ಮುನ್ನೂರನ್ನು ಆಳುತ್ತಿರಲು ಮುದುವೊಳಲನ್ನು ಸನ್ತಯನೆಂಬುವವನು ಮುತ್ತಿದಾಗ ಅದೇ ಊರಿನ ಸಮ್ಮಗಾರರ ಚಂದನೆಂಬುವವನು ಹೋರಾಡಿ ಮಡಿದದ್ದನ್ನು ತಿಳಿಸುತ್ತದೆ. ಕೊಪ್ಪಳದ ಶಾಸನವೊಂದರಲ್ಲಿ[252] ರಾಷ್ಟ್ರಕೂಟ ಅರಸ ನೃಪತುಂಗನು ಆಳುತ್ತಿದ್ದಾಗ ವೀರನೊಬ್ಬ ಯುದ್ಧದಲ್ಲಿ ಹೋರಾಡಿ ಸತ್ತಂತೆ ತಿಳಿದು ಬರುತ್ತದೆ. ಕ್ರಿ.ಶ.9ನೇ ಶತಮಾನದ ಕೊಪ್ಪಳದ ಮತ್ತೊಂದು ಶಾಸನವು[253] ರಟ್ಟರಾಜ್ಯದ ಮೇಲೆ ದಾಳಿ ನಡೆದ ಸಮಯದಲ್ಲಿ ಆಲಕಬಾದಿ ಎಂಬುವವನು ಹೋರಾಡಿ ಮರಣ ಹೊಂದಿದ್ದಂತೆ ತಿಳಿಸುತ್ತದೆ.

ಈ ಜಿಲ್ಲೆಯಲ್ಲಿ ದೊರೆತ ಎರಡು ಶಾಸನಗಳು ಸೆರೆಹಿಡಿದ ತುರುಗಳನ್ನು ಮರಳಿಸುವ ಸಾಹಸದಲ್ಲಿ ಸತ್ತ ವೀರನನ್ನು ಕುರಿತ ವಿವರಣೆ ನೀಡಿವೆ. "ಧರ್ಮಕ್ಕಾಗಿ ದೇಹವನ್ನೊಪ್ಪಿಸಬೇಕಾಗಿ ಬರುವ ಪ್ರಸಂಗಗಳು ಪ್ರಾಚೀನ ಜನಜೀವನದಲ್ಲಿ ಹಲವಾರು ರೂಪದಲ್ಲಿ ತಲೆದೋರುತ್ತಿದ್ದವು. ಕಳ್ಳರು ಇದ್ದಕ್ಕಿದ್ದಂತೆಯೇ ಊರಿನ ಮೇಲೆ ದಾಳಿ ಮಾಡಿ ಗೋವುಗಳನ್ನು ಅಟ್ಟಿಸಿ ಕೊಂಡು ಹೋಗುವುದು–ಇವುಗಳಲ್ಲಿ ಬಹಳ ಸಾಮಾನ್ಯವಾದು ದಾಗಿತ್ತೆಂದು ತೋರುತ್ತದೆ."[254] ತುರುಗಳನ್ನು ಅಪಹರಿಸಿ ಅಂದಿನ ಸಮಾಜದ ನೆಮ್ಮದಿಯನ್ನು ಕಲಕುವ ತುರುಗಳ್ಳರನ್ನು ಹಿಡಿದು ಅವರಿಂದ ತುರುಗಳನ್ನು ರಕ್ಷಿಸುವ ಸಮಯದಲ್ಲಿ ಮಡಿದವರ ಸ್ಮರಣಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳಲ್ಲಿ ಅವರ ಪರಾಕ್ರಮವನ್ನು ವರ್ಣಿಸಲಾಗಿರುತ್ತದೆ. ಸೆರೆಹಿಡಿದ ತುರುಗಳನ್ನು ಮರಳಿಸುವ ಸಾಹಸದಲ್ಲಿ ಸತ್ತ ವೀರರ ಕುರಿತು ದೊರೆಯುವ ಶಾಸನಗಳಲ್ಲಿ ಸಿರಿಗುಪ್ಪ ಶಾಸನವು[255] ತಳಾರಿ ಕಾಳಬೋವ ಎಂಬುವವನು ತುರುಗಳ್ಳರೊಡನೆ ಹೋರಾಡಿ ಮಡಿದಿದ್ದರ ಕುರಿತು ಮಾಹಿತಿಯನ್ನು ನೀಡಿದೆ. ಕ್ರಿ.ಶ.15ನೇ ಶತಮಾನದ ಕನ್ನೇರಮಡು ಶಾಸನವು[256] ಸಂಖಣ್ಣನ ಮಗ ಬರಮಣ್ಣನು ಕುದುರೆ ದಳದೊಡನೆ ಹೋರಾಡಿ ಮಡಿದುದನ್ನು ತಿಳಿಸುತ್ತದೆ.

ಹೀಗೆ ಅಂದಿನ ವೀರರು ಮಾತೃಭೂಮಿಯ ರಕ್ಷಣೆಗಾಗಿ, ತನ್ನ ಅರಸನ ಅನ್ನದ ಋಣವನ್ನು ತೀರಿಸುವುದಕ್ಕಾಗಿ ಹಾಗೂ ಸಮಾಜದಿಂದ ತುರುಗಳನ್ನು ರಕ್ಷಿಸುವ ಉದ್ದೇಶದಿಂದ ಮಡಿದವರ ತ್ಯಾಗವು ಇಂದಿಗೂ ಎಲ್ಲರ ಜನಮನದಲ್ಲಿ ಆಳವಾಗಿ ಬೇರೂರಿ ನಿಂತಿದೆ.

**ಮಾಸ್ತಿಗಲ್ಲು :**

ಪತಿಯ ಯಾವುದೇ ರೀತಿಯ ಮರಣಾನಂತರ ಪತಿಯೊಡನೆ ಸಹಗಮನ ಇಲ್ಲವೆ ಅನುಗಮನ ಹೋದ ಸತಿಯ ಸ್ಮಾರಕಕ್ಕಾಗಿ ನಿಲ್ಲಿಸಿದ ಕಲ್ಲುಗಳನ್ನು ಮಾಸ್ತಿಗಲ್ಲುಗಳೆನ್ನುವರು. "ಹೀಗೆ ಪ್ರಾಣವನ್ನರ್ಪಿಸುವವಳೇ ಮಹಾಸತಿ. ಮಾಸ್ತಿ ಎಂಬುದು ಇದರ ತದ್ಭವ ರೂಪ."[257] ಹನ್ನೆರಡನೆಯ ಶತಮಾನ ನಂತರ ಅವಧಿಯಲ್ಲಿ ಉತ್ತರಭಾರತದಲ್ಲಿ ಈ ಪದ್ಧತಿ ಹೆಚ್ಚು ಪ್ರಚಲಿತವಿದ್ದಂತೆ ತಿಳಿದು ಬರುತ್ತದೆ. "ಕರ್ನಾಟಕಕ್ಕೆ ಕಾಲಿರಿಸಿದ ಇದರ ಇತಿಹಾಸ ಪ್ರಾರಂಭವಾಗುವುದು ಕ್ರಿ.ಶ.4ನೆಯ ಶತಮಾನದ ನಂತರವೆನ್ನಬಹುದು."[258]

"ಸಹಗಮನದ ಪ್ರಮುಖ ಉದ್ದೇಶವೇನೆಂದರೆ ಪತಿನಿಷ್ಠೆ ಹಾಗೂ ಮುಕ್ತಿ. ಪ್ರಾರಂಭದಲ್ಲಿ ಬೇರೊಂದು ಲೋಕದ ಬಗ್ಗೆ ಅಚಲನಂಬಿಕೆ ಇರುವ ಜನ ಮಡಿದ ವ್ಯಕ್ತಿಯ ಜೊತೆಯಲ್ಲಿ ಅವನಿಗಿಷ್ಟವಾದ ಕೆಲವು ಭೋಗವಸ್ತುಗಳನ್ನು ಕಳುಹಿಸಿಕೊಡುವ ಸಂಪ್ರದಾಯ ಹಿಂದೆ ಇತ್ತು. ಪುರುಷನ ಪ್ರಿಯ ವಸ್ತುಗಳಲ್ಲಿ ಪತ್ನಿಯೂ ಒಬ್ಬಳು. ತನ್ನ ಮರಣದ ನಂತರ ಅವಳು ತನ್ನನ್ನು ಅಗಲಿರಬಾರದೆಂಬ ಕಾರಣದಿಂದಲೋ ಅಥವಾ ಅವಳು ಮತ್ತೊಬ್ಬರ ವಶವಾಗಬಾರದೆಂಬ ಭಾವನೆಯಿಂದಲೋ ತನ್ನೊಡನೆ ಅವಳನ್ನು ಕರೆದೊಯ್ಯುವಂತೆ ಮಾಡಿದ ಈ ವ್ಯವಸ್ಥೆಯೇ ಮಾಸ್ತಿ ಪದ್ಧತಿಗೆ ದಾರಿ ಮಾಡಿಕೊಟ್ಟಿರಬಹುದು. ಈ ಮಾಸ್ತಿಕಲ್ಲುಗಳನ್ನು ಸಹಾನುಭೂತಿಕಲ್ಲು, ಮದವಳಿಗ ಕಲ್ಲು, ವ್ಯಾಸನತೋಳು ಮೊದಲಾದ ಹೆಸರುಗಳಿಂದ ಕರೆಯುತ್ತಾರೆ."[259] ಅಂದಿನ ಕಾಲದಲ್ಲಿ ಇಂತಹ ಒಂದು ಪದ್ಧತಿ ಬಲತ್ಕಾರದ ಅಂಶವಾಗಿರಲಿಲ್ಲವೆಂಬುದು ಗಮನಿಸಬೇಕಾದ ಸಂಗತಿ. ಕರ್ನಾಟಕದಲ್ಲಿ ಕಂಡು ಬರುವ ಮಹಾಸತಿಯ ಕಲ್ಲುಗಳು ಪತಿಯ ಚಿತೆಯನ್ನು ಸ್ವಸಂತೋಷದಿಂದಲೇ ಆ ಅಗ್ನಿ ಪ್ರವೇಶವನ್ನು ಹಿಂಬಾಲಿಸಿದ್ದಂತೆ ಸೂಚಿಸುತ್ತದೆನ್ನಬಹುದು.

ಸಹಗಮನವನ್ನು ಕೈಗೊಳ್ಳುವ ಸ್ತ್ರೀಯು ಧೃಢಮನಸ್ಸುಳ್ಳವಳಾಗಿದ್ದು ಪತಿಯ ಮರಣವನ್ನು ಸಹಿಸಲಾರದೆ ಏಕೈಕ ನಿಷ್ಠೆಯಿಂದ ಆತನನ್ನು ಹಿಂಬಾಲಿಸುತ್ತಿದ್ದಳು. ಹೀಗೆ ಮಾಸ್ತಿಯಾಗಬಯಸುವವಳನ್ನು ಸಮಾಜ ಪವಿತ್ರ ದೃಷ್ಟಿಯಿಂದ ಕಾಣುತ್ತಿತ್ತು. ಇಂತಹ ಮಾಸ್ತಿಗಲ್ಲಿನ ಒಟ್ಟು ರೂಪ, "ಅದು ಅರ್ಥವತ್ತಾದ ಶಿಲ್ಪದಿಂದ ಕೂಡಿದ ಒಂದು ಶಿಲಾಫಲಕ ವಾಗಿರುತ್ತದೆ. ಆ ಶಿಲಾಫಲಕದಲ್ಲಿ ಒಂದು ಸ್ತಂಭದ ಆಕೃತಿ; ಆ ಸ್ತಂಭದ ಮಧ್ಯದಿಂದ ಹೊರಚಾಚಿ ಮೇಲಕ್ಕೆತ್ತಿದ್ದಂತಿರುವ ಒಂದು ದೊಡ್ಡ ತೋಳಿನ

ಚಿತ್ರ; ಅದರ ಕೈಯಲ್ಲಿ ಹೆಬ್ಬೆರಳು ಮತ್ತು ತೋರು ಬೆರಳುಗಳ ಮಧ್ಯದಲ್ಲಿ ಒಂದು ನಿಂಬೆಯ ಹಣ್ಣು, ಈ ಕೈಯ ಕೆಳಗಡೆ ಚಿಕ್ಕ ಆಕೃತಿಯಲ್ಲಿ ಕೆತ್ತಿದ ಪುರುಷ ಮತ್ತು ಸ್ತ್ರೀ ವಿಗ್ರಹಗಳು ಅವರ ಪಕ್ಕದಲ್ಲಿ ಅಥವಾ ಮೇಲ್ಭಾಗದಲ್ಲಿ ಒಂದು ಶಿವಲಿಂಗ, ಇದು ಸಾಮಾನ್ಯವಾಗಿ ಮಾಸ್ತಿಕಲ್ಲಿನ ಮೇಲಿರುವ ಶಿಲ್ಪ."[260] ಸಹಗಮನ ಮಾಡಿದವರು ಸ್ವರ್ಗ ಸೇರುತ್ತಾರೆಂಬುದನ್ನು ಇದು ಸೂಚಿಸುತ್ತದೆ.

ಈ ರೀತಿಯ ಮಾಸ್ತಿಗಲ್ಲುಗಳು ಕೊಪ್ಪಳ ಜಿಲ್ಲೆಯ ಕೆಲವೊಂದು ಶಾಸನಗಳಲ್ಲಿ ಕಂಡು ಬರುತ್ತವೆ. ಆನೆಗೊಂದಿ ಶಾಸನವು[261] ಭಯಿರಿಸೆಟ್ಟಿಯ ಮಗ ನಾಗಿಸೆಟ್ಟಿಯ ಹೆಂಡತಿ ತಿಂಮಾಯಿ ತನ್ನ ಗಂಡ ಸತ್ತಾಗ ಕಿಚ್ಚು ಹಾಯ್ದು ಸತ್ತಂತೆ ಮಾಹಿತಿ ನೀಡುತ್ತದೆ. ಈ ರೀತಿಯಾಗಿ ಸತಿಯ ಸಹಗಮನದಿಂದ ಮುಕ್ತಿ ಹೊಂದಿ ಸ್ವರ್ಗ ಸೇರುವರೆಂಬ ನಂಬಿಕೆ ಅವರದಾಗಿತ್ತು.

**ನಿಶದಿ :**

"ಜೈನ ಸನ್ಯಾಸಿಗಳು ಸಲ್ಲೇಖನ ವ್ರತವನ್ನು ಕೈಗೊಂಡು ಆಹಾರವನ್ನು ಸ್ವೀಕರಿಸದೆ ದೇಹವನ್ನು ಬಿಟ್ಟು ಮೋಕ್ಷವನ್ನು ಪಡೆದುದರ ಸ್ಮಾರಕಕ್ಕಾಗಿ ನೆಟ್ಟಿರುವ ಕಲ್ಲುಗಳು ಇವು."[262] ಹೀಗೆ ಸಮಾಧಿ ಮರಣ ಜೈನ ಧರ್ಮೀಯರ ದೃಷ್ಟಿಯಲ್ಲಿ ಪವಿತ್ರ ಕಾರ್ಯವೆನಿಸಿತ್ತು. ಇಂತಹ ನಿಶಧಿಕಲ್ಲುಗಳಿಗೆ ಪೂಜೆಯ ಜೊತೆ ದಾನಗಳನ್ನು ಅರ್ಪಿಸಿದ್ದನ್ನು ಕಾಣುತ್ತೇವೆ. "ನಿಷಧಿಕಲ್ಲುಗಳ ಮೇಲೆ ಬರೆಹ+ಚಿತ್ರ, ಕೇವಲ ಚಿತ್ರ, ಕೇವಲ ಬರೆಹಗಳು ಕಂಡು ಬರುತ್ತದೆ. ಬರಹ+ಚಿತ್ರದ ಸ್ಮಾರಕಗಳಲ್ಲಿ ಚಿತ್ರವು ಬರವಣಿಗೆಯ ಮೇಲ್ಭಾಗದಲ್ಲಿ ಅಪವಾದವೆಂಬಂತೆ ಮಧ್ಯಭಾಗದಲ್ಲಿ ಕಂಡು ಬರುತ್ತದೆ. ಚಿತ್ರದ ಮೂಲಕ ನಿಶಧಿಕಲ್ಲನ್ನು ತಟ್ಟನೆ ಗುರುತಿಸಬಹುದು. ಒಂದು ಕಡೆಗೆ ಬೋಧಿಸುತ್ತಿರುವ ಗುರು; ಮತ್ತೊಂದು ಕಡೆಗೆ ಆಲಿಸುತ್ತಿರುವ ಶಿಷ್ಯ ಇವರಿಬ್ಬರ ನಡುವೆ ತೆರೆದ ಪುಸ್ತಕವನ್ನು ಹೊತ್ತ ವ್ಯಾಸಪೀಠ, ಈ ಚಿತ್ರ ಸರ್ವ ಸಾಮಾನ್ಯ."[263]

ಹೀಗೆ ಗುರು ಶಿಷ್ಯರ ನಡುವೆ ಅವಿನಾಭಾವ ಸಂಬಂಧವನ್ನು ಸೂಚಿಸುವ ಇಂತಹ ನಿಶಧಿಗಲ್ಲುಗಳು ಕೊಪ್ಪಳ ಜಿಲ್ಲೆಯ ಅನೇಕ ಶಾಸನಗಳಲ್ಲಿ ದೊರೆತಿವೆ. ಕ್ರಿ.ಶ.1005ರ ಶಾಸನವು[264] ಅಭಯನನ್ದಿಪಣ್ಡಿತ ಮುನಿ ಅಮರವಾಸಿ ಯಾದಾಗ ಆತನ ಶಿಷ್ಯನಾದ ಜಿನಚನ್ದ್ರಮುನಿಯು ಆತನಿಗಾಗಿ ನಿಶಧಿಗಲ್ಲನ್ನು ಮಾಡಿಸಿದನೆಂಬುದು ತಿಳಿಸುತ್ತದೆ. ಕ್ರಿ.ಶ.975ರಲ್ಲಿ ದೊರೆತ ಕೊಪ್ಪಳದ ಶಾಸನವು[265] ಸಾಧುಸೇನಪಂಡಿತನು ಕೆಲವು ಕಾಲ ಕುಪಣದಲ್ಲಿದ್ದು, ರಾಜಪೂಜಿತನಾಗಿ ತನ್ನ ಅವಸಾನ ಕಾಲದಲ್ಲಿ ಮಾನ್ಯಖೇಟದ ಏಕಚಟ್ಟುಗದ ಬಸದಿಯಲ್ಲಿ ಸನ್ಯಾಸ ಸ್ವೀಕರಿಸಿ ಮೋಕ್ಷ ಹೊಂದುತ್ತಾನೆ. ಈ ಸಂದರ್ಭದಲ್ಲಿ ಈತನ ಶಿಷ್ಯ ಸಿದ್ಧಸೇನಭಟ್ಟಾರಕನು ತನ್ನ ಗುರುವಿನ ನೆನಪಿಗಾಗಿ ನಿಶಧಿಯನ್ನು ಮಾಡಿಸಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.930ರ ಶಾಸನ[266] ಕೊಣ್ಡಕುನ್ದಾನ್ವಯದ ಪದ್ಮನಂದಿ ಸಿದ್ಧಾಂತಭಟಾರರ ಶಿಷ್ಯ ನಯನಂದಿ

ಪಂಡಿತಭಟಾರನ ನಿಷಧಿಯನ್ನು ತಿಳಿಸುತ್ತದೆ. ಕೊಪ್ಪಳದ ಕ್ರಿ.ಶ.990ರ ಶಾಸನವು[267] ಕೊಂಡಕುಂದಾನ್ವಯದ ಬೆಳ್ಗುಂಡುಗಣದ ನೇಮಿಚಂದ್ರಭಟ್ಟಾರನ ಶಿಷ್ಯ ಜಕ್ಕಿಯಬ್ಬೆ ಕನ್ತಿಯು ಸನ್ಯಾಸದಿಂದ ಮುಡಿಪಿದಳೆಂದಿದೆ. ಜಕ್ಕಿಯಬ್ಬೆಯ ಮಗಳು ರೇವಕಬ್ಬೆಯು ತನ್ನ ತಾಯಿಯ ನೆನಪಿನಲ್ಲಿ ನಿಷಧಿಕಲ್ಲನ್ನು ನಿಲ್ಲಿಸಿದ್ದಂತೆ ತಿಳಿದು ಬರುತ್ತದೆ.

ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿಸಿದ್ದ ಕ್ರಿ.ಶ.1028ರ ಶಾಸನ[268] ಪದ್ಮನಂದಿಸಿದ್ಧಾನ್ತದೇವನು ಸನ್ಯಸನವನ್ನು ಸ್ವೀಕರಿಸಿ ರತ್ನತ್ರಯಗಳನ್ನು ಸಾಧಿಸಿದ ಸಮಯದಲ್ಲಿ ಮಾಚಬ್ಬೆಕಂತಿಯು ನಿಷಧಿಯನ್ನು ನಿಲ್ಲಿಸಿದಂತೆ ಮಾಹಿತಿ ನೀಡುತ್ತದೆ. ಕ್ರಿ.ಶ.998ರ ಕೊಪ್ಪಳದಲ್ಲಿ ದೊರೆತ ಶಾಸನವು[269] ಬಯ್ಸೂರದ ಮಾಕಾಳಯ್ಯನು ಸುಗತಿಯನ್ನು ಸಾಧಿಸಿ ಮಡಿದಾಗ ಆತನ ತಾಯಿ ಪಿಟ್ಟಕಬ್ಬೆಯು ನಿಷಧಿಯನ್ನು ಸ್ಥಾಪಿಸಿದ್ದಂತೆ ಉಲ್ಲೇಖಿಸಿದೆ. ಕ್ರಿ.ಶ.971ರ ಕೊಪ್ಪಳ ಶಾಸನ[270]ದಲ್ಲಿ ಕೊಣ್ಡಕುನ್ದಾನ್ವಯದ ದೇಸಿಗಗಣದ ಶ್ರೀಧರವಿಮುಕ್ತ ಭಟಾರರ ಶಿಷ್ಯರಾದ ಮಲಧಾರಿ ಮುನಿಯು ಜಿನಪದವನ್ನು ನೆನಯುತ್ತಾ ಮುಡಿಪಿದ ಸಂದರ್ಭದಲ್ಲಿ ಈತನ ಶಿಷ್ಯೆ ಪೊಲಯಬೆ ನಿಸಿದಿಯನ್ನು ಮಾಡಿಸಿದ್ದಂತೆ ಕಂಡು ಬಂದಿದೆ. ಕೊಪ್ಪಳದಲ್ಲಿ ದೊರೆತ 1001ರ ಶಾಸನವು[271] ಶ್ರೀಧರದೇವನ ಶಿಷ್ಯೆಯಾದ ಕೋಗಳಿಯ ಪದ್ಮಬ್ಬೆಕಂತಿಯು ಮುಡಿಪಿದ ಸಮಯದಲ್ಲಿ ಈಕೆಯ ಮಗಳು ಜಕ್ಕಿಯಬ್ಬೆ ನಿಷಧಿಗಲ್ಲನ್ನು ಮಾಡಿಸಿದಳೆಂದು ಉಲ್ಲೇಖ ನೀಡಿದೆ. ಕ್ರಿ.ಶ.1000ದ ಕೊಪ್ಪಳದ ಶಾಸನದಲ್ಲಿ[272] ತ್ರಿಭುವನಚಂದ್ರ ಮುನೀಂದ್ರನು ಮುಕ್ತಿಯನ್ನು ಸಾಧಿಸಿದ ಸಮಯದಲ್ಲಿ ಪಿಟ್ಟಕಬ್ಬೆ ತನ್ನ ಗುರುವಿನ ನೆನಪಿನಲ್ಲಿ ಈ ನಿಶಿದಿಗಲ್ಲನ್ನು ನಿಲ್ಲಿಸಿದಂತೆ ತಿಳಿದು ಬರುತ್ತದೆ. ಆನೆಗೊಂದಿಯಲ್ಲಿ ದೊರೆತ ಶಾಸನವೊಂದರಲ್ಲಿ[273] ಧರ್ಮಭೂಷಣಭಟ್ಟಾರಕರ ಪ್ರಿಯಶಿಷ್ಯ ಬೂಚಣನು ನಿಶಧಿಯಾಗಿದ್ದಂತೆ ಕಂಡು ಬಂದಿದೆ. ಇದೇ ತಾಲೂಕಿನ ಮತ್ತೊಂದು ಶಾಸನದಲ್ಲಿ[274] ಮೂಲಸಂಘ ಬಲತ್ಕಾರಗಣದ ಮದನಕೀರ್ತಿರವುಳನ ಪ್ರಿಯಶಿಷ್ಯ ಬ್ಯಂನುರ ಚಿಕ್ಕಣನ ಮಗ ನಾಗಪ್ಪನು ನಿಸಿಧಿಯಾಗಿದ್ದಂತೆ ತಿಳಿದು ಬಂದಿದೆ.

ಹೀಗೆ ನಿಶಧಿಕಲ್ಲುಗಳನ್ನು ನಿಲ್ಲಿಸುವ ಉದ್ದೇಶಗಳು ಧರ್ಮದ ದೃಷ್ಟಿಯಲ್ಲಿ ಪವಿತ್ರವೆನಿಸಿದ್ದವು. ಗುರು ಶಿಷ್ಯರ ಸಂಬಂಧದ ನೆನಪಿಗಾಗಿ ನಿಶಧಿಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಪಿ.ಬಿ.ದೇಸಾಯಿಯವರು "ಬಸದಿಯ ಒಂದು ಭಾಗವನ್ನೋ, ಕಂಬವನ್ನೋ, ಮಂಟಪವನ್ನೋ, ಸತ್ತವರ ಸ್ಮಾರಕವಾಗಿ ಬಿಟ್ಟ ಸ್ಥಳವೇ ನಿಶಧಿ"[275] ಎಂದು ಅರ್ಥೈಸುತ್ತಾರೆ. ಈ ಜಿಲ್ಲೆಗೆ ಸಂಬಂಧಿಸಿದ ಶಾಸನಗಳಲ್ಲಿ ಸ್ತ್ರೀಯರು ನಿಲ್ಲಿಸಿದ ನಿಷಧಿಗಲ್ಲುಗಳ ಉಲ್ಲೇಖಗಳು ಹೆಚ್ಚಾಗಿ ಕಂಡು ಬರುತ್ತವೆ.

ಕೊಪ್ಪಳ ಜಿಲ್ಲೆಯ ಕೆಲವೊಂದು ಶಾಸನಗಳು ದೀಕ್ಷೆಯನ್ನು ಸ್ವೀಕರಿಸಿ ಮುಡಿಪಿದ ಮಾಹಿತಿಯನ್ನು ನೀಡಿದೆ. ಆನೆಗೊಂದಿ ಶಾಸನವು[276] ಪ್ರಧಾನೋತ್ತಮ ಬುಳ್ಳರಾಜನ ಪತ್ನಿ ಕಾಳುಬಾಯಿಯು ಸಮ್ಯಕ್ತ್ವವ್ರತ ಪೂರ್ವಕವಾಗಿ ಬಾಲಚಂದ್ರ ಯೋಗೀಂದ್ರನ

ಪಾದಕಮಲಗಳಲ್ಲಿ ದೀಕ್ಷೆ ಸ್ವೀಕರಿಸಿ ಮುಡುಪಿದುದನ್ನು ತಿಳಿಸುತ್ತದೆ. ಇಲ್ಲಿ ಸಮ್ಯಕ್ತ್ವವ್ರತ ಎಂದರೆ "ಜೈನತತ್ವದಲ್ಲಿ ನಂಬಿಕೆ (ಸಮ್ಯಗ್ ದರ್ಶನ), ಇದಕ್ಕೆ ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರಗಳು"[277] ಹೀಗೆ ಈ ಮೂರನ್ನು ಸ್ವೀಕರಿಸಿದಾಗ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂದು ಬಲವಾಗಿ ನಂಬಿದ್ದರು. ಒಟ್ಟಿನಲ್ಲಿ ಜೈನ ಧರ್ಮದ ಮುಖ್ಯ ಉದ್ದೇಶವೇ ಮೋಕ್ಷ ಪ್ರಾಪ್ತಿಯಾಗಿತ್ತು. ಈ ಜಡದೇಹವನ್ನು ತೊರೆದು ಮೋಕ್ಷ ಪ್ರಾಪ್ತಿಗಾಗಿಯೇ ಸಲ್ಲೇಖನ ವ್ರತವನ್ನು ಸ್ವೀಕರಿಸುವ ಬಗೆಗಿನ ಅನೇಕ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ.

**ಕೋಟೆಗಳು :**

ಒಂದು ದೇಶದ ಸಂಸ್ಕೃತಿ ಹಾಗೂ ಆ ದೇಶದ ಪ್ರಾಚೀನ ಪ್ರತಿಷ್ಠೆಯನ್ನು ಗುರುತಿಸುವಲ್ಲಿ ಕೋಟೆಗಳು ಮಹತ್ವದ ಪಾತ್ರವಹಿಸಿವೆ. "ಒಂದು ರಾಜ್ಯದ ಅತ್ಯಾವಶ್ಯಕವಾದ ಸಪ್ತಾಂಗಗಳಲ್ಲಿ ದುರ್ಗವೂ ಒಂದು ಎಂದು ರಾಜನೀತಿ ಹೇಳುತ್ತದೆ. ಭದ್ರವಾದ ಕೋಟೆಯಿಲ್ಲದ ರಾಜನನ್ನು ವಿಷರಹಿತವಾದ ಹಾವಿನಂತೆ ಅಥವಾ ಮದರಹಿತವಾದ ಆನೆಯಂತೆ ಸುಲಭವಾಗಿ ಸ್ವಾಧೀನಪಡಿಸಿ ಕೊಳ್ಳಬಹುದು. ಒಬ್ಬ ಬಿಲ್ಲುಗಾರನು ಕೋಟೆ ಗೋಡೆಯ ಹಿಂದೆ ರಕ್ಷಣೆಗೆಂದು, ವೈರಿಪಡೆಯ ನೂರಾರು ಜನರೊಂದಿಗೆ ಹೋರಾಡಬಹುದು ಮತ್ತು ನೂರಾರು ಬಿಲ್ಲುಗಾರರು ಸಾವಿರಾರು ವೈರಿಗಳೊಂದಿಗೆ ಹೋರಾಡಬಹುದು."[278] ಹೀಗೆ ವೈರಿಗಳಿಂದ, ಕಳ್ಳರಿಂದ ತಮ್ಮ ತಮ್ಮ ಸಂಪತ್ತನ್ನು ಸಂರಕ್ಷಿಸಿಕೊಳ್ಳಲು ಕೋಟೆಗಳನ್ನು ನಿರ್ಮಿಸಿ ಅಲ್ಲಲ್ಲಿಯೆ ಶತ್ರುಗಳನ್ನು ನಿರ್ಮೂಲ ಮಾಡುವ ವ್ಯವಸ್ಥೆಗಾಗಿ ರಚಿಸಿದಂತಹ ರಕ್ಷಣಾತ್ಮಕ ವ್ಯವಸ್ಥೆಯಾಗಿತ್ತು.

ಕೊಪ್ಪಳದ ಕೋಟೆಯ ಕೆಲಭಾಗಗಳನ್ನು ಪ್ರಥಮವಾಗಿ ಎರಡನೆಯ ಇಬ್ರಾಹಿಂನ ಆದಿಲ್‌ಶಾಹನ ಕಾಲದಿಂದ ಕಟ್ಟಲ್ಪಟ್ಟಿತು. ಕ್ರಿ.ಶ.1724ರ ಅವಧಿಯಲ್ಲಿ ಮರಾಠ ಛತ್ರಪತಿ ಶಿವಾಜಿಯ ವಶದಲ್ಲಿ ಕೊಪ್ಪಳ ಸೀಮೆಯಿದ್ದರೂ ಕೋಟೆಯ ಕಟ್ಟಡದ ಕುರಿತು ವಿಶೇಷ ಮಾಹಿತಿ ದೊರೆತಿರುವುದಿಲ್ಲ. ಕ್ರಿ.ಶ.1776ರ ಹೈದರ ಅಲಿಯ ಆದೇಶದನುಗುಣವಾಗಿ ಮಹಮ್ಮದ್ ಉಸ್ಮಾನ್ ಎಂಬುವವನು ಕೋಟೆಯ ಕೆಲಭಾಗಗಳನ್ನು ಬಲಪಡಿಸಿದ್ದಂತೆ ತಿಳಿದು ಬರುತ್ತದೆ.

ಕೊಪ್ಪಳದ ಕೋಟೆಯು ಏಳು ಸುತ್ತಿನ ಕೋಟೆಗಳಲ್ಲಿ ಆವರಿಸಿ ಕೊಂಡಿದೆ. ಮೊದಲನೆಯ ಕೋಟೆಯ ಸುತ್ತಿನಲ್ಲಿ ಎರಡು ವೃತ್ತಾಕಾರದ ಬುರ್ಜುಗಳಿದ್ದರೆ ಕೆಲವು ಭಾಗಗಳಲ್ಲಿ ಬಾವಿ ಹಾಗೂ ವಿಶ್ರಾಂತಿಗೆಂದು ಮಂಟಪ ನಿರ್ಮಿಸಿದ್ದಂತಿದೆ. ಮುಂದೆ ಪಶ್ಚಿಮಾಭಿಮುಖವಾಗಿ ಎರಡನೆ ಸುತ್ತಿನ ಕೋಟೆಗೋಡೆಯಿದ್ದು ಅಲ್ಲಿಯೂ ಬಾವಿಯನ್ನು ಕಟ್ಟಿದ್ದಂತೆ ಕಂಡು ಬರುತ್ತದೆ. ಮೂರನೆಯ ಕೋಟೆಯ ಬಾಗಿಲು ದಕ್ಷಿಣಕ್ಕಿದ್ದರೆ ನಾಲ್ಕನೆಯ ಕೋಟೆಯ ಬಾಗಿಲು ಪೂರ್ವಾಭಿಮುಖವಾಗಿ ನಿಂತಿದೆ. ಇದರ ಮುಂದೆ ಐದನೇ ಕೋಟೆಯ ಗೋಡೆ ಬಂದರೆ ಮುಂದೆ ಮತ್ತೆರಡು

ಬಾಗಿಲುಗಳನ್ನು ದಾಟಿದರೆ ಆರನೆಯ ಕೋಟೆಯ ಬಾಗಿಲು ಬರುತ್ತದೆ. ಮುಂದೆ ಬೆಟ್ಟದ ತುದಿಯಲ್ಲಿ ಏಳನೇ ಕೋಟೆ ಬರುತ್ತದೆ.

ಕೊಪ್ಪಳ ಜಿಲ್ಲೆಯ ಕೆಲವೊಂದು ಶಾಸನಗಳಲ್ಲಿ ಕೋಟೆಯ ಕುರಿತು ಮಾಹಿತಿ ಮೂಡಿ ಬಂದಿದೆ. ಕೊಪ್ಪಳದಲ್ಲಿ ದೊರೆತ ಶಾಸನವು[279] ಇಬ್ರಾಹಿಂ ಆದಿಲ್‌ಷಾನ ಅವಧಿಯಲ್ಲಿ ನಿರ್ಮಿಸಲಾದ ಮಂಟಪವನ್ನು ಈ ರಾಜನ ಬಂಟನಾದ ಸುಲ್ತಾನ್ ಆಲಿಯು ನವೀಕರಿಸಿದನೆಂದು ಹಾಗೂ ಕೋಟೆಯನ್ನು ನಿರ್ಮಿಸಲು ಸಹಕರಿಸಿದನೆಂಬ ಮಾಹಿತಿಯು ಮೂಡಿ ಬಂದಿದೆ. ಕ್ರಿ.ಶ.1609ರ ಅವಧಿಯಲ್ಲಿ ಎರಡನೆ ಇಬ್ರಾಹಿಂ ಆದಿಲ್‌ಷಾನ ಗುಲಾಮರಾದ ಯಕ್ಕೂತ್‌ಖಾನ್ ಮತ್ತು ಫಾಜೀಖಾನ್ ಇಬ್ಬರೂ ಕೊಪ್ಪಳದ ಕೋಟೆ ಅಧಿಕಾರಿಗಳಿದ್ದಂತೆ ಇಲ್ಲಿ ದೊರೆತ ಮತ್ತೊಂದು ಕೊಪ್ಪಳದ ಶಾಸನ[280]ದಿಂದ ತಿಳಿದು ಬರುತ್ತದೆ. ಕ್ರಿ.ಶ.1747ರಲ್ಲಿ ದೊರೆತ ಕೊಪ್ಪಳ ಶಾಸನದಲ್ಲಿ[281] ಮಹಮ್ಮದ್ ಖಾನ್ ಬಹ್ಲಾಮಿಯು ಕೋಟೆಯ ಗೋಡೆಯನ್ನು ಕಟ್ಟಿಸಿದ್ದಂತೆ ಕಂಡು ಬಂದಿದೆ.

ಕೋಟೆಯ ಮಾಹಿತಿಯ ಕುರಿತು ಇಲ್ಲಿ ದೊರೆತ ಶಾಸನಗಳ ಸಂಖ್ಯೆ ಕಡಿಮೆ ಎಂದು ಹೇಳಬಹುದು. ಕೊಪ್ಪಳ ಕೋಟೆಯನ್ನು ಹೊರತುಪಡಿಸಿ ಉಳಿದ ಯಾವುದೇ ಕೋಟೆಯ ಬಗ್ಗೆ ಜಿಲ್ಲೆಯ ಶಾಸನಗಳಲ್ಲಿ ಮಾಹಿತಿ ದೊರೆತಿರುವುದಿಲ್ಲ. ಜಿಲ್ಲೆಯು ಐತಿಹಾಸಿಕ ದೃಷ್ಟಿಯಿಂದ ಮಹತ್ವ ಪಡೆಯುವಲ್ಲಿ ಕೋಟೆಗಳು ಪ್ರಮುಖ ಪಾತ್ರ ವಹಿಸಿದ್ದವೆಂದು ಹೇಳಬಹುದು.

**ಲೋಕೋಪಯೋಗಿ ಕಾರ್ಯಗಳು :**

ಸಮಾಜವು ವಿಶ್ವವ್ಯಾಪಿಯಾಗಿದ್ದು ಸಾಮಾಜಿಕ ಸಂಬಂಧಗಳಿಂದ ಕೂಡಿದೆ. ಇದರಿಂದಾಗಿಯೇ ಜನರಲ್ಲಿ ಅನ್ಯೋನ್ಯತೆ, ಸಹಕಾರ, ತಾವೆಲ್ಲರೂ ಒಂದೇ ಎಂಬ ಭಾವನೆ ಬೆಳೆದು ಬರುತ್ತದೆ. ಇಂತಹ ಒಂದು ಸಮಾಜದಲ್ಲಿ ಸೇವೆ ಮತ್ತು ಸಹಾಯ ಪರಸ್ಪರವಾಗಿ ನಡೆಯುತ್ತಿದ್ದು ಇತರರ ಸುಖಕ್ಕಾಗಿ ನೆರವು ನೀಡಲಿಚ್ಛಿಸುವುದು ಮಾನವನಿಗೆ ಸಹಜಗುಣವಾಗಿಯೇ ಬಂದಿದೆ. ಪ್ರತಿಯೊಂದು ಸಮಾಜವು ಇಂತಹ ಒಂದು ಲೋಕೋಪಯೋಗಿ ಮೌಲ್ಯಗಳನ್ನೊಳಗೊಂಡಿದ್ದು ಸಾಮಾಜಿಕ ಉಪಯುಕ್ತ ಕಾರ್ಯಗಳಿಗಾಗಿ ಆಸಕ್ತಿ ವಹಿಸಿದ್ದನ್ನು ಕಾಣುತ್ತೇವೆ.

ಕೊಪ್ಪಳ ಜಿಲ್ಲೆಯಲ್ಲಿಯೂ ಇಂತಹ ಲೋಕೋಪಯೋಗಿ ಕಾರ್ಯಗಳು ನಡೆದುಕೊಂಡು ಬಂದಿದ್ದನ್ನು ಕಾಣುತ್ತೇವೆ. ಇಲ್ಲಿ ಆಳಿದ ಅರಸರು ಮಾತ್ರವಲ್ಲದೆ ರಾಣಿಯರು, ಅಧಿಕಾರಿಗಳು, ಸಾಮಂತರು ಇಂತಹ ಅನೇಕ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿ ಆ ನಾಡಿನ ಅಭಿವೃದ್ಧಿಗಾಗಿ ಶ್ರಮಿಸಿದ್ದನ್ನು ಕಾಣುತ್ತೇವೆ. ದಾನ ನೀಡುವ ಮೂಲಕ ಪುಣ್ಯ ಪ್ರಾಪ್ತಿಯಾಗುವಂತೆ ಲೋಕೋಪಯೋಗಿ ಕಾರ್ಯಗಳಿಂದಲೂ ಪುಣ್ಯ ಲಭಿಸುತ್ತದೆಂಬ ಭಾವನೆ ಮೂಡಿ ಇಂತಹ ಅನೇಕ

ಕಾರ್ಯಗಳನ್ನು ನಡೆಸಲು ಮುಂದಾಗುತ್ತಿದ್ದರು. ಪ್ರತಿ ಅರಸರ ಆಳ್ವಿಕೆಯ ಅವಧಿಯಲ್ಲಿ ಇಂತಹ ಅನೇಕ ಕಾರ್ಯಗಳು ನಡೆದುಕೊಂಡೇ ಬಂದಿವೆ. ಇತರ ಅನೇಕ ಮಾಹಿತಿಯನ್ನು ನೀಡುವ ಇಲ್ಲಿಯ ಶಾಸನಗಳು ಈ ಜಿಲ್ಲೆಯ ಲೋಕೋಪಯೋಗಿ ಕಾರ್ಯಕ್ಕೂ ವಿಶೇಷವಾದ ಕೊಡುಗೆಯನ್ನು ನೀಡಿದ್ದನ್ನು ತಿಳಿಸುತ್ತವೆ.

**ಕೆರೆ ನಿರ್ಮಾಣ :**

ಪ್ರಾಚೀನ ಕಾಲದಲ್ಲಿ ಜಲಸಂಗ್ರಹಣೆಗಾಗಿ ವಿಶೇಷವಾದ ಯೋಜನೆಯನ್ನು ರೂಪಿಸಿದ್ದರ ಕುರಿತು ಶಾಸನಗಳಲ್ಲಿ ಅನೇಕ ನಿದರ್ಶನಗಳಿವೆ. ನೀರು ಮಾನವನ ಅತ್ಯವಶ್ಯಕಗಳಲ್ಲಿ ಒಂದಾಗಿದ್ದು ನೀರಿನ ಸಮಸ್ಯೆಯನ್ನು ನೀಗಿಸಲು ಅನೇಕ ಕೆರೆ, ಕೊಳ, ತಟಾಕಗಳನ್ನು ನಿರ್ಮಿಸುತ್ತಿದ್ದರು. "ದಾನಗಳಲ್ಲಿ ಜಲದಾನ ಮಹತ್ವಪೂರ್ಣವಾದುದು. ಇದನ್ನು ಪೂರೈಸುವ ಪ್ರಮುಖ ಕಾರ್ಯವಿಧಾನ ತಟಾಕ ನಿರ್ಮಾಣ. ದೇವಸ್ಥಾನ ನಿರ್ಮಾಣದೊಂದಿಗೆ ತಲೆಯೆತ್ತುತ್ತಲಿದ್ದ ತಟಾಕ ನಿರ್ಮಾಣ ಒಂದು ದೃಷ್ಟಿಯಿಂದ ಧರ್ಮಕಾರ್ಯ ವೆನಿಸಿದರೂ, ಇನ್ನೊಂದು ದೃಷ್ಟಿಯಿಂದ ಸಾರ್ವಜನಿಕ ಕಾರ್ಯವೆನಿಸುತ್ತಿದ್ದಿತು. ಶಿವನೊಂದಿಗೆ ಗಂಗೆಯೆಂಬಂತೆ ದೇವಪ್ರತಿಷ್ಠೆಯೊಂದಿಗೆ ತಟಾಕ ನಿರ್ಮಾಣ ಮಾಡುವುದು ಪ್ರಾಚೀನ ಕರ್ನಾಟಕದ ವಿಶಿಷ್ಟ ಪದ್ಧತಿಯೆನಿಸಿತ್ತು."[282] ಹೀಗೆ ಸಾಮಾನ್ಯವಾಗಿ ನಾವು ಮುಖ್ಯವಾಗಿ ದೇವಾಲಯಗಳಿದ್ದ ಸ್ಥಳಗಳಲ್ಲಿಯೂ ಕೆರೆಗಳ ನಿರ್ಮಾಣ ಹೆಚ್ಚಿನ ರೀತಿಯಲ್ಲಿ ಆಗಿದ್ದನ್ನು ಕಾಣುತ್ತೇವೆ. ಕೆರೆ, ಬಾವಿ, ಹಾಗೂ ಜಲಾಶಯಗಳನ್ನು ಕಟ್ಟಿಸುವ ವಿಷಯದಲ್ಲಿ ಇಲ್ಲಿನ ಅರಸುಮನೆತನದವರು ತೋರಿದ ಔದಾರ್ಯ ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕವೆನಿಸಿದೆ.

"ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೂ, ಕೆರೆಗಳು ಜನ ಹಾಗೂ ದನಗಳ ಆಹಾರದ ವಿಷಯದಲ್ಲಿ ಹಳ್ಳಿಗಳನ್ನು ಸ್ವಯಂಪೂರ್ಣವಾಗಿ ಮಾಡಿದ್ದವು. ರಾಜ್ಯದ ಬಹುಪಾಲು ಸಂಪತ್ತನ್ನು ಉತ್ಪತ್ತಿ ಮಾಡಿದ್ದವು. ಅಭಾವ ಹಾಗೂ ಪ್ರವಾಹಗಳ ವಿರುದ್ಧ, ರಕ್ಷಣೆ ಒದಗಿಸಿದ್ದವು. ಬಾವಿಗಳಲ್ಲಿ ನೆಲಮಟ್ಟಕ್ಕೆ ಹತ್ತಿರದಲ್ಲೆ ನೀರು ಸಿಗುವಂತೆ ಅಂತರ್ಜಲ ಮಟ್ಟ ಮೇಲುಗಡೆ ಇರುವಂತೆ ಮಾಡಿದ್ದವು. ಮಣ್ಣು ಕೊಚ್ಚಿ ಹೋಗುವುದನ್ನು ತಡೆದಿದ್ದವು. ಸುತ್ತಲ ಪ್ರದೇಶವನ್ನು ತಂಪಾಗಿ ಚೆಂದವಾಗಿ ಹಾಗೂ ಪರಿಸರ ಸಮಸ್ಯೆಗಳಿಂದ ಮುಕ್ತವಾಗಿ ಇರಿಸಿದ್ದವು."[283] ಪ್ರಾಚೀನ ಕರ್ನಾಟಕದಲ್ಲಿ ಕೆರೆಗಳ ನಿರ್ಮಾಣ ಸಮಾಜದ ಜೀರ್ಣೋದ್ಧಾರದ ಕಾರ್ಯಗಳಲ್ಲಿ ಒಂದೆನಿಸಿತ್ತು.

ಇತಿಹಾಸದಲ್ಲಿ ಕೆರೆ ನೀರಾವರಿಯ ಕುರಿತು ಅಧ್ಯಯನ ಮಾಡಿದಾಗ ಉನ್ನತವರ್ಗದವರಿಂದ ಸಾಮಾನ್ಯವರ್ಗದವರೆಗೂ ಕೆರೆ, ಬಾವಿ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಂತೆ ತಿಳಿದು ಬರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿ ದೊರೆತ

ಶಾಸನಗಳಲ್ಲಿಯೂ ಕೆರೆ ಕಟ್ಟಿಸುವಲ್ಲಿ ಅಂದಿನ ಜನತೆಗಿದ್ದ ಹುರುಪು, ಉತ್ಸಾಹಗಳು ಗೋಚರವಾಗುತ್ತವೆ.

ಕನ್ನೇರುಮಡು ಶಾಸನವು[284] ತಿಂತಿಣಿಯ ಗುಜಲ ಬೊಮಣನಾಯಕನ ಮಗ ಲಖುಮಣನಾಯಕ ಮತ್ತು ಬೊಮ್ಮನಾಗಿತಿ ಕಲ್ಲುಕೆರೆಯನ್ನು ಕಟ್ಟಿಸಿದಂತೆ ಉಲ್ಲೇಖ ನೀಡಿದೆ. ಪುರ ಶಾಸನದಲ್ಲಿ[285] ಶ್ರಿಸೋಮನಾಥದೇವರಿಗೆಂದು ಪುರದ ಬನದಾಯವೆಯು ವೋಹಿಲಾಪುರದ ಆಗ್ನೇಯ ಭಾಗದಲ್ಲಿ ಕೆರೆಯನ್ನು ಕಟ್ಟಿಸಿದ್ದಂತೆ ತಿಳಿದು ಬರುತ್ತದೆ. ಕುಷ್ಟಗಿಯಲ್ಲಿ ದೊರೆತ ಮತ್ತೊಂದು ಶಾಸನದಲ್ಲಿ[286] ಸೌರಾಷ್ಟ್ರ ಸೋಮನಾಥದೇವರು ಓಹಿಲ ಎಂಬುವವನಿಗೆ ಹಳ್ಳಿಗೆ ಹೋಗಿ ದೇಗುಲವನ್ನು ಮಾಡುವುದು ಹಾಗೂ ಕೆರೆಯನ್ನು ಕಟ್ಟಿಸಬೇಕೆಂದು ಆದೇಶ ನೀಡಿದಂತೆ ಮಾಹಿತಿ ದೊರೆಯುತ್ತದೆ. ಕವಲೂರು ಶಾಸನವು[287] ತ್ರಿಭುವನಮಲ್ಲನು ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದ ಅವಧಿಯಲ್ಲಿ ಅಗಸ್ತ್ಯಗೋತ್ರದ ವಾಜಪೇಯಿಯಾಗಮಾಡಿದ ಚೌಡಭಟ್ಟನೆಂಬುವವನ ಮಗ ಸೋಮಯಾಜಿಯೆಂಬುವವನು ಕೆರೆಯನ್ನು ಕಟ್ಟಿಸಿದ್ದರ ಕುರಿತು ವಿವರಣೆಯನ್ನು ನೀಡಿದೆ.

ಕೊಪ್ಪಳದ ಕ್ರಿ.ಶ.1746ರಲ್ಲಿ ದೊರೆತ ಶಾಸನವು[288] ಖಿಲ್ಲೇದಾರನಾದ ಮಹಮ್ಮದ್ ಖಾನ್ ಬಹ್ಲಾಮಿಯು ಎಂಬುವವನು ತನ್ನ ಜ್ಞಾನಬಲದಿಂದ ಅನೇಕ ದಿಕ್ಕುಗಳಲ್ಲಿ ಕೆರೆಗಳನ್ನು ಕಟ್ಟಿಸಿದ್ದಂತೆ ಮಾಹಿತಿಯನ್ನು ನೀಡಿದೆ. ಕೊಪ್ಪಳದಲ್ಲಿ ದೊರೆತ ಶಾಸನದಲ್ಲಿ[289] ಉಥ್‌ಮಾನ್ ಎಂಬ ವ್ಯಕ್ತಿಯೊಬ್ಬನು ಕೊಪ್ಪಳದ ಕೆರೆಯಿಂದ ನಗರದ ಬಾವಿಯೊಂದಕ್ಕೆ ನೀರನ್ನು ಹರಿಸಲು ನಾಲೆಯೊಂದನ್ನು ಮಾಡಿಸಿದಂತೆ ಕಂಡು ಬಂದಿದೆ. ಗಂಗನಹಾಳು ಶಾಸನ[290] ಗುಜಲ ಮುಮ್ಮಡಿ ರಾಯಣನಾಯಕನು ಸಂಣವಡೆಯರಿಗೆ ಗಂಗನಹಾಳಿನ ಕೆರೆಯ ಕೆಳಗೆ ಗದ್ದೆಯನ್ನು ಬಿಟ್ಟಿದ್ದಂತೆ ತಿಳಿಸುತ್ತದೆ. ಸಾಮಾನ್ಯವಾಗಿ ಪುರುಷರು ಕಟ್ಟಿಸುತ್ತಿದ್ದಂತ ಇಂತಹ ಕೆರೆಗಳನ್ನು ಮಹಿಳೆಯರು ಕಟ್ಟಿಸಿದ್ದಂತೆ ಇಲ್ಲಿಯ ಶಾಸನಗಳು ವಿವರಣೆ ನೀಡಿವೆ. ಕನಕಗಿರಿಯಲ್ಲಿ ದೊರೆತ ಶಾಸನವು[291] ಇಮ್ಮಡಿ ವುಡಿಸಿನಾಯಕನ ಪತ್ನಿ ಚಿಣ್ಣಮ್ಮನು ಕೆರೆಯನ್ನು ಕಟ್ಟಿಸಿದ್ದಂತೆ ವಿವರಣೆ ನೀಡಿದೆ. ಕೆಲವು ವೇಳೆ ಕೆರೆಯನ್ನು ಕಟ್ಟಿಸುವವರು ತಮ್ಮ ಹೆಸರನ್ನೆ ಕೆರೆಗಳಿಗೆ ಇಡುತ್ತಿದ್ದರು ಅಥವಾ ಮರಣ ಹೊಂದಿದ ತಮ್ಮ ಹಿರಿಯರ, ಪ್ರಿಯವ್ಯಕ್ತಿಗಳ ಸ್ಮಾರಕವಾಗಿ ಈ ಕೆರೆ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳುತ್ತಿದ್ದುದುಂಟು. ಅಚಾಲಾಪುರ ಶಾಸನದಲ್ಲಿ[292] ಹಂಪಾದೇವಿಹಳ್ಳಿಯ ಕೆರೆಯ ಉಲ್ಲೇಖವಿದ್ದರೆ ಕ್ರಿ.ಶ.1660ರ ಶಾಸನವೊಂದರಲ್ಲಿ[293] ಕನಕರಾಯ ಕೆರೆ ಎಂದು ಉಲ್ಲೇಖವಿದೆ. ಈ ರೀತಿಯಾದ ಹೆಸರನ್ನೊಳಗೊಂಡ ಕೆರೆಗಳ ಮಾಹಿತಿ ಕೆಲವೊಂದು ಶಾಸನಗಳಲ್ಲಿ ಮಾತ್ರ ದೊರಕಿವೆ. "ಸಾಮಾನ್ಯವರ್ಗದವರು ತಮ್ಮ ಮಟ್ಟಕ್ಕೆ ತಕ್ಕಂತೆ ಈ ಕಾರ್ಯ ಮಾಡಿದುದನ್ನು ಕನ್ನಡ ಶಾಸನಗಳು ತಿಳಿಸಿವೆ. ಸಾಮಾನ್ಯವರ್ಗದವರಲ್ಲಿ ಕಂಡುಬರುವ

ಕಾರ್ಯವೆಂದರೆ ಒಡೆದ ಕೆರೆಯ ದುರಸ್ತಿ, ತೂಬು ನಿರ್ಮಾಣ, ಒಡ್ಡಿನ ರಚನಾಕಾರ್ಯ, ಅದನ್ನು ಸುರಕ್ಷಿತವಾಗಿರಿಸುವಿಕೆ."[294] ಇಂತಹ ಒಂದು ಶಾಸನವು[295] ಕೊಪ್ಪಳ ಜಿಲ್ಲೆಯಲ್ಲಿ ದೊರೆತದ್ದು ಕ್ರಿ.ಶ.1557ರ ಅವಧಿಯಲ್ಲಿ ಜಂಗಮರಹಳ್ಳಿಯ ಕೆರೆ ಒಡೆದದ್ದು, ಇದನ್ನು ರಾಜಕೊಂಡ ಉಪಾರ, ಮದನಬೋವನಮಗ ಕನಕಬೋವ, ಯಲಬೋವನ ಮಗ ತಿಂಮಬೋವ ಈ ಮೂವರು ಸೇರಿ ಒಡೆದಿದ್ದ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತಾರೆ. ಅಲ್ಲದೆ ಜಂಗಮರ ಹಳ್ಳಿಯ ಕಾಮಣಗೌಡ, ಮಲ್ಲಣಗೌಡ, ಸೇನಬೋವ ತಿಂಮಣ ಮುಂತಾದವರು ಸೇರಿ ಇದಕ್ಕಾಗಿ ಇವರಿಗೆ 11 ಕೊಳಗ ಗದ್ದೆ ನೀಡುತ್ತಾರೆ. ಇದರೊಂದಿಗೆ ಒಂದು ವರಹದ ಹೊಲವನ್ನು ನೀಡಿದಂತೆ ಉಲ್ಲೇಖವಿದೆ.

ಕೆರೆ ಕಟ್ಟಿಸುವುದನ್ನು ಪ್ರೋತ್ಸಾಹಿಸುತ್ತಿದ್ದ ಅಂದಿನ ಅರಸರೊಂದಿಗೆ ಸಾಮಾನ್ಯ ವರ್ಗದವರು, ಸ್ತ್ರೀಯರು ಈ ವಿಷಯವಾಗಿ ಆಸಕ್ತಿಯನ್ನು ವಹಿಸಿದ್ದರು. "ಬಹುಶಃ ಸಾರ್ವಜನಿಕ ಕಾರ್ಯಗಳಲ್ಲಿ ಬಹು ಮುಖ್ಯವಾದುದು ತಟಾಕ ನಿರ್ಮಾಣ. ಸತ್ತವನ ಪ್ರೇತವು ಬಹಳ ಬಾಯಾರಿಕೆಯಿಂದ ಬಳಲುವುದೆಂದೂ, ತಟಾಕ ನಿರ್ಮಾಣ ಮುಂತಾದ ಧರ್ಮ ಕಾರ್ಯಗಳಿಂದ ಅವರ ಬಾಯಾರಿಕೆ ಹಿಂಗುವುದೆಂದೂ ಹಿಂದಿನ ಜನರು ನಂಬಿದ್ದರು. ಮಹಾಭಾರತದ ಪ್ರಕಾರ ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು ಕುಡಿದು ತೃಪ್ತರಾಗುವರೋ ಅದರ ಫಲವಾಗಿ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ"[296] ಎಂದಿದೆ. ಒಟ್ಟಿನಲ್ಲಿ ಕೆರೆಯನ್ನು ಕಟ್ಟಿಸುವುದು ಮಾನವನ ಧರ್ಮದ ಮೌಲ್ಯಗಳಲ್ಲಿ ಒಂದೆನಿಸಿದ್ದು ಪುಣ್ಯ ಸಂಪಾದಿಸುವ ಮಾರ್ಗವೆನಿಸಿತ್ತು.

**ಬಾವಿಗಳು :**

ಕೆರೆಗಳನ್ನು ಕಟ್ಟಿ ನೀರನ್ನು ಸಂಗ್ರಹಿಸುತ್ತಿದ್ದಂತೆ ಬಾವಿಯ ನಿರ್ಮಾಣಕ್ಕೂ ಅದರ ಸಂರಕ್ಷಣೆಗೂ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಬಾವಿಗಳಲ್ಲಿ ಸದಾ ನೀರು ತುಂಬಿರುತ್ತಿದ್ದು ಸಾರ್ವಜನಿಕರು ಅವುಗಳನ್ನು ಕುಡಿಯಲು ಬಳಸುವುದರೊಂದಿಗೆ ಇತರೆ ದೈನಂದಿನ ಕೆಲಸ ಕಾರ್ಯಗಳಿಗೂ ಉಪಯೋಗಿಸುತ್ತಿದ್ದರು.

ಅಳವಂಡಿಯಲ್ಲಿ ದೊರೆತ ಶಾಸನವು[297] ತ್ರೈಲೋಕ್ಯಮಲ್ಲನ ಆಡಳಿತದ ಅವಧಿಯಲ್ಲಿ ಅಳವಂಡಿಯ ನಾನೂರು ಮಹಾಜನರ ಸನ್ನಿಧಿಯಲ್ಲಿ ಕರುವ ಗುಲ್ಗಿಮಯ್ಯನು ಬಾವಿಯನ್ನು ಮಾಡಿಸಿದ್ದಂತೆ ಮಾಹಿತಿ ನೀಡುತ್ತದೆ. ಕೊಪ್ಪಳದ ಬಸವನಗೌಡರ ಬಾವಿಯ ದಡದಲ್ಲಿ ದೊರೆತ (ಕ್ರಿ.ಶ.16ನೇ ಶತಮಾನ) ಶಾಸನದಲ್ಲಿ[298] ಮಲಿಸೆಟ್ಟಿ ಎಂಬ ವ್ಯಕ್ತಿಯು ಬಾವಿಯನ್ನು ಕಟ್ಟಿಸಿದ್ದಂತೆ ಕಂಡು ಬಂದಿದೆ. ಕ್ರಿ.ಶ.1746ರಲ್ಲಿ ದೊರೆತ ಶಾಸನ[299] ಮಹಮ್ಮದ್ ಖಾನ್ ಎಂಬುವವನು ನೀರು ಜನಗಳಿಗೆ ಹಾಗೂ ಪಶುಪಕ್ಷಿಗಳಿಗೆ ಅವಶ್ಯವೆಂದು ತಿಳಿದು ಬಾವಿಯನ್ನು

ನಿರ್ಮಿಸಿದ್ದಂತೆ ತಿಳಿಸುತ್ತದೆ. ಕೊಪ್ಪಳದ ಮಸೀದಿ ಬಳಿ ದೊರೆತ ಶಾಸನದಲ್ಲಿ[300] ಕೊಪ್ಪಳದ ಕೆರೆಯಿಂದ ಬಾವಿಯೊಂದಕ್ಕೆ ನೀರನ್ನು ಹರಿಸಲು ನಾಲೆಯೊಂದನ್ನು ಕಟ್ಟಿಸಿದ್ದಂತೆ ಕಂಡು ಬಂದಿದೆ.

ಪುರುಷರು ಬಾವಿಗಳನ್ನು ನಿರ್ಮಿಸುತ್ತಿದ್ದಂತೆ ಸ್ತ್ರೀಯರು ಬಾವಿಗಳನ್ನು ನಿರ್ಮಿಸಿದ್ದಂತೆ ಕೆಲ ನಿದರ್ಶನಗಳನ್ನು ಇಲ್ಲಿ ಕಾಣಬಹುದು. ಬಸ್ರಿಹಾಳ ಶಾಸನದಲ್ಲಿ[301] ಕನಕಗಿರಿ ಯಿಂಮಡಿ ಮಡುಸಿನಾಯಕನ ಪತ್ನಿ ಕನಕಮ್ಮನು ಬಾವಿಯನ್ನು ಕಟ್ಟಿಸಿದ್ದಂತೆ ತಿಳಿದು ಬರುತ್ತದೆ. ಹೀಗೆ ಪುರುಷರೊಂದಿಗೆ ಸ್ತ್ರೀಯೂ ಇಂತಹ ಲೋಕೋಪಯೋಗಿ ಕಾರ್ಯಗಳನ್ನು ಕೈಗೊಂಡಿದ್ದುಂಟು. ಕೆರೆ ಅಥವಾ ಬಾವಿಯನ್ನು ಕಟ್ಟಿಸುವ ಉದ್ದೇಶ ತಮಗೆ ಅಥವಾ ತಮ್ಮ ಪೂರ್ವಜರಿಗೆ ಪುಣ್ಯ ಲಭಿಸಲಿ ಎಂಬ ಉದ್ದೇಶವನ್ನು ಅವರು ಹೊಂದಿದ್ದರು. ನೀರಾವರಿಯು ಮುಖ್ಯವಾಗಿ ಕೆರೆ, ಬಾವಿ, ಹಳ್ಳಗಳನ್ನು ಅವಲಂಬಿಸಿದ್ದಿತು.

"ಭೂಮಿಯ ಮೇಲೆ ಮಾನವ ಉದಯಿಸಿದಾಗ ಆರಂಭದಲ್ಲಿ ತನ್ನ ವಸತಿಗಳನ್ನು ಹಳ್ಳ ಮತ್ತು ನದಿಗಳ ಸಮೀಪದಲ್ಲಿ ನಿರ್ಮಿಸಿದನು. ಅವನು ತನ್ನ ಬದುಕಿನ ಅಗತ್ಯವಾಗಿ ಮೇಲು ಜಲವನ್ನು ನದಿ, ಹಳ್ಳ, ಕೊಳ್ಳಗಳ ರೂಪದಲ್ಲಿ ಸುಲಭವಾಗಿ ಪಡೆಯುತ್ತಿದ್ದ. ಹಲವಾರು ಕಾರಣಗಳಿಂದ ಕಾಲಾಂತರದಲ್ಲಿ ಮಾನವನು ಮೇಲುಜಲ ಮೂಲದಿಂದ ದೂರ ಸರಿದಂತೆಲ್ಲಾ ಬಹು ಪುರಾತನ ಕಾಲದಿಂದಲೂ ಮನುಷ್ಯನು ತನ್ನ ನೀರಿನ ಪೂರೈಕೆಯನ್ನು ಬಾವಿಗಳ ಮೂಲಕ ಪಡೆಯುತ್ತಾ ಬಂದಿದ್ದಾನೆ."[302] ಇಲ್ಲಿಯೂ ಉನ್ನತ ವರ್ಗದವರೊಂದಿಗೆ ಸಾಮಾನ್ಯರು ಕೂಡ ಇಂತಹ ಬಾವಿಗಳ ನಿರ್ಮಾಣ ಕಾರ್ಯಕ್ಕೆ ಮುಂದಾಗಿದ್ದರು.

**ಸತ್ರಗಳು :**

ವಿಶ್ರಾಂತಿಯನ್ನು ಪಡೆಯುವ ದೃಷ್ಟಿಯಿಂದ ಸತ್ರಗಳು ಇರುತ್ತಿದ್ದವು. "ಅರವಟ್ಟಿಗೆಗಳಂತೆ ಪ್ರಾಚೀನ ಕರ್ನಾಟಕದ ತುಂಬ ತೊಂದರೆದಾಯಕ ವಾಗಿದ್ದ ಪ್ರಾಚೀನ ಕಾಲದಲ್ಲಿ ದೂರದ ಪ್ರದೇಶಗಳಿಗೆ ಕಾಲ್ನಡಿಗೆಯಿಂದ ಪ್ರವಾಸ ಕೈಗೊಳ್ಳಬೇಕಿತ್ತು. ಇಂಥ ಸಂದರ್ಭದಲ್ಲಿ ಆಯಾ ಊರಿನ ಶ್ರೀಮಂತರು ಸಾಮಾನ್ಯರು ಅಲ್ಲಲ್ಲಿ ಸತ್ರಗಳನ್ನಿಟ್ಟು ಹಸಿದು ಬಂದವರಿಗೆ ಅನ್ನ, ಬಳಲಿ ಬಂದವರಿಗೆ ಆಶ್ರಯ, ಬಾಯಾರಿ ಬಂದವರಿಗೆ ನೀರನ್ನೆರೆದು ತೃಪ್ತಿಪಡಿಸುತ್ತಿದ್ದುದುಂಟು. ಈ ಅನ್ನ ನೀಡುವ ಕೇಂದ್ರಗಳೇ ಅನ್ನಛತ್ರ ಅಥವಾ ಸತ್ರ."[303] ಅರವಟ್ಟಿಗೆ, ದಾನ, ಕೆರೆ ಹಾಗೂ ಬಾವಿಗಳ ನಿರ್ಮಾಣ ಕಾರ್ಯಕ್ಕೆ ಪ್ರಾಧಾನ್ಯತೆ ನೀಡಿದಷ್ಟೇ ಸತ್ರ ನಿರ್ಮಾಣ ಕಾರ್ಯಕ್ಕೂ ಅಷ್ಟೇ ಪ್ರಾಧಾನ್ಯತೆ ನೀಡಿರುವುದು ಕಂಡು ಬರುತ್ತದೆ. ಪ್ರಾಚೀನ ಕಾಲದಲ್ಲಿಯೂ ಅತಿಥಿಯಗಳನ್ನು ದೇವರೆಂದೇ ಉಪಚರಿಸುತ್ತಿದ್ದರು. ಅವರನ್ನು ಅಷ್ಟೇ ಆದರದಿಂದ

ಬರಮಾಡಿಕೊಂಡು ಗೌರವವನ್ನು ನೀಡಿ ಅನ್ನದಾನ ಮಾಡುತ್ತಿದ್ದರು. ಇಂತಹ ಸತ್ರಗಳು ಇತರ ದಾನಗಳಿಗಿಂತಲೂ ಅನ್ನದಾನವೇ ಶ್ರೇಷ್ಠ ಎಂದು ಭಾವಿಸಿದ್ದರು.

ಅಳವಂಡಿಯಲ್ಲಿ ದೊರೆತ ಶಾಸನವು[304] ಕರುವಗುಲ್ಗಿಮಯ್ಯ ಎಂಬುವವನು ಊರ ಪಶ್ಚಿಮಕ್ಕೆ ಸತ್ರವನ್ನು ಮಾಡಿಸಿದ್ದಂತೆ ಮಾಹಿತಿ ನೀಡುತ್ತದೆ. ಕವಲೂರಿನ ಶಾಸನ[305] ಅಹವಮಲ್ಲನ ಕಾಲದಲ್ಲಿ ಸೋಮಯಾಜಿ ಎಂಬುವವನು ಸೋಮಯಾಗವನ್ನು ಮಾಡಿಸಿದ. ಈತ ಇತರೆ ಕಾರ್ಯಗಳನ್ನು ಮಾಡುವುದರೊಂದಿಗೆ ಸತ್ರವನ್ನು ಕಟ್ಟಿಸಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.1129ರಲ್ಲಿ ದೊರೆತ ಯಲಬುರ್ಗಾ ಶಾಸನದಲ್ಲಿ[306] ಭೂಲೋಕಮಲ್ಲನ ಆಳ್ವಿಕೆಯಲ್ಲಿ ದೇಮೆಯಷಣಂಗಿಯು ಗಣೇಶ್ವರ ದೇವಾಲಯದಲ್ಲಿ ರುದ್ರಾದಿತ್ಯ ಘೈಸಾಸನು ಮಾಡಿಸಿದ ಸತ್ರದ ಮನೆಯಲ್ಲಿ ಪ್ರತಿದಿವಸವೂ ಆರು ಜನ ಬ್ರಾಹ್ಮಣರು ಊಟ ಮಾಡುವಂತೆ ಭೂದಾನವನ್ನು ನೀಡಿದಂತೆ ತಿಳಿದು ಬರುತ್ತದೆ. ಕ್ರಿ.ಶ.1107ರ ಕುಕನೂರು ಶಾಸನ[307] ಗಂಗಾಧರಯ್ಯ ನಾಯಕನ ಮಗಳು ಕಾಮಿಯಕ್ಕನು ಹೆಗ್ಗರೆಯ ಎರೆ ಭೂಮಿಯಲ್ಲಿ 2 ಮತ್ತರು ಎರೆ ಭೂಮಿಯನ್ನು ಸತ್ರಕ್ಕಾಗಿ ದಾನ ನೀಡಿದ್ದಂತೆ ತಿಳಿಸುತ್ತದೆ.

ಭಾರತೀಯ ಸಂಸ್ಕೃತಿಯ ಉದಾತ್ತ ಮನೋಭಾವನೆಯನ್ನು ಪ್ರತಿಬಿಂಬಿ ಸುವ ಇಂತಹ ಸತ್ರಗಳು ಈ ನಾಡಿನಲ್ಲಿಯೂ ಅಂದು ನಿರ್ಮಾಣಗೊಂಡಿದ್ದು ಅರಸರು ಈ ಕಾರ್ಯಗಳಿಗೆ ಪ್ರೋತ್ಸಾಹ ನೀಡಿದ್ದಲ್ಲದೆ ಸಾಮಾನ್ಯರು ಇಂತಹ ಕಾರ್ಯಗಳಿಗೆ ತಮ್ಮನ್ನು ತೊಡಗಿಸಿಕೊಂಡಿದ್ದನ್ನು ಕಾಣಬಹುದಾಗಿದೆ.

**ಅರವಟ್ಟಿಗೆಗಳು :**

ಸಾರ್ವಜನಿಕ ಕಾರ್ಯಗಳಲ್ಲಿ ಬಹು ಉಪಯೋಗಕಾರಿಯಾದ ಇಂತಹ ಅರವಟ್ಟಿಗೆಗಳು ಸಂಚರಿಸುವ ಜನರ ಬಾಯಾರಿಕೆಯನ್ನು ನೀಗಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. "ದಾರಿಹೋಕರಿಗೆ; ಪ್ರವಾಸಿಗರಿಗೆ ಆಗುವ ನೀರಿನ ದಾಹವನ್ನು ಹಿಂಗಿಸುವುದಕ್ಕಾಗಿ ಅರವಟ್ಟಿಗೆಗಳನ್ನು ಇರಿಸುವುದು ಪ್ರಾಚೀನ ಕರ್ನಾಟಕದ ರೀತಿಯಾಗಿತ್ತು. ಇಂದಿಗೂ ಆ ಪದ್ಧತಿ ಉಳಿದು ಕೊಂಡು ಬಂದಿದೆ. ಇಂತಹ ಅರವಟ್ಟಿಗೆಗಳನ್ನು ನಡೆಸುವುದಕ್ಕಾಗಿ ಜನರನ್ನು ನೇಮಿಸುತ್ತಿದ್ದುಂಟು. ಅವರಿಗೆ ಸಂಬಳ ನೀಡುತ್ತಿದ್ದರು. ಅರವಟ್ಟಿಗೆಯ ಏನೆಲ್ಲ ಖರ್ಚಿಗಾಗಿ ದಾನಿಗಳು ಕೊಡುಗೈಯಿಂದ ಭೂಮಿ ದಾನಗಳನ್ನು ನೀಡುತ್ತಿದ್ದರು. ಕೆಲವರು ಸ್ವತ: ಅರವಟ್ಟಿಗೆಗಳನ್ನು ಇರಿಸಿ ನಡೆಸುತ್ತಿದ್ದರು. ಅದು ಪ್ರಾಚೀನ ಕನ್ನಡಿಗರ ಮನದಲ್ಲಿ ಪುಣ್ಯದ ಕಾರ್ಯವಾಗಿತ್ತು."[308] ಪ್ರಾಚೀನ ಕಾಲದಲ್ಲಿಯೂ ದಾರಿಹೋಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೊಂಡೆ ಇಂತಹ ಅರವಟ್ಟಿಗೆಗಳು ನಿರ್ಮಾಣಗೊಳ್ಳುತ್ತಿದ್ದವು.

**ಮಂಟಪಗಳು :**

ದೇವಾಲಯ ಅಥವಾ ವಾಸಕ್ಕಾಗಿ ರಚಿಸಿದ ವಿಭಿನ್ನ ಕೋಣೆಗಳನ್ನು ಮಂಟಪಗಳೆಂದು ಹೇಳಲಾಗುತ್ತದೆ. ಇವುಗಳನ್ನು ದೇವಾಲಯಗಳ ಮುಂದೆ, ಪುಣ್ಯಕ್ಷೇತ್ರಗಳಲ್ಲಿ, ಗ್ರಾಮಗಳ ಜನ ಸೇರುವ ಜಾಗದಲ್ಲಿ ನಿರ್ಮಿಸುತ್ತಿದ್ದರು.

ಕೊಪ್ಪಳದ ಮಸೀದಿಯ ಬಳಿ ದೊರೆತ ಶಾಸನವು[309] ಎರಡನೆಯ ಇಬ್ರಾಹಿಂ ಆದಿಲ್‌ಷಾನ ಅವಧಿಯಲ್ಲಿ ಮಹಮ್ಮದ್ ಎಂಬ ವ್ಯಕ್ತಿಯು ಮಂಟಪವನ್ನು ನಿರ್ಮಿಸಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ.1005ರಲ್ಲಿ ದೊರೆತ ಶಾಸನ[310] ಈಶ್ವರಸೆಟ್ಟಿ ಎಂಬುವವನು ಮಂಟಪದ ಪರಿಸೂತ್ರದ ನಿರ್ವಹಣೆಗಾಗಿ 100 ಗದ್ಯಾಣವನ್ನು ದಾನ ಬಿಟ್ಟಿದ್ದಂತೆ ತಿಳಿಸುತ್ತದೆ.

ಸಮಾಜದ ಹಿತಾಸಕ್ತಿಯನ್ನು ಕಾಪಾಡುವುದೇ ಅಂದಿನ ಜನರ ಮುಖ್ಯ ಉದ್ದೇಶವಾಗಿತ್ತು. ಅಂದಿನ ಕಾಲದಲ್ಲಿ ಕನ್ನಡಿಗರು ಧರ್ಮದ ಕಾರ್ಯದಲ್ಲಿ ಬಹಳಷ್ಟು ನಂಬಿಕೆಯಿಟ್ಟಿದ್ದರು. ತಮ್ಮ ನಾಡಿನ ಹಿತಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಆ ನಾಡನ್ನು ಸುಧಾರಿಸುವ ಪ್ರಯತ್ನವನ್ನು ಮಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಭಾವಿಸಿದ್ದರು. ಈ ಮೂಲಕ ಕೊಪ್ಪಳ ಜಿಲ್ಲೆಯು ತನ್ನ ಆಡಳಿತದ ಅವಧಿಯಲ್ಲಿ ಕೇವಲ ರಾಜಕೀಯ ದೃಷ್ಟಿಯಿಂದಷ್ಟೇ ಪ್ರಾಮುಖ್ಯತೆಯನ್ನು ಪಡೆಯದೆ ಇಂತಹ ಅನೇಕ ಲೋಕೋಪಯೋಗಿ ಕಾರ್ಯಗಳಿಂದಲೂ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಬಂದಿದ್ದನ್ನು ಕಾಣಬಹುದು.

**ಅಡಿಟಿಪ್ಪಣಿಗಳು :**

1. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:454.
2. ಅದೇ, ಪುಟ:478.
3. ಅದೇ, ಪುಟ:480.
4. ಚನ್ನಬಸವ ಹಿರೇಮಠ: ಕುರುಗೋಡು ಸಿಂಧರು ಒಂದು ಅಧ್ಯಯನ (ಉದ್ಧೃತ), ಪುಟ:181.
5. ಎಸ್.ಕೆ.ಕೊಪ್ಪಾ: ತರ್ದವಾಡಿನಾಡು ಒಂದು ಅಧ್ಯಯನ, ಪುಟ:151–152.
6. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:480.
7. ಚನ್ನಬಸವ ಹಿರೇಮಠ: ಕುರುಗೋಡು ಸಿಂಧರು ಒಂದು ಅಧ್ಯಯನ (ಉದ್ಧೃತ), ಪುಟ:481.

8. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:481.
9. ಪೂರ್ವೋಕ್ತ, ಪುಟ:182.
10. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:482.
11. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–3, ಪುಟ:6.
12. ಅದೇ. ಕೊ–8, ಪುಟ:17.
13. ಅದೇ, ಕೊ–9, ಪುಟ:20.
14. ಅದೇ, ಕೊ–26, ಪುಟ:32.
15. ಅದೇ, ಯ–38, ಪುಟ:199.
16. ಅದೇ, ಕೊ–149, ಪುಟ:146.
17. ಅದೇ, ಯ–29, ಪುಟ:184.
18. ಅದೇ, ಯ–36, ಪುಟ:194.
19. ಅದೇ, ಯ–47, ಪುಟ:218.
20. ಅದೇ, ಯ–69, ಪುಟ:269.
21. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:209.
22. ಅದೇ, ಪುಟ:155.
23. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–139, ಪುಟ:136.
24. ಅದೇ, ಕೊ–148, ಪುಟ:146.
25. ಅದೇ, ಕೊ–58, ಪುಟ:54.
26. ಅದೇ, ಯ–6, ಪುಟ:163.
27. ಅದೇ, ಯ–36, ಪುಟ:194.
28. ಅದೇ, ಯ–51, ಪುಟ:225.
29. ಚನ್ನಬಸವ ಹಿರೇಮಠ: ಕುರುಗೋಡು ಸಿಂಧರು ಒಂದು ಅಧ್ಯಯನ (ಉದೃತ), ಪುಟ:184.
30. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–45, ಪುಟ:216.

31. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:488.
32. ಅದೇ, ಪುಟ:487.
33. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕು–27, ಪುಟ:306.
34. ಅದೇ, ಕೊ–90, ಪುಟ:75.
35. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:488.
36. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–49, ಪುಟ:222.
37. ಅದೇ, ಕು–2, ಪುಟ:278.
38. ಅದೇ, ಕು–13, ಪುಟ:289.
39. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:490.
40. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕು–21, ಪುಟ:301.
41. ಅದೇ, ಯ–38, ಪುಟ:199.
42. ಪಿ.ವಿ.ನಾರಾಯಣ: ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಪುಟ:60.
43. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:481.
44. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–26, ಪುಟ:32.
45. ಅದೇ, ಯ–40, ಪುಟ:205.
46. ಅದೇ, ಯ–53, ಪುಟ:236.
47. ಅದೇ, ಕು–13, ಪುಟ:289.
48. ಅದೇ, ಯ–36, ಪುಟ:194.
49. ಅದೇ, ಯ–51, ಪುಟ:225.
50. ಅದೇ, ಕೊ–9, ಪುಟ:20.
51. ಅದೇ, ಕೊ–26, ಪುಟ:33.

52. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ:211.
53. ಎಂ.ವಿ.ಕೃಷ್ಣರಾವ್ ಕೇಶವಭಟ್ಟ: ಕರ್ನಾಟಕ ದರ್ಶನ, ಪುಟ:967.
54. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–26, ಪುಟ:33.
55. ಅದೇ, ಯ–45, ಪುಟ:216.
56. ಅದೇ, ಕೊ–24, ಪುಟ:30.
57. ಅದೇ, ಯ–50, ಪುಟ:223.
58. ಅದೇ, ಕು–17, ಪುಟ:294.
59. ಅದೇ, ಕೊ–35, ಪುಟ:41.
60. ಅದೇ, ಯ–6, ಪುಟ:163.
61. ಅದೇ, ಕು–27, ಪುಟ:307.
62. ಅದೇ, ಕೊ–28, ಪುಟ:37.
63. ಅದೇ, ಕೊಪ್ಪಳ–26, ಪುಟ:31.
64. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:479.
65. ಬಿ.ಆರ್.ಹಿರೇಮಠ: ಶಾಸನಗಳಲ್ಲಿ ಕರ್ನಾಟಕ ವರ್ತಕರು, ಪುಟ:6.
66. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:479.
67. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–5, ಪುಟ:12.
68. ಅದೇ, ಕೊ–26, ಪುಟ:32.
69. ಅದೇ, ಯ–17, ಪುಟ:174.
70. ಅದೇ, ಯ–39, ಪುಟ:203.
71. ಅದೇ, ಕು–15, ಪುಟ:292.
72. ಅದೇ, ಕು–21, ಪುಟ:301.
73. ಅದೇ, ಕು–27, ಪುಟ:306.
74. ಅದೇ, ಕೊ–5, ಪುಟ:12.
75. ಅದೇ, ಕೊ–8, ಪುಟ:16.
76. ಅದೇ, ಯ–38, ಪುಟ:199.

77. ಎಂ.ಚಿದಾನಮದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:432.
78. ಅದೇ, ಪುಟ:487.
79. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–41, ಪುಟ:214.
80. ಅದೇ, ಗಂ–18, ಪುಟ:325.
81. ಅದೇ, ಕು–17, ಪುಟ:294.
82. ಎಂ.ಚಿದಾನಮದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:489.
83. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–45, ಪುಟ:216.
84. ಅದೇ, ಯ–42, ಪುಟ:215.
85. ಅದೇ, ಕು–10, ಪುಟ:285.
86. ಅದೇ, ಗಂ–93, ಪುಟ:381.
87. ಅದೇ, ಕೊ–54, ಪುಟ:52.
88. ಎಂ.ಚಿದಾನಮದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:489.
89. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–45, ಪುಟ:216.
90. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:487.
91. ಅದೇ, ಪುಟ:488
92. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಯ–49, ಪುಟ:222.
93. ಅದೇ, ಯ–52, ಪುಟ:230.
94. ಅದೇ, ಯ–52, ಪುಟ:230.
95. ಅದೇ, ಗಂ–26, ಪುಟ:340.
96. ಅದೇ, ಗಂ–38, ಪುಟ:347.
97. ಅದೇ, ಗಂ–27, ಪುಟ:341.
98. ಅದೇ, ಗಂ–37, ಪುಟ:346.

99. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:487.
100. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕು–28, ಪುಟ:308.
101. ಅದೇ, ಯ–30, ಪುಟ:189.
102. ಎಂ.ಚಿದಾನಮದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:454.
103. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–87, ಪುಟ:73.
104. ಅದೇ, ಕೊ–90, ಪುಟ:75.
105. ಅದೇ, ಕೊ–93, ಪುಟ:80.
106. ಅದೇ, ಕೊ–97, ಪುಟ:85.
107. ಅದೇ, ಕೊ–98, ಪುಟ:87.
108. ಅದೇ, ಕೊ–100, ಪುಟ:89.
109. ಅದೇ, ಕೊ–103, ಪುಟ:94.
110. ಅದೇ, ಕೊ–105, ಪುಟ:97.
111. ಅದೇ, ಕೊ–108, ಪುಟ:103.
112. ಅದೇ, ಕೊ–111, ಪುಟ:106.
113. ಅದೇ, ಕೊ–115, ಪುಟ:111.
114. ಅದೇ, ಕೊ–119, ಪುಟ:114.
115. ಅದೇ, ಕೊ–127, ಪುಟ:126.
116. ಅದೇ, ಯ–1, ಪುಟ:160.
117. ಅದೇ, ಯ–17, ಪುಟ:175.
118. ಅದೇ, ಯ–38, ಪುಟ:199.
119. ಅದೇ, ಯ–39, ಪುಟ:202.
120. ಅದೇ, ಯ–56, ಪುಟ:239.
121. ಅದೇ, ಗಂ–51, ಪುಟ:353.
122. ಅದೇ, ಗಂ–58, ಪುಟ:357.
123. ಅದೇ, ಗಂ–75, ಪುಟ:367.

124. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–127, ಪುಟ:127.
125. ಅದೇ, ಕೊ–125, ಪುಟ:122.
126. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:73.
127. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:107.
128. ಅದೇ, ಪುಟ:108.
129. ಅದೇ, ಪುಟ:110.
130. ಚನ್ನಬಸವಯ್ಯ ಹಿರೇಮಠ: ಕುರುಗೋಡು ಸಿಂಧರು ಒಂದು ಅಧ್ಯಯನ (ಉದೃತ), ಪುಟ:190–191.
131. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:205.
132. ಅದೇ, ಪುಟ:205.
133. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–3, ಪುಟ:6.
134. ಅದೇ, ಗಂ–91, ಪುಟ:379.
135. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:201.
136. ಅದೇ.
137. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–142, ಪುಟ:142.
138. ಅದೇ, ಗಂ–2, ಪುಟ:314.
139. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:68.
140. ಎಂ.ಎಂ.ಕಲಬುರ್ಗಿ ಮತ್ತು ಬಿ.ಆರ್.ಹಿರೇಮಠ: ಶಾಸನ ಸಂಪದ, ಪುಟ:139.
141. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಗಂ–1, ಪುಟ:313.
142. ಅದೇ, ಕೊ–39, ಪುಟ:43.
143. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:194.
144. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–160, ಪುಟ:154.

145. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–161, ಪುಟ:155.
146. ಅದೇ, ಕೊ–160, ಪುಟ:154.
147. ಅದೇ.
148. ಅದೇ, ಕೊ–3, ಪುಟ:9.
149. ಅದೇ, ಕೊ–139, ಪುಟ:137.
150. ಅದೇ, ಕೊ–138, ಪುಟ:134.
151. ಅದೇ, ಕೊ–116, ಪುಟ:112.
152. ಅದೇ, ಕೊ–113, ಪುಟ:109.
153. ಅದೇ, ಕೊ–90, ಪುಟ:75.
154. ಕೆ.ರವೀಂದ್ರನಾಥ: ಕನ್ನಡ ದಾಖಲು ಸಾಹಿತ್ಯ, ಪುಟ:40.
155. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:495.
156. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–5, ಪುಟ:12.
157. ಅದೇ, ಕೊ–3, ಪುಟ:6.
158. ಅದೇ, ಕೊ–6, ಪುಟ:12.
159. ಅದೇ, ಕೊ–19, ಪುಟ:27.
160. ಅದೇ, ಕೊ–21, ಪುಟ:29.
161. ಅದೇ, ಕೊ–26, ಪುಟ:32.
162. ಅದೇ, ಕೊ–34, ಪುಟ:40.
163. ಅದೇ, ಕೊ–39, ಪುಟ:43.
164. ಅದೇ, ಕೊ–54, ಪುಟ:52.
165. ಅದೇ, ಕೊ–138, ಪುಟ:134.
166. ಅದೇ, ಕೊ–143, ಪುಟ:142.
167. ಅದೇ, ಕೊ–154, ಪುಟ:150.
168. ಅದೇ, ಕೊ–160, ಪುಟ:154.
169. ಅದೇ, ಕೊ–163, ಪುಟ:157.
170. ಅದೇ, ಕೊ–6, ಪುಟ:12.
171. ಅದೇ, ಕೊ–148, ಪುಟ:146.

172. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-2, ಯ-10, ಪುಟ:165.

173. ಅದೇ, ಯ-11, ಪುಟ:166.

174. ಅದೇ, ಯ-12, ಪುಟ:167.

175. ಅದೇ, ಯ-13, ಪುಟ:168.

176. ಅದೇ, ಯ-14, ಪುಟ:170.

177. ಅದೇ, ಯ-15, ಪುಟ:172.

178. ಅದೇ, ಯ-22, ಪುಟ:179.

179. ಅದೇ, ಯ-28, ಪುಟ:183.

180. ಅದೇ, ಯ-16, ಪುಟ:173.

181. ಅದೇ, ಯ-29, ಪುಟ:184.

182. ಅದೇ, ಯ-17, ಪುಟ:175.

183. ಅದೇ, ಯ-34, ಪುಟ:192.

184. ಅದೇ, ಯ-35, ಪುಟ:193.

185. ಅದೇ, ಯ-37, ಪುಟ:196.

186. ಅದೇ, ಯ-38, ಪುಟ:197.

187. ಅದೇ, ಯ-40, ಪುಟ:205.

188. ಅದೇ, ಯ-41, ಪುಟ:210.

189. ಅದೇ, ಯ-50, ಪುಟ:223.

190. ಅದೇ, ಯ-70, ಪುಟ:273.

191. ಅದೇ, ಕು-2, ಪುಟ:278.

192. ಅದೇ, ಕು-3, ಪುಟ:279.

193. ಅದೇ, ಕು-4, ಪುಟ:280.

194. ಅದೇ, ಕು-9, ಪುಟ:284.

195. ಅದೇ, ಕು-13, ಪುಟ:289.

196. ಅದೇ, ಕು-15, ಪುಟ:292.

197. ಅದೇ, ಕು-17, ಪುಟ:294.

198. ಅದೇ, ಕು-27, ಪುಟ:306.

199. ಅದೇ, ಗಂ-1, ಪುಟ:313.

200. ಅದೇ, ಗಂ-54, ಪುಟ:354.

201. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಗಂ–55, ಪುಟ:355.
202. ಅದೇ, ಗಂ–63, ಪುಟ:359.
203. ಅದೇ, ಗಂ–73, ಪುಟ:364.
204. ಅದೇ, ಗಂ–80, ಪುಟ:370.
205. ಅದೇ, ಗಂ–99, ಪುಟ:383.
206. ಅದೇ, ಗಂ–101, ಪುಟ:384.
207. ಹು.ಕಾ.ಜಯದೇವ: ಶಾಸನ ಮತ್ತು ಗದ್ಯ, ಸಂ–2, ಪುಟ:29.
208. ಚನ್ನಬಸವಯ್ಯ ಹಿರೇಮಠ: ಕುರುಗೋಡು ಸಿಂಧರು ಒಂದು ಅಧ್ಯಯಯ, ಪುಟ:192.
209. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ:265–266.
210. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:15.
211. ಅದೇ, ಪುಟ:14.
212. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:461.
213. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:24.
214. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ, ಪುಟ:463.
215. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಗಂ–17, ಪುಟ:323.
216. ಅದೇ, ಗಂ–18, ಪುಟ:325.
217. ಸಿ.ನಾಗಭೂಷಣ: ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪುಟ:115.
218. ತಿರುಳ್ಗನ್ನಡ: ಅಖಿಲಭಾರತ 62ನೇ ಕನ್ನಡ ಸಾಹತ್ಯ ಸಮ್ಮೇಳನ ಸ್ಮರಣ ಸಂಚಿಕೆ, ರಾಯಚೂರು ಜಿಲ್ಲೆ: ಶಿಲ್ಪಕಲೆ, ಚನ್ನಬಸವ, ರಾಯಚೂರು,ಪುಟ:15.
219. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ:224.
220. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:203.
221. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, ಕೊ–3, ಪುಟ:6.
222. ಅದೇ, ಕೊ–39, ಪುಟ:43.
223. ಅದೇ, ಕೊ–148, ಪುಟ:146.

224. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊ–161, ಪುಟ:155.

225. ಅದೇ, ಕೊ–154, ಪುಟ:150.

226. ಅದೇ, ಯ–14, ಪುಟ:170.

227. ಅದೇ, ಯ–15, ಪುಟ:172.

228. ಅದೇ, ಯ–16, ಪುಟ:173.

229. ಅದೇ, ಯ–17, ಪುಟ:175.

230. ಅದೇ, ಯ–22, ಪುಟ:179.

231. ಅದೇ, ಯ–38, ಪುಟ:199.

232. ಅದೇ, ಕೊ–6, ಪುಟ:12.

233. ಅದೇ, ಗಂ–60, ಪುಟ:358.

234. ಅದೇ, ಗಂ–104, ಪುಟ:386.

235. ಅದೇ, ಯ–12, ಪುಟ:167.

236. ಅದೇ, ಕೊ–24, ಪುಟ:30.

237. ಅದೇ, ಕೊ–148, ಪುಟ:146.

238. ಅದೇ, ಕೊ–26, ಪುಟ:32.

239. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:196.

240. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಯ–13, ಪುಟ:168.

241. ಅದೇ, ಯ–17, ಪುಟ:175.

242. ಅದೇ, ಯ–51, ಪುಟ:224.

243. ಅದೇ, ಕೊ–160, ಪುಟ:154.

244. ಅದೇ, ಕೊ–161, ಪುಟ:155.

245. ಅದೇ, ಯ–41, ಪುಟ:210.

246. ಅದೇ, ಕು–13, ಪುಟ:288.

247. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:224.

248. ಅದೇ, ಪುಟ:330.

249. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕೊ–18, ಪುಟ:26.
250. ಅದೇ, ಕೊ–21, ಪುಟ:29.
251. ಅದೇ, ಯ–30, ಪುಟ:189.
252. ಅದೇ, ಕೊ–32, ಪುಟ:39.
253. ಅದೇ, ಕೊ–56, ಪುಟ:53.
254. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ:245.
255. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕು–5, ಪುಟ:281.
256. ಅದೇ, ಗಂ–92, ಪುಟ:380.
257. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:233.
258. ಅದೇ, ಪುಟ:236.
259. ಆರ್.ಕೆ.ರಾಧ: ಕನ್ನಡ ನುಡಿ, ಪುಟ:19.
260. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ:250.
261. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಗಂ–57, ಪುಟ:356.
262. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:107.
263. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:230.
264. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕೊ–80, ಪುಟ:65.
265. ಅದೇ, ಕೊ–86, ಪುಟ:72.
266. ಅದೇ, ಕೊ–89, ಪುಟ:75.
267. ಅದೇ, ಕೊ–93, ಪುಟ:80.
268. ಅದೇ, ಕೊ–97, ಪುಟ:85.
269. ಅದೇ, ಕೊ–100, ಪುಟ:89.
270. ಅದೇ, ಕೊ–105, ಪುಟ:97.
271. ಅದೇ, ಕೊ–115, ಪುಟ:111.
272. ಅದೇ, ಕೊ–119, ಪುಟ:114.
273. ಅದೇ, ಗಂ–45, ಪುಟ:350.

274. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಗಂ–48, ಪುಟ:351.
275. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:108.
276. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಗಂ–34, ಪುಟ:344.
277. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:70.
278. ಚನ್ನಬಸಪ್ಪ ಎಸ್.ಪಾಟೀಲ: ಕರ್ನಾಟಕ ಕೋಟೆಗಳು, ಪುಟ:1.
279. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕೊ–130, ಪುಟ:129.
280. ಅದೇ, ಕೊ–128, ಪುಟ:128.
281. ಅದೇ, ಕೊ–131, ಪುಟ:130.
282. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:275.
283. ಜಿ.ಎಸ್.ದೀಕ್ಷಿತ್: ಕರ್ನಾಟಕದಲ್ಲಿ ಕೆರೆ ನೀರಾವರಿ (ಅನುವಾದ.ನೀಲತ್ತಹಳ್ಳಿ ಕಸ್ತೂರಿ), ಪುಟ:6.
284. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಗಂ–90, ಪುಟ:379.
285. ಅದೇ, ಕು–12, ಪುಟ:287.
286. ಅದೇ, ಕು–14, ಪುಟ:291.
287. ಅದೇ, ಕೊ–1, ಪುಟ:1.
288. ಅದೇ, ಕೊ–131, ಪುಟ:130.
289. ಅದೇ, ಕೊ–129, ಪುಟ:128.
290. ಅದೇ, ಕೊ–142, ಪುಟ:143.
291. ಅದೇ, ಗಂ–75, ಪುಟ:367.
292. ಅದೇ, ಕೊ–163, ಪುಟ:157.
293. ಅದೇ, ಗಂ–75, ಪುಟ:367.
294. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:279.
295. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕೊ–162, ಪುಟ:156.

296. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ:502.
297. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕೊ–6, ಪುಟ:12.
298. ಅದೇ, ಕೊ–57, ಪುಟ:54.
299. ಅದೇ, ಕೊ–131, ಪುಟ:130.
300. ಅದೇ, ಕೊ–129, ಪುಟ:128.
301. ಅದೇ, ಗಂ–89, ಪುಟ. 377.
302. ಇತಿಹಾಸ ದರ್ಶನ: ಕರ್ನಾಟಕ ಇತಿಹಾಸ ಅಕಾಡೆಮಿ, ಸಂ.16, ಪುಟ:19.
303. ಚನ್ನಕ್ಕ ಎಲಿಗಾರ: ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪುಟ:282.
304. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕೊ–6, ಪುಟ:13.
305. ಅದೇ, ಕೊ–1, ಪುಟ:1.
306. ಅದೇ, ಯ–53, ಪುಟ:236.
307. ಅದೇ, ಯ–38, ಪುಟ:199.
308. ಎಸ್.ಎಂ.ಹಿರೇಮಠ: ಶಾಸನಾಧ್ಯಯನ, ಪುಟ:102.
309. ಕನ್ನಡ ವಿಶ್ವವಿದ್ಯಾಲಯ, ಶಾಸನಸಂಪುಟ–2, ಕೊಪ್ಪಳಜಿಲ್ಲೆ, ಕೊ–130, ಪುಟ:129.
310. ಅದೇ, ಯ–50, ಪುಟ:223.

ಅಧ್ಯಾಯ–10

# ಶಾಸನಗಳ ಸಾಹಿತ್ಯಿಕ–ಭಾಷಿಕ–ಛಂದಸ್ಸು–ಸ್ಥಳನಾಮಗಳ ಅಧ್ಯಯನ

ರಾಜರ ಆಜ್ಞೆಗಳನ್ನು ಹೇಳುವುದಕ್ಕಾಗಿ ಹುಟ್ಟಿಕೊಂಡ ಶಾಸನಗಳು ಕಾಲ ಕಳೆದಂತೆ ತನ್ನ ಸ್ವರೂಪದಲ್ಲಿ ಬದಲಾವಣೆಯನ್ನು ಹೊಂದಿದವು. ದಾನ–ದತ್ತಿ, ವಿಜಯೋತ್ಸವ ಸಂದರ್ಭದಲ್ಲಿ ನೀಡಿದ ದಾನ, ರಾಜರ ಆಡಳಿತ ಮುಂತಾದ ವಿಷಯಗಳು ಸೇರಿಕೊಂಡವು. ಇಂತಹ ವಿಷಯಗಳ ನ್ನೊಳಗೊಂಡ ಶಾಸನಗಳನ್ನು ಕಾವ್ಯಾತ್ಮಕವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಕಾವ್ಯಾತ್ಮಕವಾಗಿರಬೇಕೆಂಬುದು ಅವುಗಳ ಉದ್ದೇಶವೂ ಅಲ್ಲ. "ಎಷ್ಟೋ ವೇಳೆ ಶಾಸನಗಳನ್ನು ಬರೆಸಿದ ಅಥವಾ ಬರೆದ ವ್ಯಕ್ತಿಯ ಮನೋಧರ್ಮ ಅಥವಾ ಸಾಮರ್ಥ್ಯದಿಂದಾಗಿ ಶಾಸನಗಳಲ್ಲಿ ಸಾಹಿತ್ಯದ ಸೊಗಸು, ಕಾವ್ಯಗುಣ ಕಾಣಿಸಿಕೊಳ್ಳಬಹುದು. ಯಾವುದೇ ಒಂದು ವಿಷಯವನ್ನು ಕುರಿತು ಭಾಷೆಯ ಮೂಲಕ ಕೇಳುವಾಗ ಹೇಳುವ ವಿಧಾನ ಕೇವಲ ವಿಷಯ ನಿರೂಪಣೆಯಷ್ಟೇ ಆಗದೆ ಭಾವನೆಯ ವರ್ಣನಾಕ್ರಮ ಆದಾಗ ಕವಿತ್ವದ ಅಂಶ ಸೇರ್ಪಡೆಯಾಗುತ್ತದೆ. ಶಾಸನದಲ್ಲಿ ವಿವರವು ವಾರ್ತೆ ಅಥವಾ ವರದಿಯ ನೆಲೆಯನ್ನು ಮೀರಿದಾಗ ಅದು ಆಸ್ವಾದ ಹಾಗೂ ಪರಿಭಾವನೆಯ ವಿಷಯವಾದಾಗ ಕಾವ್ಯತ್ವದ ನೆಲೆಯನ್ನು ಪ್ರವೇಶಿಸುತ್ತದೆ."[1] ಶಾಸನಗಳನ್ನು ಬರೆಯುವ ವಿದ್ಯಾವಂತ ಜನರು ಇದ್ದುದರಿಂದಲೇ ಸಾಹಿತ್ಯಬದ್ಧವಾದ ಶಾಸನಗಳನ್ನು ರಚಿಸಿ ಅಲ್ಪದರಲ್ಲಿಯೇ ಕಲ್ಪವನ್ನು ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ. ನಿಜಕ್ಕೂ ಇದು ಸ್ತುತ್ಯಾರ್ಹವಾದ ಕೆಲಸ. ಏಕೆಂದರೆ ಶಾಸನಗಳನ್ನು ಬರೆಯಬೇಕಾದರೆ ಅಲ್ಲಿ ಸ್ಥಳದ ಮಿತಿ ಇರುತ್ತದೆ. ಆ ಸ್ಥಳದ ಮಿತಿಯೊಳಗೆ ಹಾಗೂ ಹೇಳಬೇಕಾದ ವಿಷಯವನ್ನು ನೇರವಾಗಿ ಹೇಳುವಾಗ ಸಾಹಿತ್ಯಿಕ ಅಂಶಗಳನ್ನು ಸೇರಿಸಬೇಕಾದರೆ ಅಂತಹ ಶಾಸನಗಳನ್ನು ಬರೆಯುವ ವ್ಯಕ್ತಿ ಪಂಡಿತನೇ ಇರಬೇಕು. ಅಂದಾಗ ಮಾತ್ರ ಈ ಕೆಲಸ ಮಾಡಲು ಸಾಧ್ಯ. ಶಾಸನಗಳು ಸಾಹಿತ್ಯಿಕವಾಗಬೇಕಾದರೆ ಅದಕ್ಕೆ ಕಾವ್ಯಗುಣ ಅವಶ್ಯಕ. ಅಂತಹ ಕಾವ್ಯಗುಣಗಳು ಶಾಸನಗಳಲ್ಲಿ ಬಳಸಿರುವುದು ಕಂಡು ಬರುತ್ತದೆ. ಕಾವ್ಯಗಳಿರುವಂತೆ ಶಾಸನಗಳು ಇರಲು ಸಾಧ್ಯವಿಲ್ಲ. ಏಕೆಂದರೆ ಕಾವ್ಯದಲ್ಲಿ ಕವಿಗೆ ಬರೆಯಲು ಇರುವಷ್ಟು ಅವಕಾಶಗಳಾಗಲಿ, ಸಂದರ್ಭಗಳಾಗಲಿ ಶಾಸನ ಕವಿಗೆ ಸಿಗುವುದು ವಿರಳ. ಒದಗಿ ಬಂದ ಅವಕಾಶಗಳನ್ನೇ ಸದುಪಯೋಗ ಪಡಿಸಿಕೊಂಡು ಶಾಸನವನ್ನು ಕಾವ್ಯಮಯವಾಗಿ ಮಾಡಬೇಕಾದರೆ ಶಾಸನ ರಚನಕಾರನಿಗೆ ಕಾವ್ಯದ ಪರಿಚಯ ಇದ್ದಿರಲೇಬೇಕು. ಅಂತಹ ಪ್ರತಿಭಾವಂತ ಶಾಸನಕಾರರು ರಚಿಸಿದ ಶಾಸನಗಳು ಸಾಹಿತ್ಯಿಕ ಗುಣಗಳಿಂದ

ಕೂಡಿರಲು ಸಾಧ್ಯ. ಶಾಸನಗಳನ್ನು ರಚಿಸಿದವರಲ್ಲಿ ಎಷ್ಟೋ ಜನ ಕವಿಗುಣವುಳ್ಳವರು ಹಾಗೂ ಕವಿಗಳಾಗಿ ರುವುದರಿಂದ ತಾವು ಹೇಳಬೇಕಾದ ವಿಷಯವನ್ನು ತಮಗೆ ಹಿನ್ನೆಲೆಯಾದ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ ಹೇಳಿದ್ದಾರೆ.

ಶಾಸನಗಳನ್ನು ಸಾಹಿತ್ಯಿಕ ದೃಷ್ಟಿಯಿಂದ ಅಧ್ಯಯನ ಮಾಡುವಾಗ ಎರಡು ಬಗೆಯ ಶಾಸನಗಳು ಎದುರಾಗುತ್ತವೆ. ಒಂದು ಸ್ವತಂತ್ರ ಶುದ್ಧ ಕಾವ್ಯಗಳನ್ನೊಳಗೊಂಡ ಶಾಸನಗಳು. ಎರಡನೆಯದು ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ ಮುಂತಾದ ವಿಷಯಗಳನ್ನು ಸಾಹಿತ್ಯ ಬದ್ಧವಾಗಿ ಹೇಳುವ ಶಾಸನಗಳು.[2] ಇಲ್ಲಿ ನಾವು ಶಾಸನಶಾಸ್ತ್ರದ ದೃಷ್ಟಿಯಿಂದ ಅಧ್ಯಯನ ಮಾಡುವಾಗ ಎರಡನೆಯ ವರ್ಗದ ಶಾಸನಗಳನ್ನು ಆಯ್ಕೆ ಮಾಡಿಕೊಳ್ಳ ಬೇಕಾಗುತ್ತದೆ. ಏಕೆಂದರೆ ಮೊದಲನೆ ವರ್ಗದ ಶಾಸನಗಳು ನಮಗೆ ಶಾಸನಗಳೆನಿಸಿದರೂ ಅದರಲ್ಲಿ ಕಾವ್ಯಗಳೇ ಇರುವುದರಿಂದ ನಮ್ಮ ಅಧ್ಯಯನದ ವ್ಯಾಪ್ತಿಗೆ ಅವು ಅಷ್ಟು ಸಮಂಜಸವೆನಿಸುವುದಿಲ್ಲ. ಹೀಗಾಗಿ ಕಾವ್ಯಶಾಸ್ತ್ರ ರಹಿತವಾದ ಶಾಸನಗಳಲ್ಲಿನ ಸಾಹಿತ್ಯಿಕ ಅಂಶಗಳ ಬಗ್ಗೆ ಮಾತ್ರ ಇಲ್ಲಿ ಗಮನಹರಿಸಲಾಗಿದೆ.

ಶಾಸನ ಹಾಗೂ ಕನ್ನಡ ಸಾಹಿತ್ಯಕ್ಕೆ ಅವಿನಾಭಾವ ಸಂಬಂಧವಿದೆ. **"**ಕನ್ನಡ ಸಾಹಿತ್ಯದ ಪ್ರಥಮ ಘಟ್ಟದ ಅವಶೇಷಗಳೆಂದರೆ ಶಾಸನಗಳು. ಪಂಪಪೂರ್ವ ಯುಗದಲ್ಲಿ ಶ್ರೀಮಂತ ಸಾಹಿತ್ಯ ಕಂಡುಬರುವುದು ಅಥವಾ ಕಾವ್ಯಗುಣವುಳ್ಳ ಬಿಡಿ ಮುಕ್ತಕಗಳು ಕಂಡು ಬರುವುದು ಚಿತ್ರದುರ್ಗದ ತಮಟಕಲ್ಲಿನ ಶಾಸನ ಹಾಗೂ ಶ್ರವಣಬೆಳ್ಗೊಳದ ನಿಷಿದಿ ಶಾಸನಗಳಲ್ಲಿ. ನಿಷಿದಿ ಶಾಸನಗಳನ್ನು ಕನ್ನಡ ನಾಡಿನ ಪ್ರಥಮ ಸಾಹಿತ್ಯ ಪಾಠಗಳೆಂದು ವಿದ್ವಾಂಸರು ಗುರ್ತಿಸಿರುವುದು ಪರಿಶೀಲನಾರ್ಹವಾಗಿದೆ. ಶ್ರವಣಬೆಳ್ಗೊಳದ ಬಿಡಿ ಮುಕ್ತಕಗಳಲ್ಲಿ ಕೆಲವು ಒಳ್ಳೆಯ ಕಾವ್ಯದ ತುಣುಕುಗಳೇ ಆಗಿವೆ.**"**[3]

ಕ್ರಿ.ಶ.ಏಳನೆಯ ಶತಮಾನದ ಬಾದಾಮಿ ಶಾಸನವು ತ್ರಿಪದಿ ರೂಪವನ್ನು ಒಳಗೊಂಡಿರುವುದನ್ನು ನೋಡಿದರೆ ಕನ್ನಡದ ಕಾವ್ಯಗಳು ದೊರೆಯುವುದಕ್ಕಿಂತ ಪೂರ್ವದಲ್ಲಿಯೇ ಶಾಸನಗಳಲ್ಲಿ ಕಾವ್ಯಾತ್ಮಕ ಅಂಶಗಳು ದೊರೆತಿರುವುದು ಕಂಡುಬರುತ್ತದೆ. ಈ ವಾಸ್ತವ ಅಂಶಗಳನ್ನು ಗಮನಿಸಿದಾಗ ಶಾಸನಗಳು ಸಾಹಿತ್ಯಿಕ ಅಧ್ಯಯನಕ್ಕೆ ಅರ್ಹವಾದವುಗಳು ಎಂಬುದು ಮನದಟ್ಟಾಗುತ್ತದೆ.

ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಅಧ್ಯಯನಕ್ಕೆ ಆಯ್ದುಕೊಂಡಾಗ ಈ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಸಾಹಿತ್ಯಿಕವಾದ ಅಂಶಗಳು ದೊರೆತಿರುವುದನ್ನು ಕಾಣುತ್ತೇವೆ. ಶಾಸನ ಕವಿಗಳ ಜಾಣ್ಮೆ, ಪಾಂಡಿತ್ಯದ ಫಲದಿಂದ ಈ ಶಾಸನಗಳು ಸಾಹಿತ್ಯದ ಅಧ್ಯಯನಕ್ಕೆ ತೊಡಗಿಸಿಕೊಳ್ಳಲು ನಮ್ಮನ್ನು ಕೈಬೀಸಿ ಕರೆಯುತ್ತವೆ. ಇಲ್ಲಿನ ಶಾಸನಗಳಲ್ಲಿರುವ ಸಾಹಿತ್ಯ ಬದ್ಧವಾದ ಗುಣಗಳನ್ನು ನೋಡಿದರೆ ಯಾವುದೋ ಒಬ್ಬ

ಕವಿಯ ಕವಿತೆಯ ಸಾಲುಗಳನ್ನು ನೆನಪಿಗೆ ತರುತ್ತವೆ. ಕೊಪ್ಪಳ ತಾಲೂಕಿನ ಅಳವಂಡಿಯಲ್ಲಿ ದೊರೆತ ಶಾಸನದಲ್ಲಿನ ಪಾಠವನ್ನು ನೋಡಿದರೆ

"ಮಹಾಬ್ರಾಹ್ಮಣ್ಣಂ ಚತುಸ್ಸಮುದ್ರ ಪರಿ...ಮಣ್ಡಳಮಣ್ಡಿತರ್। ಷಡ್ಗುಣಾಖಣ್ಡಿತರ್
ಯಮನಿಯಮ ಸ್ವಾಧ್ಯಾಯ ಧ್ಯಾನ ಮೋನಾನುಷ್ಠಾಣ ಪರಾಯಣರ್ ॥
ಅಘಘನ ಸಮೀರಣರ್।
ಚತುರ್ವ್ವೇದಾದ್ವ್ಯಾದಸ ಧರ್ಮ್ಮಶಾಸ್ತ್ರ ಪರಿವ್ಯಾನಿಗಳ್। ಅಲಸ್ಯಾಭಿಮಾನಿಗಳ್
ಪ್ರಭುಮಂತ್ರೋತ್ಸಾಹ ಶಕ್ತಿತ್ರಯ ವಿರಾಜಿತರ್। ಭುವನಜನ ಪೂಜಿತರ್
ಲೋಕ ವಿಖ್ಯಾತರ್। ಭೂವಳಯ ಪೂತರ್। ಮನುಮಾರ್ಗ್ಗ ಚರಿತರ್। ನಿಶ್ಶೇಷ ದುರಿತರ್।
ಉಜಿತಾಚಾರರ್।
ಅನ್ಯಾಯ ದೂರರ್ ಇನಸೂನು ಸತ್ಯರ್। ಶಿಷ್ಟ ಸಂಗತ್ಯರ್। ಅಭಿನವ ಯುಧಿಷ್ಠರರ್।
ದುಷ್ಟಜನ ನಿಷ್ಠೂರರ್। ಮಿತ್ರೋಪಕಾರಿಗಳ್। ಶತೃ ಸಂಹಾರಿಗಳ್........."[4]

ಹೀಗೆ ಈ ಶಾಸನವನ್ನು ಓದುತ್ತಾ ಹೋದಂತೆ ನಮಗೆ ಕವಿರಾಜ ಮಾರ್ಗಕಾರನ ಕಾವ್ಯದ ಸಾಲುಗಳು ನೆನಪಾಗುತ್ತವೆ. ಶ್ರೀವಿಜಯನು ಕನ್ನಡಿಗರನ್ನು ಕುರಿತು ಹೇಳಿದ ಪದ್ಯದ ಧಾಟಿಯಲ್ಲಿಯೇ ಈ ಶಾಸನವು ರಚಿತವಾಗಿರುವುದನ್ನು ನೋಡಬಹುದಾಗಿದೆ.

ಸುಭಟರ್ಕಳ್ ಸುಕವಿಗಳ್ ಸು
ಪ್ರಭುಗಳ್ ಚಲುವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳುತ್ಯುಗ್ರರ್
ಗಂಭೀರಚಿತ್ತರ್ ವಿವೇಕಿಗಳ ನಾಡವರಗಳ್–

ಈ ಪದ್ಯದ ಮಾದರಿಯಲ್ಲಿಯೇ ಮೇಲಿನ ಶಾಸನದಲ್ಲಿನ ಪಾಠವು ರಚಿತವಾಗಿರುವುದು ಕಂಡು ಬರುತ್ತದೆ. ಈ ಶಾಸನವನ್ನು ಬರೆದ ಮಲ್ಲನು ಕವಿರಾಜಮಾರ್ಗ ಕೃತಿಯನ್ನು ಓದಿರಲೇಬೇಕು. ಇಂತಹ ಕಾವ್ಯಮಯವಾದ ಶಾಸನ ರಚನೆಗೊಳ್ಳಲು ಕಾವ್ಯದ ಪ್ರಭಾವ ಆದಾಗ ಮಾತ್ರ ಇಂತಹ ಶಾಸನಗಳು ಹುಟ್ಟಿಕೊಳ್ಳಲು ಹೆಚ್ಚಿನ ಸಾಧ್ಯತೆಗಳಿರುತ್ತವೆ. ಜೊತೆಗೆ ಹಲವು ಪಂಡಿತಮಯವಾದ ಕೃತಿಗಳನ್ನು ಈತ ಜೀರ್ಣಿಸಿಕೊಂಡಿರಬೇಕು, ಏಕೆಂದರೆ ಸಾಮಾನ್ಯನಿಗೆ ಇಂತಹ ಕಾವ್ಯ ಶೈಲಿಯ ಶಾಸನ ನಿರೂಪಿಸಲು ಸಾಧ್ಯವಾಗುವುದಿಲ್ಲ.

ಶಾಸನಕಾರರು ಶಾಸನವನ್ನು ಬರೆಯುವಾಗ ಅವರು ಹೇಳಬೇಕಾದ ವಿಷಯದ ಜೊತೆಗೆ ಅಲ್ಲಿ ದಾನ ನೀಡಿದವರ ಬಗೆಗೆ ವರ್ಣನೆಯನ್ನು ಮಾಡಿ ಅವರ ಮನಸ್ಸನ್ನು ಸಂತೋಷಪಡಿಸಬೇಕೆಂಬ ಹಂಬಲ ಇರುತ್ತಿತ್ತು. ಅದಕ್ಕಾಗಿ ಶಾಸನ ಕವಿಗಳು

ರಾಜನು ದಾನ ನೀಡಿರುವುದರ ಬಗೆಗೆ ಮೆಚ್ಚುಗೆಯ ಮಾತುಗಳನ್ನು ಬರೆಯುತ್ತಿದ್ದರು. ಇಂತಹ ಶಾಸನಗಳು ಕನ್ನಡ ನಾಡಿನಲ್ಲಿ ಹೇರಳವಾಗಿ ದೊರೆಯುತ್ತವೆ. ಇಂತಹ ಅಂಶಗಳು ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಇರುವುದು ನಮಗೆ ತಿಳಿದ ವಿಷಯ. ಅಲ್ಲಿ ರಾಜರ ಆಶ್ರಯದಲ್ಲಿದ್ದ ಕವಿಗಳು ರಾಜನನ್ನು ಇನ್ನೊಂದು ಪಾತ್ರದ ಜೊತೆಗೆ ಹೋಲಿಕೆ ಮಾಡುವುದರ ಮೂಲಕ ರಾಜರ ಗುಣಗಾನವನ್ನು ಮಾಡುತ್ತಿದ್ದರು. ಆ ಮೂಲಕ ರಾಜರ ಋಣವನ್ನು ತೀರಿಸುವೆವೆಂಬ ಭಾವನೆ ಕವಿಗಳಲ್ಲಿದ್ದಿ ರಬೇಕು. ಕಾವ್ಯಕೃತಿಗಳಲ್ಲಿ ರಾಜರ ವರ್ಣನೆ ಮಾಡಲು ಅವಕಾಶಗಳು ಹೆಚ್ಚು. ಆದರೆ ಶಾಸನಗಳಲ್ಲಿ ಹೇಳಬೇಕಾದ ವಿಷಯದ ಜೊತೆಗೆ ದಾನಿಯ ಬಗ್ಗೆ ವರ್ಣನೆ ಮಾಡುವುದು ಕಷ್ಟದ ಕೆಲಸ. ಅಂತಹದರಲ್ಲಿಯೂ ಸಹ ದಾನಿಯ ವರ್ಣನೆ ಮಾಡಿರುವ ಶಾಸನ ಕವಿಗಳು ನಮ್ಮಲ್ಲಿ ಆಗಿ ಹೋಗಿದ್ದಾರೆ. ಅಂತಹ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿಯೂ ಕೂಡ ಲಭಿಸಿವೆ. ಕ್ರಿ.ಶ.1190ರ ಮಾದಿನೂರ ಶಾಸನ[5]ದಲ್ಲಿ ಚಾಳುಕ್ಯರ ಆಹವಮಲ್ಲನ ಕುರಿತ ವರ್ಣನೆ ಈ ರೀತಿ ಇದೆ.

ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಪ
ರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಪಂಚಾಲಮಧೇಭ
ಪಂಚಾನನಂ ಧಾರಾನಗರ ಗರುಡ। ಕಾಂಚೀಪುರ ಸಂಹಾರಕಾರಣ ರಟ್ಟರಘಟ್ಟ
ಗೂರ್ಜ್ಜರಭಯಜ್ವರ। ಶಾಳಪಟ್ಟಣ ಧೂಮಕೇತನ। ರಣರಂಗಭೀಮ
ನಿಜಭುಜ ಚಕ್ರವರ್ತ್ತಿ। ನೂರ್ಮ್ಮಡಿತೇಜಂ ಶ್ರೀ ಮದಾಹವಮಲ್ಲದೇವರು

ಇಲ್ಲಿ ಬಳಕೆಗೊಂಡಿರುವ ವಿಶೇಷಣಗಳು ಕಾವ್ಯಗಳಲ್ಲಿ ಬಳಸಿದ ವಿಶೇಷಣಗಳಂತೆ ಶೋಭಿಸುತ್ತವೆ. ರಾಜನು ಸಹ ತನ್ನ ಹೆಸರು ಹಾಗೂ ಖ್ಯಾತಿಯು ಚಿರಕಾಲ ಉಳಿಯಬೇಕೆಂಬ ಆಸೆಯಿಂದ ಈ ರೀತಿಯ ಶಾಸನಗಳನ್ನು ಬರೆಸಿದ್ದರೂ ಇರಬಹುದು.

ಯಲಬುರ್ಗಾ ತಾಲೂಕಿನ ಮುಧೋಳು ಗ್ರಾಮದಲ್ಲಿ ದೊರೆತ ಕ್ರಿ.ಶ.1154ರ ಶಾಸನ[6]ವನ್ನು ನೋಡಿದರೆ ಪಂಪನ ಕಾವ್ಯದ ಸಾಲುಗಳು ಇಲ್ಲಿ ಇಣುಕಿ ಹಾಕಿದಂತೆ ಕಂಡುಬರುತ್ತದೆ.

ಶ್ರೀಮದಯ್ಯೂರ್ವ್ವರ ಪರಾಕ್ರಮವೆನ್ತೆಂದಡೆ ಬಲದೊಳು ಬಾಲಿಯಂ ಚಲದೊಳು
ದುರ್ಯ್ಯೋಧನನಂ ಸತ್ಯದೊಳು ಧರ್ಮ್ಮಪುತ್ರನಂ ಸಾಹಸದೊಳು ಭೀಮನಂ।
ಪಾರಕ್ರಮದೊಳರ್ಜುನನಂ। ಅಜೀತದೊಳು ಸಹದೇವನಂ। ಸೌಚದೊಳು ಗಾಂಗೇಯನಂ।

ತೇಜದೊಳಾದಿತ್ಯನಂ।ಭೋಗದೊಳಿಂದ್ರನಂ।ತ್ಯಾಗದೊಳು ಕರ್ಣ್ನನಂ। ಕೊಪದೊಳಗ್ನಿಯಂ।
ಬಲ್ಲಾಳ್ತನದೊಳು ಜವನಂ। ಪೆಂಪಿಂದಾಕಾಶಮಂ।ಬಿಣ್ಪಿಂ ಧರಣಿಯಂ।
ಗುಣ್ಪಿಂ ಮಹಾಸ
ಮುದ್ರಮಂ ಪೋಲ್ವಯ್ಯೂರ್ವ್ವರ ಮಹಿಮೆಯೆಂತೆಂದಡೆ

ಎಂದು ಉಲ್ಲೇಖಿಸಿರುವ ಶಾಸನದ ಸಾಲುಗಳನ್ನು ಓದುತ್ತಾ ಹೋದಂತೆ ನಮಗೆ ಪಂಪನ ವಿಕ್ರಮಾರ್ಜುನ ವಿಜಯದ

"ಚಲದೊಳ್ ದುರ್ಯೋಧನಂ ನನ್ನಿಯೊಳನಿತನಯಂ ಗಂಡಿನೊಳ್
ಭೀಮಸೇನಂ
ಬಲದೊಳ್ ಮುದ್ರೇಶನ್ ಅತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಬೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ
ಧರ್ಮದೊಳ್ನಿ
ರ್ಮಲಚಿತ್ತಂ ಧರ್ಮಪುತ್ರನ್ ಮಿಗಲ್ ಇವರ್ಗಳಿನೀ ಭಾರತಂ
ಲೋಕಪೂಜ್ಯಂ"
(ಪಂ.ಭಾ. –14– 64)

ಈ ಸಾಲುಗಳ ಅನುಕರಣೆಯಂತಿದೆ. ಒಂದು ರೀತಿಯಲ್ಲಿ ಈ ಶಾಸನ ಪಂಪನ ಕಾವ್ಯದ ಸಾಲುಗಳನ್ನು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ನೇರವಾಗಿ ತೆಗೆದುಕೊಂಡಂತಿದೆ.

ಯಲಬುರ್ಗಾ ತಾಲೂಕಿನ ಕುಕನೂರಿನಲ್ಲಿರುವ ಕ್ರಿ.ಶ.1178ರ ಶಾಸನ[7]ದಲ್ಲಿ ಕಾವ್ಯ–ಕೃತಿಗಳಲ್ಲಿ ಬರುವಂತಹ ಸಮುದ್ರವರ್ಣನೆಯ ಮಾದರಿಯಲ್ಲಿಯೇ ಈ ಶಾಸನದಲ್ಲಿ ಸಮುದ್ರ ವರ್ಣನೆ ಬಂದಿರುವುದನ್ನು ಕಾಣಬಹುದಾಗಿದೆ. ಸಮುದ್ರ ವರ್ಣನೆಯಂತಹ ವರ್ಣನೆಗೆ ಶಾಸನ ರಚನಕಾರನು ಕೈಹಾಕಬೇಕಾದರೆ ಆತನು ಖಂಡಿತವಾಗಿ ಪಾಂಡಿತ್ಯವನ್ನು ಹೊಂದಿದವನಾಗಿರಲೇಬೇಕು. ಇಲ್ಲದಿದ್ದರೆ ಇಂತಹ ಕಾರ್ಯಕ್ಕೆ ಕೈಹಾಕಲು ಸಾಧ್ಯವಿಲ್ಲ. ಈ ಶಾಸನದಲ್ಲಿ ಸಮುದ್ರದ ವರ್ಣನೆಯ ನಂತರ ಕುಂತಳಾ ದೇಶದ ವರ್ಣನೆ ಮೂಡಿಬಂದಿದೆ.

"ನಮಾಮಿಯಾಮಿ ನೀನಾಥ ಲೇಖಾಲಂಕೃತ ಕುಂತಳಾಂ ಭವಾನೀಂ ಭವಸನ್ತಾಪ ನಿರ್ವ್ವಾಪಣ ಸುಧಾನದೀಂ॥ ನೀಲಸ್ನಿಗ್ಧ ಗಿರೀಂದ್ರ ಜಾಳಕಲತಾ ಸಂಬಂಧ ಬದ್ಧ ಸೃಹಶ್ಚಂಡಾಂಶುದ್ಯುತಿ ಶುಭ್ರದಂಷ್ಟ್ರವದನ ಪ್ರೋತ್ಸರ್ಪ್ಪದುಗ್ರಧ್ವನಿಃ ಲೀಲಾದತ್ತಕರ ಪ್ರಹಾರದಳಿತೋದ್ದಾಮ ದ್ದಿಪೇಂದ್ರ[ಃ] ಶ್ರಿಯಂ ದಿಶ್ಯಾದ್ವೋಗ್ನಿಶಿಖಾಪಿಶಂಗ ನಯನಶ್ಚಂಡೀಶ ಪಂಚಾನನಃ॥ ಭಾಳಾಕ್ಷದ್ಯುತಿ ಬಾಡವಾಗ್ನಿಗೆ ಜಟಾಜೂಟಂ ಪ್ರವಾಳಕ್ಕೆ ಸರ್ಪ್ಪಾಳಂಕಾರ ಮದಾಹಿಕೋಟಿಗೆ ಕರೋಟೀಮಾಲೆ ಶಂಖಾಳಿಗಾಭೀಳದ್ವಾನವುದೀರ್ಣ್ನ ಘೋಷಕೆಣಿಯಾಗಲು(ಲ್)

ಕಾಳಿಕಾಭೈರವಶ್ರೀಲೀಲಾಕ್ರಿತಿವೋಲ್ಮನಂಗೊಳಿಸಿತೋ ರತ್ನಾಕರಂ ಶ್ರೀಕರಂ॥ ಮತ್ತಂ॥ ಸಿರಿಯ ತವರ್ಮ್ಮನೆ ಹವಳದ ಹರವರಿ ಮುತ್ತುಗಳ ಹುಟ್ಟಜಂ ಚಂದ್ರನ ತಾಯಿ ಹರಿಯಿರ್ಪ್ಪ ಸೆಜ್ಜೆವನೆ ರತ್ನರಾಶಿಯಮರ್ದಿನ ನಿಧಾನವಿಳೆವೆಣ್ಣುಡೆನೊಲ್॥ ಎನೆ ಚಲ್ವಿಂ ಲವಣಾಬ್ಧಿ ಸುತ್ತುವಿರೆ ಮುನ್ ದೈತ್ಯರ್ಕ್ಕಳಂ ದೈತ್ಯಮರ್ದ್ದನಿ ಕಾಯ್ಪಿಂ ಪಿಡಿದೊತ್ತಿ ಪಿಂಡುತಿರೆ ತನ್ಮೇದೋರಸಂ ತೀವಿ ಮೇದಿನಿ ಯೆಂಬಂಕವುನಾಳ್ದಿ ಳಾವಳಯದೊಳು ಶ್ರೀ ಭಾರತೋರ್ಬ್ಬೀವಿಳಾಸಿನಿ ಗೊಪ್ಪಂಬಡೆದಿರ್ದ ಕುನ್ತಳದವೊಲು ಶ್ರೀ ಕುಂತಳಂ ಶೋಭಿಕುಂ॥"[8]

ಈ ಶಾಸನವನ್ನು ಗಮನಿಸಿದರೆ ಇದು ಪ್ರೌಢವಾದ ಚಂಪೂ ಕಾವ್ಯದ ಶೈಲಿಯನ್ನು ಅನುಸರಿಸಿದಂತೆ ಕಾಣುತ್ತದೆ. ಹಳೆಗನ್ನಡ ಕಾವ್ಯಗಳಲ್ಲಿನ ಈ ತೆರನಾದ ವರ್ಣನೆ ಇಲ್ಲಿ ಕಾಣಿಸಿಕೊಂಡು ಸಾಹಿತ್ಯದೊಂದಿಗೆ ಶಾಸನವು ಹೊಂದಿದ್ದ ಸಂಬಂಧವನ್ನು ಕೊಪ್ಪಳ ಜಿಲ್ಲೆಯ ಶಾಸನಗಳು ಸಾರಿ ಸಾರಿ ಹೇಳುವಂತಿವೆ.

ಕುಷ್ಟಗಿ ತಾಲೂಕಿನ ಹೆಸರೂರು ಗ್ರಾಮದಲ್ಲಿ ದೊರೆತ ಕ್ರಿ.ಶ.1104ರ ಶಾಸನ[9]ದಲ್ಲಿ ಒಕ್ಕಲುಗಳನ್ನು ಹಾಗೂ ಊರೊಡೆಯರನ್ನು ಕಾವ್ಯಮಯವಾಗಿ ವರ್ಣಿಸಿರುವುದು ಕಂಡು ಬರುತ್ತದೆ.

ರಾಜಧಾನಿ ಕಲ್ಯಾಣಪುರದ ನೆಲೆವಿಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿ[ರೆ]
ಸಮಸ್ತ ಗುಣಗಣಾಳಂಕ್ರಿತ ಚಾರುಚಾರಿತ್ರ ನಯವಿನಯ ಗುಣಸೀಳ (ಸಂ)ಪನ್ನರು
ಸುಜನಪ್ರಸನ್ನರು। ಚೋಳ ಲಾಳ ಮಾಳವ ಕಳಿಂಗ ಕಾಸ್ಮೀರ ಮಗಧ ಗು[ರ್ಜ್ಜರ]ಗೊಲ್ಲ
ಬರ್ಬ್ಬರ ಕೊಂಕಣಾದಿ ಸಮಸ್ತ ನ್ರಿಪಲಲಾಟ ಸೇಂಧೂರ ಮುದ್ರಾಂಕಿತ ಹ..ರು ದುರ್ಜ್ಜನ ಭಯಂಕರರು ಚಾಳುಕ್ಯ ಕಂಣ್ಠೀರವಂಗೆ ಮಲಪಕಂಣ್ಠೀಕರಂ ಲೋಕಾ.
ಮಾತ್ರದೊಳ್ ನಿಂಕಮಾರ್ಪ್ಪ ಬಲ್ಲಾಳುಗಳು। ಬೃತ್ಯಚಿಂತಾಮಣಿಗಳು। ರಾ(ಯ) ನಾರಾಯಣಂಗೆಜಿಗುವ ಸುಮಂಡಳ ಪರಮಂಡಳದ ಮಣಿಮಕುಟ ಬದ್ದಮ(ಂಡ)ಳೇಶ್ವರ
................

ಹೀಗೆ ವರ್ಣಿಸಿರುವುದನ್ನು ನೋಡಿದರೆ ಚಕ್ರವರ್ತಿಗಳ ಆಸ್ಥಾನದಲ್ಲಿದ್ದ ಕವಿಗಳು ಅರಸರನ್ನು ಕುರಿತು ಮಾಡುತ್ತಿದ್ದ ವರ್ಣನೆಯನ್ನೇ ಬಹಳಷ್ಟು ಹೋಲುತ್ತದೆ. ದಾನ ನೀಡುವವರನ್ನು ಹೊಗಳಿ ಉತ್ತುಂಗದಲ್ಲಿರಿಸಿರುವ ದಾಖಲೆಗಳಾಗಿವೆ ಇಂತಹ ಶಾಸನಗಳು

ನೆರೆಯಂಗಲ್ಪನ್ನೆರಡುಂ ಧರಾಂಗನಾ ತಿಳಕಮೆನಿಸಿ ಬೆಳ್ವಲ
ನಾಡೊಳು ಕರಮೊಪ್ಪಿ ತೋರ್ಕ್ಕುಮವಱೊಳ್ದೊರೆವೆತ್ತ
ಮಹಾಗ್ರಹಾರವಿಟ್ಟಿಗೆಯೆಸೆಗು॥
ಇದು ಕನಕಾದ್ರಿಯಂತೆ ವಿಬುಧಾಶ್ರಯಮಿಂತಿದು ನೋಡ ನಾಗಲೋಕದ
ವೊಲನಂತ
ಭೋಗಿ ಜನಸೇವಿತ
ಮಿಂತಿದು ದುರ್ಗ್ಗವಾರ್ದ್ಧಿಯಂದದೆ ಪುರುಷೋತ್ತಮ ಸ್ಥಿತಿಕರಂ
ಧನದಾಚಳದಂದದಿಂದಮಿಂತಿದುವೆ।
ಮಹೇಶ್ವರಾವಸ್ಥೆ ಮೆನ್ನದರಾರೊತದಗ್ರಹಾರಮ ॥ ಆಡುವ ಸೋಗೆ ಪಾಡುವಳಿಗಳು
ನಡದಾಡುವಹಂಸೆ
ಪಂಚಮಂ ಬಾಡುವಗಣ್ಣಗೋಗಿಲೆ ಕೆಲನ್ನುಡಿದಂತುಟನಾಗಳಂತೆ
ಮಾತಾಡುವ
ರಾಜಕೀರವೊಲವರ್ಕ್ಕಿಸಲಾಱದಗಲ್ದು ಪೂವಿನಂಬಾಡೆ ಲತಾವನಂಬುಗುವ
ನಲ್ಲವರಲ್ಲಿಯ ನಂದ ನಂಗಳೊಳ್। ಸುರತರು ನನ್ದನಕ್ಕಿದಱ ನಂದನದಿಂ
ಭಗೆ
ಪೋಪುವಾ
ಮಹೇಶ್ವರನ ಜಟಾಗ್ರದಿಂದಿಳಿದ ಗಂಗೆಯಕಾಲಿದಱೊಪ್ಪಿ ಬಪ್ಪ ನೀರ್ವ್ವರಿ
ಘನಬೃಂದಮಿಂತದಱ
ಪೆರ್ಗ್ಗೆಱೆಯಲ್ಲಿಯೆ ತೀವಿ ನೀರ್ಗ್ಗಳಂ ಧರೆಗನುರಾಗದಿಂ ಕಱೆವುದವಕ್ಕುವೆನಿಪ್ಪುದು
ನೋರ್ಪ್ಪಡೀಪುರ"[10]

ಎನ್ನುವ ವರ್ಣನೆ ತೀರಾ ಕಾವ್ಯಾತ್ಮಕವಾಗಿದ್ದು ಓದುಗರ ಮನಸ್ಸಿಗೆ ಪ್ರಫುಲ್ಲವಾದ ಆನಂದವನ್ನು ನೀಡುತ್ತದೆ. ಹೀಗೆ ಇನ್ನು ಹಲವಾರು ಇಂತಹ ವರ್ಣನೆಗಳು ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಕಂಡುಬರುತ್ತವೆ.

ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಸಮಗ್ರವಾಗಿ ತೆಗೆದುಕೊಂಡು ಸಾಹಿತ್ಯದ ಅಧ್ಯಯನಕ್ಕೆ ಒಳಪಡಿಸಿಕೊಂಡಾಗ ನಮಗೆ ಒಂದು ಮಾಹಿತಿ ಸ್ಪಷ್ಟವಾಗುತ್ತದೆ. ಕೊಪ್ಪಳ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹಾಗೂ ಯಲಬುರ್ಗಾ ತಾಲೂಕಿನ ಕೆಲವು ಶಾಸನಗಳಲ್ಲಿ ಸಾಹಿತ್ಯಿಕ ಅಂಶಗಳು ಹೇರಳವಾಗಿ ದೊರೆಯುತ್ತವೆ. ಗಂಗಾವತಿ ಹಾಗೂ ಕುಷ್ಟಗಿ ತಾಲೂಕಿನ ಶಾಸನಗಳಲ್ಲಿ ಸಾಹಿತ್ಯಿಕ ಅಂಶಗಳು ದೊರೆಯುತ್ತವಾದರೂ ಅವುಗಳ ಪ್ರಮಾಣ ಕಡಿಮೆ. ಈ ಶಾಸನಗಳಲ್ಲಿ ದೊರೆತ ಸಾಹಿತ್ಯಿಕ ಅಂಶಗಳನ್ನು ಗಮನಿಸಿದರೆ ಸಾಹಿತ್ಯದ ದಟ್ಟವಾದ ಪ್ರಭಾವ ಶಾಸನಗಳ ಮೇಲೆ ಆಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ತಿರುಳ್ಗನ್ನಡದ ಪ್ರದೇಶವಾದ

ಕೊಪ್ಪಳ ನಾಡು ಸಾಹಿತ್ಯ ದೃಷ್ಟಿಯಿಂದ ಅತ್ಯಂತ ಶ್ರೀಮಂತವಾದ ಪ್ರದೇಶವಾಗಿತ್ತು. ಆದ್ದರಿಂದ ಇಲ್ಲಿ ರಚನೆಗೊಂಡ ಶಾಸನಗಳು ಕೂಡ ಸಾಹಿತ್ಯದ ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆದು ಬಂದಿವೆ. ಈ ಜಿಲ್ಲೆಯಲ್ಲಿ ದಾನ ಶಾಸನಗಳದೇ ಸಿಂಹಪಾಲು. ದಾನ ಶಾಸನಗಳನ್ನು ರಚಿಸುವಾಗ ಶಾಸನ ಕವಿಗಳು ತಮ್ಮ ಜಾಣ್ಮೆ ಹಾಗೂ ವಿದ್ವತ್ತಿನಿಂದ ಶಾಸನ ಪಾಠಗಳನ್ನು ಸಾಹಿತ್ಯ ಬದ್ಧವಾಗಿ ಬರೆದು ಈ ಭಾಗದಲ್ಲಿನ ಶಾಸನಗಳನ್ನು ಪ್ರೌಢತೆಯಿಂದ ಮೆರೆಯುವಂತೆ ಮಾಡಿದ್ದಾರೆ.

**ಶಾಸನ ಗದ್ಯ :**

ನಮ್ಮ ಬಹುಪಾಲು ಶಾಸನಗಳು ಗದ್ಯದಲ್ಲಿರುವುದನ್ನು ಕಾಣುತ್ತೇವೆ. ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನವು ಕೂಡ ಗದ್ಯದಲ್ಲಿ ರುವುದನ್ನು ಕಾಣಬಹುದಾಗಿದೆ. ಗದ್ಯವನ್ನು ವಂಶ ವರ್ಣನೆಗಾಗಿ, ಕೊಟ್ಟ ದಾನದ ವಿವರಣೆಗಾಗಿ, ಪ್ರಶಸ್ತಿಗಾಗಿ ಮುಂತಾದ ಸಂದರ್ಭಗಳಲ್ಲಿ ಹೆಚ್ಚು ಬಳಸಲಾಗಿದೆ. ಚಂಪೂ ಕಾವ್ಯಗಳ ಪ್ರಭಾವದಿಂದಾಗಿ ಶಾಸನಗಳಲ್ಲಿ ಪದ್ಯಗಳ ಮಧ್ಯದಲ್ಲಿ ಗದ್ಯವು ಬರೆಯಲ್ಪಟ್ಟಿದೆ. ಇಲ್ಲಿ ಬಳಕೆಯಾದ ಗದ್ಯವು ಪ್ರೌಢವಾದ ಭಾಷೆಯಾಗಿದೆ. ಆದರೆ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳಲ್ಲಿ ಬರೆದ ಗದ್ಯವು ಸರಳವಾದ ಆಡುಮಾತಿನ ಸೊಗಡನ್ನು ಒಳಗೊಂಡ ಗದ್ಯವಾಗಿದೆ. "ಶುದ್ದ ಸಾಹಿತ್ಯದಲ್ಲಿ ಗದ್ಯಕ್ಕೆ ಒದಗುವ ಈ ಸ್ಥಿತಿ ಶಾಸನಗಳಲ್ಲಿ ಒದಗಲಿಲ್ಲ. ಪೂರ್ಣವಾದ ಗದ್ಯದಲ್ಲಿರುವ ಶಾಸನಗಳು ಸಂಖ್ಯೆಯ ದೃಷ್ಟಿಯಿಂದ ಗೌಣವಾಗಿದ್ದರೂ ಶಾಸನಗಳಲ್ಲಿ ಗದ್ಯದ ನಾನಾ ರೂಪಗಳನ್ನು ಕಾಣಬಹುದು. ಗದ್ಯ ತನ್ನ ನಿಜವಾದ ಸ್ವರೂಪದಲ್ಲಿ ಕಾಣಿಸಿಕೊಂಡಿರುವುದು ಶಾಸನಗಳಲ್ಲಿಯೇ. ಪ್ರೌಢವಾದ ಗದ್ಯ ಬೇಕೆ? ಸಂಸ್ಕೃತ ಗದ್ಯ ಬೇಕೆ? ಪಡೆಸಾರ ಗದ್ಯ ಬೇಕೆ? ದೇಶಿ ಚೆಲುವಿನಿಂದ ಕೂಡಿದ ಗದ್ಯ ಬೇಕೆ? ಈ ಎಲ್ಲವೂ ಶಾಸನಗಳಲ್ಲಿ ದೊರೆಯುತ್ತದೆ. ಶುದ್ದ ಅಥವಾ ಪಕ್ಕಾ ಸಾಹಿತ್ಯದಲ್ಲಿ ಇಷ್ಟೊಂದು ವೈವಿಧ್ಯಮಯವಾದ ಗದ್ಯವನ್ನು ಕಾಣಲಾರೆವು."[11]

ಕೊಪ್ಪಳ ಜಿಲ್ಲೆಯಲ್ಲಿನ ಶಾಸನಗಳಲ್ಲಿಯೂ ಗದ್ಯದ ಬಳಕೆಯಾಗಿ ರುವುದನ್ನು ಕಾಣಬಹುದಾಗಿದೆ. ಇಲ್ಲಿಯೂ ಕೂಡ ರಾಜರ ವಂಶಾವಳಿಯನ್ನು ಹೇಳುವಾಗ, ದಾನ ನೀಡಿದ ಭೂಮಿಯ ಮೇರೆಯನ್ನು ಹೇಳುವಾಗ, ದಾನದ ವಿವರಗಳನ್ನು ಹೇಳುವ ಸಂದರ್ಭದಲ್ಲಿ ಗದ್ಯದ ಬಳಕೆ ಅಧಿಕವಾಗಿರುವುದನ್ನು ಕಾಣುತ್ತೇವೆ. ಇಲ್ಲಿಯ ಶಾಸನದಲ್ಲಿನ ಗದ್ಯದ ಇನ್ನೊಂದು ವಿಶೇಷತೆಯೆಂದರೆ ಗಂಗಾವತಿ ತಾಲ್ಲೂಕಿನ ಆನೆಗೊಂದಿಯಲ್ಲಿ ದೊರೆತ ತಾಮ್ರ ಶಾಸನ[12]ವೊಂದರಲ್ಲಿ ಕುಂಬಾರ ಜಾತಿಯ ಉಗಮದ ಕುರಿತ ಕಥೆಯನ್ನು ಸುದೀರ್ಘವಾಗಿ ಬರೆದಿರುವುದು. ಈ ಶಾಸನದ ಆರಂಭದಲ್ಲಿ ಕುಂಬಾರ ಜಾತಿ ಹುಟ್ಟಲು ಕಾರಣವಾದ ಕಥೆಯೊಂದಿಗೆ ಶಿವಪಾರ್ವತಿಯರ ವಿವಾಹದ ಕಥೆಯನ್ನು ಹೇಳಲಾಗಿದೆ. ನಂತರದಲ್ಲಿ ಗಿರಿಜೆಯ

ವಿವಾಹ ಮತ್ತು ಅಮೃತ ಮಥನದ ಕಥೆಯನ್ನು ಸಹ ಒಳಗೊಂಡಿದೆ. ಈ ಶಾಸನದಲ್ಲಿ ಬಳಕೆಗೊಂಡ ಗದ್ಯದ ಮಾದರಿಯನ್ನು ಈ ಮುಂದಿನಂತೆ ನೋಡಬಹುದಾಗಿದೆ.

ಸ್ವಸ್ತಿ ಶ್ರೀಮತು ಕುಂಬೇಶ್ವರದೇವರ ಶ್ರೀಪಾದಪದ್ಮಾರಾಧಕರುಮಪ್ಪ ಐಸಾ
ವಂತರ ಪ್ರಸಸ್ತಿಯೆಂತೆದಡೆ । ಅವಧಾರಿಸಿ ಸ್ವಾಮಿಗಳಿರಾ। ಅಂಗಹೀನನುಂ
ಕುಲಹೀನಾಸ್ಥಾನಕ್ಕೆ ಹೊರಗು। ವುತ್ತಮ ಸಮಯಕ್ಕೆ ನಮ
ಸ್ಕಾರವಂ ಮಾಡಿದೆವು। ಅವಧಾರಿಸಿ ಸ್ವಾಮಿಗಳಿರಾ। ಚಲವಂ ಕೊಂಡಾ
ಡುವ ಸ್ವಾಮಿಗಳಾವಧಾರಿಸಿ। ಬಲುಹಂ ಕೊಂಡಾಡುವ ಸ್ವಾಮಿಗಳವ(ಧಾ)
ರಿಸಿ। ಸ್ವಯಂಬು ಸೆಟ್ಟಿಗಳ(ವ)ಧಾರಿಸಿ । ಪಸುಂಬೆಸೆಟ್ಟಿ ಸ್ವಾಮಿಗಳ
(ವಧಾ)ರಿಸಿ । ಕೊಂಕಣಸದಾರಸಂತಷ್ವಾಸ್ವ (ಸ್ವಾ)ಮಿಗಳಾವಧಾರಿಸಿ । ಮೇಲು
ಟೆ ಪಟಣಾಧೀಸ್ವಜ ಸ್ವಾಮಿಗಳಾವಧಾರಿಸಿ । ಮಹಾದೇವರಿಗಂ
ಗಿರಿದೇವಿಗಂ ಮದುವೆ ನಿಮಿತ್ಯಮಾಗಿ ಪುಟ್ಟಿದ ಸ್ವಾಮಿಗಳಾವಧಾರಿಸಿ ।
ನಿಮ್ಮವೊಂದು ಕುಲಂಪುಟ್ಟಿದ ವಿವಾಹ ಪುರಾಣಯಂ ಸಾವಿಸ್ತರ
ಕೇಳಿಸ್ವಾಮಿಗ[ಳಿ]ರಾ।[13]

ಯಲಬುರ್ಗಾ ತಾಲೂಕಿನ ಕುಕನೂರು ಗ್ರಾಮದಲ್ಲಿನ ಕ್ರಿ.ಶ.1379ರ ತಾಮ್ರ ಶಾಸನ[14]ವು ಸಂಪೂರ್ಣವಾಗಿ ಗದ್ಯದಲ್ಲಿ ಬರೆಯಲಾಗಿದೆ. ಈ ಶಾಸನದ ಗದ್ಯವು ಸರಳವಾಗಿದ್ದು ಸಾಮಾನ್ಯನಿಗೂ ಅರ್ಥವಾಗುವ ರೀತಿಯಲ್ಲಿದೆ. ಇದೇ ತಾಲೂಕಿನ ಇಟಗಿಯಲ್ಲಿ ದೊರೆತ ಕ್ರಿ.ಶ.1112ರ ಶಾಸನ[15]ದಲ್ಲಿ ಚಾಲುಕ್ಯ ತೈಲಪನಿಂದ 6ನೇ ವಿಕ್ರಮಾದಿತ್ಯನವರೆಗೆ ವಂಶಾವಳಿಯನ್ನು ಗದ್ಯದಲ್ಲಿ ಬರೆದಿರುವುದನ್ನು ನೋಡಬಹುದು.

ಅದಂತೆನೆಲೆರಡನೆಯ ಕಮಳಗರ್ಭ್ಭರುಂ ತ್ರಿಭುವನ ಸದ್ಧರ್ಮ್ಮ
ಸೂತ್ರಧಾರರುಂ ಅನನ್ಯ
ಸಾಮಾನ್ಯಮಹೀಮಾಸ್ಪದರುಂ । ರಾಜನೀತಿಲತಾಕಂದರು
ಮೆನಿಸಿದ ಸ್ವಾಯಂಭುವ ಸ್ವಾರೋಚಿಷ ಉತ್ತಮ ।
ತಾಮಸ। ರೈವತ। ಚಾಕ್ಷಶರೆಂಬ
ಮನುಗಳೊರ್ವೋರ್ವ್ವರೆಪ್ಪತ್ತೊಂದು ಚತುರ್ಯ್ಯಗಂಬರಂ ಧರೆ
ಯನಾಳ್ದನಂತರಂ ಹಿರಣ್ಯಗರ್ಭ್ಭ ಚಾರು ಚರಣನಖಶುಕ್ತಿ ಮುಕ್ತಾಫಳನೆನಿಸಿದ
ದಕ್ಷ ಪ್ರಜಾಪತಿಗದಿತಿ ಪುಟ್ಟಿದಳದಿತಿಗಂ ಜಗಚ್ಚಿತ್ರ ಕರ್ಮ್ಮಕುಷಳನೆನಿಸಿದ ಕಾಶ್ಯಪ
ಪ್ರಜಾಪತಿಗಂ ಸಮಸ್ತ ಲೋಚನೆನಿಸಿದವಿವಸ್ವಾಂತನಾ ವಿವಸ್ವಾಂತಂಗೆ
ಮನುನೀತಿ ನಿಪುಣನೆನಿಸಿದೇಳನೆಯ
ಮನುವೈವಸ್ವತನಾ ವೈವಸ್ವತಂಗಿಕ್ಷ್ವಾಕುಕ್ಷಿತೀಶಂ ಜನಿಯಿಸಿದನಾ
ನ್ರಿಪಂಗಿಳಾದೇವಿಯೆಂಬ

ಸುತೆಪುಟ್ಟಿದಳತ್ತಲು॥"[16]

ಹೀಗೆ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ವೈವಿಧ್ಯಮಯವಾದ ಗದ್ಯವು ಬಳಕೆಯಾಗಿರುವುದು ಕಂಡು ಬರುತ್ತದೆ. ಕೆಲವು ಶಾಸನಗಳಲ್ಲಿ ಗದ್ಯ ಪ್ರಧಾನವಾಗಿದೆ. ಇನ್ನೂ ಕೆಲವು ಶಾಸನಗಳಲ್ಲಿ ಆಡು ಭಾಷೆಯ ಸೊಗಡನ್ನು ಒಳಗೊಂಡ ಗದ್ಯ ಇದೆ. ಶಾಸನಗಳನ್ನು ಬರೆದ ಕರ್ತೃ, ಶಾಸನ ರಚಿತವಾದ ಕಾಲವನ್ನಾಧರಿಸಿ ಅಲ್ಲಿನ ಗದ್ಯ ರಚಿತಗೊಂಡಿರಬೇಕು. ಆ ಕಾರಣಕ್ಕಾಗಿಯೇ ಇದರಲ್ಲಿ ವಿವಿಧ ಗದ್ಯ ರೂಪಗಳನ್ನು ಗುರುತಿಸಬೇಕಾಗಿದೆ. ಗದ್ಯದಲ್ಲಿ ಹೇಳಬೇಕಾದ ಕೆಲವು ವಿವಿಧ ವಿಷಯಗಳನ್ನು ನಮ್ಮ ಶಾಸನಕಾರರು ಪದ್ಯದಲ್ಲಿ ಬರೆದಿದ್ದಾರೆ. ಅವರಿಗೆ ಕಾವ್ಯದ ಸೆಳೆತವೊ, ಪಾಂಡಿತ್ಯ ಪ್ರದರ್ಶನವೋ ತಿಳಿಯದು. ಅಂತು ಗದ್ಯವನ್ನು ಪದ್ಯವನ್ನಾಗಿ ಮಾರ್ಪಡಿಸಿ ಮೆಚ್ಚುಗೆಯನ್ನು ಗಳಿಸಿಕೊಂಡಿದ್ದಾರೆ.

**ಕೊಪ್ಪಳ ಜಿಲ್ಲೆಯ ಶಾಸನಗಳ ಭಾಷೆ :**

ಭಾಷೆಯ ಅವಸ್ಥಾಂತರ ಭೇದಗಳು ಕಾಣಿಸಿಕೊಳ್ಳುವುದು ಶಾಸನಗಳಲ್ಲಿಯೇ ಮೊದಲು. ಏಕೆಂದರೆ ನಮಗೆ ಕಾವ್ಯ ಕೃತಿಗಳಿಗಿಂತ ಪೂರ್ವದಲ್ಲಿಯೇ ರಚಿತವಾದ ಶಾಸನಗಳು ದೊರಕಿವೆ. ಶಾಸನಗಳಲ್ಲಿ ಬಳಸಲ್ಪಟ್ಟ ಭಾಷೆಯು ಆಯಾ ಕಾಲದ ಭಾಷೆಯ ಸ್ವರೂಪವನ್ನು ನಮಗೆ ಪರಿಚಯಿಸುತ್ತದೆ. ಸು. 2000 ವರ್ಷಗಳ ಹೆಚ್ಚಿನ ಪ್ರಾಚೀನತೆಯನ್ನು ಹೊಂದಿರುವ ಕನ್ನಡ ಭಾಷೆಯ ನಮಗೆ ದೊರೆತದ್ದು ಮೊದಲು ಕ್ರಿ.ಶ.5ನೇ ಶತಮಾನದಲ್ಲಿ (ಕ್ರಿ.ಶ.450ರ ಹಲ್ಮಿಡಿ ಶಾಸನ). ಇಲ್ಲಿಂದ ಆರಂಭವಾದ ಕನ್ನಡ ಭಾಷೆಯ ಶಾಸನಗಳು ಕಾಲಾಂತರದಲ್ಲಿ ಭಿನ್ನತೆಯನ್ನು ಮೈಗೂಡಿಸಿ ಕೊಳ್ಳುತ್ತಾ ಬಂದಿವೆ. ಭಾಷೆಯು ಜೀವಂತಿಕೆಯಿಂದಿರಬೇಕಾದರೆ ಅದಕ್ಕೆ ಪರಿವರ್ತನೆ ಅಗತ್ಯ. ಉದ್ದಕ್ಕೂ ಹಲವು ಬದಲಾವಣೆಯನ್ನು ಕಂಡ ಕನ್ನಡ ಭಾಷೆಯನ್ನು ಇಂದು ನಾವು ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಎಂದು ವಿಭಾಗಿಸಿಕೊಂಡಿದ್ದೇವೆ. ಕನ್ನಡ ಭಾಷೆಯ ಶಾಸನಗಳು ಕೂಡ ಕಾಲದಿಂದ ಕಾಲಕ್ಕೆ ಭಿನ್ನ ಆಯಾಮಗಳನ್ನು ಪಡೆದು ಕೊಂಡು ಬಂದಿರುವುದು ಅಲ್ಲಿ ಬಳಕೆಯಾದ ಭಾಷೆಯಿಂದ ತಿಳಿದು ಬರುತ್ತದೆ.

ಶಾಸನ ಕವಿಗಳು ಚಂಪೂ ಮಾದರಿಯ ಶೈಲಿಯಲ್ಲಿಯೇ ಶಾಸನವನ್ನು ಬರೆದಿದ್ದಾರೆ. ಅಂತಹ ಸಂದರ್ಭದಲ್ಲಿ ಅವರು ಪ್ರೌಢವಾದ ಭಾಷೆಯನ್ನು ಬಳಸಿದ್ದಾರೆ. ಅಂದರೆ ಎಲ್ಲಾ ಶಾಸನಗಳು ಪ್ರೌಢವಾಗಿವೆ ಎಂದಲ್ಲ. ಕೆಲವು ಸಂದರ್ಭದಲ್ಲಿ ಸರಳವಾದ ಭಾಷೆಯು ಸಹ ಶಾಸನಗಳಲ್ಲಿ ಬಳಕೆಯಾಗಿದೆ. "ಕಾವ್ಯ ಸಾಹಿತ್ಯದಲ್ಲಿ ದೇಶಿ–ಮಾರ್ಗಗಳ ಸೀಳು ಉದ್ದಕ್ಕೂ ಕಂಡುಬರುವಂತೆ ಶಾಸನ ಸಾಹಿತ್ಯದಲ್ಲಿ ಯಾವ ಕಾಲಕ್ಕೂ ಗ್ರಂಥಸ್ಥ ಭಾಷೆ, ಕಂಠಭಾಷೆ ಎಂದು ಎರಡು

ಪ್ರವಾಹಗಳು ಗಮನಕ್ಕೆ ಬರುತ್ತವೆ. ಪ್ರಥಮ ಕನ್ನಡ ಶಾಸನವಾದ ಹಲ್ಮಿಡಿ ಶಾಸನದಲ್ಲಿ ಬಹುಪಾಲು ಗ್ರಂಥಸ್ಥ ಭಾಷೆಯಿದ್ದರೆ; ಇದು ಸಿಗುವುದಕ್ಕೆ ಮೊದಲು ಪ್ರಥಮ ಕನ್ನಡ ಶಾಸನವೆಂದು ಹೆಸರು ಪಡೆದಿದ್ದ ಮಂಗಳೇಶನ ಬಾದಾಮಿ ಶಾಸನದಲ್ಲಿ ಬಹುಪಾಲು ಕಂಠಸ್ಥ ಭಾಷೆಯಿದ್ದುದು ಇದಕ್ಕೆ ಉದಾಹರಣೆ."[17] ವಸ್ತುಸ್ಥಿತಿ ಹೀಗಿರುವಾಗ ಕೊಪ್ಪಳ ಜಿಲ್ಲೆಯ ಶಾಸನಗಳು ಕೂಡ ಈ ಛಾಯೆಯಿಂದ ಮುಕ್ತವಾಗದೆ ಇದೇ ಮಾದರಿಯಲ್ಲಿಯೇ ರಚಿತಗೊಂಡಿವೆ ಎಂದು ಹೇಳಬಹುದಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಕ್ರಿ.ಪೂ.ಕಾಲದ ಶಾಸನಗಳು ದೊರೆತಿವೆ. ಮೌರ್ಯರ ಅರಸ ಅಶೋಕನ ಕಾಲದ ಶಾಸನಗಳೇ ಇಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನಗಳಾಗಿವೆ. ಇವುಗಳ ಭಾಷೆ ಪ್ರಾಕೃತ. ಅಶೋಕನ ಕಾಲದ ತರುವಾಯ ಈ ಜಿಲ್ಲೆಯಲ್ಲಿ ದೊರೆತ ಶಾಸನಗಳು ಬಾದಾಮಿ ಚಾಳುಕ್ಯರ ಅವಧಿಯಲ್ಲಿ ರಚನೆಗೊಂಡವುಗಳಾಗಿವೆ. ಇವರ ನಂತರ ರಾಷ್ಟ್ರಕೂಟರಿಂದ ಹಿಡಿದು ವಿಜಯನಗರೋತ್ತರ ಅರಸು ಮನೆತನಗಳವರೆಗೂ ರಚನೆಗೊಂಡ ಶಾಸನಗಳು ಇಲ್ಲಿ ದೊರೆತಿವೆ. ಅಶೋಕನ ಕಾಲದ ಪ್ರಾಕೃತ ಭಾಷೆಯ ಶಾಸನಗಳನ್ನು ಬಿಟ್ಟರೆ ಮತ್ತೆಲ್ಲಿಯೂ ಪ್ರಾಕೃತ ಭಾಷೆಯ ಶಾಸನಗಳು ಇಲ್ಲಿಯವರೆಗೂ ಕಂಡು ಬರುವುದಿಲ್ಲ. ಕನ್ನಡ ಭಾಷೆಯ ಜೊತೆಗೆ ಸಂಸ್ಕೃತ, ಪರ್ಷಿಯಾ ಹಾಗೂ ತೆಲುಗು ಭಾಷೆಯ ಶಾಸನಗಳು ದೊರೆತಿವೆ. ಇಲ್ಲಿಯ ಶಾಸನಗಳಲ್ಲಿಯ ಭಾಷೆಯನ್ನು ನೋಡಿದಾಗ ನಮಗೆ ಒಂದು ಅಂಶ ಸ್ಪಷ್ಟವಾಗುತ್ತದೆ. ಈ ನಾಡಿನಲ್ಲಿ ಆಳಿದ ಅರಸು ಮನೆತನಗಳು ಕನ್ನಡ ಭಾಷೆಯೊಂದಿಗೆ ಇತರ ಭಾಷೆಗಳಿಗೂ ಪೋಷಕರಾಗಿದ್ದರೂ ಎಂಬುದು. 'ತಿರುಳ್ಗನ್ನಡ'ದ ಪ್ರದೇಶವೆಂದು ಕರೆಯಿಸಿಕೊಂಡ ಈ ಜಿಲ್ಲೆ ಇತರ ಭಾಷೆಯ ಸಂಪರ್ಕದಿಂದ ಕೂಡಿದ್ದಿತು ಎಂಬುದಕ್ಕೆ ಇಲ್ಲಿ ದೊರೆತ ಅನ್ಯಭಾಷೆಯ ಶಾಸನಗಳೇ ಸಾಕ್ಷಿ.

ಕನ್ನಡ ಭಾಷಾ ವಿಷಯಕ್ಕೆ ಬಂದರೆ ಕೊಪ್ಪಳ ಅಪ್ಪಟ ಕನ್ನಡ ನೆಲವೆಂದು ಗುರುತಿಸಲ್ಪಟ್ಟ ಪ್ರದೇಶ. ಇಲ್ಲಿ ರಚನೆಗೊಂಡ ಶಾಸನಗಳು ಕೂಡ ಕನ್ನಡದ ಸೊಬಗನ್ನು, ಕನ್ನಡ ಭಾಷೆಯ ಅವಸ್ಥಾಂತರತೆಯನ್ನು ಗುರುತಿಸುವಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ. ಬಾದಾಮಿ ಚಾಳುಕ್ಯರ ಕಾಲದ ಕೆಲ ಶಾಸನಗಳು ಪೂರ್ವದ ಹಳಗನ್ನಡದ ಸ್ವರೂಪವನ್ನು ತಿಳಿಸುತ್ತವೆ. ನಂತರ ರಾಷ್ಟ್ರಕೂಟ, ಗಂಗರ ಆಡಳಿತದ ಅವಧಿಯಲ್ಲಿ ಶಾಸನಗಳ ಭಾಷೆಯೂ ಹಳಗನ್ನಡದತ್ತವಾಲುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ರಚಿತವಾದ ಶಾಸನಗಳು ನಡುಗನ್ನಡದಲ್ಲಿ ರಚಿತಗೊಂಡು ಸರಳವಾದ ಶೈಲಿಯಲ್ಲಿಯೇ ಮೂಡಿಬಂದಿವೆ. ಜೈನ ಧರ್ಮದ ಪ್ರಮುಖ ಕೇಂದ್ರವಾಗಿದ್ದ ಕೊಪ್ಪಳವು ಬಹುಶಃ ಜೈನ ಕವಿಗಳ ಸಂಸ್ಕೃತ ವ್ಯಾಮೋಹದಿಂದಲೋ ಏನೋ ಇಲ್ಲಿ ರಚನೆಗೊಂಡ ಆರಂಭ ಕಾಲದ ಶಾಸನಗಳು ಬಿಗಿಯಾದ ಮಾರ್ಗ

ಬಂಧವನ್ನು ಒಳಗೊಂಡಿವೆ. ಕಾಲಾಂತರದಲ್ಲಿ ಬಿಗಿಬಂಧತೆಯಲ್ಲಿ ಸಡಿಲವಾಗುತ್ತಾ ಸರಳತೆಯ ಕಡೆಗೆ ಹೊರಳಿರುವುದು ಈ ಜಿಲ್ಲೆಯ ಶಾಸನಗಳ ಭಾಷಾ ವೈಶಿಷ್ಟವಾಗಿದೆ. ಗದ್ಯದ ರೂಪದಲ್ಲಿ ಹೇಳಬೇಕಾದುದನ್ನು ಪದ್ಯದ ರೂಪದಲ್ಲಿ ಮಧ್ಯದಲ್ಲಿ ಗದ್ಯವನ್ನು ಸೇರಿಸಿ ಒಂದು ರೀತಿಯ ಚಂಪೂ ಕಾವ್ಯದ ಮಾದರಿಯಲ್ಲಿ ಶಾಸನ ಕವಿಗಳು ತಮ್ಮ ಭಾಷಾ ಪ್ರಾವಿಣ್ಯತೆಯಿಂದ ಮೆರೆದಿದ್ದಾರೆ. ಶಾಸನಗಳಲ್ಲಿನ ಭಾಷೆಯ ಸ್ವರೂಪವನ್ನು ತಿಳಿಯುವುದಕ್ಕಾಗಿ ಉದಾಹರಣೆಗಾಗಿ ಇಲ್ಲಿ ಕೆಲವು ಶಾಸನಗಳನ್ನು ಕೊಡಲಾಗಿದೆ.

**ಕ್ರಿ.ಶ.ಪೂ.3ನೇ ಶತಮಾನದ ಅಶೋಕನ ಶಾಸನ**

"ದೇವಾಣಂಪಿಯೇ ಆಹ ಸಾತಿರೇಕಾಣಿ ಅಢತಿಯಾಣಿ ವಸಾಣಿ ಯಮ್ ಉಪಾ
ಸಕೇ ಞೊ ಚು ಕೋ ಬಾಢವಮ್ ಪಕಂತೇ ಸಂವಛರೇ
ಸಾತಿರೇಕೇಯುವಮ್‌ಮೇ ಸಂಘೇ ಉಪೇತಿ ಬಾಢಂ
ಚ ಮೇ ಪಕಂತೆ ಸೇ ಇವಾಯುವಮ್ ವೇಲಾಯುವಮ್ ಜಂಬುದೀಪಸಿ
ಅಮಿಸಾ ದೇವಾ ಸಮಾಣ"[18]

**ಕ್ರಿ.ಶ.8ನೇ ಶತಮಾನದ ಬಾದಾಮಿ ಚಾಲುಕ್ಯರ ವಿಜಯಾದಿತ್ಯನ ಕಾಲದ ಶಾಸನ.**

"ಭಟಾರಕ ಪೃಥಿವೀರಾಜ್ಯದನ್ದು ಕೊಪ
ಣದಾ ಮೂಱುಜಾತೀಯುಂ ಗುತ್ತಿಯೊಡೆಯ[ನಮ್]
ಗರಾಜನುಂ ಕರಣಮಾಗೆ ಮದೆವಳೆಱ"[19]

**ಕ್ರಿ.ಶ.9ನೇ ಶತಮಾನದ ರಾಷ್ಟ್ರಕೂಟರ ಮುಮ್ಮಡಿ ಇಂದ್ರನ ಆಡಳಿತಾವಧಿಯಲ್ಲಿ ರಚನೆಗೊಂಡ ಶಾಸನ**

"ಶಕಕಾಳಮೆಣ್ಬುನೂಱ ಪನ್ನೊಂನ್ದನೆಯ[ಶೋ]
[ಭ]ನ ಸಂವತ್ಸರದ ಕಾರ್ತ್ತಿಕ ಪುಣ್ಣವೆಯಂದು ಸ[ಮ]
ಸ್ತರಾಜ್ಯಭರ ನಿರೂಪಿತ ಮಹಾಪ್ರಚಣ್ಡ ದಣ್ಡ
ನಾಯಕಪದವಿ ವಿರಾಜಮಾನರಪ್ಪ ಶ್ರೀ[ಮಾ]
ಮರಸರ್ ತೀರ್ತ್ಥವಂನ್ದನಾರ್ತ್ಥಂಸಿದ್ಧಕುಪಣದೊಳಿ.....
ಸಮಧಿಗತ ಪಞ್ಚಮಹಾಶಬ್ದ"[20]

**ಕ್ರಿ.ಶ.10ನೇ ಶತಮಾನಕ್ಕೆ ಸೇರಿದ ಶಾಸನ**

"ತತ್ಪ್ರಸಾದದೆ ಸತ್ಯವಾಕ್ಯ ಕೊಂಗಣಿವರ್ಮ್ಮ ಧರ್ಮ್ಮಮ
ಹಾರಾಜಾಧಿರಾಜ ಕುವಳಾಳಪುರ[ವರಾಧೀಶ] ನನ್ದಗಿರಿ [ನಾ]
ಥ ಶ್ರೀ ಮತ್ಪೆರ್ಮ್ಮಾನಡಿಗಳ್ ರೇವಕನಿಮ್ಮಡಿಗೆ.....ನಿ ಯಾಗಿ ಗ
ಙ್ಗವಾಡಿ ತೊಮ್ಭತ್ತಱುಸಾಸಿರಮುಂ ಪುಲಿಗೆರೆ.....ಳ್ದೊ..ನೂಱಮಂ"[21]

**ಕ್ರಿ.ಶ.11ನೇ ಶತಮಾನದ ಗಂಗರ ಕಾಲದ ಶಾಸನ**

ಬೆಳೆದಪುದಿನ್ನುಮುರ್ವ್ವಿ
ಪದದಪ್ಪದೆ ಪೆರ್ಮ್ಮಳೆ ಕೊಳ್ವುದಿನ್ನುಮಗ್ಗಳದ
ಗುಣಂಗಳಂ ಮಱೆವರಿನ್ನುಮಿಳೇಶ್ವರರಿನ್ನುಮಿ
ಲ್ಲಣಂ ಕಳಮಳಿಪಾಯಿಲಂ ಪಸವುಬಚ್ಚಬಱಂ ಪೆಱವುಂ
ಭಯಂಗಳಾಕುಲತೆಯುಮಿನ್ನುಲ್ಲಜಿತಸೇನಮು
ನೀನ್ದ್ರ ತಪಟ್ಪ್ರಭಾವದಿಂ ॥[22]

**ಕ್ರಿ.ಶ.12ನೇ ಶತಮಾನದ ಶಾಸನ**

ಚಾಳುಕ್ಯ ಕಂಣ್ಠೀರವಂಗೆ ಮಲಪಕಂಣ್ಠೀಕರಂ ಲೋಕಾ .
ಮಾತ್ರದೊಳ್ ನಿಂಕಮಾರ್ಪ್ಪ ಬಲ್ಲಾಳುಗಳು। ಬೃತ್ಯಚಿಂತಾಮಣಿಗಳು। ರಾ[ಯ] ನಾರಾಯಣಂಗೆಱಗುವ ಸಮಂಡಳ ಪರಮಂಡಳದ ಮಣಿಮಕುಟ ಬದ್ದಮ[ಂಡ] ಳೇಶ್ವರ ದಂಡಾದಿಪ ಸೇನಾನಾಯಕರೆನಿಪರಸುಗಳುಗೆ ಭೀತಾಪಮಾನಮಾಗಲಿಯ. ಮುದ್ದರಿಸಿ ನೆಲೆಸೆವ ಸಾಹಸಾಭರಣರು ಪತಿಹಿತ ವೈನತೇಯರು ।[23]

**ಕ್ರಿ.ಶ.13ನೇ ಶತಮಾನಕ್ಕೆ ಸೇರಿದ ಶಾಸನ**

ಅಗ್ಘ್ಯ್ರತೀರ್ಥವೆಂಬ ಮಹಾತೀರ್ತ್ಥಸ್ಥಾನಂಗಳಲು ಸಂಕ್ರಮಣ ವ್ಯತಿಪಾತ ಅಮವಾಸ್ಯೆ ಪೋರ್ಣ್ಣಿಮಾಸ್ಯೆ ಉತ್ತರಾಯನ ದಕ್ಷಿಣಾಯನ ಸೋಮಗ್ರಹಣ ಸೂರ್ಯ್ಯಗ್ರಹಣವೆಂಬ ಪುಣ್ಯದಿನಂಗಳಲಿ ಚತುರ್ವ್ವೇದಪಾರಗರಪ್ಪ ಸುಬ್ರಾಹ್ಮಣರ್ ಸಹಸ್ರಕವಿಲೆಯ ಸದಕ್ಷಿಣೆವೆರಸು ಸದ್ಭಕ್ತಿಯಿಂ ಕೊಟ್ಟ ಮಹಾಫಳಮಕ್ಕ[24]

**ಕ್ರಿ.ಶ.14ನೇ ಶತಮಾನದ ಶಾಸನ**

ಅವಿಚಲಿತಬೋಧದೀಪಂತ ಅಮರಕೀರ್ತ್ತಿಂ ಭಜೇತ್ತಮೋದೂರಂ ॥
ಕೇಪಿ ಸೋದರ ಪೂರಣ್ಯೈ ಪರಿಣತಾವಿದ್ಯಾವಿಹೇನಾಂತರಾ ಯೋಗಿಶಾ
ಭುವಿ .....ರ್ಜ್ಜಾತಿದುರ್ಜ್ಜಯ ತನುಮದದ್ವಂಸಿ
ಗುಣ್ಯೈರೂರ್ಜ್ಜಿತೈರಾಚಾರ್ಯ್ಯಾಮರಕೀರ್ತ್ತಿ
ಶಿಷ್ಯಗಣಭೃಚ್ಛ್ರೀಸಿಂಹನಂದಿವ್ರತೀ॥[25]

**ಕ್ರಿ.ಶ.15ನೇ ಶತಮಾನದ ಶಾಸನ**

ಕನಕಾಚಲ ವಾಸಿನ ಪಾತುವಃ ಸರ್ವ
ಲೋಕೇಶಃ ವಾಂಚಿತಾರ್ಥ ಪ್ರದಾಯಕಃ ಬ್ರಹ್ಮೇಂದ್ರ

ಮೌಳಿ ಮಾಣಿಕ್ಯ ರಂಜಿತ ಶ್ರೀ ಪದಾಂಬುಜಂ। ಕೆಲವಡಿ ಕರ್ಮ
ನಾಥೋಯಂ॥[26]

**ಕ್ರಿ.ಶ.16ನೇ ಶತಮಾನದ ಶಾಸನ**

ದೇವರ ಅಮ್ರುತ ಪಡಿಗೆ ಯಿಕುಳದ ಭೂಮಿ
ಯನು ದಾರಾಪೂರ್ವವಾಗಿ ಧಾರೆಯನೆರೆದು ಕೊಟ್ಟೆ
ಉ ಯಿದಕೆ ಆರೊಬರು ತಪಿದರೆ ಗೋಹಹತೆ ಬ್ರಂ
ಹ್ಮ ಹತಾ ಮಾಡಿದ ನಾರಕಕೆ ಹೋದವರು[27]

**ಕ್ರಿ.ಶ.17ನೇ ಶತಮಾನಕ್ಕೆ ಸೇರಿದ ಶಾಸನ**

ಶ್ರೀಮನ್ನಾರಾಯಣನೆ ಜಗತ್ತಿಗೆ ಸ್ವಾಮಿಯೆಂದು ನಿಶ್ಚಯಿಸಿದೆವು ಯಿ ಮೂರು ಮೂರ್ತಿಗಳಲ್ಲಿ
ಜಗತ್ಪಿತ್ರು ಜಗದ್ಗುರು ಜಗತ್ಸಾಮಿಯೆಂದು ಜ್ಞಾನದ ದ್ರಢವಾಗಿ ನಂಬಿ ಭಜಸಿದವರಿಗೆ ಸದ್ಗತಿಯುಂಟು ಯಿ ಪ್ರಕಾರ ನಡೆವಂಥಾ ಜನರ. . . ವನಿಪ ಗುರು ಮಾತ್ರಪಿತ್ರ ಭಕ್ತಿವುಳ್ಳಂಥವರು ಯಿ ಮಾರ್ಗಕೆ ವಿರೋಧಿಗಳಾದವರು ನರಕಭಾಜನರಾಗಿ ಪ ವರಿಸಿ ಗುರು ಮಾತ್ರ ಪಿತ್ರಭಕ್ತಿ ಹೀನರಾಗಿ ಯಂದೆಂದಿಗೂ ಕಡೆಯಾದಂಥಾ ಅಂಧ ತಮಸ್ಸಿನೊಳಗೆ ಬೀಳುವರು ಯಿಲ್ಲಿ ನೋಡಿದರೂ ಅವರಿಗೆ ಪ್ರಾಯಶ್ಚಿತಯಿಲ್ಲವು[28]

ಈ ಮೇಲೆ ಉಲ್ಲೇಖಿಸಿದ ಶಾಸನದ ಪಾಠಗಳನ್ನು ಅವಲೋಕಿಸಿದಾಗ ಶತಮಾನದಿಂದ ಶತಮಾನಕ್ಕೆ ಭಾಷೆಯಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸಬಹುದಾಗಿದೆ. ಶಾಸನ ಖಂಡರಿಸುವವರ ಸೋಮಾರಿತನದಿಂದಲೋ, ಅಜ್ಞಾನದಿಂದಲೋ ಶಾಸನಗಳಲ್ಲಿ ಅನೇಕ ದೋಷಗಳಿರುವುದು ಕಂಡು ಬರುತ್ತದೆ. ಅದೇನೇ ಇದ್ದರೂ ಕನ್ನಡ ಭಾಷೆಯು ಕೊಪ್ಪಳದ ಶಾಸನಗಳಲ್ಲಿ ಉತ್ಕೃಷ್ಟವಾಗಿ ಬಳಕೆಗೊಂಡಿರುವುದು ಇಲ್ಲಿನ ಶಾಸನಗಳಿಂದ ಖಚಿತವಾಗುತ್ತದೆ. ತನ್ನ ಜೊತೆಗೆ ಇತರ ಭಾಷೆಗಳನ್ನು ಮೈಗೂಡಿಸಿಕೊಂಡು ಬಂದಿರುವುದು ಕೂಡ ಗಮನಾರ್ಹವಾದ ಅಂಶವಾಗಿದೆ.

**ಶಾಸನ ಕವಿಗಳು :**

ಸಾಹಿತ್ಯಕ ದೃಷ್ಟಿಯಿಂದ ಶಾಸನಗಳಿಗೆ ಹೆಚ್ಚಿನ ಮಹತ್ವವನ್ನು ಒದಗಿಸಿ ಕೊಟ್ಟವರು ಶಾಸನ ಕವಿಗಳು. ಬರೀ ಸಾಮಾಜಿಕ ಹಾಗೂ ರಾಜಕೀಯ ದಾಖಲೆಗಳಾಗುತ್ತಿದ್ದ ಶಾಸನಗಳನ್ನು ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಸಾಹಿತ್ಯವನ್ನಾಗಿಸಿದರು. ಗದ್ಯದ ರೂಪದಲ್ಲಿದ್ದಂತಹ ಚರಿತ್ರೆಯ ವಿಷಯವನ್ನು ಕೂಡ ಇವರು ಕಾವ್ಯಾತ್ಮಕವಾಗಿ ರಚಿಸಿದ್ದಾರೆ. ಎಷ್ಟೋ ಜನ ಕವಿಗಳು ಶಾಸನ ರಚಿಸಿದ್ದಾರೆ.

ಇವರನ್ನು ಹೊರತುಪಡಿಸಿಯೂ ಕೂಡ ನಮಗೆ ಹಲವು ಕಾವ್ಯಾತ್ಮಕ ಶಾಸನಗಳು ದೊರೆತಿವೆ. ಇಂತಹ ಶಾಸನಗಳನ್ನು ರಚಿಸಿದ ಶಾಸನ ಕವಿಗಳು ಬಹು ಜಾಣರಿರಬೇಕು. ಏಕೆಂದರೆ ಶಾಸನಗಳಲ್ಲಿ ಸ್ಥಳದ ಮಿತಿ ಇರುತ್ತದೆ. ಕಾವ್ಯಗಳಲ್ಲಿ ಹಾಗಲ್ಲ ಅಲ್ಲಿ ಎಷ್ಟು ಬೇಕಾದರೂ ವರ್ಣನೆ ಮಾಡಬಹುದು. ಆದರೆ ಶಾಸನಗಳಲ್ಲಿ ಹೇಳಬೇಕಾದ ವಿಷಯದಲ್ಲಿಯೇ ಕಾವ್ಯಾತ್ಮಕ ಅಂಶಗಳನ್ನು ಸೇರಿಸಿ ಹೇಳಬೇಕು. ಒಂದರ್ಥದಲ್ಲಿ ಶಾಸನ ಕವಿಗಳು ಅಲ್ಪದರಲ್ಲಿಯೇ ಕಲ್ಪವನ್ನು ಕಟ್ಟಿಕೊಟ್ಟವರು. ವಸ್ತುಸ್ಥಿತಿ ಹೀಗಿರುವಾಗ ಶಾಸನ ಕವಿಗಳು ತಮ್ಮ ಪಾಂಡಿತ್ಯ ಬಲದಿಂದ ಶಾಸನಗಳನ್ನು ರಚಿಸಿರಬೇಕು. ಇಂತಹ ಅನೇಕ ಶಾಸನಗಳನ್ನು ರಚಿಸಿದ ಶಾಸನ ಕವಿಗಳು ನಮ್ಮ ನಾಡಿನಲ್ಲಿ ಆಗಿಹೋಗಿದ್ದಾರೆ.

ಶಾಸನದಲ್ಲಿ ಹೇಳಬೇಕಾದ ಎಲ್ಲಾ ವಿಷಯಗಳನ್ನು ಹೇಳಿದ ನಂತರ ಅಂದರೆ ಶಾಸನದ ಕೊನೆಯ ಭಾಗದಲ್ಲಿ ಶಾಸನ ಕವಿಗಳು ತಮ್ಮ ಹೆಸರನ್ನು ಹೇಳಿಕೊಳ್ಳುತ್ತಿದ್ದರು. ಕೆಲವೊಂದು ಶಾಸನಗಳಲ್ಲಿ ಆರಂಭದಲ್ಲಿಯೇ ಶಾಸನ ಕವಿಗಳ ಹೆಸರು ಇರುವುದು ಕಂಡುಬರುತ್ತದೆ. ಆದರೆ ಇಂತಹ ಶಾಸನಗಳ ಸಂಖ್ಯೆ ಕಡಿಮೆ. ಸ್ಥಳದ ಅಭಾವದಿಂದಲೋ ಏನೋ ಶಾಸನ ಕವಿಗಳು ತಮ್ಮ ಹೆಸರನ್ನು ಮಾತ್ರ ಹೇಳಿಕೊಂಡಿದ್ದಾರೆ. ತಮ್ಮ ಯಾವುದೇ ವಿವರಗಳನ್ನು ಅವರು ಹೇಳಿಕೊಂಡಿಲ್ಲ. ಶಾಸನಗಳು ಕವಿ, ಲಿಪಿಕಾರ, ರೂವಾರಿ ಈ ಮೂವರ ಸಂಯುಕ್ತದಿಂದ ರಚನೆಯಾಗುತ್ತಿದ್ದವು. ಕೆಲವು ಸಂದರ್ಭದಲ್ಲಿ ಒಬ್ಬನೇ ಎಲ್ಲಾ ಆಗಿರುವ ಸಾಧ್ಯತೆ ಇರುತ್ತದೆ. 'ಲಿಖಿತಂ' 'ಬರೆದಂ' 'ಬರೆಪಂ' ಎಂದು ಬಳಸಿದ್ದರೆ ಅಲ್ಲಿ ಒಬ್ಬರಿಂದ ಮತ್ತೊಬ್ಬರನ್ನು ಪ್ರತ್ಯೇಕಿಸುವುದು ಕಷ್ಟ. ಕವಿಯ ಹೆಸರಿನ ಹಿಂದೆ ವಿದ್ವತ್ ಸೂಚಕ ವಿಶೇಷಣಗಳಿದ್ದರೆ ಅವರನ್ನು ಶಾಸನ ಕವಿಗಳೆಂದು ತಿಳಿಯಬಹುದಾಗಿದೆ.

ಕೊಪ್ಪಳ ಜಿಲ್ಲೆಯ ಬಹುಪಾಲು ಶಾಸನಗಳಲ್ಲಿ ಶಾಸನ ಕವಿಗಳ ಹೆಸರು ಇರುವುದಿಲ್ಲ. ಆದರೂ ಕೆಲವೊಂದು ಶಾಸನಗಳಲ್ಲಿ ಶಾಸನ ಕವಿಗಳು ತಮ್ಮ ಹೆಸರನ್ನು ಹೇಳಿಕೊಂಡಿದ್ದಾರೆ. ಆದರೆ ಅದಕ್ಕಿಂತ ಹೆಚ್ಚಿನ ವಿವರಗಳು ಅಲ್ಲಿ ಲಭ್ಯವಿಲ್ಲ. ಆದಷ್ಟು ಮಾಹಿತಿಯನ್ನು ಸಂಗ್ರಹಿಸಿ ಶಾಸನಗಳನ್ನು ಆಧರಿಸಿ ಕೊಪ್ಪಳ ಜಿಲ್ಲೆಯ ಶಾಸನ ಕವಿಗಳ ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**ಕವಿಕಂದರ್ಪ :**

ಕೊಪ್ಪಳದ ಕವಲೂರು ಗ್ರಾಮದಲ್ಲಿ ದೊರೆತ ಕ್ರಿ.ಶ.1177ರ ಶಾಸನ[29]ದಲ್ಲಿ ಕವಿಕಂದರ್ಪನೇ ಶಾಸನವನ್ನು ಬರೆದಿರುವನೆಂದು ಹೇಳಲಾಗಿದೆ. ಈ ಶಾಸನದಲ್ಲಿ ಈತನನ್ನು ಕುರಿತು "…. ಧ ಮೇದಿನಿದಟ್ಟನೆ ಸೆ ಯೆ ಶಾಸನಮಂ ವಿರಚಿಸಿದಂ...... ಗಮಸೂರಿ ಚತುರ್ಭಾಷಾ ಚಕ್ರವರ್ತಿ ಕವಿ ಕಂದರ್ಪಂ" ಎಂದು ಬರೆಯಲಾಗಿದೆ. ಗಮಸೂರಿಯು ನಾಲ್ಕು ಭಾಷೆಗಳನ್ನು ಬಲ್ಲವನು ಅಥವಾ ಪಾಂಡಿತ್ಯ ಸಾಧಿಸಿದವನು

ಎಂದು ಹೇಳಲಾಗಿದೆ. ಕವಿ ಕಂದರ್ಪನು ಕೊಪ್ಪಳವಲ್ಲದೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಶಾಸನಗಳನ್ನು ರಚಿಸಿದಂತೆ ತಿಳಿದು ಬರುತ್ತದೆ. ಬೆಳಗಾವಿಯಲ್ಲಿ ದೊರೆತ ಕ್ರಿ.ಶ.1204ರ ಶಾಸನದಲ್ಲಿ ಈತನ ಹೆಸರು ಉಲ್ಲೇಖಗೊಂಡಿದೆ. ಅಲ್ಲಿಯೂ ಕೂಡ ಈತನನ್ನು 'ಚತುರ್ಬ್ಭಾಷಾ ಕವಿಚಕ್ರವರ್ತಿ ಕವಿಕಂದರ್ಪ' ಎಂದು ಉಲ್ಲೇಖಿಸಲಾಗಿದೆ. ಈ ಅಂಶವನ್ನು ಗಮನಿಸಿದರೆ ಪ್ರಸಿದ್ಧ ಶಾಸನ ಕವಿಯಾಗಿದ್ದ ಈತ ಕೊಪ್ಪಳ ಪ್ರದೇಶದೊಂದಿಗೆ ಸಂಬಂಧವಿಟ್ಟುಕೊಂಡಿದ್ದ ಎಂದು ಊಹಿಸಬಹುದಾಗಿದೆ.

**ಮಲ್ಲಕವಿ :**

ಚಾಲುಕ್ಯರ ಅರಸ ತ್ರೈಲೋಕ್ಯಮಲ್ಲನ ಆಡಳಿತ ಅವಧಿಯಲ್ಲಿ ರಚನೆಗೊಂಡ ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದಲ್ಲಿ ದೊರೆತ ಕ್ರಿ.ಶ.1061ರ ಶಾಸನ[30] ಮಲ್ಲಕವಿಯ ಹೆಸರನ್ನು ಉಲ್ಲೇಖಿಸುತ್ತದೆ.

> 'ರಾಮಭದ್ರ ಹರಚರಣ ಕಮಳ ಭಕ್ತ ಪರಮಾರ್ತ್ಥಂ ಕರುವ ಗುಲುಗನಣುಗಿರ ಪುತ್ರಂ ನಿರುತಂ ಕರುವರ ಬರ್ಮ್ಮಂ ಬರೆಯಿಸಿದಂ ಬರೆದ ಮಲ್ಲನೀ ಶಾಸನಮಂ॥'

ಎಂದು ಹೇಳಿರುವುದರಿಂದ ಕರುವರ ಬರ್ಮ್ಮನು ಮಲ್ಲಕವಿಯಿಂದ ಈ ಶಾಸನವನ್ನು ಬರೆಯಿಸಿರಬೇಕು. ಈ ಶಾಸನ ಮುಂದುವರೆದು 'ಗುಲಗಿಮಯ್ಯಂ ಸೋಮನಾಥ ದೇವನ ಖಣ್ಡರ' ಎಂದು ಹೇಳಿದೆ. ಅಂದರೆ ಮಲ್ಲನು ಬರೆದ ಶಾಸನವನ್ನು ಸೋಮನಾಥನು ಕಲ್ಲಿನ ಮೇಲೆ ಖಂಡರಿಸಿದ್ದಾನೆ. ಮೈಸೂರು ಜಿಲ್ಲೆ ಹೆಗ್ಗಡೆದೇವನ ಕೋಟೆ ತಾಲೂಕಿನ ಬೆಳತೂರಿನ ಮಾಸ್ತಿಗಲ್ಲಿನಲ್ಲಿ ಬರೆದ ಶಾಸನ ಹಾಗೂ ಗದಗ ತಾಲೂಕಿನ ಚಿಕ್ಕ ಹಂಗೋಳ ಶಾಸನದಲ್ಲಿ ಈತನ ಹೆಸರು ಇರುವುದನ್ನು ನೋಡಿದರೆ ಈತನೊಬ್ಬ ಶಾಸನ ಕವಿಯಾಗಿದ್ದನೆಂದು ಹೇಳಬಹುದು.

**ಇನ್ದಯ್ಯ :**

ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿಸಿದ್ದ ಕ್ರಿ.ಶ.997ರ ಶಾಸನ[31]ದಲ್ಲಿ ಈತನ ಹೆಸರಿದೆ. ತ್ರಿಕಾಳಯೋಗಿ ಭಟಾರನು ಕೊಪ್ಪಳದಲ್ಲಿ ತಪಸ್ಸು ಮಾಡಿ ಮುಕ್ತಿಯನ್ನು ಸಾಧಿಸಿದ. ಈ ಮುನಿಗೆ ತೇಜಬ್ಬೆ ಕಂತಿ ನಿಷಿಧಿಯನ್ನು ಮಾಡಿಸುತ್ತಾಳೆ. ಈ ಶಾಸನವನ್ನು 'ಇನ್ದಯ್ಯ'ನು ಬರೆದ ಎಂದು ಹೇಳಲಾಗಿದೆ. ಕವಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಕೇವಲ ಹೆಸರನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ.

**ಸಮನ್ತಭದ್ರಭಟಾರ (ಸಮಂತಭದ್ರ ಭಟಾರ) :**

ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿದ ಕ್ರಿ.ಶ.1032ರ ಶಾಸನ[32]ದಲ್ಲಿ ಈತನ ಹೆಸರಿದೆ.

ಶ್ರೀಮನ್ನರೇನ್ದ್ರಸೇನ ಮಣ್ಡಿತರಗ್ರ ಶಿಷ್ಯರ್ಸ್ಸಮನ್ತಭ
ದ್ರಭಟಾರರ್ಕ್ಕಲ್ಲೊಳಕ್ಕರಮಂ ಬರೆದು ಕಲ್ಲನಿಱಿಸಿದರ್

ನರೇಂದ್ರಸೇನ ಪಂಡಿತರ ಶಿಷ್ಯನಾದ ಸಮನ್ತಭದ್ರ ಬಟಾರನು ಈ ಶಾಸನವನ್ನು ಬರೆದು ನಿಲ್ಲಿಸಿದರು ಎಂದಿದೆ. ಆದ್ದರಿಂದ ಈ ಶಾಸನ ಕವಿ 'ಸಮನ್ತಭದ್ರಭಟಾರ' ಎಂದು ಹೇಳಬಹುದು.

**ಪಿಟ್ಟೋಜ :**

ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿದ ಕ್ರಿ.ಶ.1028ರ ಶಾಸನ[33] ಹಾಗೂ ಕ್ರಿ.ಶ.1022ರ ಶಾಸನ ಈ ಶಾಸನಗಳನ್ನು ಈತ ಬರೆದಂತೆ ತಿಳಿಸುತ್ತವೆ. ಕ್ರಿ.ಶ.1028ರ ಶಾಸನ[34]ದ ಅಂತ್ಯಭಾಗದಲ್ಲಿ 'ಪಿಟ್ಟೋಜ ಲಿಖಿತಂ' ಎಂದರೆ ಕ್ರಿ.ಶ.1022ರ ಶಾಸನದ ಆರಂಭದಲ್ಲಿಯೇ ಕವಿ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ.

ಶ್ರೀಮತ್ಪದ್ಮನನ್ದಿಸಿದ್ಧಾನ್ತದೇವರ
ನಿಸಿಧಿಗೆಯಂ ಮಾಚಬ್ಬೆಕನ್ತಿ
ಯರ್ ನಿಱಿಸಿದರ್ ॥
ಪಿಟ್ಟೋಜನ ಲಿಖಿತಂ ಮಂಗಳಂ॥ ಎಂದು ಹೇಳಿದೆ.

**ಮೈದುನ ಮಾದೆಯ ಹೆಗ್ಗಡೆ :**

ಕ್ರಿ.ಶ.1315ರ ಕೊಪ್ಪಳ ತಾಲೂಕಿನ ಕಮ್ಮಟ ದುರ್ಗದ ಶಾಸನ[35]ದಲ್ಲಿ ಈತನ ಉಲ್ಲೇಖವಿದೆ. ಇದು ಯುದ್ಧದಲ್ಲಿ ಮಡಿದ ಕಾಮುನಾಕ್ಯನ ಸ್ಮರಣಾರ್ಥ ನಿಲ್ಲಿಸಿದ ವೀರಗಲ್ಲು. ಈ ಶಾಸನದಲ್ಲಿ 'ಬರದಾತ ಮೈದುನ ಮಾದಿಯ ಹೆಗ್ಗಡೆ ಮಂಗಳ ಮಹಾಶ್ರೀ' ಎಂದು ಹೇಳಿರುವುದರಿಂದ ಈತನೇ ಈ ಶಾಸನದ ಕವಿ ಎಂದು ನಿರ್ಧರಿಸಬಹುದಾಗಿದೆ.

**ಬಿರುದರ ಪೆಂಡಿರಗಂಡ ಸೇಷಯ್ಯ :**

ಯಲಬುರ್ಗಾ ತಾಲೂಕಿನ ಬಳಿಗೇರಿಯಲ್ಲಿ ದೊರೆತ ಕ್ರಿ.ಶ.1002ರ ಶಾಸನ[36]ದಲ್ಲಿ ಈತನೇ ಬರೆದದ್ದು ಎಂದು ಹೇಳಲಾಗಿದೆ. ಶಾಸನದ ಕೊನೆಯಲ್ಲಿ ಕವಿ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ.

ಬಿರುದರ ಪೆಣ್ಡಿರಗಣ್ಡ ಮರಳೋ(ಂ)......
ಗೆಲ್ವ... ಪಂಡಿತ ವಾಕ್ಯಂ ವರವೃದ್ಧಪುರ[ದ] ಸಾಸಿರ್ವ್ವರು ಹೇಳೆ ಮೋಜಾಳಿ ಸೇಷಯ್ಯನ ಲಿಖಿತಂ ಮಂಗಳಂ[ಶ್ರೀ]....' ಎಂದು ತನ್ನದು ಪಂಡಿತ ವಾಕ್ಯವೆಂದು

ಹಾಗೂ ವೃದ್ಧಪುರದ ಸಾವಿರ ಜನರು ಹೇಳಲು ಈ ಶಾಸನ ಬರೆದೆನೆಂದು ಹೇಳಿಕೊಂಡಿದ್ದಾನೆ.

**ಸಜ್ಜನ ತಿಲಕ :**

ಕ್ರಿ.ಶ.1170ರ ಯಲಬುರ್ಗಾ ತಾಲೂಕಿನ ಕುಕನೂರಿನ ಶಾಸನ[37] ಈ ಕವಿಯಿಂದ ರಚನೆಗೊಂಡಂತೆ ತಿಳಿಸುತ್ತದೆ. ಈ ಶಾಸನದಲ್ಲಿ ಕವಿಯ ಕುರಿತು ವರ್ಣನೆ ಬಂದಿರುವುದು ವಿಶೇಷವಾಗಿದೆ.

ಪಲಬರ್ ಪೊಗಳಲಗಸ್ತ್ಯರ ಕುಳತಿಳಕಂ
ನೆಗಳ್ದ ಸುಕವಿ ಪರಮಾ
...ಸುತಂ ನಲವಿಂ ಪೇಳ್ದಂ ಸಜ್ಜನತಿಲಕನೆನಲು ಮೆಚ್ಚನಾವನೀ ಶಾಸನಮಂ।ವರ
ಕಾಶ್ಯಪ ಗೋತ್ರದ ದೇರಾಜನಂಗನೆ
ಯ ಮಾಳಿಯಕ್ಕನ ತನಯಂ ಬ[ರೆ]ದನಿದಂ ಶ್ರೀ ನಗೆವಡೆಯರ ತಿಲಕಂ ಗಣಕಮಂಡನಂ
ಶಿವದೇವ॥ ಸ್ವಸ್ತಿ ಶ್ರೀ ಮನ್ಮಹಾ
ಗ್ರಹಾರಕುಕ್ಕನೂರು ಸಾವಿರ್ವ್ವರವರಪುತ್ರನಚ್ಚಿನ ಕ[ಮ್ಮ]ಟದೊಡೆಯಂಚನ್ನೋಜನ ಮಗಂ
ದಾಮೋಜಂ ಬೆಸಕಯ್ದು ಬರೆದಂ ಶಾಸನಮಂ॥

ಈ ಶಾಸನವನ್ನು ಅಗಸ್ತ್ಯ ಗೋತ್ರದ ಸಜ್ಜನ ತಿಲಕ ಬರೆದ(ರಚಿಸಿದ), ಕಾಶ್ಯಪಗೋತ್ರದ ಶಿವದೇವ ಬರೆದ, ದಾಮೋಜ ಕೆತ್ತಿದ ಎಂದು ಹೇಳಲಾಗಿದೆ. ಈ ಶಾಸನದಲ್ಲಿ 23ಕಂದ ಪದ್ಯಗಳು, 3 ಚಂಪಕಮಾಲೆ, 2 ಮತ್ತೇಭ ವಿಕ್ರೀಡಿತ, 1 ಉತ್ಪಲಮಾಲೆ, 1, ಸ್ರಗ್ಧರ ವೃತ್ತ ಮತ್ತು ಮೇಲೆ ಎರಡು ಸಂಸ್ಕೃತ ಪದ್ಯಗಳು ಇರುವುದನ್ನು ನೋಡಿದರೆ ಈತನು ಕವಿಯು ಹಾಗೂ ಪಂಡಿತನಾಗಿದ್ದಂತೆ ತೋರುತ್ತದೆ. ಇದೇ ಕವಿಯು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸಿರಸಂಗಿ ಶಾಸನ[38] ರಚಿಸಿದಂತೆ ತಿಳಿದು ಬರುತ್ತದೆ.

**ಗೋಮಕವಿ :**

ಯಲಬುರ್ಗಾ ತಾಲೂಕಿನ ಕ್ರಿ.ಶ.1178ರ ಕುಕನೂರು ಶಾಸನ[39]ವನ್ನು ಗೋಮಕವಿಯು ರಚಿಸಿದ್ದಾನೆ. ಕಾವ್ಯಮಯವಾಗಿರುವ ಈ ಶಾಸನದಲ್ಲಿ ಕಾವ್ಯಗಳಲ್ಲಿರುವಂತೆ ಆರಂಭದಲ್ಲಿ ಸಮುದ್ರದ ವರ್ಣನೆ ಬರುತ್ತದೆ. ಈ ಶಾಸನದ ಸಾಲುಗಳು ಚಂಪೂ ಕಾವ್ಯದ ಸಾಲುಗಳಂತಿವೆ. ಕವಿಗೆ ಈ ಶಾಸನ ಬರೆದಿದ್ದಕ್ಕಾಗಿ ಕಳೇಶ್ವರನು 12 ಮತ್ತರು ಭೂಮಿಯನ್ನು ದಾನವಾಗಿ ನೀಡುತ್ತಾನೆ.

'ಉತ್ತಮವೆನೆ ಕಡು ಗುಂಟೆಯೊಳಿತ್ತಂತಿರೆ ಗೋಮಕವಿಗೆ ದಯೆಯಿಂ
ಹಂನಿರ್ಮ್ಮತ್ತರ್ಕ್ಕೆಯ್ಯುಂ ಮುನ್ನೆಯುಮನಿತ್ತಂ ಸೆಲಗರದೊಳಂ ಕಳೇಶ್ವರದೇವರು॥"

ಇಷ್ಟನ್ನು ಬಿಟ್ಟರೆ ಈ ಕವಿಯ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಈ

ಶಾಸನದ ಸಾಲುಗಳನ್ನು ನೋಡಿದರೆ ಈತನು ಚಂಪೂ ಕಾವ್ಯದ ಪ್ರಭಾವಕ್ಕೊಳಗಾಗಿ ಈ ಶಾಸನ ರಚಿಸಿರುವಂತೆ ತೋರುತ್ತದೆ.

**ಆದಿತ್ಯದೇವ :**

ಯಲಬುರ್ಗಾ ತಾಲೂಕಿನ ಇಟಗಿ ಗ್ರಾಮದಲ್ಲಿನ ಕ್ರಿ.ಶ.1183ರ ಶಾಸನ[40]ವನ್ನು ಆದಿತ್ಯದೇವ ರಚಿಸಿದ್ದಾನೆ. ಕಾತಾರದ ದಿವಾಕರ ದಂಡನಾಯಕನು 5 ಮತ್ತರು ಭೂಮಿ ಹಾಗೂ ಒಂದು ಮನೆಯನ್ನು ದಾನವಾಗಿ ನೀಡುತ್ತಾನೆ. ಶಾಸನ ಕವಿಯ ಕುರಿತ ಉಲ್ಲೇಖ ಈ ರೀತಿ ಇದೆ.

ಶಕ್ತಿವ್ಯುತ್ಪತ್ತಿ ಸಂಪನ್ನವಿದ್ವತ್ ಶ್ರೀಪಾದಸೇವಿ
ನಾ ರಚಿತಾದಿತ್ಯದೇವೇನ ಸೇಯಂ ಶಾಸನ ಪದ್ಧತಿಃ । ಕೃ
ತಿರಿಯಂ ತ್ರಿಭುವನವಿದ್ಯಾ ಚಕ್ರವರ್ತ್ತಿನಃ ಶ್ರೀಮದಾ
ದಿತ್ಯ ದೇವಸ್ಯ। ಲಿಖಿತಮಿದಂ ಪಂಡಿತ ಲಕ್ಷ್ಮೀಧರೇ
ಣ । ಉತ್ಕೀರ್ಣ್ಣಂ ರಾಜವಿಜ್ಞಾನಿನಾ ಪಂದಯೇನ। ಮಂಗಲಮಹಾಶ್ರೀ ॥

ಆದಿತ್ಯ ದೇವನು ಹೇಳಿದ ಈ ಶಾಸನವನ್ನು ಲಕ್ಷ್ಮೀಧರ ಪಂಡಿತನು ಬರೆದನು. ಇದನ್ನು ಪಂದಯ ಎಂಬುವವನು ಕೆತ್ತಿದನು. ಇಲ್ಲಿ ಕವಿ ತನ್ನನ್ನು ತಾನು ಶಕ್ತಿವ್ಯುತ್ಪತ್ತಿ ಸಂಪನ್ನ ಪಂಡಿತನೆಂದು ಕಡೆದುಕೊಳ್ಳುತ್ತಾನೆ.

**ರಾಮೋಜ :**

ಕೊಪ್ಪಳ ತಾಲೂಕಿನ ಗೊಂಡಬಾಳು ಗ್ರಾಮದಲ್ಲಿನ ಕ್ರಿ.ಶ.1512ರ ಕೃಷ್ಣದೇವರಾಯನ ಕಾಲದ ಶಾಸನ[41]ವನ್ನು ರಾಮೋಜನು ಬರೆದಿದ್ದಾನೆ. ಗೊಂಡಬಾಳು ಗ್ರಾಮದ ಶ್ರೀಕಂಠಯ್ಯ ಬನ್ನಿಮಠ ಅವರ ಮನೆಯ ಪಕ್ಕದಲ್ಲಿರುವ ಈ ಶಾಸನದಲ್ಲಿ

ಯಿ ಶಾಸನವ ಬರೆದ ಕೊಪಣದ
ಕಂಮಾಟಿೋಜನ ಮಗ ರಾಮೋಜ ಶ್ರೀ–

ಎಂದು ಹೇಳಲಾಗಿದೆ. ಶಾಸನ ಕವಿಯ ಬಗ್ಗೆ ಹೆಚ್ಚಿನ ಮಾಹಿತಿಗಳು ಇಲ್ಲಿ ದೊರೆಯುವುದಿಲ್ಲ.

**ಗಿರಿಜೇಶ :**

ಗಂಗಾವತಿ ತಾಲೂಕಿನ ಆನೆಗೊಂದಿ ಗ್ರಾಮದ ಉತ್ತರಕ್ಕಿರುವ ಕಡೇ ಬಾಗಿಲ ಬಳಿಯ ಹೊಲದಲ್ಲಿ ದೊರೆತ ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿಯ ಆಧಾರದ ಮೇಲೆ ಇದನ್ನು ಕ್ರಿ.ಶ.13ನೇ ಶತಮಾನದ್ದೆಂದು ಗುರುತಿಸಲಾಗಿದೆ. ಈ ಶಾಸನ 290 ಸಾಲುಗಳನ್ನುಳ್ಳ ಸುದೀರ್ಘ ವಾದುದಾಗಿದೆ. ಈ ಶಾಸನದಲ್ಲಿ ಅಮೃತ

ಮಥನದ ಕಥೆ, ಕುಂಬಾರ ಕುಲ ಹುಟ್ಟಲು ಕಾರಣವಾದ ಕಥೆಯೊಂದಿಗೆ ಶಿವಪಾರ್ವತಿಯರ ವಿವಾಹದ ಕಥೆಯನ್ನು ಹೇಳಲಾಗಿದೆ. ಶಾಸನದ ಕೊನೆಯಲ್ಲಿ ಗಿರಿಜೇಶ ಹೇಳಲು ವಿಶ್ವಾಮಿತ್ರ ಬರೆದ ಎಂದಿರುವುದರಿಂದ ಗಿರಿಜೇಶ ಕವಿಯಾಗಿದ್ದು, ವಿಶ್ವಾಮಿತ್ರ ಲಿಪಿಕಾರನಾಗಿರಬೇಕು ಎಂದು ತಿಳಿದು ಬರುತ್ತದೆ. ಇಲ್ಲಿ ಕವಿ ಹಾಗೂ ಲಿಪಿಕಾರರನ್ನು ಕೇವಲ ಸಾಂಕೇತಿಕವಾಗಿ ಗ್ರಹಿಸಬೇಕು.

ಗಿರಿಜೇಶ ಪೇಳ್ದನಾವರಮನಿಸ್ರಷ್ಟನಾದರದಿಂದ ಬದರ
ವಿಶ್ವಮಿತ್ರನೆ ಪೆರಿದೊಲವಿನಿಂದ ಕೋವರ ಕುಲಕ್ಕೆ ಕುಡುವೇಳ್ದಗಿಟರಾಜಗಿತ್ತನೀ ಸಾಸನವನು। ಎಂದು ಹೇಳಲಾಗಿದೆ.

**ಸೇನಬೋವ ಬಂಮರಸ :**

ಕುಷ್ಟಗಿ ತಾಲೂಕಿನ ಪುರ ಗ್ರಾಮದಲ್ಲಿನ ಕ್ರಿ.ಶ.12ನೇ ಶತಮಾನದ ಶಾಸನ[42]ವನ್ನು ಸೇನಬೋವ ಬಂಮರಸನು ಬರೆದಿದ್ದಾನೆ.

ಇಂತಿ ಧರ್ಮ್ಮಶಾಸನಂ ಭೂಮ್ಮಂಡಳ ಧರೆ ದಿವಂ ಚಂದ್ರಾರ್ಕ್ಕರುಳ್ಳಿನಂ ಸ್ಥಿರಾಯು ಧರ್ಮ್ಮವೆಂದು ಬರೆದಂ॥ ಸೇನಬೋವ ಬಂಮರಸ॥ ನರಸಿಂಹ[ಹ]ಯ।
ದೇವರ ಮನೆಯ ಸೇನುಬೋವ ಬಸವರಸನಿಗೆ ಹಿರಿಯಕೋಲ ವಿದರ ಮತ್ತರೊಂದು॥

ಈ ಶಾಸನವನ್ನು ಬರೆದ ಸೇನಬೋವ ಬಂಮರಸನಿಗೆ ಹಿರಿಯ ಕೋಲಲ್ಲಿ ಒಂದು ಮತ್ತರನ್ನು ನೀಡುತ್ತಾರೆ ಎಂದು ಉಲ್ಲೇಖಿಸಲಾಗಿದೆ.

**ಶಾಸನ ಮತ್ತು ಛಂದಸ್ಸು :**

ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಛಂದಸ್ಸಿನ ಪದ್ಯಗಳನ್ನೊಳಗೊಂಡ ಹಲವು ಶಾಸನಗಳು ನಮಗೆ ದೊರೆತಿವೆ. ಚಂಪೂವಿನ ಪ್ರಭಾವದಿಂದಾಗಿ ಅದರ ಮಾದರಿಯಲ್ಲಿಯೇ ಇಲ್ಲಿನ ಶಾಸನಗಳು ರಚನೆಗೊಂಡಿವೆ. ಇಲ್ಲಿ ಶಾಸನವನ್ನು ರಚಿಸಿದವರು ಹಳಗನ್ನಡದ ಕಾವ್ಯಗಳನ್ನು ಅರಿತಿರಬೇಕೆ ನಿಸುತ್ತದೆ. ಬಹುಜನ ಶಾಸನ ಕವಿಗಳು ಕಾವ್ಯಗಳಲ್ಲಿ ಬಳಸಲ್ಪಟ್ಟ ಛಂದಸ್ಸಿನ ಲಯವನ್ನು ಶಾಸನಗಳಲ್ಲಿ ಬಳಸಿಕೊಂಡಿದ್ದಾರೆ.

**ವರ್ಣವೃತ್ತಗಳು :**

ಕನ್ನಡ ಕಾವ್ಯಗಳಲ್ಲಿ ಮೊದಲಿಗೆ ದೊರೆಯುವುದು ವರ್ಣವೃತ್ತಗಳು. ಅದರ ಪ್ರಭಾವದಿಂದಾಗಿ ಶಾಸನಗಳಲ್ಲಿಯೂ ಕೂಡ ವರ್ಣವೃತ್ತಗಳು ಬಳಕೆಗೊಂಡಿವೆ. ಗದ್ಯ ಹಾಗೂ ಬಿಡಿ ಪದ್ಯಗಳನ್ನೊಳಗೊಂಡ ಶಾಸನಗಳು ಜೊತೆ–ಜೊತೆಗೆ ಇಂತಹ

ವರ್ಣವೃತ್ತಗಳನ್ನೊಳಗೊಂಡ ಅನೇಕ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಈ ವರ್ಣವೃತ್ತಗಳಲ್ಲಿ ಸಮ, ಅರ್ಧಸಮ ಹಾಗೂ ವಿಷಮಗಳೆಂದು ಮೂರು ತೆರನಾಗಿವೆ. ಇಂತಹ ಲಕ್ಷಣಗಳನ್ನೊಳ ಗೊಂಡ ಶಾಸನಗಳು ದೊರೆತಿವೆ. ನಿದರ್ಶನಕ್ಕಾಗಿ ಕೆಲವು ಶಾಸನಗಳ ಪದ್ಯಗಳನ್ನು ಇಲ್ಲಿ ಕೊಡಲಾಗಿದೆ. ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿದ ಶಾಸನದಲ್ಲಿ ಬರುವ ಚಂಪಕಮಾಲೆಯ ಪದ್ಯ ಈ ರೀತಿಯಿದೆ.

ಜನಪತಿ ಬೂತುಗಂ ನೆಗೞ್ದ ಸಂಕರಗಂಡನ ಮಾರಸಿಂಹದೇ
ವನ ಮಹಿಮಾಸ್ಪದಂ ಮರುಳದೇವನ ರಾಯನ ರಾಜಮಲ್ಲದೇ
ವನ ಗುಣದಂಕಕಾರ್ತ್ತಿಯ ಪರೋಕ್ಷದೊಳೀಜಿನಧರ್ಮ್ಮ ಮಂತುತಾ
ನನು ದಿನ ಮಾನ್ತು ನಿತ್ತರಿಸ ರೇವಕನಿಮ್ಮಡಿಯೇ ಕೃತಾರ್ತ್ಥಯೋ ।

ಕೊಪ್ಪಳದ ಆಗ್ನೇಯ ದಿಕ್ಕಿನ ಕೋಟೆಗೆ ಸೇರಿದ ಮತ್ತೊಂದು ಶಾಸನದಲ್ಲಿ ಉತ್ಪಲಮಾಲೆಯ ಲಕ್ಷಣವನ್ನು ಹೊಂದಿದ ಪದ್ಯದ ಸಾಲುಗಳು ಈ ಕೆಳಗಿನಂತಿವೆ:

ಕನ್ತುಮದೇಭಸಿಂಹರೆನೆ ಸಂದ ಪೊಗೞ್ತೆಯ ಚನ್ದ್ರನನ್ದಿ ಸಿ
ದ್ಧಾನ್ತ ಮುನಿಶ್ವರಗ್ರ್ಗುರುಗಳೆಂಬ ನೆಗೞ್ತೆಯ ದಾಮನನ್ದಿ ಸಿ
ದ್ಧಾನ್ತ ಮುನೀಶ್ವರ ಪ್ರರಥಿತ ಶಿಷ್ಯಗಣಾಧಿಪರೆಂಬ ಪೆಂಪುಲೋ
ಕಾನ್ತ ಮನೆಯ್ದಿತೇಂ ಸಕಳಚಂದ್ರು ಮುನೀಂದ್ರ ಗಣ್ಯ ಮುಣ್ಯರೋ ॥

ಅದೇ ಸ್ಥಳದಲ್ಲಿ ದೊರೆತ ಕ್ರಿ.ಶ.1204ರ ಶಾಸನವೊಂದರಲ್ಲಿ ಶಾರ್ದೂಲವಿಕ್ರೀಡಿತ ವೃತ್ತದ ಪದ್ಯವೊಂದು ಕಾಣಿಸಿಕೊಂಡಿದೆ.

ಈ ಪುಣ್ಯಂ ಪೞಗ್ಗುಂಟೆ ಪುಟ್ಟಿ ಕುಪಣ ಶ್ರೀ ತೀರ್ತ್ಥದೊಳ್ಸೈತಾ
ಳಾಪಂ ಬೆಳ್ಗುಳ ತೀರ್ತ್ಥದೊಳ್ ಮಳದನರ್ಹದ್ದೇಹದೊಳ್ವಶ್ವವಿ
ದ್ಯಾಪಾರಾಯಣನಾದನೋಲಗಿಸಿದಂ ಸಮ್ಯಕ್ತ್ವಚೂಡಾಮಣಿ
ಶ್ರೀ ಪಾದಮಗಳನೆಂದಾರಧಿಕ ಮಾರ್ಬ್ಬೆಪ್ಪಂಬರಂ ಧಾತ್ರಿಯೊಳ್।

ಕ್ರಿ.ಶ.1002ರಲ್ಲಿ ರಚಿತವಾದ ಶಾಸನದಲ್ಲಿ ಈ ಮತ್ತೇಭ ವಿಕ್ರೀಡಿತ ವೃತ್ತದ ಸಾಲುಗಳು ಇವೆ.

ಗುರುಗಳ್ ಶ್ರೀಧರದೇವರಾತ್ಮಜನಕಂ ಶ್ರೀಬೂತುಗಂ ತಾಐಮನೇ
ಹರಿ ಪದ್ಮಾವತಿ ಸೋದರರ್ಜ್ಜಿತರಿಪುಕ್ಷ್ಮಾಪಾಳಕ ಪ್ರಾಪ್ತ ಸ
ಚ್ಚರಿತರ್ಬ್ಬನೆಜ್ ಗಂಗ ಜ್ಯಾಪತಿಗಲಾತ್ಮಧೀಶರ್ಮ್ಮಲ್ಲಪ
ಸ್ಥರಣೀ ವಿಶ್ರುತನೆನ್ದಡಾರ್ಪ್ಪೊಗೞರೀಬಿಜ್ಜಾಮ್ಬಾದೇವ ವಿಯರಂ।

ಈ ರೀತಿಯಾಗಿ ವರ್ಣವೃತ್ತಗಳಿಗೆ ಸೇರಿದ ಅನೇಕ ಪದ್ಯಗಳು ಈ ಜಿಲ್ಲೆಯ ಶಾಸನಗಳಲ್ಲಿ ಬಳಕೆಗೊಂಡಿವೆ. ಕೆಲವು ಪದ್ಯಗಳಲ್ಲಿ ಅಲ್ಪ-ಸ್ವಲ್ಪ ವ್ಯತ್ಯಾಸಗಳು ಕೂಡ

ಕಾಣಿಸಿಕೊಂಡಿವೆ. ಅಲ್ಲಿ ಲಿಪಿಕಾರನದೋಷವೋ ಏನೋ ತಿಳಿಯದು. ಒಟ್ಟಿನಲ್ಲಿ ವರ್ಣವೃತ್ತದ ನಿಯಮಗಳಿಗೆ ಬಹುತೇಕ ಹೊಂದಾಣಿಕೆಯಾಗಿವೆ.

**ಮಾತ್ರಾ ವೃತ್ತಗಳು :** ಮಾತ್ರಾವೃತ್ತಗಳಲ್ಲಿ ಪ್ರಮುಖವಾದುದು ಕಂದ. ಕನ್ನಡದ ಕಾವ್ಯಗಳಲ್ಲಿ ಅಧಿಕವಾಗಿ ಕಾಣುವ ಕಂದವು ಶಾಸನಗಳಲ್ಲಿಯೂ ಕೂಡ ಕಾಣಿಸಿಕೊಂಡಿದೆ. ಈ ಕಂದಕ್ಕೆ ಮೂಲ ಆರ್ಯೆ. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿಯೂ ಸಹ ಕಂದವು ಕಾಣಿಸಿಕೊಂಡಿದೆ.

ದಾನದೊಳರ್ತ್ಥಮನಮಳ
ಧ್ಯಾನದೊಳಿಂತಾತ್ಮಚಿತ್ತಮಂ ಕೂಡಿಸಮಾ
ಧಾನಮತಿಯಿದೆ ಮುಡಿಪಿಯ
ನೂನ ಸುಖಾಸ್ಪದ ಮನೆಯ್ದಿದಳ್ ಗೋನಂಬೆ ।

ಇವುಗಳಲ್ಲದೆ ಇನ್ನು ಅನೇಕ ಶಾಸನಗಳು ಛಂದಸ್ಸಿನ ಬಂಧದಿಂದ ಕೂಡಿರುವುದು ಕಂಡು ಬರುತ್ತದೆ.

**ಕರ್ನಾಟಕ ವಿಷಯಜಾತಿಗಳು–ಅಂಶವೃತ್ತಗಳು :**

ಅಂಶವೃತ್ತಗಳು ಕನ್ನಡ ಛಂದಸ್ಸಿನ ಮಹತ್ವದ ಛಂದೋಪ್ರಕಾರಗಳು. "ಪಂಪಪೂರ್ವಯುಗದಲ್ಲಿ ಗ್ರಂಥಸ್ಥವಾಗಿರಬಹುದಾದ ಈ ವೃತ್ತಗಳಲ್ಲಿ ಕೆಲವು ಪಂಪ, ಪೊನ್ನರ ಕಾವ್ಯಗಳಲ್ಲಿ ಕ್ವಚಿತ್ ಮಿಂಚಿ, ಶರಣರ ಮೂಲಕ ಮತ್ತೆ ಕಾವ್ಯಕ್ಕೆ ಮಾಧ್ಯಮವಾಗತೊಡಗಿದವು."[43] ಅಂಶ ಛಂದೋ ಪ್ರಕಾರಗಳಾದ ತ್ರಿಪದಿ, ಪಿರಿಯಕ್ಕರ, ಷಟ್ಪದಿ ಮುಂತಾದವುಗಳು ಕನ್ನಡ ಕಾವ್ಯಗಳಿಗಿಂತ ಮೊದಲೇ ಶಾಸನಗಳಲ್ಲಿ ಬಳಕೆಗೊಂಡಿವೆ. ಕೊಪ್ಪಳಜಿಲ್ಲೆಯ ಶಾಸನಗಳಲ್ಲಿ ಕರ್ನಾಟಕ ವಿಷಯಜಾತಿ ಪ್ರಕಾರಗಳು ಬಳಕೆಯಾಗಿರುವುದು ಬಹಳ ಅಪರೂಪ. ಗಂಗಾವತಿ ತಾಲೂಕಿನ ಆನೆಗೊಂದಿಯಲ್ಲಿ ದೊರೆತ ತಾಮ್ರ ಶಾಸನ[44]ದಲ್ಲಿ ಗದ್ಯದ ಜೊತೆಗೆ ಅಂಶಷಟ್ಪದಿ ಪದ್ಯಗಳು ಬಳಕೆಯಾಗಿವೆ. ಶಿವಪಾರ್ವತಿಯರ ವಿವಾಹವನ್ನು ವರ್ಣಿಸುವ ಈ ಶಾಸನದಲ್ಲಿ ಅಮೃತಮಥನ ಪುರಾಣದ ಅಂಶಷಟ್ಪದ ಪದ್ಯಗಳು ಬಳಕೆಯಾಗಿವೆ. 'ಆನೆಗೊಂದಿಯಲ್ಲಿ ದೊರೆತ ತಾಮ್ರಪಟದಲ್ಲಿ (ಕಾಲ 13ನೇ ಶತಮಾನ) ವಿವಾಹ ಪುರಾಣ, ಸಮಯಶಾಸನ ಪುರಾಣ ಮತ್ತು ಅಮೃತಮಥನ ಪುರಾಣದ ಹೆಸರಿನ ಮೂರು ಕಾವ್ಯಗಳು ಇದ್ದು ಅಮೃತಮಥನ ಪುರಾಣದ 23 ಪದ್ಯಗಳು ಅಂಶಷಟ್ಪದದಲ್ಲಿ ಬಳಕೆಯಾಗಿರುವುದನ್ನು ಎಂ.ಎಂ.ಕಲಬುರ್ಗಿ ಅವರು ಗುರುತಿಸಿದ್ದಾರೆ.[45] ಶಾಸನಪಾಠ ಹಲವೆಡೆ ದೋಷಪೂರಿತವಾಗಿದ್ದರೂ ಪರಿಷ್ಕರಿಸಬಹುದಾಗಿದೆ. ನಿದರ್ಶನಕ್ಕೆ ಶಾಸನದ ಒಂದು ಪದ್ಯವನ್ನು ಕೊಡಲಾಗಿದೆ.

ಗಿರಿರಾಜ ನಿಮ್ಮಯ್ಯ
ವರಮೇನೆ ನಿಮ್ಮವ್ವ

ಗಿರಿಸುತೆ ನಿಮ್ಮೊಡವುಟ್ಟಿದಕ್ಕಂ
ಪರಮೇಶ ಭಾವನಾ
ಗೊರವಂಗಿರಳಿಯಂದಿ
ರ್ಕರಗ ವಿದ್ಯಾಧರರ ಕುಲಮುಂತುಂಟುಂ

ಈ ಶಾಸನದಲ್ಲಿ ಬಳಕೆಯಾದ ಅಮೃತಮಥನ ಪುರಾಣ ಕಾವ್ಯಗಳು ಅತ್ಯಂತ ಪ್ರಾಚೀನ ಹಾಗೂ ಮೊದಲ ಶಾಸನೋಕ್ತ ಅಂಶಷಟ್ಪದಿ ಕಾವ್ಯಗಳೆಂಬ ಹೆಗ್ಗಳಿಕೆ ಹೊಂದಿವೆ.

ಒಟ್ಟಿನಲ್ಲಿ ಜಿಲ್ಲೆಯ ಶಾಸನಗಳಲ್ಲಿ ಕಂಡು ಬರುವ ಪದ್ಯಗಳಲ್ಲಿ ಛಂದಸ್ಸು ತನ್ನ ವೈಲಕ್ಷಣಗಳಲ್ಲಿ ಅಲ್ಪ-ಸ್ವಲ್ಪ ವ್ಯತ್ಯಾಸದಿಂದ ಕಾಣಿಸಿಕೊಂಡಿವೆ.

**ಸ್ಥಳನಾಮಗಳು :**

ಒಂದು ಗ್ರಾಮದ ಸ್ಥಳನಾಮಗಳು ಅಲ್ಲಿನ ನೈಸರ್ಗಿಕತೆಯ ಮೇಲೆ ಹುಟ್ಟಿಕೊಂಡಿರುತ್ತವೆ. ಅಲ್ಲಿ ಹುಟ್ಟಿರುವ ಪ್ರಕೃತಿಯ(ನೈಸರ್ಗಿಕ) ಕಲ್ಲು, ಮರ, ಬೆಟ್ಟ, ಹಳ್ಳ, ಭೂಮಿಯ ಆಧಾರದ ಮೇಲೆ ಹೆಚ್ಚಿನ ಸ್ಥಳನಾಮಗಳು ರಚಿತವಾಗಿರುತ್ತವೆ. ಸ್ಥಳನಾಮಗಳಲ್ಲಿ ಆ ಪ್ರದೇಶದ ಸಂಸ್ಕೃತಿಯನ್ನು ಅಳೆಯಬಹುದಾಗಿದೆ. "ಸ್ಥಳನಾಮಗಳ ಅಧ್ಯಯನ ಮಹತ್ವವನ್ನು ಕ್ರಿ.ಶ.1768ರ ಕಾಲಕ್ಕಾಗಲೇ ಮೊದಲು ಗುರುತಿಸಿದವರು ಗಾತ್ ಫ್ರೀಡ್ ವಿಲ್ಹೆಲ್ಮಲೀಬ್ನಿಜ್. ಈ ಕಾರಣದಿಂದಾಗಿ ಇವನನ್ನು ಸ್ಥಳನಾಮಶಾಸ್ತ್ರದ ಮೂಲ ಪುರುಷನೆಂದು ಕರೆಯಲಾಗುತ್ತದೆ."[46] ಗ್ರಾಮನಾಮಗಳ ಅಧ್ಯಯನದ ಜೊತೆಗೆ ವ್ಯಕ್ತಿನಾಮ, ಕುಟುಂಬನಾಮ ಇತ್ಯಾದಿಗಳ ಅಧ್ಯಯನಗಳು ನಡೆದಿವೆ. "ಪ್ರಾಚೀನ ಸ್ಥಳನಾಮಗಳಲ್ಲಿ ಬಹುಪಾಲು ಅರ್ಥಗರ್ಭಿತವಾದವುಗಳು. ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ, ಗಿಡ, ಕೋಟೆ, ದೇವಾಲಯ ಮುಂತಾದವು ಆ ಪ್ರದೇಶದ ಚರಿತ್ರೆಯನ್ನು ಹೇಳಲು ಹೇಗೆ ಸಹಾಯಕ ವಾಗುತ್ತವೆಯೋ ಹಾಗೆಯೇ ಅಲ್ಲಿನ ಸ್ಥಳನಾಮಗಳ ಚರಿತ್ರೆಗೆ ಪೂರಕವಾಗುವ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಆದುದರಿಂದ ಸ್ಥಳನಾಮಗಳಿಗೆ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಾಧಾನ್ಯಕ್ಕಿಂತ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕಾಗಿದೆ."[47] ಸ್ಥಳನಾಮಗಳನ್ನು ಒದಗಿಸುವ ಪ್ರಮುಖ ಆಕರಗಳೆಂದರೆ ಶಾಸನಗಳು. ಶಾಸನಗಳೇ ಗ್ರಾಮನಾಮಗಳ ಸೂಚಕಗಳಾಗಿ ಪರಿಣಮಿಸಿವೆ. ಸ್ಥಳನಾಮಗಳು ಆ ಪ್ರದೇಶದ ಸಾಂಸ್ಕೃತಿಕ ಪ್ರತಿಬಿಂಬಗಳು. ಅವುಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೆ ಒಳಪಡಿಸಿದರೆ ಆ ಪ್ರದೇಶದ ಭವ್ಯ ಪರಂಪರೆ ಅನಾವರಣಗೊಳ್ಳುತ್ತದೆ.

ಜಿಲ್ಲೆಯ ಶಾಸನಗಳಲ್ಲಿ ಸುಮಾರು 150ಕ್ಕೂ ಹೆಚ್ಚಿನ ಗ್ರಾಮನಾಮಗಳ ಉಲ್ಲೇಖಗಳು ಕಂಡು ಬರುತ್ತವೆ. ಈ ಗ್ರಾಮನಾಮಗಳಲ್ಲದೆ ದೇಶ, ನಾಡು, ವಿಭಾಗ, ಉಪವಿಭಾಗ, ಘಟಕಗಳ ಹೆಸರುಗಳು ಉಲ್ಲೇಖಗೊಂಡಿವೆ. ಈ ಸ್ಥಳನಾಮಗಳು

ತಮ್ಮದೇ ಆದ ವಿಶಿಷ್ಟತೆಯಿಂದ ಕೂಡಿರುವುದು ಕಂಡು ಬರುತ್ತದೆ. ಜಿಲ್ಲೆಯ ಶಾಸನಗಳಲ್ಲಿ ಪ್ರಸ್ತಾಪಿತವಾದ ಸ್ಥಳನಾಮಗಳಲ್ಲಿ ಕೆಲವು ಕೊಪ್ಪಳ ಜಿಲ್ಲೆಯೇತರ ಸ್ಥಳನಾಮಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಇಲ್ಲಿನ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸ್ಥಳನಾಮಗಳಲ್ಲಿ ಹೆಚ್ಚಿನವುಗಳು ಬದಲಾವಣೆಯಾಗಿದ್ದು ಕಂಡು ಬರುತ್ತದೆ. ಬದಲಾವಣೆ ಅಥವಾ ಪರಿವರ್ತನೆ ಅನ್ನುವುದು ಪ್ರಕೃತಿಯಷ್ಟೇ ಸಹಜವಾದುದು. ಇಲ್ಲಿ ಬದಲಾವಣೆ ಎಂದರೆ ಸ್ಥಳನಾಮದ ಪರಿವರ್ತನೆ ಚಿಕ್ಕ ಪ್ರಮಾಣದಲ್ಲಿ ಆಗಿರಬಹುದು ಅಥವಾ ಪೂರ್ಣ ಪ್ರಮಾಣದ ಪರಿವರ್ತನೆ ಇಲ್ಲವೇ ಒಂದಕ್ಷರವೂ ಬದಲಾವಣೆಗೊಂಡಿರ ಬಹುದು. ಜಿಲ್ಲೆಯ ಗ್ರಾಮನಾಮಗಳನ್ನು ಅಧ್ಯಯನದ ಅನೂಕೂಲಕ್ಕೆ ತಕ್ಕಂತೆ ವಿಂಗಡಿಸಿಕೊಂಡು ಅಧ್ಯಯನ ನಡೆಸಲಾಗಿದೆ.

ಮೊದಲು ಜಿಲ್ಲಾ ಕೇಂದ್ರವಾದ ಕೊಪ್ಪಳದ ಸ್ಥಳನಾಮವನ್ನು ಕುರಿತು ಇಲ್ಲಿ ಚರ್ಚಿಸುವುದು ಉಚಿತವೆನಿಸುತ್ತದೆ. 'ಕೊಪ್ಪಳ'ವನ್ನು ಕುರಿತು ಎಂಬ ಹೆಸರುಗಳಿಂದ ಉಲ್ಲೇಖಗೊಂಡಿದ್ದರೂ; ಶಾಸನಗಳಲ್ಲಿ 'ಕುಪಣ' (ಕೊ–52,ಕೊಪ್ಪಳ), 'ಕುಪಣತೀರ್ಥ'(ಕೊ–82,ಕೊಪ್ಪಳ), 'ಕೊಪಣ' (ಕೊ–39,ಕೊಪ್ಪಳ), 'ಕೊಪಣನಾಡು' (ಕೊ–135,ಕೊಪ್ಪಳ), 'ಕೊಪ್ಪಳ' (ಕೊ–129,ಕೊಪ್ಪಳ) ನಾಮಗಳಿಂದ ಕರೆದಿರುವುದು ಕಂಡು ಬರುತ್ತದೆ. "ಇಲ್ಲಿನ ಕಿರಿ ಎತ್ತರದ ಗಿಡಗಂಟೆಗಳಿಂದ ಕೂಡಿದ 'ತಪ್ಪಲು' ತಾಣದಲ್ಲಿ ಅಂದು ನೆಲೆಸಿದ ಮಾನವನು ತಪ್ಪಲದಲ್ಲಿರುವ ದಿವ್ಯ ಶಕ್ತಿಯಿಂದ ತನ್ನ ಬದುಕಿಗೆ ಒಳಿತಾದುದನ್ನು ಅನುಭವದಿಂದ ಅರಿತು ತಾನು ನೆಲೆಸಿದ ತಾಣಕ್ಕೆ 'ತಪ್ಪಲ' ಎಂದು ಕರೆದಿರುವ ಸಾಧ್ಯತೆಯಿದೆ. ಈ ಪ್ರದೇಶದಲ್ಲಿರುವ ಗವಿಯ ಆಸರೆ, ಜೋಡು ಪಕ್ಷಿಯ ರೇಖಾಚಿತ್ರ, ಬಂಡೆವರ್ಣ ಚಿತ್ರಗಳು, ಕಲ್ಲಿನ ಕೋಣೆಯ ಸಮಾಧಿಗಳು (ಡಾಲ್‌ಮನ್ಸ್) ಮತ್ತು ಇಲ್ಲಿ ದೊರೆಯುವ ಅವಶೇಷಗಳು ಇವೆಲ್ಲವುಗಳು ಮಾನವನು ಈ ಪ್ರದೇಶದಲ್ಲಿ ಬಹಳ ಹಿಂದೆಯೇ ನೆಲೆಸಿದ್ದನ್ನು ದೃಢೀಕರಿಸುತ್ತದೆ."[52] ಅಂದರೆ ಜನಸಾಮಾನ್ಯರ ಬಾಯಲ್ಲಿ 'ತಪ್ಪಲು' 'ಕೊಪ್ಪಲು' ಆಗಿ ಪರಿವರ್ತನೆಗೊಂಡಿರುವುದರಲ್ಲಿ ಯಾವುದೇ ಅನುಮಾನವಿಲ್ಲ. 'ಲ'ಕಾರದ ಅಂತ್ಯಾಕ್ಷರವು 'ಳ'ಕಾರಗಳಾಗಿ ಭಾಷೆಯ ಅನೇಕ ಸಂದರ್ಭಗಳಲ್ಲಿ ಬದಲಾವಣೆಯಾಗಿರುವುದು ಕಂಡು ಬರುತ್ತದೆ. ಸ್ಥಲ>ಸ್ಥಳ, ಫಲ>ಪಳ, ಕಲೆ>ಕಳೆ, ಕಮಾಲ>ಕಮಳ ಇತ್ಯಾದಿಗಳನ್ನು ಗಮನಿಸಿದಾಗ ಮೇಲಿನ ಪರಿವರ್ತನೆಗೆ ಪುಷ್ಠಿ ಕೊಡುತ್ತದೆ. ಕೊಪ್ಪಳವನ್ನು ಕೆಲವು ಶಾಸನಗಳಲ್ಲಿ 'ಕೊಪಣ' ಎಂಬ ಹೆಸರಿನಿಂದ ಕರೆಯಲಾಗಿದೆ. ಈ ಹೆಸರಿನಲ್ಲಿಯೂ ಸಹ 'ಣ'ಕಾರದ ಬದಲಾಗಿ 'ಳ'ಕಾರದ ಪಲ್ಲಟವನ್ನು ಕಾಣುತ್ತೇವೆ. ಅದೇ ರೀತಿ ಸಾಹಿತ್ಯದಲ್ಲಿ ಅನೇಕ ಸಂದರ್ಭದಲ್ಲಿ 'ಣ'ಕಾರವು 'ಳ'ಕಾರವಾಗಿ ಕಂಡು ಬರುತ್ತದೆ. ಉದಾಹರಣೆಗಾಗಿ ತಾಣ>ಸ್ಥಳ. ಮಣ್ಣು>ಮರಳು, ಕುಣಿ>ಕುಳಿ, ಬಣಗ>ಬಳಗ ಇತ್ಯಾದಿಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಇನ್ನು ಕೆಲವು ಶಾಸನಗಳಲ್ಲಿ 'ಕೊಪಣ'ಕ್ಕೆ 'ತೀರ್ಥ'ಸೇರಿ 'ಕೊಪಣಾತೀರ್ಥ' ಎಂಬ ನಾಮಗಳು ಉಲ್ಲೇಖಗೊಂಡಿವೆ. 'ತೀರ್ಥ'ಎಂಬ ಪದಕ್ಕೆ

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಪವಿತ್ರವಾದ ಜಲ, ಪುಣ್ಯ ಕ್ಷೇತ್ರ, ಪವಿತ್ರ ಸ್ಥಳ ಎಂಬ ಅರ್ಥಗಳನ್ನು ಕೊಡಲಾಗಿದೆ. ಅಂದರೆ ಒಂದು ಕಾಲಕ್ಕೆ ಕೊಪ್ಪಳವು ಪವಿತ್ರ ಕ್ಷೇತ್ರವಾಗಿತ್ತೆಂದು ಹೇಳಬಹುದು. ಹಿಂದೂಗಳಿಗೆ ಕಾಶಿ ಪವಿತ್ರ ಕ್ಷೇತ್ರವಾಗಿರುವಂತೆ ಜೈನರಿಗೆ ಇದು ಪವಿತ್ರ ಕ್ಷೇತ್ರವಾಗಿತ್ತು. ಆದುದರಿಂದಲೇ ಹೆಚ್ಚಿನ ಜೈನ ಶಾಸನಗಳಲ್ಲಿ **'ಕೊಪಣಾತೀರ್ಥ'** ಎಂಬ ನಾಮದಿಂದ ಉಲ್ಲೇಖಿಸಲಾಗಿದೆ.

ಸಾಹಿತ್ಯದಲ್ಲಿ **'ಕೊಪಣಾಚಲ'** ಎಂಬ ಹೆಸರಿನಿಂದ ಕರೆಯಲಾಗಿದೆ. ಇಲ್ಲಿ **'ಕೊಪಣ'**ಕ್ಕೆ 'ಅಚಲ' ಎಂಬ ಶಬ್ದ ಸೇರಿಕೊಂಡಿದೆ. **'ಅಚಲ'** ಎಂಬ ಶಬ್ದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲಿ ಬೆಟ್ಟ, ಚಲಿಸದ, ಶಾಶ್ವತವಾದ ಎಂಬ ಅರ್ಥಗಳನ್ನು ಕೊಡಲಾಗಿದೆ. ಇಲ್ಲಿರುವ ಶಾಶ್ವತವಾದ ಭಯಂಕರ ಬೆಟ್ಟ ಗುಡ್ಡಗಳಳಿಂದ ಕೂಡಿದ ಪ್ರದೇಶವಾದ್ದರಿಂದ **'ಕೊಪಣ'**ವನ್ನು **'ಕೊಪಣಾಚಲ'**ಎಂದು ಕರೆದಿರಬಹುದು. ಈ ರೀತಿಯಾಗಿ ಕೇಂದ್ರ ಸ್ಥಳವಾದ **'ಕೊಪ್ಪಳ'**ದ ಸ್ಥಳನಾಮವು ನಾನಾ ರೀತಿಯಲ್ಲಿ ಹುಟ್ಟಿ ಅದರೊಳಗೆ ತನ್ನದೇ ಆದ ಮಹತ್ವವನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ಜಿಲ್ಲೆಯಲ್ಲಿ ಅನೇಕ ರೀತಿಯ ಗ್ರಾಮನಾಮಗಳು ದೊರೆಯುತ್ತವೆ. ಅವುಗಳು ಹೇಗೆ ಹುಟ್ಟಿದವು ಮತ್ತು ಹೇಗೆ ಪರಿವರ್ತನೆಗೊಂಡವು ಎಂಬ ಬಗ್ಗೆ ವಿವರಿಸಲು ಸಾಧ್ಯವಿಲ್ಲ. ಆ ಗ್ರಾಮನಾಮಗಳನ್ನು ಗುಂಪುಗುಂಪಾಗಿ ವಿಂಗಡಿಸಿ ವಿವರಿಸುವ ಪ್ರಯತ್ನ ಮಾಡಿದ್ದೇನೆ.

**1. ಪ್ರಾದೇಶಿಕತೆಯಲ್ಲಿ ಸುತ್ತಲಿನ ನೈಸರ್ಗಿಕದ ವೈಲಕ್ಷಣಗಳಲ್ಲಿ ನಿರ್ಮಾಣವಾದ ಸ್ಥಳನಾಮಗಳು:**

**ಗೆರೆ/ಕೆರೆ** : ಬಟ್ಟಕೆರೆ, ಕಲುಕೆರೆ, ಸೂಳೆಕೆರೆ, ಬಳಗೇರಿ, ಹದರಗೇರಿ, ಅರಕೇರಿ, ಮೂಡಕೇರಿ, ತಾವರಕೆರೆ(ತಾವರಗೇರೆ), ಆಲುಂಗೆರೆ, ಪೆಂದೆಯಕೆರೆ, ಹೆಗ್ಗೆರೆ, ಮಣ್ಣಿಕೆರೆ, ಯರಗೇರಿ ಇತ್ಯಾದಿ.

**ಗಿರಿ** : ಕನಕಗಿರಿ, ಪಲ್ಗಿರಿ(ಹಲಗೇರಿ)

**ಕಲ್ಲು/ಗಲ್ಲು** : ನೆರೆಯಂಗಲ್ಲು (ನರೆಗಲ್ಲು), ತಳೆಕಲ್ಲು (ತಳಕಲ್ಲು), ಬೆಣ್ಣೆಕಲ್ಲು(ಬೆಣಕಲ್ಲು), ಜಂತಗಲ್, ತೋರಗಲ್ಲು, ಯಡಿಗಲ್ಲು, ಯಿಲಕಲ್ಲು(ಇಲಕಲ್ಲು), ಕಲುಕೆರೆ, ಕಲ್ಲೂರು ಇತ್ಯಾದಿ.

**ದಿಬ್ಬ** : ದಿಬ್ಬಿಹಾಳ

**ಗುಂಡಿ** : ಲೊಕ್ಕಿಗುಂಡಿ(ಲಕ್ಕುಂಡಿ)

**2. ಜಾತಿಯ ಆಧಾರದ ಮೇಲೆ ನಿರ್ಮಾಣವಾದ ಸ್ಥಳನಾಮಗಳು :**

: ಜಂಗಮರಹಳ್ಳಿ, ತಳವಾರಕಟ್ಟೆ

**3. ವ್ಯಕ್ತಿಯ ಆಧಾರದ ಮೇಲೆ ನಿರ್ಮಾಣವಾದ ಸ್ಥಳನಾಮಗಳು :**

: ಸಿದ್ಧನಹಳ್ಳಿ, ಅಚ್ಯುತರಾಯಪುರ, ಚಂನ್ನಪುರ, ರಾಯದುರ್ಗ, ರಾಜವೂರ, ಮಾರಕಂಡೆಯಪುರ, ಭಟ್ಟಪ್ಪಯ್ಯನಹಳ್ಳಿ, ಪಂಪಾದೇವಿಹಳ್ಳಿ, ವಿಠ್ಠಲಾಪುರ,

**4. ದೇವರ ಹೆಸರಿನ ಮೇಲೆ ನಿರ್ಮಾಣವಾದ ಸ್ಥಳನಾಮಗಳು :**

: ಹರಿಹರಪುರ, ರಾಮಪುರ, ನಾಗಲಾಪೂರ ಇತ್ಯಾದಿ

**5. ಪ್ರಾಣಿಗಳ ಆಧಾರದ ಮೇಲೆ ನಿರ್ಮಾಣವಾದ ಸ್ಥಳನಾಮಗಳು :**

: ಕೋಳಿವಾಡ, ನವಿಲೆ, ನವಿಲ್ಗುಂದ, ಆನೆಗೊಂದಿ ಇತ್ಯಾದಿ

**6. ವಾಸಸ್ಥಾನದ ಆಧಾರದ ಮೇಲೆ ನಿರ್ಮಾಣವಾದ ಸ್ಥಳನಾಮಗಳು :**

**ಪುರ** : ಬಂಕಾಪುರ, ಹರಿಹರಪುರ, ಬಂಡಿಹರ್ಲಾಪುರ, ಸಂಕರಾಪುರ, ಮಾರಕಂಡೆಯಪುರ, ವೋಯಿಲಾಪುರ, ಪುರ, ಸಂಗಮಾಪುರ, ಅಚ್ಯುತರಾಯಪುರ, ವಿಠ್ಠಲಾಪುರ, ಮಿರ್ಜಾಪುರ, ಚನ್ನಂಪುರ, ರಾಮಾಪುರ ಇತ್ಯಾದಿ.

**ಗ್ರಾಮ** : ಕುಂಟೋಜಿಗ್ರಾಮ, ಕಳಸಗ್ರಾಮ

**ಊರು** : ಹೊಸವೂರು, ಕಲ್ಲೂರು, ಬೆನತೂರು, ಕಾಳದಾಲೂರು, ಹೂಡೂರು, ಬೆಳನಗೆಯೂರು, ಕಿರವೂರು, ಗಾಂಚಿ ವೂರ, ರಾಜವೂರ, ಮಲಯೂರ, ಬರಗೂರು, ಗುಂಡೂರು, ಮಾದಿನೂರು ಇತ್ಯಾದಿ.

**ಹಳ್ಳಿ** : ಹಂಪಾದೇವಿಹಳ್ಳಿ, ಜಂಗಮರಹಳ್ಳಿ, ಭಟ್ಟಪ್ಪಯ್ಯನ ಹಳ್ಳಿ, ಕಬ್ಬಳ್ಳಿ, ತಿಳಿವಳ್ಳಿ, ಸಿಂಗನಹಳ್ಳಿ, ಗುಳದಳ್ಳಿ ಇತ್ಯಾದಿ.

**ತಾಣ** : ಹತ್ತೂರುತಾಣ

**ಹಟ್ಟಿ** : ಹೊನ್ನಟ್ಟಿ, ಕೆಸರಹಟ್ಟಿ

**ಪೇಟೆ** : ಕನಕಗಿರಿಪೇಟೆ (ಕನಕಗಿರಿ),

**ನಗರ** : ವಿಜಯನಗರ (ಹಂಪೆ)

ಈ ರೀತಿಯಾಗಿ ಜಿಲ್ಲೆಯ ಶಾಸನಗಳಲ್ಲಿ ಪ್ರಸ್ತಾಪಿತ ಗ್ರಾಮನಾಮ ಗಳನ್ನು ಅವುಗಳಲ್ಲಡಗಿರುವ ವಿಷಯ ವಸ್ತುಗಳ ಆಧಾರದ ಮೇಲೆ ವಿಂಗಡಿಸಬಹುದಾಗಿದೆ. ಇಲ್ಲಿ ಪ್ರಸ್ತಾಪಿತ ಮತ್ತು ಪಟ್ಟಿಯಲ್ಲಿ ತೋರಿಸಲಾದ ಗ್ರಾಮನಾಮಗಳು ಎಲ್ಲವುಗಳು ಕೊಪ್ಪಳ ಜಿಲ್ಲೆಯಲ್ಲಿರುವ ಗ್ರಾಮನಾಮಗಳಲ್ಲ. ಜಿಲ್ಲೆಯ ಸುತ್ತಲಿನ ಪ್ರದೇಶಗಳ ಸ್ಥಳನಾಮಗಳಾಗಿವೆ. ಜಿಲ್ಲೆಯ ಶಾಸನಗಳಲ್ಲಿ ಈ ಗ್ರಾಮನಾಮಗಳ ಪ್ರಸ್ತಾಪವಿರುವುದರಿಂದ ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

## ಸ್ಥಳ ನಾಮದ ಹೆಸರು ಮತ್ತು ಪರಿವರ್ತನೆ ಹಾಗೂ ಉಲ್ಲೇಖಿತ ಶಾಸನ ಸಂಖ್ಯೆ

| ಕ್ರ. ಸಂ. | ಸ್ಥಳ ನಾಮದ ಹೆಸರು ಮತ್ತು ಪರಿವರ್ತನೆ | ಉಲ್ಲೇಖಿತ ಶಾಸನ ಸಂಖ್ಯೆ | ಸ್ಥಳ |
|---|---|---|---|
| 1 | ಕುಪಣ > ಕೊಪ್ಪಳ | ಕೊಪ್ಪಳ – 11 | ಉಪ್ಪಿನ ಬೆಟಗೇರಿ |
| | ,, ,, | ಕೊಪ್ಪಳ – 52 | ಕೊಪ್ಪಳ |
| | ,, ,, | ಕೊಪ್ಪಳ – 80 | ,, |
| | ,, ,, | ಕೊಪ್ಪಳ – 81 | ,, |
| | ,, ,, | ಕೊಪ್ಪಳ – 86 | ,, |
| | ,, ,, | ಕೊಪ್ಪಳ – 90 | ,, |
| | ,, ,, | ಕೊಪ್ಪಳ – 118 | ,, |
| | ,, ,, | ಕೊಪ್ಪಳ – 123 | ,, |
| | ,, ,, | ಕೊಪ್ಪಳ – 126 | ,, |
| 2 | ಕುಪಣತೀರ್ಥ > ಕೊಪ್ಪಳ | ಕೊಪ್ಪಳ – 86 | ಕೊಪ್ಪಳ |
| | ,, ,, | ಕೊಪ್ಪಳ – 94 | ,, |
| | ,, ,, | ಕೊಪ್ಪಳ – 107 | ,, |
| | ,, ,, | ಯಲಬುರ್ಗಾ– 4 | ,, |
| 3 | ಕೊಪಣ > ಕೊಪ್ಪಳ | ಕೊಪ್ಪಳ – 39 | ಕೊಪ್ಪಳ |
| | ,, ,, | ಕೊಪ್ಪಳ – 41 | ಕೊಪ್ಪಳ |
| | ,, ,, | ಕೊಪ್ಪಳ – 135 | ಗೊಂಡಬಾಳ |
| | ,, ,, | ಕೊಪ್ಪಳ – 139 | ಗಿಣಗೇರಿ |
| | ,, ,, | ಕೊಪ್ಪಳ – 174 | ಕೊಪ್ಪಳ |
| 4 | ಕೊಪಣನಾಡು > ಕೊಪ್ಪಳ | ಕೊಪ್ಪಳ – 135 | ಗೊಂಡಬಾಳ |
| | ,, ,, | ಕೊಪ್ಪಳ – 170 | ಕೊಪ್ಪಳ |
| 5 | ಕೊಪ್ಪಳ > ಕೊಪ್ಪಳ | ಕೊಪ್ಪಳ – 129 | ಕೊಪ್ಪಳ |
| | ,, ,, | ಕೊಪ್ಪಳ – 130 | ಕೊಪ್ಪಳ |
| | ,, ,, | ಕೊಪ್ಪಳ – 132 | ಕೊಪ್ಪಳ |
| | ,, ,, | ಕೊಪ್ಪಳ – 170 | ಕೊಪ್ಪಳ |
| | ,, ,, | ಕೊಪ್ಪಳ – 171 | ಕೊಪ್ಪಳ |
| | ,, ,, | ಯಲಬುರ್ಗಾ– 3 | ಯಲಬುರ್ಗಾ |
| 6 | ಪಲ್ಲಿರಿ > ಹಲಗೇರಿ | ಕೊಪ್ಪಳ – 18 | ಹಲಗೇರಿ |
| | ಹಲಗೇಷೆ > ಹಲಗೇರಿ | ಕೊಪ್ಪಳ – 20 | ಹಲಗೇರಿ |
| 7 | ಮೊದೆಗನೂರು > ಮಾದಿನೂರು | ಕೊಪ್ಪಳ – 24 | ಮಾದಿನೂರ |

| | | | |
|---|---|---|---|
| 8 | ಮೊದೆಯನೂರು > ಮಾದಿನೂರು | ಕೊಪ್ಪಳ – 26 | ಮಾದಿನೂರ |
| | ಮೋದಿತಾಗ್ರಾಮ > ಮಾದಿನೂರು | ಕೊಪ್ಪಳ – 26 | ಮಾದಿನೂರ |
| | ಮೊದನೂರು > ಮಾದಿನೂರು | ಕೊಪ್ಪಳ – 26 | ಮಾದಿನೂರ |
| | ಮೊವಿಗನೂರು > ಮಾದಿನೂರು | ಕುಷ್ಟಗಿ – 4 | ಗೋತಗಿ |
| | ಮುದಿಯನೂರು > ಮಾದಿನೂರು | ಕುಷ್ಟಗಿ – 6 | ಮುದೇನೂರು |
| | ಮೋದೆನೂರು > ಮಾದಿನೂರು | ಯಲಬುರ್ಗಾ– 41 | ಕುಕನೂರು |
| | ಮೊದೆಗನೂರು > ಮಾದಿನೂರು | ಯಲಬುರ್ಗಾ– 52 | ಕುಕನೂರು |
| | ಮಾದನೂರು > ಮಾದಿನೂರು | ಕುಷ್ಟಗಿ – 13 | ಪುರ |
| 9 | ಕಲ್ಲಂಗೆರೆ > | ಕೊಪ್ಪಳ – 127 | ಕೊಪ್ಪಳ |
| | ಕಲ್ಲಂಗೆರೆ > | ಕುಷ್ಟಗಿ – 21 | ಚಳಗೇರಿ |
| 10 | ಅಣ್ಣಗೇರಿ > | ಕೊಪ್ಪಳ – 81 | ಕೊಪ್ಪಳ |
| | ಅಣ್ಣಗೇರಿ > | ಕೊಪ್ಪಳ – 109 | ಕೊಪ್ಪಳ |
| 11 | ಅರಸಿಯಬೀಡು > | ಕೊಪ್ಪಳ – 109 | ಕೊಪ್ಪಳ |
| 12 | ಮಿರಿಜಾಪುರ > | ಕೊಪ್ಪಳ – 108 | ಕೊಪ್ಪಳ |
| 13 | ಕೊಳತೂರು > | ಕೊಪ್ಪಳ – 126 | ಕೊಪ್ಪಳ |
| 14 | ಲೊಕ್ಕಗುಂಡಿ > | ಕೊಪ್ಪಳ – 126 | ಕೊಪ್ಪಳ |
| 15 | ಬಂಕಾಪುರ > | ಕೊಪ್ಪಳ – 126 | ಕೊಪ್ಪಳ |
| 16 | ಹೂಲಿ > | ಕೊಪ್ಪಳ – 126 | ಕೊಪ್ಪಳ |
| 17 | ಕೋಗಳಿ > | ಕೊಪ್ಪಳ – 126 | ಕೊಪ್ಪಳ |
| | ಕೋಗಳಿ –500 > | ಕೊಪ್ಪಳ – 136 | ಹ್ಯಾಟಿ |
| 18 | ಮುಳ್ಗುಂದ > | ಕೊಪ್ಪಳ – 136 | ಹ್ಯಾಟಿ |
| 19 | ಅಶೋಕೆ > | ಕೊಪ್ಪಳ – 126 | ಕೊಪ್ಪಳ |
| 20 | ಬಟ್ಟಕೆರಿ > | ಕೊಪ್ಪಳ – 126 | ಕೊಪ್ಪಳ |
| 21 | ಹಾನುಂಗಲ್ಲು > | ಕೊಪ್ಪಳ – 126 | ಕೊಪ್ಪಳ |
| 22 | ನವಿಲ್ಗುಂದ > | ಕೊಪ್ಪಳ – 126 | ಕೊಪ್ಪಳ |
| 23 | ಬೆಳೂಗೊಳ > | ಕೊಪ್ಪಳ – 126 | ಕೊಪ್ಪಳ |
| 24 | ಬೆಳ್ಗೊಳ ತೀರ್ಥ > | ಕೊಪ್ಪಳ – 126 | ಕೊಪ್ಪಳ |
| 25 | ಬಂದಣಿಕೆ > | ಕೊಪ್ಪಳ – 126 | ಕೊಪ್ಪಳ |
| 26 | ಪುರಿ > | ಕೊಪ್ಪಳ – 126 | ಕೊಪ್ಪಳ |
| 27 | ಹೊಸದಳ್ಳಿ > | ಕೊಪ್ಪಳ – 133 | ಕೊಪ್ಪಳ |
| 28 | ಕಲುಕೆರೆ > | ಕೊಪ್ಪಳ – 134 | ಚುಕನಕಲ್ಲು |

| | | | |
|---|---|---|---|
| | ಕಲ್ಕೇರಿ > | ಕುಷ್ಟಗಿ – 1 | ಮಂಕಲ್ಕೇರಿ |
| | ಕಲ್ಲುಕೆರೆ > | ಗಂಗಾವತಿ –90ಎ | ಕನ್ನೇರಮಾಡು |
| 29 | ಕೌಲೂರು > | ಗಂಗಾವತಿ –90ಎ | ಕನ್ನೇರಮಾಡು |
| 30 | ಹೊಸವೂರ > | ಕೊಪ್ಪಳ – 138 | ಕಿಡಿದಾಳು |
| 31 | ಕಿಡಿದಹಾಳ > | ಕೊಪ್ಪಳ – 138 | ಕಿಡಿದಾಳು |
| 32 | ಆನೆಗುಂದಿ > | ಕೊಪ್ಪಳ – 140 | ಗಿಣಗೇರಿ |
| | ಆನೆಯಗುಂದಿ > | ಕೊಪ್ಪಳ – 166 | ಕಮ್ಮಟದುರ್ಗ |
| | ಆನೆಗುಂದಿ > | ಗಂಗವತಿ – 20 | ಆನೆಗುಂದಿ |
| | ಆನೇಗುಂದಿ > | ಗಂಗಾವತಿ – 25 | ಆನೆಗುಂದಿ |
| | ಆನೆಗೊಂದಿ > | ಗಂಗಾವತಿ – 26 | ಆನೆಗುಂದಿ |
| | ಆನೆಗೊಂದಿ > | ಗಂಗಾವತಿ – 27 | ಆನೆಗುಂದಿ |
| | ಆನೆಗುಂದಿ > | ಗಂಗಾವತಿ – 37 | ಆನೆಗುಂದಿ |
| | ಆನೆಗುಂದಿ > | ಗಂಗಾವತಿ – 38 | ಆನೆಗುಂದಿ |
| | ಆನೆಯಗುಂದಿ > | ಗಂಗಾವತಿ – 54 | ಆನೆಗುಂದಿ |
| | ಆನೆಗೊಂದಿ > | ಗಂಗಾವತಿ – 55 | ಆನೆಗುಂದಿ |
| | ಆನೆಗೊಂದಿ > | ಗಂಗಾವತಿ – 63 | ಹನುಮಸಾಗರ |
| | ಆನೆಗೊಂದಿ > | ಗಂಗಾವತಿ – 68 | ರಾಮದುರ್ಗ |
| 33 | ಸಂಸ್ಥಾನವಿದ್ಯಾಸಾಗರ ಆನೆಗುಂದಿ> | ಗಂಗಾವತಿ – 25 | ಆನೆಗುಂದಿ |
| 34 | ಗುಜಲ > | ಕೊಪ್ಪಳ – 142 | ಹಿರೇಸೂಳಿಕೇರಿ |
| | ಗುಜಲ > | ಕೊಪ್ಪಳ – 143 | ಗಂಗನಹಾಳು |
| | ಗುಜಲ > | ಯಲಬುರ್ಗಾ–14 | ಕಲ್ಲೂರು |
| | ಗುಜಲ > | ಗಂಗಾವತಿ–90ಎ | ಕನ್ನೇರುಮಡು |
| 35 | ಸೂಳೆಕೆರಿ > | ಗಂಗಾವತಿ –90ಎ | ಕನ್ನೇರುಮಡು |
| 36 | ಗಂಗನಹಾಳು > ಗಂಗನಹಾಳು | ಕೊಪ್ಪಳ – 143 | ಗಂಗನಹಾಳು |
| 37 | ಯಿಲಕಲ್ಲು > | ಕೊಪ್ಪಳ – 144 | ಚಿಲಕಮುಕಿ |
| 38 | ಮಯಿಲರ > | ಕೊಪ್ಪಳ – 144 | ಚಿಲಕಮುಕಿ |
| 39 | ಪುಲಗಿ > ಹುಲಗಿ | ಕೊಪ್ಪಳ – 148 | ಹುಲಗಿ |
| | ಪುಲ್ಲವಿಗೆ > ಹುಲಗಿ | ಕೊಪ್ಪಳ – 148 | ಹುಲಗಿ |
| | ಹುಲಿಗೆ > ಹುಲಿಗಿ | ಕೊಪ್ಪಳ – 160 | ಬಂಡಿಹರ್ಲಾಪೂರ |
| | ಹುಲಿಗೆ > ಹುಲಿಗಿ | ಕೊಪ್ಪಳ – 161 | ಹತ್ತೋಟಿ |
| 40 | ಹರಿಹರ ಪುರ > | ಕೊಪ್ಪಳ – 160 | ಬಂಡಿಹರ್ಲಾಪೂರ |

| | | | |
|---|---|---|---|
| 41 | ಅತ್ತಿವಟ್ಟಿ > | ಕೊಪ್ಪಳ – 161 | ದತ್ತೋಟಿ |
| 42 | ಅಗೋಲೆ > | ಕೊಪ್ಪಳ – 163 | ಅಚಲಾಪುರ |
| 43 | ಹಂಪಾದೇವಿಹಳ್ಳಿ > | ಕೊಪ್ಪಳ – 163 | ಅಚಲಾಪುರ |
| 44 | ಜಂಗಮರ ಹಳ್ಳಿ > | ಕೊಪ್ಪಳ – 162 | ಅಚಲಾಪುರ |
| 45 | ಯಲಂಬರ್ಗೆ > ಯಲಬುರ್ಗಾ | ಯಲಬುರ್ಗಾ– 2 | ಯಲಬುರ್ಗಾ |
| | ಎರಂಬರಗೆ > ಯಲಬುರ್ಗಾ | ಯಲಬುರ್ಗಾ– 5 | ಯಲಬುರ್ಗಾ |
| | ಎರಂಬರಗೆ > ಯಲಬುರ್ಗಾ | ಯಲಬುರ್ಗಾ– 6 | ಯಲಬುರ್ಗಾ |
| | ಎರಂಬರವಿ > ಯಲಬುರ್ಗಾ | ಯಲಬುರ್ಗಾ– 13 | ಕಲ್ಲೂರು |
| | ಯೆಲಬರಿಗೆ > ಯಲಬುರ್ಗಾ | ಯಲಬುರ್ಗಾ– 14 | ಕಲ್ಲೂರು |
| | ಯೆಲಬರಿಗೆ > ಯಲಬುರ್ಗಾ | ಯಲಬುರ್ಗಾ– 15 | ಕಲ್ಲೂರು |
| | ಎರಬರವಿ > ಯಲಬುರ್ಗಾ | ಯಲಬುರ್ಗಾ– 17 | ಕಲ್ಲೂರು |
| | ಯಲಬರಿಗೆ > ಯಲಬುರ್ಗಾ | ಯಲಬುರ್ಗಾ–90 | ಹನುಮನಾಳ |
| | ಯಲಬುರಗಿ > ಯಲಬುರ್ಗಾ | ಗಂಗಾವತಿ – 91 | ಕನ್ನೇರುಮಡು |
| 46 | ರೋಣ > | ಯಲಬುರ್ಗಾ– 6 | ಯಲಬುರ್ಗಾ |
| | ರೋಣ > | ಯಲಬುರ್ಗಾ– 44 | ಕುಕನೂರು |
| 47 | ಕುಕ್ಕನೂರು > ಕುಕನೂರು | ಕೊಪ್ಪಳ – 169 | ಕೊಪ್ಪಳ |
| | ಕುಕ್ಕನೂರು–30 > ಕುಕನೂರು | ಯಲಬುರ್ಗಾ – 10 | ಕಲ್ಲೂರು |
| | ,, > ,, | ಯಲಬುರ್ಗಾ– 16 | ಕಲ್ಲೂರು |
| | ,, > ,, | ಯಲಬುರ್ಗಾ – 17 | ಕಲ್ಲೂರು |
| | ,, > ,, | ಯಲಬುರ್ಗಾ – 38 | ಕುಕನೂರು |
| | ,, > ,, | ಯಲಬುರ್ಗಾ–39 | ಕುಕನೂರು |
| | ,, > ,, | ಯಲಬುರ್ಗಾ–40 | ಕುಕನೂರು |
| | ,, > ,, | ಯಲಬುರ್ಗಾ–41 | ಕುಕನೂರು |
| | ಕುಕ್ಕನೂರು > ಕುಕನೂರು | ಯಲಬುರ್ಗಾ– 41 | ಕುಕನೂರು |
| | ಕುಕ್ಕನೂರು > ಕುಕನೂರು | ಯಲಬುರ್ಗಾ– 47 | ಕುಕನೂರು |
| | ಕುಕ್ಕನೂರು > ಕುಕನೂರು | ಯಲಬುರ್ಗಾ–48 | ಕುಕನೂರು |
| | ಕಕನೂರು > ಕುಕನೂರು | ಯಲಬುರ್ಗಾ–49 | ಕುಕನೂರು |
| | ಕುಕ್ಕನೂರು > ಕುಕನೂರು | ಯಲಬುರ್ಗಾ–50 | ಕುಕನೂರು |
| | ಕುಕ್ಕನೂರು –30 > ಕುಕನೂರು | ಯಲಬುರ್ಗಾ– 52 | ಕುಕನೂರು |
| | ಕುಕನೂರು > ಕುಕನೂರು | ಯಲಬುರ್ಗಾ– 52 | ಕುಕನೂರು |
| | ಕುಕ್ಕನೂರು –30 > ಕುಕನೂರು | ಯಲಬುರ್ಗಾ– 59 | ತಳಕಲ್ಲು |

| | | | |
|---|---|---|---|
| | ಕುಕ್ಕನೂರು –30 > ಕುಕನೂರು | ಯಲಬುರ್ಗಾ– 65 | ಇಟಗಿ |
| | ಕುಕ್ಕನೂರು –30 > ಕುಕನೂರು | ಯಲಬುರ್ಗಾ– 67 | ಇಟಗಿ |
| | ಕುಕ್ಕನೂರು > ಕುಕನೂರು | ಯಲಬುರ್ಗಾ– 69 | ಇಟಗಿ |
| 48 | ಕೋಳಿವಾಡ > | ಯಲಬುರ್ಗಾ– 11 | ಕಲ್ಲೂರು |
| 49 | ಕಲ್ಲೂರು > ಕಲ್ಲೂರು | ಯಲಬುರ್ಗಾ– 12 | ಕಲ್ಲೂರು |
| | ,, > ,, | ಯಲಬುರ್ಗಾ– 13 | ಕಲ್ಲೂರು |
| | ,, > ,, | ಯಲಬುರ್ಗಾ– 14 | ಕಲ್ಲೂರು |
| | ,, > ,, | ಯಲಬುರ್ಗಾ– 15 | ಕಲ್ಲೂರು |
| | ,, > ,, | ಯಲಬುರ್ಗಾ– 16 | ಕಲ್ಲೂರು |
| | ,, > ,, | ಯಲಬುರ್ಗಾ– 17 | ಕಲ್ಲೂರು |
| | ,, > ,, | ಯಲಬುರ್ಗಾ– 18 | ಕಲ್ಲೂರು |
| 50 | ನೆರೆಯಂಗಲು > ನೆರೆಗಲ್ಲು | ಯಲಬುರ್ಗಾ– 13 | ಕಲ್ಲೂರು |
| | ನೆರೆಯಂಗಲ್ಲು –12 > ನೆರೆಗಲ್ಲು | ಯಲಬುರ್ಗಾ– 17 | ಕಲ್ಲೂರು |
| | ನೆರೆಯಂಗಲ್ಲು –12 > ನೆರೆಗಲ್ಲು | ಯಲಬುರ್ಗಾ– 67 | ಇಟಗಿ |
| | ನೆರೆಯಂಗಲ್ಲು > ನೆರೆಗಲ್ಲು | ಯಲಬುರ್ಗಾ– 8 | ಹಿರೇಮನ್ನಪುರ |
| 51 | ಕುಷ್ಟಗಿ > ಕುಷ್ಟಗಿ | ಕುಷ್ಟಗಿ – 13 | ಪುರ |
| 52 | ಬಳ್ಳಗೇರೆ > ಬಲಗೇರಿ | ಯಲಬುರ್ಗಾ– 14 | ಕಲ್ಲೂರು |
| | ಬಳ್ಳಗೇರಿ > ಬಲಗೇರಿ | ಯಲಬುರ್ಗಾ– 17 | ಕಲ್ಲೂರು |
| | ಬಳ್ಳಂಗೆರೆ > ಬಳಗೇರಿ | ಯಲಬುರ್ಗಾ– 36 | ಬಲಗೇರಿ |
| | ಬಳ್ಳಂಗೆರೆ > ಬಳಗೇರಿ | ಯಲಬುರ್ಗಾ– 37 | ಬಲಗೇರಿ |
| | ಬಳ್ಳಂಗೆರೆ > ಬಳಗೇರಿ | ಯಲಬುರ್ಗಾ– 40 | ಕುಕನೂರು |
| 53 | ಬದಾಮಿ > ಬಾದಾಮಿ | ಯಲಬುರ್ಗಾ– 17 | ಕಲ್ಲೂರು |
| | ಬದಾಮಿ > ಬಾದಾಮಿ | ಯಲಬುರ್ಗಾ– 22 | ಹನುಮನಾಳ |
| 54 | ತೊಂಡಿಹಾಳ (ತೃಟಿತು) > | ಯಲಬುರ್ಗಾ– 21 | ತೊಂದಿಹಾಳ |
| | ತೊಂಡಿಹಾಳ | | |
| 55 | ಸಂಕನೂರು > ಸಂಕನೂರು | ಯಲಬುರ್ಗಾ– 24 | ಸಂಕನೂರು |
| | ಸಂಕನೂರು > ಸಂಕನೂರು | ಯಲಬುರ್ಗಾ– 28 | ಸಂಕನೂರು |
| 56 | ಮುದುವೊಳಲ > ಮುದೋಳ | ಯಲಬುರ್ಗಾ– 29 | ಮುದೋಳ |
| | ಮುದುವೊಳಲ > ಮುದೋಳ | ಯಲಬುರ್ಗಾ– 30 | ಮುದೋಳ |
| | ಮುದುವೊಳಲ > ಮುದೋಳ | ಯಲಬುರ್ಗಾ– 32 | ಮುದೋಳ |
| 57 | ವೃದ್ದಪುರ > | ಯಲಬುರ್ಗಾ– 37 | ಬಳಗೇರಿ |

| | | | |
|---|---|---|---|
| 58 | ಹೆಗ್ಗರೆ > | ಯಲಬುರ್ಗಾ– 38 | ಕುಕನೂರು |
| 59 | ಬಡವರಬೇಲಿ > | ಯಲಬುರ್ಗಾ– 39 | ಕುಕನೂರು |
| 60 | ಹರದಗೇರಿ > | ಯಲಬುರ್ಗಾ– 39 | ಕುಕನೂರು |
| 61 | ಎಡೆಹಳ್ಳಿ > | ಯಲಬುರ್ಗಾ– 39 | ಕುಕನೂರು |
| 62 | ಅರಕೆರಿ > | ಯಲಬುರ್ಗಾ– 40 | ಕುಕನೂರು |
| 63 | ದಂಪೆ > ಹಂಪಿ (ಪೆ) | ಯಲಬುರ್ಗಾ– 40 | ಕುಕನೂರು |
| | ಪಂಪೆ > ಹಂಪಿ (ಪೆ) | ಯಲಬುರ್ಗಾ– 40 | ಕುಕನೂರು |
| 64 | ಹಾಡಲಗ್ವರಿ > | ಯಲಬುರ್ಗಾ– 53 | ಆನೆಗುಂದಿ |
| 65 | ಯರೆಹಚಿಚಿನಾಳ > | ಯಲಬುರ್ಗಾ– 41 | ಕುಕನೂರು |
| 66 | ಬಲ್ಮನಹಾಳ > | ಯಲಬುರ್ಗಾ– 48 | ಕುಕನೂರು |
| 67 | ತೊಂಡಿಹಾಳ > | ಯಲಬುರ್ಗಾ– 48 | ಕುಕನೂರು |
| 68 | ದಿಬ್ಬಹಾಳ > | ಯಲಬುರ್ಗಾ– 48 | ಕುಕನೂರು |
| 69 | ಬೈರವಪುರ > | ಯಲಬುರ್ಗಾ– 48 | ಕುಕನೂರು |
| 70 | ಸಂಕರಪುರ > | ಯಲಬುರ್ಗಾ– 48 | ಕುಕನೂರು |
| 71 | ಮಾರಕಂಡೆಯಪುರ > | ಯಲಬುರ್ಗಾ– 48 | ಕುಕನೂರು |
| 72 | ಗಾವರಹಾಳ > | ಯಲಬುರ್ಗಾ– 48 | ಕುಕನೂರು |
| 73 | ಪುರಾಣಿಹಳ್ಳಿ > | ಯಲಬುರ್ಗಾ– 48 | ಕುಕನೂರು |
| 74 | ಚಿಚಿಲಕುಂಟಿಹಾಳ > | ಯಲಬುರ್ಗಾ– 48 | ಕುಕನೂರು |
| 75 | ಭಟ್ಟಪರ್ಯನಹಳ್ಳಿ > | ಯಲಬುರ್ಗಾ– 48 | ಕುಕನೂರು |
| 76 | ಮಸಬಿನ ಹಂಚಿನಾಳ | ಯಲಬುರ್ಗಾ– 48 | ಕುಕನೂರು |
| 77 | ಸಂಗನಹಾಳ > | ಯಲಬುರ್ಗಾ– 49 | ಕುಕನೂರು |
| 78 | ಬಂಕಾಪುರ > | ಯಲಬುರ್ಗಾ– 59 | ತಳಕಲ್ಲು |
| 79 | ತಪೆಕಲ್ಲು > ತಳಕಲ್ಲು | ಯಲಬುರ್ಗಾ– 59 | ತಳಕಲ್ಲು |
| 80 | ಕಾಳದಲೂರು > | ಯಲಬುರ್ಗಾ– 59 | ತಳಕಲ್ಲು |
| 81 | ಕಂಪಾಪುರ > | ಯಲಬುರ್ಗಾ– 62 | ಇಟಗಿ |
| 82 | ಬೆಣ್ಣಕಲ್ಲು > | ಯಲಬುರ್ಗಾ– 67 | ಇಟಗಿ |
| | ಬೆಣ್ಣಕಲ್ಲು > | ಗಂಗಾವತಿ – 2 | ವಿಪ್ರ |
| | ಬೆಣ್ಣಕಲ್ಲು > | ಗಂಗಾವತಿ – 70 | ಹಿರೇಬೆಣಕಲ್ |
| 83 | ಇಟ್ಟಿಗೆ > ಇಟಗಿ | ಯಲಬುರ್ಗಾ– 69 | ಹಿರೇಬೆಣಕಲ್ |
| 84 | ಮೂಡಕೇರಿ > | ಕುಷ್ಟಗಿ – 1 | ಮಂಕತ್ಕೀರಿ |
| 85 | ಸಂಕರಾಶಿ > | ಕುಷ್ಟಗಿ – 1 | ಮಂಕತ್ಕೀರಿ |

| | | | |
|---|---|---|---|
| 86 | ಕಬ್ಬಳ್ಳಿ > | ಕುಷ್ಟಗಿ – 1 | ಮಂಕತ್ತೀರಿ |
| 87 | ಮಣ್ಣಕಪೆ > | ಕುಷ್ಟಗಿ – 2 | ಹೆಸರೂರು |
| 88 | ಸಿರಿಗೊಪ್ಪ > ಸಿರಗುಪ್ಪ | ಕುಷ್ಟಗಿ – 5 | ಸಿರಗುಪ್ಪ |
| 89 | ತಾವರಕೆರೆ > ತಾವರಗೇರೆ | ಕುಷ್ಟಗಿ – 10 | ತಾವರಗೇರೆ |
| | ತಾವರಗೇರೆ > ತಾವರಗೇರಿ | ಕುಷ್ಟಗಿ – 11 | ತಾವರಗೇರೆ |
| | ತಾವರಗೇರೆ > ತಾವರಗೇರಿ | ಕುಷ್ಟಗಿ – 17 | ಪುರ |
| 90 | ಮುದಗಲ್ಲ > | ಕುಷ್ಟಗಿ – 12 | ಪುರ |
| 91 | ವೋಹಿಲಾಪುರ > | ಕುಷ್ಟಗಿ – 12 | ಪುರ |
| 92 | ಸಿಂದನೂರ > | ಕುಷ್ಟಗಿ – 13 | ಪುರ |
| 93 | ಗೋವನ್ತಗೆ > ಗೋತಗಿ | ಕುಷ್ಟಗಿ – 3 | ಗೋತಗಿ |
| | ಗೋವನ್ತಗೆ > ಗೋತಗಿ | ಕುಷ್ಟಗಿ – 4 | ಗೋತಗಿ |
| 94 | ನವಿಲೆ > | ಕುಷ್ಟಗಿ – 13 | ಪುರ |
| | ನವಿಲೆ > | ಗಂಗಾವತಿ – 80 | ಕನಕಗಿರಿ |
| 95 | ನಿಡುಗೊಳ > | ಕುಷ್ಟಗಿ – 13 | ಪುರ |
| 96 | ಎಮ್ಮಕನೂರು > | ಕುಷ್ಟಗಿ – 13 | ಪುರ |
| 97 | ಉಮ್ಮಲಗುರುಕೆ > | ಕುಷ್ಟಗಿ – 13 | ಪುರ |
| 98 | ನಿಡವ > | ಕುಷ್ಟಗಿ – 13 | ಪುರ |
| 99 | ಹಿಂಡಿ > | ಕುಷ್ಟಗಿ – 13 | ಪುರ |
| 100 | ಹೂಡೂರ > | ಕುಷ್ಟಗಿ – 13 | ಪುರ |
| 101 | ಮನಾಮಾಡಿ > | ಕುಷ್ಟಗಿ – 13 | ಪುರ |
| 102 | ಪುರ > ಪುರ | ಕುಷ್ಟಗಿ – 12 | ಪುರ |
| | ಪುರ > ಪುರ | ಕುಷ್ಟಗಿ – 17 | ಪುರ |
| 103 | ಕಂಪಲಿ > ಕಂಪ್ಲಿ | ಕುಷ್ಟಗಿ – 13 | ಪುರ |
| | ಕಂಪಿಲೆ > ಕಂಪ್ಲಿ | ಗಂಗಾವತಿ – 4 | ಹಿರೇಜಂತಕಲ್ |
| | ಕಂಪಲಿಸಮತ(ತಾಲೋಕ)>ಕಂಪ್ಲಿ | ಗಂಗಾವತಿ – 25 | ಹಿರೇಜಂತಕಲ್ |
| 104 | ಬೈಳನೆಗೆಯೂರು > | ಕುಷ್ಟಗಿ – 18 | ಪುರ |
| 105 | ಹಾವರಿ > | ಕುಷ್ಟಗಿ – 22 | ಹನುಮನಾಳ |
| 106 | ತಿಳಿವಳ್ಳಿ > | ಕುಷ್ಟಗಿ – 22 | ಹನುಮನಾಳ |
| 107 | ಕಾರಿ > | ಕುಷ್ಟಗಿ – 22 | ಹನುಮನಾಳ |
| 108 | ಕರುವೂರ > | ಕುಷ್ಟಗಿ – 22 | ಹನುಮನಾಳ |
| 109 | ಸಿಗ್ಗಾವೆ > | ಕುಷ್ಟಗಿ – 22 | ಹನುಮನಾಳ |

| | | | |
|---|---|---|---|
| 110 | ಗಾಂಚಿವೂರ > | ಕುಷ್ಟಗಿ – 22 | ಹನುಮನಾಳ |
| 111 | ರಾಜವೂರ > | ಕುಷ್ಟಗಿ – 22 | ಹನುಮನಾಳ |
| 112 | ಬಾಡ > | ಕುಷ್ಟಗಿ – 22 | ಹನುಮನಾಳ |
| 113 | ಆಲುಂಗೆರೆ > | ಕುಷ್ಟಗಿ – 22 | ಹನುಮನಾಳ |
| 114 | ತಂಬುಲಿಗ > | ಕುಷ್ಟಗಿ – 22 | ಹನುಮನಾಳ |
| 115 | ಯರಗೇರಿ > ಯರಗೇರಿ | ಕುಷ್ಟಗಿ – 24 | ಯರಗೇರಿ |
| 116 | ಹತ್ತೂರತಾಣ > ಅಂಟೂರತಾಣ | ಕುಷ್ಟಗಿ – 27 | ಅಂಟೂರತಾಣ |
| | ಪತ್ತರತಾಣ > ಅಂಟೂರತಾಣ | ಕುಷ್ಟಗಿ – 28 | ಅಂಟೂರತಾಣ |
| | ” ” | ಕುಷ್ಟಗಿ – 29 | ಅಂಟೂರತಾಣ |
| 117 | ಪೆರಿದೆಯ ಕೆರೆ > | ಕುಷ್ಟಗಿ – 28 | ಅಂಟೂರತಾಣ |
| 118 | ಕಲ್ಯಾಣ > | ಗಂಗಾವತಿ – 1 | ವಿಪ್ರ |
| 119 | ಮಲಯಾರ > | ಗಂಗಾವತಿ – 1 | ವಿಪ್ರ |
| 120 | ಮಸೂರಿದೆ > | ಗಂಗಾವತಿ – 2 | ವಿಪ್ರ |
| 121 | ವಿಪ್ರ > | ಗಂಗಾವತಿ – 2 | ವಿಪ್ರ |
| | ವಿಪ್ರ > | ಗಂಗಾವತಿ – 3 | ಹಿರೇಜಂತಕಲ್ |
| 122 | ಕಿಷ್ಕಿಂದ ಪರ್ವತ > ಕಿಷ್ಕಿಂದ | ಗಂಗಾವತಿ – 2 | ವಿಪ್ರ |
| 123 | ಜಂತಗಲ್ಲ ಮಾಗಣೆ > | ಗಂಗಾವತಿ – 3 | ಹಿರೇಜಂತಕಲ್ |
| | ಹಿರೇಜಂತಕಲ್ | | |
| 124 | ಚಿಕ್ಕಜಂತಕಲ್ > ಹಿರೇಜಂತಕಲ್ | ಗಂಗಾವತಿ – 17 | ಚಿಕ್ಕಜಂತಕಲ್ |
| 125 | ಜಂತಕಲ್ ಮಾಗಣೆ > | ಗಂಗಾವತಿ – 104 | ಹಳೇಅಯೋಧ್ಯೆ |
| 126 | ರಾಮಾಪೂರ > | ಗಂಗಾವತಿ – 3 | ಹಿರೇಜಂತಕಲ್ |
| | ರಾಮಾಪೂರ > | ಗಂಗಾವತಿ – 38 | ಆನೆಗುಂದಿ |
| 127 | ನಾಗಾಪೂರ > | ಗಂಗಾವತಿ – 63 | ಆನೆಗುಂದಿ |
| 128 | ಗಂಗಾವಲಿ ಪರಗಣ > | ಗಂಗಾವತಿ –25 | ಆನೆಗುಂದಿ |
| 129 | ಗುಡ್ಡ ಗಂಗಾಲತೆ | ಗಂಗಾವತಿ – 80 | ಕನಕಗಿರಿ |
| 130 | ಕಮಲಾಪೂರ ಸಮತ > | ಗಂಗಾವತಿ – 80. | ಕನಕಗಿರಿ |
| 131 | ತಕಲಕೋಟ ಪರಗಣ > | ಗಂಗಾವತಿ – 80 | ಕನಕಗಿರಿ |
| 132 | ಹೊಸೂರು ಸಮತ > | ಗಂಗಾವತಿ – 80 | ಕನಕಗಿರಿ |
| 133 | ದರೋಜಿ ಸಮತ > | ಗಂಗಾವತಿ – 80 | ಕನಕಗಿರಿ |
| 134 | ಬಾಣಾರಾಪಿ(ಸಂಕಿಕೋಲ್)ಸಮತ> | ಗಂಗಾವತಿ – 80 | ಕನಕಗಿರಿ |

| | | | |
|---|---|---|---|
| 135 | ನಂದ್ಯಾಲ್ > | ಗಂಗಾವತಿ – 23 | ಕನಕಗಿರಿ |
| 136 | ತಳವಾರ ಕಟ್ಟೆ | ಗಂಗಾವತಿ – 26 | ಕನಕಗಿರಿ |
| 137 | ರಾಮದುರ್ಗ > | ಗಂಗಾವತಿ – 43 | ಆನೆಗುಂದಿ |
| 138 | ಕಲ್ಲಗುಡೆ > | ಗಂಗಾವತಿ – 44 | ಆನೆಗುಂದಿ |
| 139 | ಹೊನ್ನಹಟ್ಟಿ > | ಗಂಗಾವತಿ – 51 | ಆನೆಗುಂದಿ |
| 140 | ಸಂಗಮಾಪುರ > | ಗಂಗಾವತಿ – 68 | ರಾಮದುರ್ಗ |
| 141 | ಯಿಕುಪಲ್ಲಿ > | ಗಂಗಾವತಿ – 70 | ಹಿರೇಬೆಣಕಲ್ |
| 142 | ಅಚುತಾಪುರ > | ಗಂಗಾವತಿ – 71 | ಎಮ್ಮಿಗುಡ್ಡ |
| 143 | ಕೆಸರಹಟ್ಟಿ > | ಗಂಗಾವತಿ – 73 | ಹೆಸರಹಟ್ಟಿ |
| 144 | ಕನಕಗಿರಿ > | ಗಂಗಾವತಿ – 78 | ಕನಕಗಿರಿ |
| | ಕನಕಗಿರಿ > | ಗಂಗಾವತಿ – 79 | ಕನಕಗಿರಿ |
| | ಕನಕಗಿರಿ > | ಗಂಗಾವತಿ – 80 | ಕನಕಗಿರಿ |
| | ಕನಕಗಿರಿ ಪೇಟೆ > | ಗಂಗಾವತಿ – 80 | ಕನಕಗಿರಿ |
| | ಕನಕಗಿರಿ > | ಗಂಗಾವತಿ – 82 | ಹಿರೇಮಾದಿನಾಳ |
| | ಕನಕಗಿರಿ > | ಗಂಗಾವತಿ – 85 | ಓಬಳಬಂಡಿ |
| | ಕನಕಗಿರಿ > | ಗಂಗಾವತಿ – 87 | ಬಸ್ಸಿನಾಳ |
| | ಕನಕಗಿರಿ > | ಗಂಗಾವತಿ – 89 | ಕನಕಗಿರಿ |
| 145 | ವಿಜಯನಗರ > | ಗಂಗಾವತಿ – 80 | ಕನಕಗಿರಿ |
| 146 | ಗೋಡಿರಹಾಳ > | ಗಂಗಾವತಿ – 80 | ಕನಕಗಿರಿ |
| 147 | ಗೋರವಹಾಳ > | ಗಂಗಾವತಿ – 80 | ಕನಕಗಿರಿ |
| 148 | ಚುನ್ನಪುರ > | ಗಂಗಾವತಿ – 80 | ಕನಕಗಿರಿ |
| 149 | ತೋರಗಲ್ಲು > | ಗಂಗಾವತಿ – 80 | ಕನಕಗಿರಿ |
| 150 | ಯಡಿಗಲ್ಲು > | ಗಂಗಾವತಿ – 80 | ಕನಕಗಿರಿ |
| 151 | ಕಳಸಗ್ರಾಮ > | ಗಂಗಾವತಿ – 80 | ಕನಕಗಿರಿ |
| 152 | ಕುಟ್ಟಿಗೆಸೀಮೆ > | ಗಂಗಾವತಿ – 80 | ಕನಕಗಿರಿ |
| 153 | ಯಿಂಗಳದ ಹಾಳು > | ಗಂಗಾವತಿ – 80 | ಕನಕಗಿರಿ |
| 154 | ಅಚುತರಾಯ ಮಲ್ಲಾಪುರ > | ಗಂಗಾವತಿ – 80 | ಕನಕಗಿರಿ |
| 155 | ಸಿದ್ದನಹಾಳ > | ಗಂಗಾವತಿ – 80 | ಕನಕಗಿರಿ |
| 156 | ವಿಠಲಾಪುರ > | ಗಂಗಾವತಿ – 85 | ಹಿರೇಮಾದಿನಾಳ |
| 157 | ತಿಂತಿಣಿ > | ಗಂಗಾವತಿ –90ಎ | ಕನ್ನೇರುಮಾಡು |
| 158 | ಕನ್ನೇರಮಡು > | ಗಂಗಾವತಿ – 91 | ಕನ್ನೇರುಮಾಡು |

| | | | |
|---|---|---|---|
| 159 | ಸೂಳೆಯಕೆರೆ > | ಗಂಗಾವತಿ – 91 | ಕನ್ನೇರುಮಡು |
| 160 | ಮುಸ್ಟೂರು > | ಗಂಗಾವತಿ – 97 | ಸಿಂಗನಾಳ |
| 161 | ಕುಂಟೋಜಿಗ್ರಾಮ > | ಗಂಗಾವತಿ – 97 | ಸಿಂಗನಾಳ |
| 162 | ಸಿಂಗನಹಳ್ಳಿ > | ಗಂಗಾವತಿ – 98 | ಸಿಂಗನಾಳ |
| 163 | ಬೆಂಬಲಕೋಟೆ > | ಗಂಗಾವತಿ – 99 | ಗುಂಡೂರು |
| | ಬೆಂಬಲಕೋಟೆ > | ಗಂಗಾವತಿ – 100 | ಗುಂಡೂರು |
| 164 | ಗುಂಡೂರ | ಗಂಗಾವತಿ – 99 | ಗುಂಡೂರು |
| | ಗುಂಡೂರ | ಗಂಗಾವತಿ – 100 | ಗುಂಡೂರು |
| 165 | ಬರಗೂರು > | ಗಂಗಾವತಿ – 101 | ಬರಗೂರು |
| 166 | ತಾಯಿ ತೀರ್ಥ > | ಗಂಗಾವತಿ – 107 | ಢಾಣಾಪೂರ |
| 167 | ಗುಳದಳ್ಳಿ > | ಗಂಗಾವತಿ – 108 | ಗುಳದಳ್ಳಿ |

**ಅಡಿಟಿಪ್ಪಣಿಗಳು :**

1. ಸಿ.ನಾಗಭೂಷಣ : ಶಾಸನಗಳು ಮತ್ತು ಕನ್ನಡ ಸಾಹಿತ್ಯ, ಪುಟ. 12
2. ಉದಾ: ಬೊಪ್ಪಣ್ಣಕವಿಯ ಗೊಮ್ಮಟಸ್ತುತಿ ಲಘು ಚಂಪೂ ಕಾವ್ಯವು ಶ್ರವಣಬೆಳಗೊಳದ ಬಂಡೆಯ ಮೇಲೆ ಕೆತ್ತಿರುವುದನ್ನು ಗಮನಿಸಬಹುದು.
3. ಸಿ.ನಾಗಭೂಷಣ : ಕನ್ನಡ ಸಾಹಿತ್ಯ–ಸಂಸ್ಕೃತಿ ಶೋಧನೆ, ಪುಟ. 17
4. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2 ಕೊ–6, ಪುಟ. 13
5. ಅದೇ, ಕೊ–26, ಪುಟ. 31.
6. ಅದೇ, ಯ–29, ಪುಟ. 187.
7. ಅದೇ, ಯ–52, ಪುಟ. 228
8. ಅದೇ, ಯ–52, 230
9. ಅದೇ, ಕು–2, ಪುಟ. 278
10. ಅದೇ, ಯ–67, ಪುಟ. 259
11. ಹು.ಕಾ.ಜಯದೇವ : ಶಾಸನ ಮತ್ತು ಗದ್ಯ, ಪುಟ. 143
12. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಗಂ–18, ಪುಟ. 323
13. ಅದೇ, ಗಂ–18, ಪುಟ. 326
14. ಅದೇ, ಯ–48, ಪುಟ. 219
15. ಅದೇ, ಯ–67, ಪುಟ. 259
16. ಅದೇ, ಯ–67, ಪುಟ. 262

17. ಎಂ.ಎಂ.ಕಲಬುರ್ಗಿ : ಮಾರ್ಗ–2, ಪುಟ. 286
18. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–28, ಪುಟ. 37
19. ಅದೇ, ಕೊ–22, ಪುಟ. 29
20. ಅದೇ, ಕೊ–34, ಪುಟ. 40
21. ಅದೇ, ಯ–65, ಪುಟ. 257
22. ಅದೇ, ಕೊ–94, ಪುಟ. 80
23. ಅದೇ, ಕು–2, ಪುಟ. 277
24. ಅದೇ, ಯ–38, ಪುಟ. 197
25. ಅದೇ, ಗಂ–21, ಪುಟ. 335
26. ಅದೇ, ಗಂ– 80, ಪುಟ. 369
27. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–142, ಪುಟ. 142
28. ಅದೇ, ಗಂ–81, ಪುಟ. 372
29. ಅದೇ, ಕೊ–3, ಪುಟ. 4
30. ಅದೇ, ಕೊ–6, ಪುಟ. 12
31. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊ–90, ಪುಟ. 75
32. ಅದೇ, ಕೊ–94, ಪುಟ. 80
33. ಅದೇ, ಕೊ–96, ಪುಟ. 83
34. ಅದೇ, ಕೊ–97, ಪುಟ. 85
35. ಅದೇ, ಕೊ–164, ಪುಟ. 157
36. ಅದೇ, ಯ–37, ಪುಟ. 196
37. ಅದೇ, ಯ–41, ಪುಟ. 209
38. ಉದ್ಧೃತ : ಎಂ.ಎಂ.ಕಲಬುರ್ಗಿ : ಮಾರ್ಗ–2, ಪುಟ. 219
39. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಯ–52, ಪುಟ. 228
40. ಅದೇ, ಯ–69, ಪುಟ. 269
41. ಅದೇ, ಕೊ–135, ಪುಟ. 132
42. ಅದೇ, ಕು–13, ಪುಟ. 288
43. ಎಂ.ಎಂ.ಕಲಬುರ್ಗಿ: ಮಾರ್ಗ–2, ಪುಟ:241.
44. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–2, ಕೊಪ್ಪಳಜಿಲ್ಲೆ, ಗಂ–18, ಪುಟ:323.

45. ಸಿ.ನಾಗಭೂಷಣ: ಶಾಸನಗಳು ಮತ್ತು ಕನ್ನಡ ಸಾಹಿತ್ಯ, ಪುಟ:75.
46. ಎಂ.ಎಂ.ಕಲಬುರ್ಗಿ : ಕನ್ನಡ ನಾಮ ವಿಜ್ಞಾನ, ಪುಟ. 47
47. ವಿ.ಗೋಪಾಲಕೃಷ್ಣ : ಸ್ಥಳನಾಮ ಅಧ್ಯಯನಗಳು, ಪುಟ. 1
48. ಕವಿರಾಜಮಾರ್ಗ, ಸಂಧಿ–1, ಪದ್ಯ–37, ಪುಟ. 10
49. ಅಜಿತನಾಥ ಪುರಾಣ, ಸಂಧಿ–12, ಪದ್ಯ–6, ಪುಟ. 203
50. ಚಾವುಂಡರಾಯ ಪುರಾಣ, ಸಂಧಿ–1, ಪದ್ಯ–6, ಪುಟ. 3
51. ಸೋಮನಾಥ ಚರಿತ, ಸಂಧಿ–2, ಪದ್ಯ–92
52. ಬಿ.ಸಿ.ಪಾಟೀಲ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ. 2

ಅಧ್ಯಾಯ-11

# ಸಮಾರೋಪ

ತಿರುಳ್ಗನ್ನಡ ಪ್ರದೇಶವೆಂದು ಕವಿಗಳಿಂದ ಕರೆಯಲ್ಪಟ್ಟ ಕೊಪ್ಪಳ ಪ್ರದೇಶವು ಇತಿಹಾಸ ಪ್ರಸಿದ್ಧ ನಾಡು. ಇಲ್ಲಿ ದೊರೆತಿರುವ ಮಾಹಿತಿಯನ್ನು ಸಮಗ್ರವಾಗಿ ಅವಲೋಕಿಸಿದಾಗ ಜಿಲ್ಲೆಯ ಪ್ರಾಚೀನತೆಯು ಶಿಲಾಯುಗದ ಕಾಲಕ್ಕೆ ಹೊಂದಿಕೆಯಾಗುತ್ತದೆ. ಚರಿತ್ರೆಯ ಖಚಿತ ಅಂಶಗಳನ್ನು ಸಾರುವ ಮೌರ್ಯ ವಂಶದ ಅಶೋಕನಿಗೆ ಸಂಬಂಧಿಸಿದ ಶಾಸನಗಳೇ ಇಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನಗಳಾಗಿವೆ. ನಂತರದ ಕಾಲದಲ್ಲಿ ಕನ್ನಡ ಭಾಷಿಕರ ಪ್ರದೇಶವನ್ನಾಳಿದ ಪ್ರಸಿದ್ಧ ರಾಜಮನೆತನಗಳಾದ ಶಾತವಾಹನರು, ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರುಗಳಲ್ಲದೆ, ಅನೇಕ ಸಾಮಂತ ಅರಸರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟ ಬಗ್ಗೆ ವಿಪುಲವಾದ ಶಾಸನಾಧಾರಗಳು ಲಭ್ಯವಾಗಿವೆ.

ಇಂಡಿಯಾದ ಚರಿತ್ರೆಯಲ್ಲಿ ಅಜರಾಮರವಾದ ಹೆಸರನ್ನು ಪಡೆದಿರುವ ಮೌರ್ಯ ದೊರೆ ಅಶೋಕನ ಕಾಲದ ಶಾಸನ ಜಿಲ್ಲೆಯಲ್ಲಿ ದೊರೆತಿರುವುದು ಈ ಜಿಲ್ಲೆಯ ಇತಿಹಾಸ ರಚನೆಗೆ ದೊರೆತ ಮಹತ್ವದ ಆಕರ. ಪ್ರಾಯಶಃ ಆ ಕಾಲಕ್ಕಾಗಲೇ ಇದೊಂದು ಪ್ರಮುಖ ಕೇಂದ್ರವಾಗಿದ್ದಿರಬಹುದು. ಏಕೆಂದರೆ ಶಿಲಾಯುಗಕ್ಕೆ ಸಂಬಂಧಿಸಿದ ಕೆಲ ವರ್ಣಚಿತ್ರಗಳೂ ಕೂಡ ಇಲ್ಲಿ ದೊರೆತಿವೆ. ಆ ಕಾಲದ ಈ ಸ್ಥಳದ ಪ್ರಸಿದ್ಧತೆಯನ್ನು ಕಂಡು ಬಹುಶಃ ಅಶೋಕನು ಇಲ್ಲಿ ಶಾಸನ ಬರೆಯಿಸಿರಬಹುದು. ನಂತರ ಕಾಲದಲ್ಲಿ ಬಂದ ಅನ್ಯ ಧರ್ಮೀಯರಿಗೂ ಕೂಡ ಇದು ಆಕರ್ಷಣೀಯ ಸ್ಥಳವಾದಂತಿದೆ. ಯಾಕೆಂದರೆ ಬೌದ್ಧ ಧರ್ಮದ ನಂತರ ಹೆಚ್ಚು ಪ್ರಚುರತೆಯನ್ನು ಪಡೆದುಕೊಂಡ ಜೈನರೂ ಸಹ ಈ ಸ್ಥಳವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಇದಕ್ಕೆ ಸಾಕ್ಷಿಯೆಂಬಂತೆ ಇಲ್ಲಿನ ಬಸದಿ ಹಾಗೂ ಸಲ್ಲೇಖನ ವ್ರತದಿಂದ ಮರಣ ಹೊಂದಿದ ಬಗೆಗಿನ ಮಾಹಿತಿಗಳೇ ನಿದರ್ಶನ. ಹಾಗೆಯೇ ಮತ್ತೊಂದು ಧರ್ಮದಿಂದ ಸ್ಥಾಪಿತವಾಗಿರುವ ಗವಿಮಠ. ಇವೆಲ್ಲವನ್ನೂ ನೋಡಿದರೆ ಈ ಸ್ಥಳವು ಧಾರ್ಮಿಕ ಸಂಘರ್ಷದ ತಾಣವಾಗಿತ್ತೇನೋ ಎನಿಸುತ್ತದೆ. ಯಾಕೆಂದರೆ ಶ್ರವಣಬೆಳಗೊಳವನ್ನು ನೋಡಿದಾಗ ಅದೊಂದು ಜೈನರ ಪ್ರಮುಖ ಧಾರ್ಮಿಕ ಕೇಂದ್ರ ಎನ್ನುವುದು ಸ್ಪಷ್ಟವಾಗುತ್ತದೆ. ನಂತರದಲ್ಲಿ ಅಲ್ಲಿ ಅನ್ಯ ಧರ್ಮಗಳು ತಮ್ಮ ಧಾರ್ಮಿಕ ಅಸ್ಮಿತೆಯನ್ನು ತೋರಿಸಲು ಪ್ರಯತ್ನಿಸಿದಂತೆ ಕಂಡುಬಂದಿಲ್ಲ. ಆದರೆ ಕೊಪ್ಪಳ ಆಗಲ್ಲ. ಮೊದಲು ಬೌದ್ಧರು, ನಂತರದಲ್ಲಿ ಜೈನರು, ತದನಂತರ ಶೈವರು ಇಲ್ಲಿ ತಮ್ಮ ತಮ್ಮ ಧರ್ಮವನ್ನು ಗಟ್ಟಿಯಾಗಿ ನೆಲೆಯೂರಿಸುವ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಈ

ಪ್ರದೇಶದ ಖ್ಯಾತಿ ಮತ್ತು ಇಲ್ಲಿನ ಜನರ ಧಾರ್ಮಿಕ ಸಹಿಷ್ಣತೆ ಕಾರಣವಾಗಿರಬೇಕು. ಧಾರ್ಮಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವ ಈ ಪ್ರದೇಶ ಐತಿಹಾಸಿಕವಾಗಿಯೂ ತನ್ನ ಹಿರಿಮೆಯನ್ನು ಹೊಂದಿದೆ. ಇತಿಹಾಸ ಪ್ರಸಿದ್ಧವಾದ ರಾಜಮನೆತನಗಳು ಇಲ್ಲಿ ಆಳ್ವಿಕೆಯನ್ನು ನಡೆಸಿವೆ ಎನ್ನುವುದನ್ನು ಇಲ್ಲಿ ದೊರೆತಿರುವ ಶಾಸನಗಳು ಸಾರಿ ಹೇಳುತ್ತಿವೆ. ಕನ್ನಡದ ಅರಸರು, ಬೌದ್ಧರು, ಜೈನರು, ಹಿಂದೂಗಳಿಂದ ಹಿಡಿದು ಮುಸ್ಲಿಂರವರೆಗೆ ವಿಭಿನ್ನ ಧರ್ಮದ, ಭಿನ್ನ ಭಾಷಿಕ ಅರಸರ ಆಡಳಿತಕ್ಕೆ ಈ ಪ್ರದೇಶ ಒಳಗಾಗಿದೆ. ಕನ್ನಡ, ಪ್ರಾಕೃತ, ಸಂಸ್ಕೃತ, ಪರ್ಷಿಯಾ, ತೆಲುಗು, ಸಸ್ತಲಿಟ್ ಭಾಷೆಯ ಶಾಸನಗಳು ಜಿಲ್ಲೆಯಲ್ಲಿ ದೊರೆತಿರುವುದು ಇದಕ್ಕೆ ನಿದರ್ಶನ. ಕೇವಲ ಶಿಲಾ ಶಾಸನಗಳು ಅಷ್ಟೇ ಅಲ್ಲದೆ ತಾಮ್ರ, ಬೆಳ್ಳಿ ಹಾಗೂ ಹಿತ್ತಾಳೆ ಶಾಸನಗಳೂ ಇಲ್ಲಿ ದೊರೆತಿವೆ.

ಇಲ್ಲಿನ ಶಾಸನಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಈ ಪ್ರದೇಶದ ಧಾರ್ಮಿಕ ಸ್ಥಿತಿಗತಿಯ ಜೊತೆಗೆ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳಿಗೆ ಸಂಬಂಧಸಿದ ಮಹತ್ವದ ಮಾಹಿತಿಗಳು ದೊರೆತಿವೆ. ಆಡಳಿತ ವ್ಯವಸ್ಥೆಯು ಯಾವ ಬಗೆಯದ್ದು, ಜನರ ಸಾಮಾಜಿಕ ಜೀವನದ ವಿಧಾನ ಎಂಥದ್ದು, ಇಲ್ಲಿನ ಜನರ ಆರ್ಥಿಕ ಚಟುವಟಿಕೆಳೂ ಹೇಗಿದ್ದವು ಎನ್ನುವ ಅಂಶಗಳು ಶಾಸನಾಧ್ಯಯನದಿಂದ ಬೆಳಕಿಗೆ ಬಂದಿವೆ.

ಆಡಳಿತ ವ್ಯವಸ್ಥೆಯು ಸಾಮಾನ್ಯವಾಗಿ ಆಯಾ ಕಾಲದ ರಾಜರುಗಳು ತಮಗೆ ಸರಿಯೆನ್ನಿಸಿದ ಮಾದರಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ರಾಜನ ನಂತರ ಮಹಾಮಂಡಳೇಶ್ವರ, ಸಾಮಂತ, ಮಹಾಪ್ರಧಾನ, ಮಂಡಲಿಕ, ಮಹಾಸಾಮಂತ, ಮಹಾನಾಡಪ್ರಭು ಇವರು ಆಡಳಿತ ವಲಯದ ಪ್ರಮುಖ ಸ್ಥಾನದಲ್ಲಿದ್ದವರು. ಇವರಿಗೆ ಸಹಾಯಕರಂತೆ ಆಡಳಿತ ನಡೆಸುವ ಮತ್ತೊಂದು ವರ್ಗವೂ ಇತ್ತು. ಪೆರ್ಗಡೆ, ಪಟ್ಟಣಸ್ವಾಮಿ, ದಳವಾಯಿ, ಗಾವುಂಡ, ಸುಭೇದಾರ, ತಳವಾರ ಈ ವರ್ಗವು ಮೇಲಿನ ವರ್ಗದ ಆಜ್ಞಾನುಸಾರವಾಗಿ ಆಡಳಿತವನ್ನು ನಡೆಸುತ್ತಿದ್ದರು.

ಈ ನಾಡಿನ ಸಾಮಾಜಿಕ ಜೀವನ ಪದ್ಧತಿಯು ಭಾರತೀಯ ಸನಾತನ ಮಾದರಿಯದ್ದಾಗಿದೆ. ವರ್ಗ, ವರ್ಣ, ಜಾತಿ ವ್ಯವಸ್ಥೆಯು ಸಾಮಾಜಿಕ ಸ್ಥಿತಿಗತಿಯನ್ನು ನಿರ್ಧರಿಸಿದೆ. ವರ್ಗ ವ್ಯವಸ್ಥೆಯಲ್ಲಿ ಪ್ರಭುವರ್ಗ, ಮಹಾಜನರು, ಸ್ಥಾನಾಚಾರ್ಯರು ಮತ್ತು ಶ್ರಮಿಕವರ್ಗ ಎನ್ನುವ ಸ್ತರವಿನ್ಯಾಸ ವ್ಯವಸ್ಥೆ ಇದ್ದುದರ ಬಗ್ಗೆ ಅನೇಕ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ವರ್ಣ ವ್ಯವಸ್ಥೆಯನ್ನಂತು ಹಿಂದಿನಿಂದಲೂ ಬೆಳೆಸಿಕೊಂಡು ಬಂದ ಪರೆಂಪರೆಯಲ್ಲಿಯೇ ಮುಂದುವರಿಸಲಾಗಿದೆ. ಬ್ರಾಹ್ಮಣರು ಉನ್ನತ ಸ್ಥಾನ ಮತ್ತು ಗೌರವದ ಸ್ಥಾನ ಪಡೆದರೆ, ಕ್ಷತ್ರಿಯರು ನಂತರದ ಸ್ಥಾನದಲ್ಲಿ ನಿಂತು ರಾಜ್ಯಭಾರ ಮಾಡಿದ್ದಾರೆ. ವೈಶ್ಯರು ದಿನನಿತ್ಯದ ವ್ಯವಹಾರಕ್ಕೆ ತಮ್ಮನ್ನು ಸೀಮಿತಪಡಿಸಿಕೊಂಡರೆ, ಅಂತ್ಯಜರಾದ ಶೂದ್ರರು ಮೇಲ್ವರ್ಗದ ಸೇವೆಯೇ ತಮ್ಮ

ಜೀವನದ ಆದ್ಯ ಕರ್ತವ್ಯವೆನ್ನುವಂತೆ ಜೀವನ ನಡೆಸಿದ್ದಾರೆ. ಇನ್ನು ಜಾತಿ ವ್ಯವಸ್ಥೆಯಂತು ಪುರೋಹಿತಶಾಹಿಯ ನಿರ್ದೇಶನದಂತೆ ನಡೆದುಕೊಂಡು ಬಂದಿದೆ. ವೃತ್ತಿಗನುಸಾರವಾಗಿ ಅದು ತನ್ನ ಪಾಲಿನ ಕಾರ್ಯವನ್ನು ನಿರ್ವಹಿಸಿದೆ. ಈ ಜಿಲ್ಲೆಯ ಶಾಸನಗಳಲ್ಲಿ ಉಕ್ತವಾಗಿರುವ ಜಾತಿಗಳೆಂದರೆ, ಮಾಲಗಾರ, ಕಮ್ಮಟಕಾರ, ಕುಂಬಾರ, ನಾಯಿಂದ,ನೇಕಾರ, ಬಡಗಿ, ಭಜಂತ್ರಿ, ಅಂಬಿಗ, ಕಮ್ಮಾರ, ಸಮಗಾರ. ಸಮಾಜದಲ್ಲಿ ಸ್ತ್ರೀಯರ ಬಗೆಗಿನ ದೃಷ್ಟಿಕೋನವನ್ನೂ ಸಹ ಇಲ್ಲಿನ ಶಾಸನಗಳಿಂದ ತಿಳಿದುಕೊಳ್ಳಬಹುದು. ರಾಜಕೀಯ, ಧಾರ್ಮಿಕ, ವಿವಾಹ, ದಾನ–ಧರ್ಮಗಳಲ್ಲಿ ಪುರುಷರಿಗೆ ಸಮಾನವಾಗಿ ಮಹಿಳೆಯರೂ ಕಾರ್ಯನಿರ್ವಹಿಸಿದ ಬಗ್ಗೆ ಮಾಹಿತಿ ದೊರೆಯುತ್ತದೆ. ಇನ್ನೊಂದು ಮಹತ್ವ ವಿಷಯವೆಂದರೆ ವೇಶ್ಯೆಯರಿಗೆ ಸಂಬಂಧಿಸಿದ್ದು. ಆಡಳಿತವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು, ಸಾಮಾಜಿಕ ನಿಯಂತ್ರಣವನ್ನು ಸಾಧಿಸುತ್ತಿದ್ದ ಒಂದು ವರ್ಗವು, ತನ್ನ ದಾಹವನ್ನು ತೀರಿಸಿಕೊಳ್ಳಲು ಜಾರಿಯಲ್ಲಿ ತಂದಿದ್ದಂತಹ ಈ ವೇಶ್ಯಾವಾಟಿಕೆಯ ಕುರಿತ ಉಲ್ಲೇಖ ವಿಶಿಷ್ಟವಾದುದು. ಒಂದೆರಡು ಶಾಸನಗಳಲ್ಲಿ ವೇಶ್ಯಕೇರಿ ಮತ್ತು ವೇಶ್ಯವಾಟದ ಬಗ್ಗೆ ಉಲ್ಲೇಖಿಸಿರುವುದನ್ನು ನೋಡಿದರೆ ಈ ಪದ್ಧತಿಯ ಪ್ರಾಚೀನತೆ ಮತ್ತು ಅದಕ್ಕೆ ನಮ್ಮ ಸಮಾಜ ಕೊಟ್ಟಿದ್ದ ಪ್ರಾಧಾನ್ಯತೆ ಮನನವಾಗುತ್ತದೆ. ಈ ವಿಷಯದ ಉಲ್ಲೇಖಿತ ಎರಡು ಶಾಸನಗಳಲ್ಲಿ ಒಂದು 12ನೆಯ ಶತಮಾನದ ಕಾಲದ್ದಾದರೆ, ಮತ್ತೊಂದು ಹದಿನಾರನೆಯ ಶತಮಾನಕ್ಕೆ ಸೇರಿದ್ದು. ಮೊದಲ ಶಾಸನದಲ್ಲಿ ಸೂಳೆಕೇರಿಯ ಬಗ್ಗೆ ಉಲ್ಲೇಖವಿದೆ. ಆದರೆ ಎರಡನೆಯ ಶಾಸನದಲ್ಲಿ ವೇಶ್ಯವಾಟದ ಬಗ್ಗೆ ಉಲ್ಲೇಖವಿದೆ. ಬಹುಶಃ ಈ ಜಿಲ್ಲೆಯ ಪಕ್ಕದಲ್ಲಿಯೇ ವೈಭವಯುತವಾಗಿ ಮೆರೆದ ಹಿಂದೂ ಸಾಮ್ರಾಜ್ಯದ ಸೋಂಕು ಇದಕ್ಕೆ ತಗುಲಿರಬಹುದೆನಿಸುತ್ತದೆ. ಹಾಗೆಯೇ ಹಿಂದೂ ಸಂಪ್ರದಾಯದ ಹಬ್ಬ–ಹರಿದಿನಗಳ ಬಗ್ಗೆ, ನಂಬಿಕೆಗಳ ಬಗ್ಗೆ ಅಲ್ಲಲ್ಲಿ ಕೆಲ ಮಾಹಿತಿ ಉಲ್ಲೇಖಿತ ವಾಗಿದೆ. ದೇವಾಲಯ, ಬಸದಿ ನಿರ್ಮಾಣ, ಅವುಗಳ ಜೀರ್ಣೋದ್ಧಾರ ಮುಂತಾದವುಗಳಿಗೆ ದಾನ ಬಿಟ್ಟ ಬಗೆಗೆ ಅನೇಕ ಶಾಸನಗಳು ದಾಖಲಿಸಿವೆ. ದಾನದ ಬಗೆಗೆ ನಮ್ಮ ಪೂರ್ವಜರಲ್ಲಿ ಮನೆ ಮಾಡಿದ್ದ ನಂಬಿಕೆಯೇ ಇದಕ್ಕೆ ಕಾರಣವಾಗಿರಬಹುದು.

ಕೋಟೆ–ಕೊತ್ತಲುಗಳ ನಿರ್ಮಾಣದಂತಹ ಕಾರ್ಯಗಳ ಜೊತೆಗೆ ಸಾಮಾನ್ಯ ಜನರಿಗೂ ಅಗತ್ಯವಾಗಿದ್ದ ಕೆರೆ, ಬಾವಿ, ಸತ್ರಗಳ ನಿರ್ಮಾಣದಂತಹ ಯೋಜನೆಗೆ ಆಡಳಿತ ವರ್ಗವು ಕೈ ಹಾಕಿರುವುದು ಸಂತೋಷದ ಸಂಗತಿ. ಏಕೆಂದರೆ ಕೋಟೆಗಳನ್ನು ನಿರ್ಮಾಣ ಮಾಡಿಕೊಳ್ಳುವಲ್ಲಿ ಸಮಸ್ತ ರಾಜ್ಯದ ಹಿತಾಸಕ್ತಿಗಿಂತ ಆಳುವ ವರ್ಗದ ಸುರಕ್ಷತೆಯ ದೃಷ್ಟಿ ಮುಖ್ಯವಾಗಿರುತ್ತದೆ. ಕೆರೆ, ಬಾವಿಗಳಂತಹ ಲೋಕೋಪಯೋಗಿ ಕಾರ್ಯಗಳು ಬಹುತೇಕ ಸಾಮಾನ್ಯ ಜನಕ್ಕಾಗಿ ನಿರ್ಮಾಣ ಮಾಡಿದಂತವುಗಳು.

ಜಿಲ್ಲೆಯ ಶಾಸನಗಳಲ್ಲಿ ಮಾನವನ ದಿನನಿತ್ಯದ ವ್ಯವಹಾರಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಸಿಗುತ್ತವೆ. ಇಂದಿನಂತೆ ಅಂದಿನ ಮುಖ್ಯ ಕಸುಬು ಕೃಷಿಯಾಗಿದ್ದು, ಜೊತೆಗೆ ಕುಲಕಸುಬುಗನ್ನು ಮಾಡಿಕೊಂಡು ಬಂದಿದ್ದಾರೆ. ಹಣ್ಣು ಮತ್ತು ಹೂಗಳನ್ನಲ್ಲದೇ ಭತ್ತದ ಉಲ್ಲೇಖವನ್ನು ಕಂಡುಬರುತ್ತದೆ. ಆದರೆ ಪ್ರಮುಖ ಬೆಳೆಗಳು ಯಾವುವು ಎನ್ನುವುದು ಅಸ್ಪಷ್ಟವಾಗಿದೆ. ಬೆಳೆಗಳನ್ನು ನೀರಾವರಿ ಮತ್ತು ಮಳೆಯಾಧರಿಸಿ ಬೆಳೆಯುತ್ತಿದ್ದರು ಎನ್ನುವುದು ಮಾತ್ರ ಸ್ಪಷ್ಟ.

ಈ ಪ್ರದೇಶದಲ್ಲಿನ ಶಾಸನಗಳನ್ನು ಭಾಷಿಕ ಹಾಗೂ ಸಾಹಿತ್ಯಿಕ ದೃಷ್ಟಿಯಿಂದ ಅಧ್ಯಯನ ಮಾಡುವುದು ಕುತೂಹಲಕಾರಿಯಾದ ವಿಷಯ. ಏಕೆಂದರೆ ತಿರುಳ್ಗನ್ನಡದ ಪ್ರದೇಶವೆಂದೇ ಪ್ರಖ್ಯಾತಿ ಪಡೆದ ಈ ನೆಲದ ಶಾಸನಗಳು ಭಾಷಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿವೆ. ಕನ್ನಡದ ತಿರುಳನ್ನು ಹೊಂದಿರುವ ಪ್ರದೇಶವೆಂದು ಕರೆಯಿಸಿಕೊಂಡಿದ್ದರೂ ಸಹಿತ ಇಲ್ಲಿ ಬೇರೆ ಬೇರೆ ಭಾಷೆಯ ಶಾಸನಗಳು ದೊರೆತಿವೆ. ಆಯಾ ಕಾಲದ ರಾಜರುಗಳ ಆಳ್ವಿಕೆಯ ಅವಧಿ ಇದಕ್ಕೆ ಕಾರಣವಾಗಿರಬಹುದು. ಕನ್ನಡ ಭಾಷೆಯು ಹೇಗೆ ಅವಸ್ಥಾಂತರ ಹೊಂದಿದೆ ಎನ್ನುವುದು ಇಲ್ಲಿ ದೊರೆತ ಶಾಸನಗಳ ಭಾಷೆ ಸಾಕ್ಷಿಯಾಗಿ ನಿಂತಿದೆ. ಕಾಲದಿಂದ ಕಾಲಕ್ಕೆ ಭಾಷೆಯ ಬಳಕೆಯಲ್ಲಾದ ಮಾರ್ಪಟುಗಳು ಶಾಸನಗಳಲ್ಲಿ ಬಹು ಸ್ಪಷ್ಟವಾಗಿ ದಾಖಲಾಗಿದೆ.

ಶಾಸನಗಳಲ್ಲಿನ ಸಾಹಿತ್ಯಿಕ ಅಂಶಗಳತ್ತ ಗಮನ ಹರಿಸಿದಾಗ ನಮಗೆ ಮುಖ್ಯವಾಗಿ ಎರಡು ಬಗೆಗಳು ಗೋಚರಿಸುತ್ತವೆ. ಮೊದಲನೆಯದು ಶುದ್ಧ ಸ್ವತಂತ್ರ ಕಾವ್ಯವನ್ನೊಳಗೊಂಡ ಶಾಸನಗಳು; ಇನ್ನೊಂದು ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ ಮುಂತಾದ ವಿಷಯಗಳನ್ನು ಸಾಹಿತ್ಯಿಕವಾಗಿ ನಿರೂಪಿಸುವ ಶಾಸನಗಳು. ಈ ಮಾದರಿಯ ಶಾಸನಗಳ ರಚನೆಗೆ ಶಾಸನ ರಚಿಸುವವರಲ್ಲಿರುವ ಸಾಹಿತ್ಯಿಕ ಆಸಕ್ತಿ ಕಾರಣವಾಗಿರಬಹುದೆನಿಸುತ್ತದೆ. ಅದರಲ್ಲೂ ಈ ಶಾಸನ ಕರ್ತೃಗಳು ಕವಿರಾಜಮಾರ್ಗಕಾರ ಮತ್ತು ಪಂಪನ ಕಾವ್ಯಗಳ ಬಗ್ಗೆ ಹೊಂದಿದ್ದ ವ್ಯಾಮೋಹ ವ್ಯಕ್ತವಾಗಿದೆ. ಏಕೆಂದರೆ ಕವಿರಾಜಮಾರ್ಗ ಮತ್ತು ಪಂಪಭಾರತದಲ್ಲಿನ ಪದ್ಯಗಳ ಮಾದರಿಯಲ್ಲಿಯೇ ಕೆಲ ಶಾಸನ ಪದ್ಯಗಳು ರಚನೆಗೊಂಡಿರುವುದು ಅಧ್ಯಯನದ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ.

ಒಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ಶಾಸನಗಳು ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಹೊತ್ತುನಿಂತಿವೆ. ಅವುಗಳ ಆಳವನ್ನು ಹೊಕ್ಕಂತೆಲ್ಲ ಅನೇಕ ಹೊಸ ಹೊಸ ಸಂಗತಿಗಳು ಬಯಲಿಗೆ ಬರುತ್ತವೆ.

# ಅನುಬಂಧ

- ಕೊಪ್ಪಳ ಜಿಲ್ಲಾ ನಕಾಶೆ
- ಸಹಾಯಕ ಗ್ರಂಥಸೂಚಿ
- ಛಾಯಾ ಚಿತ್ರಗಳು
- ಲೇಖಕರ ಕೃತಿಗಳು

## ಕೊಪ್ಪಳ ಜಿಲ್ಲಾ ನಕಾಶ


KOPPAL
DISTRICT
BAGALKOT
RAICHUR
GADAG
BALLARI
KOPPAL
LEGEND

## ಸಹಾಯಕ ಗ್ರಂಥಸೂಚಿ

### ಸ್ವತಂತ್ರ ಕೃತಿಗಳು


1. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಸ್ವಪ್ನ ಬುಕ್ ಹೌಸ್, ಬೆಂಗಳೂರು. 2002
2. ಎಂ.ಚಿದಾನಂದ ಮೂರ್ತಿ : ಹೊಸತು ಹೊಸತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1993
3. ಎಂ.ಚಿದಾನಂದ ಮೂರ್ತಿ : ಭಾಷಾವಿಜ್ಞಾನ ಮತ್ತು ಛಂದಸ್ಸು ಸ್ವಪ್ನ ಬುಕ್ ಹೌಸ್, ಬೆಂಗಳೂರು. 2002
4. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. 1990
5. ಚೆನ್ನಬಸವ ಹಿರೇಮಠ : ಕುರುಗೋಡು ಸಿಂಧರು ಒಂದು ಅಧ್ಯಯನ ಸಂಸ್ಕೃತಿ ಪ್ರತಿಷ್ಠಾನ ಕೊಪ್ಪಳ. 1995
6. ಚೆನ್ನಬಸವ ಹಿರೇಮಠ : ಎಡೆದೊರೆ ನಾಡು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2000
7. ಬಿ.ಆರ್.ಹಿರೇಮಠ್ : ಶಾಸನಗಳಲ್ಲಿ ಕರ್ನಾಟಕದ ವರ್ತಕರು ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. 1986
8. ಜೆ.ಎಂ.ನಾಗಯ್ಯ : ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ಲೋಹಿಯಾ ಪ್ರಕಾಶನ, ಬಳ್ಳಾರಿ. 2002
9. ಜೆ.ಎಂ.ನಾಗಯ್ಯ : ಆರನೆ ವಿಕ್ರಮಾದಿತ್ಯನ ಶಾಸನ ಗಳುಒಂದು ಅಧ್ಯಯನ ವೀರಶೈವ ಅಧ್ಯಯನ ಅಕಾಡೆಮಿ. ಬೆಳಗಾವಿ. 1992
10. ಬಿ.ಸಿ.ಪಾಟೀಲ : ಕೊಪ್ಪಳ ಸಾಂಸ್ಕೃತಿಕ ಪರಂಪರೆ ಹರಿಹರ ಪ್ರಕಾಶನ, ಕೊಪ್ಪಳ. 1998
11. ಶಾಂತಿನಾಥ ದಿಬ್ಬದ : ಜೈನ ಸಂಸ್ಕೃತಿ ಸಮೀಕ್ಷೆ ರತ್ನತ್ರಯ ಪ್ರಕಾಶನ, ಗುಲಬರ್ಗಾ. 2003
12. ಹು.ಕಾ.ಜಯದೇವ : ಶಾಸನ ಮತ್ತು ಗದ್ಯ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. 2000

13. ಸಿ.ಪಿ.ಕೆ. : ಶಾಸನಶಾಸ್ತ್ರ ಪ್ರವೇಶ ಚೇತನ ಬುಕ್ ಹೌಸ್, ಮೈಸೂರು. 2001

14. ಎಂ.ಎಂ.ಕಲಬುರ್ಗಿ : ಮಾರ್ಗ–1 ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು. 1995

15. ಎಂ.ಎಂ.ಕಲಬುರ್ಗಿ : ಮಾರ್ಗ–2 ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು. 1995

16. ಎಂ.ಎಂ.ಕಲಬುರ್ಗಿ : ಮಾರ್ಗ–3 ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು. 1998

17. ಎಂ.ಎಂ.ಕಲಬುರ್ಗಿ : ಮಾರ್ಗ–4 ಸಪ್ನ ಬುಕ್ ಹೌಸ್, ಬೆಂಗಳೂರು. 2004

18. ಎಂ.ಎಂ.ಕಲಬುರ್ಗಿ : ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ ಸಪ್ನ ಬುಕ್ ಹೌಸ್, ಬೆಂಗಳೂರು. 2004

19. ಎಂ.ಎಂ.ಕಲಬುರ್ಗಿ : ಕನ್ನಡ ನಾಮ ವಿಜ್ಞಾನ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು. 1989

20. ಎಚ್.ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಡಿ.ವಿ.ಕೆ.ಮೂರ್ತಿ, ಪ್ರಕಾಶನ ಮೈಸೂರು. 2003

21. ರಂ.ಶ್ರೀ.ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ ಸಮಾಜ ಪುಸ್ತಕಾಲಯ, ಧಾರವಾಡ. 1996

22. ಕೆ.ಜಿ.ವೆಂಕಟೇಶ ಜೋಯಿಸ್ : ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕನ್ನಡ ಸಾಹಿತ್ಯ ಪರಿಷತ್ತ, ಬೆಂಗಳೂರು. 1996

23. ಸಿ.ನಾಗಭೂಷಣ : ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ ಅಮೃತ ವರ್ಷಿಣಿ ಪ್ರಕಾಶನ, ನಂದಿಹಳ್ಳಿ–ಸಂಡೂರು. 1999

24. ಸಿ.ನಾಗಭೂಷಣ : ಸಾಹಿತ್ಯ ಸಂಸ್ಕೃತಿ ಹುಡುಕಾಟ ಅಮೃತ ವರ್ಷಿಣಿ ಪ್ರಕಾಶನ, ಯರಗೇರಾ ರಾಯಚೂರು. 2002

25. ಸಿ.ನಾಗಭೂಷಣ : ಶಾಸನಗಳು ಮತ್ತು ಕನ್ನಡ ಸಾಹಿತ್ಯ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. 2005

26. ಕೆ.ಬಿ.ಶಿವತಾರಕ್ : ಕರ್ನಾಟಕ ಪುರಾತತ್ವ ನೆಲೆಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2001

27. ಚಂದ್ರಶೇಖರ ನಾರಾಯಣಪುರ : ಕರ್ನಾಟಕದ ವೀರಶೈವ ಮಠಗಳು ಗೆಳೆಯ ಪ್ರಕಾಶನ, ಚಿಕ್ಕಮಂಗಳೂರು. 2002

28. ವಿ.ಗೋಪಾಲಕೃಷ್ಣ : ಸ್ಥಳನಾಮಗಳ ಅಧ್ಯಯನ ವಿದ್ಯಾಗಿರಿ ಪ್ರಕಾಶನ, ದಾರಿನಾಯಕನ ಹಳ್ಳಿ ಕೋಲಾರ (ಜಿಲ್ಲೆ). 1987

29. ವಿಶ್ವನಾಥ : ಸ್ಥಳನಾಮಗಳು ಸಂವಹನ ಪ್ರಕಾಶನ, ಶಿವರಾಂಪೇಟೆ ಮೈಸೂರು. 1996

30. ಎಚ್.ಖಂಡೋಬರಾವ್ : ನಾಣ್ಯ ಕರ್ನಾಟಕ ಮಗರ್ ಪಬ್ಲಿಕೇಷನ್ಸ್, ಬೆಂಗಳೂರು. 2002

31. ಡಿ.ಎಸ್.ಕರ್ಕಿ : ಛಂದೋವಿಕಾಸ ಭಾರತ ಪ್ರಕಾಶನ, ಧಾರವಾಡ. 2002

32. ಟಿ.ಆರ್.ಚಂದ್ರಶೇಖರ್ : ಅಭಿವೃದ್ಧಿ ಅಧ್ಯಯನ ಕೊಪ್ಪಳ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1999

33. ಮೂಲ : ಜೆ.ಎಫ್.ಫ್ಲೀಟ : ಭಾರತೀಯ ಶಾಸನಶಾಸ್ತ್ರ ಪರಿಚಯ ಅನು: ಸಿ.ಪಿ.ಕೆ ಪಬ್ಲಿಷಿಂಗ್ ಹೌಸ್, ಮೈಸೂರು. 2001

34. ಸೂರ್ಯನಾರಾಯಣ ಬಿ.(ಮೂಲ) :ಮರೆಯಲಾಗದ ಮಹಾಸಾಮ್ರಾಜ್ಯ ಕನ್ನಡಕ್ಕೆ : ಬಾಳಸುಬ್ರಹ್ಮಣ್ಯ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. 2000

35. ಶೇಷಶಾಸ್ತ್ರಿ ಆರ್. : ಶಾಸನ ಪರಿಚಯ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು. 1999

36. ವೆಂಕಟಾಚಲಶಾಸ್ತ್ರಿಟಿ.ವಿ. : ಶಾಸ್ತ್ರೀಯ ಸಂ–2 ಮತ್ತು ಸಂ–2 ಸಪ್ನ ಬುಕ್ ಹೌಸ್, ಬೆಂಗಳೂರು. 1999

37. ಯೋಗೀಶ್ವರಪ್ಪ ಡಿ.ಎನ್. : ಹಾಗಲವಾಡಿ ನಾಯಕರು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. 1999

38. ಅಮರೇಶ ನುಗಡೋಣಿ : ಹೈದ್ರಾಬಾದ ಕರ್ನಾಟಕದ ಹಾಡು–ಪಾಡು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. 2003

39. ಶೇಠೆ ಬಿ.ಎಸ್. : ಕರ್ನಾಟಕದಲ್ಲಿ ಸತಿ ಪದ್ಧತಿ ವೀರಶೈವ ಅಧ್ಯಯನ ಅಕಾಡೆಮಿ ಬೆಳಗಾವಿ. 1991

40. ಹನುಮಾಕ್ಷಿ ಗೋಗಿ : ಅನುಶಾಸನ ಮಹಿಳಾ ಸಾಹಿತ್ಯಿಕಾ, ನವನಗರ ಹುಬ್ಬಳ್ಳಿ. 2002

41. ಜೆ.ಎಂ.ನಾಗಯ್ಯ, : ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗಕುಮಾರ ರುದ್ರಾಕ್ಷಿಮಠ, ಬೆಳಗಾಂ. 1992

42. ಹಂಪ ನಾಗರಾಜಯ್ಯ : ಕೊಪ್ಪಳ ಜಿಲ್ಲೆಯ ಶಾಸನಗಳು ರತ್ನತ್ರಯ ಪ್ರಕಾಶನ, ಮೈಸೂರು–1998


**ಸಂಪಾದಿತ ಕೃತಿಗಳು**


43. ಅಲ್ಲಮಪ್ರಭು ಬೆಟ್ಟದೂರು : ಕೊಪ್ಪಳ ಜಿಲ್ಲಾ ದರ್ಶನ ಎಚ್.ಎಸ್.ಪಾಟೀಲ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ. 2005

44. ಟಿ.ಜಿ.ಕಲಘಟಗಿ : ಕರ್ನಾಟಕದಲ್ಲಿ ಜೈನಧರ್ಮ : ಒಂದು ಅಧ್ಯಯನ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು. 1976

45. ಮೃತ್ಯುಂಜಯ ಹೊರಕೇರಿ ಬಸವಲಿಂಗ ಸೊಪ್ಪಿಮಠ : ರಾಯಚೂರು ಜಿಲ್ಲಾ ದರ್ಶನ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ. 2005

46. ಸೂರ್ಯನಾಥ ಕಾಮತ್ ಲಕ್ಷ್ಮಣ ತೆಲಗಾವಿ : ಇತಿಹಾಸ ದರ್ಶನ ಸಂ–5 ಕರ್ನಾಟಕ ಇತಿಹಾಸ ಅಕಾಡೆಮಿ(ರಿ) ಬೆಂಗಳೂರು. 1990

47. ಸಿದ್ಧಲಿಂಗಯ್ಯ ಜಿ.ಎಸ್. : ಕನ್ನಡ ಸುವರ್ಣ ಮಹೋತ್ಸವ ಸಂಚಿಕೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1982

48. ಕೆ.ಸಂಪತ್ ಗಿರಿರಾವ್ : ಕರ್ನಾಟಕ ಪರಂಪರೆ ಸಂ–2 ಮಧ್ಯಕಾಲ ಹಾಗೂ ಆಧುನಿಕ ಕಾಲ ವಿಜಯನಗರ ಕಾಲದಿಂದ ಈಚೆಯವರೆಗೆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. 1992

49. ಕೆ.ವಿನಾರಾಯಣ : ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1999

**ಶಾಸನ ಸಂಪುಟಗಳು**

50. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ

51. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1, ಬಳ್ಳಾರಿ ಜಿಲ್ಲೆ

52. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–7, ರಾಯಚೂರು ಜಿಲ್ಲೆ

53. ಕೊಪ್ಪಳ ಶಾಸನಗಳು : ಸಂ:ಹಂಪ ನಾಗರಾಜಯ್ಯ, ರತ್ನತ್ರಯ ಪ್ರಕಾಶನ, ಮೈಸೂರು. 1998

54. ರಾಯಚೂರು–ಕೊಪ್ಪಳ ಜಿಲ್ಲೆಯ ಶಾಸನಗಳು : ಸಂ:ಚೆನ್ನಬಸವ ಹಿರೇಮಠ, ಚೇತನ ಪ್ರಕಾಶನ, 1999

55. ಹೈದ್ರಾಬಾದ ಕರ್ನಾಟಕ ಭಾಗದ ಶಿಲಾಶಾಸನಗಳು : ಸಂ:ವಿ.ಶಿವಾನಂದ, ಕನ್ನಡ ಪೀಠ, ಬನಾರಸ ಹಿಂದೂ ವಿಶ್ವವಿದ್ಯಾಲಯ, ವರಣಾಸಿ. 1992

56. ಆಂಧ್ರಪ್ರದೇಶದ ಆಯ್ದ ಶಿಲಾಶಾಸನಗಳು, : ಸಂ:ಪಿ.ಬಿ.ದೇಸಾಯಿ, ಹೈದ್ರಾಬಾದ, 1962

57. ರಾಯಚೂರು ಜಿಲ್ಲೆಯ ಶಾಸನಗಳು : ಸಮಗ್ರ ಅಧ್ಯಯನ : ಭಾರತಿ ಬಸವರಾಜ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

**ಸ್ಮರಣ ಸಂಚಿಕೆ**

58. ಮನಸಿರಿ (ಮಾನ್ವಿ ತಾಲೂಕ ನಾಲ್ಕನೆ ಕನ್ನಡ ಸಾಹಿತ್ಯ ಸಮ್ಮೇಳನ ನೆನಪಿನ ಸಂಚಿಕೆ) ಪ್ರಧಾನ ಸಂ: ರಾಮಚಂದ್ರ, ತಾಲೂಕ ಕನ್ನಡ ಸಾಹಿತ್ಯ ಪರಿಷತ್, ಮಾನ್ವಿ. 2004

59. ಅಕ್ಷಯ (ಗಂಗಾವತಿ ತಾಲೂಕ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ವಿಶೇಷ ಸಂಚಿಕೆ) ಪ್ರ.ಸಂ: ಶರಣಬಸಪ್ಪ ಕೋಲ್ಕಾರ, , ತಾಲೂಕ ಕನ್ನಡ ಸಾಹಿತ್ಯ ಪರಿಷತ್, ಗಂಗಾವತಿ. 2002

60. ಹೆದ್ದೊರೆ (ಹೈದ್ರಾಬಾದ ಕರ್ನಾಟಕ ಸಾಹಿತ್ಯ ಸಮ್ಮೇಳನದ ವಿಶೇಷ ಸಂಚಿಕೆ) ಪ್ರ.ಸಂ:ಶರಣೆಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ರಾಯಚೂರು. 2002–03

61. ತಿರುಳ್ಗನ್ನಡ ( ಅಖಿಲ ಭಾರತ 62ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ) ಪ್ರ.ಸಂ: ಎಚ್.ಎಸ್.ಪಾಟೀಲ ಮತ್ತು ಅಲ್ಲಮಪ್ರಭು ಬೆಟ್ಟದೂರು, ಸ್ವಾಗತ ಸಮಿತಿ, ಕೊಪ್ಪಳ. 1993

62. ಬಿಲ್ಲಮ (2ನೇ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ) ಪ್ರ.ಸಂ:ಸಿ.ಶರಣಪ್ಪ, ಸ್ವಾಗತ ಸಮಿತಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್, ಲಿಂಗಸೂಗೂರು. 2004

63. ದೇಗುಲ ಸಿರಿ : ಸಂ:ಪಂ.ಚೆನ್ನಪ್ಪ ಎರೆಸೀಮೆ, ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ಸಮಿತಿ, ಕನಕಪುರ, ಬೆಂಗಳೂರು ಗ್ರಾಮಾಂತರ(ಜಿಲ್ಲೆ). 1998

**ಇತರೆ**

64. ಕನ್ನಡ ಕನ್ನಡ ನಿಘಂಟು ಸಾಹಿತ್ಯ ಪರಿಷತ್ತು, ಬೆಂಗಳೂರು.

**ಪತ್ರಿಕೆಗಳು**

1. ಶಾಸನ ಅಧ್ಯಯನ
2. ಸಾಧನೆ
3. ಸಂಶೋಧನಾ ವ್ಯಾಸಾಂಗ
4. ಕರ್ನಾಟಕ ಭಾರತಿ
5. ಬಸವಪಥ
6. ಸಾಧನೆ
7. ಕಲಾಗಂಗಾ
8. ಸಂಯುಕ್ತ ಕರ್ನಾಟಕ(ಹೈದ್ರಾಬಾದ ಕರ್ನಾಟಕ ವಿಶೇಷ ಪುರವಣಿಗಳು)
9. ರಾಯಚೂರು ವಾಣಿ
10. ಸುದ್ದಿಮೂಲ
11. ನವೋದಯ
12. ನಾಗರಿಕ




ಹುಲಗಿ ಶಾಸನ




ಹುಲಗಿ ಶಾಸನ



ಕುಮ್ಮಟದುರ್ಗ, ಕೊಪ್ಪಳ ಶಾಸನಗಳು



ಹನುಮನಾಳು ಶಾಸನ




ಕೊಪ್ಪಳ ಶಾಸನಗಳು



ಅಳವಂಡಿ, ಬೆಣಕಲ್ ಶಾಸನಗಳು



ಪುರದಲ್ಲಿರುವ ವಿಜಯನಗರ ಅರಸ ವೀರಪ್ರತಾಪರಾಯರಕಾಲದ ಶಾಸನ



ಪುರದ ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿರುವ ವೀರಗಲ್ಲು ಶಾಸನ




ಪುರದಲ್ಲಿರುವ ಕಲ್ಯಾಣಿಚಾಲುಕ್ಯರಕಾಲದ ಸೋಮೇಶ್ವರ ದೇವಾಲಯ



ಪುರದಲ್ಲಿರುವ ಕಲ್ಯಾಣಿಚಾಲುಕ್ಯರಕಾಲದ ಸೋಮೇಶ್ವರ ದೇವಾಲಯ
ಗೋಪುರಗಳ ದೃಶ್ಯ



ಇಟಗಿಯ ಮಹಾದೇವ ದೇವಾಲಯದ ಸಂಕೀರ್ಣದಲ್ಲಿರುವ ದೇವಾಲಯ



ಕನಕಗಿರಿಯ ಲಕ್ಷ್ಮಿನರಸಿಂಹ ದೇವಾಲಯದ ಒಂದು ನೋಟ



ಪುರದ ಸೋಮೇಶ್ವರ ದೇವಾಲಯದ ಒಳಗಡೆ ಇರುವ ವೀರಗಲ್ಲು



ಕೊಪ್ಪಳ ಜಿಲ್ಲೆಯಲ್ಲಿ ದೊರೆತಿರುವ ಲಿಪಿಸಹಿತ ವೀರಗಲ್ಲು, ಸಿರಗುಪ್ಪ



ಕುಕನೂರಿನ ಒಂಭತ್ತೇಶ್ವರ ದೇವಾಲಯದಲ್ಲಿಯ ಕಲ್ಯಾಣಚಾಲುಕ್ಯರ ಕಾಲದ ಶಾಸನ



ಕನಕಗಿರಿಯಲ್ಲಿರುವ ವಿಜಯನಗರರಸರ ಕಾಲದ ಒಂದು ಶಾಸನ



ಕನಕಗಿರಿಯಲ್ಲಿರುವ ವಿಜಯನಗರರರಸರ ಕಾಲದ ಶಾಸನ ಸಮೂಹ



ಕನಕಗಿರಿಯ ದೇವಾಲಯದಲ್ಲಿರುವ ವಿಜಯನಗರರರಸರ ಶೈಲಿಯ
ಕಂಬಗಳ ದೃಶ್ಯ



ಕುಕನೂರಿನ ಮಹಾಮಾಯಿ ದೇವಾಲಯದ ಹೊರಗಡೆ ಇರುವ ವೀರಗಲ್ಲು



ಕಲ್ಲೂರಿನ ಕಲ್ಲಿನಾಥ ದೇವಾಲಯದ ಆವರಣದಲ್ಲಿರುವ ಮತ್ತೊಂದು ಶಾಸನ



ಅಶೋಕನ ಶಾಸನ ಗವಿಮಠದ ಹಿಂದೆ, ಕೊಪ್ಪಳ



ಕುಕನೂರಿನ ನವಲಿಂಗೇಶ್ವರ ದೇವಾಲಯದ ಒಂದು ದೃಶ್ಯ



ಕುಕನೂರಿನ ಮಹಾಮಾಯೆ ದೇವಾಲಯದ ನೋಟ



ಇಟಗಿಯ ಮಹಾದೇವ ದೇವಾಲಯದಲ್ಲಿರುವ ಕಂಬಗಳ ದೃಶ್ಯ



ಇಟಗಿಯ ಮಹಾದೇವ ದೇವಾಲಯದ ಮುಂಭಾಗದ ದೃಶ್ಯ




ಇಟಗಿಯ ಮಹಾದೇವ ದೇವಾಲಯವನ್ನು **ದೇವಾಲಯಗಳ ಚಕ್ರವರ್ತಿ**
ಎಂದು ಬಣ್ಣಿಸಿರುವ ಕಲ್ಯಾಣ ಚಾಲುಕ್ಯರ ಕಾಲದ ಶಾಸನ




ಇಟಗಿಯಮಹಾದೇವ ದೇವಾಲಯದಲ್ಲಿರುವ ಕಂಬದ
ಮೇಲಿನಕುಸುರು ಕೆಲಸದ ಕೆತ್ತನೆಯ ದೃಶ್ಯ




ಇಟಗಿಯ ಮಹಾದೇವ ದೇವಾಲಯದ ಗೋಪುರದ ನೋಟ




ಚಂದ್ರನಾಥ ಬಸ್ತಿ, ಕೊಪ್ಪಳ



ಚಂದ್ರನಾಥ ಬಸ್ತಿ, ಕೊಪ್ಪಳ



ಕೊಪ್ಪಳ ಕೋಟೆ



ನಿಶಿದಿ ಶಾಸನ, ಕೊಪ್ಪಳ

## ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ ಕೃತಿಗಳು

**ಸ್ವತಂತ್ರ ಕೃತಿಗಳು:–**

1. **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ**
   (ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧ)
   ಪ್ರಥಮ ಮುದ್ರಣ – 2010
   ಪರಿಷ್ಕೃತ ದ್ವಿತೀಯ ಮುದ್ರಣ– 2020
2. **ಸಂಸಾರ ಸಗ್ಗ**
   (ನಮ್ಮ ಕುಟುಂಬದಲ್ಲಿ ನಡೆದ ಹಾಸ್ಯ ಪ್ರಸಂಗಗಳು)
   ಪ್ರಥಮ ಮುದ್ರಣ – 2014
   ಪರಿಷ್ಕೃತ ದ್ವಿತೀಯ ಮುದ್ರಣ – 2017
   ಪರಿಷ್ಕೃತ ತೃತಿಯ ಮುದ್ರಣ – 2020
3. **ಮಾನವಿ ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿ**
   (ಸಂಶೋಧನಾ ಕೃತಿ – 2017
   ಡಾ. ಚನ್ನಬಸವಯ್ಯ ಹಿರೇಮಠರವರೊಂದಿಗೆ)

**ಸಂಪಾದಿತ ಕೃತಿಗಳು:–**

1. **ತುಂಗಾ ಲಹರಿ**
   (ಮಾನವಿ ತಾಲೂಕ ಪ್ರಾತಿನಿಧಿಕ ಕವನ ಸಂಕಲನ,
   ಪ್ರಧಾನ ಸಂಪಾದಕರು – ಶ್ರೀ ರಾಮಚಂದ್ರಪ್ಪ – 2008)

2 **ಮಾನ್ವಿಯ ಮಹನೀಯರು**
   (ಮಾನ್ವಿ ತಾಲೂಕಿನ ಸಾಹಿತ್ಯ ಕ್ಷೇತ್ರದ ಮಹನೀಯರ
   ಜೀವನ ಚರಿತ್ರೆಗಳ ಸಂಗ್ರಹ – 2014)

3 **ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ**
   (ಕನ್ನಡ, ಹಿಂದಿ ಹಾಗೂ ಇಂಗ್ಲೀಷ ಆಧುನಿಕ ಸಾಹಿತ್ಯದಲ್ಲಿ
   ಸ್ತ್ರೀ ಸಂವೇದನೆ ಎಂಬ ವಿಷಯದ ಮೇಲೆ ನಡೆದ ವಿಚಾರ
   ಸಂಕಿರಣದ ಪ್ರಬಂಧಗಳ ಸಂಗ್ರಹ,
   ಪ್ರಧಾನ ಸಂಪಾದಕರು –
   ಡಾ. ದಯಾನಂದ ಸಾಳುಂಕೆ – 2017)

**ಸಹ ಸಂಪಾದಕರಾಗಿ:–**

1. ಮನಸಿರಿ
(ಮಾನ್ವಿ ತಾಲೂಕ ನಾಲ್ಕು ಕನ್ನಡ ಸಾಹಿತ್ಯ ಸಮ್ಮೇಳನಗಳ
ವಿಶೇಷ ಸ್ಮರಣ ಸಂಚಿಕೆ
ಪ್ರಧಾನ ಸಂಪಾದಕರು– ಶ್ರೀ ರಾಮಚಂದ್ರಪ್ಪ –2004)

**ಸಂಪಾದಕ ಮಂಡಳಿ ಸದಸ್ಯರಾಗಿ :–**

1. **ಕೊಪಣಸಿರಿ (ಕೊಪ್ಪಳ ಜಿಲ್ಲಾ ಅಧ್ಯಯನ)**
(ಅಖಿಲ ಭಾರತ 78ನೇ ಕನ್ನಡ ಸಾಹಿತ್ಯ ಸಮೇಳನ
ಗಂಗಾವತಿ, ಜಿಲ್ಲೆ ಕೊಪ್ಪಳ ಸ್ಮರಣ ಸಂಚಿಕೆ
ಸಂಪಾದಕರು – ಶ್ರೀ ಹೆಚ್. ಎಸ್. ಪಾಟೀಲ್ – 2013

2. **ಸ್ನೇಹ ಜೀವಿ**
(ಬಿ.ಎಸ್.ಪಾಟೀಲರ ಅಭಿನಂದನಾ ಗ್ರಂಥ,
ಪ್ರಧಾನ ಸಂಪಾದಕರು – ಶ್ರೀ ಜಿ.ಎಸ್.ಗೋನಾಳ–2013)

**ಮುದ್ರಣದಲ್ಲಿರುವ ಕೃತಿಗಳು :**

1. **ಕೊಪ್ಪಳ ಜಿಲ್ಲೆಯ ಜೈನ ನೆಲೆಗಳು (ಸಂಶೋಧನಾ ಕೃತಿ)**
2. **ಕೊಪ್ಪಳ ಜಿಲ್ಲೆಯ ಸುಗಮ ಸಂಗೀತ ಪರಂಪರೆ**
3. **ಕೊಪ್ಪಳ ತಾಲೂಕ ಗ್ಯಾಜಿಟಿಯರ್**
4. **ನಮ್ಮವರು**
5. **ಕೊಪ್ಪಳ ಜಿಲ್ಲೆಯ ಜೈನ ಗ್ಯಾಜಿಟಿಯರ್**
6. **ಕೊಪ್ಪಳ ಜಿಲ್ಲೆ ಮತ್ತು ಜೈನ ಧರ್ಮ**